ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕ

ರವಿಕುಮಾರ್ ಎನ್. ಎಚ್.

ಮಾರ್ಗದರ್ಶಕರು

ಪ್ರೊ. ರಹಮತ್ ತರೀಕೆರೆ

ಪ್ರಾಧ್ಯಾಪಕರು, ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ.

ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೩

ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ., ಪದವಿಗಾಗಿ ಸಲ್ಲಿಸಿದ
ಮಹಾಪ್ರಬಂಧ

ಸಂಶೋಧಕ
ರವಿಕುಮಾರ್ ಎನ್. ಎಚ್.

ಮಾರ್ಗದರ್ಶಕರು
ಪ್ರೊ. ರಹಮತ್ ತರೀಕೆರೆ
ಪ್ರಾಧ್ಯಾಪಕರು, ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ.

ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗ
ಕನ್ನಡ ವಿಶ್ವವಿದ್ಯಾಲಯ
ಹಂಪಿ

೨೦೦೩

<u>ಮಾರ್ಗದರ್ಶಕರ ದೃಢೀಕರಣ ಪತ್ರ</u>

ಶ್ರೀ ರವಿಕುಮಾರ್ ಎನ್. ಹೆಚ್. ಇವರು **ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ** ಎಂಬ ಶೀರ್ಷಿಕೆಯ ಈ ಪಿಎಚ್.ಡಿ., ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಇವರು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ದಿನಾಂಕ : 22/06/09
ಸ್ಥಳ : ವಿದ್ಯಾರಣ್ಯ

(ಪ್ರೊ. ರಹಮತ್ ತರೀಕೆರೆ)
ಮಾರ್ಗದರ್ಶಕರು

ಪ್ರಮಾಣ ಪತ್ರ

ಕನ್ನಡ ಸಾಹಿತ್ಯದಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ ಎಂಬ ಶೀರ್ಷಿಕೆಯ ಈ ಮಹಾ ಪ್ರಬಂಧವನ್ನು ಪಿಎಚ್.ಡಿ., ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಪ್ರೊ. ರಹಮತ್ ತರೀಕೆರೆ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ. ಪ್ರಸ್ತುತ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಬಳಸಿಕೊಂಡಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

ದಿನಾಂಕ : 22.06.08

ಸ್ಥಳ : ವಿದ್ಯಾರಣ್ಯ, ಹಂಪಿ

ರವಿಕುಮಾರ್ ಎನ್. ಹೆಚ್.

ಸಂಶೋಧನಾ ವಿದ್ಯಾರ್ಥಿ

ಮರೆತೇನೆಂದರೂ ಮರೆಯಲಿ ಹ್ಯಾಂಗ.......

ಸಾಹಿತ್ಯದ ವಿದ್ಯಾರ್ಥಿಯಾಗಿ ಸೇರಿದಂದಿನಿಂದ ಪಿಎಚ್.ಡಿ ಅಧ್ಯಯನ ನನ್ನ ಬಹುದಿನದ ಬಯಕೆಯಾಗಿತ್ತು. ಎಂ.ಎ. ಓದುವಾಗ ನಾನು ಪಿಎಚ್.ಡಿ ಮಾಡುತ್ತೇನೆಂದು ಎಣಿಸಿರಲಿಲ್ಲ. ಅದಕ್ಕೆ ಮನೆಯ ಕಡೆಗಿನ ಸನ್ನಿವೇಶಗಳೂ ಕಾರಣವಾಗಿದ್ದವು. ನಾನು ಬೆಳೆಯುತ್ತಿದ್ದ ಹಳ್ಳಿಯ ಪರಿಸರ ಉನ್ನತ ಶಿಕ್ಷಣಕ್ಕೆ ವ್ಯತಿರಿಕ್ತವಾಗಿಯೇ ಇತ್ತು. ಆದರೂ ಮನೆಯವರಿಂದ ಪಿಎಚ್.ಡಿ ಅಧ್ಯಯನ ಮಾಡಲು ಸಹಕಾರ ದೊರೆತಾಗ, ನನ್ನ ಇಷ್ಟದ ಮೇಷ್ಟ್ರು ಮಾರ್ಗದರ್ಶಕರಾಗಲು ಒಪ್ಪಿಕೊಂಡಾಗ ನನಗಾದ ಸಂತೋಷ ಅಷ್ಟಿಷ್ಟಲ್ಲ. ಪಿಎಚ್.ಡಿ ಸಂಶೋಧನೆಗೆ ಸೇರಿ ಅಧ್ಯಯನಕ್ಕೆ ತೊಡಗಿಕೊಳ್ಳುತ್ತ. ಹಲವು ಚಿಂತಕರ ಪರಿಚಯವಾಗತೊಡಗಿದಾಗ ನನ್ನ ಆಲೋಚನ ಕ್ರಮವೇ ಬದಲಾಗತೊಡಗಿತು. ಬದುಕನ್ನು ಅರ್ಥಮಾಡಿಕೊಂಡ ಕ್ರಮವೇ ಹಿಂದಿಗಿಂತ ಭಿನ್ನವಾಯಿತು.

ನನಗೆ ಪಿಎಚ್.ಡಿ ಅಧ್ಯಯನ ಮಾಡಲು ಅನುಮತಿ ಮಾಡಿಕೊಟ್ಟು ಮಹಾಪ್ರಬಂಧ ರಚಿಸಲು ಅವಕಾಶ ನೀಡಿದ ವಿಶ್ರಾಂತ ಕುಲಪತಿಗಳಾದ ಎಂ.ಎಂ. ಕಲಬುರ್ಗಿಯವರಿಗೆ ಮತ್ತು ಈಗಿನ ಕುಲಪತಿಗಳಾದ ಎಚ್.ಜೆ. ಲಕ್ಕಪ್ಪಗೌಡರಿಗೆ ನನ್ನ ಮೊದಲ ಕೃತಜ್ಞತೆಗಳು.

ನನ್ನ ಅಧ್ಯಯನಕ್ಕೆ ಬಿಡುವಿಲ್ಲದ ಕ್ರಿಯಾಶೀಲತೆಯ ನಡುವೆಯೂ ಮಾರ್ಗದರ್ಶಕರಾಗಿ ಒಪ್ಪಿಕೊಂಡು ಪ್ರಬಂಧದ ಬಗೆಗೆ ಚರ್ಚಿಸಿ, ಆಗಾಗ್ಗೆ ಸೂಕ್ತ ಸಲಹೆಗಳನ್ನು ಸೂಚಿಸುತ್ತಾ, ಸಂಶೋಧನೆಗೆ ಅರ್ಥವಂತಿಕೆಯನ್ನು, ಒಳನೋಟಗಳನ್ನು ನೀಡಿ ಮಹಾಪ್ರಬಂಧ ರಚಿಸಲು ಸಹಾಯಕರಾಗಿರುವ ಗುರುಗಳಾದ ಡಾ. ರಹಮತ್ ತರೀಕೆರೆಯವರಿಗೆ.

ಪರಿಚಯವಾದಂದಿನಿಂದಲೂ ನನ್ನ ಚಿಂತನೆಗಳಿಗೆ ಬೆನ್ನೆಲುಬಾಗಿ ನಿಂತು, ನನ್ನಲ್ಲಿ ಸಂಶೋಧನೆ ಬಗೆಗೆ ಆಸಕ್ತಿ ಮೂಡಿಸಿ, ಆದಷ್ಟು ಚೆನ್ನಾಗಿ ಬರಲೆಂದು ಸಮಯ ಸಿಕ್ಕಾಗಲೆಲ್ಲ ಚರ್ಚಿಸಿ, ಅದಕ್ಕೆ ಬೇಕಾದ ಹಲವಾರು ಮಾಹಿತಿಗಳನ್ನು, ಪುಸ್ತಕಗಳನ್ನು ಕೊಡುತ್ತ, ಯಾವಾಗಲೂ ಸಂಶೋಧನೆ ಬಗೆಗೆ ವಿಚಾರಿಸಿ, ವಿಶೇಷ ಕಾಳಜಿಯಿಂದ ಅಧ್ಯಯನದ ಬರಹವನ್ನು ಓದಿ ಹಲವು ಸಲಹೆಗಳನ್ನು ನೀಡುತ್ತಿದ್ದ ಆತ್ಮೀಯ ಮೇಷ್ಟ್ರಾದ ರಾಜಪ್ಪ ದಳವಾಯಿಯವರಿಗೆ

ಅಧ್ಯಯನ ವಿಷಯಕ್ಕೆ ಹೊಸ ಹೊಳಹುಗಳು ಮೂಡುವಂತೆ ಚರ್ಚಿಸುತ್ತಿದ್ದ ಪ್ರೊ. ಎಸ್. ಜಿ. ಸಿದ್ದರಾಮಯ್ಯ, ಪ್ರೊ. ಕೀ. ರಂ. ನಾಗರಾಜ್, ಪ್ರೊ. ಓ. ಎಲ್. ನಾಗಭೂಷಣಸ್ವಾಮಿ, ತಾರಕೇಶ್ವರ, ಡಾ. ಬಿ.ಎಂ. ಪುಟ್ಟಯ್ಯ, ಡಾ. ಅಮರೇಶ ನುಗುಡೋಣಿ, ಡಾ. ಮೊಗಳ್ಳಿ ಗಣೇಶ್ ಇವರನ್ನು ಇಲ್ಲಿ ನೆನಪಿಸಿಕೊಳ್ಳುವುದು ನನ್ನ ಸಂತೋಷದ ವಿಷಯಗಳಲ್ಲಿ ಒಂದು.

ಎಂ. ಎ. ಓದುತ್ತಿರುವಾಗಲೇ ಕನ್ನಡ ವಿಶ್ವವಿದ್ಯಾಲಯದಲ್ಲೇ ಪಿಎಚ್.ಡಿ ಅಧ್ಯಯನ ಮಾಡಬೇಕೆಂದು ಪಣತೊಡುವಂತೆ ಮಾಡಿದ ಡಾ. ಕೇಶವನ್ ಪ್ರಸಾದ್, ಕೆ. ಮರಟ್ಟಿಯವರಿಗೆ, ಈಗಲೂ ಪ್ರೀತಿಯಿಂದ ವಿಚಾರಿಸುವ ಶ್ರೀ ಸುಜ್ಞಾನಮೂರ್ತಿ ಮತ್ತು ಕೆ. ಕೆ. ಮಕಾಳಿಯವರಿಗೆ, ನನ್ನ

ಅಧ್ಯಯನದ ಆರಂಭದಲ್ಲಿ ತಮ್ಮ ಮನೆಯಲ್ಲಿರಿಸಿಕೊಂಡು ಉಪಚರಿಸಿದ ಶ್ರೀಮತಿ ಸುಜ್ಞಾನಮೂರ್ತಿ ಮತ್ತು ಶ್ರೀಮತಿ ಮಹಾಳಿಯವರಿಗೆ, ಹೊಸಪೇಟೆಗೆ ಬಂದಾಗಲೆಲ್ಲಾ ಸ್ವತಃ ತಮ್ಮನಂತೆ ಕಾಣುತ್ತ ವಿಶ್ವಾಸ ತೋರಿಸುವ ಶ್ರೀಮತಿ ಭಾನಕ್ಕ ತರೀಕೆರೆಯವರಿಗೆ

ಅಧ್ಯಯನಕ್ಕೆ ಬೇಕಾದ ಪುಸ್ತಕಗಳನ್ನು ಕೊಡುತ್ತ ನನ್ನ ಅಧ್ಯಯನಕ್ಕೆ ಸಹಾಯ ಮಾಡಿದ ತುಮಕೂರು ಸ್ನಾತಕೋತ್ತರ ಕೇಂದ್ರದ ಗ್ರಂಥಾಲಯಾಧಿಕಾರಿಗಳಾದ ನಾಗರಾಜು, ಬಸವರಾಜು ರವರಿಗೆ, ಕರ್ನಾಟಕ ವಿದ್ಯಾವರ್ಧಕ ಸಂಘ, ಧಾರವಾಡದ ಶಿ. ಗು. ಅಂಗಡಿಯವರಿಗೆ, ತುಮಕೂರು ಪಿ.ಜಿ.ಸೆಂಟರಿನ ನಿರ್ದೇಶಕರುಗಳಿಗೆ, ಅಧ್ಯಾಪಕರುಗಳಿಗೆ, ಕನ್ನಡ ವಿಶ್ವವಿದ್ಯಾಲಯದ ಕನ್ನಡ ಭಾಷೆ ಮತ್ತು ಸಾಹಿತ್ಯ ವಿಭಾಗದ ಎಲ್ಲಾ ಅಧ್ಯಾಪಕರುಗಳಿಗೆ.

ಸಿಕ್ಕಾಗಲೆಲ್ಲಾ ಸಂಶೋಧನೆ ಎಲ್ಲಿಗೆ ಬಂತು ಎಂದು ವಿಚಾರಿಸಿ ಕ್ರಿಯಾಶೀಲತೆ ತಂದುಕೊಡುತ್ತಿದ್ದ ಮಿತ್ರರುಗಳಾದ ಮುಕುಂದ, ಗಂಗಬೈರಯ್ಯ, ಡಾ. ನಾಗಭೂಷಣ, ಹನುಮಂತರಾಯ, ತಿಮ್ಮಯ್ಯ, ನಾಗಭೂಷಣ, ಪಾತಯ್ಯ, ತಿಮ್ಮಯ್ಯ, ಹನುಮಂತರಾಯ, ಮುದ್ದವೀರಪ್ಪ, ಸುನಂದ, ಸಾವಿತ್ರಮ್ಮ, ನಳಿನಾ, ಕವಿತಾ ಕುಸುಗಲ್ಲ, ಕೊಟ್ರೇಶ, ಕನಕರಾಜ, ತಿಪ್ಪೇಸ್ವಾಮಿ, ಮಂಜುನಾಥ್ ಗೀತಾ, ವಿಜಯ್ ಕಾಂಬಳೆ, ಸತೀಶ ಪಾಟೀಲ, ಡಾ. ಮಾರುತಿ, ಡಾ. ಉಮೇಶ್, ಡಾ. ಜಾಜಿ ದೇವೇಂದ್ರ ಮತ್ತು ಕನ್ನಡ ವಿಶ್ವವಿದ್ಯಾಲಯ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ಎಲ್ಲಾ ಸಂಶೋಧನಾ ಮಿತ್ರರುಗಳಿಗೆ.

ನನ್ನ ಉನ್ನತ ವಿದ್ಯಾಭ್ಯಾಸಕ್ಕೆ ಸದಾ ಪ್ರೋತ್ಸಾಹಿಸುತ್ತಿರುವ ನನ್ನ ಅಣ್ಣಂದಿರುಗಳಾದ ಹೆಚ್. ನಾಗರಾಜಯ್ಯ, ಹೆಚ್. ಶಿವರಾಮು, ಚಂದ್ರಶೇಖರ್, ಅಂಜನ್ ಕುಮಾರ್, ಗುರುಪ್ರಸಾದ್‌ರವರಿಗೆ ಹಾಗೂ ಅತ್ತಿಗೆಯಂದಿರಿಗೆ, ಅಮ್ಮ ದೊಡ್ಡಕ್ಕ, ಅಪ್ಪ ಶ್ರೀ ಎನ್. ಸಿ. ಹನುಮಂತಯ್ಯನವರಿಗೆ, ಅಕ್ಕ ಮಣಿನಾಗರಾಜ್, ಜಯಮ್ಮಶೂಲೇಶ್, ಮಂಗಳಾ ಚಿಕ್ಕರಾಮಯ್ಯನವರಿಗೆ ಮತ್ತು ಮನೆಯ ಎಲ್ಲಾ ಪುಟಾಣಿಗಳಿಗೆ.

ನನ್ನ ವಿಮರ್ಶಾ ಸಂಕಲನ 'ಸೂಲು' ಪುಸ್ತಕವನ್ನು ಪ್ರಕಟಿಸಿ ಹಾಗೂ ಈ ಪ್ರಬಂಧವನ್ನು ಪ್ರೀತಿ ವಿಶ್ವಾಸದಿಂದ ಲಿಪಿ ಜೋಡಣೆ ಮಾಡಿ ವಿನ್ಯಾಸಗೊಳಿಸಿ ಪುಸ್ತಕ ರೂಪ ಮಾಡಿಕೊಟ್ಟ ಮಿತ್ರರಾದ ರವಿದಳವಾಯಿ ಹಾಗೂ ಶ್ರೀಮತಿ ಗಾಯಿತ್ರಿದಳವಾಯಿ ಇವರಿಗೆ ನನ್ನ ಪ್ರೀತಿ ಪೂರ್ವಕ ವಂದನೆಗಳು.

ರವಿಕುಮಾರ್ ಎನ್. ಹೆಚ್.
ಸಂಶೋಧನಾ ವಿದ್ಯಾರ್ಥಿ
ಕನ್ನಡ ವಿಶ್ವವಿದ್ಯಾಲಯ
ವಿದ್ಯಾರಣ್ಯ

<u>ಪರಿವಿಡಿ</u>

ಅಧ್ಯಾಯ - ೧

ಪುಸ್ತಕ ವಿಮರ್ಶೆ ಅಧ್ಯಯನದ ಪ್ರಸ್ತುತತೆ ಮತ್ತು ಉದ್ದೇಶ, ವ್ಯಾಪ್ತಿ

ಪುಸ್ತಕ ವಿಮರ್ಶೆ ಅಧ್ಯಯನದ ಪ್ರಸ್ತುತತೆ ಮತ್ತು ಉದ್ದೇಶ, ವ್ಯಾಪ್ತಿ

೨೦ನೇ ಶತಮಾನ ಎಲ್ಲ ಕ್ಷೇತ್ರದಲ್ಲೂ ವೈವಿಧ್ಯತೆಗಳನ್ನು ಕಂಡ ಕಾಲಮಾನ. ೧೯ನೇ ಶತಮಾನದಲ್ಲಿ ಆದ ವಿಜ್ಞಾನಕ್ರಾಂತಿ ಮತ್ತು ಅದರಿಂದ ಉಂಟಾದ ಜ್ಞಾನಶಾಖೆಗಳು ವಿಶ್ವದಾದ್ಯಂತ ಹೊಸ ಆವಿಷ್ಕಾರಗಳಿಗೆ ನಾಂದಿಯಾದವು. ಅದರ ಪರಿಣಾಮವಾಗಿ ಅದರ ಮುಂದಿನ ಶತಮಾನವಾದ ಈ ಶತಮಾನ ೧೯ನೇ ಶತಮಾನ ಕಂಡ ಕನಸುಗಳನ್ನು ಈಡೇರಿಸಿಕೊಳ್ಳುವ ವೇದಿಕೆಯಾಯಿತು. ಈ ಕಾಲಮಾನದಲ್ಲಿ ಪಾಶ್ಚಿಮಾತ್ಯ ರಾಷ್ಟ್ರಗಳು ಭಾರತದಂತಹ ರಾಷ್ಟ್ರಗಳಿಗೆ ವ್ಯಾಪಾರಕ್ಕಾಗಿ ಆಗಮಿಸಿದವು. ಭಾರತದಲ್ಲಿನ ರಾಜ್ಯಾಡಳಿತ ವ್ಯವಸ್ಥೆ ವಸಾಹತುಶಾಹಿಗಳ ಆಗಮನಕ್ಕೆ ಸೂಕ್ತ ದಾರಿ ಮಾಡಿಕೊಟ್ಟಿತು. ಬ್ರಿಟಿಷರ ಆಗಮನದಿಂದ ಭಾರತವು ತನ್ನ ಮೂಲ ತಲ್ಲಣಗಳ ಜೊತೆಯಲ್ಲೇ ವಸಾಹತುಶಾಹಿ ಆಧುನಿಕತೆಯ ಆರಂಭಕ್ಕೆ ಕಾರಣವಾಯಿತು. ಇದರ ಪರಿಣಾಮವಾಗಿ ಭಾರತೀಯ ಶಿಕ್ಷಣ ವ್ಯವಸ್ಥೆಗಿಂತ ಬ್ರಿಟಿಷರು ಕೊಟ್ಟ ಭಿನ್ನವಾದ ಶಿಕ್ಷಣ ವ್ಯವಸ್ಥೆ ಭಾರತೀಯ ಮನಸ್ಸುಗಳಲ್ಲಿ ಹೊಸ ದೃಷ್ಟಿಕೋನ ಮೂಡಲು ಕಾರಣವಾಯಿತು. ಭಾರತದಲ್ಲಿ ದೇಶಿಯವಾದಂತಹ ಮಠಾಶ್ರಮಗಳ ಶಿಕ್ಷಣ ವ್ಯವಸ್ಥೆ ಸಡಿಲಗೊಂಡು ಇಂಗ್ಲೀಷ್ ಶಿಕ್ಷಣ ಕ್ರಮ ಜಾರಿಗೆ ಬಂದಿತು. ಇದರಿಂದಾಗಿ ಭಾರತೀಯ ಸಾಮಾಜಿಕ ಬದುಕಿನಲ್ಲಿ ಹೊಸ ವಿಚಾರ ಕ್ರಾಂತಿಯೊಂದು ತಳೆಯಿತು. ಎಲ್ಲರಿಗೂ ಸಮಾನ ಶಿಕ್ಷಣವೆಂಬ ಸರ್ವ ಶಿಕ್ಷಣವನ್ನು ತಂದು ಬ್ರಿಟಿಷ್ ವ್ಯವಸ್ಥೆ ಭಾರತದ ಪಾಲಿಗೆ ವರದಾನವಾಗಿ ಪರಿಣಮಿಸಿತು. ಕೇವಲ ಕೆಲವರ ಪಾಲಿಗೆಯೇ ನಿಂತಿದ್ದ ಶಿಕ್ಷಣ ಎಲ್ಲ ಮೂಲಗಳಿಗೂ ತಲುಪುವಿಕೆಗೆ ಯತ್ನಿಸಿತು. ಇದರಿಂದ ಭಾರತದಲ್ಲಿ ಸಾಮಾಜಿಕವಾದ ಆಂದೋಲನಗಳು ಶುರುವಿಗಿಟ್ಟುಕೊಂಡವು. ಹೀಗಾಗಿ ಹೊಸ ಶಿಕ್ಷಣಕ್ರಮ ತಂದುಕೊಟ್ಟ ಪ್ರಜ್ಞೆ ಮತ್ತು ಎಚ್ಚರಗಳು ಭಾರತೀಯರನ್ನು ಬದಲಾವಣೆಗೆ ಸಜ್ಜುಗೊಳಿಸಿದವು. ಈ ವಸಾಹತುಶಾಹಿ ಜೊತೆಯಲ್ಲಿಯೇ ಬಂದ ಕೈಗಾರಿಕಾ ಕ್ರಾಂತಿಯಿಂದ ಔದ್ಯೋಗಿಕ ಕ್ರಾಂತಿಯಾಗಿ ಅದು ರೈತರನ್ನು ಬೀದಿಪಾಲು ಮಾಡಿತು, ಗ್ರಾಮ ಸಂಸ್ಕೃತಿ ಒಡೆದು ನಗರ ಸಂಸ್ಕೃತಿ ನಿರ್ಮಾಣ ಮಾಡಿತು. ಎಂದೆಲ್ಲಾ ಏನೇ ವಾದಗಳನ್ನು ಹೂಡಿದರೂ ಆ ಶತಮಾನ ಅಭೂತಪೂರ್ವ ಬದಲಾವಣೆಗೆ ಕಾರಣವಾಯಿತು. ಈ ಹೊಸ ರೀತಿಯ ದೃಷ್ಟಿಕೋನದಿಂದ ಭಾರತೀಯ ಮನಸ್ಸು ಹಿಂದಿನಂತೆ ಜಡವಾಗಿ ಕೂರದೆ ಹೊಸ ಆಯಾಮದ ದಾರಿಯನ್ನು

ಕಂಡುಕೊಳ್ಳಲು ಸಿದ್ಧವಾಯಿತು. ಇದರ ಪರಿಣಾಮವಾಗಿ ಸಾಮಾಜಿಕ ಆರ್ಥಿಕ ರಾಜಕೀಯ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆಗಳು ಭಾರತೀಯರ ಆಲೋಚನೆಯನ್ನು ಮೀರಿ ಆಗತೊಡಗಿದವು. ಈ ಎಲ್ಲದರ ಬದಲಾವಣೆಯ ರೂಪವಾಗಿ ೨೦ನೇ ಶತಮಾನ ದಾಂಗುಡಿಯಿತ್ತಿತ್ತು.

ಈ ಶತಮಾನವು ಭಾರತೀಯ ಸಾಹಿತ್ಯದ ಮಟ್ಟಿಗೆ ಹೊಸ ಒಲವುಗಳನ್ನು ರೂಪಿಸಿಕೊಂಡಂಥ ಸಂದರ್ಭ. ಕನ್ನಡ ಸಾಹಿತ್ಯದ ಪಾಲಿಗಂತೂ ಇದು ಹೊಸ ಹುಟ್ಟಿನ ಯುಗ. ಅದು ತನ್ನ ಸ್ವರೂಪವನ್ನು ಹೊಸ ದೃಷ್ಟಿಕೋನಗಳ ಸಮೇತ ಪಡೆಯಲು ನೆರವು ಮಾಡಿತು. ಬಹುಪಾಲು ಛಂದೋಬದ್ಧವಾಗಿದ್ದ ಸಾಹಿತ್ಯ. ಈ ಶತಮಾನದಲ್ಲಿ ಅದನ್ನು ಮೀರುವ, ಹೊಸದನ್ನು ಕಟ್ಟುವ ಕನಸಿಗೆ ನಾಂದಿ ಹಾಡಿತು. ಹೆಚ್ಚಿನದಾಗಿ ಚಂಪೂ ರಗಳೆ, ಷಟ್ಪದಿ ಗದ್ಯ? ಇತ್ಯಾದಿಗಳ ಕಟು ನಿಬಂಧನೆಗೆ ತೊಡಗಿದ್ದ ಕನ್ನಡ ಸಾಹಿತ್ಯ ಇವುಗಳ ಬಿಗಿಕಟ್ಟನಿಂದ ಬಿಡಿಸಿಕೊಳ್ಳಲು ಹಿಂದಿನಿಂದಲೂ ಹೆಣಗುತ್ತಲೇ ಬಂದಿತ್ತು. ಈ ಬಿಗಿ ಸಡಿಲವಾಗಿ ಹೊಸ ಹೊಸ ಪ್ರಕಾರಗಳಿಗೆ, ಹೊಸ ಅಭಿವ್ಯಕ್ತಿ ಕ್ರಮಕ್ಕೆ ಪೂರಕ ವಾತಾವರಣವನ್ನು ೨೦ನೇ ಶತಮಾನದ ಆಲೋಚನೆ ರೂಪಿಸಿಕೊಟ್ಟಿತು. ಇದರ ಫಲವಾಗಿ ಕೇವಲ ಕಾವ್ಯ, ಗದ್ಯ, ನಾಟಕಗಳ ಸಾಹಿತ್ಯವಾಗಿದ್ದ ಕನ್ನಡ ಸಾಹಿತ್ಯ ಹಲವು ಬಿಳಲುಗಳನ್ನು ಚಾಚಿತು. ಕವಿತೆ, ಕತೆ, ಕಾದಂಬರಿ, ಸಣ್ಣಕತೆ, ಲಲಿತ ಪ್ರಬಂಧ, ಅಸಂಗತ ನಾಟಕ, ಮಹಾಕಾವ್ಯ, ಗೀತನಾಟಕ, ಪ್ರವಾಸ ಸಾಹಿತ್ಯ, ಪುಸ್ತಕ ವಿಮರ್ಶೆ, ಹನಿಗವಿತೆ, ಚುಟುಕು, ಸಾಹಿತ್ಯ ವಿಮರ್ಶೆ, ಅಂಕಣ ಬರಹ, ಮಕ್ಕಳ ಸಾಹಿತ್ಯ.... ಮುಂತಾದ ಹೊಸ ಪ್ರಕಾರಗಳ ಉದಯಕ್ಕೆ ಈ ಶತಮಾನ ಕಾರಣವಾಯಿತು. ಈ ಶತಮಾನ ರೂಪಿಸಿಕೊಟ್ಟ ಆಧುನಿಕ ಶಿಕ್ಷಣಕ್ರಮ, ಹೊಸ ಆಲೋಚನೆ, ಪಾಶ್ಚಾತ್ಯರಿಂದ ಹರಿದ ಆಧುನಿಕ ಚಿಂತನೆ ಇವುಗಳೆಲ್ಲದುದರ ಫಲವಾಗಿಯೇ ಕನ್ನಡ ಸಾಹಿತ್ಯ ಹೊಸ ಆಯಾಮವನ್ನು ಪಡೆಯಿತು.

೧. ಸಾಮಾಜಿಕ ರಾಜಕೀಯ ವಿಶ್ಲೇಷಣೆಯ ಹಿನ್ನೆಲೆಯಲ್ಲಿ ಸಾಹಿತ್ಯ

ಬ್ರಿಟಿಷರು ಭಾರತಕ್ಕೆ ಬಂದಾಗಲಿಂದ ಭಾರತದ ಸಾಮಾಜಿಕ, ರಾಜಕೀಯ ಕ್ಷೇತ್ರಗಳಲ್ಲಿ ಗಮನೀಯ ಬದಲಾವಣೆಯಾದವು. ಚಾತುರ್ವರ್ಣ ವ್ಯವಸ್ಥೆಯನ್ನು ಜೀವಾಳವಾಗಿ ಹೊಂದಿದ್ದ ಭಾರತೀಯ ಸಮಾಜವು ಆಗಿನ ಚಾರಿತ್ರಿಕ ವಿದ್ಯಮಾನಗಳ ಪ್ರೇರಣೆಯಿಂದ ಮತ್ತು ಬ್ರಿಟಿಷರ ಹೊಸ ಸಾಮಾಜಿಕ ವ್ಯವಸ್ಥೆಯಿಂದ ಪರಿವರ್ತನೆಗೊಳ್ಳಲು ಆರಂಭಿಸಿತು. ಬ್ರಿಟಿಷ್ ವ್ಯವಸ್ಥೆ ರೂಪಿಸಿದ ಹೊಸ ಸಾಮಾಜಿಕ ಅನುಕೂಲಗಳು ಕೆಳವರ್ಗಗಳ ಎಚ್ಚೆತ್ತ ಪ್ರಜ್ಞೆಗೆ ಕಾರಣವಾದವು. ಬಹುಪಾಲು ಪ್ರಬಲರ ಸಮಾಜವಾಗಿಯೇ ಉಳಿದುಕೊಂಡು ಬರುತ್ತಿದ್ದ ವ್ಯವಸ್ಥೆಗೆ ಬದಲೀ ವ್ಯವಸ್ಥೆಯೊಂದನ್ನು ಬ್ರಿಟಿಷ್ ವ್ಯವಸ್ಥೆ ನಿರ್ಮಾಣ ಮಾಡಿತ್ತು. ಈ ಪರಿಣಾಮವಾಗಿ ಭಾರತದ ಸಾಮಾಜಿಕ ಬದುಕಿನಲ್ಲಿ ಮಹತ್ತರ ಸ್ಥಿತ್ಯಂತರಗಳು ಆಗತೊಡಗಿದವು. ಹಳೆಯ ಸಾಮಾಜಿಕ ವ್ಯವಸ್ಥೆ ಪತನಗೊಂಡು ಹೊಸ ಆಧುನಿಕ ವ್ಯವಸ್ಥೆ ಮೂಡತೊಡಗಿತು.

ಬ್ರಿಟಿಷ್ ವ್ಯವಸ್ಥೆ ನೀಡಿದ ಹೊಸ ಆಧುನಿಕ ಶಿಕ್ಷಣದಿಂದ ಭಾರತದ ಸಾಮಾಜಿಕ, ರಾಜಕೀಯ ಅಲ್ಲದೆ ಸಾಂಸ್ಕೃತಿಕ ಕ್ಷೇತ್ರಗಳಲ್ಲೂ ತೀವ್ರತರ ಬದಲಾವಣೆಗಳೂ ಆದವು. ಹೊಸ ಶಿಕ್ಷಣದಿಂದ ಎಚ್ಚೆತ್ತ

ಪ್ರಜ್ಞಾವಂತ ಸಮುದಾಯವು ತಮ್ಮ ದೇಶದ ಸ್ಥಿತಿಗೆ ಕಾರಣಗಳನ್ನು ಹುಡುಕಲು ಯತ್ನಿಸಿತು. ಆ ಸಮೂಹ ತಮ್ಮ ದೇಶದಲ್ಲಿನ ಅನಕ್ಷರತೆ, ಬಡತನ, ಸಂಪ್ರದಾಯಗಳಿಂದ ಮತ್ತು ಬ್ರಿಟಿಷರ ದಾಸ್ಯದಿಂದ ಬಿಡುಗಡೆ ಬಯಸಿತು. ಇದರಿಂದಾಗಿ ಸಾಮಾಜಿಕ ಕ್ರಾಂತಿಗಳು, ರಾಷ್ಟ್ರೀಯ ಚಳವಳಿಗಳು ಉದ್ಭವಗೊಂಡವು. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಸಮಾಜದ ವಾಸ್ತವ ಸಂಗತಿಗಳು ಇದರ ಹಿನ್ನೆಲೆಗೆ ಬಂದವು. ಭಾರತದ ಸಮತೋಲನ ವ್ಯವಸ್ಥೆಯ ಅಭಿವೃದ್ಧಿಗೆ ಆರ್ಥಿಕ, ರಾಜಕೀಯ, ಸಾಮಾಜಿಕ ಬದಲಾವಣೆ ಮತ್ತು ಸಾಹಿತ್ಯಕ ಬದಲಾವಣೆಗಳು ಕಾರಣವಾದವು. ರಾಷ್ಟ್ರೀಯವಾದಿ ಚಿಂತನೆ, ಗಾಂಧಿತತ್ವ, ಮುಂತಾದವುಗಳು ಚಿಂತಕರಲ್ಲಿ ಮೂಡಿದುದರ ಫಲವಾಗಿ ಸ್ವಾತಂತ್ರ್ಯಕ್ಕೆ ಅವರು ಹಂಬಲಿಸಿದರು. ಅದಕ್ಕಾಗಿ ಜನರನ್ನು ಹುರಿದುಂಬಿಸಿದರು. ಇಂತಹ ಸಾಂಸ್ಕೃತಿಕ ಸಂದರ್ಭದಲ್ಲಿ ಹೊಸ ಆವಿಷ್ಕಾರಕ್ಕೆ ಒಳಗಾದ ಆಧುನಿಕ ಕನ್ನಡ ಸಾಹಿತ್ಯ ಪರಂಪರಾಗತ ಮೌಲ್ಯಗಳನ್ನು ಪುನರ್‌ವಿಮರ್ಶಿಸುವ ಕಾರ್ಯವನ್ನು ಕೈಗೆತ್ತಿಕೊಂಡರು. ಇದರಿಂದ ಹಿಂದಿನಿಂದಲೂ ಉಳಿದುಕೊಂಡು ಬಂದಿದ್ದ ಒಂದು ಪ್ರಬಲ ಮನಸ್ಥಿತಿಯೂ ಶಿಥಿಲಗೊಂಡಿತು. ಅದು ಹೊಸ ಮೌಲ್ಯಗಳ ಶೋಧಿಸುವಿಕೆಗೆ ತಡೆಯೊಡ್ಡುತ್ತಾ ಜೊತೆಗೆ ಅಪರೋಕ್ಷವಾಗಿ ಸಹಕರಿಸುತ್ತ ಬಂದಿತ್ತು.

ಹಿಂದಿನಿಂದಲೂ ಬೆಳೆದು ಬಂದಿದ್ದ ಭಾರತೀಯ ಮನಸ್ಥಿತಿ ಜಡ ಸಂಪ್ರದಾಯದ ಹೊಸ್ತಿಲಲ್ಲಿ ನಿಂತು ಮನುಷ್ಯರನ್ನು ಬೇಧಿಸುವ, ಸ್ತ್ರೀಯರನ್ನು ತುಚ್ಛೀಕರಿಸುವ ಸ್ಥಿತಿಯನ್ನು ಹೊಸಮೌಲ್ಯಗಳು ಇದಕ್ಕೂ ಮುನ್ನ ಪ್ರಶ್ನಿಸಲೆತ್ನಿಸಿದವು. ಆದರೆ ಪಶ್ಚಿಮದಿಂದ ಹರಿದುಬಂದ ವಿಚಾರಧಾರೆಗಳು ಆಧುನಿಕ ಚಿಂತನೆ ಸಂದರ್ಭದಲ್ಲಿ 'ಪ್ರಮುಖ' ಎಂಬ ವಾದಕ್ಕೆ ತಿರುಗಿದವು. ಹೀಗಾಗಿ ಆಧುನಿಕ ಚಿಂತನೆಯಲ್ಲಿ ಪಶ್ಚಿಮದ ಆಲೋಚನೆಗಳು ಇತರ ವಿಚಾರಗಳನ್ನು ಅತಿರೇಕದಲ್ಲಿ ಪ್ರಭಾವಿಸಿದವು. ಕೆಲವೊಮ್ಮೆ ಸರ್ವಾಧಿಕಾರೀ ಧೋರಣೆಯನ್ನು ತಳೆದವು.

೨. ಸಾಹಿತ್ಯದಲ್ಲಿ ತಾರತಮ್ಯ ಸ್ಥಿತಿ

ಭಾರತೀಯ ಚಿಂತನೆ ಬಹುಪಾಲು ಪುರುಷ ಪರವಾದ, ಪ್ರಭುತ್ವವಾದ ದೃಷ್ಟಿಕೋನವೇ. ಪ್ರಭುತ್ವ ಇಲ್ಲವೇ ಪುರುಷ ಇವುಗಳ ಮುಖೇನವೇ ಸಮಾಜವನ್ನು ನೋಡುವ ಸ್ಥಿತಿ ನಿರ್ಮಾಣವಾಗಿ ಬಿಟ್ಟಿತ್ತು. ಪಶ್ಚಿಮದು ಶ್ರೇಷ್ಠ, ಪೂರ್ವದ್ದು ಅಷ್ಟೇನು ಮುಖ್ಯವಲ್ಲದ್ದು ಎಂಬ ತೀರ್ಮಾನದ ಸಿದ್ಧಾಂತೀಕರಣದ ಫಲವಾಗಿ ಗತದ ಬಗ್ಗೆ ಪೂರ್ವಗ್ರಹವನ್ನು ಚಿಂತಕರು ತೋರಲಾರಂಭಿಸಿದರು. ೧೮-೧೯ನೇ ಶತಮಾನದಿಂದ ಆರಂಭವಾದ ವಸಾಹತುಶಾಹೀ ಪ್ರಜ್ಞೆ ಭಾರತದಂಥ ದೇಶದಲ್ಲಿ ತಮ್ಮ ಪ್ರಾಬಲ್ಯವನ್ನು ಬೀರಿತು. ಅಲ್ಲದೆ ಅದು ರಾಜಕೀಯ, ಆರ್ಥಿಕ, ಬೌದ್ಧಿಕ ಕೊನೆಗೆ ಸಾಂಸ್ಕೃತಿಕವಾಗಿ ನಿಯಂತ್ರಿಸಲಾರಂಭಿಸಿತು. ಇಂಥ ವಸಾಹತುಶಾಹೀ ಮನಸ್ಸುಗಳು ಹಿಂದಿನ ಕಾಲವನ್ನು ಕುರಿತು ಬದುಕಾಗಿ ಬರೆಯದೆ ಬಿಡಿ ಬಿಡಿ ವಿಚಾರಗಳಲ್ಲಿ ಇತಿಹಾಸವನ್ನು ಬರೆಯಲ್ಪಟ್ಟವು. ಈ ನಿಟ್ಟಿನಲ್ಲಿ ರೋಮಿಲಾ ಥಾಪರ್ ರವರ ('ಗತಕಾಲದ ಬಗೆಗಿನ ಪೂರ್ವಗ್ರಹ' ಅನು : ಸೂರ್ಯನಾಥಕಾಮತ್) 'past & prejudies' 'ಕೃತಿ ಈ ಕುರಿತು ಚಿಂತನೆ ಮಾಡುತ್ತದೆ. ಭಾರತದ ಬದುಕು ಪಶ್ಚಿಮದ ರಾಷ್ಟ್ರಗಳಂತೆ ಚಲನಶೀಲ ಮತ್ತು ಚಿಂತನಶೀಲವಲ್ಲವೆಂದು' ಜಡ ಮೌಲ್ಯಗಳ ತಾಣವೆಂದು ಪರಿಗಣಿಸಿ

ಇತಿಹಾಸವನ್ನು ಕಟ್ಟುತ್ತಿದ್ದರು. ಈ ಚಿಂತನೆಯನ್ನು ಬಸವರಾಜ ಕಲ್ಗುಡಿಯವರು ಹೀಗೆ ಹೇಳುತ್ತಾರೆ.

ಇತಿಹಾಸದ ಅಧ್ಯಯನವೆಂದರೆ ರಾಜವಂಶದ ಮತ್ತು ಸಾಮ್ರಾಜ್ಯಗಳ ಏಳು -ಬೀಳುಗಳಿಗೆ ಸಂಬಂಧಿಸಿದ ವಿಷಯವಾಗಿ ರಾಜರು ಹಾಗೂ ಅವರ ಘಟನೆಗಳು ಪ್ರಧಾನ ನೆಲೆಗೆ ಬಂದವು. ಚರಿತ್ರೆಯ ವಿಷಯ ಕೇವಲ ಇವರ ಹೋರಾಟದ ಘಟನೆಗಳನ್ನು ವಿವರಿಸುವ ಕೆಲಸಕ್ಕೆ ಮಾತ್ರ ಸೀಮಿತವಾಯಿತು. ಎರಡು ರೀತಿಯಲ್ಲಿ ಈ ರಾಜ ಮನೆತನದ ಅಧ್ಯಯನದ ವಿವರಗಳಿಗೆ ಪ್ರಾಧಾನ್ಯತೆ ಸಿಕ್ಕಿರುವುದು ಕಂಡುಬರುತ್ತದೆ. ಒಂದನೆಯ ವಿವರವನ್ನು ಈ ರೀತಿ ಸೂಚಿಸಬಹುದು. ಯುರೋಪಿಯನ್ ಇತಿಹಾಸಕಾರರು ಸ್ವೀಕರಿಸುವುದಕ್ಕೆ ಮುಖ್ಯ ಕಾರಣ, ರಾಷ್ಟ್ರೀಯ ಆಂದೋಲನದಲ್ಲಿ ಭಾಗವಹಿಸಿದ ಅಥವಾ ಅವರಿಂದ ಪ್ರೇರಿತವಾದ ಇವರು ಬ್ರಿಟಿಷರು ಭಾರತಕ್ಕೆ ಬರುವ ಪೂರ್ವದಲ್ಲಿಯೇ ಭಾರತದಲ್ಲಿ ಉಜ್ವಲ ಯುಗವೊಂದು ಇತ್ತು ಎನ್ನುವುದನ್ನು ತೋರಿಸುವ ಉತ್ಸಾಹ ಪ್ರಕಟಿಸಿದ್ದೇ ಆಗಿದೆ. ಗುಪ್ತರ ಯುಗವನ್ನು ಸುವರ್ಣ ಯುಗ ಎಂಬುದಾಗಿ ಕರೆದದ್ದು ಇಂತಹ ಹಿನ್ನೆಲೆಯಿಂದಾಗಿಯೇ. ಇನ್ನೊಂದು ಮುಖ್ಯ ಅಂಶವೆಂದರೆ - ರಾಜರು, ಜನರ ಆರ್ಥಿಕ ಹಾಗೂ ಸಾಮಾಜಿಕ ಜೀವನವನ್ನು ರೂಪಿಸುವ ಶಕ್ತಿಯಾಗಿದ್ದರು ಎನ್ನುವ ಕಲ್ಪನೆ. ಈ ಕಲ್ಪನೆಯಂತೂ ಎಷ್ಟು ಸರಳ ಗ್ರಹಿಕೆಯಲ್ಲಿ ನಮ್ಮ ಅಧ್ಯಯನದಲ್ಲಿ ರೂಪುಗೊಂಡಿದೆಯೆಂದರೆ, ರಾಜನ ವೈಯಕ್ತಿಕ ಹೋರಾಟ ಹಾಗೂ ಆಳ್ವಿಕೆಯ ವಿವರಗಳ ನಂತರ ಅನುಬಂಧವೆಂಬಂತೆ ಬರುವ ಭಾಗಗಳಲ್ಲಿ ರಾಜನು ತಾನು ಕಟ್ಟಿಸಿದ ದೇವಾಲಯ, ಬಿಟ್ಟ ದತ್ತಿ, ಕವಿಗಳಿಗೆ ಕೊಟ್ಟ ಆಶ್ರಯ ಮುಂತಾದ ಬಿಡಿ ಘಟನೆಗಳನ್ನು ಆ ಕಾಲದ ಪ್ರಮುಖ ಆರ್ಥಿಕ, ಸಾಮಾಜಿಕ ಕಾರ್ಯವೆಂಬಂತೆ ಬರೆಯಲಾಗುತ್ತದೆ.[೧]

ಈ ಮೇಲಿನ ಉಲ್ಲೇಖವು ನಮ್ಮ ಇತಿಹಾಸ ರಚನೆಯ ಹಿಂದಿನ ರಚನಾ ವಿಧಾನವನ್ನು ಹೇಳುತ್ತಿದೆ. ಇಲ್ಲಿಯವರೆಗೂ ಇತಿಹಾಸ ಕುರಿತ ಅಧ್ಯಯನ ಚಿಂತನೆಗಳೆಂದರೆ ಅದು ಕೇವಲ ಏಕವ್ಯಕ್ತಿ ಕೇಂದ್ರಿತವಾದಂತಹ ಹಿನ್ನೆಲೆಯವುಗಳಾಗಿದ್ದವು ಈ ಭಾವನೆ ಹೆಚ್ಚು ಪ್ರಚುರಕ್ಕೆ ಬಂದು ಇನ್ನುಳಿದ ವಿವರಗಳು ಮುಖ್ಯವಾಗದೆ ಸಾಮಾನ್ಯ ವಿವರಗಳಂತೆ ದಾಖಲಾಗುತ್ತಿದ್ದವು.

ನಮ್ಮ ಇತ್ತೀಚಿನ ಸಾಹಿತ್ಯ ಚರಿತ್ರೆಗಳು ಸಹ ಪೂರ್ವದ ಸ್ಥಿತಿಯಲ್ಲಿಯೇ, ಈ ಮೇಲಿನ ಮನಸ್ಥಿತಿಯಿಂದಲೇ ರಚಿತವಾಗಿವೆ. ಒಬ್ಬ ಕವಿಯನ್ನು ಪ್ರಮುಖನೆಂದು ನಿರ್ಣಯಿಸಿ, ಸಾಹಿತ್ಯ ಚರಿತ್ರೆಯನ್ನು ವಿಭಾಗ ಮಾಡಿರುವ ಕ್ರಮ ಸಾಹಿತ್ಯ ಚರಿತ್ರೆಗಳನ್ನು ಅಭ್ಯಸಿಸಿದರೆ ತಿಳಿಯುತ್ತದೆ. ಸಾಹಿತ್ಯ ವಿಭಾಗ ಕ್ರಮಗಳು ಮತ - ಧರ್ಮಗಳ ದೃಷ್ಟಿಯಿಂದ, ಭಾಷಾ ದೃಷ್ಟಿಯಿಂದ, ಸಾಹಿತ್ಯ ರೂಪಗಳನ್ನಿಟ್ಟುಕೊಂಡು, ಪ್ರಮುಖ ಕವಿಗಳನ್ನಿಟ್ಟುಕೊಂಡ ಸಾಹಿತ್ಯದ ಇತಿಹಾಸವನ್ನು ರಚಿಸಿರುವ ಇತಿಹಾಸಕಾರರು ಎದುರಿಸಿರುವ ಗೊಂದಲವನ್ನು ರಂ.ಶ್ರೀ. ಮುಗಳಿಯವರ ೧೯೭೧ರ ಆವೃತ್ತಿಯ "ಕನ್ನಡ ಸಾಹಿತ್ಯ ಚರಿತ್ರೆ"ಯಲ್ಲಿ (ಉಷಾ ಸಾಹಿತ್ಯ ಮಾಲೆ) ಗುರುತಿಸಬಹುದು.

ಈಚೀನ ಕೆಲವು ಕಾಲದವರೆಗೆ ಪಂಪನಿಂದಲೇ ಸಾಹಿತ್ಯ ಚರಿತ್ರೆ ಅಭ್ಯಸಿಸುವ, ಅದೇ ರೀತಿ ಕುಮಾರವ್ಯಾಸ, ಬಸವ, ಹೀಗೆ ಕೆಲವು ಮುಖ್ಯರನ್ನು ಇಟ್ಟುಕೊಂಡು ಸಾಹಿತ್ಯ ಚರಿತ್ರೆಯನ್ನು ಅರ್ಥೈಸುವ ಗಡಿಯನ್ನು ಹಾಕಿಕೊಂಡಿತ್ತು. ಸಾಹಿತ್ಯ ಚರಿತ್ರೆಯನ್ನು ಪ್ರಮುಖ ರಾಜರುಗಳ ಕಾಲದಿಂದ ಗುರುತಿಸಿರುವ ಮನಸ್ಸಿನಲ್ಲಿ 'ಮುಖ್ಯ' ಪ್ರಮುಖ, ಅಮುಖ್ಯ ಎಂಬ ಭೇದಗಳು ಸೃಷ್ಟಿಯಾಗಿವೆ. ಬಸವ, ಅಲ್ಲಮ, ಸಿದ್ಧರಾಮ, ಅಕ್ಕಮಹಾದೇವಿ, ಮುಂತಾದ ನಾಲ್ಕೈದು ಮಂದಿಯಿಂದ ಇಡೀ ೧೨ನೇ ಶತಮಾನದ ಕ್ರಾಂತಿಯನ್ನು ನೋಡುವ ಪರಿಪಾಠ ನಮ್ಮಲ್ಲಿ ಈಗಲೂ ಇದೆ. ಈ ನಾಲ್ಕು ಮಂದಿಯಲ್ಲದೆ, ಆ

ಕಾಲದಲ್ಲಿದ್ದ ಇನ್ನಿತರ ಅಲಕ್ಷಿತ ವಚನಕಾರರನ್ನು ಗುರುತಿಸುವ ದೃಷ್ಟಿ ಬೆಳಸಿಕೊಂಡಿರುವುದು ತೀರ ಇತ್ತೀಚೆಗೆ. ಇದು ಕೇಂದ್ರದಿಂದಲೇ ಸುತ್ತಲ ಕೊನೆಯನ್ನು ನೋಡುವ ದೃಷ್ಟಿ. ಕೇಂದ್ರವನ್ನು ಮುಖ್ಯವೆಂದು ಪರಿಗಣಿಸುವ ಅತಿಗೆ ತಲುಪಿಬಿಟ್ಟಿತು. ಪಂಪನ ಕಾಲದಲ್ಲಿ ಇದ್ದಂಥ ಇತರ ಕವಿಗಳು, ಕುಮಾರವ್ಯಾಸನ ಕಾಲದಲ್ಲಿ ಇದ್ದಂಥ ಕವಿಗಳು ಅಪ್ರಮುಖವಾಗ ತೊಡಗಿದರು. ಈ ಕಾರಣದಿಂದ ಮುಖ್ಯ ವ್ಯಕ್ತಿಯ ಮುಂದೆ ಇತರ ಕವಿಗಳು ಗೌಣವಾಗಿ ಬಿಟ್ಟರು. ರಾಜ ಮಹಾರಾಜರುಗಳನ್ನು ವೈಭವೀಕರಿಸಿರುವ ಲಿಖಿತ ಇತಿಹಾಸ ಆ ಕಾಲದ ಸಾಮಾನ್ಯರ ಮೂಲಕ ರೂಪುಗೊಳ್ಳುತ್ತಿಲ್ಲ. ಸೈನಿಕರ ಮೂಲಕ ಯುದ್ಧದ ಪ್ರಸಂಗವನ್ನು ವಿಶ್ಲೇಷಿಸುತ್ತಿಲ್ಲ. ಶಿಲ್ಪಿಗಳ ಮೂಲಕ, ಕೆಲಸದಾಳು ಮೂಲಕ ಇತಿಹಾಸವನ್ನು ರೂಪಿಸಿಲ್ಲ. ಈ ಅತಿ ಸಾಹಿತ್ಯ ಕ್ಷೇತ್ರವನ್ನು ಬಿಟ್ಟಿಲ್ಲ. ೨೦ನೇ ಶತಮಾನವೇ ಈ ರೀತಿಯ ತೊಂದರೆಗಳಿಗೆ ಹೆಚ್ಚು ಒಳಗಾಗಿದೆ. ಈ ಕಾಲದಲ್ಲಿ ಬಂದಂಥ ಹಲವಾರು ಸಾಹಿತ್ಯ ಪ್ರಕಾರಗಳಿಗೆ ನಿರ್ಲಕ್ಷ್ಯ ತೋರಲಾಗುತ್ತಿದೆ. ಮಾನವರ ಮನಸ್ಸಿನಲ್ಲಿ ಸಾಹಿತ್ಯದ ಬಗ್ಗೆ ಯಾವಾಗಲೂ ಕಾವ್ಯಕ್ಕೆ ಮೊದಲ ಪ್ರಾಶಸ್ತ್ಯ. ಉಳಿದವೆಲ್ಲ ನಂತರದವು ಎಂಬ ಶ್ರೇಣಿಕರಣ ಮನಸ್ಸು ಇತರ ಪ್ರಕಾರಗಳನ್ನು ಕಡೆಗಣಿಸಿಬಿಟ್ಟಿದೆ. ಕೇವಲ ಕವಿತೆಗೆ ಆರಿಸಿಕೊಳ್ಳುವ ವಸ್ತುವಿನ ಮೇಲೆಯೇ ಸಂಪ್ರದಾಯ ಮನಸ್ಸು ಕಸಿವಿಸಿಗೊಳ್ಳುತ್ತದೆ. ಹೀಗಿರುವಾಗ ಭಾರತೀಯ ಮನಸ್ಸು ಎಷ್ಟೊಂದು ಜಡ ಸಂಪ್ರದಾಯಕ್ಕೆ ಅಂಟಿಕೂತಿದೆ. ಅದನ್ನು ಕಿತ್ತೊಗೆಯದ ಚಿಂತಕರಲ್ಲಿ ಈಗಲೂ ಕಾವ್ಯಕ್ಕೆ ಮೊದಲ ಪ್ರಾಶಸ್ತ್ಯ. ಉಳಿದವು ಎರಡನೆಯ ದರ್ಜೆಯವು ಎಂದು ಗುರುತಿಸುವ ಈ ಶ್ರೇಣಿಕರಣವನ್ನು ಸಾಹಿತ್ಯದಲ್ಲಿ 'ಜಾತಿ ವ್ಯವಸ್ಥೆ' (Caste System) ಎಂದು ಕರೆಯಬಹುದು. ಇದರಿಂದ ಸಾಹಿತ್ಯಲೋಕ ಲೋಕವ್ಯವಹಾರಕ್ಕಿಂತ ಭಿನ್ನವಾಗಿಲ್ಲ ಎಂದು ಗೊತ್ತಾಗುತ್ತದೆ. ಇದಕ್ಕೆ ಕಾರಣ ಭಾರತೀಯ ಮನಸ್ಥಿತಿ 'ಶ್ರೇಣಿಕರಣ' ಸ್ಥಿತಿಯದು. ಪ್ರತಿಯೊಂದನ್ನು ಶ್ರೇಣಿಯಾಗಿ ವಿಂಗಡಿಸುವ ಪ್ರಮೇಯವೇ ಹೆಚ್ಚು. ಇದಕ್ಕೆ ಪೂರಕವಾದ ವಾತಾವರಣವನ್ನು ಸಮಾಜ ಸೃಷ್ಟಿಸಿದೆ. ಸಮಾಜದಲ್ಲಿನ ಈ ಶ್ರೇಣಿಕರಣ ದೃಷ್ಟಿ ಎಲ್ಲ ಕಡೆಗೂ ಹರಡಿರುವುದರಿಂದ ಸಾಹಿತ್ಯ ಕ್ಷೇತ್ರದಲ್ಲೂ ಇದರ ಪ್ರಭಾವವಿದೆ ಆಧುನಿಕ ಸಾಹಿತ್ಯ ಸಂಸ್ಕೃತಿಯು ಮಾಡಿದ ಕ್ಷೇತ್ರದ ಶ್ರೇಣಿಕರಣ ವ್ಯವಸ್ಥೆ ಮೊದಲಿನಿಂದಲೂ ಕಾವ್ಯಕ್ಕೆ ಕೊಟ್ಟಂತಹ ಪ್ರಾಶಸ್ತ್ಯ ಮತ್ತಾವುದೇ ಸಾಹಿತ್ಯ ಪ್ರಕಾರಕ್ಕೆ ನೀಡಿಲ್ಲ. ಆದರೂ ಜನ ಹೆಚ್ಚು ಪ್ರಭಾವಕ್ಕೆ ಒಳಗಾಗಿರುವುದು ಗದ್ಯ ಪ್ರಕಾರಕ್ಕೆ ಆಧುನಿಕ ಕನ್ನಡ ಸಾಹಿತ್ಯವು ಕತೆ, ಕಾದಂಬರಿ, ಶಿಶುಸಾಹಿತ್ಯ, ಲಲಿತ-ಪ್ರಬಂಧ, ವಿಮರ್ಶೆ, ಪುಸ್ತಕ ವಿಮರ್ಶೆ, ಪ್ರವಾಸ ಸಾಹಿತ್ಯ ಇನ್ನಿತರ ಸಾಹಿತ್ಯ ಪ್ರಕಾರಗಳನ್ನು ಒಳಗೊಂಡದ್ದು. ಆದರೆ ಸಂಪ್ರದಾಯ ಮನಸ್ಸಿನ ಮೊದಲ ಪ್ರಾಶಸ್ತ್ಯ ಕಾವ್ಯದ ಕಡೆಯೇ ಹರಿಯುತ್ತದೆ. ಇನ್ನಿತರ ಸಾಹಿತ್ಯ ಪ್ರಕಾರಗಳ ಕಡೆ ಅಷ್ಟಾಗಿ ಗಮನ ಹರಿಸುವುದೇ ಇಲ್ಲ. ಈ ಕಾರಣದಿಂದ ಭಾರತೀಯ ಸಮಾಜದಲ್ಲಿ ಹಿಂದಿನಿಂದಲೂ ಒಂದು ಸಂಪ್ರದಾಯ ಮನಸ್ಸು ಇದರ ಜೊತೆಗೂಡಿಯೇ ಬಂದಿದೆ. ಅದು ಪ್ರತಿಷ್ಠಿತವೆಂದು ಕೆಲವನ್ನು ಭಾವಿಸಿ, ಉಳಿದವನ್ನು ನಿರ್ಲಕ್ಷ್ಯಕ್ಕೆ ಗುರಿ ಮಾಡಿದೆ. ಹಿಂದಿನ ಸಾಹಿತ್ಯ ಬಹುಪಾಲು ಲಿಖಿತ ಪಂಡಿತ ಸಾಹಿತ್ಯವಾಗಿ, ಆಸ್ಥಾನದ ಹಾಡಾಗಿ ವಿಜೃಂಭಿಸುತ್ತಿತ್ತು. ಅದಕ್ಕೂ ಮಹತ್ತಾದ ಸಾಹಿತ್ಯ ಜನ ಸಾಮಾನ್ಯರ ಬಾಯಲ್ಲಿದೆ ಎಂಬ ಅರಿವು ಆಗಿನ ಕಾಲದ ಪಂಡಿತರಿಗೆ ಇರಲಿಲ್ಲ. ಸಾಹಿತ್ಯ ಕೃತಿಯೊಂದು ಹೆಚ್ಚಿನದಾಗಿ ಆಸ್ಥಾನದಲ್ಲೇ ರಚನೆಯಾಗುತ್ತಿದ್ದರಿಂದ ಸಹಜವಾಗಿಯೇ ಆಸ್ಥಾನದ ರಾಜ, ರಾಣಿ, ಅಂತಃಪುರ ಇವುಗಳ

ಬಗೆಗಿನ ವಿವರಗಳು ವರ್ಣನೆಗಳೇ ತುಂಬಿದ್ದವು. ಆದರೆ ಹಳ್ಳಿಗಳಲ್ಲಿ, ಕೇರಿಗಳಲ್ಲಿ ವಾಸಿಸುವ ಸಾಮಾನ್ಯರ ಸಾಹಿತ್ಯದ ಒಂದು ವಿವರವು ದಾಖಲಾಗಲಿಲ್ಲ. (ವಚನಕಾರರನ್ನು ಹೊರತುಪಡಿಸಿ) ಅಲ್ಲಿನ ಜನಜೀವನ ಬದುಕು ಇವುಗಳಾವುವು ಸಾಹಿತ್ಯದಲ್ಲಿ ಮೂಡಿ ಬರಲಿಲ್ಲ. ಬಹಳ ಕಾಲ ಲಿಖಿತ ಸಾಹಿತ್ಯದಿಂದ ಸಾಮಾನ್ಯರು ದೂರವೇ ಉಳಿದರು.

ಈ ರೀತಿಯ ದೂರ ಇಪ್ಪತ್ತನೆಯ ಶತಮಾನದ ಕೊನೆಯವರೆಗೂ (೧೨ನೇ ಶತಮಾನವನ್ನು ಹೊರತು ಪಡಿಸಿ) ಸನಿಹವಾಗಲೇ ಇಲ್ಲ. ನವೋದಯ ನವ್ಯಕಾಲದಲ್ಲೂ ಈ ರೀತಿಯ ಪ್ರಮುಖಿಗಳ ಬಗೆಗೆ ಲೇಖಕರು, ಚಿಂತಕರು ಗಮನ ಹರಿಸುತ್ತಿದ್ದರು. ಆದರೆ ೧೯೭೯ರಲ್ಲಿ ಸಾಂಸ್ಕೃತಿಕ ವಿದ್ಯಮಾನವಾಗಿ ಜನರ ಮಧ್ಯದಿಂದ ಹುಟ್ಟಿಬಂದ ಬಂಡಾಯ ಸಾಹಿತ್ಯ ಸಂಘಟನೆಯ ಚಿಂತನೆ, ಅದಕ್ಕೆ ಪೂರಕವಾಗಿ ಬಂದ ಸಮಾಜಮುಖಿ ಚಿಂತನೆಗಳು ಸಾಹಿತ್ಯ ಚಿಂತನೆಯನ್ನು ಹೊಸ ಆಯಾಮದತ್ತ ಸಿದ್ಧಗೊಳಿಸಿದವು. ಬಂಡಾಯದ ಎಡಪಂಥೀಯ ಚಿಂತನೆ, ಕನ್ನಡ ಸಾಹಿತ್ಯಕ್ಕೆ ಕಾಲಿಟ್ಟಿದ್ದರಿಂದ ನಿರ್ಲಕ್ಷಿತ ವಸ್ತು, ವಿಷಯ, ಪ್ರದೇಶ, ಜನಾಂಗ ಮುಂತಾದವುಗಳ ಮೇಲೆ ದೀರ್ಘ ಚರ್ಚೆ ಅಧ್ಯಯನಗಳು ಆರಂಭವಾದವು. ಇದು ಸಾಮಾಜಿಕ ಅಂತರವನ್ನು ಒಡೆಯಲು ಯತ್ನಿಸಿತು. ವರ್ಗತಾರತಮ್ಯದ ಬೇರನ್ನು ಅಲುಗಾಡಿಸಿತು. ಇದಕ್ಕೂ ಮೊದಲು ನಿರ್ದಿಷ್ಟ ಅಧಿಕಾರ ಕೇಂದ್ರದಿಂದ ಹುಟ್ಟುತ್ತಿದ್ದ ಚಿಂತನೆಗಳನ್ನು ಈ ಚಿಂತನೆಗಳು ಪ್ರಶ್ನಿಸಿದವು.

೩. ನಿರ್ಲಕ್ಷಿತ ಅಧ್ಯಯನಗಳ ಭಾಗವಾಗಿ ಪುಸ್ತಕ ವಿಮರ್ಶೆ

೧೯ನೇ ಶತಮಾನದಿಂದ ಭಾರತದಲ್ಲಿ ಪ್ರಾರಂಭವಾದ ನಗರೀಕರಣ, ಔದ್ಯೋಗೀಕರಣ, ವಿಜ್ಞಾನ ಹಾಗೂ ತಂತ್ರಜ್ಞಾನ ಮುಂತಾದ ಕ್ಷೇತ್ರಗಳಲ್ಲಾದ ಬದಲಾವಣೆ, ಇವುಗಳು ರೂಪಿಸಿದ ದೃಷ್ಟಿಕೋನಗಳು, ಆಧುನಿಕವಾದ ಹೊಸ ದೃಷ್ಟಿಕೋನಗಳು ಬೆಳೆಯಲು ಕಾರಣವಾದವು. ಇದರಿಂದ ಜ್ಞಾನ ಜಗತ್ತಿನಲ್ಲಿ ಅಪಾರವಾದ ಬದಲಾವಣೆಗಳು ಪ್ರಾರಂಭವಾಗಿ, ಸಾಮಾಜಿಕ ಪರಿಸರದಲ್ಲಿ ಪ್ರಭಾವ ಬೀರಿದವು. ಎಡ್ವರ್ಡ್‌ಸೈದ್ ಎಂಬಾತ ೧೯೭೮ರಲ್ಲಿ 'ಓರಿಯಂಟಲಿಸಂ' ಕೃತಿಯನ್ನು ಪ್ರಕಟಿಸಿದ ಪರಿಣಾಮವಾಗಿ ಚರಿತ್ರೆಯ ಪರಿಕಲ್ಪನೆಯಲ್ಲಿ ಹೊಸ ಅರಿವುಂಟಾಯಿತು. ಅಲ್ಲಿಯತನಕ ಶೈಕ್ಷಣಿಕ ವಲಯದಲ್ಲಿ ಯುರೋ ಕೇಂದ್ರಿತವಾದ ಚರಿತ್ರೆ ಪ್ರಬಲವಾಗಿತ್ತು. ಜ್ಞಾನದ ಶಕ್ತಿಯನ್ನು ತಮ್ಮ ರಾಜಕೀಯದೊಡನೆ ಬೆರಸಿ ಈ ಚರಿತ್ರೆ ತನ್ನದೇ ದೃಷ್ಟಿಕೋನವನ್ನು ಪ್ರಪಂಚದ ಇತರ ಜನರ, ಜನಾಂಗದ ದೇಶಗಳನ್ನು ತಾನು ಕಂಡಂತೆ ದಾಖಲು ಮಾಡಿತು. ಸೈದ್ ಈ ಯುರೋ ಕೇಂದ್ರಿತ ದೃಷ್ಟಿಕೋನದಿಂದ ಚರಿತ್ರೆಗೆ ಬಿಡುಗಡೆ ಮಾಡಿಸಿದರು ಹೀಗಾಗಿ ಭಾರತದಲ್ಲಿ ಚರಿತ್ರೆಯ ಅಧ್ಯಯನ ಸಂದರ್ಭದಲ್ಲಿ 'ಓರಿಯಂಟಲಿಸಂ' ಪರೋಕ್ಷ ಪರಿಣಾಮ ಬೀರಿತು. ಇದರ ಜೊತೆಯಲ್ಲಿ ಕಲ್ಕತ್ತದ ರಣಜಿತ್ ಗುಹಾ ಸಂಪಾದಕತ್ವದಲ್ಲಿ ಅಲಕ್ಷಿತ ಲೋಕಗಳ ಅಧ್ಯಯನ (Subaltern studies) ಮಾಲಿಕೆಯ ಕೃತಿಗಳು ಪ್ರಕಟಣೆಗೊಂಡವು. ಇವರು ಸಬಾಲ್ಟನ್ ಎಂಬುದನ್ನು, ಕೆಳಸ್ತರದ ಅನಾಮಧೇಯವಾಗಿ ಉಳಿದುಕೊಂಡು ಬಂದವರ, ಸಾಮಾಜಿಕವಾಗಿ, ಆರ್ಥಿಕವಾಗಿ, ರಾಜಕೀಯವಾಗಿ ತುಳಿತಕ್ಕೆ ಒಳಗಾದವರ ಚರಿತ್ರೆ' ಎಂಬ ಅರ್ಥದಲ್ಲಿ ಬಳಸಿದ್ದಾರೆ. ಈ ಅಧ್ಯಯನವು

ಮೇಲುಸ್ತರದ ಚರಿತ್ರೆಯ ಮಾನಸಿಕ ಒಡೆತನವನ್ನು ಬಯಲಿಗೆಳೆಯುತ್ತಲೇ ರಾಷ್ಟ್ರೀಯ ಚರಿತ್ರೆಯ ರಾಜಕೀಯವನ್ನು ಬಿಂಬಿಸುವುದು, ರೈತರ, ಸಣ್ಣ ಹಿಡುವಳಿದಾರರ, ಬುಡಕಟ್ಟು ಜನಾಂಗಗಳ ಹೋರಾಟ, ರಾಷ್ಟ್ರೀಯತೆಯನ್ನು ಸಾಕಾರಗೊಳಿಸುವ ಹಾದಿಯಲ್ಲಿ ಹಾಕಿದ ಹೆಜ್ಜೆ ಗುರುತುಗಳನ್ನು ಸ್ಪಷ್ಟವಾಗಿ ವಿಶ್ಲೇಷಿಸಿ ಈವರೆಗಿನ ಚರಿತ್ರೆಯನ್ನು ಇನ್ನೊಂದು ದಿಕ್ಕಿಗೆ ಕೊಂಡೊಯ್ಯವುದು ಮುಂತಾದ ಉದ್ದೇಶಗಳನ್ನು ಇದು ಒಳಗೊಂಡಿತ್ತು. ಇದು ಸಾಹಿತ್ಯದ ಮೇಲೂ ಪ್ರಭಾವ ಬೀರಿರುವುದರಿಂದ ಕೆಲವರ ಕೈಯಲ್ಲೇ ಉಳಿದಿದ್ದ ಸಾಹಿತ್ಯಕ್ಕೆ, ಸಾಂಸ್ಕೃತಿಕ ರಾಜಕಾರಣಕ್ಕೆ, ಕೆಳಸ್ತರದ ಚಿಂತಕರು, ಕೆಳಸ್ತರದ ಜನರು ಪ್ರವೇಶಿಸಿದುದು ಕೆಳಮುಖಿ ಚಿಂತನೆಗೆ, ಅಲಕ್ಷಿತ ನೆಲೆಯ ಅಧ್ಯಯನಕ್ಕೆ ಕಾರಣವಾಯಿತು. ಶಿಕ್ಷಣದಿಂದ, ಅನುಕೂಲಗಳಿಂದ ವಂಚಿತಗೊಂಡಿದ್ದ ಕೆಳವರ್ಗದ ಸಮೂಹವು ಆಧುನಿಕ ಬ್ರಿಟಿಷ್ ಶಿಕ್ಷಣ ನೀಡಿದ ಹಲವು ಅನುಕೂಲಗಳಿಗೆ, ಸವಲತ್ತುಗಳಿಗಾದರೂ ಶಿಕ್ಷಣದ ಕಡೆಗೆ ಮುಖಮಾಡಿತು. ಸಂಸ್ಕೃತಿಯ ವಿವರಗಳಿಗೆ ಸಿಕ್ಕಲಾರದೆಂದು ಕಡೆಗಣಿಸಲ್ಪಟ್ಟಿದ್ದ ಸಮೂಹಗಳು ಎಚ್ಚೆತ್ತ ಸಮೂಹವಾಗಿ ತಮ್ಮ ಅಸ್ತಿತ್ವವನ್ನು ತೋರಿಸಲಾರಂಭಿಸಿದವು. ಇವು ಬಹುಪಾಲು ಉಚ್ಚ ವರ್ಗದ ಕೈಯಲ್ಲಿ ಉಳಿದಿದ್ದ ಸಾಹಿತ್ಯ ಚರಿತ್ರೆಯನ್ನು ಬಿಡುಗಡೆ ಮಾಡಿದವು. ಇದರಿಂದಾಗಿ ಸಾಹಿತ್ಯಕ್ಕೆ ಒಂದು ಸಾಂಸ್ಥಿಕ ರೂಪ ದೊರಕಿದಂತಾಗಿ ಹೊಸ ಆಲೋಚನೆಗೆ ಪ್ರಭಾವಿಸಿದವು. ಈ ಪರಿಣಾಮಕಾರಿ ಶಿಕ್ಷಣದಿಂದ ಕೆಳಸ್ತರದ ಜನರು ಎಲ್ಲ ಕ್ಷೇತ್ರಗಳಿಗೂ ಧಾವಿಸಿದರು. ಬಹಳಷ್ಟು ಕಾಲ ತಮ್ಮಿಂದ ದೂರವಿದ್ದ ಜ್ಞಾನ ಜಗತ್ತಿಗೆ ತಮ್ಮನ್ನು ತೆರೆದುಕೊಳ್ಳಲಾರಂಭಿಸಿದರು. ಮೇಲ್ಮುಖಿಯಾಗಿ ಗಮನಿಸುತ್ತಿದ್ದ ಚರಿತ್ರೆಯನ್ನು ಹೊಸದಾಗಿ ಬರೆಯಲು ಪ್ರಾರಂಭಿಸಿ ಸಾಂಸ್ಕೃತಿಕ ಚರಿತ್ರೆಯನ್ನು ಸಿದ್ಧಪಡಿಸಿದರು.

ಪ್ರಚಲಿತದಲ್ಲಿದ್ದ ಮೇಲಿನ ಸಂಸ್ಕೃತಿ ಪ್ರಧಾನವೆಂಬ ಚಿಂತನೆಯನ್ನು ಕೆಡಹಿ ಕೆಳಮುಖಿ ಚಿಂತಕರು ತಮ್ಮ ಮೂಲದ ಸಂಸ್ಕೃತಿಯನ್ನು ಹೊರಗೆಡಲಾರಂಭಿಸಿದರು. ಸಾಂಸ್ಕೃತಿಕ ಸ್ವರೂಪದ ಪಲ್ಲಟದ ಅರ್ಥವಂತಿಕೆಯಿಂದ ಸಂಸ್ಕೃತಿ ಪಲ್ಲಟವು ಒಂದು ರೀತಿಯಿಂದ ಭಿನ್ನವಾದ ಮಜಲುಗಳನ್ನು ಸೂಚಿಸುತ್ತದೆ. ವಸಾಹತುಶಾಹಿ ಶಿಕ್ಷಣವು ವಿಶೇಷ ತಜ್ಞತೆಯನ್ನು ಬಯಸುವ ಪರಿಶ್ರಮವೂ ಹೌದು. ಪಶ್ಚಿಮದ ಕೈಗಾರಿಕಾ ಕ್ರಾಂತಿಯು ಉತ್ಪಾದನೆಯ ಸಂಬಂಧಗಳನ್ನು ಪರಿವರ್ತಿಸುತ್ತದೆ. ಅದಕ್ಕಾಗಿ ಅನುಗುಣವಾದ ವಿಶೇಷ ತಜ್ಞತೆಯ ಸೂಕ್ಷ್ಮ ಸಂಗತಿಗಳನ್ನು ಒಳಗೊಂಡಿತು.

ಇದರ ಪರಿಣಾಮವಾಗಿ ಸಮಾಜ ಅಸ್ತಿಬಾರದ ಮೇಲೆ ಮೂಲಭೂತ ಬದಲಾವಣೆಯಾಯಿತು. ಮೂಕ ಬಾಯಿಗೆ ದನಿಕೊಟ್ಟು, ಶ್ರಮಿಕರ ಪರವಾಗಿ, ಶೋಷಿಸುವ, ಸ್ತ್ರೀಯರ ಪರವಾಗಿ ನಿಂತ ಈ ಚಿಂತನೆಗಳು ಸಹಜವಾಗಿಯೇ ಕೆಳಸ್ತರದ ಮೂಲಕ ಸಮಾಜವನ್ನು, ಅಮೂಲ್ಯವಾದುದನ್ನು ಪ್ರಾಮುಖ್ಯಗೊಳಿಸುವ, ಮರುಕಟ್ಟುವ ಕಡೆ ಗಮನ ವಹಿಸಿದವು. ಇದರಿಂದ ಎಷ್ಟೋ ಗೊತ್ತಿರದ ಜನಾಂಗಗಳಿಂದ ಮೂಡಿ ಬಂದ ಲೇಖಕರ ಹಲವು ಚಿಂತನಾಮುಖಿಧಾರೆಗಳು ಹೊಮ್ಮಿದವು. ಇದರ ಪರಿಣಾಮವಾಗಿ ನಿರ್ಲಕ್ಷಿತ ಸಂಗತಿಗಳು ಮುಖ್ಯವಾಗತೊಡಗಿದವು.

ಅಧ್ಯಯನದ ಉದ್ದೇಶ

ನಿರ್ಲಕ್ಷಿತ ಸಂಗತಿಗಳು ಪ್ರಮುಖ ಅಧ್ಯಯನ ವಸ್ತುವಾಗಿ ರೂಪುಗೊಳ್ಳುತ್ತಿರುವ ಈ ಹೊತ್ತಿನಲ್ಲಿ ಪ್ರಸ್ತುತ 'ಪುಸ್ತಕ ವಿಮರ್ಶೆ'ಯನ್ನು ನಿರ್ಲಕ್ಷಿತ ಸಂಗತಿಗಳ ಅಧ್ಯಯನದ ಭಾಗವಾಗಿಯೇ ಅಧ್ಯಯನ ಮಾಡಲಾಗುತ್ತದೆ. ಈ ಹಿಂದೆ ಗುರುತಿಸಿರುವಂತೆ ಸಾಹಿತ್ಯದಲ್ಲಿ ಕಂಡುಬರುವ ಶ್ರೇಣಿಕರಣ ವ್ಯವಸ್ಥೆಯ ಮೂಲೋತ್ಪಾಟನೆ ಘಟಕವಾಗಿ ಈ ಅಧ್ಯಯನ ಆರಂಭವಾಗುತ್ತದೆ. ಸಾಹಿತ್ಯ ಪ್ರಕಾರಗಳಲ್ಲಿನ 'ಜಾತಿ ವ್ಯವಸ್ಥೆ'ಯನ್ನು ನಿರಾಕರಿಸುತ್ತಲೇ ಅದಕ್ಕೆ ಕಾರಣಗಳನ್ನು, ನಿರ್ಮೂಲನೆಗಳನ್ನು ಏಕಕಾಲದಲ್ಲಿ ಆಲೋಚಿಸಬೇಕಾಗಿದೆ. ಸಾಹಿತ್ಯ ಪ್ರಕಾರದಲ್ಲಿ ಮಾಡುವ ತಾರತಮ್ಯದ ಫಲವಾಗಿಯೇ ಈ ಅಧ್ಯಯನ ಬೆಳದಿದೆ.

ಸಾಹಿತ್ಯದ ಪ್ರಕಾರಗಳನ್ನು ಪಟ್ಟಿ ಮಾಡುವಾಗಲೇ ಶ್ರೇಣಿಯ ರೂಪದಲ್ಲಿ 'ಕಾವ್ಯ'ವೇ ಮೊದಲ ಸ್ಥಾನದಲ್ಲಿ ಬಂದು ನಿಲ್ಲುತ್ತದೆ. ಆನಂತರ ಉಳಿದ ಕತೆ, ಕಾದಂಬರಿ ಹೀಗೆ ಬೆಳೆಯುತ್ತ ವಿಮರ್ಶೆ ಸೃಜನೇತರವಾದುದೆಂದು ಕೊನೆಗೆ ಸೇರಿಸುವ ಪರಿಪಾಠವಿದೆ. ವಿಮರ್ಶೆಯ ಸ್ಥಾನವೇ ಈ ಮಟ್ಟದಲ್ಲಿದೆ. ಇನ್ನೂ ಪುಸ್ತಕ ವಿಮರ್ಶೆ ಇದಕ್ಕೂ ಹಿಂದೆ ಉಳಿದದ್ದು, ಅತ್ಯಂತ ಕಡೆಗಣಿಸಲ್ಪಟ್ಟ ಪ್ರಕಾರವಾಗಿದೆ. ಆ ಕಾರಣದಿಂದ ಪುಸ್ತಕ ವಿಮರ್ಶೆಯನ್ನು ಅಧ್ಯಯನದ ವಸ್ತುವಾಗಿ ಆರಿಸಿಕೊಳ್ಳಲು ಸಾಂಸ್ಕೃತಿಕ ವಾತಾವರಣದಲ್ಲಿನ ಶ್ರೇಣಿಕರಣ ವ್ಯವಸ್ಥೆಯ ಬಗೆಗಿನ ಪ್ರಶ್ನೆಯು ಕಾರಣವಾಗಿದೆ.

ಕೆಲವು ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆಯನ್ನು ಪುಸ್ತಕ ವಿಮರ್ಶೆಯೆಂದು ಕರೆಯದೆ 'ಪುಸ್ತಕ ಪರಿಚಯ' ಎಂಬ ಹೆಸರಿನಲ್ಲಿಯೇ ಕರೆಯಲಾಗುತ್ತಿದೆ. ಹಾಗಾಗಿ ಈ ಸಂದರ್ಭದಲ್ಲಿ ವಿಮರ್ಶೆಯ ಅಧ್ಯಯನದ ಅವಶ್ಯಕತೆ ಅದನ್ನು ಪುನರ್ ವಿಮರ್ಶಿಸುವ ಕಾರ್ಯ ನಡೆಯಬೇಕಾಗಿದೆ. ಆ ಮೂಲಕ ವಿಮರ್ಶೆಯ ಸ್ವರೂಪವನ್ನು ಅಧ್ಯಯನ ಮಾಡುವುದರ ಮೂಲಕ ವಿಮರ್ಶೆಯ ಮಹತ್ವವನ್ನು ಮತ್ತು ವಿಮರ್ಶಾ ಬೆಳವಣಿಗೆಯ ಹಂತಗಳ ವಿಶ್ಲೇಷಣೆಯನ್ನು ಇಲ್ಲಿ ಮಾಡಲಾಗಿದೆ.

ಪುಸ್ತಕ ವಿಮರ್ಶೆಯ ಚಾರಿತ್ರಿಕ ಮಹತ್ವವನ್ನು ಗಮನಿಸಿದರೆ ಪುಸ್ತಕ ವಿಮರ್ಶೆಯನ್ನು ಸಾಹಿತ್ಯ ವಿಮರ್ಶೆಯ ಹೊರತಾಗಿ ನೋಡಲು ಸಾಧ್ಯವಿಲ್ಲ. ಕಾರಣ ಎರಡೂ ಪರಸ್ಪರ ಪೂರಕವಾಗಿದ್ದುಕೊಂಡೇ ಭಿನ್ನವಾದವುಗಳು. ಸಾಹಿತ್ಯ ವಿಮರ್ಶೆಯ ಬೆಳವಣಿಗೆಯನ್ನು ಮತ್ತು ಚಾರಿತ್ರಿಕ ಮಹತ್ವವನ್ನಿಟ್ಟುಕೊಂಡೇ ಪುಸ್ತಕ ವಿಮರ್ಶೆಯ ಗತಿಯನ್ನು ನೋಡಬೇಕಾಗಿದೆ, ಆ ಕಾರಣದಿಂದ ಇಲ್ಲಿ ಪುಸ್ತಕ ವಿಮರ್ಶೆಯ ಮುಖೇನ ವಿಮರ್ಶೆಗೂ, ವಿಮರ್ಶೆಯ ಚಾರಿತ್ರಿಕ ಒತ್ತಡಗಳ ವಿವರಗಳಿಂದ ಪುಸ್ತಕ ವಿಮರ್ಶೆಗೂ ಏಕಕಾಲಕ್ಕೆ ಸಂಬಂಧ ಕಲ್ಪಿಸಲಾಗಿದೆ. ಈ ಅಧ್ಯಯನ ವಿಧಾನವು ಪುಸ್ತಕ ವಿಮರ್ಶೆಯ ಮೂಲಕ ವಿಮರ್ಶೆಯನ್ನು ಪುನರ್‌ವಿಮರ್ಶಿಸುವ ವಿಧಾನವಾಗಿಯೂ ನಡೆಯುತ್ತದೆ. ಇದು ಈ ಸಂದರ್ಭದಲ್ಲಿ ಅಗತ್ಯ ಮತ್ತು ಅನಿವಾರ್ಯವೆಂದೇ ಹೇಳಬಹುದು.

ಬಳಸಿಕೊಂಡ ಆಕರಗಳು

ಪುಸ್ತಕ ವಿಮರ್ಶೆ ಅಧ್ಯಯನ ಮಾಡುವ ಸಂದರ್ಭದಲ್ಲಿ ಹಲವು ಆಕರಗಳು ಇವೆ. ಆದರೆ ಈ ಕೆಳಗಿನವುಗಳನ್ನು ಪ್ರಮುಖ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ. ಅವೆಂದರೆ.

೧. ಕೃತಿ ಕುರಿತು ಮೊದಲು ಬಂದ ಪ್ರತಿಕ್ರಿಯೆಗಳನ್ನಷ್ಟೇ ಇಲ್ಲಿ ಬಳಸಿಕೊಳ್ಳಲಾಗಿದೆ.

೨. ಪತ್ರಿಕೆಗಳಲ್ಲಿಯೇ ಹೆಚ್ಚಾಗಿ ಪುಸ್ತಕ ವಿಮರ್ಶೆಗಳು ಬಂದಿರುವುದರಿಂದ ಪತ್ರಿಕೆಗಳ 'ಪುಸ್ತಕ ವಿಮರ್ಶೆ'ಗಳನ್ನು ಮುಖ್ಯ ಆಕರಗಳನ್ನಾಗಿ ಬಳಸಿಕೊಳ್ಳಲಾಗಿದೆ.

೩. ಸಾಹಿತ್ಯ ಪತ್ರಿಕೆಗಳಲ್ಲಿನ ನಿರಂತರ ಚಟುವಟಿಕೆಯ ಭಾಗವಾಗಿ ಪುಸ್ತಕ ವಿಮರ್ಶೆಗಳಿರುತ್ತವೆ. ಅವುಗಳು ಈ ಅಧ್ಯಯನದ ಆಕರಗಳಾಗಿವೆ.

೪. ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆಗಳು ಪ್ರಕಟವಾಗಿದ್ದರೂ ನಂತರದಲ್ಲಿ ಅವು ಗ್ರಂಥಗಳ ರೂಪದಲ್ಲಿ ಪ್ರಕಟವಾಗಿರುವುದನ್ನು ಪ್ರಮುಖವಾಗಿ ಗಮನಿಸಲಾಗಿದೆ.

೫. ಅಭಿನಂದನ ಗ್ರಂಥಗಳಲ್ಲಿ ಸಂಗ್ರಹಿಸಿರುವ ಪುಸ್ತಕ ವಿಮರ್ಶೆಗಳನ್ನು ಗಮನಿಸಲಾಗಿದೆ.

೬. ಕರ್ನಾಟಕ ಸಾಹಿತ್ಯ ಅಕಾಡೆಮಿ ಬಿಡುಗಡೆ ಮಾಡುವ ಪ್ರಶಸ್ತಿ ವಿಜೇತ ಕೃತಿಗಳ 'ಪುಸ್ತಕ ವಿಮರ್ಶೆ'ಗಳನ್ನು ಪರಿಗಣಿಸಲಾಗಿದೆ. ಏಕೆಂದರೆ ಅವು ಪ್ರಶಸ್ತಿಗೆ ನಿರ್ಣಾಯಕ ನಿಲುವನ್ನು ಒದಗಿಸಿ ಕೊಡುವವುಗಳಾಗಿವೆ.

೭. ಒಂದೇ ಕೃತಿಯ ಬಗ್ಗೆ ಹಲವು ಪುಸ್ತಕ ವಿಮರ್ಶೆಗಳು ಬಂದಿದ್ದರೂ ಅವೆಲ್ಲವನ್ನು ಇಲ್ಲಿ ಪರಿಗಣಿಸುವುದಿಲ್ಲ.

ವ್ಯಾಪ್ತಿ

ಪ್ರಸ್ತುತ ಅಧ್ಯಯನ ವ್ಯಾಪ್ತಿಯು ತುಂಬಾ ವಿಶಾಲವಾಗಿರುವುದರಿಂದ ೧೯೫೦ ರಿಂದ ೨೦೦೦ಇಸವಿಯವರೆಗಿನ 'ಪುಸ್ತಕ ವಿಮರ್ಶೆ'ಗಳನ್ನು ಸ್ಥೂಲವಾಗಿ ಬಳಸಿಕೊಳ್ಳಲಾಗಿದೆ. ಕೆಲವೊಮ್ಮೆ ಪ್ರಾಸಂಗಿಕವಾಗಿ ಅದರ ನಂತರದವನ್ನು ಬಳಸಿಕೊಂಡಿದೆ. ಆದರೆ ಕೃತಿಯ ಬಗೆಗೆ ಬಂದಂಥ ಮೊದಲ ಪ್ರತಿಕ್ರಿಯೆಗಳನ್ನು ಮುಖ್ಯ ಆಕರವಾಗಿ ಪರಿಗಣಿಸಲಾಗಿದೆ ಎಂದಿದ್ದರೂ, ಅಧ್ಯಯನದ ಕಾಲಘಟ್ಟದ ಆಚೆ ಈಚೆಗೂ ರಚಿತವಾದ ಕೃತಿಗಳಿಗೆ ಬಂದ ಪ್ರತಿಕ್ರಿಯೆಗಳನ್ನು ಗಮನಿಸಿಲ್ಲ. ಕೆಲವೊಮ್ಮೆ ತುಂಬಾ ಮುಖ್ಯವೆನಿಸಿದ ಹೊಸಗನ್ನಡ ಸಾಹಿತ್ಯದ ಆರಂಭದ ಕೃತಿಗಳು ಪುಸ್ತಕ ವಿಮರ್ಶೆಯ ವ್ಯಾಪ್ತಿಗೊಳಪಡುತ್ತವೆ.

ಪ್ರಸ್ತುತ ಅಧ್ಯಯನದಲ್ಲಿ ಮುಖ್ಯವಾಗಿ 'ಕವನ ಸಂಕಲನ', 'ಕತೆ', 'ಕಾದಂಬರಿ', 'ಸಾಹಿತ್ಯವಿಮರ್ಶೆ'ಗಳ ಪುಸ್ತಕ ವಿಮರ್ಶೆಗಳಿಗೆ ಹೆಚ್ಚು ಒತ್ತು ನೀಡಲಾಗಿದೆ. ಇದರಾಚೆಗೆ ಒಂದೊಂದು ಪ್ರಕಾರದ ಕೃತಿಗಳು ಪ್ರತ್ಯೇಕ ಅಧ್ಯಯನವನ್ನು ಬಯಸುವುದರಿಂದ ಅವುಗಳ ವಿಶ್ಲೇಷಣೆಗೆ ಇಲ್ಲಿ ಹೋಗಿಲ್ಲ. ಪರಿಸರ, ವೈದ್ಯಕೀಯ ಕ್ಷೇತ್ರ, ವಿಜ್ಞಾನ, ಆರ್ಥಿಕ, ರಾಜಕೀಯ, ಆಯುರ್ವೇದ ಇನ್ನು ಮುಂತಾದ ಕ್ಷೇತ್ರಗಳ ಕೃತಿಗಳ ವಿಮರ್ಶೆಯನ್ನು ಪ್ರತ್ಯೇಕವಾಗಿ ಅಧ್ಯಯನ ಮಾಡಿದರೆ ವಾಸ್ತವವಾಗಿ ವಿಭಿನ್ನ

ರೂಪಗಳಲ್ಲಿರುವುದನ್ನು ಕಾಣಬಹುದು. ಮೇಲುನೋಟಕ್ಕೆ ಪುಸ್ತಕ ವಿಮರ್ಶೆ ಒಂದೇ ಎನಿಸಿದರೂ ಕ್ಷೇತ್ರಾನುಸಾರವಾಗಿ ಭಿನ್ನ ಸ್ವರೂಪವನ್ನು ಪಡೆದಿದೆ. ಹೀಗೆ ಈ ಮೇಲಿನ ನಾಲ್ಕು ಪ್ರಕಾರಗಳ 'ಪುಸ್ತಕ ವಿಮರ್ಶೆ'ಗಳಿಗೆ ಹೆಚ್ಚು ಗಮನ ಕೊಡಲಾಗಿದೆ.

ಪುಸ್ತಕ ವಿಮರ್ಶೆ/ಬುಕ್‌ರಿವ್ಯೂ/ಬುಕ್ ಕ್ರಿಟಿಸಿಸಂ - ಪದನಿಷ್ಪನ್ನ ವಿವರಣೆ

ಕನ್ನಡದ ಪುಸ್ತಕ ವಿಮರ್ಶೆಗೆ ಇರುವ ವ್ಯಾಪಕಾರ್ಥ 'Book review'ಗೆ ಇಲ್ಲ. ಹೊರನೋಟಕ್ಕೆ ಇವೆರಡೂ ಒಂದೇ ಎಂಬಂತೆ ಕಂಡರೂ, ಅರ್ಥಗಳಲ್ಲಿ ಭಿನ್ನವಾಗಿವೆ. ಪಾಶ್ಚಾತ್ಯರು 'Book review' ನ್ನು ವಿಮರ್ಶೆಯ ಭಾಗವೆಂದು ಪರಿಭಾವಿಸುವುದಿಲ್ಲ. ಅದನ್ನು ಪ್ರತ್ಯೇಕವಾಗಿಯೇ 'review' ಎಂದು ಕರೆಯುತ್ತಾರೆ. ಆದರೆ ಕನ್ನಡದಲ್ಲಿ 'ಪುಸ್ತಕ ವಿಮರ್ಶೆ' ಸಾಹಿತ್ಯ ವಿಮರ್ಶೆಯ ಭಾಗವಾಗಿಯೇ ಪರಿಗಣಿತವಾಗಿದೆ. ಪಾಶ್ಚಾತ್ಯದಿಂದ ಬಂದ ಪರಿಕಲ್ಪನೆಗಳು ರೂಪಿತವಾಗುವಂತಹ ಸಂದರ್ಭದಲ್ಲಿ ಆದಂತಹ ಬದಲಾವಣೆ ಮಹತ್ವದವು. ಕನ್ನಡಕ್ಕೆ ಹೊಸ ಚಿಂತನೆಗಳು ಪಾಶ್ಚಾತ್ಯ ಚಿಂತನೆಯಿಂದ ಹರಿದು ಬಂದಿರುವುದು ಸರಿಯಷ್ಟೆ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಹೊಸ ಹೊಸ ಪ್ರಕಾರಗಳು ಅಲ್ಲಿಂದಲೇ ಬಂದವು. ಹಾಗೆಂದ ಮಾತ್ರಕ್ಕೆ ಆ ಪ್ರಕಾರಗಳು, ಪಾಶ್ಚಾತ್ಯ ಪ್ರಕಾರಗಳ ತದ್ವತ್ ರೂಪವಾಗಿಯೇ ಬಳಕೆಯಾದುವೆಂದು ಅರ್ಥವಲ್ಲ. ಇಲ್ಲಿನ ಚಿಂತನೆಗಳಿಗೆ ಅಭಿವ್ಯಕ್ತಿ ರೂಪವಾಗಿ ಪಾಶ್ಚಾತ್ಯದಿಂದ ಪರಿಕಲ್ಪನೆಗಳು ಬಂದಿವೆಯಷ್ಟೇ, ಸಾರವೆಲ್ಲ ಇಲ್ಲಿನದು. ಅದಕ್ಕೊಂದು ಪರಿಕಲ್ಪನೆ ಪಾಶ್ಚಾತ್ಯರದ್ದು.

ಹುಟ್ಟಿನ ಸಾಂಸ್ಕೃತಿಕ / ಚಾರಿತ್ರಿಕ ಸಂದರ್ಭ

ಇಂಗ್ಲೀಷ್ ಸಾಹಿತ್ಯದ ಪ್ರಭಾವದಿಂದ ಕನ್ನಡದಲ್ಲಿ ಹುಟ್ಟಿಕೊಂಡ ಹೊಸ ಹೊಸ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಯೂ ಒಂದು. ಇಂಗ್ಲೀಷಿನ Novel (ಹೊಸದು) ಎಂಬುದು ನಮ್ಮ ಭಾರತಕ್ಕೆ ಕಾಲಿಟ್ಟಾಗ ಹೊಸ ರೀತಿಯ ರೋಮಾಂಚನಗಳಾದವು. ಈ ಹೊಸ ಪ್ರಕಾರದ ನಯ ನಿರೂಪಣೆಯಿಂದ ಎಲ್ಲ ಮನಸೋತರು. ಅದರ ಪರಿಣಾಮವಾಗಿ ಭಾರತದ ಸಂದರ್ಭದಲ್ಲಿ Novel ಭದ್ರವಾಗಿ ಬೇರೂರಿತು. ಹಾಗೆಯೇ Novel ಇಂಗ್ಲೀಷಿನ ಕೊಡುಗೆ ಎಂದು ತಿಳಿಯ ಬೇಕಾಗಿಲ್ಲ. ಕನ್ನಡದ ಮಟ್ಟಿಗಂತೂ ಇದು ನಿರ್ವಿವಾದ ವಿಚಾರ. Novel ಪದವಷ್ಟೇ ಪಾಶ್ಚಾತ್ಯರದೂ ಆದರೆ ನಾವೆಲ್ಲುಗಳೊಳಗಿನ ಬದುಕು, ಜೀವನ, ಅನುಭವ, ಎಲ್ಲ ನಮ್ಮೊಡಲಿನದ್ದು. ಭಾರತದ ಬಹುಪಾಲು ಎಲ್ಲ ಭಾಷೆಗಳಲ್ಲೂ 'ನಾವೆಲ್ಲು' ಎಂಬ ಪದ ಬಳಕೆಯಲ್ಲಿದೆ. ಆದರೆ ಕನ್ನಡದಲ್ಲಿ ಇಲ್ಲ (ಉರ್ದುವಿನಲ್ಲಿ ನಾವಲ್ಲು, ಹಿಂದಿ ಉಪನ್ಯಾಸ, ತೆಲುಗು ನವಲು). ಕನ್ನಡದಲ್ಲಿ ನವಲ್ಲು ಪ್ರಕಾರ ಬಂದಾಗ ಅದಕ್ಕೆ ತೀವ್ರ ವಿರೋಧವನ್ನು ಮಾಸ್ತಿ ವ್ಯಕ್ತಪಡಿಸಿದ್ದರು. 'ನವಲು' ಎಂಬ ಆಧುನಿಕ ಪ್ರಕಾರದ ಬಗ್ಗೆಯೇ ಅಂತಹ ವಿಶೇಷವಾದ ಆಸಕ್ತಿ ಆ ಹೊತ್ತಿಗೆ ಇರಲಿಲ್ಲ. ಇದಕ್ಕೆ ಕಾರಣ ಅದು ಇಂಗ್ಲೀಷಿನಿಂದ ಬಂದದ್ದು ಎಂಬುದಕ್ಕಿಂತ ಹೆಚ್ಚಾಗಿ ಸುಲಭವಾಗಿ ಯಾರೂ ಬೇಕಾದರೂ ಬರೆದು ಬಿಡಬಹುದಾದ ಪ್ರಕಾರವೆಂದು ತಿಳಿದದ್ದೇ ಅವರ ವಿರೋಧಕ್ಕೆ ಕಾರಣವಾಯಿತು[೨]. ಅಲ್ಲಿ ಅವರು ಚರ್ಚೆಯಲ್ಲಿ ಕಾದಂಬರಿ ಎಂಬ ಹೆಸರಿನಲ್ಲಿ ಕರೆಯುವುದೇ ಇಲ್ಲ (ಎಂ.ಎಸ್. ಪುಟ್ಟಣ್ಣನವರ ಕಾದಂಬರಿಗಳಲ್ಲೂ ಕಾದಂಬರಿ ಎಂಬ

ಹೆಸರು ಮೊದಲು ಇರಲಿಲ್ಲ) ಆಗಿನ್ನೂ ಕನ್ನಡದಲ್ಲೂ Novel ಎಂದೇ ಕರೆಯುತ್ತಿದ್ದರು. 'ಕಾದಂಬರಿ' ಎಂಬ ಪದ ಬಳಕೆಯಲ್ಲಿರಲಿಲ್ಲ. ಅದಕ್ಕಾಗಿ ಅವರ ಚರ್ಚೆಯಲ್ಲಿ ನವಲ್ಲು ಎಂದೇ ಕರೆದಿದ್ದಾರೆ. 'ನಾವೆಲ್ಲು' ಪದ ಏಕೆ ಬಳಕೆಯಾಗಲಿಲ್ಲ ಎಂಬ ಪ್ರಶ್ನೆಗೆ ಉತ್ತರ ಕಂಡುಕೊಂಡರೆ 'ಪುಸ್ತಕ ವಿಮರ್ಶೆ' ಪದ ಕನ್ನಡದಲ್ಲಿ ಪಡೆದುಕೊಂಡ ವ್ಯಾಪಕಾರ್ಥ ತಿಳಿಯುತ್ತದೆ.

ನಾವೆಲ್ಲಿನ ಸಾಮಾನ್ಯ ಲಕ್ಷಣ ಇಂಗ್ಲೀಷ್ ಕಲಿತ ಮಧ್ಯಮ ವರ್ಗ ಸೃಷ್ಟಿಸಿದ ಸಾಹಿತ್ಯ. ಆಧುನಿಕತೆಗೆ ಸಿಕ್ಕ ಸಮಾಜದಿಂದ ಹೊರ ಹೊಮ್ಮಿದ ಪ್ರಕಾರ. ಬದುಕನ್ನು ಕಟ್ಟಿಕೊಡಬಲ್ಲ, ನೇರವಾಗಿ, ಸರಳವಾಗಿ, ನಿರೂಪಣೆ ಹೊಂದಿರುವಂತಹದು ಎಂದೆಲ್ಲಾ ಪಟ್ಟಿ ಮಾಡಬಹುದು. ಹೇಳುವ ವಿಷಯ ಬಹಳಷ್ಟಿದೆ; ವಸ್ತು ವಿಸ್ತಾರವಾದ ಛಾಪನ್ನು ಒಳಗೊಳ್ಳುತ್ತದೆ; ಎಂದು ಅನಿಸಿದಾಗಲೆಲ್ಲ ಕಾದಂಬರಿ ಪ್ರಕಾರ ಬೆಳೆಯುತ್ತಾ ಬಂದಿತ್ತು. ನಮ್ಮ ಕನ್ನಡದ ಸಾಹಿತ್ಯ ಸಂದರ್ಭದಲ್ಲಿ ಇಂತಹುದೇ ಲಕ್ಷಣಗಳುಳ್ಳ ಕೃತಿ ಬಂದಿತ್ತು. 'ಕಾದಂಬರಿ' ಪ್ರಕಾರದ ಹೆಸರು ಬಂದಿದ್ದು ನಾಗವರ್ಮನ 'ಕರ್ನಾಟಕ ಕಾದಂಬರಿ' ಯಿಂದ. ಕಾದಂಬರಿ ಈ ಕಾವ್ಯದಲ್ಲಿ ಒಂದು ಪಾತ್ರವೂ ಹೌದು. ಈ ಕಾದಂಬರಿಯಲ್ಲಿ ಗಂಡು ಹೆಣ್ಣಿನ ಸಂಗಮ - ವಿರಹ, ಜನ್ಮಾಂತರ ಹೀಗೆ ಕೊನೆಗೆ ಒಂದುಗೂಡುವ ರಮ್ಯವಾದ ಕಲ್ಪನೆಗಳಿಂದ ಕೂಡಿದಂಥ ಕಥನ. ಹೀಗಾಗಿ ಇಂಗ್ಲೀಷ್‌ನಿಂದ ಬಂದಂಥ Novel ಇದೇ ಲಕ್ಷಣಗಳನ್ನು ಹೊಂದಿದ್ದರಿಂದ ಕನ್ನಡದ ಮನಸ್ಸು ಪ್ರಕಾರವನ್ನಷ್ಟೇ ಪಡೆದುಕೊಂಡು ಅದರ ಒಳ ಅನುಭವ, ಬದುಕನ್ನು 'ಕಾದಂಬರಿ'ಯನ್ನಾಗಿಸಿಕೊಂಡಿತು. ಈ ಕಾರಣದಿಂದ ಬೇರೆ ಭಾಷೆಗಳಂತೆ ಕನ್ನಡದಲ್ಲಿ ನಾವೆಲ್ಲು ಪದ ಬಳಕೆಯಾಗಲಿಲ್ಲ.

ಕನ್ನಡದಲ್ಲಿ ಬುಕ್‌ರಿವ್ಯೂ (Book Review) ಎಂಬ ಮಾದರಿಯನ್ನು ಅನುಸರಿಸಿಯೇ ಪುಸ್ತಕ ವಿಮರ್ಶೆ ಬೆಳೆದು ಬಂದಿದ್ದರೂ 'Book' 'ಪುಸ್ತಕ' ಶಬ್ದ ಮುಂದುವರೆಯಿತು, ಆದರೆ 'Review' ಅವಲೋಕನ ಆಗಲಿಲ್ಲ. ಬದಲಾಗಿ 'ವಿಮರ್ಶೆ'ಯಾಗಿಯೇ ರೂಪುಗೊಂಡಿತು. 'ಪುಸ್ತಕ ವಿಮರ್ಶೆ' ವಿಮರ್ಶೆಯ ಒಂದು ಭಾಗವಾಗಿಯೇ ಬಳಕೆಯಾಯಿತು. ಅನಿವಾರ್ಯತೆಯಿಂದ ಬಂದ ಈ ಪ್ರಕಾರವು ರಾಜಸತ್ತೆಯ ಪರಿಭಾಷೆಗಿಂತ ಭಿನ್ನವಾದ ಪರಿಭಾಷೆಯನ್ನು ಕನ್ನಡದಲ್ಲಿ ಬಳಸಿಕೊಂಡಿತು. ಆ ಕಾರಣದಿಂದ ಇಲ್ಲಿ 'ಪುಸ್ತಕಾವಲೋಕನ' ಎಂಬ ಹೆಸರು ಅಷ್ಟಾಗಿ ಹೊಂದಿಕೊಂಡಿಲ್ಲ. ಅಲ್ಲಲ್ಲಿ ಕಂಡು ಬಂದರೂ ಅದಕ್ಕೆ ನಿರ್ದಿಷ್ಟವಾಗಿ 'ಪುಸ್ತಕ ವಿಮರ್ಶೆ' ಎಂಬ ಪದವೇ ದಕ್ಕಿಬಿಟ್ಟಿದೆ. "ಕೃತಿಯ ಮೆಚ್ಚುಗೆಗೆ ಪಾಶ್ಚಾತ್ಯರು ರಿವ್ಯೂ ಪದ ಬಳಸಿದ್ದಾರೆಯೇ ಹೊರತು ವಿಮರ್ಶೆ ಎಂದು ಕರೆದಿಲ್ಲ" ಎಂದು ಗುರುತಿಸಿರುವ ಲಿಂಗದೇವರು ಹಳೆಮನೆಯವರು 'ರಿವ್ಯೂ'ವನ್ನು ಮೆಚ್ಚುಗೆ ಎಂಬ ಅರ್ಥದಲ್ಲಿ ಬಳಸಿದ್ದಾರೆ[೩]. ಹಾಗಾದರೆ 'Book Review' ಎಂದರೆ 'ಪುಸ್ತಕದ ಮೆಚ್ಚುಗೆ' ಎಂದಾಯಿತು. ಅಂದರೆ ಕೃತಿಯ ದೋಷಗಳನ್ನು ಕಡೆಗಣಿಸಿ ಅದರ ಮಹತ್ವವನ್ನು ಒತ್ತಿ ಹೇಳುವುದು 'ಬುಕ್ ರಿವ್ಯೂ'ನ ಕೆಲಸ ಎಂದು ತಿಳಿದ ಹಾಗಾಯಿತು. ಆದರೆ ಕನ್ನಡದಲ್ಲಿ 'ಬುಕ್ ರಿವ್ಯೂ' ಈ ಸ್ವರೂಪದಲ್ಲಿಲ್ಲ. ಕೃತಿಯ ಗುಣ ದೋಷಗಳೆರಡನ್ನು ತೋರಿಸುವುದು. ಮುಂದಿನ ಓದುಗಳಿಗೆ ಮಾರ್ಗ ಸೂಚಿಯಾಗುವುದು ಇಲ್ಲಿನ ಅಗತ್ಯದ ಕೆಲಸವಾಗಿದೆ. ಈ ಕಾರಣದಿಂದ ಗುಣ ದೋಷಗಳನ್ನು 'ಬುಕ್ ರಿವ್ಯೂ'ನಲ್ಲಿ

ಮಾಡುವುದರಿಂದ ಅದು 'ಪುಸ್ತಕ ಮೆಚ್ಚುಗೆ'ಯಾಗದೇ ಪುಸ್ತಕ ವಿಮರ್ಶೆಯಾಗುತ್ತದೆ. ಹೀಗೆ ಪುಸ್ತಕ ವಿಮರ್ಶೆ ಮತ್ತು ಬುಕ್ ರಿವ್ಯೂಗೆ ಇರುವ ಅರ್ಥಗಳನ್ನು ಹುಡುಕಬಹುದು. ಆದರೆ ಮೈಸೂರು ವಿಶ್ವವಿದ್ಯಾಲಯದ ನಿಘಂಟು ಮತ್ತು ಕಿಟೆಲ್ ಕೋಶದಲ್ಲಿ ಕೊಟ್ಟಿರುವ ಅರ್ಥಗಳಿಗನುಗುಣವಾಗಿ ಕನ್ನಡದಲ್ಲಿ 'Review' ಬಳಕೆಯಾಗಲಿಲ್ಲ. ಪುಸ್ತಕ ವಿಮರ್ಶೆಯನ್ನು 'ರಿವ್ಯೂ' ಅರ್ಥದಲ್ಲಿ ಬಳಸುತ್ತಿಲ್ಲ. 'Review' 'ರಿವ್ಯೂ' ಎಂದರೆ ಪುನರ್ ವಿಮರ್ಶಿಸು ಎಂದು ಮೈಸೂರು ವಿಶ್ವವಿದ್ಯಾಲಯದ ನಿಘಂಟುವಿನ ಅರ್ಥವಿದ್ದರೂ ಕನ್ನಡದ 'ಪುಸ್ತಕ ವಿಮರ್ಶೆ' ಪುನರ್ ವಿಮರ್ಶನ ಕಾರ್ಯವಲ್ಲ. ಅದೇ ಮೊದಲ ವಿಮರ್ಶೆಯಾಗಿರುವುದರಿಂದ 'ರಿವ್ಯೂ' ಪದ ಪುಸ್ತಕ ವಿಮರ್ಶೆಗೆ ಹೊಂದುವುದಿಲ್ಲ. ಕನ್ನಡದಲ್ಲಿ ಬರುತ್ತಿರುವ 'ಬುಕ್ ಕ್ರಿಟಿಸಿಸಂ' ಇದೇ ಮಾದರಿಯವು. ಹಾಗೇ ಕರೆದಾಗ ವಿಮರ್ಶೆಯ ಯಾವುದೋ ಇನ್ನೊಂದು ಪ್ರತ್ಯೇಕ ಭಾಗವಿರಬಹುದೆಂದು ಭಾವಿಸಬಹುದು. ಆದರೆ 'ಬುಕ್ ಕ್ರಿಟಿಸಿಸಂ' ಒಂದು ಕೃತಿ ಕುರಿತ ವಿಮರ್ಶೆಯೆಂದು ಸರಳವಾಗಿ ಹೇಳಬಹುದು. ಆದುದರಿಂದ ಕನ್ನಡದಲ್ಲಿ ಪುಸ್ತಕ ವಿಮರ್ಶೆ ಕೃತಿ ಕುರಿತ 'ಮೊದಲ ನೋಟ', 'ಮೊದಲ ವಿಮರ್ಶೆ' ಎಂದು ಕರೆಯಬಹುದು.

ಪುಸ್ತಕ ವಿಮರ್ಶೆ ಒಂದು ಬಗೆಯಲ್ಲಿ ಇತ್ತೀಚಿನ ದಿನಗಳಲ್ಲಿ ಕೆಲವು ಪತ್ರಿಕೆಗಳಲ್ಲಿ ಒಂದು ಕೃತಿಯ 'ಮಹೋನ್ನತಿಯನ್ನು ತೋರಿಸುವ' ಇಲ್ಲವೇ 'ಕೃತಿಭಂಜನ ಮಾಡುವುದು' ಎಂಬ ನಿಲುವಿಗೆ ಬೆಳೆದು ನಿಂತಿದೆ. ಪುಸ್ತಕ ವಿಮರ್ಶೆ ಬೇಕೆ? ಬೇಡವೆ? ಎಂಬ ಪ್ರಶ್ನೆ ಇಲ್ಲಿ ಮುಖ್ಯವಲ್ಲ. ಪುಸ್ತಕ ವಿಮರ್ಶಕರು ಆಯ್ಕೆ ಮಾಡಿಕೊಳ್ಳುವ ಕೃತಿಗಳು ತುಂಬಾ ಹತ್ತಿರದವರವುಗಳಾದರೆ ಆ ಪುಸ್ತಕ ವಿಮರ್ಶೆಗಳು ಸಹಜವಾಗಿ ಕೃತಿಯನ್ನು ಶ್ರೇಷ್ಠವೆಂದೂ ಪರಿಗಣಿಸಿರುತ್ತವೆ. ಶತ್ರುವುಗಳಾಗಿದ್ದರೆ, ಹೀಯಾಳಿಕೆಗೆ ಒಳಪಟ್ಟಿರುತ್ತವೆ. ಈ ಎರಡೂ ಪುಸ್ತಕ ಮಾದರಿಗಳು ನಮ್ಮಲ್ಲಿ ಬಳಕೆಯಲ್ಲುಂಟು. ಈ ಮಾದರಿ ಗಮನಿಸಿದರೆ ಒಳ್ಳೆಯ ಕೃತಿಗಳು ಬರುತ್ತಿಲ್ಲವೇನೋ ಎಂಬ ಸಂದೇಹ ಮೂಡುತ್ತದೆ. ಆದರೆ ನಿಗದಿತ ವೇಳೆಯಲ್ಲಿ ಕೃತಿಯು ಬಗ್ಗೆಯಾಗಲಿ, ಕೃತಿಯು ಪರಿಚಯವಾಗಲಿ ಅಚ್ಚಿಗೆ ಕಳುಹಿಸಬೇಕಾಗಿರುವುದರಿಂದ ಅನಿವಾರ್ಯವಾಗಿ ತಮಗನಿಸಿದ ವಿಚಾರಗಳನ್ನು ಹೇಳುತ್ತ ಮಧ್ಯೆ ಅಥವಾ ಕೊನೆಗೆ ಪುಸ್ತಕವನ್ನು ಕುರಿತು ಮಾತನಾಡುತ್ತಾರೆ. ಕೆಲವೊಮ್ಮೆ ಕೃತಿಕಾರರ ವಿರೋಧ ಕಟ್ಟಿಕೊಳ್ಳಲು ಇಷ್ಟವಿಲ್ಲದೆ, ಇಲ್ಲವೆ ಟೀಕೆಗಳಿಗೆ ವೇದಿಕೆಯಾಗಿ ಪತ್ರಿಕೆಯ ಪುಸ್ತಕ ವಿಮರ್ಶಾ ಅಂಕಣವನ್ನು ನಿರ್ಮಿಸಿಕೊಳ್ಳುವುದರಿಂದ ಬೇರೆ ರೀತಿಯ ಪುಸ್ತಕ ವಿಮರ್ಶೆಗಳು ನಿರ್ಮಾಣವಾಗುತ್ತವೆ.

ಮೊದಲು ಕೃತಿಯನ್ನು ಓದುವವರು ಪುಸ್ತಕ ವಿಮರ್ಶಕರು, ಅದಕ್ಕೂ ಮುನ್ನ ಓದುವವರು ಮುನ್ನುಡಿಕಾರರು ಮತ್ತು ಬೆನ್ನುಡಿಕಾರರು. ಮುನ್ನುಡಿಗಳು ಆ ಕೃತಿಯ ಮೊದಲ ವಿಮರ್ಶೆಯಾಗಿರುತ್ತವೆ. ಅವು ಸಹಜವಾಗಿ ತಮಗೆ ಆತ್ಮೀಯರಾದವರ ಕೈಲಿ ಬರೆಸುವುದರಿಂದ ಅವುಗಳಲ್ಲಿ ಕೃತಿಯ ಬಗೆಗಿನ ದೋಷಗಳಿಗಿಂತ ಗುಣಗಳ ಹೊಗಳಿಕೆಯೇ ಹೆಚ್ಚು. ಮುನ್ನುಡಿಗಳು ಪುಸ್ತಕದ ಕೈದೀವಿಯಾಗಿ ಕೆಲಸ ಮಾಡುತ್ತವೆ. ಬೆನ್ನುಡಿಗಳು ಬೆನ್ನು ತಟ್ಟುವ ಕೆಲಸವನ್ನು ಮಾಡುತ್ತವೆ. ಮುನ್ನುಡಿ ಬೆನ್ನುಡಿಗಳ ಮಿತಿಯೆಂದರೆ ಅವುಗಳು ಕೇವಲ ಒಳ್ಳೆಯ ಗುಣಗಳನ್ನಷ್ಟೇ ಒಳಗೊಂಡಿರುತ್ತವೆ. ಕೆಲವೊಮ್ಮೆ ಅತಿಯಾದ ಪ್ರಶಂಸಾತ್ಮಕ ಧೋರಣೆಯೂ ಇರುತ್ತದೆ.

ಅಧ್ಯಯನ ವಿಧಾನ

ಪುಸ್ತಕ ವಿಮರ್ಶೆ ಬಹುಮುಖ ಆಯಾಮವನ್ನು ಹೊಂದಿರುವ ಪ್ರಕಾರ. ಈ ಪ್ರಕಾರ ಏಕಮುಖ ಸ್ವರೂಪದಲ್ಲಿ ಅಭಿವ್ಯಕ್ತಗೊಳ್ಳುವುದಿಲ್ಲ. ವಿಭಿನ್ನ ಆಯಾಮಗಳು, ಉದ್ಯಮ ಮತ್ತು ಆರ್ಥಿಕ ನೆಲೆಗಳು ಪುಸ್ತಕ ವಿಮರ್ಶೆಯ ರೂಪುಗೊಳ್ಳುವಿಕೆಗೆ ಕಾರಣವಾಗಿವೆ. ಹೀಗಾಗಿ ಇದೊಂದು ಸಾಹಿತ್ಯ ಮತ್ತು ಸಾಹಿತ್ಯೇತರ ಪ್ರಕಾರವಾಗಿ ಬೆಳೆದಿದೆ. ಹೀಗೆ ಬಹುನೆಲೆಯ ವಿಸ್ತಾರವನ್ನು ಪುಸ್ತಕ ವಿಮರ್ಶೆ ಒಳಗೊಂಡಿರುವುದರಿಂದ ಸಾಹಿತ್ಯಕ ಅಧ್ಯಯನ ವಿಧಾನ ಮತ್ತು ಚಾರಿತ್ರಿಕ ಅಧ್ಯಯನ ವಿಧಾನಗಳನ್ನು ಬಳಸಿಕೊಂಡಿಲ್ಲ. ಯಾಕೆಂದರೆ ಈ ಅಧ್ಯಯನ ವಿಧಾನಗಳು ಹಲವು ಮಿತಿಗಳನ್ನು ಒಳಗೊಂಡಿವೆ.

<u>ಸಾಹಿತ್ಯಕ ಅಧ್ಯಯನ ವಿಧಾನ</u>

೧. ಈಗಾಗಲೇ ರೂಢಿಗತವಾದ ಸಾಹಿತ್ಯಕ ವ್ಯಾಖ್ಯಾನಗಳಿಂದ ಅಧ್ಯಯನ ಮಾಡಲು ಒತ್ತಡ ಹೇರುತ್ತದೆ.

೨. ಪ್ರಕಾರ ಬದ್ಧ ಅಧ್ಯಯನಕ್ಕಷ್ಟೇ ಗಮನ ನೀಡುತ್ತದೆ.

೩. ಪ್ರತಿಷ್ಠಾಪಿತ ಮೌಲ್ಯವನ್ನು ಅಳತೆಗೋಲಾನ್ನಾಗಿಸಿಕೊಂಡು ಅಧ್ಯಯನ ನಡೆಸಲು ಕುರುಡು ಮಾರ್ಗ ಸೃಷ್ಟಿಸುತ್ತದೆ.

೪. ಸಾಹಿತ್ಯೇತರ ವಿಚಾರಗಳನ್ನು ಪರಿಗಣಿಸುವುದಿಲ್ಲ.

೫. ಚರಿತ್ರೆಯ ಅಂಶಗಳನ್ನು ಮುಖ್ಯವೆಂದು ಪರಿಗಣಿಸುವುದಿಲ್ಲ.

೬. ಆರ್ಥಿಕ ಮತ್ತು ಉದ್ಯಮದಂಥ ವಿಚಾರಗಳನ್ನು ಈ ವಿಧಾನ ಗಮನಿಸುವುದಿಲ್ಲ.

<u>ಚಾರಿತ್ರಿಕ ಅಧ್ಯಯನ ವಿಧಾನ</u>

೧. ಮಾಹಿತಿ ಸಂಗ್ರಹಣೆ ಮತ್ತು ಪ್ರಾಧಾನ್ಯತೆಗೆ ಹೆಚ್ಚು ಒತ್ತು ನೀಡುತ್ತದೆ.

೨. ಸ್ಪಷ್ಟ ಲಿಖಿತ ದಾಖಲೆಗಳಿಗೆ ಮಹತ್ವ ನೀಡುತ್ತದೆ.

೩. ಸಾಹಿತ್ಯಕ ವಿಚಾರಗಳನ್ನು ಮುಖ್ಯವೆಂದು ಪರಿಗಣಿಸುವುದಿಲ್ಲ.

೪. ಸಾಮಾಜಿಕ ಆಯಾಮವನ್ನು ಮಹತ್ವವೆಂದು ಭಾವಿಸುವುದಿಲ್ಲ.

೫. ದಾಖಲೆಗಳಷ್ಟೇ ಮುಖ್ಯ, ವಿಶ್ಲೇಷಣೆ ಅಲ್ಲ.

ಹೀಗೆ ಈ ಎರಡೂ ಅಧ್ಯಯನ ವಿಧಾನಗಳು ತಾತ್ವಿಕ ಮಿತಿಯನ್ನು ಒಳಗೊಂಡಿವೆ. ಪುಸ್ತಕ ವಿಮರ್ಶೆಯನ್ನು ಈ ರೀತಿಯ ಅಧ್ಯಯನ ವಿಧಾನಗಳಿಂದ ಅರ್ಥಪೂರ್ಣವಾಗಿ ಶೋಧಿಸಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಪುಸ್ತಕ ವಿಮರ್ಶೆ ಪುಸ್ತಕೋದ್ಯಮ ಪತ್ರಿಕೋದ್ಯಮದ, ಆಯಾಮವನ್ನು ಒಳಗೊಂಡಿದೆ. ಉದ್ಯಮ, ಆರ್ಥಿಕ ನೆಲೆಗಳಂಥ ವಿವರಗಳೂ ಇದರ ಬೆಳವಣಿಗೆಗೆ ಸಾಹಿತ್ಯದ ವಿವರಗಳಷ್ಟೇ ಮುಖ್ಯವಾಗಿವೆ.

ಈ ಅಧ್ಯಯನದಲ್ಲಿ ಸಾಹಿತ್ಯದ ನೆಲೆಯಿಂದ ವಿಶ್ಲೇಷಣೆ ಮಾಡಲು ಯತ್ನಿಸಲಾಗುವುದು. ಇದು ಸಾಹಿತ್ಯದ ವ್ಯಾಖ್ಯಾನವನ್ನು ವಿಸ್ತರಿಬಹುದು, ಸಾಹಿತ್ಯದ ಮೂಲಧಾತುಗಳಾದ ಲೇಖಕರು, ವಿಮರ್ಶಕರು, ಓದುಗರ ಮುಖೇನ ಪುಸ್ತಕ ವಿಮರ್ಶೆ ಬೆಳೆಯುತ್ತದೆ. ಈ ಅಂಶಗಳಿಲ್ಲದಿದ್ದರೆ ಪುಸ್ತಕ

ವಿಮರ್ಶೆಗೆ ಉಳಿವಿಲ್ಲ. ಆದರೆ ಪುಸ್ತಕ ವಿಮರ್ಶೆಯ ಚರಿತ್ರೆಯನ್ನು ಗುರುತಿಸುವಾಗ ಚಾರಿತ್ರಿಕ ವಿಧಾನವನ್ನು ಅನುಸರಿಸಿದ್ದರೂ, ಈ ಅಧ್ಯಯನ ಕೇವಲ ಚಾರಿತ್ರಿಕ ಅಧ್ಯಯನವನ್ನು ಪೂರ್ಣ ಅವಲಂಬಿಸಿಲ್ಲ.

ಈ ನಿಟ್ಟನಲ್ಲಿ ಪ್ರಸ್ತುತ ಅಧ್ಯಯನವು 'ಸಾಂಸ್ಕೃತಿಕ ವಿಧಾನ'ವನ್ನು ರೂಪಿಸಿಕೊಂಡಿದೆ. ಈ ಅಧ್ಯಯನದಲ್ಲಿ ಸಾಹಿತ್ಯಕ, ಚಾರಿತ್ರಿಕ ಆರ್ಥಿಕ, ಸಾಮಾಜಿಕ ಅಂಶಗಳು ಒಂದರೊಳಗೊಂಡು ಸೇರಿಕೊಂಡಿವೆ. ಕನ್ನಡ ಪುಸ್ತಕ ವಿಮರ್ಶೆ ಬೆಳೆದು ಬಂದ ಚರಿತ್ರೆ ಹಾಗೂ ಸ್ಥಿತ್ಯಂತರಗಳನ್ನು ಕನ್ನಡ ಸಾಹಿತ್ಯ ಪರಿಸರದೊಳಗಿಟ್ಟು ಶೋಧಿಸಿರುವ ಈ ಅಧ್ಯಯನವು ಏಕಕಾಲದಲ್ಲಿ ಸಾಹಿತ್ಯಕ, ಚಾರಿತ್ರಿಕ, ಸಾಮಾಜಿಕ ಅಧ್ಯಯನ ವಿಧಾನಗಳನ್ನು ಬಳಸಿಕೊಂಡು ಒಂದು ಬಗೆಲು ಸಾಂಸ್ಕೃತಿಕ ವಿಧಾನದಲ್ಲಿ ಶೋಧಮಾಡಲು ಉದ್ದೇಶಿಸಿದೆ.

ಈ ಸಾಂಸ್ಕೃತಿಕ ವಿಧಾನವನ್ನು ಪ್ರಸ್ತುತ ಅಧ್ಯಯನದಲ್ಲಿ ಅನುಸರಿಸಿರುವುದರಿಂದ ಪುಸ್ತಕ ವಿಮರ್ಶೆಗೆ ಹೊಸ ಆಯಾಮಗಳು ಲಭಿಸಿವೆ. ಈ ವಿಧಾನದಿಂದ ಪುಸ್ತಕ ವಿಮರ್ಶೆಯನ್ನು ನಿರ್ಲಕ್ಷಿತ ವಸ್ತು ವಿಷಯಗಳ ಹಿನ್ನೆಲೆಯಲ್ಲಿ ಅಭ್ಯಸಿಸಲಾಗಿದೆ. ಇದರಿಂದ ಈ ಅಧ್ಯಯನಕ್ಕೆ ಸಮಾಜಶಾಸ್ತ್ರೀಯ ವಿಶ್ಲೇಷಣೆಯ ಸ್ವರೂಪ ಬಂದಿದೆ. ಇಲ್ಲಿ ಕೇವಲ ಲಿಖಿತ ದಾಖಲೆಗಳನ್ನು ನೆಚ್ಚಿಕೊಳ್ಳದೆ 'ಮೌಖಿಕ ಪುಸ್ತಕ ವಿಮರ್ಶೆ'ಗಳನ್ನು ವಿಶ್ಲೇಷಿಸಲು ಯತ್ನಿಸಿದೆ. ಇದರಿಂದ ಲಿಖಿತ ದಾಖಲೆಗಳೊಂದಿಗೆ ಸಾಹಿತ್ಯಕ ಅಧ್ಯಯನ ಮಾಡುವ ಸಾಂಪ್ರದಾಯಿಕ ವಿಧಾನವನ್ನು ಮೀರಲು ಯತ್ನಿಸಲಾಗಿದೆ. ಪ್ರಕಟಿತ ಆಕರಗಳಂತೆಯೇ ಮೌಖಿಕ ಆಕರಗಳೂ ಪ್ರಮುಖವೆಂದು ನೋಡಲು ಈ ಅಧ್ಯಯನ ವಿಧಾನದಿಂದ ಸಾಧ್ಯವಾಗಿದೆ. ಅಲ್ಲದೆ ಪ್ರಕಾರಬದ್ಧ ಹಿನ್ನೆಲೆಯಲ್ಲಿ ಅಧ್ಯಯನ ಮಾಡುವಾಗಿನ ಅಪಾಯದಿಂದ ಈ ಅಧ್ಯಯನದಲ್ಲಿ ತಪ್ಪಿಸಿಕೊಳ್ಳಲು ಯತ್ನಿಸಲಾಗಿದೆ. ಪುಸ್ತಕ - ವಿಮರ್ಶೆ ಪ್ರಮುಖ ಪ್ರಕಾರದ ಉಪ ಅಂಗವಾಗಿ ಮಾತ್ರ ನೋಡದೆ ಸಾಹಿತ್ಯದ ಇತರ ಪ್ರಕಾರಗಳ ಜೊತೆ ಕೊಡು ಕೊಳುವ ಹಿನ್ನೆಲೆಯಲ್ಲಿ ರೂಪುಗೊಂಡಿರುವುದನ್ನು ಗುರುತಿಸಲು ಈ ಅಧ್ಯಯನದಲ್ಲಿ ಯತ್ನಿಸಿದೆ. ಸಾಹಿತ್ಯ ವಿಧಾನದ ವಿಶ್ಲೇಷಣಾ ಕ್ರಮವನ್ನು ಸಹ ಇಲ್ಲಿ ಅನುಸರಿಸಲಾಗಿದೆ.

ಈ ಅಧ್ಯಯನವು ಬಹು ಆಕರಗಳನ್ನು ಬಳಸಿಕೊಂಡಿರುವುದರಿಂದ ಏಕಮುಖವಾಗಿ ಅಧ್ಯಯನಕ್ಕೆ ಪ್ರವೇಶಿಸುವುದಿಲ್ಲ, ಸಾಮಾಜಿಕ ಮತ್ತು ಸಾಂಸ್ಕೃತಿಕ ಆಯಾಮವು ಸಾಹಿತ್ಯಕ, ಚಾರಿತ್ರಿಕ, ಆರ್ಥಿಕ ವಿಚಾರಗಳೂ ಮಾರಾಟದ ಆಯಾಮಗಳಿರುವುದರಿಂದ ಈ ಅಧ್ಯಯನ ಒಂದು ರೀತಿಯಲ್ಲಿ ಬಹುಶಿಸ್ತೀಯ ಅಧ್ಯಯನವಾಗಿ, ಇನ್ನೊಂದು ಕಡೆ ಸಮಾಜ ಶಾಸ್ತ್ರೀಯ ಅಧ್ಯಯನವಾಗಿ ಬೆಳೆದಿದೆ. ಈ ಎಲ್ಲ ಅಂಶಗಳನ್ನು ಒಳಗೊಂಡಿರುವ 'ಸಾಂಸ್ಕೃತಿಕ' ಎಂದು ಕರೆಯಬಹುದಾದ ವಿಧಾನವನ್ನು ಪ್ರಸ್ತುತ ಅಧ್ಯಯನ ಅವಲಂಬಿಸಿದೆ.

ಕೊನೆ ಟಿಪ್ಪಣಿಗಳು

೧. ಅನುಭಾವ : ಸಾಂಸ್ಕೃತಿಕ ಸಮಸ್ಯೆ ಮತ್ತು ಹುಡುಕಾಟ. ಪು. ೫
೨. ವಿಮರ್ಶೆ ಭಾಗ ೧
೩. ವಿಮರ್ಶೆ ಓದಿ ಯಾರಾದರೂ ನಾಟಕಕ್ಕೆ ಬರುತ್ತಾರೆಯೇ? - ಗುಡಿಹಳ್ಳಿ ನಾಗರಾಜ್

ಅಧ್ಯಾಯ - ೨

ಪುಸ್ತಕ ವಿಮರ್ಶೆ ಕುರಿತು ಕನ್ನಡ ವಿಮರ್ಶಕರ ಚಿಂತನೆ

ಪುಸ್ತಕ ವಿಮರ್ಶೆ ಕುರಿತು ಕನ್ನಡ ವಿಮರ್ಶಕರ ಚಿಂತನೆ

ಪುಸ್ತಕ ವಿಮರ್ಶೆ ಕುರಿತು ಸ್ವತಃ ಪುಸ್ತಕ ವಿಮರ್ಶಕರ, ಲೇಖಕರ ಅಭಿಪ್ರಾಯಗಳನ್ನು ಒಂದೇ ನೆಲೆಯಲ್ಲಿ ಚರ್ಚಿಸುವ ಅಗತ್ಯವಿದೆ. ಪರಸ್ಪರ ಭಿನ್ನ ಧೋರಣೆಗಳಿಂದ ಕೂಡಿರುವ ಇವರ ಮನೋಧರ್ಮಗಳನ್ನು ಒಟ್ಟಿಗೆ ಇಟ್ಟು ಪರಿವೀಕ್ಷಿಸುವ ಪ್ರಯತ್ನ ಇಲ್ಲಿದೆ.

ಐವತ್ತರ ದಶಕದಲ್ಲಿ ಪುಸ್ತಕ ವಿಮರ್ಶೆಗೆ ಇದ್ದಂತಹ ಪರಿಸ್ಥಿತಿಯನ್ನು ರಂ.ಶ್ರೀ ಮುಗಳಿಯವರು ಹೀಗೆ ಹೇಳುತ್ತಾರೆ. *ಈಗ ಮೊದಲಿಗಿಂತ ಹೇರಳವಾಗಿ ಅನೇಕ ಬಗೆಯ ಅದರಲ್ಲಿಯೂ ನಿರ್ಮಿತಿ ಪ್ರಧಾನವಾದ ಪುಸ್ತಕಗಳು ಹೊರಬೀಳುತ್ತಿವೆ. ಅವುಗಳೆಲ್ಲದರ ಯೋಗ್ಯ ವಿಮರ್ಶೆ ಈಗ ಆಗುತ್ತಿಲ್ಲ. ಕೆಲವಕ್ಕೆ 'ಸಾದರ ಸ್ವೀಕಾರ'ದಲ್ಲಿ ಸ್ಥಳಸಿಕ್ಕ ಮೇಲೆ ಮುಂದೆ ಅನಾದರ ಸ್ವೀಕಾರಕ್ಕೆ ಅವು ಸಿದ್ಧವಾಗಿರಬೇಕು. ವಿಮರ್ಶೆಯಾಗುತ್ತಿರುವ ಉಳಿದ ಕೆಲವಕ್ಕೆ ಎರಡು ಇಲ್ಲವೆ 'ನಾಲ್ಕು ಸಾಲಿನ ಮರ್ಯಾದೆ' ಸಿಕ್ಕರೆ ಅಷ್ಟರಿಂದ ಅವು ತೃಪ್ತಿ ಹೊಂದಬೇಕು. ಎಲ್ಲ ತರದ ಪತ್ರಿಕೆಗಳಲ್ಲಿ ಎಲ್ಲ ತರದ ವಿಮರ್ಶೆಗಳು ಬರುವುದರಿಂದ ವಿಮರ್ಶೆಗೆ ಒಂದು ನೆಲೆ ತೂಕ ಇಲ್ಲದಾಗುತ್ತಿದೆ. ಪತ್ರಿಕೆಗಳ ಸಲುವಾಗಿ ದುಡಿಯುತ್ತಿರುವವರ ಕಷ್ಟಗಳನ್ನು ಗಮನಿಸಿದರೆ, ಅವರಿಗೆ ಪುಸ್ತಕಗಳನ್ನು ಪೂರ್ತಿಯಾಗಿ ಓದಿ ಬರೆಯುವಷ್ಟು ಅವಕಾಶವಾಗಲಿ, ಮನಶ್ಶಾಂತಿಯಾಗಲೀ ಇರುವುದಿಲ್ಲ. ಅವರು ಪುಸ್ತಕವನ್ನು, ಮೇಲೆ ಕೆಳಗೆ ನೋಡಿ ಮುನ್ನುಡಿಯಿಂದ ಪ್ರೇರಣೆ ಹೊಂದಿಯಾದರೂ ಬಹುಶಃ ಓದಲಾರರು ಎಂಬುದರ ಮೇಲೆ ಬರೆಯಬಹುದು. ಈ ಪರಿಸ್ಥಿತಿ ಸರಿಯಾದುದೆಂದು ಯಾರೂ ಅನ್ನಲಾರರು*[1]

ಈ ಮೇಲಿನ ಉಲ್ಲೇಖವನ್ನು ಗಮನಿಸಿದಾಗ ೨೦ನೇ ಶತಮಾನದ ಐವತ್ತರ ದಶಕದಲ್ಲಿ ಪುಸ್ತಕ ವಿಮರ್ಶೆ ಬಗೆಗಿದ್ದ ಬಿಕ್ಕಟ್ಟು ತಲ್ಲಣಗಳು ಎದ್ದು ಕಾಣುತ್ತವೆ. ಇಲ್ಲಿ ರಂ.ಶ್ರೀ. ಮುಗಳಿಯವರು ಸಾಹಿತ್ಯ ಸೃಷ್ಟಿಯ ಮೂಲಕ ಚರ್ಚೆಗೆ ತೊಡಗಿದ್ದಾರೆ. ಅವರು ಸಾಹಿತ್ಯ ಸೃಷ್ಟಿಯ ಬಗೆಗೆ ಹೇಳುವ 'ನಿರ್ಮಿತಿ ಪ್ರಧಾನವಾದ ಪುಸ್ತಕಗಳು' ಮಾತು ಚರ್ಚಾಸ್ಪದವಾಗಿದೆ. ಇವರು ಬರೆಯುತ್ತಿದ್ದ ಸಂದರ್ಭದಲ್ಲಿ ಇದ್ದಂಥ ಸನ್ನಿವೇಶ ಮುಖ್ಯವಾಗಿ ಕೃತಿಗಳಲ್ಲಿ ಅನುಭವವನ್ನು ನಿರೀಕ್ಷಿಸುತ್ತಿದ್ದುದು ಆಗಿತ್ತು. ಹಾಗಾಗಿ ಅನುಭವ ಪ್ರಧಾನಕ್ಕಿಂತ ನಿರ್ಮಿತಿ ಪ್ರಧಾನವಾಗಿದ್ದವು ಎಂಬ ಪ್ರತಿಕ್ರಿಯೆ ಹೊಮ್ಮಿದೆ. ಆದರೆ ಈ ಚಿಂತಕರ ಕೊರಗಿರುವುದು ಈ ನಿರ್ಮಿತಿ ಪ್ರಧಾನ ಪುಸ್ತಕಗಳ ಬಗೆಗಿಂತ ಅವುಗಳಿಗೆ ಯೋಗ್ಯ ವಿಮರ್ಶೆ ಸಿಗುತ್ತಿಲ್ಲವೆಂಬುದಕ್ಕೆ. ಬಂದಂಥ ಪುಸ್ತಕಗಳಿಗೆ ಯೋಗ್ಯ ವಿಮರ್ಶೆ ದೊರೆತರೆ

ಆ ಪುಸ್ತಕ ನಿಜವಾದ ಮೌಲ್ಯದಿಂದ ಕೂಡಿದುದು ಎಂಬ ಮನೋಧರ್ಮದಲ್ಲಿ ಪುಸ್ತಕ ವಿಮರ್ಶೆಯ ಸ್ಥಿತಿಯನ್ನು ಹೇಳಲಾಗಿದೆ. ಆದರೆ ಕೆಲವೊಮ್ಮೆಯಾದರೂ ಕೆಲವು ಪುಸ್ತಕಗಳಿಗೆ 'ಸಾದರ ಸ್ವೀಕಾರ' ಕೆಲವಕ್ಕೆ ನಾಲ್ಕುಸಾಲಿನ ಮರ್ಯಾದೆ ಎಂಬ ಮಾತುಗಳು ಪುಸ್ತಕ ವಿಮರ್ಶೆ ಇದ್ದಂಥ ಸ್ಥಿತಿಯನ್ನು ಹೇಳುತ್ತವೆ. ಇಲ್ಲಿ ಮುಗಳಿಯವರು ಪುಸ್ತಕ ವಿಮರ್ಶೆಗೆ ಒಂದು ಸಾಂಸ್ಥಿಕ ಕೊಂಡಿಯನ್ನು ರೂಪಿಸುತ್ತಿದ್ದಾರೆ. ಅಂದರೆ ಸಾಹಿತ್ಯ ಸೃಷ್ಟಿಯ ಜೊತೆಯಲ್ಲಿಯೇ ವಿಮರ್ಶೆ, ಪುಸ್ತಕ ವಿಮರ್ಶೆಯನ್ನು ವಿಶ್ಲೇಷಿಸುತ್ತಿದ್ದಾರೆ. ಆದರೆ ಬಂದಂಥ ಎಲ್ಲ ಕೃತಿಗಳು 'ಪುಸ್ತಕ ವಿಮರ್ಶೆ'ಗೆ ಒಳಗಾಗುವುದಿಲ್ಲ ಎಂಬ ವಾಸ್ತವವನ್ನು ಹೇಳುತ್ತಿದ್ದಾರೆ. ಇದರ ಜೊತೆಯಲ್ಲಿಯೇ, 'ಪುಸ್ತಕ ವಿಮರ್ಶೆ'ಯನ್ನು ಬರೆಯುತ್ತಿರುವುದರಿಂದ ವಿಮರ್ಶೆಗೆ ಒಂದು ಬೆಲೆ, ತೂಕ ಇಲ್ಲದಾಗುತ್ತಿದೆ ಎಂಬ ಆತಂಕವು ಈ ಚಿಂತಕರಿಗೆ ಕಾಡಿದೆ. ಅದಕ್ಕೆ ಕಾರಣವನ್ನು ಸನ್ನಿವೇಶದ ಹಿಂದಿನ ಹಿನ್ನೆಲೆಗಳನ್ನು ಅವರೇ ಹೇಳುತ್ತಾರೆ. ಓದಿ ಬರೆಯುವಷ್ಟು ಅವಕಾಶವಾಗಲಿ, ಮನಶಾಂತಿಯಾಗಲೀ ಇರುವುದಿಲ್ಲ ಎಂಬ ತುರ್ತು ಅನಿವಾರ್ಯಗಳನ್ನು ಹೇಳಿ ಅದಕ್ಕೆ ಪುಸ್ತಕ ವಿಮರ್ಶಕರು ಕಂಡುಕೊಳ್ಳುವ ಪರಿಹಾರವೇನು? ಎಂಬ ಶೋಧನೆಯನ್ನು ಮಾಡುತ್ತಾರೆ. ಮುನ್ನುಡಿ, ಬೆನ್ನುಡಿಗಳಿಂದ ನಿರ್ಮಿತಿಯಾದ ಪುಸ್ತಕ ವಿಮರ್ಶೆಗಳನ್ನು ಗಮನಿಸದೆ ಅವರು ಪುಸ್ತಕ ವಿಮರ್ಶೆಯು ಹೊಸದೇನನ್ನೋ ಹುಡುಕಬೇಕು ಎಂಬ ಹಂಬಲದಿಂದ ಇರುವಂತೆ ಕಾಣುತ್ತಾರೆ. ಈ ಚರ್ಚೆಯಲ್ಲಿ ಪುಸ್ತಕ ವಿಮರ್ಶೆಯ ಬಗೆಗೆ ಅವರಿಗೆ ಒಳ್ಳೆಯ ನಿಲುವಿಗಿಂತ ಆತಂಕವೇ ತುಂಬಿದೆ. ಅವರು ಪುಸ್ತಕ ವಿಮರ್ಶೆಯನ್ನು ಎರಡು ಅಥವಾ ನಾಲ್ಕು ಸಾಲಿನ ಮರ್ಯಾದೆ ಎಂದೇ ಭಾವಿಸಿರುವಂತಿದೆ. ಅದರಿಂದ ಆ ವಿಮರ್ಶೆಗಳು ಶ್ರೇಷ್ಠಮಟ್ಟಕ್ಕೆ ಏರಲಾರವು ಎಂಬ ಗುಮಾನಿಯು ಇರುವುದರಿಂದ ಅವರು ಒಪ್ಪಿತ ನೆಲೆಯಲ್ಲಿ ಪುಸ್ತಕ ವಿಮರ್ಶೆಗಳನ್ನು ಗ್ರಹಿಸುವುದಿಲ್ಲ. ಇದು ಆ ದಶಕದಲ್ಲಿ ಪುಸ್ತಕ ವಿಮರ್ಶೆ ಬಗೆಗೆ ಇದ್ದ ಮನಸ್ಥಿತಿಯೂ ಆಗಿರಬಹುದೇ ಎಂಬ ಪ್ರಶ್ನೆ ಏಳುತ್ತದೆ.

೨. ವಿ. ಸೀತಾರಾಮಯ್ಯನವರು ತಮ್ಮ 'ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ' ಎಂಬ ಕೃತಿಯಲ್ಲಿ ಪರೋಕ್ಷವಾಗಿ 'ಪುಸ್ತಕ ವಿಮರ್ಶೆ'ಯ ಬಗೆಗೆ ಚರ್ಚಿಸುತ್ತಾರೆ. *ವರ್ತಮಾನ ಕಾಲದ ಕೃತಿಗಳ ಮೇಲೆ ಬೇರೆ ಬಗೆಯ ಪ್ರಭಾವಗಳು ಬೀರುವವು, ಜನ ಹತ್ತಿರದವರು, ಪರಸ್ಪರ ಪರಿಚಿತರು, ಜೀವನದ ಅನೇಕ ಸ್ನೇಹ ದಾಕ್ಷಿಣ್ಯ, ಅಸೂಯೆ, ವೈಮನಸ್ಸುಗಳ ಸಂಬಂಧ ಸಾಂಪ್ರತ ಸನ್ನಿವೇಶದಲ್ಲಿ ಅವರ ನಡುವೆ ನೆಲಸಿರಬಲ್ಲದು, ಜನರ ಭಕ್ತಿಗಳು ಬಗೆ ಬಗೆಯಾದರು ಬಗೆಬಗೆಯ ಶಕ್ತಿ ಮತ್ತು ಸಾಧನೆಯ ಮಟ್ಟಗಳು ಕಣ್ಣೆದುರಿಗಿನವರಲ್ಲಿ ಇರಬಹುದು. ಎಲ್ಲರ ಕೃತಿ ಶಕ್ತಿಯೂ ಇನ್ನು ಪರಿಣಿತವಾಗದೆ, ನಿರ್ಮಾಣ ಕಾರ್ಯ ಮುಗಿಯದೆ ಇರಬಹುದು ಇಂಥ ಸಂದರ್ಭದಲ್ಲಿ ನಿರ್ಣಾಯಕವಾದ ವಿಮರ್ಶೆ ಸುಲಭವಲ್ಲ. ಕವಿಗಳಿಗೆ, ಕವಿತೆಗೆ ವಿಮರ್ಶಕರು ಅತಿ ಹತ್ತಿರವಿರುವುದರಿಂದ ಬೆಲೆ, ತೂಕ, ತಕ್ಕ ಹಾಗೆ ಪ್ರಯೋಗವಾಗುವುದು ಸುಲಭವಲ್ಲ. ಆದುದರಿಂದ ಬಹುಶಃ ಕಾವ್ಯಾವಲೋಕನ, ಪರಿಚಯಾತ್ಮಕ ಲೇಖನ ರೂಪದಲ್ಲಿ (Reviewing) ಅಭಿಪ್ರಾಯ ಸೂಚನೆಗೊಳ್ಳುವುದು ಮೇಲು. ಇಂತಹ ಕೃತಿಗಳನ್ನು ಕುರಿತು ಖಚಿತವಾಗಿ ಬೆಲೆಗಳು ಕೂಡಲು ಕಾಲವನ್ನಪೇಕ್ಷಿಸುತ್ತವೆ. ದೂರದ ಬೆಟ್ಟ ನುಣ್ಣನೆಯದಾದರೆ ಹತ್ತಿರ ಬೆಟ್ಟದ ಕಲ್ಲು ಮುಳ್ಳುಗಳ ಗಾಸಿ ನಿಜವಾಗಿಯೂ ವಾಸಿಯೇ?*[೨].

ಈ ಮೇಲಿನ ಉಲ್ಲೇಖದಲ್ಲಿ ಪುಸ್ತಕ ವಿಮರ್ಶೆಯ ಬಗೆಗೆ ಕೆಲವು ಚರ್ಚೆಗಳಿವೆ. ಇವರಿಗೆ, ಪುಸ್ತಕ ವಿಮರ್ಶೆಗೆ ಬೇರೆ ಬಗೆಯ ಪ್ರಭಾವಗಳು ಬೀರುವವು ಎಂಬ ನಿಲುವಿದೆ. ಹಾಗಾಗಿ ಇಂಥ ಸಂದರ್ಭದಲ್ಲಿ ನಿರ್ಣಾಯಕವಾದ ವಿಮರ್ಶೆ ಸುಲಭವಲ್ಲ ಎಂದು ಹೇಳುತ್ತಾರೆ. ಅಂದರೆ ಪುಸ್ತಕ ವಿಮರ್ಶೆ ಅವರೇ ಹೇಳುವಂತೆ ಕವಿತೆಗಳಿಗೆ, ಕವಿಗಳಿಗೆ ವಿಮರ್ಶಕರು ಹತ್ತಿರವಿರುವುದರಿಂದ ಎಂಬ ಉತ್ತರ ಕಂಡುಕೊಳ್ಳುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನೋಡಿದರೆ ಈ ಉಲ್ಲೇಖ ಬಂದಿರುವುದು ಕನ್ನಡ ಸಾಹಿತ್ಯದ ಆರಂಭದ ದಶಕಗಳಲ್ಲಿ. ಹಾಗಾಗಿ ಆರಂಭದ ದಶಕದಲ್ಲಿ ಪುಸ್ತಕ ವಿಮರ್ಶಕರು ಮತ್ತು ಕೃತಿಕಾರರು ತುಂಬಾ ಆತ್ಮೀಯರಾಗಿದ್ದರು, ಕೆಲವೊಮ್ಮೆ ಈ ಎರಡೂ ಕೆಲಸಗಳನ್ನು ಒಬ್ಬರೇ ನಿರ್ವಹಿಸುತ್ತಿದ್ದರು. ಅಲ್ಲದೆ ಅವರು ಒಂದೇ ಸೈದ್ಧಾಂತಿಕ ನಿಲುವನ್ನು ಉಳ್ಳವರಾಗಿದ್ದರು. ಕೃತಿಯ ಮೌಲ್ಯವನ್ನು ಗುರುತಿಸುವುದರ ಕಡೆಗಷ್ಟೇ ಅವರ ಗಮನವಿತ್ತು. ದೋಷಗಳನ್ನು ಗುರುತಿಸುವುದು ಮಹಾಪಾಪ ಎಂಬ ಧೋರಣೆಯಿತ್ತು. ಇದಕ್ಕೆ ಆಗ ಸಾಹಿತ್ಯವನ್ನು ಸೃಷ್ಟಿಸಲು ಪ್ರಚೋದಿಸುವ ಅವಧಿಯಾಗಿದ್ದುದರಿಂದ ಈ ರೀತಿಯ ನಿಲುವನ್ನು ಹೊಂದಿತ್ತು. ಆದ್ದರಿಂದ ಕೃತಿಗಳ ತೂಕ ತಕ್ಕ ಹಾಗೆ ಪ್ರಯೋಗವಾಗುವುದು ಸುಲಭವಲ್ಲ ಎಂಬ ನಿರ್ಣಯದಲ್ಲಿ ನಿಂತಿದೆ. ಆದರೆ ಇಂಥ ತೊಂದರೆಗಳನ್ನು ನಿವಾರಿಸಿಕೊಳ್ಳಲು ಪರಿಚಯಾತ್ಮಕ ಲೇಖನವನ್ನು ಬರೆಯುತ್ತಿದ್ದರೆಂಬ ಹೇಳಿಕೆಯಿದೆ. ಆದರೆ ಸಮರ್ಥ ವಿಮರ್ಶೆ ರೂಪಗೊಳ್ಳುವಿಕೆಗೆ ಕಾಲವನ್ನಪೇಕ್ಷಿಸುತ್ತದೆ ಎಂದು ಹೇಳುತ್ತಾರೆ. ಹೀಗಾಗಿ ಕೃತಿಯ ನಿಲುವಿನ ಬಗ್ಗೆ ಪಡೆದುಕೊಳ್ಳುವ ತಾತ್ಕಾಲಿಕ ಪರಿಹಾರವಾಗಿ ಪುಸ್ತಕ ವಿಮರ್ಶೆ ಬಳಕೆಯಲ್ಲಿದ್ದುದನ್ನು ಇವರು ತಿಳಿಸುತ್ತಾರೆ.

೩. ಕೆ.ವಿ. ತಿರುಮಲೇಶ್‌ರವರ 'ಪುಸ್ತಕ ವಿಮರ್ಶೆಯ ಇತಿಮಿತಿಗಳು' ಎಂಬ ಲೇಖನವು ಈ ವಿಷಯದ ಬಗೆಗೆ ಹೊಸ ಬೆಳಕನ್ನು ಚೆಲ್ಲುತ್ತದೆ. ಪುಸ್ತಕ ವಿಮರ್ಶೆಯನ್ನು ಒಂದು ಅಧ್ಯಯನ ವಸ್ತುವನ್ನಾಗಿ ಹೊಸ ರೀತಿಯ ಆಲೋಚನೆಗೆ ತೆರೆದುಕೊಂಡ ಲೇಖನ ಇದಾಗಿದೆ.

ಒಬ್ಬ ಲೇಖಕ ಆತ ಹೊಸಬನಿರಲಿ, ಹಳಬನಿರಲಿ, ತನ್ನ ಪುಸ್ತಕದ ವಿಮರ್ಶೆ ಆದಷ್ಟು ಬೇಗನೆ ಪತ್ರಿಕೆಗಳಲ್ಲಿ ಬರಲು ಆಶಿಸುತ್ತಾನೆ (ಇದಕ್ಕೆ ಶಿವರಾಮ ಕಾರಂತರಂಥ ಅಪವಾದಗಳು ಯಾವಾಗಲೂ ಇದ್ದಾರೆ) ವಿಮರ್ಶೆ ಅನುಕೂಲವಾಗಿದ್ದರೆ ಸಂತೋಷವಾಗುವುದು ಅನಾನುಕೂಲವಾಗಿದ್ದರೆ ಬೇಸರ, ತಿರಸ್ಕಾರ, ಸಿಟ್ಟು ಬರುವುದು ಸ್ವಾಭಾವಿಕ. ಇದೆಲ್ಲ ಪುಸ್ತಕ ವಿಮರ್ಶಕನಿಗೆ ಗೊತ್ತಿದ್ದರೂ ಆತ ವಿಮರ್ಶೆಯ ವಸ್ತುನಿಷ್ಠತೆಗೆ ಪ್ರಾಮಾಣಿಕನಾಗಿರಲೇಬೇಕಾಗುತ್ತದೆ. ಇಲ್ಲಿ ಪುಸ್ತಕ ವಿಮರ್ಶಕನ ಹೊಣೆಯ ಬಗ್ಗೆ ಒಮ್ಮತವಿಲ್ಲದೆ ಇರಬಹುದು - ಪುಸ್ತಕ ವಿಮರ್ಶಕನ ಕೆಲಸ ಕೇವಲ ಪುಸ್ತಕ ಪರಿಚಯ ಎಂಬ ಅಭಿಪ್ರಾಯ ಕೆಲವರಲ್ಲಿದೆ. ಇವರ ಪ್ರಕಾರ ಪುಸ್ತಕ ವಿಮರ್ಶೆಯಿಂದ ಓದುಗರಿಗೆ ಪುಸ್ತಕದ ಬಗ್ಗೆ ಕೆಲವು ಉಪಯುಕ್ತ ಮಾಹಿತಿಗಳು ದೊರೆತರೆ ಸಾಕು. ಉದಾಹರಣೆಗೆ ಪುಸ್ತಕ ಒಂದು ಕಾದಂಬರಿಯಾಗಿದ್ದರೆ ಅದರ ಸಾರಾಂಶವೇನು, ಪುಟಗಳೆಷ್ಟು ಓದಿಕೊಂಡು ಹೋಗುತ್ತದೆಯೇ ಇತ್ಯಾದಿ, ಇತ್ಯಾದಿ ಇಂತಹ ಮಾಹಿತಿಗಳಿಂದ ಬಹುಶಃ ಓದುಗ ಈ ಕಾದಂಬರಿಯನ್ನು ಕೊಂಡು ಓದಬೇಕೆ ಬೇಡವೇ? ಎಂಬ ನಿರ್ಧಾರಕ್ಕೆ ಬರುವುದು ಸಾಧ್ಯವಿದ್ದರೂ ಇರಬಹುದು. ಈ ರೀತಿಯ ಪುಸ್ತಕ ಪರಿಚಯಗಳಿಗೆ ಮಾಧ್ಯಮಗಳಲ್ಲಿ ಸಾಧ್ಯವಿಲ್ಲವೆಂದು ನಾನು ಹೇಳಲಾರೆ. ಆದರೆ ಪುಸ್ತಕ ವಿಮರ್ಶೆಯೆನ್ನುವುದು ಪುಸ್ತಕ ಪರಿಚಯದ ರೂಪದಲ್ಲಿ ಮಾತ್ರವೇ ಇರಬೇಕು ಎಂಬ ವಿಶ್ವಾಸ ಸಾರ್ವತ್ರಿಕವಲ್ಲ.

ಕನ್ನಡದಲ್ಲಂತೂ ಪುಸ್ತಕ ವಿಮರ್ಶೆಗೆ ಒಂದು ಒಳ್ಳೆಯ ಪರಂಪರೆಯೇ ಇದೆ. ಯಾವ ಪುಸ್ತಕ ವಿಮರ್ಶಕರೂ ಕೃತಿಯ ಸಾರಾಂಶವನ್ನು ಕೊಟ್ಟು ಅದರ ಬಗ್ಗೆ ಮಾಹಿತಿಗಳನ್ನು ನೀಡುವಷ್ಟರಲ್ಲೇ ತೃಪ್ತರಾಗುವುದಿಲ್ಲ. ಕೃತಿ ಚನ್ನಾಗಿದೆಯೇ ಇದ್ದರೆ ಯಾವ ಯಾವ ಕಾರಣಕ್ಕಾಗಿ ಎಂದು ಹುಡುಕಿ ನೋಡುವ ಪ್ರವೃತ್ತಿ ಮೊದಲಿನಿಂದಲೂ ಕಂಡು ಬರುತ್ತದೆ. ಕಾಲದಿಂದ ಕಾಲಕ್ಕೆ ಸಾಹಿತ್ಯದ ಒಟ್ಟಾರೆ ಕ್ಷೇತ್ರದಲ್ಲಿ ಕಾಣಿಸಿಕೊಳ್ಳುವ ಕ್ರಾಂತಿಗಳ, ಒಲವುಗಳ, ವಿರಸಗಳ ಪ್ರಭಾವ ಪುಸ್ತಕ ವಿಮರ್ಶೆಯ ಮೇಲೆಯೂ ಬಿದ್ದಿರುವುದನ್ನು ಕಾಣುತ್ತೇವೆ. ಈ ಪ್ರಭಾವ ಒಳಿತಿರಬಹುದು, ಕೆಡುಕಿರಬಹುದು. ಕೃತಿಗೆ ಇದರಿಂದ ಅಪಚಾರವೂ ಆಗಬಹುದು. ಏನೇ ಇದ್ದರೂ, ಪುಸ್ತಕ ವಿಮರ್ಶೆಯೆನ್ನುವುದು ಅಕಡೆಮಿಕ್ ವಿಮರ್ಶೆಗಿಂತ ಹೆಚ್ಚೇನೂ ಭಿನ್ನವಾಗಿರದೆ, ಅದಕ್ಕೆ ಸಮಾನಾಂತರವಾಗಿ ಬೆಳೆದು ಬಂದಿರುವುದು ಗಮನಾರ್ಹ. ಎಂದರೆ ಪುಸ್ತಕ ವಿಮರ್ಶೆಯ ಉದ್ದೇಶ ಪರಿಚಯವಾಗಿರದೆ ಅಥವಾ ಕೇವಲ ಪರಿಚಯವೊಂದೇ ಆಗಿರದೆ ಕೃತಿಯ ಮೌಲ್ಯಮಾಪನವು ಹೌದು ಎಂದಾಯಿತು. ಬಹುಶಃ ಪುಸ್ತಕ ವಿಮರ್ಶಕನ ನಿಜವಾದ ಧರ್ಮ ಸಂಕಟವಿರುವುದು ಈ ಸಂದಿಗ್ಧತೆಯಲ್ಲಿಯೇ ಎಂದೆನಿಸುತ್ತದೆ"[3]

ಕೆ. ವಿ. ತಿರುಮಲೇಶರ ಈ ಲೇಖನ ಈ ನಿಟ್ಟಿನಲ್ಲಿ ಹೊಸ ಅನ್ವೇಷಣೆಗೆ ತೊಡಗಲು ಯತ್ನಿಸಿರುವ ಲೇಖನ. ಪುಸ್ತಕ ವಿಮರ್ಶೆ ಮತ್ತು ಸಾಹಿತ್ಯ ವಿಮರ್ಶೆ ಬೇರೆ ಬೇರೆ ಎಂದು ಪರಿಭಾವಿಸದೆ ಒಟ್ಟಿಗೆ ಗ್ರಹಿಸುವ ನೆಲೆಯದು. ಇದು ಈ ರೀತಿಯ ಲೇಖನಗಳಲ್ಲೇ ಮೊದಲನೆಯದು. ಪುಸ್ತಕ ವಿಮರ್ಶೆಯನ್ನು ತಾತ್ವಿಕ ನೆಲೆಗಟ್ಟಿನಲ್ಲಿಟ್ಟು ಪರಿವೀಕ್ಷಿಸಿರುವ ಈ ಲೇಖನ ಪುಸ್ತಕ ವಿಮರ್ಶೆಯ ಮಿತಿಯನ್ನು ಹೇಳುತ್ತಲೇ ಪುಸ್ತಕ ವಿಮರ್ಶಕರನ್ನು ಸಾಹಿತ್ಯ ವಿಮರ್ಶಕರ ಮಟ್ಟದಲ್ಲೇ ಗುರುತಿಸುತ್ತದೆ. ಈಗಾಗಲೇ ತಿಳಿದಿರುವಂತೆ ತಿರುಮಲೇಶ್ ಅವರು ಪುಸ್ತಕ ವಿಮರ್ಶೆಯನ್ನು ಅಕಡೆಮಿಕ್ ವಿಮರ್ಶೆಯ ಜೊತೆಯಲ್ಲಿಯೇ ಗುರುತಿಸುತ್ತಾರೆ. ಇವೆರಡನ್ನು ಒಂದೇ ಎಂದು ಪರಿಭಾವಿಸಿ 'ಕನ್ನಡದಲ್ಲಂತೂ ಪುಸ್ತಕ ವಿಮರ್ಶೆಗೆ ಒಂದು ಒಳ್ಳೆಯ ಪರಂಪರೆಯೇ ಇದೆ, ಯಾವ ಪುಸ್ತಕ ವಿಮರ್ಶೆಯು ಕೃತಿಯ ಸಾರಾಂಶವನ್ನು ಕೊಟ್ಟು ಅದರ ಬಗ್ಗೆ ಮಾಹಿತಿಗಳನ್ನು ನೀಡುವುದರಲ್ಲೇ ತೃಪ್ತರಾಗುವುದಿಲ್ಲ... ಪುಸ್ತಕ ವಿಮರ್ಶೆ ಕೃತಿಯ ಒಳ ವಿವರಗಳಿಂದ ಮೌಲ್ಯ ಮಾಪನವನ್ನು ಮಾಡುವಂತಹದ್ದು' ಎಂದು ತಾತ್ವಿಕವಾದ ಸ್ವರೂಪವನ್ನು ಕಟ್ಟಿಕೊಟ್ಟಿದ್ದಾರೆ.

ಇಲ್ಲಿನ ಚರ್ಚೆಯನ್ನು ತಿರುಮಲೇಶರು ಕೃತಿ ಲೇಖಕರು, ತಾವು ಕೃತಿ ಬಿಡುಗಡೆ ಮಾಡಿದ ಸಂದರ್ಭದಲ್ಲಿನ ತುಮುಲ.... ಮುಂತಾದವುಗಳಿಂದ ಪುಸ್ತಕ ವಿಮರ್ಶೆ ಬೇಗ ಬರಲೆಂದು ಆಶಿಸುತ್ತಾರೆ ಎಂಬ ಹೇಳಿಕೆಯಿಂದ ಆರಂಭ ಮಾಡುತ್ತಾರೆ. ಈ ರೀತಿಯ ಪುಸ್ತಕ ವಿಮರ್ಶೆಗಳನ್ನು ಮಾಡುವ ಸಂದರ್ಭದಲ್ಲಿ ಪುಸ್ತಕ ವಿಮರ್ಶೆ ಎದುರಿಸಬೇಕಾದ ಸನ್ನಿವೇಶ ಮತ್ತು ಕೃತಿಕಾರರಿಗಾಗುವ ಅನುಕೂಲ/ಅನಾನುಕೂಲಗಳನ್ನು ಕುರಿತು ಚರ್ಚಿಸುತ್ತಾರೆ. ಇದು ಬಹುಶಃ ತಿರುಮಲೇಶರವರು ಏಕಕಾಲದಲ್ಲಿ ಕೃತಿಕಾರರು, ಪುಸ್ತಕ ವಿಮರ್ಶಕರು ಆಗಿರುವುದರಿಂದ ಸಾಧ್ಯವಾಗಿರಬಹುದು. ಇವರು ಪುಸ್ತಕ ವಿಮರ್ಶೆಯ ಬಗ್ಗೆ ಬಹಳ ಮುಖ್ಯವಾದ ಪ್ರಶ್ನೆ ಎತ್ತುತ್ತಾರೆ. ಪುಸ್ತಕ ವಿಮರ್ಶೆ ಕೇವಲ ಪರಿಚಯವೇ? ಪರಿಚಯವಾಗಿಯಷ್ಟೇ ಇರಬೇಕೆ? ಇದರಿಂದ ಕೊಳ್ಳುಗರನ್ನು ಪುಸ್ತಕ ಕೊಳ್ಳಲು ಪ್ರಚೋದಿಸಬೇಕೆ? ಎಂದು ಕೇಳಿಕೊಳ್ಳುತ್ತಾರೆ. ಆದರೆ ಈ ಪ್ರಶ್ನೆಗಳನ್ನು ಕೇಳಿಕೊಳ್ಳುವುದಷ್ಟಕ್ಕೆ ನಿಲ್ಲದೆ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಪುಸ್ತಕ ವಿಮರ್ಶೆಯ ಹಿಂದಿನ ಸಾಂಸ್ಕೃತಿಕ ಸಂದರ್ಭ ಇತಿಹಾಸಗಳನ್ನು ಕುರಿತು

ಆಲೋಚಿಸುತ್ತಾರೆ. ಜೊತೆಗೆ ಪುಸ್ತಕ ವಿಮರ್ಶಕರ ಜವಾಬ್ದಾರಿಯನ್ನು ಹೇಳುತ್ತಾರೆ. ಪುಸ್ತಕ ವಿಮರ್ಶಕರು ಪುಸ್ತಕವನ್ನು ಕೇವಲ ಪರಿಚಯ ಮಾಡಿಕೊಡುತ್ತಿಲ್ಲ ಎಂಬುದನ್ನು ತಿಳಿಸುತ್ತಾರೆ. ಅದಲ್ಲದೆ ಪುಸ್ತಕ ವಿಮರ್ಶೆ ಬೆಳೆಯಲು ಅದಕ್ಕೆ ಪ್ರಭಾವ ಬೀರಿದ ಹಲವು ಸಾಂಸ್ಕೃತಿಕ ಅನಿವಾರ್ಯತೆಗಳನ್ನು ಪಟ್ಟಿಮಾಡಿ ಪುಸ್ತಕ ವಿಮರ್ಶೆಯೂ, ಸಾಹಿತ್ಯ ವಿಮರ್ಶೆಯೂ ಒಂದೇ ಎಂದು ಸಾರ್ವತ್ರೀಕರಿಸುತ್ತಾರೆ. ಹಾಗಾಗಿ ಪುಸ್ತಕ ವಿಮರ್ಶೆ ಕೇವಲ ಪರಿಚಯವಷ್ಟೇ ಅಲ್ಲ ಎಂದು ಅದಕ್ಕೀರುವ ಸಾಂಸ್ಕೃತಿಕ ಜವಾಬ್ದಾರಿಗಳನ್ನು ಗುರುತಿಸುತ್ತಾರೆ. ಅದರ ಜೊತೆಯಲ್ಲಿ ಪುಸ್ತಕ ವಿಮರ್ಶಕರು ಎದುರಿಸಬಹುದಾದ ತೊಂದರೆಗಳನ್ನು, ಸಂಕಟಗಳನ್ನು ವಿಶ್ಲೇಷಿಸುತ್ತಾರೆ.

೪. ಎಲ್. ಎಸ್. ಶೇಷಗಿರಿರಾವ್‌ರವರು 'ಸಾಹಿತ್ಯ ಮತ್ತು ವಿಮರ್ಶೆ' ಎಂಬ ಲೇಖನದಲ್ಲಿ ಪುಸ್ತಕ ವಿಮರ್ಶೆ ಕುರಿತು ಹೀಗೆ ಹೇಳುತ್ತಾರೆ:

> *ಪುಸ್ತಕ ವಿಮರ್ಶೆಗಾಗಿ ಕೃತಿಗಳನ್ನು ಕಳಿಸಿದವರಿಗೂ, ಪತ್ರಿಕೆಗಳವರಿಗೂ ವಿಮರ್ಶೆ ಬೇಗನೇ ಅಚ್ಚಾಗಬೇಕು ಎಂಬ ಕಾತರ, ಕೊನೆಯ ಪಕ್ಷ ನಿರೀಕ್ಷಣೆ ಇರುವುದು ಸಹಜ. ಇದರಿಂದ ವಿಮರ್ಶಕನಿಗೆ ತಕ್ಕಷ್ಟು ಕಾಲಾವಕಾಶ ದೊರೆಯುವುದಿಲ್ಲ. ಒಂದು ಪುಸ್ತಕದ ವಿಮರ್ಶೆಗೆ ವಿಮರ್ಶಕರನ್ನು ಆಯ್ಕೆ ಮಾಡುವರನ್ನು ವಿಮರ್ಶೆಯ ಸ್ವರೂಪ ಹೊಂದಿಕೊಂಡಿರುತ್ತದೆ. ಹೀಗೆ ಆಯ್ಕೆ ಮಾಡುವವರದೇ ಒಲವುಗಳಿದ್ದರೆ ಸಹಜವಾಗಿ ಆ ಒಲವುಗಳು ಆಯ್ಕೆಯಲ್ಲಿ ಪ್ರತಿಬಿಂಬಿತವಾಗುತ್ತವೆ, ವಿಮರ್ಶೆಯನ್ನು ಪ್ರಭಾವಿಸುತ್ತವೆ. ಪತ್ರಿಕೆಗಳಲ್ಲಿ ವಿಮರ್ಶಾಭಾಗದ ಹೊಣೆ ಹೊತ್ತವರು ತಮ್ಮ ಬೇಕು ಬೇಡಗಳನ್ನು ಪ್ರತಿಧ್ವನಿಸುವ ವಿಮರ್ಶಕರನ್ನು ಆರಿಸಿ ತಮಗೆ ಬೇಕಾದವರಿಗೆ ಶ್ರೇಷ್ಠ ಸಾಹಿತಿ ಪಟ್ಟವನ್ನು ಕಟ್ಟಿರುವುದು ಇತರ ವಿಭಾಗಗಳ ಸೊಗಸಿನಿಂದ ಜನಪ್ರಿಯವಾಗಿರಬಹುದು, ಅಂತಹ ಪತ್ರಿಕೆಯ ವಿಮರ್ಶಾಭಾಗವೂ ಪತ್ರಿಕೆಯ ಜನಪ್ರಿಯತೆಯ ಕಾರಣದಿಂದ ಸಾವಿರಾರು ಮಂದಿಯ ಕಣ್ಣನ್ನು ಸೆಳೆಯುತ್ತದೆ. ಇಂತಹ ಲಾಭದ ಸ್ಥಾನಗಳಲ್ಲಿರುವವರು ಸಾಹಿತ್ಯ ಕೃತಿಗಳನ್ನು ಪ್ರಾಮಾಣಿಕವಾಗಿ ವಿಮರ್ಶೆ ಮಾಡಿಸದೇ ಹೋದರೆ, ಪತ್ರಿಕೆಯ ಇತರ ಉದ್ಯೋಗಿಗಳು ಗಳಿಸಿದ ಜನಪ್ರಿಯತೆ ಸಾಹಿತ್ಯದ ಮಟ್ಟಿಗೆ ವಿಷವಾಗುತ್ತದೆ. ಅಲ್ಲದೆ ಕೃತಿ ವಿಮರ್ಶೆಗೆ, ವಿಮರ್ಶಕನಿಗೆ ದೊರೆಯುವ ಸ್ಥಳಾವಕಾಶವೂ ತೀರ ಮಿತವಾದದ್ದು. ಸಾಹಿತ್ಯದಲ್ಲಿ ಎಷ್ಟೇ ಆಸಕ್ತಿ ಇರುವ ಸಂಪಾದಕರಾಗಲಿ, ಒಂದು ಕೃತಿಯ ವಿಮರ್ಶೆಗೆ ಎಷ್ಟು ಸ್ಥಳಾವಕಾಶ ಕೊಡಲು ಸಾಧ್ಯ? ಪತ್ರಿಕೆಗಳಲ್ಲಿ ಸಾಹಿತ್ಯ ವಿಮರ್ಶೆಗೆ ಮಿತಿಯನ್ನು ಕಲ್ಪಿಸುವ ಮತ್ತೊಂದು ಅಂಶವೆಂದರೆ, ಓದುಗರ ಪ್ರತಿಕ್ರಿಯೆ ಜನಪ್ರಿಯ ಲೇಖಕರ ಅಥವಾ ಪಂಥಗಳ ನಾಯಕರ ಕೃತಿಗಳನ್ನು ವಿಮರ್ಶಿಸುವ ವಿಮರ್ಶಕ, ಕೋಪಗೊಂಡ ಹಲವಾರು ಓದುಗರ ಪ್ರತಿಭಟನೆಯನ್ನು ಎದುರಿಸಲು ಸಿದ್ಧವಾಗಿರಬೇಕು. ಅವನಾದರೂ ಸಿದ್ಧನಾಗಿದ್ದಾನು; ಪತ್ರಿಕೆಯನ್ನು ನಡೆಸುವವರು, ಸಿಡಿಮಿಡಿಗುಟ್ಟುವ ಹಲವಾರು ವಾಚಕರು - ಒಬ್ಬ ವಿಮರ್ಶಕ ಇವರನ್ನು ತಕ್ಕಡಿಯಲ್ಲಿ ತೂಗುವುದು ಹೇಗೆ? ಅಲ್ಲದೆ ಖ್ಯಾತ ಪತ್ರಿಕೆಗಳಿಗೆ ಹತ್ತಾರು ಕೃತಿಗಳು ವಿಮರ್ಶೆಗಾಗಿ ಬಂದಾಗ ಪತ್ರಿಕೆ ನಡೆಸುವವರಾದರೂ ಹತ್ತಾರು ವಿಮರ್ಶಕರ ನಡುವೆ ಪುಸ್ತಕಗಳನ್ನು ಹಂಚಬೇಕಾಗುತ್ತದೆ. ಎಲ್ಲ ವಿಮರ್ಶಕರೂ ಸಮರ್ಥರೂ ಎಂದು ಹೇಳುವಂತಿಲ್ಲ. ಪತ್ರಿಕೆಗಳ ವಿಮರ್ಶೆ ಕೃತಿಯ ಮಾರಾಟವನ್ನು ಕೃತಿಕಾರನ ಭವಿಷ್ಯವನ್ನು ನಿರ್ಧರಿಸುವ ಪ್ರಭಾವಗಳಲ್ಲಿ ಒಂದಾದಾಗ ಸಹಜವಾಗಿ ಸಾಹಿತಿಯೂ ಅದನ್ನು ಲಕ್ಷಿಸಬೇಕಾಗುತ್ತದೆ ಪತ್ರಿಕೋದ್ಯಮ ವಿಮರ್ಶಕನ ಹೊಣೆಯನ್ನು ಹೆಚ್ಚಿಸಿದೆ.*[೪]

ಎಲ್.ಎಸ್. ಶೇಷಗಿರಿರಾವ್‌ರವರು 'ಕೃತಿಕಾರರಲ್ಲಿನ ಆತುರ, ಪುಸ್ತಕ ವಿಮರ್ಶಕರಲ್ಲಿನ ತಲ್ಲಣ, ಪತ್ರಿಕೆಗಳಲ್ಲಿನ ಧೋರಣೆ, ಅವುಗಳನ್ನು ಎದುರಿಸಬೇಕಾದ ಪುಸ್ತಕ ವಿಮರ್ಶಕರ ಸಂದಿಗ್ಧತೆ ಭಿನ್ನ ಭಿನ್ನ ರೀತಿಯ ಓದುಗರಿಂದ ಬರಬಹುದಾದ ಪ್ರತಿಕ್ರಿಯೆ ಇವುಗಳನ್ನೆಲ್ಲ ಇಲ್ಲಿ ಚರ್ಚಿಸುತ್ತಾರೆ. ಮೊದಲು

ಕೃತಿಕಾರರು ಬಯಸುವ ಕಾತುರ, ನಿರೀಕ್ಷಣೆಗಳನ್ನು ಗುರುತಿಸುತ್ತಾ ಅದರ ಹಿಂದಿನ, ಕೃತಿಕಾರರು ಬೆಳೆಯಲು ಬೇಕಾದ ಪ್ರೇರಣೆಯನ್ನು ಹುಡುಕಿಕೊಳ್ಳುತ್ತಿದ್ದಾರೆ. ಆದರೆ ಈ ಕಾತರ, ನಿರೀಕ್ಷಣೆ ಬಹಳ ಕಡಿಮೆ ಎಂದು ಗುರುತಿಸುತ್ತಾರೆ. ಇದರ ಹಿಂದೆಯೇ ಕಾಲಾವಕಾಶ ದೊರೆತರೆ ಒಳ್ಳೆಯದನ್ನು ನಿರೀಕ್ಷಿಸಬಹುದು ಎಂಬ ನಿಲುವನ್ನು ಇವರು ತೋರಿಸುತ್ತಾರೆ. ಆದರೆ ಇವುಗಳಷ್ಟೇ ಪುಸ್ತಕ ವಿಮರ್ಶೆಯನ್ನು ನಿರ್ಧರಿಸುವುದಿಲ್ಲ, ಪತ್ರಿಕೆ, ಪತ್ರಿಕೆ ಇಟ್ಟುಕೊಂಡ ನಿಲುವು, ಅವರು ನಿಯಮಿಸಿಕೊಳ್ಳುವ ಪುಸ್ತಕ ವಿಮರ್ಶಕರು, ಪುಸ್ತಕ ವಿಮರ್ಶಕರ ಮನೋಧರ್ಮ ಈ ಎಲ್ಲವು ಪುಸ್ತಕ ವಿಮರ್ಶೆ ಆಯ್ಕೆ ಮಾಡುವಿಕೆಯಲ್ಲಿ ಪಾತ್ರವಹಿಸುತ್ತವೆ ಎಂಬ ವಿಶ್ಲೇಷಣೆಗೆ ತೊಡಗುತ್ತಾರೆ. ಹಾಗಾದಾಗ ಪುಸ್ತಕ ವಿಮರ್ಶೆಯೆಂಬುದು ಒಂದೇ ನಿಲುವಿನಡಿ ಬೆಳೆಯುವುದಿಲ್ಲ. ಅದಕ್ಕೆ ಪ್ರಭಾವಿಸುವ ಹಲವಾರು ಪೂರಕವಾದ ವಾತಾವರಣ, ಸನ್ನಿವೇಶಗಳು ಪುಸ್ತಕ ವಿಮರ್ಶೆಯ ಸ್ವರೂಪ ಮತ್ತು ಅದರ ಹಿಂದಿನ ಹಿನ್ನೆಲೆಗಳಿಗೆ ಕಾರಣವಾಗುತ್ತವೆ.

ಜಿ. ಆರ್ಕೆ ಮಣಿಪಾಲ ಅವರು 'ಲೋಕಗ್ರಹಿಕೆ ಮತ್ತು ಅಭಿವ್ಯಕ್ತಿ' ಎಂಬ ಕೃತಿಯಲ್ಲಿ "*ಒಂದು ಸಾಹಿತ್ಯ ಕೃತಿ ಸಾಮಾಜಿಕ ಉಪವಸ್ತುವಾಗಿದ್ದು, ಅದರ ಬಳಕೆಯು ನ್ಯಾಯಬದ್ಧವಾದ ನೆಲೆಗಟ್ಟು ವಿಮರ್ಶಕರ ಪಾಲಿಗೆ ಆ ಕೃತಿನಿಷ್ಠ ಧೋರಣೆಯೇ ಆಗಿದೆ. ಆದರೆ ಇಂದು ವ್ಯಕ್ತಿ ನಿಷ್ಠ ವಿಮರ್ಶೆ ಕೃತಿಯಿಂದ ಎಷ್ಟು ದೂರ ಹೋಗಿಬಿಟ್ಟಿದೆ ಎಂದರೆ ಇಡಿಯ ವಿಮರ್ಶೆಯಲ್ಲಿ ಕೃತಿ ಒಂದು ನಿಮಿತ್ತ ಮಾತ್ರವಾಗಿದೆ; ಕೃತಿಯೇತರ ಅಂಶಗಳಿಗೆ ವಿಮರ್ಶಕನ ನಿಷ್ಠೆ ಸಲ್ಲುತ್ತದೆ. ವ್ಯಕ್ತಿಯ ಕೃತಿಕಾರನ ಜೀವನ ವೃತ್ತಿಪರ ಸಾಧನೆ, ಕೃತಿಕಾರ ವಿಮರ್ಶಕರ ಸಂಬಂಧ, ಸಲುಗೆ, ಸಜಾತಿ ಪ್ರೇಮ, ಮುಂತಾದವುಗಳ ಭಾವನಾತ್ಮಕ ನಿರೂಪಣೆಯೇ ವಿಮರ್ಶಕರ ಶಿಷ್ಟತೆ ವಿನಯವೆನಿಸುತ್ತದೆ. ಅಥವಾ ದಲಿತರು ಇಲ್ಲವೆ ಅಲ್ಪಸಂಖ್ಯಾತರು ಬರೆದುದೆಂಬ ಒಂದೇ ಕಾರಣಕ್ಕೆ ಕೃತಿಯನ್ನು ಉತ್ಪ್ರೇಕ್ಷಿಸಿ ಬರೆಯುವುದೇ ವಿಮರ್ಶಕನ ಪ್ರಗತಿಪರತೆಯೆನಿಸಿಕೊಳ್ಳುತ್ತದೆ. ಇದರ ಇನ್ನೊಂದು ಮುಖ ಪ್ರತಿಷ್ಠಿತ ಸಾಹಿತಿಗಳನ್ನು ಓಲೈಸಲಿಕ್ಕಾಗಿ, ಅವರ ಕೃತಿಗಳ ದೋಷವನ್ನು ಬೇಕೆಂದೇ ಮರೆಮಾಚುವ ಅಥವಾ ಹಗುರಾಗಿ ತಗೆದುಕೊಳ್ಳುವ ವಿಮರ್ಶಕ ವರ್ತಿಗಳ ಪ್ರವೃತ್ತಿಯು ವಿಮರ್ಶೆಯಲ್ಲಿ ಕಂಡುಬರುತ್ತದೆ.*"[*]

ಈ ಮೇಲಿನ ಉಲ್ಲೇಖದಲ್ಲಿ ಆರ್ಕೆ ಅವರು ಚರ್ಚಿಸಿದ ಪುಸ್ತಕ ವಿಮರ್ಶೆ ಮತ್ತು ಸಾಹಿತ್ಯ ವಿಮರ್ಶೆ ಬಗೆಗಿನ ಅಂಶಗಳನ್ನು ಹೀಗೆ ಗುರುತಿಸಬಹುದು. ಆರ್ಕೆ ಅವರು ಕೃತಿಯನ್ನು ಒಂದು ಸಾಮಾಜಿಕ ಉತ್ಪನ್ನವಾಗಿ ಗ್ರಹಿಸಿದ್ದಾರೆ. ಹಾಗಾಗಿ ಕೃತಿ ವಿಶ್ಲೇಷಣೆ ಇವರ ಪ್ರಕಾರ ಸಾಮಾಜಿಕ ವಿಶ್ಲೇಷಣೆ ಅಥವಾ ಸಮಾಜ ವಿಶ್ಲೇಷಣೆ ಆಗಿದೆ ಎಂದು ಗ್ರಹಿಸುತ್ತಾರೆ. ಇವರ ಇಲ್ಲಿನ ಚಿಂತನೆ ಮುಖ್ಯವಾಗಿ ಪುಸ್ತಕ ವಿಮರ್ಶೆ ಪಡೆದುಕೊಳ್ಳುತ್ತಿರುವ, ಪಡೆದುಕೊಂಡಿರುವ ಆಯಾಮವನ್ನು ಕುರಿತದ್ದಾಗಿದೆ. ಆರ್ಕೆಯವರು ಪುಸ್ತಕ ವಿಮರ್ಶೆ ಮುಖ್ಯವಾದ ಮೂಲಭೂತ ನಿಲುವುಗಳಿಂದ ಹೊರಳಿಕೊಂಡು ಆಗುವ ಅಪಾಯಗಳನ್ನು ಕುರಿತು ಚರ್ಚಿಸುತ್ತಾರೆ. ಪುಸ್ತಕ ವಿಮರ್ಶಕರು ಇಂದು ತಮ್ಮ ತಾತ್ವಿಕತೆಗಳನ್ನು ಮೀರಿರುವುದನ್ನು ಪ್ರಶ್ನಿಸಿಕೊಳ್ಳುತ್ತಾರೆ. ಈ ರೀತಿಯ ವಿಮರ್ಶೆಗಳಿಂದ ಅಂತಿಮವಾಗಿ ಪುಸ್ತಕ ವಿಮರ್ಶಕರು ಏನನ್ನು ನಿರೀಕ್ಷಿಸುತ್ತಿದ್ದಾರೆ ಮತ್ತು ಅವರ ಒಲವುಗಳು ಯಾವ ಕಡೆ ಬೆಳೆಯುತ್ತಿವೆ ಎಂಬುದನ್ನು ಇವರು ವಿಶ್ಲೇಷಿಸಿದ್ದಾರೆ. ಹಾಗೆಯೇ ಅವರು ಗುರುತಿಸಿಕೊಳ್ಳುವಂತೆ

'ಪ್ರಗತಿಪರತೆ' ಅಂದರೆ ಯಾವುದು? ಎಂಬ ತಾತ್ವಿಕ ಪ್ರಶ್ನೆಯನ್ನು ಎತ್ತುತ್ತಾರೆ. ಅದರ ಜೊತೆಯಲ್ಲಿಯೇ 'ಪ್ರಗತಿಪರತೆ' ಎಂದರೆ ಇದಲ್ಲ ಎಂಬ ಉತ್ತರವನ್ನು ಹುಡುಕುತ್ತಿದ್ದಾರೆ. ಹೀಗೆ ಅವರು ಚರ್ಚಿಸುವ ನೆಲೆಯಲ್ಲಿ ಅಲ್ಲಲ್ಲಿ ಪುಸ್ತಕ ವಿಮರ್ಶೆಯ ಬಗೆಗಿನ ಚಿಂತನೆಗಳಿವೆ. ಪುಸ್ತಕ ವಿಮರ್ಶೆ ಯಾಕೆ ಕೆಲವರ ಪುಸ್ತಕಗಳಿಗೆ ಮಾತ್ರ ಪ್ರಕಟವಾಗುತ್ತವೆ, ಅದರ ಹಿಂದಿನ ಉದ್ದೇಶಗಳೇನು? ಕೆಲವು ಕೃತಿಗಳ ದೋಷಗಳನ್ನು ಬೇಕೆಂದೇ ಮರೆ ಮಾಚುವ ಹಿಂದೆ ಯಾವ ರೀತಿಯ ಭಾವನಾತ್ಮಕ ಸಂಬಂಧ ಇದೆ? ಎಂಬ ಮಹತ್ವದ ಪ್ರಶ್ನೆಗಳನ್ನು ಎತ್ತುತ್ತಾರೆ. ಆದರೆ ಅದಕ್ಕೆ ಸರಳೀಕರಿಸಿಕೊಂಡ ಉತ್ತರಗಳನ್ನು ಕಂಡುಕೊಂಡಿದ್ದಾರೆ. ಪುಸ್ತಕ ವಿಮರ್ಶೆಯ ಹಿಂದೆ ಇರುವ ತಾಂತ್ರಿಕ ಒತ್ತಡ, ಅನಿವಾರ್ಯತೆ ಎಂಬ ಅಂಶಗಳನ್ನು ಗಮನಿಸಿದ್ದಾರೆ. ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ಈ ಮೇಲಿನ ಮಾತುಗಳನ್ನು ಹೇಳಿದ್ದರೂ ಅದು ತುಂಬಾ ಬೀಸಾದ ಹೇಳಿಕೆಯಾಗಿ ನಿಲ್ಲಬಹುದು. ಆದರೆ ಅದಕ್ಕೆ ಸಾಹಿತ್ಯ ವಿಮರ್ಶೆಯು ಹಲವು ಆಯಾಮಗಳಲ್ಲಿ ಚಾಚಿಕೊಂಡಿದ್ದು ಕಾರಣವಿರಬಹುದು.

ಹೆಚ್ಚು ನೇತ್ಯಾತ್ಮಕ ದೃಷ್ಟಿಯಲ್ಲಿ, ವಿರೋಧಿ ನೆಲೆಯಲ್ಲಿ ಪುಸ್ತಕ ವಿಮರ್ಶೆಯನ್ನು ಅರ್ಥೈಸಿರುವ ಆರ್ಕೆಯವರು 'ಪುಸ್ತಕ ವಿಮರ್ಶೆಯಲ್ಲಿ ಕೃತಿನಿಷ್ಠ ವಿಮರ್ಶೆಯ ಅಭಾವವನ್ನು ಗಮನಿಸಿದ್ದಾರೆ. ಅದು ವ್ಯಕ್ತಿ ನಿಷ್ಠ ವಿಮರ್ಶೆಯಾಗಿ ಬದಲಾಗಿರುವ ಸ್ಥಿತಿಯನ್ನು ಗುರುತಿಸಿ' ಇಂದು ವ್ಯಕ್ತಿ ನಿಷ್ಠ ವಿಮರ್ಶೆ ಕೃತಿಯಿಂದ ಎಷ್ಟುದೂರ ಹೋಗಿಬಿಟ್ಟಿದೆ ಎಂದರೆ ಇತ್ತೀಚಿನ ವಿಮರ್ಶೆಯಲ್ಲಿ ಕೃತಿ ಒಂದು ನಿಮಿತ್ತ ಮಾತ್ರವಾಗಿದೆ ಎಂಬ ನಿರ್ಣಯಕ್ಕೆ ಬರುತ್ತಾರೆ. ಈ ಕಾರಣದಿಂದ ಕೃತಿ ವಿಮರ್ಶೆ ಸ್ವರೂಪವು ವ್ಯಕ್ತಿನಿಷ್ಠ ಮಾದರಿಯಲ್ಲೇ ನಿಂತು ಬಿಟ್ಟಿದೆ ಎಂದು ದೂರುತ್ತಾರೆ. ಆದರೆ ಈ ರೀತಿಯ ಸಂದರ್ಭಗಳು ವಿಮರ್ಶೆಗಳಿಗೆ ಬಂದೊದಗುವುದು 'ಕೃತಿ ವಿಮರ್ಶಕರಿಗೆ ಆತ್ಮೀಯರು ಕಳುಹಿಸಿದ ಕೃತಿಗಳನ್ನು ವಿಮರ್ಶಿಸಬೇಕಾದ ಅನಿವಾರ್ಯತೆಯ ಸಂದರ್ಭದಿಂದ ಅಷ್ಟೇ. ಆದರೆ ಪತ್ರಿಕೆಗಳು, ಕೃತಿಗಳ ಲೇಖಕರನ್ನು ಗಮನಿಸದೆ ಬಂದ ಕೃತಿಗಳನ್ನು ವಿಮರ್ಶಕರಿಗೆ ಕಳುಹಿಸುತ್ತಿರುವುದರಿಂದ ಈ ರೀತಿಯ ತೊಂದರೆ ತಪ್ಪಿದೆ. ಅಲ್ಲಿ ಕೃತಿಕಾರರು ಗೌಣವಾಗಿ ಕೃತಿಯೇ ಮುಖ್ಯವಾಗುವುದರಿಂದ ಕೃತಿಯ ಕಡೆಗೆ ವಿಮರ್ಶಕರು ಗಮನಹರಿಸುತ್ತಾರೆ.

೬. ರಹಮತ್ ತರೀಕೆರೆಯವರು 'ಪುಸ್ತಕ ಬರೆವುದು ಅಪರಾಧ?' ಎಂಬ ಶೀರ್ಷಿಕೆಯಲ್ಲಿ 'ಪುಸ್ತಕ ವಿಮರ್ಶೆ'ಯನ್ನು ಕುರಿತು ಚರ್ಚಿಸುತ್ತಾರೆ.

ಇತ್ತೀಚೆಗೆ ಯಾರಾದರೂ ಪುಸ್ತಕಕ್ಕೆ ವಿಮರ್ಶೆ ಬಂದಿದೆ ಎಂದರೆ, ಅಂಥವರಿಗೆ ಸಂತಾಪ ಸೂಚಿಸುವಂಥ ವಾತಾವರಣ ನಿರ್ಮಾಣವಾಗಿಬಿಟ್ಟಿದೆ. ಪುಸ್ತಕ ಬರೆಯುವುದು ಒಂದು ಅಪರಾಧವೇನು? ಈ ಪ್ರಶ್ನೆ ಕೆಲವು ಕಡೆ ಬರುವ ವಿಮರ್ಶೆಗಳನ್ನು ಕಂಡಾಗ ಹುಟ್ಟಿದೆ ಯಾಕೆ ಹೀಗಾಗುತ್ತಿದೆ?

ಲೇಖಕರೆಂದರೆ ಕನ್ನಡ ತಾಯ ಸೇವೆಗೈಯ್ಯುವ ಅನುಗರು, ಕೇಡು ಬಯಸದ ಅಮಾಯಕರು, ಅವರ ಸೃಷ್ಟಿಶೀಲವಾದ ಸೂಕ್ಷ್ಮ ಮನಸ್ಸನ್ನು ಮುರಿಯಬಾರದು. ಎಂದೇನು ಯಾರೂ ರೋಮ್ಯಾಂಟಿಕ್ಕಾಗಿ ಭಾವಿಸಬೇಕಿಲ್ಲ. ಅನೈತಿಕತೆ, ಚಾಲಾಕಿತನ, ಹೆಸರು - ಹಣ - ಅಂತಸ್ತು ಪಡೆಯಲು ಏನೂ ಬೇಕಾದರೂ ಮಾಡಬಲ್ಲ ಭಂಡತನ ಅವರಲ್ಲೂ ಇದೆ. ಅವರೂ

ಈ ಸಮಾಜದ ಶಿಶುಗಳು. ಅವರ ಈ ವ್ಯಕ್ತಿತ್ವದಿಂದ ಮೂಡುವ ಕೃತಿಗಳು ಸಮಾಜದ ಮೇಲೆ ತಮ್ಮದೇ ಆದ ಪ್ರಭಾವ ಬೀರಬಲ್ಲವಾದ್ದರಿಂದ ಅವು ಸಾರ್ವಜನಿಕ ವಿಮರ್ಶೆಗೆ ಒಳಪಡಬೇಕಾದವು. ಆ ವಿಮರ್ಶೆ ವಿಮರ್ಶಕರಿಂದಲೊ, ಓದುಗರಿಂದಲೊ ಬರಬಹುದು. ಆದ್ದರಿಂದ ಪುಸ್ತಕ ವಿಮರ್ಶೆಯನ್ನು ಸಾರ್ವಜನಿಕ ಪ್ರತಿಕ್ರಿಯೆಯ ಒಂದು ಭಾಗವೆಂದೇ ಪರಿಗಣಿಸಬೇಕು.

ನಮ್ಮಲ್ಲಿ ಬರುವ ಪುಸ್ತಕ ವಿಮರ್ಶೆಗಳನ್ನೆಲ್ಲ ಬಹುಶಃ ಮೂರು ಮುಖ್ಯ ಮಾದರಿಗಳಲ್ಲಿ ಕ್ರೋಢಿಕರಿಸಿ ನೋಡಬಹುದೆಂದೆನಿಸುತ್ತದೆ. ಅವೆಂದರೆ 'ವರದಿ ಮಾದರಿ', 'ಹಾರೈಕೆ ಮಾದರಿ' ಮತ್ತು 'ಜಗಳದ ಮಾದರಿ'.

೧. ಮೊದಲನೆಯ ಮಾದರಿ ಈ ಪುಸ್ತಕದಲ್ಲಿ ಅದಿದೆ ಇದಿದೆ ಎಂದು ಕತೆ ಹೇಳುವಂಥದ್ದು. ಪುಸ್ತಕದ ಸ್ಥೂಲ ನೋಟ ಕೊಡುವ ಈ ವಿಮರ್ಶೆಗಳನ್ನು ತಟಸ್ಥ(?) ಧೋರಣೆಯನ್ನು ಅನುಸರಿಸುವ ಪತ್ರಿಕೆಗಳು ತಮ್ಮ ವಾರದ ವಿಮರ್ಶೆಗಳಲ್ಲಿ ಮಾಡಿಸುತ್ತವೆ. ಇಲ್ಲಿ ಪುಸ್ತಕಗಳ ಬಗ್ಗೆ ಒಂದು ಖಚಿತ ನಿಲುವು ತೆಗೆದುಕೊಂಡು ಮುಖಾಮುಖಿ ಮಾಡುವುದಕ್ಕಿಂತ ಯಾರನ್ನೂ ಎದುರು ಹಾಕಿಕೊಳ್ಳದ ಎಲ್ಲರಿಗೂ ಪ್ರಿಯವಾಗುವಂಥ ಲೋಕಾಭಿರಾಮ ಗುಣವಿರುತ್ತದೆ (ಇದೂ ಒಂದು ನಿಲುವು ತಾನೆ?) ತಾರತಮ್ಯಗಳಿಲ್ಲದೆ, ಈ ವಿಮರ್ಶೆಗಳು ಕೆಲವೊಮ್ಮೆ ಎಷ್ಟು ನಿರ್ಲಿಪ್ತತೆ ಜಡತೆಗಳಿಂದ ಕೂಡಿರುತ್ತವೆಂದರೆ, ಅವುಗಳ ಪಕ್ಕದಲ್ಲಿರುವ ವಾರ ಭವಿಷ್ಯದಲ್ಲಿ ಎಷ್ಟೋ ಜೀವಂತಿಕೆ ಮಿಸುಕಾಡುತ್ತಿರುತ್ತದೆ.

೨. ಹಾರೈಕೆ ಮಾದರಿಯ ವಿಮರ್ಶೆಗಳು ಸಾಮಾನ್ಯವಾಗಿ ಮುನ್ನುಡಿ - ಹಿನ್ನುಡಿಗಳಾಗಿರುತ್ತವೆ. ಸಾಮಾನ್ಯವಾಗಿ ಹಿರಿಯರಾದ, ಪ್ರಸಿದ್ಧರಾದ ಲೇಖಕರು, ಗಣ್ಯತೆಯಿಂದ ಕಿರಿಯ ಲೇಖಕನಿಗೆ ಬುದ್ಧಿವಾದ ಹೇಳುತ್ತಾ, ಸಾಹಿತ್ಯಲೋಕಕ್ಕೆ ಕೈ ಹಿಡಿದು ಪ್ರವೇಶಗೊಳಿಸುವಂತೆ ಇರುತ್ತವೆ. ಬಹಳ ಸಲ ಲೇಖಕರ ಜೊತೆಗಿನ ಸಂಬಂಧಗಳಿಂದ ಇಲ್ಲಿ ನಿಷ್ಠುರವಾದ ಮಾತುಗಳು ಇರುವುದಿಲ್ಲ.

೩. ನಿಜವಾಗಿಯೂ ಜೀವಂತಿಕೆ ಮತ್ತು ಸಮಸ್ಯೆಯಿರುವುದು ಮೂರನೆಯ ಮಾದರಿಯ ವಿಮರ್ಶೆಗಳಲ್ಲಿ, ಜೀವಂತಿಕೆ ಯಾಕೆಂದರೆ ಇವು ಕೃತಿಯನ್ನು ಗಂಭೀರವಾಗಿ ತೆಗೆದುಕೊಂಡು ಅವುಗಳ ರೂಪ, ತಾಂತ್ರಿಕ ನಿಲುವು, ಇವುಗಳ ಜತೆ ಜಗಳಕ್ಕಿಳಿದಿರುತ್ತವೆ. ತಮ್ಮ ತೀವ್ರತೆಯಿಂದ ತಾವು 'ಸರಿ' ಎಂದು ನಂಬಿದ ತಾತ್ವಿಕ ನಿಲುವೊಂದರ ಸಮ್ಮುಖದಲ್ಲಿ ಪ್ರಶ್ನೆಗಳನ್ನು ಎತ್ತುತ್ತ ಕಲಕಾಟ ಮಾಡಬಯಸುತ್ತವೆ. ಆದರೆ ಈ ಮಾದರಿಯ ವಿಮರ್ಶೆಗಳು ತಮ್ಮ ಅತಿಯಲ್ಲಿ ಸೃಷ್ಟಿ ಮಾಡುತ್ತಿರುವ ಒಂದು ಸಮಸ್ಯೆ ಈ ಹೊತ್ತು ಎದ್ದು ಕಾಣುತ್ತದೆ. ಅದೆಂದರೆ ಕೃತಿಯನ್ನು ಎದುರಾಳಿಯಂತೆ ಭಾವಿಸಿರುವುದು ಹಾಗೂ ಬೈದು ಬುದ್ಧಿ ಕಲಿಸಬೇಕು ಎಂಬ ಯಜಮಾನಿಕೆಯಲ್ಲಿ ಹುಟ್ಟಿಕೊಂಡಿರುವ ಕರ್ಕಶ ಶೈಲಿ ಪ್ರೀತಿಯನ್ನೇ ಕಳೆದುಕೊಂಡಂತಿರುವ ಈ ಮನೋಧರ್ಮಕ್ಕೆ ರಾಜಕಾರಣಿ - ಅಧಿಕಾರಿಗಳ ಭ್ರಷ್ಟತೆಯನ್ನು ಕುರಿತು ಝಾಡಿಸಿ ಬರೆಯುತ್ತ, ಬರೆಯುತ್ತಾ ರೂಢಿಸಿಕೊಂಡಿರುವ ಕಟು ಶೈಲಿಯೂ ಒಂದು ಕಾರಣವಿರಬೇಕು.

ಪುಸ್ತಕ ವಿಮರ್ಶೆಗೆ ಕೊಡಲಾಗಿರುವ ಇಡೀ ವರ್ಷದ ಶೀರ್ಷಿಕೆಗಳನ್ನು ಕುತೂಹಲಕ್ಕಾಗಿ ಒಂದು ಕಡೆ ಜೋಡಿಸಿ ನೋಡಿದರೆ ಕನ್ನಡದಲ್ಲಿ ಜೀವಂತವಾದುದು, ಚೈತನ್ಯಶೀಲವಾದುದು ಏನೂ ಹುಟ್ಟುತ್ತಲೇ ಇಲ್ಲವೇ ಎಂದು ಗಾಬರಿಯಾಗುತ್ತದೆ. ವ್ಯವಸ್ಥೆಯ ಜತೆ ಲೇಖಕ ಸಮುದಾಯ, ಬಹುಶಃ ಹಿಂದೆಂದಿಗಿಂತಲೂ ಹೆಚ್ಚು ಪ್ರಮಾಣದಲ್ಲಿ ಅನೈತಿಕ ಸಂಬಂಧ ಪಡೆದುಕೊಳ್ಳುತಿರುವ ಈ ಹೊತ್ತಿನಲ್ಲಿ ಅದರಲ್ಲೂ ಜೀವ ವಿರೋಧಿಯಾದ ಲೇಖಕರ ವಿಷಯದಲ್ಲಿ ತಾತ್ವಿಕವಾದ ಕಟುತ್ವ, ನಿಷ್ಠುರತೆ ತುಂಬ ಅಗತ್ಯವೇ ಆಗಿದೆ. ಆದರೆ ಈ ಕಟುತ್ವ ಮತ್ತು ನಿಷ್ಠುರತೆಗಳು 'ಚಚ್ಚಿಹಾಕುತ್ತೇನೆ' ಎಂಬ ದರ್ಪದಲ್ಲೇ ಹುಟ್ಟಿದಾಗ ಪ್ರತಿಕ್ರಿಯೆಗಳು ಲೇಖಕರಲ್ಲಿ, ಓದುಗರಲ್ಲಿ ಸಂವಾದವನ್ನು ಬೆಳಸುವುದಿಲ್ಲ. ಜಗಳಗಂಟ ಮಾದರಿಯ ಈ ಪುಸ್ತಕ ವಿಮರ್ಶೆ ಉದ್ದೇಶದಲ್ಲಿ ಗಂಭೀರವಾಗಿದ್ದರೂ ಅದರ ಆಳದಲ್ಲಿರುವ ನೆಗಟಿವ್ ಗುಣದಿಂದ, ಸಿನಿಕತೆಯಿಂದ ಸಂವಾದ ಬೆಳಸಲು ಸಾಧ್ಯವಾಗುತ್ತಿಲ್ಲ. ಕೃತಿಯನ್ನು ಸಂಗಾತಿಯಂತೆ ಸಮಾನವಾಗಿ ಗ್ರಹಿಸಿ ಮುಖಾಮುಖಿ ಮಾಡುವ, ಆ ಮೂಲಕ ಸಂವಾದ ಬೆಳೆಯುವ ಪರಿಸರವನ್ನು ಜತನದಿಂದ ಕಟ್ಟಿಕೊಳ್ಳುವುದು ಕೇವಲ ವಿಮರ್ಶಕರ ಕೆಲಸವಲ್ಲ.

ಲೇಖಕರನ್ನೊಳಗೊಂಡಂತೆ ಇಡೀ ಓದುಗ ಸಮುದಾಯದ ಡೆಮಾಕ್ರಟಿಕ್ ಹೊಣೆ, ಇಂಥ ಹೊಣೆಯೊಳಗೆ ಹುಟ್ಟುವ ಪುಟ್ಟ ಪುಸ್ತಕ ವಿಮರ್ಶೆ ಕೂಡ ತನ್ನ ಸುತ್ತಲಿನ ಸಾಹಿತ್ಯ, ಸಮಾಜ ರಾಜಕಾರಣ ಒಟ್ಟಾರೆ ಸಂಸ್ಕೃತಿಯನ್ನು ಗ್ರಹಿಸುವ ದೃಷ್ಟಿಕೋನದ ಭಾಗವಾಗಿ ಕಾಣಿಸಿಕೊಳ್ಳುತ್ತದೆ ಮತ್ತು ಚಿಂತಿಸುವ ಪರಿಸರವನ್ನು ಸೃಷ್ಟಿಸುತ್ತದೆ. ಆಗ 'ಜಗಳ' ಕೇವಲ ಜಗಳವಾಗಿರುವುದಿಲ್ಲ [೬]

ಇಲ್ಲಿ ಡಾ. ರಹಮತ್ ತರೀಕೆರೆಯವರು 'ಪುಸ್ತಕ ಬರೆವುದು ಅಪರಾಧವೆ' ಎಂದು ಕೇಳುತ್ತಲೇ, ಪುಸ್ತಕ ವಿಮರ್ಶೆಯಿಂದ ಸಂತಾಪ ಸೂಚಿಸುವ ವಾತಾವರಣ ಸೃಷ್ಟಿಯಾಗಿದೆ ಎಂದು ಪುಸ್ತಕ ವಿಮರ್ಶೆಯ ಚರ್ಚೆಗೆ ತೊಡಗುತ್ತಾರೆ. ಸಾಹಿತ್ಯ ಸೃಷ್ಟಿಕ್ರಿಯೆಯ ಹಿಂದೆ ಇರಬಹುದಾದ ಹಿನ್ನೆಲೆ ಒಂದು ಸಮಾಜದ ಉತ್ಪನ್ನವಾಗಿರುವುದರಿಂದ ಅವುಗಳು ವಿಮರ್ಶೆಗೆ ಒಳಪಡಬೇಕಾದವು, 'ಪುಸ್ತಕ ವಿಮರ್ಶೆ'ಯನ್ನು ಸಾರ್ವಜನಿಕ ಪ್ರತಿಕ್ರಿಯೆಯ ಭಾಗವೆಂದು ಪರಿಗಣಿಸಬೇಕು ಎಂದು ಹೇಳುತ್ತಾರೆ. ಇಲ್ಲಿನ ಪ್ರಶ್ನೆ ಸಾಹಿತ್ಯ ಸೃಷ್ಟಿಸುವವರ ಮನಸ್ಸು ಪುಸ್ತಕ ವಿಮರ್ಶೆಯನ್ನು ಗ್ರಹಿಸಿಕೊಳ್ಳಬೇಕಾದ ಕಡೆಗಿದೆ. ಸಾಹಿತ್ಯ ಸೃಷ್ಟಿಸುವವರು ಪುಸ್ತಕ ವಿಮರ್ಶೆಯನ್ನು 'ಸಾರ್ವಜನಿಕ ಪ್ರತಿಕ್ರಿಯೆ' ಎಂದು ಗುರುತಿಸಿಕೊಂಡಿಲ್ಲದಿರುವುದರಿಂದ ಎಂಬ ನಿಲುವಿಗೆ ಇವರು ಬರುತ್ತಾರೆ. ಇಲ್ಲಿಯವರಿಗೆ ಬಂದಿರುವ ಪುಸ್ತಕ ವಿಮರ್ಶೆಗಳನ್ನಿಟ್ಟುಕೊಂಡು 'ವರದಿ ಮಾದರಿ', 'ಹಾರೈಕೆ ಮಾದರಿ' ಮತ್ತು 'ಜಗಳ ಮಾದರಿ' ಎಂದು ಶೀರ್ಷಿಕೆಗಳಡಿಯಲ್ಲಿ ಚರ್ಚಿಸುತ್ತಾರೆ. ವರದಿ ಮಾದರಿಯಲ್ಲಿ ತಟಸ್ಥ ಧೋರಣೆಯನ್ನು, ಹಾರೈಕೆ ಮಾದರಿಯಲ್ಲಿ ಬುದ್ಧಿವಾದ, ಪ್ರವೇಶ ಮಾಡಿಸುವ ನಿಲುವನ್ನು, ಜಗಳದ ಮಾದರಿಯಲ್ಲಿ ಜೀವಂತಿಕೆ ಮತ್ತು ಅದರ ಸಮಸ್ಯೆಯ ಸ್ವರೂಪವನ್ನು ಇವರು ಗುರುತಿಸುತ್ತಾರೆ. ವರದಿ ಮಾದರಿಯ ತಟಸ್ಥ ಧೋರಣೆಯಿಂದ ಜೀವಂತಿಕೆ ನಾಶವಾಗಿದೆ ಎಂದೂ, ಹಾರೈಕೆ ಮಾದರಿಯಲ್ಲಿ ನಿಷ್ಠುರವಾದ ಮಾತುಗಳು ಇರುವುದಿಲ್ಲವೆಂದು ಈ ಮಾದರಿಗಳ ಮಿತಿಗಳನ್ನು ತರೀಕೆರೆಯವರು ಹುಡುಕುತ್ತಾರೆ. ಆದರೆ ಮೂರನೆಯ ಮಾದರಿಯಲ್ಲಿ ಜೀವಂತಿಕೆ ಇರುವುದನ್ನು ಜಗಳದ ಶೈಲಿಯ ತಾತ್ವಿಕ ವಾಗ್ವಾದಗಳಿಂದ ಎಂಬ ನಿಲುವಿನಲ್ಲಿ ಕಂಡಿರಿಸುತ್ತಾರೆ. ಅದರ ಜೊತೆಗೆ ಇದರಿಂದ ಎದುರಾಗುವ ಸಮಸ್ಯೆಯ ಜಟಿಲತೆಯನ್ನು ಕುರಿತು ಕೃತಿಯನ್ನು ಎದುರಾಳಿಯಂತೆ ಭಾವಿಸುವುದು, ಯಜಮಾನಿಕೆ ಬೆಳಸಿಕೊಳ್ಳುವುದು, ಬರವಣಿಗೆಯಲ್ಲಿನ ಕಟು ಶೈಲಿ ಇವುಗಳಿಂದ ರೂಪಿತವಾಗಿದೆ ಎನ್ನುತ್ತಾರೆ. ಇದರ ಹಿಂದೆ ರಾಜಕೀಯವಾದಂತಹ ಹಿನ್ನೆಲೆಗಳು ಕೆಲಸಮಾಡುತ್ತವೆ ಎಂಬ ನಿಲುವಿಗೆ ತರೀಕೆರೆಯವರು ಬರುತ್ತಾರೆ.

ಆದರೆ ಇವರು ಜಗಳದ ಮಾದರಿಯನ್ನು ಜೀವಂತಿಕೆಯ ಮಾದರಿ ಎಂದು ಗುರುತಿಸಿ ಎರಡನೇ ಭಾಗದಲ್ಲಿ ಮಾತ್ರ ಶೀರ್ಷಿಕೆಗಳನ್ನಿಟ್ಟುಕೊಂಡು ಕನ್ನಡದಲ್ಲಿ ಜೀವಂತವಾದುದು, ಚೈತನ್ಯಶೀಲವಾದುದು ಯಾವುದು ಇಲ್ಲವೆ ಎಂಬ ಪ್ರಶ್ನೆಗಳನ್ನೆತ್ತಿಕೊಂಡು ವಿಶ್ಲೇಷಿಸುತ್ತಾರೆ. ಇವರು ಮೊದಲನೇ ಹಂತದಲ್ಲಿ ಜಗಳದ ಮಾದರಿಯ ಅಗತ್ಯತೆಯನ್ನು ಹೇಳಿದವರು ಎರಡನೇ ಹಂತದಲ್ಲಿ ಜಗಳದ ಮಾದರಿಯ ಮಿತಿಗಳನ್ನು ಗುರುತಿಸುತ್ತಾರೆ. ಜಗಳದ ಮಾದರಿ ಉಂಟುಮಾಡುವ ಸಿನಿಕತನದಿಂದ ಸಂವಾದ ಬೆಳಸಲು

ಸಾಧ್ಯವಿಲ್ಲ ಎನ್ನುತ್ತಾರೆ. ಪುಸ್ತಕ ವಿಮರ್ಶೆಯ ಇಂಥ ಮಾದರಿಗಳಿಂದ ಉಂಟಾಗುವ ತೊಂದರೆಗಳನ್ನು ನಿವಾರಿಸಿಕೊಳ್ಳುವ ಹಲವಾರು ಮಾರ್ಗೋಪಾಯಗಳನ್ನು ಕುರಿತು ಚಿಂತಿಸುತ್ತಾರೆ. ಪುಸ್ತಕ ವಿಮರ್ಶೆ ಬಗೆಗೆ ಒಳ್ಳೆಯ ನಿಲುವು ಬೆಳೆಯಲು ವಿಮರ್ಶಕರು, ಲೇಖಕರು, ಓದುಗರು ಈ ಮೂವರ ಸಾಮುದಾಯಿಕ ಡೆಮಾಕ್ರಟಿಕ್ ಜವಾಬ್ದಾರಿಯನ್ನು ಹೊತ್ತವರಾಗಿರುತ್ತಾರೆ, ಎಂಬ ಸೂತ್ರವನ್ನು ನೀಡುತ್ತಾರೆ. ಈ ಮೂರು ಕೇಂದ್ರಗಳ ಪರಸ್ಪರ ಸಂವಾದ ಸಹಕಾರದಿಂದ ಜಗಳದ ಮಾದರಿ ಕೇವಲ ಜಗಳವಾಗುಳಿಯುವುದಿಲ್ಲ ಎಂಬಲ್ಲಿಗೆ ನಿಲ್ಲಿಸುತ್ತಾರೆ. ಅಂದರೆ ಆ ಜಗಳ ಮುಂದೆ ಹಲವಾರು ಆಯಾಮವನ್ನು ಪಡೆಯಬಹುದು ಎಂಬ ಇಂಗಿತವು ಆಗಿದೆ. ಈ ಚಿಂತಕರ ಮುಖ್ಯ ಅಂಶಗಳನ್ನು ಹೀಗೆ ಗುರುತಿಸಬಹುದೆನಿಸುತ್ತದೆ. ಪ್ರಸ್ತುತ ಸಂದರ್ಭದಲ್ಲಿ ಪುಸ್ತಕ ವಿಮರ್ಶೆ ಇರುವ ಸ್ಥಿತಿ, ಲೇಖಕ ಮತ್ತು ಪುಸ್ತಕ ವಿಮರ್ಶಕರ ನಡುವಿನ ಬಿಕ್ಕಟ್ಟುಗಳನ್ನು ಇವರು ಚರ್ಚಿಸುತ್ತಾರೆ. ಹಾಗೆಯೇ ಪುಸ್ತಕ ವಿಮರ್ಶೆಯ ಮುಖ್ಯ ಮೂರು ಮಾದರಿಗಳನ್ನು ಹೆಸರಿಸಿ ಎಲ್ಲ ಮಾದರಿಯ ಪುಸ್ತಕ ವಿಮರ್ಶೆಗಳು ಇದರಲ್ಲಿ ಒಳಗೊಳ್ಳುವ ಏಕಸೂತ್ರವನ್ನು ಹಾಕಿಕೊಟ್ಟಿದ್ದಾರೆ. ಪುಸ್ತಕ ವಿಮರ್ಶಕರಿಗೆ ವಿಮರ್ಶನ ಕಾರ್ಯ ಡೆಮಾಕ್ರಟಿಕ್ ಹೊಣೆಯ ಸ್ವರೂಪದ್ದಾದರೆ ಪುಸ್ತಕ ವಿಮರ್ಶೆಗಳು ಅಂಶತಃ ಭಿನ್ನವಾಗುತ್ತವೆ. ಆ ಕಾರಣದಿಂದ ಪುಸ್ತಕ ವಿಮರ್ಶೆಯಲ್ಲಿ ನಡೆಯುವ ವೈಯಕ್ತಿಕ ಜಗಳಗಳು ತಾತ್ವಿಕ ಜಗಳಗಳಾಗಿ ಮೂಡಬೇಕು ಎಂಬುದನ್ನು ಈ ಚಿಂತಕರು ಒತ್ತಿ ಹೇಳುತ್ತಾರೆ. ಹಾಗೆಯೇ ಇಲ್ಲಿಯವರೆಗೆ ಬಂದಿರುವ ಪುಸ್ತಕ ವಿಮರ್ಶೆಗಳನ್ನು ಶೀರ್ಷಿಕೆಗಳನ್ನು ಒಟ್ಟಿಗೆ ಸೇರಿಸಿದಾಗ ಒಟ್ಟು ಪರಿಣಾಮ ಸಾಹಿತ್ಯ ಜಡವಾದದ್ದರ ಸಂಕೇತವಾಗುವ ಅಪಾಯವನ್ನು ವಿವೇಚಿಸಿ 'ಪುಸ್ತಕ ವಿಮರ್ಶೆ'ಗಳು ಕೃತಿಗಳನ್ನು ನೇತ್ಯಾತ್ಮಕ ದೃಷ್ಟಿಯಲ್ಲಿ ನೋಡಿರುವ ರೀತಿಯನ್ನು ಪರ್ಯಾಲೋಚಿಸುತ್ತಾರೆ.

೭. ನಟರಾಜ ಹುಳಿಯಾರ್ ಅವರು 'ವಿಮರ್ಶೆಯೆಂಬ ಹೂಬಾಣ' ಎಂಬ ಲೇಖನದಲ್ಲಿ ಪ್ರಾಸಂಗಿಕವಾಗಿ ಪುಸ್ತಕ ವಿಮರ್ಶೆಯ ಬಗೆಗೆ ವಿಶ್ಲೇಷಿಸುತ್ತಾರೆ.

ಶಿವಮೊಗ್ಗದ ಕಾವ್ಯ ಕಮ್ಮಟದಲ್ಲಿ ಸಿಕ್ಕ ಉತ್ತರ ಕರ್ನಾಟಕದ ಉದಯೋನ್ಮುಖ ಕವಿಯೊಬ್ಬ 'ಉತ್ತರ ಕರ್ನಾಟಕ ಹಾಗೂ ಹೈದರಾಬಾದ್ ಕರ್ನಾಟಕ ಕಡೆಯ ಲೇಖಕರಿಗೆ ನಿಮ್ಮ 'ಲಂಕೇಶ್ ಪತ್ರಿಕೆ'ಯಲ್ಲಿ ಹೆಚ್ಚಿನ ಪ್ರಾಶಸ್ತ್ಯ ಇಲ್ಲವಲ್ಲ? ನಮ್ಮ ಕಡೆಯ ಲೇಖಕರ ಪುಸ್ತಕಗಳ ವಿಮರ್ಶೆ ನಿಮ್ಮಲ್ಲಿ ಅಷ್ಟಾಗಿ ಬರುವುದಿಲ್ಲವಲ್ಲ? ಎಂದು ಪ್ರಾಂತವಾರು ಪ್ಲೇಟು ಹಾಕಿದ. ಆ ಮುಗ್ಧ ಕವಿ ತನ್ನ ಕಡೆಯ ಹಿರಿಯ ಲೇಖಕರೆನಿಸಿಕೊಂಡವರು ಸಾಹಿತ್ಯಕ ಸಭೆಗಳಲ್ಲಿ ಮಾಡುವ ಇಂಥ ಪ್ರಾದೇಶಿಕ ಆರ್ತನಾದಗಳಿಂದ ಪ್ರೇರಿತನಾದಂತಿತ್ತು.

'ಲಂಕೇಶ್ ಪತ್ರಿಕೆ'ಯಲ್ಲಿ ಈ ಜಿಲ್ಲಾವಾರು - ಪ್ರದೇಶವಾರು ಗಣನೆಯೇನೂ ಇಲ್ಲಪ್ಪ ಎಂದು ಅವನನ್ನು ಸಮಾಧಾನ ಮಾಡಲೆತ್ನಿಸಿದ ನಾನು "ಈ ಬಗ್ಗೆ ನೀವು ಕೊರಗುವ ಅಗತ್ಯವೇ ಇಲ್ಲ ನಿಮ್ಮ ಕಡೆಯ ಲೇಖಕರ ಬಗ್ಗೆಯೇ ಬರೆಯಲೆಂದು ಮೀಸಲಾದ ಅಂಕಣಗಳು ಪ್ರಜಾವಾಣಿಯಲ್ಲಿ ಇವೆಯಲ್ಲ? ಪಟ್ಟಣಶೆಟ್ಟಿ, ಹುಬ್ಬಳ್ಳಿ, ಧಾರವಾಡದ ಲೇಖಕರ ಬಗ್ಗೆ ಬರೀತಾರೆ, ವೀರಣ್ಣ ದಂಡೆ ಗುಲಬರ್ಗಾ ಕಡೆಯ ಲೇಖಕರ ಬಗ್ಗೆ ಬರೀತಾರೆ" ಅಂದೆ.

"ಅಯ್ಯೋ ಅವರು ನಮ್ಮ ಕಡೆಯ ಲೇಖಕರನ್ನು ಬರೀ ಹೊಗಳಿ ಬರೀತಾರೆ, ಅದರಿಂದ ಏನು ಪ್ರಯೋಜನ" ಎಂದ ಆ ಕವಿ. ಆ ಭಾಗದ ಉಳಿದ ಕವಿಗಳು ಅವನು ಹೇಳಿದ್ದನ್ನು ಒಪ್ಪುವಂತೆ ಕತ್ತು ಹಾಕುತ್ತಿದ್ದರು.

ಇದು ಕೊಂಚ ಅಪರೂಪದ ಅಳಲು ಎನ್ನಿಸಿತು. ಈ ಯುವ ಕವಿಗಳು ವಿಮರ್ಶೆಗಾಗಿ ಹಾತೊರೆಯುತ್ತಿದ್ದರೇ ಹೊರತು ಮೆಚ್ಚುಗೆಗಲ್ಲ. ಸುಮ್ಮನೆ ತಮ್ಮ ಬೆನ್ನು ತಟ್ಟುವ, ರೈಲು ಹತ್ತಿಸುವ ಹಿರಿಯ ಲೇಖಕರ ಬಗ್ಗೆ ಅವರಲ್ಲಿ ತಾತ್ಸಾರ ಹಾಗೂ ಜಿಗುಪ್ಸೆಯಿದ್ದದ್ದು ಕುತೂಹಲಕರವಾಗಿತ್ತು. ಈಚೆಗೆ ಕನ್ನಡ ವಿಮರ್ಶೆಯ ಆರೋಗ್ಯದ ಬಗ್ಗೆ ಕೊಂಚ ಹೆಚ್ಚಾಗಿಯೇ ತಲೆ ಕೆಡಿಸಿಕೊಂಡಂತಿರುವ ಹಿರಿಯ ಕವಿ ರಾಮಚಂದ್ರಶರ್ಮರಿಗೆ ಈ ಯುವ ಕವಿಗಳು ನಿಜವಾದ ವಿಮರ್ಶೆಗಾಗಿ ತಹತಹಿಸುತ್ತಿದ್ದರ ಬಗ್ಗೆ ಹೇಳಬೇಕೆನ್ನಿಸಿತು.

ನವ್ಯಕವಿ ಬಿ.ಸಿ. ರಾಮಚಂದ್ರ ಶರ್ಮರು ಸುಮಾರು ಐವತ್ತು ವರ್ಷದಿಂದಲೂ ಕಾವ್ಯ ರಚನೆಯಲ್ಲಿ ತೊಡಗಿರುವವರು ವಿದೇಶಗಳಲ್ಲಿದ್ದು ಅಲ್ಲಿನ ಸಾಹಿತ್ಯಕ ಸಂಪ್ರದಾಯಗಳನ್ನು ಹತ್ತಿರದಿಂದ ಕಂಡವರು. ಆದರೆ ಸಾಹಿತ್ಯ ವಿಮರ್ಶೆಯ ಬಗ್ಗೆ, ಅದರಲ್ಲೂ ಮುಖ್ಯವಾಗಿ ತಮ್ಮ ಪುಸ್ತಕಗಳ ಬಗ್ಗೆ ಬಂದ ಅಷ್ಟು ಹಿತಕರವಲ್ಲದ ರಿವ್ಯೂಗಳ ಬಗ್ಗೆ, ಅವರಷ್ಟು ತಲೆ ಕೆಡಿಸಿಕೊಳ್ಳುವ ಹಾಗೂ ಅದನ್ನೇ ಮತ್ತೆ ಮತ್ತೆ ಸ್ವಮರುಕದಿಂದ ಉಲ್ಲೇಖಿಸುವ ಬೇರೆ ಲೇಖಕರನ್ನು ನಾನು ಕಂಡಿಲ್ಲ. ಕೆಲದಿನಗಳ ಕೆಳಗೆ ಪುಸ್ತಕ ಬಿಡುಗಡೆ ಸಮಾರಂಭವೊಂದರಲ್ಲಿ ಅವರು ಆಡಿದ ಮಾತುಗಳು ಈ ಬಗೆಯ ಸ್ವಮರುಕದಿಂದಲೇ ಹುಟ್ಟಿದಂತಿವೆ. "ತಮ್ಮ ವಿಮರ್ಶೆಯ ಮೂಲಕ ಲೇಖಕರಿಗೆ ಹಿಂಸೆ ನೀಡಿ ಸಂತೋಷ ಪಡುವ ವಿಕೃತ ಮನಸ್ಸಿನ ಜನ ಕನ್ನಡ ಸಾಹಿತ್ಯದಲ್ಲಿ ಕಾಣುತ್ತಿರುವುದು ದುರ್ದೈವದ ಸಂಗತಿ" ಎಂದು ವಾದಿಸಿರುವ ಶರ್ಮರು "ವಿಮರ್ಶಕರು ಲೇಖಕನನ್ನು ತನ್ನ ವಿಮರ್ಶೆ ಮೂಲಕ ಸದೆಬಡಿಯುವ ಕೆಲಸ ಮಾಡಬಾರದು" ಎಂದು ಸಲಹೆ ನೀಡಿದ್ದಾರೆ. ಇದನ್ನು ಓದಿದ ಸಹೃದಯರು ಕಠಾರಿ ಹಿಡಿದ ವಿಮರ್ಶಕರು ಮತ್ತು ಕುಠಾರ ಪ್ರಾಯ ಕವಿಗಳ ಸಂಘರ್ಷದ ಮುನ್ಸೂಚನೆ ಕಂಡು ಪುಳಕಗೊಂಡಿರಬಹುದು. 'ಕನ್ನಡ ಸಾಹಿತ್ಯ ಲೋಕದಲ್ಲಿ ಹಿಂಸೆ' ಎಂಬ ಥೀಸಿಸ್ ಮಾಡಲು ಯೂನಿವರ್ಸಿಟಿಗಳ ರಿಸರ್ಚ್ ಭಯೋತ್ಪಾದಕರು ತುದಿಗಾಲಲ್ಲಿ ನಿಂತಿರಬಹುದು!

ಶರ್ಮರು ತಮ್ಮ ಪುಸ್ತಕಗಳಿಗೆ ಬಂದ ಎರಡು ವಿಮರ್ಶೆಗಳಿಗೆ ವರ್ಷಗಟ್ಟಲೆ ಪ್ರತಿಕ್ರಿಯಿಸಿರುವ ರೀತಿಯನ್ನು ಗಮನಿಸಿದವರಿಗೆ ವಿಮರ್ಶೆಯ ಹಿಂಸೆಯ ಬಗ್ಗೆ ಅವರು ಮೊನ್ನೆ ಆಡಿರುವ ಮಾತುಗಳು ಅಚ್ಚರಿ ಹುಟ್ಟಿಸಲಾರವು. ಹತ್ತು ವರ್ಷದ ಕೆಳಗೆ ಶರ್ಮರ 'ದೆಹಲಿಗೆ ಬಂದ ಹೊಸವರ್ಷ' ಎಂಬ ಕವನ ಸಂಕಲನದ ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಕಿ.ರಂ. ನಾಗರಾಜ್ ಅವರು ಈ ಸಂಕಲನದ ಪದ್ಯಗಳ ಕೆಲವು ಸಮಸ್ಯೆಗಳನ್ನು ಕುರಿತು ಮಾತನಾಡಿದ್ದರು. ನಂತರ ಅನಂತಮೂರ್ತಿಯವರೂ ಶರ್ಮರ ಬೊಹಿಮಿಯನ್ ಪ್ರಜ್ಞೆಯ ಬಗ್ಗೆ ಮಾತಾಡುತ್ತಾ ಇದೇ ದಾಟಿ ಹಿಡಿದರು. ಸಮಾರಂಭದ ಕೊನೆಯಲ್ಲಿ ಮಾತಾಡಿದ ಶರ್ಮರು "ಪುಸ್ತಕ ಬಿಡುಗಡೆಯೆಂದರೆ ಶಾಲಿನಲ್ಲಿ ಎಕ್ಕಡ ಸುತ್ತಿ ಬಾರಿಸುವುದು ಎಂದು ಕಾಣುತ್ತದೆ" ಎಂದು ವ್ಯಂಗ್ಯವಾಗಿ ನಗಲೆತ್ನಿಸಿದರು. ಆದರೆ ಅವರಿಗೆ ನಗಲು ಆಗಲಿಲ್ಲ. ಇದಾದ ಹತ್ತು ವರ್ಷ ಕಾಲ ಶರ್ಮರು 'ದೆಹಲಿಗೆ ಬಂದ ಹೊಸವರ್ಷ' ಸಂಕಲನದ ಬಗ್ಗೆ ಕಿ.ರಂ. ಮಾಡಿದ ಟೀಕೆಯನ್ನೇ ಹಿಡಿದುಕೊಂಡು ಸಮಯ ಸಿಕ್ಕಾಗಲೆಲ್ಲಾ ತಮಾಷೆಯಾಗಿ (ಅಂದರೆ ಸೀರಿಯಸ್ಸಾಗಿ!) ಗೊಣಗುತ್ತಲೇ ಇದ್ದರು. ಕೊನೆಗೂ ಕಿ.ರಂ.ಗೆ ಬಿಡುಗಡೆಯಾದದ್ದು ಆ ಜಾಗವನ್ನು ವಿಮರ್ಶಕ ಯೋಗಪ್ಪನವರ್ ಆಕ್ರಮಿಸಿಕೊಂಡಾಗ 'ಲಂಕೇಶ್ ಪತ್ರಿಕೆ'ಯಲ್ಲಿ ಶರ್ಮರ 'ಸಪ್ತಪದಿ' ಕವನ ಸಂಕಲನವನ್ನು ವಿಮರ್ಶಿಸುತ್ತಾ ಯೋಗಪ್ಪನವರ್ ಇದು 'ಸಂಪ್ರದಾಯಸ್ಥ ಮನಸ್ಸಿನ ಆಮದು ಸಂವೇದನೆ' ಎಂದು ಬರೆದರು. ಸರಿ, ಶರ್ಮರು ಸಂದರ್ಭ ಸಿಕ್ಕಾಗಲೆಲ್ಲಾ ಈ ರಿವ್ಯೂವನ್ನೇ ರಿವ್ಯೂ ಮಾಡತೊಡಗಿದರು! ಶರ್ಮರ ಟಿಪಿಕಲ್ ತಮಾಷೆಯ ಧಾಟಿ ಇದು ಎಂದು ಕೆಲವರೆಂದರೂ, ಶರ್ಮರು ಈ ರಿವ್ಯೂವನ್ನು ತಮ್ಮ ಕವನ ಸಂಕಲನದ ವಿರುದ್ಧದ ಬ್ರಹ್ಮಾಸ್ತ್ರವೆಂಬಂತೆಯೇ ಭಾವಿಸಿ ಪ್ರತ್ಯಸ್ತ್ರ ಬಿಡಲೆತ್ನಿಸುತ್ತಿದ್ದುದು ಎದ್ದು ಕಾಣುವಂತಿತ್ತು.

ಶರ್ಮರ ಜೊತೆಗಿನ ಮಾತುಕತೆಯಲ್ಲೊಮ್ಮೆ ಈ ವಿಚಾರ ಮತ್ತೆ ಬಂದಾಗ "ಈ ರಿವ್ಯೂಗಳನ್ನು ಯಾಕಿಷ್ಟು ಸೀರಿಯಸ್ಸಾಗಿ ತೆಗೆದುಕೊಳ್ಳುತ್ತೀರಿ, ರಿವ್ಯೂ ಎನ್ನುವುದು ಒಂದು ಪ್ರತಿಕ್ರಿಯೆ ಅಷ್ಟೇ ಎಂದರೆ "ನಿನಗೆ ನನ್ನ ನೋವು ಗೊತ್ತಾಗಲ್ಲ, ಹಾಗೆ ಇದನ್ನೆಲ್ಲ ಸಲೀಸಾಗಿ ತೆಗೆದುಕೊಳ್ಳೋಕೆ ನಾನು ಸಾಹಿತ್ಯದ ವಿದ್ಯಾರ್ಥಿ ಅಲ್ಲ" ಎಂದರು. ಅದು ನಿಜವಿರಬಹುದು

ಸಾಹಿತ್ಯದ ವಿದ್ಯಾರ್ಥಿಗಳಲ್ಲದ ಹಲವರು ಸಂತೆಯ ಬೈಗುಳಕ್ಕೂ ಸಾಹಿತ್ಯ ವಿಮರ್ಶೆಗೂ ವ್ಯತ್ಯಾಸವನ್ನೇ ಕಾಣದವರಂತೆ ವರ್ತಿಸುತ್ತಿರುತ್ತಾರೆ. ಆದರೆ ಶರ್ಮರ ಸ್ಥಿತಿ ಇಷ್ಟು ಹೋಪ್‌ಲೆಸ್ ಅಲ್ಲ. ಯಾಕೆಂದರೆ ಶರ್ಮರು ಕಾವ್ಯವೆಂದರೇನು ಎಂಬುದರ ಬಗ್ಗೆ ತಮ್ಮದೇ ಆದ (ಸ್ವಲ್ಪ ಹಳೆಯದಾದ) ಕಲ್ಪನೆಗಳನ್ನಿಟ್ಟುಕೊಂಡಿರುವವರು. ಅವರ ಕಾವ್ಯಕಲ್ಪನೆಯ ಪ್ರಕಾರ ಅನೇಕರು ಕವಿಗಳೇ ಅಲ್ಲ. ಉದಾಹರಣೆಗೆ ರಾಮಾನುಜನ್, ಅನಂತಮೂರ್ತಿ ಮುಂತಾದವರು ಬರೆಯುವುದು ಕಾವ್ಯವೇ ಅಲ್ಲ ಎಂದು ಅವರು ಒಮ್ಮೊಮ್ಮೆ ತಮಾಷೆಯಾಗಿ, ಇನ್ನು ಕೆಲವು ಸಲ ಗಂಭೀರವಾಗಿ ಹೇಳಿರುವುದನ್ನು ಕೇಳಿಸಿಕೊಂಡಿದ್ದೇನೆ. ಅದೇ ರೀತಿ ಶರ್ಮರು ಕವಿಯೇ ಅಲ್ಲ ಅನ್ನುವವರೂ ಇದ್ದಾರೆ. ಆ ಮಾತು ಹಾಗಿರಲಿ ಶರ್ಮರು ಸಾಹಿತ್ಯಕ ಸಂಗತಿಗಳು, ಸಾಹಿತಿಗಳ ಬಗ್ಗೆ ನಿಷ್ಠುರವಾಗಿ ಮಾತಾಡಬಲ್ಲವರು. ಇತರರ ಕಾವ್ಯವನ್ನು ಅವರು ಉಗ್ರವಾಗಿ ಡಿಸ್‌ಮಿಸ್ ಮಾಡಬಲ್ಲರು. ಕ್ಯಾಸೆಟ್ ಕವಿಗಳು ಹಾಗೂ ಹನಿಗವಿಗಳನ್ನು ಅವರಷ್ಟು ನಿರಂತರವಾಗಿ ಗೋಳು ಹೊಯ್ದುಕೊಂಡವರು ಯಾರೂ ಇಲ್ಲ. ಸಾಹಿತ್ಯ ಪರಿಷತ್ತಿನ ಸಮಾರಂಭವೊಂದರಲ್ಲಿ ಕ್ಯಾಸೆಟ್ ಕವಿಗಳನ್ನೆಲ್ಲ ದಾಸಕವಿಗಳೆಂದು ಕರೆದು ಲಕ್ಷ್ಮೀನಾರಾಯಣದಾಸ, ಲಕ್ಷ್ಮಣದಾಸ, ದೊಡ್ಡರಂಗದಾಸ, ವ್ಯಾಸದಾಸ ಎಂದು ಗೇಲಿಮಾಡಿ ಈ ಕಾವ್ಯನಾಮಗಳಿಗೆ ಪ್ರಚಾರ ಕೊಟ್ಟವರೂ, ಕ್ಯಾಸೆಟ್ ಕಾವ್ಯ ಕಾವ್ಯವೇ ಅಲ್ಲ ಎಂದು ದಣಿವರಿಯದೆ ಪ್ರತಿಪಾದಿಸುತ್ತಿರುವವರೂ ಅವರೇ. ಹೀಗೆ ಅವರು ಉಗ್ರ ಟೀಕೆ ಮಾಡುವುದು ಗಂಭೀರ ಕಾವ್ಯದ ಬಗ್ಗೆ ಅವರಿಗಿರುವ ಕಾಳಜಿಯಿಂದಲೇ ಎಂದು ನನ್ನಂಥ ಅನೇಕ ಸಾಹಿತ್ಯಾಸಕ್ತರು ನಂಬುತ್ತಾರೆ. ಮೊನ್ನೆ ತಾನೆ ಅವರೊಡನೆ ಹಿರಿಯ ವಿಮರ್ಶಕ ದಿವಂಗತ ಕೆ. ನರಸಿಂಹಮೂರ್ತಿಯವರ ಬಗ್ಗೆ ಹರಟುತ್ತಿದ್ದಾಗ, ನರಸಿಂಹಮೂರ್ತಿ ಬರಬರುತ್ತಾ ವಿಮರ್ಶೆಯಲ್ಲಿ ಸಂಭಾವಿತತನ ತೋರಿಸಿ ತೆಳುವಾದರೆಂದು ಶರ್ಮರು ಹೇಳಿದ್ದರು...

ಇಷ್ಟೆಲ್ಲ ವಿಮರ್ಶಾತ್ಮಕವಾಗಿರಬಲ್ಲ ಶರ್ಮರು ತಮ್ಮ ಕಾವ್ಯದ ಬಗ್ಗೆ ತಮಗೆ ಅಷ್ಟು ಸಮ್ಮತವಲ್ಲದ ಇನ್ನೊಂದು ಅಭಿಪ್ರಾಯವಿದೆ ಎಂದಾಕ್ಷಣ, ಕನ್ನಡ ವಿಮರ್ಶೆಯಲ್ಲಿ ಹಿಂಸೆ ತಾಂಡವವಾಡುತ್ತಿದೆ ಎನ್ನುತ್ತಾರೆ. ಇವತ್ತಿಗೂ ಶರ್ಮರು ಬೇರೆ ಲೇಖಕರ ಯಾವುದಾದರೂ ಪುಸ್ತಕಕ್ಕೆ ಯಾವುದೋ ವಿಮರ್ಶೆಯಿಂದ ಅನ್ಯಾಯವಾಗಿದೆ ಎಂದು ಹೇಳಿದ್ದಾಗಲೀ ಬರೆದದ್ದಾಗಲೀ ನನಗೆ ನೆನಪಿಲ್ಲ. ಇನ್ನುಳಿದ ನವ್ಯಕವಿ - ವಿಮರ್ಶಕರಂತೆ ತಮ್ಮ ಗದ್ಯ ಬರಹಗಳಲ್ಲಿ ಪ್ರಖರ ವಿಮರ್ಶಾ ಪ್ರಜ್ಞೆಯನ್ನು ಕೂಡ ಶರ್ಮರು ಈವರೆಗೆ ಪ್ರಕಟಿಸಿದಂತಿಲ್ಲ. ಆದರೆ ತಮ್ಮ ಕೃತಿಗಳಿಗೆ ವಿಮರ್ಶೆಯಿಂದ ಅನ್ಯಾಯವಾಗಿದೆಯೆಂದು ಗೊಣಗುವುದನ್ನು ಮಾತ್ರಬಿಟ್ಟಿಲ್ಲ.

ಅಲ್ಲಲ್ಲಿ ಕಾಣುವ ಕೆಲವರ ಉದಾಹರಣೆಗಳನ್ನು ಬಿಟ್ಟರೆ, ಕನ್ನಡ ಪುಸ್ತಕ ವಿಮರ್ಶೆ ಒಟ್ಟಾರೆಯಾಗಿ ಹಾವೂ ಸಾಯಬಾರದು, ಕೋಲೂ ಮುರಿಯಬಾರದು ಎಂಬ ಧಾಟಿಯಲ್ಲೇ ಇದೆ, ಹಾಗೂ ವಿಮರ್ಶೆ ಬರೆಯುವ ಅನೇಕರು ಸಹಬೋಜನದ ವಿರಾಮ ಶೈಲಿಯನ್ನು ಆನಂದದಿಂದ ಮೈಗೂಡಿಸಿಕೊಂಡೇ ಮುಂದುವರಿದಿದ್ದಾರೆ. ಕನ್ನಡದಲ್ಲಿ ವಿಮರ್ಶೆ ಇನ್ನಷ್ಟು ಖಚಿತವಾಗಬೇಕು, ಆಳವಾಗಬೇಕು, ನಿಷ್ಠುರವಾಗಬೇಕು ಎಂದು ಗಂಭೀರ ಸಾಹಿತ್ಯಾಭ್ಯಾಸಿಗಳು ಬಯಸುತ್ತಿದ್ದರೆ, ಶರ್ಮರಂಥ ಹಿರಿಯ ಕವಿಗಳು ವಿಮರ್ಶಕರು ಲೇಖಕರನ್ನು ಹಿಂಸಿಸುತ್ತಿದ್ದಾರೆ ಎಂದು ಗೊಣಗುತ್ತಿದ್ದಾರೆ. ವಿಮರ್ಶೆಯ ಹೂಬಾಣಗಳನ್ನು ತಯಾರಿಸಲು ಶರ್ಮರು ಕೊಟ್ಟಿರುವ ಕರೆ ಪರಸ್ಪರ 'ಸಹಕಾರಿ ಮನೋಭಾವ'ದ ವಿಮರ್ಶಕರು ಹಾಗೂ ಲೇಖಕರುಗಳಲ್ಲಿ ಭಯಂಕರ ಪುಳಕವನ್ನೇನೋ ಹುಟ್ಟಿಸಿರಬಹುದು. ಆದರೆ ಹಾಗೆ ಹೂಬಾಣಗಳು ಹೊರಬೀಳಲು ಶುರುವಾದ ತಕ್ಷಣ ಗೊಣಗುವವರ ಸಾಲಿನಲ್ಲಿ ಮೊದಲು ಕಾಣಿಸುವವರು ಕೂಡ ಶರ್ಮರೇ ಎಂಬುದೇ ನನ್ನ ಊಹೆ. ಕಾರಣ, ತಮ್ಮ 'ಸಮಗ್ರ ಕಾವ್ಯ'ಕ್ಕೆ ಮುನ್ನುಡಿ ಬರೆದ ಎಚ್. ಎಸ್. ರಾಘವೇಂದ್ರರಾವ್ ತಮ್ಮ ಕಾವ್ಯವನ್ನು ತೀರಾ ಹೊಗಳಿಬಿಟ್ಟಿದ್ದಾರೆಂದು ಸ್ವತಃ ಶರ್ಮರೇ ದೂರವುದನ್ನು ನಾನೇ ಅನೇಕ ಸಲ ಕೇಳಿಸಿಕೊಂಡಿದ್ದೇನೆ."[2]

ಇಲ್ಲಿ ನಟರಾಜ ಹುಳಿಯಾರ್‌ರವರು ಪ್ರಾಂತೀಯವಾದ ಪಕ್ಷಪಾತಗಳನ್ನಿಟ್ಟಿಕೊಂಡು ಪುಸ್ತಕ ವಿಮರ್ಶೆಗೆ ಸಂಬಂಧ ಕಲ್ಪಿಸುತ್ತಿದ್ದಾರೆ. ಪುಸ್ತಕ ವಿಮರ್ಶೆಯಲ್ಲಿ ಪ್ರತ್ಯೇಕವಾದ ಯಾವುದೇ ಗಣನೆ

ಇಲ್ಲವೆಂಬ ಉತ್ತರದಿಂದ ಹೊರಡುತ್ತಾರೆ. ಇಲ್ಲಿ ಪುಸ್ತಕ ವಿಮರ್ಶೆಯ ಮಹತ್ವದ ಬಗ್ಗೆ ಚರ್ಚೆಯಿದೆ. ಬೆಂಗಳೂರು ಕೇಂದ್ರಿತ ಪತ್ರಿಕೆಯ ಬಗೆಗೆ, ಉತ್ತರ ಕರ್ನಾಟಕದವರು ಕೇಳುವ ಪ್ರಶ್ನೆ, ಪುಸ್ತಕ ವಿಮರ್ಶೆ ಒಟ್ಟು ಬೆಂಗಳೂರು ಕೇಂದ್ರಿತವಾಗಿಯೇ ಇವೆ ಎಂಬುದನ್ನು ಸೂಚಿಸಬಹುದೆನಿಸುತ್ತದೆ. ಇದರ ಜೊತೆಯಲ್ಲಿ ಆ ಪ್ರದೇಶದವರೇ ಮಾಡುತ್ತಿರುವ ವಿಮರ್ಶೆಯಲ್ಲಿ 'ಮೌಲ್ಯಯುತ ವಿಮರ್ಶೆ'ಯಿಲ್ಲವೆಂಬ, ಅದರಿಂದ ಪ್ರಯೋಜನವಿಲ್ಲವೆಂಬ ನಿಲುವು ವ್ಯಕ್ತವಾಗಿದೆ. ಅಂದರೆ ಇಲ್ಲಿ ಪುಸ್ತಕ ವಿಮರ್ಶೆಯೆಂಬುದು ಕೇವಲ ಹೊಗಳಿಕೆಯಲ್ಲ ಅದೊಂದು ಮೌಲ್ಯಯುತವಾದ ಪ್ರತಿಕ್ರಿಯೆ ಎಂಬ ಅರ್ಥಸೇರುತ್ತದೆ. ಅಂದರೆ ಕವಿಗಳು ವಿಮರ್ಶೆಗಾಗಿ ಹಾತೊರೆಯುತ್ತಿದ್ದರೇ ಹೊರತು ಮೆಚ್ಚುಗೆಗಲ್ಲ ಎಂಬುದು ಒಟ್ಟಾರೆ ಪುಸ್ತಕ ವಿಮರ್ಶೆಯ ಬಗೆಗಿನ ವ್ಯಾಪ್ತಿಯನ್ನು ವಿಸ್ತರಿಸುತ್ತಿದೆ.

ಈ ಚಿಂತಕರು ಇದರ ಜೊತೆಗೆ ಒಬ್ಬ ಕೃತಿಕಾರರನ್ನಿಟ್ಟುಕೊಂಡು ಪುಸ್ತಕ ವಿಮರ್ಶೆ ಕೇವಲ ಹೊಗಳಿಕೆಯಲ್ಲ ಎಂಬ ಚರ್ಚೆ ಪ್ರಾರಂಭಿಸುತ್ತಾರೆ "ತಮ್ಮ ವಿಮರ್ಶೆಯ ಮೂಲಕ ಲೇಖಕರಿಗೆ ಹಿಂಸೆ ನೀಡಿ ಸಂತೋಷಪಡುವ ವಿಕೃತ ಮನಸ್ಸಿನ ಜನ ಕನ್ನಡ ಸಾಹಿತ್ಯದಲ್ಲಿ ಕಾಣುತ್ತಿರುವುದು ದುರ್ದೈವದ ಸಂಗತಿ" ಎಂಬ ನಿಲುವಿರುವ ಕೃತಿಕಾರರು ಪುಸ್ತಕ ವಿಮರ್ಶೆಯನ್ನು "ವಿಮರ್ಶಕನು ಲೇಖಕನನ್ನು ತಮ್ಮ ವಿಮರ್ಶೆಯ ಮೂಲಕ ಸದೆ ಬಡಿಯುವ" ತಂತ್ರವೆಂದು ಭಾವಿಸಿದಂತಿದೆ. ಹೀಗಾಗಿ ಕೃತಿಕಾರರು ಇಂತಹ ಕೆಲಸ ಮಾಡಬಾರದೆಂದು ಪುಸ್ತಕ ವಿಮರ್ಶಕರಿಗೆ ಆದೇಶಿಸುತ್ತಾರೆ. ಇಂಥ ಪುಸ್ತಕ ವಿಮರ್ಶೆಯನ್ನು ಈ ಚಿಂತಕರು "ಕನ್ನಡ ಸಾಹಿತ್ಯ ಲೋಕದಲ್ಲಿ ಹಿಂಸೆ" ಎಂಬ ಹೊಸ ಪರಿಕಲ್ಪನೆ ನೀಡಿ ಇದರ ಬಗ್ಗೆ ಲೇಖಕರಿಗಿರುವ ನಿಲುವನ್ನು ಸ್ಪಷ್ಟಪಡಿಸುತ್ತಾರೆ. ಅಂದರೆ ಇದರ ಹಿಂದೆ ಪುಸ್ತಕ ವಿಮರ್ಶೆ ಕೃತಿಕಾರರಿಗೆ ವಿಮರ್ಶೆಯ ಹಿಂಸೆಯನ್ನು ಹುಟ್ಟುಹಾಕುತ್ತಿದೆ ಎಂಬ ಅಭಿಪ್ರಾಯವು ತಳೆಯುತ್ತಿದೆ. ಕೃತಿಯ ಬಗೆಗೆ ಕಟುವಾಗಿ, ನಿಷ್ಪಕ್ಷಪಾತವಾಗಿ ಮಾತಾಡುವುದು ಲೇಖಕರಿಗೆ "ಶಾಲಿನಲ್ಲಿ ಎಕ್ಕಡ ಸುತ್ತಿ ಬಾರಿಸುವುದಾಗಿ' ಕಾಣುತ್ತದೆ. ಇಂಥ ಸಂದರ್ಭದಲ್ಲಿ ಲೇಖಕರು ರಿವ್ಯೂವನ್ನು ರಿವ್ಯೂವಾಗಿ ಮಾಡಿ ಹರಡುವ ರೀತಿಯನ್ನು ಈ ಚಿಂತಕರು ವಿಶ್ಲೇಷಿಸುತ್ತಾರೆ. ಆದರೆ ಪುಸ್ತಕ ವಿಮರ್ಶೆಯೆನ್ನುವುದು 'ಒಂದು ಪ್ರತಿಕ್ರಿಯೆ'ಯಾಗಿ ಸ್ವೀಕರಿಸಬೇಕೆಂಬ ಒತ್ತಾಯವನ್ನು ಲೇಖಕರಲ್ಲಿಗೆ ಭಿನ್ನವಿಸಿಕೊಳ್ಳುತ್ತಾರೆ. ಅದರ ಜೊತೆಗೆ 'ಸಾಹಿತ್ಯ ವಿಮರ್ಶೆ ಸಂತೆಯ ಬೈಗುಳವಲ್ಲ' ಎಂಬುದನ್ನು ಹೇಳುತ್ತಾರೆ. ಇದರ ಹಿಂದಿನ ಚಿಂತನೆಯನ್ನು ಗಮನಿಸಿದರೆ ಪುಸ್ತಕ ವಿಮರ್ಶೆಯೆಂಬುದು ಅತಿನಿಷ್ಠುರ ಮತ್ತು ಮೌಲ್ಯ ವಿವೇಚನೆಗೆ ತೊಡಗಿಕೊಂಡಾಗ ಲೇಖಕರ ಕೆಂಗಣ್ಣಿಗೆ ಗುರಿಯಾಗಬೇಕಾದ ಅನಿವಾರ್ಯತೆಯನ್ನು ತೋರಿಸುತ್ತದೆ. ಆದರೆ ಲೇಖಕರು ಇದೊಂದು ಪ್ರತಿಕ್ರಿಯೆ ಅಷ್ಟೇ ಎಂಬ ನಿಲುವನ್ನು ತಂದುಕೊಳ್ಳದೆ ಪರಸ್ಪರ ವೈಯಕ್ತಿಕ ದ್ವೇಷಗಳಿಗೆ ಸಂಬಂಧ ಕಲ್ಪಿಸಿಕೊಂಡು ಪುಸ್ತಕ ವಿಮರ್ಶೆಯ ಮಹತ್ವವನ್ನು ಅಲ್ಲಗಳೆಯುತ್ತಿದ್ದಾರೆನಿಸುತ್ತದೆ. ಆದರೆ ಬೇರೆಯವರ ವಿಮರ್ಶೆ ತೆಳುವಾದುದೆಂದು ಭಾವಿಸುವ ಅವರು ತಮ್ಮ ಕಾವ್ಯದಲ್ಲಿ ಈ ತೀರ್ಮಾನಕ್ಕೆ ಬರಲು ಹಿಂಜರಿಯುತ್ತಾರೆ. ಒಟ್ಟಾರೆಯಾಗಿ ಪುಸ್ತಕ ವಿಮರ್ಶೆಯ ಬಗ್ಗೆ ಈ ಚಿಂತಕರು ಆಲೋಚಿಸುವುದೇನೆಂದರೆ, ಪುಸ್ತಕ ವಿಮರ್ಶೆ

ಹಾವು ಸಾಯಬಾರದು, ಕೋಲು ಮುರಿಯಬಾರದು ಎಂಬ ಧಾಟಿಯಲ್ಲಿದೆ. ಕೆಲವು ಪುಸ್ತಕ ವಿಮರ್ಶಕರು ಕೃತಿ ಮೌಲ್ಯ ನಿರ್ಣಯಕ್ಕಿಂತ ಯಾವ ಕಡೆಗೆ ನಿಲ್ಲದ ತಟಸ್ಥ ಧೋರಣೆಯಿಂದ ಕೂಡಿದ್ದಾರೆ ಎಂದು ಹೇಳುತ್ತಾರೆ. ಇದರ ಜೊತೆಗೆ ಪುಸ್ತಕ ವಿಮರ್ಶೆಯ ಹಿಂದಿನ ಒತ್ತಡಗಳನ್ನು, ಪಡೆದುಕೊಳ್ಳಬೇಕಾದ ಆಯಾಮದ ಬಗೆಗೆ ಲೇಖಕರು ಬಯಸುವುದು 'ಸಹಕಾರಿ ಮನೋಭಾವ' ಎಂದು ಹೇಳಿದರೂ, ಕೃತಿ ಕುರಿತು ನಿಜವಾದ ಮೌಲ್ಯಯುತ ವಿಮರ್ಶೆ ಬರದಿದ್ದಾಗ 'ಪುಸ್ತಕ ವಿಮರ್ಶೆ'ಯ ನಿಲುವನ್ನು ಪ್ರಶ್ನಿಸುತ್ತಾರೆ ಎಂಬುದನ್ನು ನಟರಾಜರವರು ತಿಳಿಸುತ್ತಾರೆ. ಇವು ಒಂದು ರೀತಿಯ 'ಪುಸ್ತಕ ವಿಮರ್ಶೆ' ಎದುರಿಸುವ ಎರಡು ಮುಖದ ಬಿಕ್ಕಟ್ಟುಗಳಾಗಿವೆ ಎಂದು ಹೇಳಬಹುದು.

೮. ರಾಜಪ್ಪ ದಳವಾಯಿಯವರು ಪುಸ್ತಕ ವಿಮರ್ಶೆಯ ಸ್ವರೂಪವನ್ನು ಕುರಿತು ಈ ರೀತಿ ಚರ್ಚಿಸುತ್ತಾರೆ.

ಎಲ್ಲರಂತೆಯೂ ಸಾಹಿತಿಗಳಿಗೂ ಹಲವಾರು ಭ್ರಮೆಗಳಿರುತ್ತವೆ. ಅಂತಹದ್ದರಲ್ಲಿ ಮುಖ್ಯವಾದುದು ತಮ್ಮ ಪುಸ್ತಕದ ಬಗ್ಗೆ ವಿಮರ್ಶಕರು ಏನು ಹೇಳುತ್ತಾರೆ ಎಂಬುದು. ಅದರಲ್ಲೂ ಮೊಟ್ಟಮೊದಲಿಗೆ ಪತ್ರಿಕೆಗಳ ರಿವ್ಯೂ ಏನು ಹೇಳುತ್ತದೆಂಬ ಬಗ್ಗೆ ಕುತೂಹಲ ನಿರೀಕ್ಷೆ ಮುಂತಾದ ಎಲ್ಲಾ ಭಾವಗಳೂ ಒಮ್ಮೆಗೆ ಸಂಚರಿಸುತ್ತಿರುತ್ತವೆ. ಕನ್ನಡದ ಪುಸ್ತಕಗಳನ್ನು ವಾರಕ್ಕೊಮ್ಮೆ, ತಿಂಗಳಿಗೊಮ್ಮೆ ಚಿತ್ರಸಹಿತವೋ, ಇಲ್ಲವೆ ಅವುಗಳ ಕುರಿತ ಬರಹಗಳನ್ನೊ ನೋಡುತ್ತಿರುತ್ತೇವೆ. ಅವು ತುರ್ತಾಗಿ ಹಡೆದವಾಗಿರುತ್ತವೆ. ಇಲ್ಲವೆ ಆ ಕೃತಿಯೊಂದನ್ನೇ ಓದಿ ಕನ್ನಡ ಸಾಹಿತ್ಯವನ್ನು ಬೆಲೆಗಟ್ಟುವ ಕೆಲಸ ನಡೆದಿರುತ್ತದೆ. ಇತರ ಕೃತಿಯೊಂದಿಗೆ ಹೋಲಿಸಿ ಇದಕ್ಕಿಂತ ಅದೇ ಮೇಲು ಎಂದೊ ಅಥವಾ ಇದನ್ನು ಬಿಟ್ಟರೆ ಉಳಿದವೆಲ್ಲ ಕಸ ಎಂದೋ ಅಥವಾ ಏನೇನೋ ಇರುತ್ತದೆ; ಆ ಕೃತಿಯಲ್ಲಿ ಎಂಬುದೊಂದನ್ನು ಬಿಟ್ಟು. ಈ ಮಾತು ಸಾರಾಸಗಟು ಎಲ್ಲ ರಿವ್ಯೂಗಳಿಗಲ್ಲದಿದ್ದರೂ ಬಹುತೇಕ ಬರಹಗಳಿಗೆ ಅನ್ವಯವಾಗುತ್ತದೆ. ಇದನ್ನು ಮೊಟ್ಟ ಮೊದಲ ಓದಿನ ಅಭಿಪ್ರಾಯ ಎಂದು ತಿಳಿದು ಬೇರೆಯವರ ಭಿನ್ನಾಭಿಪ್ರಾಯಗಳನ್ನು ಒಳ್ಳೆಯ ರೀತಿ ಸ್ವೀಕರಿಸುವ ವಿಶಾಲ ಭಾವನೆ ಬಹುತೇಕ ಬರಹಗಾರರಲ್ಲಿರುವುದಿಲ್ಲ. ಅವರು ಸಾಮಾನ್ಯನಿಗಿಂತ ಸೂಕ್ಷ್ಮಜೀವಿಗಳಾಗಿರುವುದರಿಂದ ತಲ್ಲಣಗೊಳ್ಳುವುದು ಹೆಚ್ಚು. ಇಂಥ ತಲ್ಲಣದಿಂದ ಮುರುಟಿಹೋದ ಬರಹಗಾರರು ಬಹುಬಾರಿ ಇನ್ನು ಮುಂದೆ ಏನೊಂದು ಸಾಲನ್ನು ಬರೆಯಲೇಬಾರದೆಂಬ ನಿರ್ಧಾರಕ್ಕೆ ಬರಬಹುದು. ವಿಮರ್ಶೆಯಲ್ಲಿರುವ 'ಇದು ಚನ್ನಾಗಿದೆ', 'ಇದು ಚನ್ನಾಗಿಲ್ಲ' ಎಂಬೆರಡು ಮಾದರಿಗಳನ್ನು ಬಗೆಬಗೆಯಾಗಿ ಹೆಣೆಯುವ ವಿಮರ್ಶಕ ಸೃಜನಶೀಲತೆಯ ಮೇಲೆ ಮಾಡುವ ಈ ಹಲ್ಲೆಗೆ ಯಾವುದೇ ಕಾನೂನಿಲ್ಲ. ಸಾಹಿತ್ಯದ ಅನಭಿಷಿಕ್ತರಾಗಿರುವ ಇಂಥ ವಿಮರ್ಶಕರಿಂದ ನಮ್ಮ ಸಾಹಿತ್ಯದಲ್ಲಿ ಎಷ್ಟೋ ಬರಹಗಾರರು ತಮ್ಮ ಬರಹವನ್ನು ನಿಲ್ಲಿಸಿದ್ದಾರೆ; ಕೆಲವರು ವಿಷಕುಡಿದು ಸತ್ತಿದ್ದಾರೆ; ಕೆಲವರು ಬದುಕಿಯೂ ಸತ್ತಂತಿದ್ದಾರೆ. ನನ್ನ ಹತ್ತಾರು ಜನ ವಿಶ್ವಾಸಿ ಬರಹಗಾರರು ತಮ್ಮ ಕಷ್ಟನಷ್ಟಗಳನ್ನು ಹೇಳಿಕೊಳ್ಳುತ್ತ 'ನೋಡಿ ಲಂಕೇಶಲ್ಲಿ ನನ್ನ ಪುಸ್ತಕದ ಬಗ್ಗೆ ಎಂಥ ಕೆಟ್ಟ ರಿವ್ಯೂ ಬಂದಿದೆ' ಎಂದು ಗೋಳಾಡುವ ಎಲ್ಲರಿಗೂ ನಾನು ಕೇಳಿದ ಒಂದು ಪ್ರಶ್ನೆ 'ಉಗಿಸಿಕೊಳ್ಳುವುದಕ್ಕಾಗಿ ಕಷ್ಟಪಟ್ಟು ಬರೆದು, ದುಡ್ಡು ಸುರಿದು ಮುದ್ರಿಸಿದ ನಿಮ್ಮ ಪುಸ್ತಕಗಳನ್ನು ಅಲ್ಲಿಗೆ ಯಾಕೆ ಕಳಿಸುತ್ತೀರಾ?' ಎಂದು. ನನ್ನ ಮಾತಿಗೆ ಅವರಲ್ಲಿ ಉತ್ತರವಿರಲಿಲ್ಲ. ಒಂದು ರಿವ್ಯೂ ಏನಾಗದಿದ್ದರೂ ಒಬ್ಬ ಬರಹಗಾರನ ಮನಸ್ಸನ್ನು ಮುದುಡಿಸದಿದ್ದರೆ ಸಾಕು. ಉಗಿಯಲಿಕ್ಕಾಗಿಯೇ ಇರುವ ಪುಸ್ತಕ ವಿಮರ್ಶೆಗಳ ಕಾಲಂಗಳಿಗೆ ಮೊದಲು ಬರಹಗಾರರು ಪುಸ್ತಕಗಳನ್ನು ಕಳಿಸದಿರುವ ಧೈರ್ಯಮಾಡಬೇಕು. ಒಂದು ಬೀರು ಕುಡಿಸಿದರೆ ಒಂದು ತರಕ್ಕೆ, ಎರಡು ಬೀರು ಕುಡಿಸಿದರೆ ಎರಡು ತರಕ್ಕೆ ಬರೆಯುವ ವಿಮರ್ಶಕರ ಪರಿಪಾಟಲನ್ನು ಆ ಮೂಲಕ ಹತ್ತಿಕ್ಕಬೇಕಾಗಿದೆ. ವ್ಹಿಸ್ಕಿ ಗ್ಲಾಸುಗಳ ಮಧ್ಯೆ ಚರ್ಚಿಸುವ ವಿಮರ್ಶೆ ಒಂದು ಸಾಹಿತ್ಯವನ್ನು ನಿಜಕ್ಕೂ ದೊಡ್ಡದನ್ನು ಮಾಡಲಾರದು. ಅಂತಿಮವಾಗಿ ಒಬ್ಬ ಬರಹಗಾರನ ಸೃಜನಶೀಲ ಮನಸ್ಸು ಮುದುಡದಂತೆ ಕಾಪಾಡುವ ಜವಾಬ್ದಾರಿ

ವಿಮರ್ಶಕನ ಮೇಲಿದೆ. ತನ್ನ ತಿಕ್ಕಲುತನಕ್ಕೆ ಏನು ಬೇಕೋ ಅದನ್ನು ಒಂದು ಕೃತಿಯಿಂದ ಬಯಸುವ ಬದಲು ಬರೆದಿರುವಬರಹ ಹೇಗಿದೆ ಎಂದು ಹೇಳುವುದು ನಿಜವಾದ ರಿವ್ಯೂ. ಇನ್ನೊಬ್ಬರ ಮುನ್ನುಡಿ, ಅಭಿಪ್ರಾಯ ಬಯಸುತ್ತ ಕುಳಿತೇ ಮುದುಕರಾಗುತ್ತಿರುವ ಸಾಹಿತಿಗಳು ಅವುಗಳ ಹಂಗಿನಿಂದ ಬಿಡುಗಡೆ ಹೊಂದಬೇಕಾಗಿದೆ.

ರಾಜಪ್ಪ ದಳವಾಯಿ ಅವರು ಪುಸ್ತಕ ವಿಮರ್ಶೆ ಬಗೆಗೆ ತಳೆದ ನಿಲುವನ್ನು ಹೀಗೆ ಗುರುತಿಸಬಹುದು. ಇವರು ಇಲ್ಲಿ ಮುಖ್ಯವಾಗಿ ಪುಸ್ತಕ ವಿಮರ್ಶೆ, ಪುಸ್ತಕ ವಿಮರ್ಶಕರು ಮತ್ತು ಲೇಖಕರ ನಡುವಿನ ಸಂಬಂಧವನ್ನು ವಿಶ್ಲೇಷಿಸುತ್ತಿದ್ದಾರೆ. ಸಾಮಾನ್ಯವಾಗಿ ಈ ಚಿಂತಕರ ಚಿಂತನೆಯು ಪುಸ್ತಕ ವಿಮರ್ಶೆಯಿಂದ ಲೇಖಕರ ಸೃಜನಶೀಲತೆಯ ನಾಶ ಎಂಬುದನ್ನು ಗಮನದಲ್ಲಿಟ್ಟಿಕೊಂಡೇ ಆರಂಭವಾಗಿದೆ. ಅದನ್ನು ಅವರೇ ಸಾಹಿತಿಗಳ ಭ್ರಮೆ ಎಂದು ಗುರುತಿಸಿದ್ದಾರೆ. ಆದರೂ ತಮ್ಮ ಪುಸ್ತಕದ ಬಗೆಗೆ ಬರುವ ಪುಸ್ತಕ ವಿಮರ್ಶೆಗಳ ಬಗೆಗೆ ಕುತೂಹಲವನ್ನು ಉಳಿಸಿಕೊಂಡಿರುವ ಲೇಖಕರ ಮನಸ್ಸನ್ನು ಪ್ರಶ್ನಿಸಿಕೊಳ್ಳುತ್ತಿದ್ದಾರೆ. ಅಲ್ಲದೆ ಮುಖ್ಯವಾಗಿ ಪುಸ್ತಕ ವಿಮರ್ಶೆ ಬಗೆಗೆ ಇದ್ದ ಹಲವಾರು ಮಾದರಿಗಳನ್ನು ಸೂಚ್ಯವಾಗಿ ಹೇಳುತ್ತಾರೆ. 'ಚಿತ್ರಸಹಿತವೋ ಇಲ್ಲವೆ ಅವುಗಳ ಕುರಿತ ಬರಹ'ಗಳ ರೂಪದಲ್ಲಿರುತ್ತವೆ; ತುರ್ತಾಗಿ ಹಡೆದವಾಗಿರುತ್ತವೆ ಎಂದು ಸರಿಯಾಗಿ ಪತ್ತೆ ಹಚ್ಚಿದ್ದಾರೆ. ಅದರ ಜೊತೆಗೆ ಪುಸ್ತಕ ವಿಮರ್ಶೆಯಲ್ಲಿ ಬಹುಪಾಲು ಕಂಡುಬರುವ ತೌಲನಿಕ ಪುಸ್ತಕ ವಿಮರ್ಶೆಗಳ ಅತಿರೇಕವನ್ನು ವಿಶ್ಲೇಷಿಸಿದ್ದಾರೆ. 'ಹಳೇ ಕೃತಿ ಮೇಲು' ಅಥವಾ ಈ ಕೃತಿಯಷ್ಟೇ ಉತ್ತಮ ಎಂಬ ಹೇಳಿಕೆಗಳ ಹಿನ್ನೆಲೆಯಲ್ಲಿ ಇವರು ಚರ್ಚಿಸಿದ್ದಾರೆ. ಹೀಗೆ ನೋಡುವ ನೆಲೆಯಲ್ಲಿ ಬರಹಗಾರರು ತಮ್ಮ ತಾಳ್ಮೆಯನ್ನು ಮೀರಿ ಪುಸ್ತಕ ವಿಮರ್ಶೆಯಿಂದ ತಾವುಗಳು ಬದಲಾಯಿಸಿಕೊಂಡಿರುವ ನಿಲುವನ್ನು ಬರೆಯಬಾರದೆಂಬ ದೃಢ ನಿರ್ಧಾರವನ್ನು ಒಡೆಯಲು ಯತ್ನಿಸಿ ಪುಸ್ತಕ ವಿಮರ್ಶೆಯನ್ನು 'ಮೊಟ್ಟ ಮೊದಲ ಓದಿನ ಅಭಿಪ್ರಾಯ'ವೆಂದು ಸ್ವೀಕರಿಸಬೇಕೆಂದು ಹೇಳುತ್ತಾರೆ. ಅಲ್ಲದೆ ಪುಸ್ತಕ ವಿಮರ್ಶೆಯಲ್ಲಿನ 'ಇದು ಚನ್ನಾಗಿದೆ', ಇದು ಚನ್ನಾಗಿಲ್ಲ ಎಂಬ ಈ ಎರಡು ಮಾದರಿಗಳು ಉಂಟು ಮಾಡುವ ಎರಡು ರೀತಿಯ ತೊಂದರೆಗಳನ್ನು ಕುರಿತು ರಾಜಪ್ಪ ದಳವಾಯಿಯವರು ವಿಶ್ಲೇಷಿಸುತ್ತಾರೆ. ಇವರು ಮುಖ್ಯವಾಗಿ ಲಂಕೇಶ ಪತ್ರಿಕೆಯ ರಿವ್ಯೂ ಬಗ್ಗೆ ವಿಮರ್ಶಾತ್ಮಕ ಪ್ರತಿಕ್ರಿಯೆಯನ್ನ ಮಾಡಿರುವುದನ್ನು ಗಮನಿಸಬಹುದು. ಅಂದರೆ ಲಂಕೇಶ ಪತ್ರಿಕೆಯಲ್ಲಿನ ಪುಸ್ತಕ ವಿಮರ್ಶೆಗಳು ಉಗಿಯಲಿಕ್ಕಾಗಿಯೇ ನಿರ್ಮಾಣವಾಗುತ್ತಿದ್ದವು ಎಂಬುದನ್ನು ಹೇಳುತ್ತಾರೆ. ಆದರೆ ಇದು ಏಕಮುಖವಾದ ದೃಷ್ಟಿಕೋನ. ಈ ರೀತಿಯ ದೃಷ್ಟಿಯಿಂದ ಲಂಕೇಶ ಪತ್ರಿಕೆಯ ಹಲವು ಉತ್ತಮ ಪುಸ್ತಕ ವಿಮರ್ಶಾ ಮಾದರಿಗಳನ್ನು ಅಲ್ಲಗಳೆದಂತಾಗುತ್ತದೆ. ಲಂಕೇಶ್ ಪತ್ರಿಕೆಯ ಅತಿರೇಕದ ಪುಸ್ತಕ ವಿಮರ್ಶೆಗಳನ್ನು ಗಮನದಲ್ಲಿಟ್ಟುಕೊಂಡು ಈ ಮಾತನ್ನು ಹೇಳುತ್ತಾರೆ. ರಿವ್ಯೂ ಬಗ್ಗೆ ಈ ಚಿಂತಕರು ತಳೆದಿರುವ ಮೃದು ಧೋರಣೆ 'ರಿವ್ಯೂ ಏನಾಗದಿದ್ದರೂ ಒಬ್ಬ ಬರಹಗಾರನ ಮನಸ್ಸನ್ನು ಮುದುಡಿಸದಿದ್ದರೆ ಸಾಕು' ಎಂಬುದಾಗಿದೆ. ಆದರೆ ಇದು ಕೆಲವೊಮ್ಮೆ ವಸ್ತುನಿಷ್ಠ ಪುಸ್ತಕ ವಿಮರ್ಶೆಯನ್ನು ತಡೆಯುವ ಗುಪ್ತ ತಂತ್ರ ಎಂದು ಸರಳವಾಗಿ ತೋರುತ್ತದೆ. ವಾಸ್ತವವಾಗಿ ಈ ಚಿಂತಕರು ಸೃಜನಶೀಲರಾಗಿರುವುದು ಇದಕ್ಕೆ ಒಂದು

ಕಾರಣವಾಗಿರಬಹುದು. ಇವರು ಸೃಜನಶೀಲ ಮನಸ್ಥಿತಿಯಲ್ಲಿ ರಿವ್ಯೂ ಪರಿಣಾಮಗಳನ್ನು ಹೇಳುತ್ತಿದ್ದಾರೆ. ಆದರೆ ಕೆಲವು ಆಶೋತ್ತರಗಳಿಗೆ ಮಣಿದು ಪುಸ್ತಕ ವಿಮರ್ಶೆ ಪಡೆದುಕೊಂಡಿರುವ ಸ್ಥಿತಿಯ ಬಗೆಗೆ ಇವರಿಗೆ ನೋವು, ಆತಂಕಗಳಿವೆ. ಇವುಗಳಿಂದ ಬಿಡುಗಡೆ ಪಡೆಯುವ ಪುಸ್ತಕ ವಿಮರ್ಶೆ ಬಗೆಗೆ ಕಾಳಜಿಯಿದೆ. ಹಾಗಾಗಿ ಇವರ ಪ್ರಕಾರ ಆದರ್ಶ ಪುಸ್ತಕ ವಿಮರ್ಶೆಯೆಂದರೆ "ಬರೆದಿರುವ ಬರಹ ಹೇಗಿದೆ ಎಂದು ಹೇಳುವುದು ನಿಜವಾದ ರಿವ್ಯೂ" ಎಂದು ಸ್ಪಷ್ಟಪಡಿಸುತ್ತಾರೆ. ಆದರೆ ಹೇಗಿದೆ ಎಂದು ಹೇಳುವ ಸಂದರ್ಭದಲ್ಲಿ ಸಹಜವಾಗಿ ಒಂದು ರೀತಿಯ ವಿಮರ್ಶಾ ದೃಷ್ಟಿ ಬೆಳೆಯುತ್ತದೆ. ಕೆಲವೊಮ್ಮೆ ಪುಸ್ತಕ ವಿಮರ್ಶೆಯೆಂಬ ಅಭಿಪ್ರಾಯವನ್ನು ಕಾಯುತ್ತ ಸೃಜನಶೀಲ ಚಟುವಟಿಕೆ ದೂರ ಸರಿಯುವ ಅಪಾಯವಿದೆ ಎಂದು ಗುರುತಿಸುತ್ತಾರೆ. ಇವರ ಈ ಚರ್ಚೆಯಲ್ಲಿ ಮುಖ್ಯವಾಗಿ ಲೇಖಕರ ಮತ್ತು ಪುಸ್ತಕ ವಿಮರ್ಶಕರ ನಡುವಿನ ಸಂಬಂಧದ ಬಗೆಗಿನ ವಿವರಣೆಯಿದೆ. ಮುಖ್ಯ ಎದುರಾಳಿಯಾಗಿ ಲಂಕೇಶ್ ಪತ್ರಿಕೆಯಲ್ಲಿನ ಪುಸ್ತಕ ವಿಮರ್ಶೆಗಳನ್ನು ಗಮನಿಸಿ ಈ ಚರ್ಚೆ ಬೆಳೆದಿದೆ. ಇದು ಲಂಕೇಶ್ ಪತ್ರಿಕೆಯಲ್ಲಿ ಬರುತ್ತಿದ್ದ ಪುಸ್ತಕ ವಿಮರ್ಶೆಗಳ ದೃಷ್ಟಿಗೆ ಒಂದು ಪ್ರತಿಕ್ರಿಯೆ ಎಂದು ಹೇಳಬಹುದು.

ಹೀಗೆ 'ಪುಸ್ತಕ ವಿಮರ್ಶೆ' ಕುರಿತು ಈ ಎಲ್ಲ ಚಿಂತಕರ ಚರ್ಚೆಯ ಮುಖ್ಯ ಸಾಧನಗಳನ್ನು ಹೀಗೆ ಗುರುತಿಸಬಹುದು. ಇವರೆಲ್ಲ ಪುಸ್ತಕ ವಿಮರ್ಶೆಯನ್ನು ಸರಳವಾಗಿ ನೋಡುವುದಕ್ಕಿಂತ ತೀರ ಗಂಭೀರವಾಗಿ ವಿಶ್ಲೇಷಿಸಿದ್ದಾರೆ. ಪುಸ್ತಕ ವಿಮರ್ಶೆಯೆಂಬುದು,

೧. ನಾಲ್ಕು ಸಾಲಿನ ಮರ್ಯಾದೆ.
೨. ನಿರ್ಣಾಯಕ ವಿಮರ್ಶೆ ಸುಲಭವಲ್ಲ.
೩. ಕೇವಲ ಪರಿಚಯವೊಂದೇ ಅಲ್ಲ.
೪. ಸಾವಿರಾರು ಜನರ ಕಣ್ಣನ್ನು ಸೆಳೆಯುವ.
೫. ತಪ್ಪುಗಳನ್ನು ಮರೆಮಾಚುವ, ಹಗುರಾಗಿ ತೆಗೆದುಕೊಳ್ಳುವ
೬. ಒಂದು ಸಾರ್ವಜನಿಕ ಪ್ರತಿಕ್ರಿಯೆ.
೭. ರಿವ್ಯೂ ಎನ್ನುವುದು ಒಂದು ಪ್ರತಿಕ್ರಿಯೆ ಅಷ್ಟೇ.
೮. ಮೊಟ್ಟ ಮೊದಲ ಓದಿನ ಅಭಿಪ್ರಾಯ.

ಎಂಬ ಈ ಸಾಲುಗಳನ್ನು ಕ್ರಮವಾಗಿಟ್ಟು ನೋಡಿದಾಗ ಪುಸ್ತಕ ವಿಮರ್ಶೆಯು ಚಾರಿತ್ರಿಕವಾಗಿ ಪಡೆದುಕೊಂಡು ಬಂದಿರುವ ಆಯಾಮವನ್ನು ತಿಳಿಸುತ್ತದೆ. ಮೊದಲು ಅದು ನಾಲ್ಕು ಸಾಲಿನ ಮರ್ಯಾದೆಯಾಗಿಯೇ ಉಳಿದದ್ದು, ಆಗಿನ ಸಾಹಿತ್ಯದಲ್ಲಿ ಅಷ್ಟೇನೂ ಮಹತ್ವದ ಭಾಗವಾಗಿಲ್ಲದಿರುವುದನ್ನು ತಿಳಿಸುತ್ತದೆ. ಅದರ ಜೊತೆಗೆ ಪುಸ್ತಕ ವಿಮರ್ಶೆಯಲ್ಲಿ ನಿರ್ಣಾಯಕ ವಿಮರ್ಶೆ ಸಾಧ್ಯವಿಲ್ಲವೆಂಬ ಆ ಕಾಲದ ಸಾಂಸ್ಕೃತಿಕ ಒತ್ತಡಗಳನ್ನು ತಿಳಿಸುತ್ತದೆ. ಆದರೆ ನಿಣಾಯಕವಾದ ವಿಮರ್ಶೆಯನ್ನು ನೀಡಲಿಕ್ಕೆ ಸಾಧ್ಯ ಎಂಬುದನ್ನು ಇತ್ತೀಚಿನ ಪುಸ್ತಕ ವಿಮರ್ಶೆ ಮಾದರಿಗಳನ್ನು

ನೋಡಬಹುದು. (ಅನುಬಂಧ ೨ನ್ನು ನೋಡಿ) ಬರಬರುತ್ತ ಪುಸ್ತಕ ವಿಮರ್ಶೆ ಆಯಾಮ ವಿಸ್ತೃತವಾಗುತ್ತ 'ಕೇವಲ ಪರಿಚಯವೊಂದೇ ಅಲ್ಲ' ಎಂಬ ವಿಶಾಲ ವ್ಯಾಪ್ತಿಯನ್ನು ಪಡೆಯುತ್ತಿದೆ. ಕೆಲವೊಮ್ಮೆ ಅದರಲ್ಲಿ ಆಗುವ ಮಿತಿಗಳು ಕೃತಿಯ ದೋಷಗಳನ್ನು ಮರೆಮಾಚುವ, ಹಗುರಾಗಿ ತೆಗೆದುಕೊಳ್ಳುವ ನಿಲುವನ್ನು ಹೊಂದಿರುತ್ತವೆ ಎಂಬುದನ್ನು ಗುರುತಿಸಬಹುದು. ಒಟ್ಟಾರೆಯಾಗಿ ಪುಸ್ತಕ ವಿಮರ್ಶೆ ಒಂದು ಪ್ರತಿಕ್ರಿಯೆಯಾಗಿ, ಸಾರ್ವಜನಿಕ ಪ್ರತಿಕ್ರಿಯೆಯಾಗಿ ಹೊಸ ಆಯಾಮವನ್ನು ಪಡೆದಿರುವುದನ್ನು ಗುರುತಿಸಬಹುದು.

ಈ ಎಲ್ಲ ಚಿಂತಕರ ಚಿಂತನೆಗಳು ಕೃತಿ ವಿಮರ್ಶಕರಿಗೆ ಪೂರ್ವೋತ್ತರಗಳ ಹಿನ್ನೆಲೆಯೊಂದಿಗೆ ಹೆಚ್ಚಿನ ಓದು ಪರಿಶ್ರಮಗಳು ಮುಖ್ಯ. ನಿಷ್ಪಕ್ಷಪಾತತೆಯು ಅವರ ಅರ್ಹತೆಗಳಲ್ಲೊಂದು ಎಂಬುದರ ಕಡೆಗಿವೆ. ಹೀಗಾಗಿ ಡಾ. ಎಚ್. ಎಸ್. ರಾಘವೇಂದ್ರ ರಾವ್‌ರವರು 'ಶತಮಾನದ ಸಾಹಿತ್ಯ ವಿಮರ್ಶೆ' ಕೃತಿಯಲ್ಲಿ ಹೇಳುವ ಈ ಕೆಳಗಿನ ಮಾತುಗಳು ಸಾಹಿತ್ಯ ವಿಮರ್ಶೆಯನ್ನು ಕುರಿತೇ ಹೇಳಿದ್ದರೂ ಅವು ಪುಸ್ತಕ ವಿಮರ್ಶೆಯ ಕ್ರಿಯೆಗಳಿಗೂ ಅನ್ವಯಿಸಬಹುದು "ವಿಮರ್ಶೆಯೂ ಯಾವಾಗಲೂ ಸಾಹಿತ್ಯ ಕೃತಿಗಳ ವಿಶ್ಲೇಷಣೆ - ವಿಮರ್ಶೆಗಳಿಗೆ ಮೀಸಲಾದ ಪರಾವಲಂಬೀ ಚಟುವಟಿಕೆಯಾಗಲಿ, ಬದಲಾಗಿ ಒಂದು ಸಂಸ್ಕೃತಿಯ ಸ್ವಾಭಿಮುಖವಾಗಿ ತೊಡಗಿಕೊಂಡು, ಜ್ಞಾನಸೃಷ್ಟಿ ಮಾಡುವ ಜವಾಬ್ದಾರಿಯನ್ನು ಹೊತ್ತು ಕೊಂಡಾಗ ನಡೆಯುವ ಎಲ್ಲ ಪವಾಡಗಳು ಸಾಹಿತ್ಯ ವಿಮರ್ಶೆಯಲ್ಲಿಯ ಒಂದು ಮಿತಿಯೊಳಗೆ ನಡೆದಿದೆ"[೯]

ಈ ಮೇಲಿನ ಮಾತುಗಳನ್ನು ಪುಸ್ತಕ ವಿಮರ್ಶೆಯು ನಡೆದು ಬಂದಿರುವ ಗತಿಗಳಿಗೆ ಅನ್ವಯಿಸಿದರೆ, ವಿವಿಧ ಕಾಲಘಟ್ಟಗಳಲ್ಲಿನ ಪುಸ್ತಕ ವಿಮರ್ಶಕರ ಮನೋಭಾವವನ್ನು ವಿಶ್ಲೇಷಿಸುತ್ತವೆ. ಪುಸ್ತಕ ವಿಮರ್ಶೆ ಬಗೆಗೆ ಮೊದಲಿನಿಂದಲೂ ಬಂದ ನಿಲುವು ಈಗ ಬದಲಾದುದರ ಚಾರಿತ್ರಿಕ ಸ್ವರೂಪವನ್ನು ಗುರುತಿಸಬಹುದು. ಹೀಗೆ ಕಾಲದಿಂದ ಕಾಲಕ್ಕೆ ಬೆಳೆದು ಬಂದಿರುವ ಹಾಗೆ ಪುಸ್ತಕ ವಿಮರ್ಶೆ ಬಗೆಗೆ ರೂಢಿಸಿಕೊಂಡು ಬಂದ ನಿಲುವುಗಳು ಪುಸ್ತಕ ವಿಮರ್ಶೆಯ ಚಾರಿತ್ರಿಕ ಸ್ವರೂಪವನ್ನು ಸ್ಪಷ್ಟಪಡಿಸುವ ಅಂಶಗಳೂ ಆಗಿವೆ ಎಂದು ಹೇಳಬಹುದು.

ಕೊನೆ ಟಿಪ್ಪಣಿಗಳು :

೧. ವಿಮರ್ಶೆಯ ವ್ರತ, ಪು. ೧೬.
೨. ಪು. ೬೬
೩. ಸಮ್ಮುಖ, ಪು. ೧೩೩-೧೩೪.
೪. ವಿಮರ್ಶಾ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ, ಪು. ೨೦೦
೫. ಪು. ೪೫
೬. 'ಮಾತಿನ ಹಂಗು', ಇಬ್ಬನಿ, ಜುಲೈ ೧೯೯೯.
೭. ಗಾಳಿ ಬೆಳಕು, ಪು. ೧೧೧-೧೧೪.
೮. ಪ್ರಜ್ಞೆ, ೫, ೧೯೯೩.
೯. ಪು. XXVI.

ಅಧ್ಯಾಯ - ೩

ಪುಸ್ತಕ ವಿಮರ್ಶೆಯ ಚಾರಿತ್ರಿಕ ಘಟ್ಟಗಳ ಸ್ವರೂಪ

ಪುಸ್ತಕ ವಿಮರ್ಶೆಯ ಚಾರಿತ್ರಿಕ ಘಟ್ಟಗಳ ಸ್ವರೂಪ

ಪುಸ್ತಕ ವಿಮರ್ಶೆಯನ್ನು ಅಧ್ಯಯನ ಮಾಡುವಾಗ ಸಹಜವಾಗಿ ಅಧ್ಯಯನ ಸಾಹಿತ್ಯ ವಿಮರ್ಶೆಯ ಕಡೆಗೆ ವಾಲುತ್ತದೆ. ಕೆ.ವಿ. ತಿರುಮಲೇಶ್ ಹೇಳುವಂತೆ, 'ಪುಸ್ತಕ ವಿಮರ್ಶೆ ಅಕಾಡೆಮಿಕ್ ವಿಮರ್ಶೆಗಿಂತ ಭಿನ್ನವೇನಲ್ಲ (ಸಮ್ಮುಖ ವಿಮರ್ಶಾ ಕೃತಿಯಲ್ಲಿ - ೧೩೩)" ಇದು ಒಟ್ಟಾರೆ ಪುಸ್ತಕ ವಿಮರ್ಶೆ ಸಾಹಿತ್ಯ ವಿಮರ್ಶೆಯೊಂದಿಗೆ ಬೆಳೆದು ಬಂದಿರುವ ರೀತಿಯನ್ನು ಪರಸ್ಪರ ಸಂಬಂಧವನ್ನು ತಿಳಿಸುತ್ತದೆ. ಹೀಗಾಗಿ ಇಲ್ಲಿ ವಿಮರ್ಶೆಯ ಚರ್ಚೆಯ ಮೂಲಕವೇ ಪುಸ್ತಕ ವಿಮರ್ಶೆಯ ಸ್ವರೂಪವನ್ನು ಗಮನಿಸಲಾಗಿದೆ.

ಸಾಹಿತ್ಯ ವಿಮರ್ಶೆಯ ಮೂಲವನ್ನು ಭಾರತೀಯ ಕಾವ್ಯ ಮೀಮಾಂಸೆಯಲ್ಲಿ ಗುರುತಿಸಿ, (ಅದು ಸಂಸ್ಕೃತ ಮೀಮಾಂಸೆ ಎಂಬುದನ್ನು ಮರೆಯಬಾರದು) ಇದರಲ್ಲಿ ವಿಮರ್ಶೆಯ ಬಗೆಗಿನ ಚರ್ಚೆಗಳಿವೆ ಎಂದು ಪ್ರಾರಂಭದಲ್ಲಿ ಹುಡುಕಿ ತೋರುವ ಯತ್ನವನ್ನು ವಿಮರ್ಶಕರು ಮಾಡಿದ್ದಾರೆ. ರಾಜಶೇಖರನು ವರ್ಣಿಸಿದ 'ಭಾವಯತ್ರೀ ಪ್ರತಿಭೆ'ಯನ್ನು ವಿಮರ್ಶನ ಪ್ರಜ್ಞೆಗೆ ಹೋಲಿಸುತ್ತಾರೆ. ವಿದ್ವಾಂಸರು ವಿಮರ್ಶನ ಹಾದಿಯನ್ನು ಭಾರತೀಯ ಮೀಮಾಂಸೆಯಲ್ಲಿ ಹುಡುಕಿ ಪಾಶ್ಚಾತ್ಯ ವಿಮರ್ಶೆಯ ಸ್ವರೂಪವನ್ನು ನಮ್ಮಲ್ಲೇ ಇದೆ ಎಂಬ ತಾದಾತ್ಮ್ಯವನ್ನು ಪಡೆದಿದ್ದರು. ಆದರೆ ಸಂಸ್ಕೃತ ಕಾವ್ಯ ಮೀಮಾಂಸೆ ಮತ್ತು ಅದನ್ನು ಅನುಸರಿಸಿ ಕೆಲವೊಮ್ಮೆ ಭಿನ್ನವಾದ ಚರ್ಚೆಗಳಿಂದ ನಡೆದ ಕನ್ನಡ ಕಾವ್ಯಗಳಲ್ಲಿ ಕನ್ನಡ ಕಾವ್ಯ ಮೀಮಾಂಸೆಯನ್ನು ಶೋಧಿಸುವ ಇತ್ತೀಚಿನ ಚಿಂತನೆ, ಸಂಸ್ಕೃತ ಮೀಮಾಂಸೆಯನ್ನು ಹೊರತು ಪಡಿಸಿ ಕನ್ನಡವು ತನ್ನದೇ ಆದ ಮೀಮಾಂಸಾ ನಿಲುವುಗಳನ್ನು ಪಡೆದಿತ್ತು ಎಂಬುದರ ಕಡೆಗೆ ನಡೆದಿದೆ. ಮೀಮಾಂಸೆಯ ಬಗ್ಗೆ ಮಾತನಾಡುವಾಗಲೆಲ್ಲ ವಿಮರ್ಶಾ ನಿಲುವು ಮನದಲ್ಲಿರುತ್ತದೆ. ಮೀಮಾಂಸೆ ವಿವರಣೆಯನ್ನು ~~ಬಯಸುವಂಥದ್ದು~~ ಬಯಸುವಂಥದ್ದು ವಿಮರ್ಶೆ ಮೌಲ್ಯ ಮಾಪನದ ಕಡೆ ಗಮನವಹಿಸುವಂಥದ್ದು. ಹಾಗೆಂದ ಮಾತ್ರಕ್ಕೆ ಸಂಸ್ಕೃತ ಮೀಮಾಂಸೆಯೇ ಕನ್ನಡ ಮೀಮಾಂಸೆಯು ಅಲ್ಲ. ಆಧುನಿಕ ಕನ್ನಡ ಸಾಹಿತ್ಯ ಮೀಮಾಂಸೆ ಸಂಸ್ಕೃತ ಮೀಮಾಂಸೆಯನ್ನು ಅರಗಿಸಿಕೊಂಡು ವಿಶಿಷ್ಟ ರೀತಿಯ ಮೀಮಾಂಸೆಯನ್ನು, ವಿಮರ್ಶೆಯನ್ನು ಬೆಳಸಿಕೊಂಡಿತು. ಇದಕ್ಕೆ ಪಾಶ್ಚಾತ್ಯ ಪ್ರೇರಣೆ ಇಲ್ಲದಿಲ್ಲ. ಕನ್ನಡದಲ್ಲಿ ರೂಪುಗೊಂಡಿರುವ ವಿಮರ್ಶಾ ಪರಪಂರೆಯೇ ತೀರ ಭಿನ್ನವಾದುದು. ನಮ್ಮ ವಿಮರ್ಶಾ ಬೇರುಗಳನ್ನು ಜಿ.ಎಸ್. ಶಿವರುದ್ರಪ್ಪನವರು ಹೀಗೆ ಗುರುತಿಸುತ್ತಾರೆ.

ಆಧುನಿಕ ಸಾಹಿತ್ಯ ವಿಮರ್ಶೆಯ ಹಿಂದೆ ಇರುವ ಈ ಕುರಿತ ಚಿಂತನ ಪರಂಪರೆ ಮುಖ್ಯವಾಗಿ ಮೂರು ಬಗೆಯದೆಂದು ಗುರುತಿಸಬಹುದು, ಒಂದು ಸಂಸ್ಕೃತದಲ್ಲಿ ಕಾವ್ಯ ತತ್ವವನ್ನು ಕುರಿತು ವಿಪುಲವಾಗಿ ಬೆಳೆದಿರುವ ಭಾರತೀಯ ಕಾವ್ಯ ಮೀಮಾಂಸೆಯ ಹಿನ್ನೆಲೆ; ಎರಡು ಈ ಸಂಸ್ಕೃತ ಕಾವ್ಯಮೀಮಾಂಸೆಯ ಅರಿವಿನಿಂದ ನಮ್ಮ ಪ್ರಾಚೀನ ಕನ್ನಡ ಕವಿಗಳು ತಮ್ಮ ಕೃತಿ ನಿರ್ಮಿತಿಯ ಹೊತ್ತಿನಲ್ಲಿ ನಡೆಯಿಸಿದ ಕಾವ್ಯ ಚರ್ಚೆಯ ಸಂಗತಿಗಳು; ಮೂರು ಇಂಗ್ಲೀಷ್ ಶಿಕ್ಷಣದ ಮೂಲಕ ನಮಗೆ ಪರಿಚಿತವಾದ ಹಾಗೂ ನಮ್ಮ ಚಿಂತನೆ ಮತ್ತು ಸಾಹಿತ್ಯ ನಿರ್ಮಿತಿಯ ಮೇಲೆ ಪ್ರಭಾವ ಬೀರಿದ ಪಶ್ಚಿಮದ ಸಾಹಿತ್ಯ ಪ್ರಕಾರಗಳೂ, ಅವುಗಳ ಹಿಂದಿರುವ ಸಾಹಿತ್ಯಕ ವಾಗ್ವಾದಗಳೂ, ಪರಿಕಲ್ಪನೆಗಳೂ ಇತ್ಯಾದಿಗಳ ಅರಿವು, ಈ ಎಲ್ಲದರ ಹಿನ್ನೆಲೆಯಿಂದ ಆಧುನಿಕ ಸಾಹಿತ್ಯ ವಿಮರ್ಶೆ ರೂಪುಗೊಳ್ಳುವ ಸಂದರ್ಭದಲ್ಲಿ ಅದು ತನ್ನದೇ ಆದ ಭಾಷೆ ಹಾಗೂ ಪರಿಭಾಷೆಗಳನ್ನು ನಿರ್ಮಿಸಿಕೊಳ್ಳುವ ಪ್ರಯತ್ನದಲ್ಲಿ ಆಗಾಗ ಗೊಂದಲಕ್ಕೆ ಒಳಗಾದಂತೆ ಕಂಡು ಬಂದರೂ, ಪಶ್ಚಿಮದ ಅನೇಕ ಪರಿಕಲ್ಪನೆಗಳಿಗೆ ಕನ್ನಡದಲ್ಲಿ ಸಮರ್ಪಕವಾದ ಸಂವಾದಿ ಪದಗಳನ್ನು ಹಾಗೂ ಪಾರಿಭಾಷಿಕಗಳನ್ನು ಬಳಕೆಗೆ ತರುವುದೂ ಮತ್ತು ಈ ಪಾರಿಭಾಷಿಕಗಳ ಬಳಕೆಯಲ್ಲಿ ಸಾಧ್ಯವಾದಷ್ಟು ಸಮಾನತೆಯನ್ನು ಕಾಯ್ದುಕೊಳ್ಳುವುದೂ, ಈ ಗೊಂದಲ ಪರಿಹಾರಕ್ಕೆ ಇರುವ ಏಕೈಕ ಮಾರ್ಗ ಎಂಬುದನ್ನು ನಮ್ಮ ಸಾಹಿತ್ಯ ವಿಮರ್ಶಕರು ಕ್ರಮೇಣ ಅರಿತುಕೊಳ್ಳತೊಡಗಿದ್ದಾರೆ[7]

ಈ ಮೇಲಿನ ಉಲ್ಲೇಖ ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆ ರೂಪಿತಗೊಂಡಂಥ ಸಂದರ್ಭ ಮತ್ತು ಪ್ರೇರಣೆಗಳನ್ನು ಕುರಿತು ಹೇಳುತ್ತದೆ. ಜಿ. ಎಸ್. ಶಿವರುದ್ರಪ್ಪನವರು ಆಧುನಿಕ ಕನ್ನಡ ಸಾಹಿತ್ಯ ವಿಮರ್ಶೆ ವಿವಿಧ ಮೂಲಗಳಿಂದ ಪಡೆದುಕೊಂಡು ಬೆಳೆದ ಸ್ಥಿತಿಯನ್ನು ಮೂರು ಪ್ರಧಾನ ಪ್ರೇರಣೆಗಳಾಗಿ ಗುರುತಿಸಿದ್ದಾರೆ. ಸಂಸ್ಕೃತದ ಕಾವ್ಯ ಮೀಮಾಂಸೆ, ಕನ್ನಡ ಕವಿಗಳು ನಡೆಸಿದ ಕಾವ್ಯ ಚರ್ಚೆ ಮತ್ತು ಪಶ್ಚಿಮದ ಸಾಹಿತ್ಯಕ ವಾಗ್ವಾದಗಳು ಎಂದು ವಿಮರ್ಶಾ ಪರಂಪರೆಯನ್ನು ಪ್ರೇರಣೆಗಳ ಹಿನ್ನೆಲೆಯಲ್ಲಿ ಸ್ಪಷ್ಟಪಡಿಸಿದ್ದಾರೆ. ಜೊತೆಗೆ ಇವುಗಳಿಂದ ಪಡೆದುಕೊಂಡ ಪ್ರೇರಣೆಗಳು ಕನ್ನಡ ಸಾಹಿತ್ಯದ ಸಂದರ್ಭದಲ್ಲಿ ಅಳವಡಿಸಿಕೊಳ್ಳಲು ಎದುರಿಸಬೇಕಾದ ಸವಾಲುಗಳನ್ನು, ತನ್ನ ನೆಲಕ್ಕೆ ತಂದುಕೊಳ್ಳುವಲ್ಲಿನ ಸಮಸ್ಯೆಗಳನ್ನು ಕುರಿತು ಚರ್ಚಿಸುತ್ತಾರೆ. ಇವರ ಈ ಚಿಂತನೆಯು ಕನ್ನಡ ಸಾಹಿತ್ಯ ವಿಮರ್ಶೆಯ ಜೊತೆಗೆ ಆಂತರಂಗಿಕವಾಗಿ ಪುಸ್ತಕ ವಿಮರ್ಶೆಯು ಚಿಂತನೆಗಳನ್ನು ಅಳವಡಿಸಿಕೊಂಡಿದೆ ಎಂಬುದನ್ನು ಸಾಂಕೇತಿಕವಾಗಿ ಸೂಚಿಸುತ್ತದೆ.

ಹೊಸಗನ್ನಡದ ಅರುಣೋದಯದಿಂದ ಕನ್ನಡದಲ್ಲಿ ವಿಮರ್ಶೆಯು ಒಂದು ರೂಪ ಪಡೆಯಲಾರಂಬಿಸಿತು. ಆಗ ವಿಮರ್ಶೆಯ ವಿವಿಧ ಕವಲುಗಳಲ್ಲಿ 'ಪುಸ್ತಕ ವಿಮರ್ಶೆ'ಯೂ ಒಂದಾಗಿತ್ತು. ಆದರೆ ಆಗ ಅದು ಕೃತಿ ಪರಿಚಯವಾಗಿಯಷ್ಟೇ ಉಳಿದ್ದಿತ್ತು. 'ಪ್ರಬುದ್ಧ ಕರ್ನಾಟಕ', 'ಜಯಂತಿ', 'ಜೀವನ', 'ಜಯಕರ್ನಾಟಕ', 'ವಾಗ್ಭೂಷಣ', 'ಸಾಹಿತ್ಯ ಪರಿಷತ್ಪತ್ರಿಕೆ', 'ಸುವಾಸಿನಿ', 'ಶ್ರೀ ಕೃಷ್ಣಸೂಕ್ತಿ', ಸ್ವದೇಶಾಭಿಮಾನಿ', ಗಳಂತಹ ೨೦ನೇ ಶತಮಾನದ ಮೊದಲ ಹಂತದ ಪತ್ರಿಕೆಗಳ ಮೊದಲ ಸಂಚಿಕೆಗಳಲ್ಲಿನ 'ಪುಸ್ತಕ ವಿಮರ್ಶೆ'ಗಳನ್ನು ಗಮನಿಸಿದರೆ ಅವು ಹೆಸರಿಗೆ ಮಾತ್ರ ಪುಸ್ತಕ ವಿಮರ್ಶೆಯಾಗಿದ್ದವು. ಅವುಗಳಲ್ಲಿ ಕೃತಿ ಕೇವಲ ಪರಿಚಯದ ರೂಪದಲ್ಲೇ ಪ್ರಕಟವಾಗುತ್ತಿತ್ತು. ಇದಕ್ಕೆ ಕಾರಣ ಹಿಂದಿನ ಸಂಪ್ರದಾಯ ಮತ್ತು ಹೊಸ ವಿಮರ್ಶೆಯ ಚಿಂತನೆ ಇವೆರಡನ್ನು ಕೂಡಿಕೊಳ್ಳುವ ಸಂದರ್ಭವಾಗಿರುವುದು ಎನಿಸುತ್ತದೆ. ಆದರೂ ಆಗ ಬರುತ್ತಿದ್ದ 'ಪುಸ್ತಕ ವಿಮರ್ಶೆ' ವಿಮರ್ಶೆಗಿಂತ

ಭಿನ್ನವಾಗಿತ್ತು. ಹಿಂದೆ ಹಳಗನ್ನಡ ಕವಿಗಳೆಲ್ಲ ಅನುಸರಿಸಿಕೊಂಡು ಬಂದ ಒಂದು ಸಂಪ್ರದಾಯವೆಂದರೆ ಕಾವ್ಯ ಪ್ರಾರಂಭದಲ್ಲಿ ಇತರ ಅಂಶಗಳ ಜೊತೆ ಮಹಾಕವಿ ಪ್ರಶಂಸೆ, ಕುಕವಿ ನಿಂದೆಗಳ ಭಾಗಗಳನ್ನು ಸೇರಿಸುತ್ತಿದ್ದುದು, ಮಹಾಕವಿಗಳನ್ನು ಹೊಗಳಿ, ಅವರ ಆಶೀರ್ವಾದಕ್ಕಾಗಿ ಬೇಡಿ ಅವರ ಮಾರ್ಗದಲ್ಲಿ ತಾನು ನಡೆಯುವೆನೆಂದು ಸಂಕಲ್ಪಿಸಿಕೊಳ್ಳುವ ಕವಿ ತನಗೆ ಪ್ರಿಯರಾದ ಅನೇಕ ಹಿಂದಿನ ಕವಿಗಳನ್ನು ಹೆಸರಿಸಿ ಗೌರವ ಸೂಚಿಸುತ್ತಿದ್ದರು. ಅದರಲ್ಲಿ ಕೆಲವರ ವಿಶೇಷ ಗುಣಗಳನ್ನು ಸ್ತುತಿಸುವ ಪರಿಪಾಠವೂ ಇತ್ತು. 'ಪಂಪನದೇಸಿ'ಯನ್ನು, ನಾಗಚಂದ್ರನ 'ಕವಿತಾ ವಿದಗ್ಧಮತಿ', 'ಕಾವ್ಯ ಬರೆಯುವ ಹರಿಹರನ ಶಕ್ತಿ' ಇಂತಹ ಹಲವಾರು ಮಾತುಗಳನ್ನು ಉದ್ಧರಿಸಬಹುದು.

"ಈ ಶತಮಾನದ ಪ್ರಾರಂಭದಲ್ಲಿ ಬಂದ ಕನ್ನಡದ ಶ್ರೇಷ್ಠ ವಿದ್ವಾಂಸರು ಹಳಗನ್ನಡ ಕಾವ್ಯಗಳನ್ನು ಸಂಪಾದನೆ ಮಾಡಿ ಪ್ರಕಟಿಸುವ ರೂಪದಲ್ಲಿ ಕೆಲವನ್ನು ಸಂಗ್ರಹಿಸುವ ರೀತಿಯಲ್ಲಿ ಅವುಗಳಿಗೆ ಉಪೋದ್ಘಾತ ಬರೆದು ಆ ಕವಿಗಳ ವಿಶಿಷ್ಟತೆಗಳನ್ನು ವಿವರಿಸುವ ಬಗೆಯಲ್ಲಿ ಅಭಿರುಚಿಯನ್ನು ತಿದ್ದುವ ಕೆಲಸ ಮಾಡಿದರು. ನಂತರ ಆ ಮುಂದಿನ ಪೀಳಿಗೆ ಕಾವ್ಯದ ಭಾಗವೊಂದನ್ನು ಸನ್ನಿವೇಶವೊಂದನ್ನು ತಮ್ಮ ಅನುಭವದ ಹಿನ್ನೆಲೆಯಲ್ಲಿ ಇತರರಿಗೆ ದರ್ಶನ ಮಾಡಿಸುವ ರೂಢಿಯನ್ನು ತಂದರು. ಕನ್ನಡದಲ್ಲಿ 'ಶ್ರೀ' ಅವರು ಕಾವ್ಯಗಳ ಸ್ವಾರಸ್ಯವನ್ನು ವಿವರಿಸುವ ಪ್ರಯತ್ನವನ್ನು ತಮ್ಮದೇ ಆದ ವಿಶಿಷ್ಟ ರೀತಿಯಲ್ಲಿ ಮಾಡಲು ಯತ್ನಿಸಿದರು. ನಂತರ ಅನೇಕ ಸಾಹಿತಿಗಳು ಆ ಕ್ಷೇತ್ರದಲ್ಲಿ ಕೃಷಿ ನಡೆಸಿ 'ವಿಮರ್ಶೆ' ಎಂಬ ಸ್ವತಂತ್ರ ಪ್ರಕಾರ ಅಸ್ತಿತ್ವಕ್ಕೆ ಬರಲು ಕಾರಣರಾದರು."[೨]

ಈ ಇಪ್ಪತ್ತನೆ ಶತಮಾನದ ಮೊದಲ ದಶಕದಲ್ಲಿ ಓದಿಗೆ ತೊಡಗಿಕೊಂಡವರಿಗೆ ಎರಡು ರೀತಿಯ ಜವಾಬ್ದಾರಿಗಳಿದ್ದವು. ಒಂದು: ಹೊಸ ಸಾಹಿತ್ಯ ಸೃಷ್ಟಿಗೆ ಪ್ರೇರೇಪಿಸುವುದು, ಎರಡು: ಹಿಂದಿನ ಸಾಹಿತ್ಯವನ್ನು ಪುನರ್ ಅವಲೋಕಿಸಿ ಅದರಿಂದ ಪ್ರೇರಣೆಯನ್ನು ಪಡೆಯುವುದು. ಹೀಗೆ ಹಿಂದಿನ ಸಾಹಿತ್ಯವನ್ನು ಪುನರ್ ವಿಮರ್ಶೆಗೊಳಪಡಿಸುವುದಕ್ಕಿಂತ ಮುಂಚೆ ಹಳಗನ್ನಡ ಸಾಹಿತ್ಯದ ಶೋಧನೆಯನ್ನು ಪ್ರಾರಂಭಿಸಿದರು. ಹೀಗಾಗಿ ಹಳಗನ್ನಡ ಸಾಹಿತ್ಯದ ಒಂದೊಂದು ಕೃತಿಗಳನ್ನು ಶೋಧಿಸಿ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಬರೆಯಲು ಪ್ರಾರಂಭಿಸಿದರು. ಹಳಗನ್ನಡ ಕೃತಿಗಳನ್ನು ಶೋಧಿಸಿ ಅವುಗಳನ್ನು ಓದಿ ವಿಶ್ಲೇಷಿಸುವುದು ಆ ಕಾಲದ ವಿದ್ವಾಂಸರ ಮಹತ್ತರ ಜವಾಬ್ದಾರಿಯಾಗಿತ್ತು. ಹೀಗಾಗಿ ಅವರು ಹಳೆಕೃತಿಗಳ ಓದಿನಲ್ಲಿ ತೊಡಗಿಸಿಕೊಂಡಾಗ ತನಗೆ ತಾನೇ ಕೃತಿಯ ಬಗೆಗೆ ವಿಮರ್ಶೆ ರೂಪುಗೊಳ್ಳುತ್ತಿತ್ತು. ಆ ಮುಖೇನ ಪುಸ್ತಕ ವಿಮರ್ಶೆಯ ಹುಟ್ಟುವಿಕೆಗೆ ಅಪೇಕ್ಷವಾಗಿ ಈ ವಿದ್ವಾಂಸರು ಕಾರಣರಾದರು.

ಗ್ರಂಥ ಸಂಪಾದನೆಯಲ್ಲಿ 'ಕೃತಿ ವಿಮರ್ಶೆ' ಸಂಪಾದಕರ ಕರ್ತವ್ಯಗಳಲ್ಲಿ ಒಂದಾಗಿದ್ದುದರಿಂದ ಅಲ್ಲಿ ಪುಸ್ತಕ ವಿಮರ್ಶೆಯ ಮೊದಲ ಹೆಜ್ಜೆಗಳನ್ನು ಗುರುತಿಸಬಹುದು. ಅಲ್ಲಿ ಕವಿಯ ಕಾಲ, ದೇಶ, ಕೃತಿಯ ವಿವರಗಳನ್ನು ಹೇಳುತ್ತಿದ್ದರೂ ವಿಮರ್ಶೆಯನ್ನು ಮಾಡುತ್ತಿದ್ದೇವೆ ಎಂಬ ಅರಿವು ಸಂಪಾದಕರಿಗಿರಲಿಲ್ಲ. ಸಂಪಾದನೆಯ ಕೊನೆಯ ಘಟ್ಟದಲ್ಲಿ ಆ ಕೃತಿ ಓದಿ ತಾವು ಅದರಿಂದ ಅನುಭವಿಸಿದ ಸಂತೋಷ ಮತ್ತು ತಿಳಿದುಕೊಂಡ ವಿಚಾರ ವಿವರಗಳನ್ನು 'ಕೃತಿ ವಿಮರ್ಶೆ'ಯಲ್ಲಿ

ನೀಡುತ್ತಿದ್ದರು. ಏಕೆಂದರೆ ಆ ಪುಸ್ತಕದ ಮೊದಲ ಓದುಗರು ಅವರಾಗಿದ್ದುದರಿಂದ ಆ ಕೃತಿಯ ಪರಿಚಯವನ್ನು ಮಾಡಿಕೊಡುವ ಆಗತ್ಯವಿತ್ತು. ಅಷ್ಟೇ ಅಲ್ಲ ಹಳಗನ್ನಡ ಕೃತಿಗಳನ್ನು ಪುನರ್ ಶೋಧಿಸಿ ಅವುಗಳನ್ನು ಜನಸಾಮಾನ್ಯರಿಗೆ ಪರಿಚಯಿಸುವ ಜವಾಬ್ದಾರಿಯೂ ಅವರ ಮೇಲಿತ್ತು. ಈ ಮೂಲಕ ಅವರು ಒಂದು ಬಗೆಯ 'ಪುಸ್ತಕ ವಿಮರ್ಶೆ'ಗೆ ಸುಗಮವಾದ ಹಾದಿ ಮಾಡಿಕೊಟ್ಟರು.

ಒಂದು ಕೃತಿಯ ಉನ್ನತಿ ಆ ಗ್ರಂಥವನ್ನು ಸಂಪಾದಿಸಿದ ಸಂಪಾದಕರಿಗೆ ಸವಾಲಾಗಿರುವ ಮತ್ತು ಮುಖ್ಯವಾದ ಕೆಲಸವಾಗಿರುತ್ತದೆ. ಒಂದು ಕೃತಿಯನ್ನು ಹಲವು ಹಸ್ತಪ್ರತಿಗಳಿಂದ ಕೇವಲ ಸಂಪಾದಿಸಿದ ತಕ್ಷಣ ಸಂಪಾದಕರ ಕೆಲಸ ಪೂರ್ಣಗೊಳ್ಳುವುದಿಲ್ಲ. ಆ ಕೃತಿಯ ವಿಮರ್ಶೆ ಸಂಪಾದಕರ ಮೊದಲ ಪ್ರತಿಕ್ರಿಯೆಯೂ ಆಗಿರುತ್ತದೆ. ಕೃತಿಯೊಂದು ಸಂಪಾದಿಸಿದ ಕಾಲಕ್ಕೆ ಯಾವ ಬಗೆಯ ಸಾಹಿತ್ಯಕ ಮೌಲ್ಯವನ್ನು ಒಳಗೊಂಡಿದೆ ಎಂಬುದು ಆ ಕೃತಿ ವಿಮರ್ಶೆಯಿಂದ ಖಚಿತವಾಗುತ್ತದೆ. ಆದ್ದರಿಂದ ಕೃತಿ ವಿಮರ್ಶೆ ಸಂಪಾದಕ ಕಾರ್ಯದಲ್ಲಿ ಬಹಳ ಮುಖ್ಯವಾದುದು. ಇದರಿಂದ ಸಹೃದಯರಿಗೂ ಕೃತಿಯನ್ನು ಹಲವು ಕಾರಣಗಳಿಗಾಗಿ ವ್ಯಾಸಂಗ ಮಾಡುವ ಸಂಶೋಧಕರಿಗೂ ಸಹಾಯವಾಗುತ್ತದೆ. ವಸ್ತು, ರಸ, ಶೈಲಿ, ಮತ್ತಿತರ ವಿಷಯಗಳನ್ನು ಅವಲಂಬಿಸಿ ಸಂಪಾದಕರು ಮಾಡುವ ಕೃತಿ ವಿಮರ್ಶೆ ಕೃತಿಯ ಸಾಹಿತ್ಯ ಅನನ್ಯತೆಯನ್ನು ಸಾಬೀತುಪಡಿಸುವ ಹಿನ್ನೆಲೆಯಲ್ಲಿ ಮುಖ್ಯವಾದ ಕೆಲಸವಾಗಿರುತ್ತದೆ.

ಕೃತಿಯ ಸಂಪಾದಕರು ತಾವು ಸಂಪಾದಿಸಿದ ಕೃತಿಯನ್ನು ಕುರಿತು ವಿವರವಾಗಿ ವಿಶ್ಲೇಷಣೆ ನಡೆಸಬೇಕಾಗುತ್ತದೆ. ಇದು ಓದುಗರಿಗೆ ತುಂಬಾ ಉಪಯುಕ್ತವಾದ ಅಂಶವಾಗಿರುತ್ತದೆ. ಕೃತಿಯ ಎಲ್ಲಾ ಮಗ್ಗಲುಗಳನ್ನು ಬಲ್ಲ ಸಂಪಾದಕರು ಕೃತಿ ವಿಶ್ಲೇಷಣೆ ಮಾಡಿದಲ್ಲಿ ಹೆಚ್ಚು ಸತ್ವಯುತವೂ ಮೌಲ್ಯಯುತವೂ ಆದ ಕೆಲಸ ನಡೆದಂತಾಗುತ್ತದೆ. ಕೃತಿಯ ಸಂಪಾದನೆಯ ಹಲವು ಹೊಸತನಗಳು ಕೃತಿಯ ವಿಶ್ಲೇಷಣೆಗೆ ಮಾರ್ಗದರ್ಶಿಯಾಗಿರುವುದರಿಂದ ಸಂಪಾದಿತ ಕೃತಿಯನ್ನು ಕುರಿತು ಮಾಡುವ ವಿಶ್ಲೇಷಣೆ ಬಹಳ ಮುಖ್ಯವಾದುದಾಗುತ್ತದೆ.

ಒಂದು ಕೃತಿಯನ್ನು ವಿಮರ್ಶೆ ಮಾಡಲು ಪ್ರವೇಶ ಮಾಡುವುದಕ್ಕೆ ಪುಸ್ತಕ ವಿಮರ್ಶಕರು ಹಿಂದಿನಿಂದಲೂ ಕೆಲವು ತಾತ್ವಿಕವಾದ ಸ್ವರೂಪಗಳನ್ನಿಟ್ಟುಕೊಂಡೇ ಪ್ರವೇಶಿಸಿದ್ದಾರೆ. ನವೋದಯ ಸಂದರ್ಭದಲ್ಲಿ ಕೃತಿ ವಿಮರ್ಶೆಗೆ ಮುನ್ನ ಸಾಹಿತ್ಯದ ಸ್ವರೂಪವನ್ನು ಹೇಳುತ್ತಾ ಅದು ಹೇಗಿರಬೇಕು ಎಂಬುದನ್ನು ಚರ್ಚಿಸುತ್ತಾ ಪುಸ್ತಕ ವಿಮರ್ಶಕರು. ಕೃತಿ ವಿಮರ್ಶೆಗೆ ತೊಡಗುತ್ತಿದ್ದರು. ನವ್ಯ ವಿಮರ್ಶೆಯಲ್ಲಿ ಪುಸ್ತಕ ವಿಮರ್ಶಿಸಿ ಕೃತಿ ಪ್ರವೇಶಕ್ಕೆ ಮೊದಲು ಸಾಹಿತ್ಯಿಕ ತತ್ವಗಳನ್ನು ಚರ್ಚೆ ಮಾಡುತ್ತಾ ಕೃತಿಯ ವಿಮರ್ಶಾ ಚೌಕಟ್ಟನ್ನು ಮೊದಲೇ ನಿರ್ಮಿಸಿಕೊಳ್ಳುತ್ತಿದ್ದರು? ಬಂಡಾಯ ವಿಮರ್ಶಕರು ಮೊದಮೊದಲು ಕೃತಿ ವಿಮರ್ಶೆಯನ್ನು ಕೈಗೆತ್ತಿಕೊಳ್ಳುವಾಗ ಸಮಾಜಶಾಸ್ತ್ರಜ್ಞರನ್ನು, ಮಾನವಶಾಸ್ತ್ರಜ್ಞರನ್ನು ಉಲ್ಲೇಖಿಸಿಕೊಂಡು ತಾತ್ವಿಕ ಪೀಠಿಕೆಯನ್ನು ಹಾಕಿಕೊಳ್ಳುತ್ತಿದ್ದರು. ಕೆಲವೊಮ್ಮೆ ವಿಮರ್ಶೆಯ ಮಧ್ಯದಲ್ಲಿಯೇ ಸಾಹಿತ್ಯ ತತ್ವಗಳನ್ನು ಚರ್ಚೆ ಮಾಡಿದರೆ ಮತ್ತೂ ಕೆಲವು ಕಡೆ ರಾಜಕೀಯ ಸಾಂಸ್ಕೃತಿಕ

ವಿಚಾರಗಳನ್ನು ಹೇಳುತ್ತಾ ಕೃತಿಯ ವಿಮರ್ಶೆಗೆ ತೊಡಗುತ್ತಿದ್ದರು. ಪುಸ್ತಕ ವಿಮರ್ಶೆಯ ಚಾರಿತ್ರಿಕ ಸ್ವರೂಪದ ವಿವೇಚನೆಯನ್ನು ಸ್ಥೂಲವಾಗಿ ಅಧ್ಯಯನ ದೃಷ್ಟಿಯಿಂದ ಈ ರೀತಿ ವಿಭಾಗಕ್ರಮವನ್ನು ಮಾಡಿಕೊಳ್ಳಲಾಗಿದೆ.

೧. ರಸ ಪ್ರಧಾನ ಪುಸ್ತಕ ವಿಮರ್ಶೆ
೨. ರೂಪ ಪ್ರಧಾನ ಪುಸ್ತಕ ವಿಮರ್ಶೆ
೩. ಆಶಯ ಪ್ರಧಾನ ಪುಸ್ತಕ ವಿಮರ್ಶೆ

೩. ೧. ರಸ ಪ್ರಧಾನ ಪುಸ್ತಕ ವಿಮರ್ಶೆ

೨೦ನೇ ಶತಮಾನದ ಪುಸ್ತಕ ವಿಮರ್ಶೆಯನ್ನು ಗಮನಿಸಿದಾಗ ಗ್ರಂಥ ಸಂಪಾದನೆಯಲ್ಲಿ ಪುಸ್ತಕ ಪರಿಚಯವಿದ್ದದ್ದು ಹೊಸಗನ್ನಡದ ಒತ್ತಾಸೆಗಳಿಗೆ ತೆರೆದುಕೊಳ್ಳುತ್ತ ಹೊಸ ರೂಪ ಪಡೆಯಲಾರಂಭಿಸಿತು. ಆಗ ಮಾಸ್ತಿ ಗುರುತಿಸುವಂತೆ 'ವಿಮರ್ಶೆ ಪದವೇ ನಮಗೆ ಹೊಸದು (ವಿಮರ್ಶೆ ಭಾಗ ೧), ಎಂದು ಹೇಳುತ್ತಾ ವಿಮರ್ಶಾ ಪಂಥಕ್ಕೆ ಪೀಠಿಕೆ ಹಾಕಿದರು. ಅವರು ತಿರುಮಲಾಂಬರವರ ಕಾದಂಬರಿಯನ್ನು ವಿಮರ್ಶಿಸಿದ್ದು ಮೊದಲ ಕೃತಿನಿಷ್ಠ ವಿಮರ್ಶೆಯಾಗಿತ್ತು. ಅವರು ಈ ವಿಮರ್ಶೆಯಲ್ಲಿ ನವಲ್ಲು ಮತ್ತು ರೋಮಾನ್ಸ್ ಪ್ರಕಾರಗಳಿಗಿರುವ ವ್ಯತ್ಯಾಸಗಳನ್ನು ವಿವರಿಸಿ ನವಲ್ಲು ಎನ್ನುವ ವಾಸ್ತವಿಕ ಪ್ರಕಾರದ ಲಕ್ಷಣಗಳ ಬೆಳಕಿನಲ್ಲಿ ತಿರುಮಲಾಂಬರ ಕಾದಂಬರಿಗಳ ಲೋಪದೋಷಗಳನ್ನು ಎತ್ತಿ ತೋರಿಸುತ್ತಾರೆ.

ಹೊಸದಾಗಿ ಬರೆಯುತ್ತಿದ್ದ ತಿರುಮಲಾಂಬರ ಈ ಕಾದಂಬರಿ ಪ್ರಕಾರವು ನಮ್ಮ ಕನ್ನಡದ ಸಂಪ್ರದಾಯವನ್ನು ಮೀರಿದಂತೆ, ಅಲ್ಲದೆ ಯಾರಾರೂ ಬೇಕಾದರೂ ಮನೆಯಲ್ಲಿ ಕುಳಿತು ಬರೆಯಬಹುದೆಂದು ಮಾಸ್ತಿಯವರು ಭಾವಿಸಿದರು. ಅದರಲ್ಲಿ ಮಾಸ್ತಿಯವರು ಕೃತಿಯಲ್ಲಿನ ವಿವರಗಳನ್ನು ಲೆಕ್ಚರ್‌ಗಳೆಂದು, ಪಾತ್ರಗಳು ಲೆಕ್ಚರ್ ಕೊಡುತ್ತಿವೆಯೇ ಹೊರತು ಅನುಭವವನ್ನು ಹೇಳುವುದಿಲ್ಲವೆಂದು ತಿರುಮಲಾಂಬರ ಕೃತಿಯನ್ನು ಕಟುವಾಗಿ ವಿಮರ್ಶಿಸಿದರು. ಒಂದು ಸ್ತ್ರೀ ಕಾದಂಬರಿಯನ್ನು ಪುರುಷ ಪ್ರಧಾನ ಸಮಾಜದಲ್ಲಿಟ್ಟು ವ್ಯಾಖ್ಯಾನಿಸಿದ್ದು ಒಂದು ರೀತಿಯಾದರೆ, ಸ್ತ್ರೀ ಬರೆಯುತ್ತಿರುವುದನ್ನು ಗಮನಿಸಿ ಲೇಖಕಿ ಅನುಭವದಿಂದ ಪಾಕಗೊಂಡಿಲ್ಲ ಎಂಬುದು ಇನ್ನೊಂದು ರೀತಿಯ ನಿಲುವು ಮಾಸ್ತಿಯವರದಾಗಿತ್ತು. ಸಾಹಿತ್ಯ ವಿಮರ್ಶೆ ಮತ್ತು ಪುಸ್ತಕ ವಿಮರ್ಶೆಯ ಅಧ್ಯಯನದ ಸಂದರ್ಭದಲ್ಲಿ ಮಾಸ್ತಿಯವರು ತಿರುಮಲಾಂಬ ಕೃತಿ ಬಗ್ಗೆ ಮಾಡಿದ ವಿಮರ್ಶೆ ತುಂಬಾ ಮುಖ್ಯವಾಗುತ್ತದೆ. ಅವರು ಆಗ ಬರುತ್ತಿದ್ದ ಸಾಹಿತ್ಯ ಕೃತಿಗಳ ಬಗೆಗೆ ಇಟ್ಟುಕೊಂಡ ನಿಲುವುವನ್ನು ಹೀಗೆ ನೋಡಬಹುದು.

"ಸಾಹಿತ್ಯವು ಉದ್ದೇಶ ಆಶಯಗಳಲ್ಲಿ ಬಹುಮುಖವಾದರೆ ಇಂಥ ವಿಮರ್ಶೆಯು ಅವಶ್ಯಕವಾಗುತ್ತದೆ. ಹಿಂದೆ ಒಬ್ಬನು ಕಲಿಯುತ್ತಿದ್ದ ಕಡೆ ಈಗ ನಲವತ್ತು ಜನ ಅಕ್ಷರವನ್ನು ಕಲಿಯುತ್ತಿದ್ದಾರೆ. ಇದರಿಂದ ಬರೆಯುವ ಜನರ ಸಂಖ್ಯೆಯೂ ಹೆಚ್ಚಿದೆ, ಬರೆಯುವ ಪುಸ್ತಕಗಳ ಸಂಖ್ಯೆಯೂ ಹೆಚ್ಚಿದೆ, ಈ ಕಾರಣಗಳಿಂದ ಒಳ್ಳೆಯ ಪುಸ್ತಕ ಇದು, ಇದು ಒಳ್ಳೆಯದಲ್ಲ ಎಂದು ನಿರ್ಧರಿಸುವುದೇ ಪ್ರಯಾಸವಾಗಿದೆ. ಅಲ್ಲದೆ ನಮ್ಮ ಜೀವನವು ಬಹುಮುಖವಾದಂತೆ ನಮ್ಮ ಸಾಹಿತ್ಯದ ಭಾಗಗಳೂ

ಬಹುಮುಖವಾಗುತ್ತ ಬಂದಿವೆ. ಇವುಗಳನ್ನೆಲ್ಲ ಚರ್ಚೆಮಾಡಿ ಅವುಗಳ ಸಾಧುತ್ವವನ್ನು ನಿರ್ಧರಿಸುವುದು ಅವಶ್ಯಕವಾಗಿದೆ' 'ಸಾಹಿತ್ಯದಲ್ಲಿ ವಿಮರ್ಶೆಯ ಕಾರ್ಯ' ಎಂಬ ಮೇಲಿನ ಲೇಖನದಲ್ಲಿ ತಮ್ಮನ್ನು ಸಮರ್ಥಿಸಿಕೊಳ್ಳುತ್ತಲೇ "ಈಗ ಸಾಮಾನ್ಯವಾಗಿ ಜನರು ಕೊಳ್ಳಬಹುದಾದ ಪುಸ್ತಕಗಳಿಗೆ ಹತ್ತರಲ್ಲಿ ಒಂದು ಒಳ್ಳೆಯದಿರಬಹುದೋ ಇಲ್ಲವೋ ಸಂದೇಹ ಪಡಬಹುದಾಗಿದೆ............ ಇದೆಲ್ಲ ಕಾರಣಗಳಿಂದ ನಮ್ಮ ಸಾಹಿತ್ಯದಲ್ಲಿ ವಿಮರ್ಶೆಯು ಈಗ ವ್ಯಕ್ತ ಸ್ವರೂಪವನ್ನು ಹೊಂದಬೇಕಾಗಿದೆ." [೩] ಎಂದು ಸ್ಪಷ್ಟೀಕರಿಸುತ್ತಾರೆ.

ಮಾಸ್ತಿಯವರ ಈ ಆತಂಕವನ್ನು ಗಮನಿಸಿದರೆ ಇವರಿಗೆ ಕಾಡಿರುವುದು ಬರುತ್ತಿರುವ ಹಲವಾರು ಕೃತಿಗಳಲ್ಲಿ ಜನರು ಓದಬಹುದಾದ ಕೃತಿಗಳನ್ನು ಕಾಣುವುದು ವಿರಳ ಎಂಬ ಆತಂಕ. ಇದಕ್ಕೆ ಆ ಹೊತ್ತಿನ ಸಾಂಸ್ಕೃತಿಕ ಕಾರಣಗಳು ಮುಖ್ಯವಾಗಿವೆ. ಆ ಹೊತ್ತಿಗೆ ಹೊಸದಾಗಿ ಇಂಗ್ಲೀಷ್ ಶಿಕ್ಷಣ ಕ್ರಮವು ಭಾರತಕ್ಕೆ ಆಗಮಿಸಿದ್ದರಿಂದ ಭಾರತದ ಗುರುಕುಲ ಪದ್ಧತಿಯ ಶಿಕ್ಷಣ ವ್ಯವಸ್ಥೆ ಪರಿವರ್ತನೆಯಾಗಿ ಎಲ್ಲರಿಗೂ ಶಿಕ್ಷಣ ದೊರೆಯುವ ಅವಕಾಶ ಒದಗಿಬಂತು. ಸಾಕ್ಷರತೆಯ ಬಗ್ಗೆ ಬಂದ ಹೊಸ ಅರಿವಿನಿಂದಾಗಿ ಕೇವಲ ಕೆಲವರ ಕೈಯಲ್ಲಿಯೇ ಇದ್ದ ಸಾಹಿತ್ಯ ಬಿಡುಗಡೆಗೊಂಡು ಎಲ್ಲರೂ ಪ್ರವೇಶಿಸಬಹುದಾದ ಮುಕ್ತ ಅವಕಾಶ ದೊರೆಯಿತು. ಇಲ್ಲಿ ಸ್ಪಷ್ಟವಾಗಿಯೇ ಮಾಸ್ತಿಯವರಿಗೆ ಆಧುನಿಕ ವಿಚಾರಧಾರೆಗಳು ಹೊಸ ಹೊಸ ಸಮುದಾಯಗಳು ಸಾಹಿತ್ಯಕ್ಷೇತ್ರವನ್ನು ಪ್ರವೇಶಿಸುತ್ತಿರುವುದರ ಬಗ್ಗೆ ಆತಂಕವಿದೆ. ಈ ಆತಂಕಕ್ಕೆ ಸ್ತ್ರೀ ಬರೆದ ಕೃತಿಯು ಕಾರಣವಾಗಿ ಕಂಡಿದೆ. ಆದ್ದರಿಂದ ಸಾಹಿತ್ಯವನ್ನು ಹೆಚ್ಚಿನ ಜನರು ಬರೆಯಲು ಪ್ರಾರಂಭಿಸಿದಾಗ ಕೆಟ್ಟ ಸಾಹಿತ್ಯ ಬರಬಹುದೆಂಬ ಸಹಜ ಆತಂಕ ಮಾಸ್ತಿಯವರಿಗೆ ಕಾಡಿದೆ. ಹಾಗಾಗಿ ಮಾಸ್ತಿಯವರ ನಿಲುವು ವಿಮರ್ಶೆಯ ಕಡೆಗೆ ತಿರುಗಿದೆ. ಈ ಕಾರಣದಿಂದ ಮಾಸ್ತಿಯವರು ತಿರುಮಲಾಂಬರ ಕೃತಿಗಳ ಬಗೆಗೆ ಸಾಂಪ್ರದಾಯಿಕ ಮನಸ್ಥಿತಿಯಲ್ಲಿ ಮಾಡಿದ ಈ ವಿಮರ್ಶೆ ಆಧುನಿಕ ಕನ್ನಡ ವಿಮರ್ಶೆಯ ಮೊದಲ ವಸ್ತುನಿಷ್ಠ ಮತ್ತು ಕೃತಿನಿಷ್ಠ ವಿಮರ್ಶೆ ಎಂದು ಹೇಳಬಹುದು. ಆದರೆ ಮಾಸ್ತಿಯವರ ವಿಮರ್ಶೆ ಆ ಕಾಲಕ್ಕೆ ತಂದಂತಹ ಬದಲಾವಣೆ ಇತ್ತೀಚಿನ ದಶಕಗಳಲ್ಲಿ ತೀವ್ರ ಚರ್ಚೆಗೆ ಒಳಗಾಯಿತು.

ಮಾಸ್ತಿಯವರೇ ತಮ್ಮ ಲೇಖನವನ್ನು ಪುಸ್ತಕರೂಪದಲ್ಲಿ ತರುವ ಸಂದರ್ಭದಲ್ಲಿ ವಿಮರ್ಶೆಯ ಕಟುತ್ವದ ಬಗ್ಗೆ ತಮ್ಮ ನಿಲುವನ್ನು ಬದಲಾಯಿಸಿಕೊಂಡರು.

"ಗ್ರಂಥ ಕರ್ತೆಯವರ ವಿಷಯದಲ್ಲಿ ಆ ಗೌರವ ಇಲ್ಲದಿದ್ದರೆ ನಾನು ಆ ವಿಮರ್ಶೆಯನ್ನು ಬರೆಯುತ್ತಿರಲಿಲ್ಲ. ಆದರೆ ವಿಮರ್ಶೆಯಲ್ಲಿ ಒಂದೆರಡು ಕಡೆ ಮಾತುಗಳು ಸ್ವಲ್ಪ ಕಠಿಣವಾದುವೆಂದು ಈಚೆಗೆ ನನಗೆ ತೋರಿದೆ" [೪]

ಈ ನಿಲುವಿನ ಬದಲಾವಣೆ 'ಪುಸ್ತಕ ವಿಮರ್ಶೆ'ಯಲ್ಲಿ ಒಂದು ಚಾರಿತ್ರಿಕ ಘಟನೆ. ಹೀಗೆ ನಿಲುವು ಬದಲಾಯಿಸಿಕೊಂಡ ಕಾರಣವೇ ಅಮೂರ್ತವಾಗಿ ಕೃತಿ ಬಗ್ಗೆ ಇಂತಿಷ್ಟೇ ಎಂದು ತೀರ್ಮಾನ ಕೊಡುವ ನ್ಯಾಯಧೀಶನ ಹಾಗೆ ವಿಮರ್ಶನ ಕಾರ್ಯ ನಿರ್ವಹಿಸುವಂತಿಲ್ಲ ಎಂಬುದು ಗೊತ್ತಾಗುತ್ತದೆ. ಹೀಗಾಗಿ ಪುಸ್ತಕ ವಿಮರ್ಶೆಯು ಆಯಾ ಕಾಲದ ಮನಸ್ಥಿತಿ, ಚಾರಿತ್ರಿಕ ಒತ್ತಡಗಳಿಂದ ಹುಟ್ಟುವ

ತಾತ್ಕಾಲಿಕ ಪ್ರತಿಕ್ರಿಯೆ ಎಂದು ಗೊತ್ತಾಗುತ್ತದೆ. ಈ ಬದಲಾದ ನಿಲುವು, ಮತ್ತೆ ಮತ್ತೆ ಮಾಡುವ ಹೊಸ ಓದುಗಳು ಹಳೆ ನಿರ್ಣಯಗಳನ್ನು ಬದಲಿಸುತ್ತದೆ. ಕೃತಿಯನ್ನು ಬೇರೆಯಾಗಿ ನೋಡಲು ಒತ್ತಾಯಿಸುತ್ತವೆ ಎಂದು ಸೂಚಿಸುತ್ತದೆ.

ಪುಸ್ತಕ ವಿಮರ್ಶೆ ಮೊದಲು ಪ್ರಾಸಂಗಿಕವಾದದ್ದು ಹೊಸಗನ್ನಡ ಆರಂಭದ ಕೆಲ ದಶಕಗಳ ಹೊತ್ತಿಗೆ ಒಂದು ತಾತ್ವಿಕ ರೂಪ ಪಡೆಯುತ್ತಿದ್ದಾಗ ವಿಮರ್ಶೆಯನ್ನು ಕೃತಿನಿಷ್ಠ ಮಾಡಬೇಕೆ? ಕರ್ತೃನಿಷ್ಠ ಮಾಡಬೇಕೆ? ಎಂಬ ಪ್ರಶ್ನೆಯಲ್ಲಿ 'ದರ್ಶನ ವಿಮರ್ಶೆ' ರೂಪುಗೊಂಡಿತು. ಏಕೆಂದರೆ ಕನ್ನಡ ಸಾಹಿತ್ಯ ಪ್ರಾರಂಭಿಕ ಕಾಲ ವಿಮರ್ಶಗಿಂತಲೂ ಮುಖ್ಯವಾಗಿ ಸೃಷ್ಟಿಶೀಲ ಸಾಹಿತ್ಯದ ಕಾಲವೆಂದು ಭಾವಿಸಲಾಗಿತ್ತು. ಈ ಸಂದರ್ಭದಲ್ಲಿನ ವಿಮರ್ಶಕರೆಲ್ಲರೂ ಸೃಜನಶೀಲರೂ ಆಗಿದ್ದುದರಿಂದ ಅವರ ವಿಮರ್ಶೆ ಸೃಜನಶೀಲತೆಯ ಒಂದು ಭಾಗವಾಗಿತ್ತು. ಅದೂ ಅಲ್ಲದೆ ಅವರು ಪರಂಪರಾಗತ ಮೌಲ್ಯಗಳನ್ನು ತಿಳಿದವರಾಗಿದ್ದರು. ಆದುದರಿಂದ ಅವರ ವಿಮರ್ಶೆ ಪ್ರಾಚೀನ ಕಾವ್ಯಗಳ ಸತ್ವದಲ್ಲಿ ಅಡಗಿತ್ತು. ವಿಮರ್ಶೆಯಲ್ಲಿ ದರ್ಶಿಸುವ ಕಡೆ, ಸಹೃದಯರ ಬಗೆಗಿನ ಗಮನಕ್ಕಿಂತ ಸೃಜನಶೀಲ ಲೇಖಕರನ್ನು ಗಮನದಲ್ಲಿಟ್ಟುಕೊಂಡು 'ದರ್ಶನ ವಿಮರ್ಶೆ'ಗೆ ಕೈ ಹಾಕಿದರು. ಈ ಕಾಲದ 'ದರ್ಶನ ವಿಮರ್ಶೆ'ಯಲ್ಲಿ ವಿವರಗಳು, ಹಿನ್ನೆಲೆಗಳು ಹೆಚ್ಚಾಗಿ ಕನ್ನಡ ಸಾಹಿತ್ಯದ ಪ್ರಾಚೀನ ಕಾವ್ಯಗಳ ಮೂಲಕವೇ ಹರಿದು ಬರುತ್ತಿದ್ದವು, ಉದಾಹರಣೆಗಳನ್ನು ಸಹ ಅವುಗಳನ್ನೇ ಉಲ್ಲೇಖಿಸುತ್ತಿದ್ದರು. ಆದರೆ ಆ 'ದರ್ಶನ ವಿಮರ್ಶೆ' ಮುಂದುವರಿಯದಿದ್ದಕ್ಕೆ ಹಲವು ಕಾರಣಗಳು ಕಂಡುಬರುತ್ತವೆ. ಕನ್ನಡದ ಪ್ರಾರಂಭದ ಸಾಹಿತ್ಯ ಪಾಶ್ಚಾತ್ಯರ ಪ್ರಭಾವದಿಂದ ಬೆಳೆದು ಬಂದಿತ್ತು. ಆದರೆ ಕೆಲವೊಮ್ಮೆ ಪಾಶ್ಚಾತ್ಯ ವಿಚಾರಗಳನ್ನು ಕೇವಲ ಸೃಜನಶೀಲತಗೆ ಬಳಸಿಕೊಂಡಿತು. ಅದರಾಚೆಗಿನ ಸೃಜನೇತರ ಕಾರ್ಯಕ್ಕೆ ಬಳಕೆಯಾಗಲಿಲ್ಲ. ಆದುದರಿಂದ ಆಧುನಿಕ ಚಿಂತನೆ ವಿಚಾರಗಳು ಬಂದಂತೆಲ್ಲ 'ದರ್ಶನ ವಿಮರ್ಶೆ'ಗೆ ಸವಾಲಾಗತೊಡಗಿತು. ಕನ್ನಡ ಸಾಹಿತ್ಯದ ಆರಂಭದ ದಶಕದಲ್ಲಿ ವಿಮರ್ಶೆಯ ಬಗೆಗಿದ್ದ ವ್ಯಾಖ್ಯಾನಗಳಿವು.

ಕುವೆಂಪು : *"ವಿಮರ್ಶೆಯೆಂದರೆ ಕವಿ ಪ್ರತಿಭೆಯಿಂದ ಹೊರಹೊಮ್ಮುವ ಸುಂದರ ಭಾವಮಯ ಕಾವ್ಯ ಕ್ಷೇತ್ರಗಳಲ್ಲಿ ಸೂಕ್ಷ್ಮಮತಿಯಾದ ಸಹೃದಯನು ಕೈಗೊಳ್ಳುವ ವಿಹಾರ ಯಾತ್ರೆ ಅಥವಾ ಸಾಹಸಯಾತ್ರೆಯ ಕಥನಕಾರ್ಯ"* [೫]

ಮಾಸ್ತಿ : *"ಭಾವಗ್ರಹಣವಿಲ್ಲದೆ ಬುದ್ಧಿಯಿಂದ ಮಾಡುವ ವಿಚಾರವು ಶುಷ್ಕವಾಗುವುದು ನಿಜ ಆದರೆ ಬುದ್ಧಿ ಮೂಲಕವಾದ ವಿಚಾರವಿಲ್ಲದ ರಸಾನುಭವವು ವಿವೇಚನೆಯಿಲ್ಲದ ಉತ್ಸಾಹದಲ್ಲೂ ಪರಿಣಾಮವಾಗುವುದು."* [೬]

ಇಲ್ಲಿ ವಿಮರ್ಶಕರನ್ನು ಸಹೃದಯರೆಂದೂ, ವಿಮರ್ಶನ ಕಾರ್ಯವನ್ನು ಸಾಹಸಯಾತ್ರೆಯ ಕಥನಕಾರ್ಯ, ವಿಚಾರದಿಂದ ಬುದ್ಧಿಯಿಂದ ಮಾಡುವ ಚರ್ಚೆಯೆಂತಲೂ ಭಾವಿಸಿರುವುದನ್ನು ಗಮನಿಸಿದರೆ ವಿಮರ್ಶೆಯನ್ನು ಸೃಜನಶೀಲ ಕೃತಿ ನಿರ್ಮಾಣ ಒಂದು ಭಾಗವಾಗಿ ಪರಿಗಣಿಸಿರುವುದು ಗೊತ್ತಾಗುತ್ತದೆ. ಅಲ್ಲದೆ ಕೃತಿಯನ್ನು ವಿಮರ್ಶಿಸುವಾಗ ವಿಮರ್ಶಕರಿಗೆ 'ಕವಿ ಮನಸ್ಸಿನ ಭಾವ' ಅವಶ್ಯಕ ಎಂಬುದನ್ನು ತೋರಿಸುತ್ತದೆ. ಆ ಕಾಲದಲ್ಲಿ ವಿಮರ್ಶೆಯನ್ನು ಬರೆಯುತ್ತಿದ್ದವರೆಲ್ಲಾ ಸಾಹಿತ್ಯವನ್ನು

ಗಂಭೀರವಾಗಿ ತೊಡಗಿಸಿಕೊಂಡವರು, ಸೃಜನಶೀಲ ಲೇಖಕರು ಆಗಿದ್ದುದೇ ಅದಕ್ಕೆ ಕಾರಣವಾಗಿರಬಹುದು. ಪುಸ್ತಕ ವಿಮರ್ಶೆಗೆ ಬರುತ್ತಿದ್ದಂಥ ಪ್ರತಿಕ್ರಿಯೆಗಳು ಅದೇ ಸ್ವರೂಪದ್ದಾಗಿದ್ದವು. ಟಿ.ಪಿ. ಕೈಲಾಸಂರ 'ಟೊಳ್ಳುಗಟ್ಟಿ' ನಾಟಕವನ್ನು ಎ.ಆರ್. ಕೃಷ್ಣಶಾಸ್ತ್ರೀಯವರು ಪ್ರಬುದ್ಧ ಕರ್ನಾಟಕದಲ್ಲಿ (ಸಂಚಿಕೆ ೧೪) ವಿಮರ್ಶಿಸಿದರು. ಈ ವಿಮರ್ಶೆಗೆ 'ಜಯಕರ್ನಾಟಕ'ದಲ್ಲಿ 'ಟೊಳ್ಳುಗಟ್ಟಿಯ ಗುಟ್ಟನ್ನರಿತ ಪುಟ್ಟುವಿನಂಥ ಕಿಟ್ಟು' ಎಂಬ ಶೀರ್ಷಿಕೆಯಲ್ಲಿ ಸಿದ್ದವನಹಳ್ಳಿ ಕೃಷ್ಣಶರ್ಮರು ಪ್ರತಿಕ್ರಿಯಿಸಿರುವುದನ್ನು ಗಮನಿಸಿಬಹುದು. ಇಲ್ಲಿ ಪರಸ್ಪರ ಉತ್ತೇಜನ ಕೊಡಬೇಕೆಂಬ ಭಾವವಿರುವುದನ್ನು ಗುರುತಿಸಬಹುದು. ಉದಾರವಾದದ ಆಚೆಗೆ ಹೋಗಿ ಸಾಮಾಜಿಕ ಸನ್ನಿವೇಶದಲ್ಲಿ ಚಿಂತಿಸುವುದಕ್ಕೆ ಇದರಿಂದ ಈ ಲೇಖಕರಿಗೆ ಸಾಧ್ಯವಾಗಿಲ್ಲ.

ಈ ಸಂದರ್ಭದಲ್ಲಿ ವಿಮರ್ಶಕರನ್ನು ಪರಿಚಯಕಾರರನ್ನಾಗಿ ಗುರುತಿಸಿಕೊಳ್ಳಲಾಗಿದೆ *ಕೃತಿಯನ್ನು ತಾನು ಸರಿಯಾಗಿ ಓದಿ ಚೆನ್ನಾಗಿ ಅರ್ಥಮಾಡಿಕೊಂಡು ಸಂತೋಷಪಟ್ಟು ಅದನ್ನು ಇತರರಿಗೆ ಪರಿಚಯ ಮಾಡಿಕೊಡುವುದು ವಿಮರ್ಶಕನ ಮೊದಲ ಕರ್ತವ್ಯ. ಮೇಲುನೋಟಕ್ಕೆ ಒಂದು ನೋಟಕ್ಕೆ ಮರೆಯಲಾರದ ಸೌಂದರ್ಯಗಳಿರುವಾಗ ಅದನ್ನು ಹೆಚ್ಚು ಸಲ ನೋಡಬೇಕಾಗುತ್ತದೆ. ಇನ್ನೊಬ್ಬರ ನೆರವಿಲ್ಲದೆ ಸ್ವಂತವಾಗಿ ಕೃತಿಯನ್ನು ಅರಿಯಲಾರದ ಜನಕ್ಕೆ ಈ ಪರಿಚಯ ಕಾರ್ಯ ತುಂಬಾ ಸಹಾಯವಾಗುವುದು. ಸಾಮಾನ್ಯವಾಗಿ ಜನರ ಕಣ್ಣಿಗೆ ಬೀಳದ ಒಂದು ಒಳ್ಳೆಯ ಕೃತಿಯನ್ನು ಸಾರವತ್ತಾದ ಅಂಶವನ್ನು ಹೀಗೆ ಪರಿಚಯ ಮಾಡಿಕೊಡುವುದು ಅದರ ಅರ್ಥವನ್ನು ವಿಶದಗೊಳಿಸುವಂತೆ, ವಿವರಿಸುವಂತೆ ಹೊಸದಾಗಿ ಎತ್ತಿ ತೋರಿಸುವಂತೆ ಆಗುತ್ತದೆ. ಕೃತಿಯಲ್ಲಿ ತಾನು ಕಂಡ ವಿಶೇಷವನ್ನು ಹೇಗೆ ಆಯ್ದು ಕೊಡಿಸಿ ಜನರ ಗಮನಕ್ಕೆ ತರುವುದು ಇಂಥ ಪರಿಚಯಕಾರನಾದ ವಿಮರ್ಶಕರು ಸಾಹಿತ್ಯಕ್ಕೆ ಸಲ್ಲಿಸುವ ಸೇವೆ* [೭]

ಪುಸ್ತಕ ವಿಮರ್ಶೆ ಈ ಕಾಲದಲ್ಲಿ ಯಾಕೆ ಈ ಧೋರಣೆ ತಳೆಯಿತು ಎಂದು ಪ್ರಶ್ನೆ ಮಾಡಿಕೊಂಡಾಗ ಆ ಕಾಲದ ಸಾಂಸ್ಕೃತಿಕ ಸನ್ನಿವೇಶ ಗಮನಕ್ಕೆ ಬರುತ್ತದೆ. ಆಗ ಪ್ರಧಾನವಾಗಿ ಈ ಕೆಳಗಿನ ಲಕ್ಷಣಗಳು ಸಾಹಿತ್ಯದ ಮೇಲೆ ಹಿಡಿತ ಸಾಧಿಸಿದ್ದವು.

೧. ಸಾಹಿತ್ಯ ಸೃಷ್ಟಿ ಕಡಿಮೆಯಿದ್ದುದು.

೨. ಒಂದೇ ವರ್ಗದ ಲೇಖಕರು ಬರೆಯುತ್ತಿದ್ದುದು.

೩. ಲೇಖಕರ ನಡುವೆ ಸೈದ್ಧಾಂತಿಕ ಭಿನ್ನಾಭಿಪ್ರಾಯಗಳು ಕಡಿಮೆಯಿದುದ್ದು.

ಸಾಹಿತ್ಯ ಸೃಷ್ಟಿಯೆಂಬುದು ದೈವ ಪ್ರೇರಿತ ಸೃಷ್ಟಿ ಎಂದು ಭಾವಿಸಿ ಅದನ್ನು ದೈವತ್ವಕ್ಕೇರಿಸಿ ವಿಶಿಷ್ಟೀಕರಣಗೊಳಿಸಲಾಗಿತ್ತು. ಹಾಗಾಗಿ ಬರಹರೂಪದ ಆಧುನಿಕ ಸಾಹಿತ್ಯವನ್ನು ಸೃಜಿಸಲು ಎಲ್ಲರೂ ಪ್ರಯತ್ನಿಸಲಿಲ್ಲ ಅದಕ್ಕೆ ಉಚ್ಚ ಜಾತಿಯ ಮಧ್ಯಮ ವರ್ಗ, ಪರಂಪರೆಯಾಗಿ ಹಿಡಿತದಲ್ಲಿಟ್ಟುಕೊಂಡು ಬಂದಿತ್ತು. ಏಕೆಂದರೆ ಆಗ ಶಿಕ್ಷಣವೆಂಬುದು ಮುಖ್ಯವಾಗಿ ಮೇಲ್ವರ್ಗದವರಿಗೆ ಮಾತ್ರ ಇತ್ತು. ಅವರೇ ಸಾಹಿತ್ಯದ ರೂವಾರಿಗಳು ಆಗಿದ್ದರು. ಆ ವರ್ಗವೇ ಸಾಹಿತ್ಯದ ಪ್ರವರ್ತಕ ವರ್ಗವಾಗಿತ್ತು. ಹೀಗಾಗಿ ಶಿಕ್ಷಣ ಪಡೆದ ಅವರೇ ಸಾಹಿತ್ಯ ರಚಿಸಬೇಕಾಗಿದ್ದುದರಿಂದ, ಶಿಕ್ಷಣ ಪಡೆದ ಇತರ ವರ್ಗದವರ ಸಂಖ್ಯೆಯೂ ಬಹಳ ಕಡಿಮೆಯಿತ್ತು. ಇದು ಸಾಹಿತ್ಯದ ಮೇಲೂ ತನ್ನ ಪರಿಣಾಮವನ್ನು ಬೀರಿತು.

ಆ ಕಾರಣದಿಂದ ಸಾಹಿತ್ಯ ಸೃಷ್ಟಿ ಕಡಿಮೆಯಿತ್ತು.

ಹೊಸಗನ್ನಡ ಸಂದರ್ಭದಲ್ಲಿ ಹೊಸದಾಗಿ ಶಿಕ್ಷಣಕ್ಕೆ ತೆರೆದುಕೊಂಡು ಅದರಿಂದ ಬರಬಹುದಾದ ಎಲ್ಲ ಅನುಕೂಲಗಳನ್ನು ಪಡೆದುಕೊಂಡಿದ್ದುದು ಮೇಲ್ವರ್ಗ. ಹೀಗಾಗಿ ಆ ಸಂದರ್ಭದಲ್ಲಿ ಬರೆಯುತ್ತಿದ್ದ ಲೇಖಕರನ್ನೆಲ್ಲ ಒಟ್ಟಿಗೆ ಕೂಡಿಸಿ ನೋಡಿದಾಗ ಅವರೆಲ್ಲ ಹೆಚ್ಚಾಗಿ ಒಂದೇ ಸಾಮಾಜಿಕಸ್ತರದಿಂದ ಬಂದವರು ಲೇಖಕರಾಗಿ ಕಂಡುಬರುತ್ತಾರೆ. ಇದಕ್ಕೆ ಅವರು ಪಡೆದುಕೊಂಡು ಬಂದಿದ್ದ ಪರಂಪರಾಗತ ಶಿಕ್ಷಣ ಮತ್ತು ವಸಹಾತುಶಾಹಿ ಆಧುನಿಕತೆಗೆ ಮೊದಲು ತೆರೆದುಕೊಂಡ ಸಮೂಹವಾಗಿರುವುದೇ ಕಾರಣವಾಗಿದೆ.

ಆ ಕಾಲದ ಸಂವೇದನೆಗಳು ನೇರವಾಗಿ ಸಾಹಿತ್ಯಕ್ಕೆ ಸಂಬಂಧಿಸಿದವು. ಅವುಗಳನ್ನು ಸೃಜಿಸುವವರ ಸಂವೇದನೆಗಳು ಭಿನ್ನವಾಗಿಲ್ಲದ ಕಾರಣ ಅವರೆಲ್ಲರೂ ಒಂದೇ ಸಿದ್ಧಾಂತಕ್ಕೆ ಬದ್ಧರಾಗಿದ್ದರು. ಆ ಕಾರಣದಿಂದ ಅವರ ನಡುವೆ ತಾತ್ವಿಕ ಭೇದಗಳಿರಲಿಲ್ಲ. ತಾತ್ವಿಕ ಜಗಳಗಳ ಸಾಧ್ಯತೆಗಳಿರಲಿಲ್ಲ. ಇದ್ದರೂ ತೀಕ್ಷ್ಣಮಟ್ಟಕ್ಕೆ, ಗಂಭೀರ ರೂಪ ತಳೆಯುವ ಮಟ್ಟಕ್ಕೆ ಇಲ್ಲದಿರುವುದರಿಂದ 'ಪುಸ್ತಕ ವಿಮರ್ಶೆ' ಪರಿಚಯಕಾರಕವಾದ ಕ್ರಿಯೆಯಾಗಿಯಷ್ಟೇ ಉಳಿಯಲು ಕಾರಣವಾಯಿತು.

ಈ ಸಂದರ್ಭದಲ್ಲಿ ಪುಸ್ತಕ ವಿಮರ್ಶೆ ಬೆಳೆಯಲು ಪ್ರೇರಕ ಶಕ್ತಿಗಳಾಗಿ ಪತ್ರಿಕೆಗಳು ಕೆಲಸ ಮಾಡಿದವು. ಅವುಗಳಲ್ಲಿ 'ಸುವಾಸಿನಿ', 'ಶ್ರೀ ಕೃಷ್ಣಸೂಕ್ತಿ', 'ಪ್ರಬುದ್ಧ ಕರ್ನಾಟಕ', 'ಜಯಂತಿ', 'ಜೀವನ', 'ಜಯಕರ್ನಾಟಕ', 'ವಾಗ್ಭೂಷಣ' ಮುಂತಾದ ಪತ್ರಿಕೆಗಳನ್ನು ಮುಖ್ಯವಾಗಿ ಗುರುತಿಸಬಹುದು.

'ಸುವಾಸಿನಿ' ೧೯೦೦ ಜುಲೈ ೧ ರಂದು ಆರಂಭವಾಯಿತು. ಸುಮಾರು ಹನ್ನೊಂದು ತಿಂಗಳು ಕಾಲ ನಡೆದು ಹನ್ನೊಂದು ಸಂಚಿಕೆಗಳನ್ನು ಪ್ರಕಟಿಸಿ ೧೯೦೧ ನೇ ಮೇ ತಿಂಗಳಿನಲ್ಲಿ ನಿಂತುಹೋಯಿತು. ಮತ್ತೆ ೧೯೦೨ರ ಜೂನ್ ತಿಂಗಳಿನಲ್ಲಿ ಮರು ಪ್ರಕಟಗೊಂಡಿತು. ಮೈಸೂರಿನ 'ನಡೆಗನ್ನಡಿ' (೧೫ ಜುಲೈ ೧೯೦೨) ಪತ್ರಿಕೆಯು ಸುವಾಸಿನಿ ಪತ್ರಿಕೆಯನ್ನು ಕುರಿತು ಹೀಗೆ ಹೇಳುತ್ತದೆ.

> *ಸುವಾಸಿನಿ'ಎಂಬ ಮಾಸಿಕ ವಹಿಯು ಕೆಲವು ಕಾಲ ನಿಂತು ಹೋಗಿತ್ತು. ಮೊದಲನೆಯ ಸಂಪುಟದಲ್ಲಿ ೧೧ ಸಂಚಿಕೆಗಳು ಪ್ರಕಟವಾಗಿದ್ದವು. ಹನ್ನೆರಡನೆಯ ಸಂಚಿಕೆಯು ಒಂದು ವರ್ಷವಾದ ತರವಾಯ ನಿನ್ನೆ ಜೂನ್ ಮಾಹೆಯಲ್ಲಿ ಮುದ್ರಿಸಲ್ಪಟ್ಟು ಜುಲೈ ೧೨ಕ್ಕೆ ಪ್ರಕಟವಾಗಿರುವುದು. ಇಂಥ ಮಾಸಿಕ ವಹಿಗಳಿಂದ ಬಹಳ ಪ್ರಯೋಜನವುಂಟು. ಆದರೆ ಇವುಗಳ ಏಳಿಗೆಯು ಉಪಪನ್ನವಾದವರ ಕೈಯಲ್ಲಿರಬೇಕು. ಕೇವಲ ದ್ರವ್ಯಾರ್ಜನೆಗಾಗಿ ವಿಲಾಯಿತಿಯಲ್ಲಿ ಜನರು ಇವುಗಳನ್ನು ನಡೆಯಿಸುವಂತೆ ನಮ್ಮ ದೇಶದಲ್ಲಿ ಸಾಗುವುದಿಲ್ಲ. ಪರಂತು ಪತ್ರಕರ್ತರಾದ ಮ|| ರಾ|| ಬಿ. ರಾಮರಾಯರಿಗೆ ಈ ವಿಷಯವು ಸ್ಪಷ್ಟವಾಗಿ ತಿಳಿದಿರುವುದರಿಂದ ಇವರ ಸುವಾಸಿನಿಯನ್ನು ಸುವಾಸಿನಿಯರಂತೆ ಸತಿ ಮಂದಿರದಲ್ಲಿಡುವುದಕ್ಕೆ ಏರ್ಪಾಡು ಮಾಡುವುದು ಉಚಿತವು.*

ಈ ಮೇಲಿನ ಮಾತು ಪತ್ರಿಕೆ ಬಿಡುಗಡೆಯಲ್ಲಿನ ತೊಡಕನ್ನು ಹೇಳುತ್ತದೆ. ಈ 'ಸುವಾಸಿನಿ' ಪತ್ರಿಕೆಯನ್ನು ಬಂದಂಥ ಕೃತಿಗಳೆಲ್ಲವನ್ನು 'ಪುಸ್ತಕ ಸ್ವೀಕಾರ' ಎಂಬ ಹೆಸರಿನಲ್ಲಿ ಪ್ರಕಟಿಸುತ್ತಿದ್ದರು. ಆದರೆ ಕೆಲವನ್ನು ಆಯ್ಕೆಮಾಡಿ 'ಗ್ರಂಥ ವಿಮರ್ಶೆ' ಎಂಬ ಶೀರ್ಷಿಕೆಯಲ್ಲಿ ವಿಮರ್ಶಿಸಲಾಗುತ್ತಿತ್ತು.

ಹೀಗೆ ಎಸ್.ಜಿ. ನರಸಿಂಹಾಚಾರ್ಯರ 'ಗಲಿವರನ ದೇಶ ಸಂಚಾರ' ಕೃತಿ ವಿಮರ್ಶೆ ಈ ಪತ್ರಿಕೆಯಲ್ಲಿ ಪ್ರಕಟವಾಗಿತ್ತು.

೧೯೨೭ರ ಸುವಾಸಿನಿ ಪತ್ರಿಕೆಯಲ್ಲಿ ಬಂದ ಪುಸ್ತಕ ವಿಮರ್ಶೆಯ ಒಂದು ಮಾದರಿಯನ್ನು ಗಮನಿಸಬೇಕು. ಇಲ್ಲಿ 'ಕನ್ನಡದ ನಾಲ್ಕನೆಯ ಪುಸ್ತಕದ ವಿಮರ್ಶೆ' ಎಂಬ ಹೆಸರಿನಲ್ಲಿ ಪ್ರಕಟವಾದ ಆ ಕೃತಿ ವಿಮರ್ಶೆ ಹೆಚ್ಚಾಗಿ ಕೃತಿಯ ವಿಶ್ಲೇಷಣೆಗಿಂತ ಕೃತಿ ಇರಬೇಕಾದ ಸ್ಥಿತಿಯನ್ನು ಹೆಚ್ಚು ಹೇಳುತ್ತದೆ. ನಿಬಂಧನೆಯ ಚೌಕಟ್ಟನ್ನು ನಿರ್ಮಿಸಿಕೊಂಡಂತೆ ಈ ವಿಮರ್ಶೆಯಿದೆ.

.... ಇಂತಹ ಪುಸ್ತಕಗಳು ಅನೇಕ ವಿದ್ವಜ್ಜನಳು ಸೇರಿರುವ ಮಂಡಳಿಯಿಂದಲೇ ತಯಾರಾಗಬೇಕೆಂದು ನಮ್ಮ ಮತವಿರುವುದು. ತರಗತಿಯ ಪ್ರಮಾಣಕ್ಕನುಸರಿಸಬೇಕು, ಪಾಠಗಳ ಅನುಕ್ರಮವು ಸುಸಂಗತವಾಗಿರಬೇಕು, ವಿಷಯ ವೈವಿಧ್ಯವಿರಬೇಕು, ವಾಕ್ಯರಚನೆ, ವಿಷಯ ವಿವೇಚನೆಗಳು ಸುಲಭವೂ, ಮನೋಹರವೂ ಆಗಿರಬೇಕು....... ೫ನೇ ಪಾಠವು ಅತ್ಯುತ್ತಮವಾಗಿರುವುದು.... ಸರ್ವಜ್ಞನ ಪದಗಳು ಯಥೋಚಿತವಾಗಿ ಸೇರಿಸುವಲ್ಲಿಯ ಜಾಣತನವು, ಆಕರ್ಷಕವಾಗಿರುವುದು. ಪಂಚತಂತ್ರ ಮುಂತಾದ ಕೃತಿಯ ಅವತರಣಗಳು ಉತ್ತಮವಾಗಿರುವವು.... ಕಂಕಣದೇವಿಯ ಅಂಗಳದ ಪದ್ಯಗಳು, ದೇವರೋ, ದೆವ್ವವೋ ಎಂಬ ಸಂದೇಹವನ್ನುಂಟು ಮಾಡುತ್ತಿರುವುದರಿಂದ ಅದನ್ನು ಹಾಕಿದ್ದು ಎಷ್ಟು ಮಾತ್ರವು ಚಂದವಾಗಲಿಲ್ಲವೆಂದು ಸೂಚಿಸಲಾಗಿದೆ. ಪುಷ್ಪೋದ್ಭವ ಕವಿತೆಯಲ್ಲಿ ಸ್ವಾರಸ್ಯವೇನೂ ಕಾಣಲಿಲ್ಲ (ವಿಮರ್ಶಕ ಜಿಜ್ಞಾಸು)'

ಇದರ ಮೊದಲನೆಯ ವಾಕ್ಯವೇ ಕೃತಿ ಬರಬೇಕಾದ ಹಿನ್ನೆಲೆಯ ಬಗ್ಗೆ ಕಟ್ಟು ಇದೆ. ವಾಕ್ಯ ಕೃತಿ ಕೊಡಬೇಕಾದ ವಿವರಗಳನ್ನು ವಿಮರ್ಶಕರೇ ಕಟ್ಟಿಕೊಟ್ಟಿದ್ದಾರೆ. ಹೀಗೆ ನಿಬಂಧಿಸಲ್ಪಟ್ಟ ವಿಮರ್ಶೆಯ ಮೂಲಕ ಕೃತಿಯನ್ನು ಪರಿಚಯಿಸಿದ್ದಾರೆ.

'ಶ್ರೀಕೃಷ್ಣಸೂಕ್ತಿ'ಯು ಕೂಡ ಮಾಸ ಪತ್ರಿಕೆಯಾಗಿದ್ದು ಉಡುಪಿಯಿಂದ ೧೯೦೬ರಲ್ಲಿ ಪ್ರಕಣೆ ಪ್ರಾರಂಭಗೊಂಡಿತು. ಹಲವು ತೊಂದರೆಗಳಿಂದ ನಿಂತು ಮತ್ತೆ ಪ್ರಕಟಗೊಂಡಿತು. ಆದರೆ ೧೯೦೭ ಎಪ್ರಿಲ್‌ನಲ್ಲಿ ಕಡೇಕಾರು ರಾಜಗೋಪಾಲ ಕೃಷ್ಣರಾಯರು ಸಂಪಾದಕರಲ್ಲೊಬ್ಬರಾದಾಗ 'ಶ್ರೀಕೃಷ್ಣ ಸೂಕ್ತಿ', 'ವರ್ತಮಾನ ಸಂಗ್ರಹ', 'ಪತ್ರಾಂಕರಾಭಿಪ್ರಾಯ', 'ವಿವಿಧ ವಿಷಯಾವಳಿ', 'ಹಾಸ್ಯಲಹರಿ', ಮುಂತಾದ ಅಂಕಣಗಳು ಮತ್ತು ಬಂದಂಥ ಕೃತಿಗಳನ್ನು ವಿಶ್ಲೇಷಿಸುವ 'ಗ್ರಂಥ ವಿಮರ್ಶೆ' ಎಂಬ ಅಂಕಣವು ರಾಜಗೋಪಾಲ ಕೃಷ್ಣರಾಯರು ಬಂದ ಮೇಲೆ ಸ್ಥಿರಗೊಂಡಿತು.

ಪ್ರಬುದ್ಧ ಕರ್ನಾಟಕ ೧೯೧೯ರಲ್ಲಿ ಮೈಸೂರು ವಿಶ್ವವಿದ್ಯಾಲಯದಿಂದ 'ತ್ರೈಮಾಸಿಕ' ಪತ್ರಿಕೆಯಾಗಿ ಪ್ರಕಟಣೆ ಪ್ರಾರಂಭಿಸಿತು. ಇದು ಹಿಂದಿನ ಪತ್ರಿಕೆಗಳಂತೆ ಇರದೇ ಪೂರ್ಣ ಪ್ರಮಾಣದಲ್ಲಿ 'ಸಾಹಿತ್ಯ ಪತ್ರಿಕೆ'ಯ ಲಕ್ಷಣಗಳನ್ನು ಒಳಗೊಂಡು ಪ್ರಕಟಣೆ ಪ್ರಾರಂಭಿಸಿತು. ಇದಕ್ಕೆ ಬೆಂಬಲವಾಗಿ ಕನ್ನಡದ ಅನೇಕ ವಿದ್ವಾಂಸರು, ಸಾಹಿತಿಗಳು ನಿಂತಿದ್ದರ ಫಲವಾಗಿ ಹೊಸ ರೀತಿಯ, ಹೊಸಮಾರ್ಗಕ್ಕೆ ಅನುವು ಮಾಡಿಕೊಡಲಾಯಿತು. ಪತ್ರಿಕೆಯ ಪ್ರತಿಯೊಂದು ಸಂಚಿಕೆಯು ಹೊಸ ಹೊಸ ಹೆಸರುಗಳನ್ನು ಇಟ್ಟುಕೊಂಡು ಬರುತ್ತಿತ್ತು. ದೀಪಾವಳಿ ಸಂಚಿಕೆ, ಕಾಮನ ಹಂಚಿಕೆ, ವಿನಾಯಕನ ಸಂಚಿಕೆ, ಇತ್ಯಾದಿ ಸಂಚಿಕೆಗಳನ್ನು ಹೆಸರಿಸಬಹುದು. ಈ ಪತ್ರಿಕೆಯ ಪ್ರಕಟಣೆಯಿಂದ ಹಲವು ಸಾಹಿತ್ಯ ಪತ್ರಿಕೆಗಳು

ತಮ್ಮ ಗುರಿ ಉದ್ದೇಶ ರೂಪು - ರೇಷೆಗಳನ್ನು ಸ್ಪಷ್ಟವಾಗಿ ಕಂಡುಕೊಳ್ಳಲು ಪ್ರಯತ್ನಿಸಿದವು. ಟಿ.ಎಸ್. ವೆಂಕಣ್ಣಯ್ಯ, ಎ.ಆರ್. ಕೃಷ್ಣಶಾಸ್ತ್ರೀ ಮುಂತಾದವರ ಮಾರ್ಗದರ್ಶನದಲ್ಲಿ ಹೊಸ ಚಿಂತನೆಗಳನ್ನು ಮೂಡಿಸಿಕೊಂಡು 'ಪ್ರಬುದ್ಧ ಕರ್ನಾಟಕ' ಹೆಚ್ಚು ಕಲಾತ್ಮಕವಾಗಲು ಪ್ರಾರಂಭಿಸಿತು. ಸಂಪಾದಕೀಯಗಳು ಕನ್ನಡ ಸಾಹಿತ್ಯದಲ್ಲಿನ ಆಗುಹೋಗುಗಳನ್ನು ಕುರಿತು ಚರ್ಚಿಸಿದವು. ಪುಸ್ತಕ ಪ್ರದರ್ಶನಗಳ ವರದಿ, ಸಾಹಿತ್ಯ ಸಮ್ಮೇಳನಗಳ ವರದಿ, ಸಾಹಿತ್ಯ ಸಮ್ಮೇಳನಾಧ್ಯಕ್ಷರ ಪರಿಚಯ ಇತ್ಯಾದಿಗಳ ಬಗ್ಗೆ ವಿವರಗಳನ್ನು ನೀಡುವ ಪ್ರಯತ್ನ ಮಾಡಲಾಯಿತು. ಕವಿ ಕಾವ್ಯ ಪರಿಚಯದೊಂದಿಗೆ ತೌಲನಿಕ ಅಧ್ಯಯನ ಪ್ರಾರಂಭ ಮಾಡಿದ ಕೀರ್ತಿ ಪ್ರಬುದ್ಧ ಕರ್ನಾಟಕಕ್ಕೆ ಸಲ್ಲುತ್ತದೆ. ಕರ್ನಾಟಕದ ಜನಪದ ಸಾಹಿತ್ಯ ಜೀವಕೋಶ, ವಸ್ತುಕೋಶ, ಕನ್ನಡದಲ್ಲಿ ವಿಜ್ಞಾನ ಪರಿಭಾಷೆಯ ನಿರ್ಮಾಣ, ಕಾವ್ಯಾವಲೋಕನ, ಸಣ್ಣಕತೆ, ನಾಟಕ, ಅನುವಾದ, ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಆದ್ಯತೆ ನೀಡುವ ಮನೋಭಾವ ಈ ಪತ್ರಿಕೆಯ ಹಿನ್ನೆಲೆಯಲ್ಲಿತ್ತು. ಈ ಪತ್ರಿಕೆ ಆರಂಭದ ಕೆಲವು ವರ್ಷಗಳೂ 'ಪುಸ್ತಕ ವಿಮರ್ಶೆ'ಗೆ ಒತ್ತು ನೀಡಿರಲಿಲ್ಲ, ಸ್ಥಿರ ಶೀರ್ಷಿಕೆಯಾಗಿ 'ಪುಸ್ತಕ ವಿಮರ್ಶೆ' ಅಂಕಣವಿರಲಿಲ್ಲ. ಆದರೆ ಬರಬರುತ್ತಾ ಪುಸ್ತಕ ವಿಮರ್ಶೆ ಪ್ರಾಮುಖ್ಯತೆ ಹೆಚ್ಚುತ್ತಾ ಹೋದಂತೆ ಅದು ಸ್ಥಿರ ಶೀರ್ಷಿಕೆಯಾಗಿ ಸೇರ್ಪಡೆಯಾಯಿತು. ಕನ್ನಡದ ಓದುಗರನ್ನು ಹೊಸ ಸಂವೇದನೆಗಳಿಗೆ ಪರಿಚಯಿಸುವ ಪ್ರಯತ್ನ ಇದರ ಮುಖ್ಯ ಕಾಳಜಿಯಾಯಿತು. 'ಪ್ರಬುದ್ಧ ಕರ್ನಾಟಕ'ದಲ್ಲಿ ಬಂದ 'ಪುಸ್ತಕ ವಿಮರ್ಶೆ'ಯ ಒಂದು ಮಾದರಿಯನ್ನು ಗಮನಿಸಬಹುದು.

ಕೃಷ್ಣ ಉಡುಪರ 'ಉಪಧ್ಯಾಯರ ಕೈಪಿಡಿ' ಕೃತಿಯನ್ನು ಜಿ. ಹನುಮಂತರಾವ್‌ರವರು ಹೀಗೆ ವಿಮರ್ಶಿಸಿದ್ದಾರೆ.

> *ಪುಸ್ತಕವು ಮೂರು ಭಾಗಗಳಾಗಿ ವಿಭಾಗವಾಗಿದೆ, ಮೊದಲನೆಯ ಭಾಗದಲ್ಲಿ ಕಾಯಕ, ಮಾನಸಿಕ ಮತ್ತು ಆಧ್ಯಾತ್ಮಿಕ ಈ ಮೂರು ವಿಧವಾದ ವಿದ್ಯೆಯೂ ಪ್ರತಿಯೊಬ್ಬ ಮನುಷ್ಯನಿಗೂ ಆವಶ್ಯವೆಂಬುದನ್ನು ತೋರಿಸಿರುವರು. ಎರಡನೆಯ ಭಾಗದಲ್ಲಿ ಪೂರ್ವಕಾಲದ ವಿದ್ಯಾಭ್ಯಾಸ ರೀತಿಯನ್ನು ವಿವರಿಸಿರುವರು. ಪೂರ್ವಕಾಲದ ವಿದ್ಯಾಭ್ಯಾಸವು ಎಲ್ಲ ವಿಷಯಗಳಲ್ಲೂ ಆದರ್ಶಪ್ರಾಯವಾದುದು. ಈಗಿನ ಕಾಲದ ವಿದ್ಯಾಭ್ಯಾಸವು ಎಲ್ಲ ವಿಧದಲ್ಲೂ ಕೆಟ್ಟು ಹಾಳಾಗಿ ಹೋಗಿದೆ, ಇದು ಉತ್ತಮಗೊಳ್ಳಬೇಕಾದರೆ ಹಿಂದಿನ ಕಾಲದಂತೆಯೇ ಆಗಬೇಕು. ಇಡೀ ಎರಡನೆಯ ಭಾಗದ ಮುಖ್ಯಾಂಶ. ಮೂರನೆಯ ಭಾಗದಲ್ಲಿ - ಕನ್ನಡ ಭಾಷೆಯಲ್ಲಿ ಉಪಾಧ್ಯಾಯರು ಹೆಚ್ಚು ಶ್ರದ್ಧೆ ತೋರಿಸಬೇಕು. ಮಿತವ್ಯಯ ಮಾಡಬೇಕು. ಕಾಫಿ, ಟೀ, ಮುಂತಾದ ಪಾನೀಯಗಳನ್ನು ವರ್ಜಿಸಿ ಹಣ್ಣು ಹಾಲುಗಳನ್ನು ಹೆಚ್ಚಾಗಿ ಸೇವಿಸಬೇಕು. ಒಳ್ಳೆಯ ಕೆಲವು ವಿಧವಾದ ಬುದ್ಧಿಯ ಮಾತುಗಳನ್ನು ಹೇಳಿರುವರು.*
>
> *ಇದೇ ಪುಸ್ತಕದ ವಿಷಯ ಇದಲ್ಲದೆ ಪುಸ್ತಕದಲ್ಲಿ ಲೇಖಕರೇ ಬಿಡಿಸಿದ ಜಗದೀಶ್ವರಿ ಕರ್ನಾಟಕಮಾತೆ, ಭಾರತಮಾತೆಯರ ಚಿತ್ರಗಳಿವೆ, ಚಿತ್ರಗಳ ಔಚಿತ್ಯ ಅಷ್ಟೇನೂ ಸುಲಭವಾಗಿ ಗೊತ್ತಾಗುವಂತಿಲ್ಲ.*
>
> *ಸಾಮಾನ್ಯವಾಗಿ ಉಪಾಧ್ಯಾಯರ ಕೈಪಿಡಿ ಎಂದರೆ ಆದರಲ್ಲಿ ಉಪಾಧ್ಯಾಯರಿಗೆ ಉಪಯುಕ್ತವಾದ ವಿದ್ಯಾಶಾಸ್ತ್ರವಡಗಿದೆ ಎಂದು ನಿರೀಕ್ಷಿಸುವೆವು. ಶ್ರೀಮಾನ್ ಉಡುಪರ ಕೈಪಿಡಿಯಲ್ಲಾದರೋ ಅಂಥಾ ಶಾಸ್ತ್ರ ವಿಷಯವೇನೂ ಇರುವುದಿಲ್ಲ. ಶಾಸ್ತ್ರೀಯವಾದ ಪ್ರತಿಪಾದನೆಯೇ ಅವರ ಉದ್ದೇಶವಲ್ಲದಿರಬಹುದು.*
>
> *ವಾಚಕರು ಮುಖ್ಯವಾಗಿ ಲಕ್ಷ್ಯದಲ್ಲಿಡಬೇಕಾದುದಿಷ್ಟು, ಶ್ರೀಮಾನ್ ಉಡುಪರು ವಿಶೇಷ ಉತ್ಸಾಹಶಾಲಿಗಳು,*

ಕನ್ನಡ ಭಾಷಾ ಪ್ರೇಮಿಗಳು. ಇವರ ಈ ಪ್ರಥಮ ಕೃತಿ ಹುಟ್ಟಲು ಇವೇ ಮುಖ್ಯ ಕಾರಣಗಳು

ಇಲ್ಲಿನ ವಿಮರ್ಶೆ ನೇರವಾಗಿ ಕೃತಿಯ ಒಳಕ್ಕೆ ಇಳಿದಿದೆ. ಹಾಗೆಯೇ ಕೃತಿಯ ವಿಚಾರಕ್ಕಷ್ಟೇ ಸಂಬಂಧಿಸಿದೆ. ಕೃತಿಯ ವಿವರಕ್ಕಿಂತ ಕೃತಿ ಒಟ್ಟಾರೆ ನೀಡುವ ಅರ್ಥವೇನು? ಎಂಬುದರ ಕಡೆ ಈ ಪುಸ್ತಕ ವಿಮರ್ಶೆ ಗಮನಹರಿಸಿದೆ. ಆದರೆ ಆದಕ್ಕೆ ತಮ್ಮ ವೈಯಕ್ತಿಕವಾದ ಯಾವುದೇ ಪ್ರತಿಕ್ರಿಯೆಗಳನ್ನು ನೀಡುವ ಗೋಜಿಗೆ ಹೋಗಿಲ್ಲ. ಇದಕ್ಕೆ ಕಾರಣ ಆ ಕಾಲದ ಸಾಂಸ್ಕೃತಿಕ ವಾತಾವರಣವೇ ಆಗಿದೆ.

ಇಂಥ ಹಲವು 'ಪುಸ್ತಕ ವಿಮರ್ಶೆ'ಗಳನ್ನು ಹೊಸರೀತಿಯಲ್ಲಿ ಪ್ರಕಟಿಸಿದ ಇದು 'ಸಾಹಿತ್ಯ ಪತ್ರಿಕೆ'ಗಳ ಇತಿಹಾಸದಲ್ಲಿ ಅಚ್ಚಳಿಯದ ಮೈಲಿಗಲ್ಲಾಗಿದೆ. ಸಾಹಿತ್ಯ ಪತ್ರಿಕೆಗಳು ಕೃತಿಯೊಂದನ್ನು ಸೂಕ್ಷ್ಮಾತಿಸೂಕ್ಷ್ಮವಾಗಿ ಒಳಹೊಕ್ಕು ನೋಡುವ ನಿಟ್ಟಿನಲ್ಲಿ ಆಧುನಿಕ ವಿಮರ್ಶೆಯನ್ನು, ವೈವಿಧ್ಯಮಯವಾಗಿ ಸೃಷ್ಟಿಸಿವೆ. ವಿಮರ್ಶಾ ತತ್ವಗಳಿಗೆ ರೂಪುಗೊಡುವಲ್ಲಿಯೂ ಸಾಹಿತ್ಯ ಪತ್ರಿಕೆಗಳು ಮಹತ್ವದ ಪಾತ್ರ ವಹಿಸಿದೆ.

'ಸ್ವದೇಶಾಭಿಮಾನಿ' ಪತ್ರಿಕೆಯು ೧೯೦೭ರ ಜನವರಿ ೧ರಂದು ವಾರಪತ್ರಿಕೆಯಾಗಿ ಪ್ರಕಟವಾಗತೊಡಗಿತು. ಈ ಪತ್ರಿಕೆಯಲ್ಲಿ 'ಪುಸ್ತಕ ವಿಮರ್ಶೆ' ಎಂಬ ಶೀರ್ಷಿಕೆಯಲ್ಲಿ ಅನೇಕ ಗ್ರಂಥಗಳು ವಿಮರ್ಶೆಗೊಂಡಿವೆ. ಹೀಗೆ ವಿಮರ್ಶೆಗೊಂಡ ಮುಖ್ಯ ಪುಸ್ತಕಗಳಲ್ಲಿ ಹಟ್ಟಿಯಂಗಡಿ ನಾರಾಯಣರಾಯರ 'ಆಂಗ್ಲ ಕವಿತಾವಳಿ'ಯೂ ಒಂದು. 'ಆಂಗ್ಲ ಕವಿತಾವಳಿ' ಕೃತಿಯ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ ಬಂದಂಥ 'ಪುಸ್ತಕ ವಿಮರ್ಶೆ'ಗಳನ್ನು ಗಮನಿಸಬಹುದು. ಹೀಗೆ ನೋಡುವಾಗ ಒಂದು ಕೃತಿಯನ್ನು ವಿವಿಧ ಪತ್ರಿಕೆಗಳು ಹೇಗೆ ತಮ್ಮ ಬದ್ಧಧೋರಣೆಗೆ ಅನುಗುಣವಾಗಿ ವಿಮರ್ಶಿಸುತ್ತವೆ ಎಂಬುದನ್ನು ಇದರಿಂದ ಅರಿಯಬಹುದಾಗಿದೆ.

೧. 'ಸ್ವೀಕಾರ - ವಿಮರ್ಶೆ':

'ಆಂಗ್ಲ ಕವಿತಾವಳಿ' - ಮ। ರಾ। ಎಚ್. ನಾರಾಯಣರಾವ್. ಬಿ.ಎ, ಬಿ.ಎಲ್, ಇವರಿಂದ ರಚಿತವಾದ 'ಆಂಗ್ಲ ಕವಿತಾವಳಿ' ಎಂಬ ಗ್ರಂಥವು ನಮ್ಮ ಬಳಿ ಗ್ರಂಥ ಕರ್ತರಿಂದ ಬಂದಿದ್ದನ್ನು ಆದರ ಪೂರ್ವಕವಾಗಿ ಸ್ವೀಕರಿಸಿರುವೆವು. ಬೆಲೆ ಬರೆ ೩ ಆಣೆ, ಇದರ ವಿಮರ್ಶೆಯನ್ನು ಮುಂದಿನ ಸಂಚಿಕೆಯಲ್ಲಿ ಮಾಡಲಿಕ್ಕಿರುವೆವು. - ಸ್ವದೇಶಾಭಿಮಾನಿ ಏಪ್ರಿಲ್ ೧೧, ೧೯೧೯ ಪು. ೯.)

೨. 'ಆಂಗ್ಲ ಕವಿತಾವಳಿ' 'ಕನ್ನಡ ಕಥಾನಕ'

ಇವೆರೆಡೂ ನಮ್ಮ ನೋಟಕ್ಕಾಗಿ ಬಂದವುಗಳಲ್ಲಿ ಹೊಸರೀತಿಯವು. ಇವನ್ನು ಎಚ್. ನಾರಾಯಣರಾವ್, ಬಿ.ಎ, ಬಿ.ಎಲ್. ಇವರು ರಚಿಸಿದರು. ಮೊದಲನೆಯದು ಶೇಕ್ಸಪಿಯರ್, ಕೀಟ್ಸ್, ವರ್ಡ್ಸ್‌ವರ್ಥ್ ಮುಂತಾದ ಮಹನೀಯರಾದ ಆಂಗ್ಲಕವಿಗಳಿಂದ ರಚಿತವಾದ ಪದ್ಯಗಳ ಭಾಷಾಂತರಗಳು, ಇದರಲ್ಲಿ ನಮ್ಮ ಪೂರ್ವದ ಛಂದೋ ನಿಬಂಧನಗಳನ್ನು ಅನುಸರಿಸಿಲ್ಲವೆಂದು ಮುಖ ಪತ್ರದಲ್ಲಿ ಕವಿಗಳೆ ಹೇಳುತ್ತಾರೆ. ಪೂರ್ವವಿಧಿ ತಿರಸ್ಕಾರವು ನ್ಯಾಯವೋ, ಅನ್ಯಾಯವೋ ಎಂಬುದು ಈಗ ವಾದಗ್ರಸ್ತ ವಿಷಯವಾಗಿದೆ. ಇದನ್ನು ಈ ಮೊದಲೆ ವಾಗ್ಭೂಷಣಕಾರರೂ ತಾವು ವಿಮರ್ಶಿಸಿದ ಕಾರಣ ಇಲ್ಲಿ ಪುನಃ ಚರ್ವಿತ ಚರ್ವಣವು ಅನಾವಶ್ಯಕವು. ಇನ್ನು ರಚನಾಕ್ರಮವನ್ನು ವಿವರಿಸುವುದಾದರೆ, ಚನ್ನಾಗಿದೆಯೆಂದೇ ಹೇಳಬೇಕು.

ಶ್ರೀಯುತ ನಾರಾಯಣರಾಯರು ಕನ್ನಡದ ಏಳ್ಗೆಯಲ್ಲಿ ಬರೆದಿದ್ದಾದರೂ, ಭಾಷಾ ಮರ್ಯಾದೆಯನ್ನು ಚನ್ನಾಗಿ ತಿಳಿದವರೂ ಆದುದರಿಂದ ಅವರ ಈ ಪ್ರಯತ್ನವು ಸ್ತುತ್ಯವಿದೆ. 'ಕನ್ನಡದ ಕಥೆ' - ಇದು ಇಂಗ್ಲೀಷ್ ಬಲ್ಲ ವಿದ್ಯಾರ್ಥಿಗಳಿಗೆ ಕನ್ನಡ ವ್ಯಾಕರಣದ ಪರಿಚಯವನ್ನು ತೋರುವ ಚಿಕ್ಕ ಪುಸ್ತಕವು ಕೆಲವು ವ್ಯಾಕರಣ ವಿಷಯಗಳಾದ ಸೂತ್ರಗಳನ್ನು ಇಂಗ್ಲೀಷ್‌ನಲ್ಲಿ ಬರೆದು ವೃತ್ತಿಯನ್ನು ಕನ್ನಡದಲ್ಲಿ ವಿರಚಿಸಿದ್ದಾರೆ. ಇದಕ್ಕೂ ಒಳ್ಳೆಯ ಪ್ರೋತ್ಸಾಹ. ಸದಾನಂದ ಮುದ್ರಣಾಲಯದಲ್ಲಿ ಅಚ್ಚಾದುದರಿಂದ ಅಂದವಾಗಿದೆ. ಪ್ರತಿಯೊಂದಕ್ಕೂ ಬೆಲೆ ಆಣೆ ೦-೩-೦ ವಿಳಾಸ : ಎಚ್. ನಾರಾಯಣರಾವ್, ಬಿ.ಎ, ಬಿ.ಎಲ್, ಆವರ್ಗಳ, ಟರ್ನರ್ ರೋಡ್ ಬಂದರು, ಬೊಂಬೈ. - 'ಕನ್ನಡ ಕೋಗಿಲೆ' ಜುಲಾಯಿ ೧೯೧೯ ಸಂಪುಟ ೪, ಸಂಚಿಕೆ ೪, ಪುಟ. ೧೦೨-೧೦೩

೨. 'ಆಂಗ್ಲ ಕವಿತಾವಳಿ'

(ಆಂಗ್ಲ ಭಾಷೆಯ ಕೆಲವು ಉತ್ತಮ ಕವಿತಾ ಭಾಗಗಳ ಕನ್ನಡದ ಪರಿವರ್ತನೆ, ಪುಟಗಳು ೨೨, ದಕ್ಷಿಣ ಕನ್ನಡದ ಪುತ್ತೂರ, 'ಸದಾನಂದ ಕೋ ಆಪರೇಟಿವ್' ಮುದ್ರಾಕ್ಷರ ಶಾಲೆಯಲ್ಲಿ ಮುದ್ರಿತವಾಗಿದೆ ೧೯೧೯, ಬೆಲೆ ೩ ಆಣೆ) ಗ್ರಂಥಕರ್ತರು - ಹ. ನಾರಾಯಣರಾಯರು, ಬಿ.ಎ, ಬಿ.ಎಲ್. ಮುಂಬಯಿ

ಇದು ಷೇಕ್ಸ್‌ಪಿಯರ್, ವರ್ಡ್ಸ್‌ವರ್ತ್, ಷೆಲ್ಲಿ ಮೊದಲಾದ ಆಂಗ್ಲ ಮಹಾಕವಿಗಳ ಗ್ರಂಥಭಾಗಗಳ ಕನ್ನಡದ ಪರಿವರ್ತನೆಯಾಗಿದೆ. ಇದರ ಶೈಲಿಯು ಬಹು ಸರಳ ಸಂದರ್ಭಾನುಸಾರವಾಗಿ ಬದಲಾಯಿಸಿ ಸುಲಭವಾಗುವಂತೆ ಪದ್ಯಕಾವ್ಯವನ್ನು ರಚಿಸಿರುವುದು ಅನುಕೂಲವೆಂದು ಅನೇಕರು ಅನುಸರಿಸಿಲ್ಲವೆಂದು ಗ್ರಂಥಕರ್ತರು, ಪೀಠಿಕೆಯಲ್ಲಿ ಹೇಳಿರುವರು, ಅದಕ್ಕೆ ಉದಾಹರಣೆಯಾಗಿ 'ನಿಂದಿಸಿ' ಎಂಬರ್ಥದಲ್ಲಿ 'ಹೀಗೆಳೆದು', 'ಬಿಲ್ಲಿನ ಬಣ್ಣ' ಎಂಬುದಕ್ಕೆ 'ಧನುವರ್ಣ', 'ಅಂತರಂಗದಲ್ಲಿ' ಎಂಬರ್ಥದಲ್ಲಿ 'ಅಂತರ್ಯದಲ್ಲಿ', 'ನೀನು ಜಯಿಸು' - ಎಂಬುದಕ್ಕೆ 'ಜಯತು' ಎಂಬ ಪ್ರಯೋಗಗಳನ್ನು ಮಾಡಿರುವರು. ಪೂರ್ವಕವಿಗಳು ಸಾಮಾನ್ಯವಾಗಿ ಅಷ್ಟಾದಶ ವರ್ಣನೆಗಳ ಮೂಲಕ ಮೂರ್ತದ್ರವ್ಯಗಳನ್ನೇ ತಮ್ಮ ಕಾವ್ಯಗಳಲ್ಲಿ ವರ್ಣಿಸುತ್ತಿದ್ದರು. ಈ ಕಾವ್ಯದಲ್ಲಿ ಚಿಂತನೆ, ಭಾವಗಣ, ಗರ್ವನಿರ್ಣಯ ಭಾವನೆ, ಮೊದಲಾದ ಭಾವರೂಪ ಪದಾರ್ಥಗಳನ್ನು ಸರಸವಾಗಿ ವರ್ಣಿಸಿರುತ್ತಾರೆ. ಇದು ಉಪಯುಕ್ತವಾದ ಹೊಸ ಮಾದರಿಯಾಗಿದೆ. ಛಂದಸ್ಸು ನಿಯಮಕ್ಕೊಳಪಟ್ಟಿಲ್ಲ, 'ಶಿಥಿಲ ಕಂದ', 'ಶಿಥಿಲ ರಗಳೆ', ಎಂಬುದಾಗಿ ಕರೆಯಬಹುದೆಂದು ಗ್ರಂಥಕಾರರು ಪೀಠಿಕೆಯಲ್ಲಿ ಬರೆದಿರುತ್ತಾರೆ. ಆದರೂ ಯಾವುದಾದರೂ ಒಂದು ಬಗೆಯಾಗಿ ಅಕ್ಷರಗಣ, ಮಾತ್ರಾಗಣಗಳನ್ನು ನಿಷ್ಕರ್ಷೆ ಮಾಡಿ ಪ್ರಕಟಿಸಿ, ಈ ಹೊಸ ಮಾರ್ಗವನ್ನವಲಂಬಿಸುವುದು ಯುಕ್ತವಾಗಿದೆ. ಇಲ್ಲದಿದ್ದರೆ ಕಟ್ಟಿಲ್ಲದಂತಾಗಿ ಮಾರ್ಗವು ಸರಿಹೋಗದೆ ತಪ್ಪಬಹುದು, ಇತರ ಗ್ರಂಥಕಾರರೂ ನಾನಾ ಮಾರ್ಗಗಳನ್ನವಲಂಬಿಸುವರು. ಈ ವಿಷಯಕ್ಕೆ ಗಮನ ಕೊಟ್ಟು ಈ ಬಗೆಯ ಕಾವ್ಯಗಳನ್ನು ಕನ್ನಡದಲ್ಲಿ ರಚಿಸುವುದು ಅತ್ಯಾವಶ್ಯಕವಾದುದು.

ಇಂಗ್ಲೀಷ್‌ನಲ್ಲಿ ಪಾಂಡಿತ್ಯವನ್ನು ಪಡೆದಿದ್ದರೂ, ಈ ಮಹನೀಯರು ಅನೇಕ ವರುಷಗಳಿಂದ ತಮ್ಮ ಮಾತೃಭಾಷೆಗೆ, ಹೆಚ್ಚಾದ ಗಮನ ಕೊಟ್ಟು ಈಗಲೂ, ತಮ್ಮ ಇತರ ಕಾರ್ಯಗಳ ಮಧ್ಯೆ, ಆ ಭಾಷೆಯಲ್ಲಿ ಹೊಸ ರೀತಿಯ ಕವಿತೆಯನ್ನು ಕೂಡ ಬಹಳ ಸರಸವಾಗಿ ಮಾಡುವಷ್ಟೇ ಶಕ್ತಿಯನ್ನು, ಉತ್ಸಾಹವನ್ನು ತೋರ್ಪಡಿಸುತ್ತಿರುವುದು ಎಷ್ಟು ಶ್ಲಾಘ್ಯವಾಗಿರುವುದು. - ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಅಕ್ಟೋಬರ್ ೧೯೧೯, ಪುಟ ೧೮೫-೮೬.

ಒಂದೇ ಕೃತಿಯ ಬಗ್ಗೆ ಹಲವು ಪತ್ರಿಕೆಗಳಲ್ಲಿ ಬಂದಂಥ ಈ ವಿಮರ್ಶಾ ಮಾದರಿಗಳನ್ನು ಗಮನಿಸಿದರೆ ಮೊದಲ ಸಂದರ್ಭದಲ್ಲಿ ಬಂದಂಥ ಈ ಕೃತಿ ವಿಮರ್ಶೆಯು ಮೀಮಾಂಸಾತ್ಮಕ ನಿಲುವುಗಳನ್ನೆ ಹೆಚ್ಚು ಪ್ರತಿಪಾದಿಸುತ್ತದೆ. ಪ್ರತಿಯೊಂದನ್ನು ಕಾವ್ಯಸ್ವರೂಪದಲ್ಲಿಟ್ಟು ಚರ್ಚಿಸಲಾಗಿದೆ. ಆದರೆ ಈ ಕೃತಿ ವಿಮರ್ಶೆ ಬಂದಂಥ ಸಂದರ್ಭದಲ್ಲಿ ಪ್ರತ್ಯೇಕ ವಿಮರ್ಶಕರ ಅಗತ್ಯತೆಯಿದೆಯೆಂದು

ಅವರಿಗೆ ಅನಿಸಿರಲಿಲ್ಲ ಇದರ ಬದಲಾಗಿ ಸಂಪಾದಕರೇ 'ಕೃತಿ ವಿಮರ್ಶೆ' ಮಾಡುತ್ತಿದ್ದರು.

ಈ ಸಂದರ್ಭದ ಯಾವುದೇ ಪುಸ್ತಕ ವಿಮರ್ಶೆಗಳನ್ನು ತೆರೆದು ನೋಡಿದರೂ ಕೃತಿಯ ಒಳ ವಿವರಕ್ಕಿಂತ 'ಮುದ್ರಕರನ್ನು ಸ್ಮರಿಸುವುದು, ಪ್ರಕಾಶಕರನ್ನು ಹೊಗಳುವುದು, ಬಹಳ ಕಡಿಮೆ ಬೆಲೆಯೆಂದು ಹೇಳುವುದು, ಓದುವ ಆಸಕ್ತಿ ಮತ್ತು ಕೊಳ್ಳುವ ಆಸಕ್ತಿ ಬೆಳೆಸುವುದು ಮುಂತಾದ ವಿವರಗಳನ್ನು ಕಾಣಬಹುದು. ಉದಾ. ವಾಗ್ಭೂಷಣದ ಫೆಬ್ರವರಿ ೧೯೨೦ (ಸಂಚಿಕೆ ೧೧)ರ 'ಮನಸ್ಸಿಗೆ ಉಪದೇಶವು' ಎಂಬ ಪುಸ್ತಕದ ಪರಿಚಯದ ಕೊನೆ ಭಾಗದಲ್ಲಿ ಹೀಗೆ ಹೇಳಿದ್ದಾರೆ.

'ಈ ಪುಸ್ತಕದ ಮುದ್ರಣವಾದರೂ ಒಳ್ಳೆ ಮುದ್ದಾಗಿರುವುದು'........... ಒಟ್ಟಿನ ಮೇಲೆ ಪುಸ್ತಕವು ಸಂಗ್ರಾಹ್ಯವಾಗಿರುವರು, ಇಂಥ ಪುಸ್ತಕವನ್ನು ಕರ್ನಾಟಕ ವಾಙ್ಮಯಕ್ಕೆ ಒದಗಿಸಿಕೊಟ್ಟದ್ದಕ್ಕಾಗಿ ಭಾಷಾಂತರಕಾರ ಹಾಗೂ ಪ್ರಭಾತದ ಸಂಪಾದಕರ ಅಭಾರವನ್ನು ಮನ್ನಿಸಿ ಈ ಲೇಖನವನ್ನು ಮುಗಿಸುವೆನು (ಪ.ನಾ. ಅಮ್ಮಿನ ಭಾವಿ)'.

ಇದಕ್ಕೆ ಕಾರಣಗಳನ್ನು ಹುಡುಕತೊಡಗಿದಾಗ, ಆ ಕಾಲದಲ್ಲಿ ಸಾಹಿತ್ಯ ಸೃಜನೆ ಮಾಡುವುದು ಮತ್ತು ಅದಕ್ಕೆ ಪ್ರೋತ್ಸಾಹ, ಸಹಕಾರ ನೀಡುವುದು ಪುಣ್ಯದ ಕೆಲಸವೆಂದು ಭಾವಿಸಲಾಯಿತು ಹಾಗೂ ಸಾಹಿತ್ಯವನ್ನು ವಿಶಿಷ್ಟೀಕರಣಗೊಳಿಸಲಾಗಿತ್ತು. ಹಾಗಾಗಿಯೇ ಈಗಾಗಲೇ ಹೇಳಿದಂತೆ ಅದು 'ದೇವತಾಕಾರ್ಯ', 'ದೇವತಾ ಸೇವೆ' ಎಂಬ ರೀತಿಯಲ್ಲಿ ನಡೆದು ಬಂದುದೇ ಕಾರಣವಾಗಿರುವುದು. 'ಜಯ ಕರ್ನಾಟಕ' ಪತ್ರಿಕೆಯಲ್ಲಿ ಪುಸ್ತಕ ವಿಮರ್ಶೆಯನ್ನು, ವಿಮರ್ಶೆಯಂದಾಗಲಿ, ಪರಿಚಯವೆಂದಾಗಲಿ ಕರೆದಿಲ್ಲ. ಅಲ್ಲಿ 'ವೀಣಾವಿತಾನ' ಎಂದು ಕರೆದಿರುವುದನ್ನು ಗಮನಿಸಬಹುದು. ಅಲ್ಲಿ ತಾಂತ್ರಿಕವಾದ ವಿವರಗಳನ್ನು ಹೀಗೆ ಕೊಡುತ್ತಿದ್ದರು.

೧. 'ಮನ್ನಿಲ್ಲದ್ಮದ್ವೆ' (ಪ್ರಹಸನ) ಲೇಖಕರು ಶ್ರೀ ಎಚ್. ಯೋಗನರಸಿಂಹ. ಎಂ.ಎ., ಬೆಂಗಳೂರು, ಕ್ರಾ. ಅ. ೩೮, ಪುಟಗಳು, ಬೆಲೆ, ೦-೪-೦.

೨. 'ಮಹಾದೇವಿಯಕ್ಕ' ಪ್ರಕಾಶಕರು - ಬಸವನ ಬಳಗ, ಕೊಲ್ಲಾಪುರ, ಲೇಖಕರು - ಪ್ರೊ. ಕೆ.ಜಿ. ಕುಂದಣಗಾರ ಎಂ.ಎ., ೧೬೬ ಪುಟಗಳು, ಕ್ರೌನ್ ೧/೮, ಬೆಲೆ ೧ ರೂಪಾಯಿ.

ವಾಗ್ಭೂಷಣದಲ್ಲಿ 'ಪುಸ್ತಕ ಪರಿಚಯ', ವಿಮರ್ಶೆ, ಗ್ರಂಥ, ಪರೀಕ್ಷಣ, ಗ್ರಂಥ ಪರಿಚಯ, 'ಸಾದರ ಸ್ವೀಕಾರ' ಎಂಬ ಹೆಸರಿನಲ್ಲಿ ಪುಸ್ತಕಗಳ ವಿಮರ್ಶೆ ನಡೆಯುತ್ತಿತ್ತು. ಆ ಪತ್ರಿಕೆಯ ಒಂದು ಮಾದರಿಯನ್ನಿಟ್ಟುಕೊಂಡು ಚರ್ಚೆಮಾಡಬಹುದು.

'ಮಹಾತ್ಮಗಾಂಧಿ' [೬] ಕೃತಿಯ ಪುಸ್ತಕ ವಿಮರ್ಶೆಯನ್ನು ಗಮನಿಸಿದಾಗ ಪ್ರಾರಂಭದ ದಶಕದಲ್ಲಿ ಪುಸ್ತಕ ವಿಮರ್ಶೆ ಇದ್ದ ಸ್ವರೂಪ ತಿಳಿಯುತ್ತದೆ. ಆಗ ಇದ್ದ ಆದರ್ಶ, ಪೂಜ್ಯಭಾವವನ್ನು ಇದರಲ್ಲಿ ಗುರುತಿಸಬಹುದು. ಕೆಲವೇ ಸಾಲುಗಳನ್ನು ಓದಿದರೆ ಕೃತಿಯ ಒಳವಿವರಗಳನ್ನು ತಿಳಿಯಬಹುದೆಂಬ ನಿಲುವನ್ನು ಹೊಂದಿರುವುದು. ಕೆಲವೊಮ್ಮೆ ಬಾಳ್ವೆಯ ಒಳವನ್ನು ನಿಚ್ಚಳವಾಗಿ ಕಂಡುಹಿಡಿದಿಲ್ಲೆಂಬ ನಿರ್ಧಾರಕ್ಕೆ ಬರುವುದು, ಓದುತ್ತಾ ಹೋದರೆ ಕೊನೆಗೆ ರಹಸ್ಯ ಹೊಳೆಯಬಹುದು ಎಂಬುದನ್ನು

ಹೇಳುವುದು. ಆದರೆ ಈ ಪುಸ್ತಕಕ್ಕೆ ಭೂಷಣಪ್ರಾಯವಾಗಿ 'ಉಜ್ಜಗದ ಹಣ್ಣಿರದಿದ್ದರೂ ಈ ಪುಸ್ತಕವು ಪಾಡಿಗೆ ಬಂದ ಕಾಯಿಯಾಗಿದೆ' ಎಂಬ ರೂಪಕ ನೀಡಿರುವುದು, ಪುಸ್ತಕ ವಿಮರ್ಶಕನ ವಿಮರ್ಶನ ಮತ್ತು ಕವಿ ಮನಸ್ಸನ್ನು ತಿಳಿಸುತ್ತದೆ. ರೂಪಕದ ಭಾಷೆಯಲ್ಲಿಯೇ ಕೃತಿಯ ವಿವರವನ್ನು ಹೇಳಿರುವುದನ್ನು ಕಾಣಬಹುದು. ರಸಾತ್ಮಕವಾಗಿ ಹೇಳುತ್ತ ಕೃತಿಯ ಬಗ್ಗೆ ಒಲವನ್ನು ಮೂಡಿಸುವುದು ಮುಂತಾದ ಅಂಶಗಳನ್ನು ಈ ಪುಸ್ತಕ ವಿಮರ್ಶೆಯಲ್ಲಿ ಕಾಣಬಹುದು.

ಕೊನೆಗೆ ಒಂದು ವಿಶೇಷವೆಂದರೆ ಲೇಖಕರಿಗೆ ಒಂದು ಕಿವಿಮಾತನ್ನು ಹೇಳುವ ದಾಟಿಯನ್ನು ಗಮನಿಸಿದರೆ ಆಗ ಕೃತಿಯನ್ನು ರಚಿಸಲು ಒಂದು ನಿರ್ದಿಷ್ಟವಾದ ಚೌಕಟ್ಟನ್ನು ನಿರ್ಮಿಸಿಕೊಡುತ್ತಾರೆ. ಅದರ ಜೊತೆಗೆ ಕೃತಿ ಹೇಗೆ ಬರೆಯಬೇಕೆಂಬ ಆದೇಶವನ್ನು ನೀಡುತ್ತಾರೆ. 'ಲೆಕ್ಕಣಿಕೆಗೆ ಹೊಸದಾಗಿ ನೀರುಕುಡಿಸಿ ಹದವ ಮಾಡಿ ಬರೆಯಿರಿ' ಎಂಬಲ್ಲಿ ಕೃತಿಕಾರರನ್ನು ಪುಸ್ತಕ ವಿಮರ್ಶಕರು ನಿಯಂತ್ರಿಸುವ ಬಗೆಯನ್ನು ಕಾಣಬಹುದು.

ಕೃತಿಯ ಬಗೆಗೆ ಕೆಲವು ವಿಶೇಷಗಳು 'ಈಗಿನ ಹೊತ್ತಿಗೆ ಸರಿಯಾಗಿ ಬರೆದ ಪುಸ್ತಕ' 'ಲೇಖಕರಿಗೊಂದು ಕಿವಿಮಾತು', 'ಪುಸ್ತಕ ಸಿಗುವ ಸ್ಥಳ', ಮಂತಾದ ವಿವರಗಳು ದೊರೆಯುತ್ತವೆ. ಆದರೆ ಇಲ್ಲಿನ ಪುಸ್ತಕ ವಿಮರ್ಶೆಯಲ್ಲಿ ವಿಮರ್ಶಕರ ಹೆಸರಿಲ್ಲದಿರುವುದನ್ನು ಗಮನಿಸಿದರೆ ಈ ಪುಸ್ತಕ ವಿಮರ್ಶೆಯನ್ನು ಸಂಪಾದಕರೇ ಮಾಡಿದ್ದಾರೆಂದು ಹೇಳಬಹುದು. ಇದು ಪತ್ರಿಕೆಯ ತತ್ವಗಳಿಗೆ ಬದ್ಧವಾಗಿದೆ ಎಂದು ಹೇಳಬಹುದು.

ಮೊದಲಿನ ಸಾಹಿತ್ಯಕ ಪತ್ರಿಕೆಗಳು ಪ್ರಾಚೀನ ಸಾಹಿತ್ಯದ ನೆಲೆಗಳನ್ನು ಕಂಡುಕೊಳ್ಳುವ, ಕೃತಿಗಳ ಹಿಂದಿನ ಸೃಜನಶೀಲ ಪ್ರೇರಣೆಗಳನ್ನು, ಕೃತಿಗಳ ಆಂತರ್ಯವನ್ನು ಕೃತಿಯ ರಸಘಟ್ಟಗಳನ್ನು ವಿಮರ್ಶೆಗೊಳಪಡಿಸಿವೆ. ಈ ಕೃತಿಗಳನ್ನು ಆಧುನಿಕತೆಗೆ ತೆರೆದುಕೊಳ್ಳುವ ಈ ಯತ್ನ ಈಗಲೂ ಸಾಹಿತ್ಯ ಪತ್ರಿಕೆಗಳ ಮೂಲಕ ನಡೆಯುತ್ತಲೇ ಇದೆ. ಸಮಕಾಲೀನ ಸಾಹಿತ್ಯ ಕುರಿತ ವಿಮರ್ಶೆಯೂ ಪ್ರಾಚೀನ ಸಾಹಿತ್ಯಕ್ಕೆ ಸರಿಸಾಟಿಯಾಗುವಂತೆ ಬೆಳೆದಿದೆ.

ಕನ್ನಡ ಸಾಹಿತ್ಯದ ಆರಂಭಿಕ ಕಾಲದಲ್ಲಿ ನಿರ್ದಿಷ್ಟ ಉದ್ದೇಶಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ನಿರ್ಮಾಣವಾದ ವಿಮರ್ಶೆಯನ್ನು ಸಾಕಷ್ಟು ಪ್ರಮಾಣದಲ್ಲಿ ಕಾಣಬಹುದಾಗಿದೆ.

೧. ಸಂಸ್ಕೃತ ಕಾವ್ಯ ಮೀಮಾಂಸೆಯ ಹಾಗೂ ಪಾಶ್ಚಾತ್ಯ ವೈಚಾರಿಕ ಅಭ್ಯಾಸದಿಂದ ವಿಮರ್ಶೆಯ ಸಿದ್ಧಾಂತಗಳನ್ನು ರೂಪಿಸುವ ಕೆಲಸ ಈ ಕಾಲದಲ್ಲಿ ನಡೆಯಿತು.

೨. ಪ್ರಾಚೀನ ಕನ್ನಡ ಹಾಗೂ ಸಂಸ್ಕೃತ ಕವಿಶ್ರೇಷ್ಠರ ಶೋಧ ಹಾಗೂ ಗುಣ ಗ್ರಹಣಕ್ಕೆ ವಿಶೇಷ ಪ್ರಾಧಾನ್ಯ ದೊರೆಯಿತು.

೩. ಸಮಕಾಲೀನ ಸಾಹಿತ್ಯದ ಮೌಲ್ಯ ಮಾಪನವು ಕೆಲಮಟ್ಟಿಗೆ ನಡೆಯಿತು. ಆ ಕಾಲದ

ಅವಶ್ಯಕತೆಯೇ 'ಸಾಮಾಜಿಕ ವಿಮರ್ಶಕ' ಹಾಗೂ 'ಪಂಡಿತ ವಿಮರ್ಶಕ' ಇಬ್ಬರ ಕೆಲಸವನ್ನು ಅಳವಡಿಸಿಕೊಂಡ ಜನರನ್ನು ನಿರ್ಮಾಣ ಮಾಡಿತೆಂದು ಹೇಳಬೇಕು"[೧೦] ಈ ನಿರ್ಮಾಣದ ಜನ ವಸ್ತುಶಃ ಆ ಕಾಲದ ಸಾಹಿತಿಗಳೇ ಆಗಿದ್ದರು. ಈ ನಿರ್ಮಾಣದ ಕಾರ್ಯದಲ್ಲಿ ತೊಡಗಿಕೊಂಡ ಸೃಜನಶೀಲ ವಿಮರ್ಶಕರು ಒಂದು ಕೃತಿಯನ್ನು ವಿಮರ್ಶಿಸುತ್ತ ತಮ್ಮನ್ನು ತಾವು ಸಮರ್ಥಿಸಿಕೊಳ್ಳುವ ಕಡೆಯೂ ಗಮನ ವಹಿಸುತ್ತಿದ್ದರು.

೨೦ ನೇ ಶತಮಾನದ ಮೊದಲ ಘಟ್ಟದಲ್ಲಿ ನಿರ್ಮಾಣಗೊಂಡ ವಿಮರ್ಶೆಯ ನಿಲುವುಗಳ ಕಡೆ ದೃಷ್ಟಿ ಹರಿಸಿದರೆ ಕನ್ನಡ ಸಾಹಿತ್ಯ ವಿಮರ್ಶೆಯ ಸಂದರ್ಭದಲ್ಲಿ ತೌಲನಿಕ ವಿಮರ್ಶೆ ಹೆಚ್ಚು ಪ್ರಚುರಕ್ಕೆ ಬಂತು. ಅವರಿಗೆ ಹಳಗನ್ನಡ ಕಾವ್ಯಗಳನ್ನು ಮೌಲ್ಯೀಕರಿಸುವ ಆಗತ್ಯತೆಯಿದ್ದುದರಿಂದ ಒಂದು ಕಾವ್ಯವನ್ನು ಇನ್ನೊಂದು ಕಾವ್ಯದೊಡನೆ ಹೋಲಿಸಿ ನೋಡುವ ದೃಷ್ಟಿಕೋನ ಹೆಚ್ಚಾಗಿ ಬೆಳೆಯಿತು. ಅವರು ಬಳಸಿಕೊಂಡ ವಿಮರ್ಶಾ ಮಾನದಂಡಗಳೆಲ್ಲ ಪ್ರಾಚೀನ ಕಾವ್ಯಗಳ ಮೌಲ್ಯ ವಿವೇಚನೆಯ ಕಡೆಗೇ ಇತ್ತು. ಆದುದರಿಂದ ಹಳಗನ್ನಡ ಕಾವ್ಯಗಳನ್ನು ವಿಮರ್ಶಿಸುವಾಗ ಪಾಶ್ಚಾತ್ಯ ಕಾವ್ಯಗಳ ಹೋಲಿಕೆ ಬರಲಿಲ್ಲ. ಬದಲಾಗಿ ಅದೇ ಸನ್ನಿವೇಶ ಬರುವ ಇನ್ನೊಂದು ಹಳಗನ್ನಡ ಕಾವ್ಯವನ್ನೇ ಆರಿಸಿಕೊಂಡರು. ಉದಾ. ಕುವೆಂಪು ನಡೆಸಿದ ಅಚ್ಛೋದ ಮತ್ತು ವೈಶಂಪಾಯನ ಸರೋವರಗಳ ವಿಶ್ಲೇಷಣೆ. ಈ ಸರೋವರಗಳ ವಿಶ್ಲೇಷಣೆ ಮಾಡುವುದರ ಮೂಲಕ ಇಡೀ ಕಾವ್ಯಗಳ ಪ್ರಮುಖ ಸ್ಥಾಯಿ ಭಾವಗಳನ್ನು ಶೋಧಿಸಿರುವುದಲ್ಲದೆ, ಆ ಕಾವ್ಯಕೃತಿಗಳ ವಸ್ತುವನ್ನು ಸರೋವರದ ಶಾಂತ ರೌದ್ರಗಳ ಸ್ವರೂಪದಲ್ಲಿ ಗುರುತಿಸಿದ್ದನ್ನು ಕಾಣಬಹುದು. ಒಟ್ಟಾರೆ ಎರಡು ಕಾವ್ಯಗಳ ಮಹೋನ್ನತಿಯನ್ನು ಹೇಳುವುದು ತೌಲನಿಕ ವಿಮರ್ಶೆಯ ಶೈಲಿಯಾಗಿತ್ತು. ಆ ಮೂಲಕ ಯಾವುದನ್ನು ಕಡೆಗಣಿಸದೇ ಎರಡನ್ನು ಪ್ರಮುಖ ಕಾವ್ಯಗಳನ್ನಾಗಿಯೇ ಗುರುತಿಸುತ್ತಿದ್ದರು. ಆದರೆ ಅವರ ತೌಲನಿಕ ವಿಮರ್ಶೆಯಲ್ಲಿ ಕೆಲವು ತರತಮ ಭಾವಗಳಿದ್ದವು. ಅಂದರೆ ಸಮಾನತೆಯ ಬಗೆಗೆ ಗೌರವವಿರಲಿಲ್ಲ. ಒಂದಕ್ಕೊಂದು ಹೋಲಿಕೆಯಿರುತ್ತಿತ್ತು. ಆದರೆ ಚಾರಿತ್ರಿಕ ವಿವರಗಳ ಬಗ್ಗೆ ಪ್ರಸ್ತಾಪವಿರುತ್ತಿರಲಿಲ್ಲ. ಹಾಗೆ ಇವರು ಬಳಸಿಕೊಳ್ಳುತ್ತಿದ್ದ ವಿಮರ್ಶಾ ತತ್ವಗಳಲ್ಲಿ ಕವಿಗೆ ಹೆಚ್ಚಿನ ಪ್ರಾಶಸ್ತ್ಯ ನೀಡುತ್ತಿದ್ದರು. ಇವರ ವಿಮರ್ಶೆಯ ಕೇಂದ್ರ ಬಿಂದು ಕವಿಗಳೇ ಆಗಿದ್ದರು. ಅವರು ಈ ಸಮಾಜದ ಸುಧಾರಣೆಗೆ ಶ್ರಮಿಸುವವರು ಎಂಬ ಭಾವ ಬೆಳದಿತ್ತು. ಅಲ್ಲದೆ ಕಾವ್ಯದ ಚರ್ಚೆಯಲ್ಲಿ ಸಾಂಸ್ಕೃತಿಕ ಮತ್ತು ನೈತಿಕ ಮೌಲ್ಯಗಳಿಗೆ ಪ್ರಾಶಸ್ತ್ಯವನ್ನು ಕೊಟ್ಟ ವಿಮರ್ಶೆಯ ತತ್ವಗಳು ಕಾವ್ಯದ ಆದರ್ಶಕ್ಕಾಗಿ ಕವಿಗಳು ದುಡಿಯುತ್ತಿದ್ದಾರೆಂಬ ಭಾವ ಹೆಚ್ಚಾಗಿತ್ತು. ಆದರೂ ಪಾಶ್ಚಾತ್ಯರಿಂದ ಸ್ವೀಕರಿಸಿದ ತತ್ವ ಮತ್ತು ಚಿಂತನೆಗಳನ್ನು ನಮ್ಮ ಸಾಹಿತ್ಯದ ಪ್ರಾಚೀನ ಕಾವ್ಯ ಮೀಮಾಂಸೆಯ ಜೊತೆ ತಳುಕು ಹಾಕಿ ಎರಡರ ಚಿಂತನೆಗಳನ್ನು ವಿಮರ್ಶೆಯಲ್ಲಿ ಬಿತ್ತರಿಸಲು ಯತ್ನಿಸುತ್ತಿದ್ದರು.

ಕನ್ನಡ ಸಾಹಿತ್ಯ ಆರಂಭಿಕ ಪುಸ್ತಕ ವಿಮರ್ಶೆಯ ತಾತ್ವಿಕ ಬದ್ಧತೆ ಸಾಹಿತ್ಯ ತತ್ವಗಳ ಅನ್ವಯದಲ್ಲಿ ಲೀನಗೊಂಡಿತ್ತು. ಕಾವ್ಯಮೀಮಾಂಸೆಯಲ್ಲಿ ತಮ್ಮನ್ನು ಕಂಡುಕೊಳ್ಳುವುದರತ್ತಲೇ ಅವರ ಗಮನವಿತ್ತು.

ಆ ಕಾಲದಲ್ಲಿ ನಿಜವಾದ ಅರ್ಥದಲ್ಲಿ ಸಮಕಾಲೀನ ಸಾಹಿತ್ಯ ವಿಮರ್ಶೆ ಬಂದಿರಲಿಲ್ಲ. ಆ ಕಾಲದ ಮನಸ್ಸುಗಳೆಲ್ಲ ಹೊಸ ಸಾಹಿತ್ಯದ ಪ್ರಚಾರ, ಪ್ರಾಚೀನ ಸಾಹಿತ್ಯದ ಸೌಂದರ್ಯ ಸ್ಥಾನಗಳ ಹುಡುಕಾಟದಲ್ಲಿ ಮಗ್ನವಾಗಿದ್ದವು ಆ ಕಾಲಕ್ಕೆ ಅದು ಅವಶ್ಯವೂ ಆಗಿತ್ತು. ಆಗಲೂ ಸಹ ಅಲಂಕಾರ, ವರ್ಣನೆ, ಔಚಿತ್ಯ, ರಸ, ಇತ್ಯಾದಿಗಳನ್ನು ಕುರಿತು ಚರ್ಚಿಸಿದರಾದರೂ, ಪಾತ್ರಗಳ ಅಭ್ಯಾಸವಲ್ಲಿ ಪಾಶ್ಚಾತ್ಯ ವಿಮರ್ಶೆಯಿಂದ ಪ್ರಭಾವಿತರಾಗಿರುವುದು ಸ್ಪಷ್ಟವಾಗಿದೆ. 'ರನ್ನನ ದುರಂತ ದುರ್ಯೋಧನ' 'ನಾಗಚಂದ್ರನ ದುರಂತ ರಾವಣ'ರ ಕಲ್ಪನೆಯಲ್ಲಿ ಬ್ರಾಡ್ಲಿಯ, ಷೇಕ್ಸ್‌ಪಿಯರ್‌ನ ದುರಂತನಾಯಕರ ಅಭ್ಯಾಸಗಳ ಪ್ರಭಾವವನ್ನು ನೋಡಬಹುದು. ಆದರೆ ಸಮಕಾಲೀನ ಸಾಹಿತ್ಯದ ಬಗ್ಗೆ ಅವರಲ್ಲಿ ಗುಣಗ್ರಹಣದ ದೃಷ್ಟಿಯೇ ಹೆಚ್ಚಾಗಿತ್ತು.[೧೧]

ಹೀಗಾಗಿ ಪುಸ್ತಕ ವಿಮರ್ಶೆಯಲ್ಲೂ ಸಹ ಅವರ ಗಮನ ಗುಣಗ್ರಹಣದ ಪರವಾಗಿಯೇ ವಾಲುತಿತ್ತು. ದೋಷಗಳನ್ನು ಹುಡುಕುವುದು ಅರಸಿಕರ ಕೆಲಸವೆಂದೇ ಭಾವಿಸಿದ್ದರು. ಆ ಸಂದರ್ಭದಲ್ಲಿ ಬಂದ ಪುಸ್ತಕ ವಿಮರ್ಶೆಗಳು ಇದೇ ಸ್ವರೂಪದವಾಗಿದ್ದವು. ಶಿವರಾಮ ಕಾರಂತರ 'ಮುಗಿದ ಯುದ್ಧ' ಕಾದಂಬರಿಯನ್ನು ವಿಮರ್ಶಿಸಿದ ವಿ.ಕೃ. ಗೋಕಾಕರ ಮಾದರಿ ಇದೇ ಬಗೆಯದಾಗಿದೆ.[೧೨]

ಇದೊಂದು ಉಜ್ವಲ ಕಾದಂಬರಿ, ಕಾರಂತರ ವಾಸ್ತವಿಕತೆ, ವಿಡಂಬನೆ, ಸೂಕ್ಷ್ಮ ಜೀವನ ದೃಷ್ಟಿ, ಸಮತಾವಾದ - ಎಲ್ಲವೂ ಇಲ್ಲಿ ಮೂಡಿವೆ. ವಿದ್ಯಾರ್ಥಿಯಾಗಿ, ಮುಂದೆ ಪ್ರಾಥಮಿಕ ಶಿಕ್ಷಕನಾಗಿ ಅಚ್ಚುತನು ನಾನಾ ಯಾತನೆಗಳನ್ನನುಭವಿಸಿ ಹೇಗೆ ತೀರಿಕೊಂಡನೆಂಬುದೇ ಇಲ್ಲಿಯ ಕಥಾನಕ. ಎರಡು ಮಹಾಯುದ್ಧಗಳ ನಡುವಿನ ಕಾಲದ ಹಿಡಿತದಲ್ಲಿ ಕಥಾನಾಯಕನ ಜೀವನ ಸಾಗುತ್ತದೆ. ಈ ಕಾದಂಬರಿಯನ್ನು ಓದುವಾಗಲೆಲ್ಲ ದಕ್ಷಿಣ ಕನ್ನಡದ ಜನಜೀವನ ಕಣ್ಣೆದುರು ಅರಳಿ ನಿಲ್ಲುತ್ತದೆ. ಎಲ್ಲ ಪಾತ್ರಗಳೂ ಜೀವಂತ ಪಾತ್ರಗಳಾಗಿ ರಂಗದ ಮೇಲೆ ಬರುತ್ತವೆ, ತೆರಳುತ್ತವೆ.

ಇಲ್ಲಿನ ವಾಸ್ತವಿಕತೆಯು ಅನೇಕ ವಿವರಗಳನ್ನೊಳಗೊಂಡಿದ್ದು 'ತದ್ರೂಪ'ವಾಗಿದೆ. ಈ ತದ್ರೂಪತೆಯ ನಡುವೆ ಓದುವ ಮನಸ್ಸನ್ನು ರಂಜಿಸಲು ಯಕ್ಷಗಾನದ ಮೇಲೆ ವಿಮರ್ಶಾತ್ಮಕ ಉಪನ್ಯಾಸ (ಪ್ರ ೧೨೦) ಆ ವಾಸ್ತವಿಕತೆಯ ಭಾಗವಾಗಿಯೇ ಬಂದ ಜಾನ್ಸ್‌ನ ಮಾಸ್ತರರ ವಿನೋದ, ಪುಟ್ಟಯ್ಯನವರ ಮರಣದಂತಹ ಆದರ್ಶಮಯ ಸನ್ನಿವೇಶ (ಅವರು ಯಾವುದೇ ವಿಶಾಲವಾದ ಬದುಕಿಗೆ ಸಂದ ರವಿ ಪುಟ ೪೮) ಇವೇ ಮೊದಲಾದವು ಆಗೀಗ ಬಂದಿವೆ. ಆದರೂ ಒಬ್ಬ ಶಿಕ್ಷಕನ ಜೀವನದ 'ತದ್ರೂಪತೆ'ಯಲ್ಲಿ ಕಲೆಯ ಯಥಾರ್ಥತೆ ಕಾಣುವುದಲ್ಲದೆ ಇಂದ್ರಜಾಲವು ಕಾಣಲಾರದು. ಕೊನೆಯ ಐವತ್ತು ಪಾನುಗಳನ್ನು ಓದುವ ತನಕ ಹೌದು ಇಂಥವರ ಜೀವನ ಹಾಗೆಯೇ ಇರುತ್ತದೆ. ಯಥಾವತ್ತಾದ ಚಿತ್ರಣ ಇದು. ಇದರಲ್ಲಿ ಸೂಕ್ಷ್ಮತೆಯಿದೆ, ಸೊಗಸಿದೆ. ಆದರೆ ಒಟ್ಟಾರೆ ಇದು ಎಲ್ಲಿಗೆ ಒಯ್ಯುತ್ತದೆ? ಈ ಚಿತ್ರಣದ ಮೂಲಸ್ಫೂರ್ತಿ ಯಾವುದು? ಎಂಬ ಪ್ರಶ್ನೆಯು ಮೇಲಿಂದ ಮೇಲೆ ಏಳುವಷ್ಟು ಇಲ್ಲಿಯ ವಾಸ್ತವಿಕತೆಯು ವಾಸ್ತವಿಕವಾಗಿದೆ.

ಕೊನೆಯ ಐವತ್ತು (ಸುಮ ಸುಮಾರು) ಪಾನುಗಳನ್ನು ಓದಿದಾಗ ಅರ್ಥವಾಗುತ್ತದೆ. "ಇದಕ್ಕೆಲ್ಲ ರಸ್ಸ ಬರಬೇಕು............................ ಮನುಷ್ಯ ಇನ್ನೂ ಮೃಗವಾಗಿಯೇ ಇದ್ದಾನೆ. ಈ ಪ್ರಪಂಚದಲ್ಲಿ ಯಾವುದು ದೊಡ್ಡ ಹುಲಿಯೂ ಅದಕ್ಕೆ ಊರಿನ ಹುಲ್ಲೆಗಳ ಮೇಲೆ ಅಧಿಕಾರ! ಆಗ ತಿಳಿಯುತ್ತದೆ ಈ ಚಿತ್ರಣದ ಹಿಂದಿನ ತುದಿ ಏನೆಂದು. ರುಕ್ಮಿಣಿಯ ಪರಂಪರಾನುಗತಿಕ ತಿಳಿವಳಿಕೆ ಹಾಗೂ ಅಚ್ಚುತನ ಸಮತಾವಾದಗಳ ಘರ್ಷಣದಿಂದ ತತ್ವಕ್ಕೆ ಕಳೆ ಏರುತ್ತದೆ. ಆದರೆ ಮೊದಲಿಂದ ತತ್ವ - ಚಿತ್ರಣಗಳ ಸರಿಬೆರಿಕೆ ಬೇಕಾಗಿತ್ತು. ಆಗ ಕಾದಂಬರಿಯ ಯೋಗ್ಯತೆ ಹೆಚ್ಚುತ್ತಿತ್ತು.

ಲೈಂಗಿಕ ಪ್ರಶ್ನೆಗಳನ್ನು ಕಾದಂಬರಿಗಳಲ್ಲಿ ತರುವುದರ ಬಗ್ಗೆ ಯಾವ ಸ್ನೇಹಿತರೋ ರೇಗಿದರೆಂದು ಕಾರಂತರು ಮುನ್ನುಡಿಯಲ್ಲಿ ಬರೆದಿದ್ದಾರೆ. ಲೈಂಗಿಕ ಜೀವನವಿರುವ ತನಕ ಲೈಂಗಿಕ ಚಿತ್ರಣವು ಕಾದಂಬರಿಗಳಲ್ಲಿ ತಪ್ಪಲಾರದು.

ಕಾದಂಬರಿಗಳಲ್ಲಿ ಬರುವ ಲೈಂಗಿಕತೆಯೂ ಲೇಖಕರದಲ್ಲ, ಸಮಾಜದ್ದು. ಅದು ಹೊಲಸಿದ್ದರೆ, ಲೇಖಕರು ಜನತೆಯೊಂದಿಗೆ ಕೂಡಿಯೇ ನಿರ್ಮೂಲ ಮಾಡಬೇಕಾದ ಹೊಲಸು ಅದು. ಮನುಷ್ಯನ ಸುಖ ದುಖಃಗಳಲ್ಲಿ ಆವನ ಲೈಂಗಿಕ ಸುಖ ದುಃಖವೂ ಒಂದು ಭಾಗವಾಗಿದೆ. ಕಾರಂತರು ಆದನ್ನು ಚನ್ನಾಗಿ ಚಿತ್ರಿಸಿದ್ದಾರೆ"

ಈ ಮೇಲಿನ ಮಾದರಿಯಲ್ಲಿ ಕಂಡು ಬರುವ ಕೆಲವು ಅಂಶಗಳನ್ನು ಹೀಗೆ ಗುರುತಿಸಬಹುದು. ಇಲ್ಲಿ ಪುಸ್ತಕ ವಿಮರ್ಶಕರು ಪುಸ್ತಕ ವಿಮರ್ಶೆಗೆ ಪ್ರವೇಶಿಸಿರುವುದು ಕೃತಿಯ ಲೇಖಕರ ವಿವರಗಳ ಮೂಲಕ. ಲೇಖಕರ ತಾತ್ವಿಕ ದೃಷ್ಟಿಕೋನಗಳು ಕೃತಿಯಲ್ಲಿ ಹೇಗೆ ಒಡಮೂಡಿವೆ? ಎಂಬ ಪ್ರಶ್ನೆಯನ್ನು ಹಾಕಿಕೊಂಡು ಅದಕ್ಕೆ ಉತ್ತರವನ್ನು ಪ್ರಸ್ತುತ ಕೃತಿಯಲ್ಲಿ ಪುಸ್ತಕ ವಿಮರ್ಶೆಯ ಮೂಲಕ ಹುಡುಕುತ್ತಿದ್ದಾರೆ. ಕಥೆಯ ವಸ್ತುವನ್ನು ಎರಡೇ ಸಾಲಿನಲ್ಲಿ ಕಟ್ಟಿಕೊಡುತ್ತಾ ಕೃತಿಯ ಬಂಧವನ್ನು ಹೇಳುತ್ತಾರೆ. ಆದರೆ ಇದೊಂದು ಉಜ್ವಲ ಕಾದಂಬರಿ ಎಂದು ಗುರುತಿಸಿದ ಇವರು ಪಾತ್ರಗಳ ಚರ್ಚೆ ಬಂದಾಗ 'ಜೀವಂತ ಪಾತ್ರಗಳಾಗಿ ರಂಗದ ಮೇಲೆ ಬರುತ್ತವೆ, ತೆರಳುತ್ತವೆ' ಎಂಬ ಮಾತು ಚರ್ಚಾಸ್ಪದವಾಗುತ್ತದೆ. ಒಂದರ ಪ್ರಕಾರವನ್ನು ಇನ್ನೊಂದರ ಜೊತೆ ಜೋಡಿಸುವುದರ ಒಳಾರ್ಥವೇನು? ಎಂಬ ಪ್ರಶ್ನೆ ಹುಟ್ಟುತ್ತದೆ. ಇದಕ್ಕೆ 'ರಂಗ' ಜೀವಂತ ಗುರುತಿಸುವುದರಿಂದಲೇ ಹಾಗಾದರೆ ಕಾದಂಬರಿ ಜೀವಂತವಲ್ಲವೆ? ಎಂದು ಕೇಳಬಹುದೆನಿಸುತ್ತದೆ. ಆದರೆ ಕೃತಿಯ ಲೇಖಕರು ಯಕ್ಷಗಾನದ ಪ್ರಮುಖ ಕಲಾವಿದರಾದುದರಿಂದ ಯಕ್ಷಗಾನದ ಮುಖೇನ ಕಾದಂಬರಿಯನ್ನು ನೋಡುವ ದೃಷ್ಟಿ ಇಲ್ಲಿ ಕಂಡುಬರುತ್ತದೆ. ಅದಕ್ಕೆ ಪೂರಕವಾಗಿ ಪ್ರಸ್ತಕ ವಿಮರ್ಶಕರೆ 'ಮನಸ್ಸನ್ನು ರಂಜಿಸಲು ಯಕ್ಷಗಾನದ ಮೇಲೆ ವಿಮರ್ಶಾತ್ಮಕ ಉಪನ್ಯಾಸ' ಎಂದು ಗುರುತಿಸಿರುವುದನ್ನು ಕಾಣಬಹುದು. ಪ್ರಸ್ತುತ ಕೃತಿಯ ಪುಸ್ತಕ ವಿಮರ್ಶೆಯ ಪುಸ್ತಕ ವಿಮರ್ಶಕರ ವೈಯಕ್ತಿಕ ಓದಿನ ಮೂಲಕ ಮೂಡಿರುವುದರಿಂದ ಹಲವಾರು ಪ್ರಶ್ನೆಗಳನ್ನು ಎತ್ತುತ್ತಾರೆ. ಅದರ ಜೊತೆಯಲ್ಲಿಯೇ ಆ ಪ್ರಶ್ನೆಗಳಿಗೆ ತಾವೇ ಉತ್ತರಗಳನ್ನು ಕಂಡುಕೊಳ್ಳುತ್ತಾರೆ. ಇದು ಸಕಾರತ್ಮಕವಾದ ಪ್ರತಿಕ್ರಿಯೆಯಾಗಿದೆ. ಕೆಲವು ಕಡೆ ತುಂಬಾ ಸೂಕ್ಷ್ಮವಾಗಿ 'ಸರಿ ಬೆರಕೆ ಬೇಕಾಗಿತ್ತು, ಯೋಗ್ಯತೆ ಹೆಚ್ಚುತ್ತಿತ್ತು' ಎಂದು ಸಲಹೆಯನ್ನು ಕೊಡುತ್ತಿದ್ದಾರೆ. ಈ ಸಲಹೆಗಳು ಕೃತಿಯನ್ನು ಆತ್ಮೀಯವಾಗಿ ದರ್ಶಿಸಿದ ಕಾರಣದಿಂದ, ಲೇಖಕರ ಬಗೆಗಿನ ಗೌರವದಿಂದ, ಅವರ ಸಾಧನೆಗಳ ಸ್ಮರಣೆಯಿಂದ ಮೂಡಿರಬಹುದು. ಹಾಗಾಗಿ ಲೈಂಗಿಕತೆಯ ವಿಚಾರ ಬಂದಾಗ ಪುಸ್ತಕ ವಿಮರ್ಶಕರು ಲೇಖಕರ ಪರವಾಗಿ ನಿಲ್ಲುವುದನ್ನು ಕಾಣಬಹುದು.

ಈ ಕಾಲದ ಪ್ರಮುಖ ಪುಸ್ತಕ ವಿಮರ್ಶನ ನಿಲುವುಗಳನ್ನು ಎಲ್.ಎಸ್. ಶೇಷಗಿರಿರಾವ್ ರವರು ಹೀಗೆ ಗುರುತಿಸುತ್ತಾರೆ.

ಸಾಮಾನ್ಯವಾಗಿ ಈ ಯುಗದ ವಿಮರ್ಶಕರಲ್ಲಿ ನಾವು ಇಂದು ಗಮನಿಸಬೇಕಾದ ಎರಡು ಅಂಶಗಳು ಕಾಣುತ್ತವೆ. ಬರಹಗಾರನ ಸಾಮಾಜಿಕ ಹೊಣೆ ಮತ್ತು ಓದುಗರ ಮನಸ್ವಾಸ್ಥ್ಯದ ಪ್ರಶ್ನೆ ಸದಾ ಇವರಲ್ಲಿ ಎಚ್ಚರವಾಗಿತ್ತು. ಈ ಹೊಣೆಯನ್ನು ವಿವರಿಸುವುದರಲ್ಲಿ ಈ ಪ್ರಶ್ನೆಗೆ ಉತ್ತರಿಸುವುದರಲ್ಲಿ ಇವರು ವಾಸ್ತವಿಕತೆಯನ್ನು ಸರಳವಾಗಿ ಕಂಡರು. ಮನೋವಿಜ್ಞಾನ, ಮನುಷ್ಯನ ನಾಗರೀಕತೆಯ ಚರಿತ್ರೆ, ಜೀವನದಲ್ಲಿ ಆರ್ಥಿಕ ಪ್ರಶ್ನೆಯ ಮಹತ್ವ ಇದನ್ನು ಸಂಪೂರ್ಣವಾಗಿ ಅಭ್ಯಾಸ ಮಾಡಲಿಲ್ಲ ಎಂಬುದನ್ನು ಒಪ್ಪಬೇಕು. ಆದರೆ ಕೃತಿ ರಚನೆ, ಕೃತಿ ವಿಮರ್ಶೆ ಇವುಗಳಲ್ಲಿ ಸಾಹಿತ್ಯದ ಹೊಣೆಯ ವಿಷಯದಲ್ಲಿ ಇವರ ಪ್ರಾಮಾಣಿಕ ಕಳಕಳಿಯನ್ನು ಕಡೆಗಣಿಸುವಂತಿಲ್ಲ...... ಎರಡನೆಯದಾಗಿ ಇವರ ಸಾಹಿತ್ಯ ವಿಮರ್ಶೆ ಬಹುಮಟ್ಟಿಗೆ ವಿವರಣಾತ್ಮಕವಾಗಿತ್ತು, ತಮ್ಮ ಸಂತೋಷವನ್ನು ಓದುಗರೊಂದಿಗೆ ಹಂಚಿಕೊಂಡು ಬಹುಮಟ್ಟಿಗೆ ತೃಪ್ತಿಪಟ್ಟರು, ಸೂಕ್ಷ್ಮವಾದ ವಿಶ್ಲೇಷಣೆ ಕಾಣಲಿಲ್ಲ ಎಂದರೂ ಇವರ ವಿಮರ್ಶೆ ಸಾಹಿತ್ಯದ ವಿಶಿಷ್ಟ ವಿದ್ಯಾರ್ಥಿಗಳಿಗೆ ಮೀಸಲಾದದ್ದಲ್ಲ. ಸಾಮಾನ್ಯವಾದ

ಓದುಗನಿಗೂ ಅರ್ಥವಾಗುವಂತಹುದು, ಅವನ ಕುತೂಹಲವನ್ನು ಕೆರಳಿಸುವಂತಹುದು, ಕೃತಿಯತ್ತ ಕರೆದೊಯ್ಯುವುದು, ಬೆದರಿಸುವುದಲ್ಲ. ಕೃತಿಗಿಂತ ಕ್ಲಿಷ್ಟವಾದ ವಿಮರ್ಶೆಯನ್ನು ಇವರು ಬರೆಯಲಿಲ್ಲ. ಸಾಹಿತ್ಯ ವಿಮರ್ಶೆ ಸೂಕ್ಷ್ಮವಾಗಬೇಕು, ಪ್ರೌಢವಾಗಬೇಕು, ಶಾಸ್ತ್ರೀಯ ಶಬ್ದಗಳನ್ನು ಬಳಸಿಕೊಳ್ಳಬೇಕು. ಆದರೆ ಸತತವಾಗಿ ಶ್ರೇಷ್ಠ ಸಾಹಿತ್ಯವೂ, ಸಾಹಿತ್ಯ ವಿಮರ್ಶೆಯೂ ಬಹು ಸಂಖ್ಯೆಯಲ್ಲಿರುವ ಸಾಮಾನ್ಯ ಓದುಗರೊಂದಿಗೆ ಸಂಪರ್ಕವನ್ನಿಟ್ಟುಕೊಳ್ಳುವ ಅಗತ್ಯದ ಅರಿವು ಈ ಸಾಹಿತ್ಯ ವಿಮರ್ಶೆಯಲ್ಲಿ ಸದಾ ಜಾಗೃತವಾಗಿದೆ. ಅಲ್ಲದೆ ಪ್ರಾಚೀನ ಭಾರತೀಯ ಸಾಹಿತ್ಯ ಮೀಮಾಂಸೆಯ ಪರಂಪರೆಯೊಂದಿಗೆ ಗಟ್ಟಿಯಾದ ಬಾಂಧವ್ಯವನ್ನು ಸ್ಥಾಪಿಸಿದ ಸಾಧನೆಯು ಈ ಸಾಹಿತ್ಯ ವಿಮರ್ಶಕರದು. ಪೂರ್ವಾತ್ಯ ಪಾಶ್ಚಾತ್ಯ ಸಿದ್ಧಾಂತಗಳ ತೌಲನಿಕ ಅಧ್ಯಯನಕ್ಕೆ ಬುನಾದಿಯನ್ನು ಇವರು ನಿರ್ಮಿಸಿದರು. [೧೩]

ಈ ಮೇಲಿನ ವಿಶ್ಲೇಷಣೆಯನ್ನು ಗಮನಿಸಿದಾಗ ಕ್ವಚಿತ್ತಾಗಿ ಪುಸ್ತಕ ವಿಮರ್ಶಾ ಧೋರಣೆಗಳನ್ನು ಕಾಣಬಹುದು. ಇಲ್ಲಿ ಈ ಕಾಲಘಟ್ಟದಲ್ಲಿ ಬರಹಗಾರನಲ್ಲಿದ್ದ ಸಾಮಾಜಿಕ ಹೊಣೆ ಮತ್ತು ಓದುಗರ ಮನಸ್ಸನ್ನು ಸೆಳೆಯುವ ಉದ್ದೇಶದಿಂದ ವಾಸ್ತವವನ್ನು ಸರಳವಾಗಿ ಕಂಡಿದ್ದಾರೆ ಎಂದು ಇವರು ಗುರುತಿಸುತ್ತಾರೆ. ಅದಕ್ಕೆ ಅವರು ಕಂಡುಕೊಳ್ಳುವ ಉತ್ತರಗಳು ಹಲವು ಶಾಸ್ತ್ರೀಯವಾದಂಥ ನಿಲುವುಗಳಲ್ಲಿ ಆದರೂ ಈ ಕಾಲದವರ ಕೃತಿ ರಚನೆ ಮತ್ತು ವಿಮರ್ಶೆಯ ಕೊಡುಗೆಯನ್ನು ಶ್ಲಾಘಿಸಿದ್ದಾರೆ ತಮ್ಮ ಅನುಭವಗಳನ್ನು ಓದುಗರೊಂದಿಗೆ ಹಂಚಿಕೊಳ್ಳುವುದೇ ವಿಮರ್ಶೆಯಾಗಿತ್ತು. ಎಂದು ಹೇಳಿ, ವಿಮರ್ಶೆ ಸೂಕ್ಷ್ಮವಿಶ್ಲೇಷಣೆಯ ಕೊರತೆಯಿಂದ ಗಂಭೀರ ಆಸಕ್ತರನ್ನು ಸೃಷ್ಟಿಸಲಿಲ್ಲ ಎಂಬುದನ್ನು ಹೇಳುತ್ತಾರೆ. ಆ ಕಾಲದ ವಿಮರ್ಶೆ ಇಟ್ಟುಕೊಂಡ ಅರಿವು ಸಾಮಾನ್ಯರನ್ನು ಹತ್ತಿರವಾಗಿಸಿಕೊಳ್ಳಬೇಕು ಎಂಬುದರ ಕಡೆಗಿತ್ತೆ ಹೊರತು ವಿಮರ್ಶೆಯನ್ನು ಪ್ರೌಢವಾಗಿಸಬೇಕೆಂಬ ಉದ್ದೇಶವಿರಲಿಲ್ಲ ಎಂಬುದನ್ನು ಈ ವಿಶ್ಲೇಷಕರು ಗುರುತಿಸಿದ್ದಾರೆ. ಪ್ರಾಚೀನ ಕಾವ್ಯ ಮೀಮಾಂಸೆಗೆ ಆ ಕಾಲದ ಚಿಂತಕರು ಮಾರುಹೋಗಿದುದನ್ನು ಸ್ಪಷ್ಟಪಡಿಸುತ್ತಾರೆ. ಈ ಎಲ್ಲ ಅಂಶಗಳ ಈ ವಿಶ್ಲೇಷಣೆಯು ಮುಖ್ಯವಾಗಿ ಆ ಕಾಲದ ಪುಸ್ತಕ ವಿಮರ್ಶೆ ಮತ್ತು ಸಾಹಿತ್ಯ ವಿಮರ್ಶೆ ತಳೆದಿದ್ದ ಸ್ಪಷ್ಟ ನಿಲುವುಗಳನ್ನು ತಿಳಿಸುತ್ತದೆ. ಆದರೆ ಎಲ್.ಎಸ್. ಶೇಷಗಿರಿರಾವ್‌ರವರು ಶತಮಾನದ ಅಂಚಿನಲ್ಲಿ ನಿಂತು ಆರಂಭದ ದಶಕದ ಸರಿ ಸುಮಾರಿನ ಬಗೆಗೆ ವಿಶ್ಲೇಷಿಸುತ್ತಿರುವುದು ಪ್ರಶ್ನಾರ್ಹವಾಗಿದೆ. ಅಂದರೆ ಹಿಂದಿನದನ್ನು ಮಾಡಬಾರದೆಂದಲ್ಲ. ಇತ್ತೀಚಿನ ಚಿಂತನಾ ಕ್ರಮವನ್ನಿಟ್ಟುಕೊಂಡು ಪ್ರಾರಂಭದ ಘಟ್ಟದ ವಿಶ್ಲೇಷಣೆಗೆ ತೊಡಗಿರುವುದರಿಂದ ಆ ಕಾಲದ ಸಾಂಸ್ಕೃತಿಕ ಹಿನ್ನೆಲೆಗಳು ಹಿನ್ನೆಡೆಗೆ ಸರಿಯುತ್ತವೆ. ಆಗ ಒಂದು ಸಿದ್ಧ ಮಾದರಿ ವಿಶ್ಲೇಷಣಾ ಕ್ರಮದಿಂದ ಆ ಕಾಲದ ಸಾಂಸ್ಕೃತಿಕ ವಿವರ, ವಿಶ್ಲೇಷಣೆ, ಸಿದ್ಧಾಂತಗಳನ್ನು ತುಂಬಾ ಸರಳೀಕರಿಸಿ ನೋಡುವ ಅಪಾಯ ಎದುರುಗೊಳ್ಳುತ್ತದೆ.

ಈ ಕಾಲಘಟ್ಟದಲ್ಲಿನ ವಿಮರ್ಶಾ ಪ್ರಜ್ಞೆಯು ಪರಿಪೂರ್ಣತೆ, ಔದಾರ್ಯಗಳಿಗೆ ಉದಾಹರಣೆಯಾಗಿ ನೋಡುವುದಾದರೆ ನಿಜವಾದ ಅಂತರ್ದೃಷ್ಟಿ ಮತ್ತು ಸಹಾನುಭೂತಿಗಳ ದೃಷ್ಟಿಯಿದೆ

'ಪ್ರಬುದ್ಧ ಕರ್ನಾಟಕ' ದಲ್ಲಿ ಪ್ರಕಟವಾದ ಎ.ಆರ್. ಕೃಷ್ಣಶಾಸ್ತ್ರೀಯವರ ಕೈಲಾಸಂರ 'ಟೊಳ್ಳುಗಟ್ಟಿ' ವಿಮರ್ಶೆ ಜಯ ಕರ್ನಾಟಕದಲ್ಲಿ ಪ್ರಕಟವಾದ ತೀ.ನಂ. ಶ್ರೀಯವರ ಬೇಂದ್ರಯವರ 'ಗರಿ' ಸಂಕಲನದ ವಿಶ್ಲೇಷಣೆಗಳನ್ನು ಹೆಸರಿಸಬಹುದು ಪೇಜಾವರ ಸದಾಶಿವರಾಯರ 'ಆಧುನಿಕ ಕನ್ನಡ ಕವಿತೆ' ತೀ.ನಂ.ಶ್ರೀಯವರ ಕನ್ನಡದಲ್ಲಿ 'ಹೊಸಮಟ್ಟುಗಳಿಗಿರು ಅವಶ್ಯಕತೆ' ಮುಂತಾದ ಲೇಖನಗಳಲ್ಲಿ ಆಧುನಿಕ

ಕನ್ನಡ ಕಾವ್ಯದ ಸಾಧನೆಗಳನ್ನು ಕುರಿತು ನಿರ್ದಿಷ್ಟತೆ ಬೇಂದ್ರೆಯವರ 'ವಿಮರ್ಶೆಯ ವಿವರ' ದಲ್ಲಿಯ ಆತ್ಮ ವಿಶ್ಲೇಷಣೆಯ ವಸ್ತುನಿಷ್ಟತೆ, ಕುವೆಂಪುರವರ 'ಕೊಳಲು' ಸಂಗ್ರಹದ ವಿಶ್ಲೇಷಣೆಯಲ್ಲಿ ವಿ.ಕೃ. ಗೋಕಾಕ ತೋರಿಸಿರುವ ವಿಮರ್ಶೆಯ ನಿರ್ಭಯತೆ- ಇದು ಈ ಯುಗದ ವಿಮರ್ಶೆಯ ಕೆಲವು ಮಹತ್ವದ ಸಾಧನಗಳಾಗಿವೆ.

ಎಂದು ಗುರುತಿಸುವಾಗ ರಸ ಪ್ರಧಾನ ಪುಸ್ತಕ ವಿಮರ್ಶೆ ಸಂದರ್ಭದಲ್ಲಿನ ಕೃತಿಗಳ ಸ್ವರೂಪವನ್ನು ಅವರ ಪುಸ್ತಕ ವಿಮರ್ಶಾನಿಲುವನ್ನು ತೋರಿಸುತ್ತದೆ. ಅದರೆ ಈ ಕಾಲಘಟ್ಟ ತಾನು ರೂಪಿಸಿಕೊಂಡ ನಿಲುವಿನಲ್ಲಿ ಸಂಪೂರ್ಣ ಮುಳಗಲಿಲ್ಲ. ಅದು ಹಾಕಿಕೊಂಡಿದ್ದ ಮಿತಿಯಿಂದಾಗಿ ಹಿಂದಿನ ಸಂಪ್ರದಾಯದ ನೀರೇ ಆ ಕಾಲದಲ್ಲೂ ಹರಿದು ಬಂದಂತೆ ಕಾಣುತ್ತದೆ. ಈ ಕಾಲದವರ ಕೃತಿಗಳನ್ನು ಮುಂದಿನವರು ವಿಮರ್ಶಿಸಲು ತೊಡಗಿಕೊಂಡಾಗ ಆ ಕಾಲದವರ ಮಿತಿ ಅರಿವಾಗತೊಡಗಿತು. ರಸ ಪ್ರಧಾನತೆಯ ಸಂದರ್ಭದಲ್ಲಿ ತಮ್ಮ ಸಮಕಾಲೀನ ವಿಮರ್ಶೆಯನ್ನು ವಸ್ತುನಿಷ್ಠವಾಗಿ ಮಾಡಿದ್ದರೆ ವಿಮರ್ಶೆ ಬಹುಪಾಲು ಯಶಸ್ವಿಯಾಗುತ್ತಿತ್ತು. ಇದು ಪುಸ್ತಕ ವಿಮರ್ಶೆಗೂ ಅನ್ವಯಿಸಬಹುದಾದ ಮಾತು.

೩. ೨. ರೂಪ ಪ್ರಧಾನ ಪುಸ್ತಕ ವಿಮರ್ಶೆ :

ರೂಪ ಪ್ರಧಾನ ವಿಮರ್ಶೆ, ವಿಮರ್ಶಾ ಕ್ಷೇತ್ರದಲ್ಲಿ ದೊಡ್ಡ ಛಾಪನ್ನು ಹರಡಿದ, ಗುರುತಿಸಿಕೊಂಡಂಥ ವಿಭಾಗ. ಇದರ ತಾತ್ವಿಕ ಗತಿಗಳು ಸಾಹಿತ್ಯ ವಿಮರ್ಶೆ, ಪುಸ್ತಕ ವಿಮರ್ಶೆಯನ್ನು ಬಹಿರ್ಮುಖಿಯತ್ತ ಹೊರಳಿಸಿದವು. ಇಲ್ಲಿನ ಸಾಹಿತ್ಯ ಹೇಗೆ ಪಾಶ್ಚಾತ್ಯರ ಅನುಕರಣೆ ಮತ್ತು ಅನುಸರಣೆಯಿಂದ ಹುಟ್ಟಿತೋ ಹಾಗೆಯೇ ವಿಮರ್ಶೆಯು ತನ್ನ ಪ್ರಮುಖ ನಿಲುವುಗಳನ್ನು ಮತ್ತು ತತ್ವಗಳನ್ನು ಪಾಶ್ಚಾತ್ಯರಿಂದ ಎರವಲಾಗಿ ಪಡೆಯಿತು. ಅದರ ಪರಿಣಾಮವಾಗಿಯೇ ಪುಸ್ತಕ ವಿಮರ್ಶೆಯೆಂಬುದು ರೂಪ ಪ್ರಧಾನವಾಗಿ ಬೆಳೆಯಿತು. ಕನ್ನಡ ಸಾಹಿತ್ಯದಲ್ಲಿ ಈ ಕಾಲಘಟ್ಟದ ಅವಿರ್ಭಾವಕ್ಕೆ ಪ್ರಧಾನ ಶಕ್ತಿಗಳಾಗಿ ಮಾರ್ಕ್ಸವಾದ ಮತ್ತು ಮನಃಶಾಸ್ತ್ರಗಳು ದಾಂಗುಡಿಯಿತ್ತವು. ಮಾರ್ಕ್ಸ್‌ವಾದ ಸಾಮಾಜಿಕ, ಆರ್ಥಿಕ ಪ್ರಪಂಚದಲ್ಲಿ ಕ್ರಾಂತಿ ಮಾಡಿದರೆ, ಮನಃಶಾಸ್ತ್ರ ಮಾನವ ಜೀವನದ ಅಂತರಂಗದ ಪರಿಶೋಧನೆಯಲ್ಲಿ ತೊಡಗಿತು. ಇವೆರಡರ ಪ್ರೇರಣೆಯಿಂದಾಗಿ ಈ ಕಾಲದ ಸಾಹಿತ್ಯ ಬೆಳೆಯತೊಡಗಿತು. ಹಾಗೆಯೇ ಪುಸ್ತಕ ವಿಮರ್ಶೆಯ ಪ್ರೇರಣೆಗಳು ಪಾಶ್ಚಾತ್ಯರಿಂದ ಪಡೆದ ರೂಪ ಪ್ರಧಾನವಾದ ಅಂಶಗಳ ಕಡೆಯೇ ಇದ್ದವು.

ರೂಪ ಪ್ರಧಾನ ಪುಸ್ತಕ ವಿಮರ್ಶೆಯ ಆಳ ವಿಸ್ತಾರಗಳನ್ನು ಅರಿಯುತ್ತ ಹೋದಂತೆಲ್ಲ ಅದು ಆರಂಭದ ದಿಸೆಯಲ್ಲಿ ನಮ್ಮ ಕನ್ನಡ ಪುಸ್ತಕ ವಿಮರ್ಶಕರು ಹೆಚ್ಚಾಗಿ ಆಂಗ್ಲ - ವಿಮರ್ಶಕರು, ಆಂಗ್ಲ ಸಾಹಿತ್ಯ ಕೃತಿಗಳ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಕನ್ನಡ ಸಾಹಿತ್ಯಕ್ಕೂ, ಕೃತಿಗಳಿಗೂ ಹೊಂದಿಸಿ ಹೇಳುವುದರತ್ತ ಗಮನ ಹರಿಸಿದರು. ಹಾಗೆ ಹೊಂದಿಸುವಿಕೆಯಲ್ಲಿ ಹೇರುವ ಒತ್ತಡದಿಂದ ವಿಮರ್ಶೆ ಬಿಳುಚಿಕೊಂಡಿತು; ಕನ್ನಡದ ಮಟ್ಟಿಗೆ ನಲುಗಿತು. ಆಂಗ್ಲ ವಿಮರ್ಶೆಯನ್ನು ಕನ್ನಡದಲ್ಲಿ ತುಂಬಲು

ಹೆಣಗಾಡಿದುದೇ ಬಹುಪಾಲು ಈ ಸಂದರ್ಭದ ವಿಮರ್ಶೆಯ ದೊಡ್ಡ ಚರಿತ್ರೆ. ಕೆಲವೊಮ್ಮೆ ಪಾಶ್ಚಾತ್ಯ ವಿಮರ್ಶೆಯಾಗಿಯೇ ಪರಿಣಮಿಸಿಬಿಟ್ಟಿತು. ಎಲಿಯಟಿನ 'The Waste Land' ಕವಿತೆಯನ್ನು ಕುರಿತು ಲೀವಿಸ್ ಹೇಳಿದುದನ್ನೇ ಅನಂತಮೂರ್ತಿ ಅಡಿಗರ 'ಭೂಮಿಗೀತ'ಕ್ಕೆ ಒರೆ ಹಚ್ಚಿ ಹೇಳಿದುದನ್ನು ಗಮನಿಸಬಹುದು.

ಈ ಸ್ವರೂಪದ ಪುಸ್ತಕ ವಿಮರ್ಶೆ ಹುಟ್ಟಿ ಬಂದಂಥ ಸಂದರ್ಭ ಈಗಾಗಲೇ ತಿಳಿದಿರುವಂತೆ ಪಾಶ್ಚಾತ್ಯ ಪ್ರೇರಣೆ ಮತ್ತು ಇಂಗ್ಲೀಷ್ ಪ್ರಾಧ್ಯಾಪಕರನ್ನು ಒಳಗೊಂಡಿದ್ದು, ಈ ಪುಸ್ತಕ ವಿಮರ್ಶೆ ಬಹುದೊಡ್ಡ ಮಿತಿಯನ್ನು ತನ್ನ ಸುತ್ತ ಹಾಕಿಕೊಳ್ಳಲು ಕಾರಣವಾಯಿತು. ಹಾಗಾಗಿ ಈ ಪುಸ್ತಕ ವಿಮರ್ಶಕರು ತಮ್ಮ ಘಟ್ಟಕ್ಕೆ ಸಂಬಂಧಪಟ್ಟ ಕೃತಿಗಳನ್ನು ಮಾತ್ರ ವಿಮರ್ಶಿಸಿದರು. ಅವುಗಳ ಮೌಲ್ಯವನ್ನು ಗುರುತಿಸಿದರು. ಹಾಗೆ ಗುರುತಿಸುವಾಗ ಸಹಜವಾಗಿ ತಮ್ಮ ಎದುರಾಳಿಗಳಂತಿದ್ದ ರಸ ಪ್ರಧಾನ ಪುಸ್ತಕ ವಿಮರ್ಶಕರನ್ನು ಕಡೆಗಣಿಸಿದರು ಮತ್ತು ಅವರ ಕೃತಿಗಳಲ್ಲಿ ಕಂಡು ಬರುವ ಪ್ರಧಾನ ಧೋರಣೆ, ಅಶಯಗಳನ್ನು ಅಲ್ಲಗಳೆದರು. ಆದರೆ ಈ ಸಂದರ್ಭದಲ್ಲಿನ ಕೃತಿಗಳಿಗೆ ಅತಿ ಮನ್ನಣೆ ನೀಡಿದರು. ಗಿರಿಯವರ 'ಗತಿಸ್ಥಿತಿ' ಕೃತಿ ಪ್ರಕಟವಾಗುವುದಕ್ಕಿಂತ ಮುಂಚೆಯೇ 'ಗತಿಸ್ಥಿತಿ' ಕುರಿತು ರಿವ್ಯೂಗಳು ಪ್ರಕಟವಾದವು. ಅನಂತಮೂರ್ತಿಯವರು 'ಈಚಿನ ಕನ್ನಡ ಕಾವ್ಯ' ಎಂಬ ಶೀರ್ಷಿಕೆಯಲ್ಲಿ 'ಗಿರಿಯವರ' ಗತಿಸ್ಥಿತಿ ಕುರಿತು ಹೀಗೆ ಬರೆದಿದ್ದಾರೆ.

ಗಿರಿ-ಕನ್ನಡ ಸಾಹಿತ್ಯ ಪ್ರಪಂಚದಲ್ಲಿ ಕೆಲವರಿಗೆ ಆತ್ಮೀಯವಾದ ಹಲವರಿಗೆ ತಿಳಿಯದ ಹೆಸರು ಇದು. ಬಹಳ ವರ್ಷಗಳ ಹಿಂದೆ ಕೆಲವು ಜಾಣ ಕಥೆಗಳನ್ನು ಬರೆದಿದ್ದರು, ಮತ್ತೆ ಮನೋವಿಜ್ಞಾನಿಯಾಗಿ ಶಾಸ್ತ್ರಕ್ಕೆ ಸಂಬಂಧಪಟ್ಟಂತೆ ಕೆಲವು ಲೇಖನಗಳನ್ನು ಕನ್ನಡದಲ್ಲಿ ಬರೆದರು. ತೇಜಸ್ವಿ, ರಾಮಾನುಜನ್ ಕಾದಂಬರಿಗಳನ್ನು ಕುರಿತು ವಿಮರ್ಶೆ ಬರೆದರು. ಮೈಸೂರಿನಲ್ಲಿದ್ದಾಗ ಒಂದು ಕಾದಂಬರಿ ಬರೆಯುತ್ತಾ ಇದ್ದು ಈಗ ಅಮೆರಿಕಾದಿಂದ ಅದನ್ನು ಮುಗಿಸಿ ಕಳಿಸಿದ್ದಾರೆ. ಹೆಚ್ಚು ಮಾತಾಡದ, ಆಡಿದರೆ ನೆನಪಿಸುವಂತೆ ಮಾತಾನಾಡಬಲ್ಲ, ಗುಪ್ತವಾಗಿ ತನ್ನೊಳಗೆ ಬೆಳೆಯುವ, ಹೊಚ್ಚ ಹೊಸ ಸಂವೇದನೆಯ ಮನುಷ್ಯ ಈ ಗಿರಿ. ಇವರ ಕಾದಂಬರಿ ಗತಿಸ್ಥಿತಿ 'ಕನ್ನಡ ಭಾಷೆಗೆ ನಡೆಸಿದ ಚಿಕಿತ್ಸೆ' ಎನ್ನುಬಹುದು. ಈ ದಶಕದ ಮಹತ್ವದ ಕೃತಿಗಳಲ್ಲಿ ಇದೊಂದು ಎಂಬುದನ್ನಂತೂ ಖಂಡಿತ ಹೇಳಬಹುದು. ಅಥವಾ ನಮ್ಮ ಸಮಕಾಲೀನ ನಾಗರೀಕ ಜೀವನವನ್ನು ಕುರಿತು ಇಷ್ಟು ಒಳ್ಳೆ ಕಾದಂಬರಿ ಇನ್ನೂ ಬಂದಿಲ್ಲವೆಂದು ಹೇಳಿದರೆ ಉತ್ಪ್ರೇಕ್ಷೆಯಾಗಲಾರದು.

ಈ ಕಾದಂಬರಿ ಓದಿ ನನಗಾದ ಸಂತೋಷಗಳನ್ನೆಲ್ಲ ಹೇಳಬೇಕಾದರೆ ಕೃತಿಯಿಂದ ಎಷ್ಟು ಭಾಗಗಳನ್ನು ಉದ್ಧರಿಸಿದರೂ ತೀರದು. ನನ್ನ ಕಾಪಿಯಲ್ಲಿ ಪ್ರತಿ ಪೇಜಿನ ಮೇಲೂ ಗುರುತು ಹಾಕಿಕೊಂಡಿದ್ದೇನೆ. ನನ್ನ ಮನಸ್ಸನ್ನು ಕೃತಿ ಆವರಿಸಿಬಿಟ್ಟಿದೆ.

ಕಾಫ್ಕ, ಕಮೂರ ಪ್ರಭಾವವಿಲ್ಲದಿದ್ದರೆ ಗಿರಿ ಈ ಕೃತಿ ಬರೆಯುತ್ತಿರಲಿಲ್ಲ ನಿಜ. ಆದರೆ ಈ ಪ್ರಭಾವಕ್ಕೆ ಒಳಗಾದ ಮನಸ್ಸು ತನ್ನ ಪ್ರಜ್ಞೆಯಲ್ಲೇ ಅಂದರೆ ತನಗೆ ವಿಶಿಷ್ಟವಾದ ರೀತಿಯಲ್ಲೇ - ಬೆಂಗಳೂರಲ್ಲಿ, ಮೈಸೂರಲ್ಲಿ, ಜೋಗದಲ್ಲಿ ಎಲ್ಲಕ್ಕಿಂತ ಹೆಚ್ಚಾಗಿ ಭಾರತದ ಸದ್ಯದ ನವನಗರಗಳಿಗೆಲ್ಲ ಸಾಂಕೇತಿಕವಾದ ಹೆಸರಿಲ್ಲದ ನಗರದಲ್ಲಿ ಬದುಕಿ ಬೇಯದಿದ್ದರೆ ಈ ಕೃತಿ ಹುಟ್ಟುತ್ತಲೇ ಇರಲಿಲ್ಲ. ಕನ್ನಡ ಭಾಷೆಯನ್ನು ಯಾರೂ ಉಪಯೋಗಿಸದ ಹಾಗೆ ಗಿರಿ ಉಪಯೋಗಿಸುವುದನ್ನು ಕಲಿಯದಿದ್ದರೂ ಈ ಕೃತಿ ಹೀಗಿರುತ್ತಿರಲಿಲ್ಲ. ಕಮೂ, ಕಾಫ್ಕ ಓದಿದವರಿಗೆ ತಮಗೆ ಪರಿಚಿತವಾದ ವಿಚಾರವನ್ನು ಈ ಆವರಣದಲ್ಲಿ ಮತ್ತೆ ಜೀವಂತಿಸಿಕೊಂಡು ಅನುಭವದ ಜೊತೆಗೇ ಗಿರಿಯು ವಿಶಿಷ್ಟ ಪ್ರಜ್ಞೆಯ ಮೂಲಕ ನಮ್ಮ ಸಮಕಾಲೀನತೆಯನ್ನು ಹೊಸದಾಗಿ ಕಂಡಂತೆಯೂ ಆಗುತ್ತದೆ.......

ಈ ಕಾದಂಬರಿಯನ್ನು ಹೇಗೇಗೋ ವಿಶ್ಲೇಷಿಸಬಹುದು. ವಿಮರ್ಶಕರಿಗೆ ಇಲ್ಲಿ ಔತಣ ಕಾದಿದೆ. 'ನೋಡುವುದು' ಎಂತಹ ಕ್ರಿಯೆ ಎನ್ನುವುದರ ಬಗ್ಗೆಯೇ ಈ ಕಾದಂಬರಿ ಯಾವ ಮನಸ್ಥಿತಿಯಲ್ಲಿದ್ದಾಗ ನಾವು ಹೇಗೆ ನೋಡುತ್ತೇವೆ. ಈ ಗ್ರಹಣ ಕ್ರಿಯೆ ಪ್ರಜ್ಞೆಗೂ, ಆವರಣಕ್ಕೂ ಇರುವ ಸಂಬಂಧದ ಬಗ್ಗೆ, ಜೀವನದ ಬಗ್ಗೆ ತಾತ್ವಿಕವಾಗಿ ಏನು ಹೇಳುತ್ತದೆ. ಇದು ಕಾದಂಬರಿಯ ಉದ್ದೇಶವೆಂದು ತಿಳಿದು ಕೃತಿ ವಿಶ್ಲೇಷಣೆ ಮಾಡಬಹುದು. ಕೃತಿಯಲ್ಲಿ 'ಈತ' ನಿಗಾಗುವ ಅನುಭವ ಮಾತ್ರ ಸ್ಪಷ್ಟ. ಆದರೆ ಈತನಿಗೇ ಅನುಭವದ ಅರ್ಥ ತಿಳಿಯದು.

ಕಾದಂಬರಿ ತನ್ನ ಅರ್ಥವನ್ನೆಲ್ಲ ವಿವರಗಳಲ್ಲಿ ಹುಟ್ಟಿಸಿಕೊಳ್ಳುತ್ತದೆ. ಒಂದು ದೃಷ್ಟಿಯಲ್ಲಿ ವಿವರಗಳೇ, ಈತ ವಿವರಗಳನ್ನು ಗಮನಿಸುವುದೇ, ಯಾಕೆ ಗಮನಿಸುತ್ತಾನೆಂಬುದೇ ಕಾದಂಬರಿ. ಈತ ಎಲ್ಲವನ್ನು ಸೂಕ್ಷ್ಮವಾಗಿ ವಿವರಿಸುತ್ತ ಹೋದರೂ ಆಕೆ ಮತ್ತು ಮೂರ್ತಿ ಇಬ್ಬರನ್ನು ಮಾತ್ರ ವಿವರಿಸುವುದಿಲ್ಲವೆಂಬುದು. ಇದು ಯಾಕೆ ಎಂಬುದು ನಮ್ಮನ್ನು ಕಾಡುತ್ತದೆ. ನಮ್ಮ ಸಾಮಾನ್ಯ ಗ್ರಹಣಶಕ್ತಿ ಮಹತ್ವಪೂರ್ಣವಾದ ವಿವರವನ್ನು ಮಾತ್ರ ಗಮನಿಸುತ್ತದೆ. ಒಂದು ವಸ್ತುವನ್ನು ಅತಿಯಾಗಿ ವಿವರಿಸುವುದೆಂದರೆ ಆ ವಸ್ತುವನ್ನು Atomire ಮಾಡಿದಂತೆ. ವಿವರಿಸುತ್ತ ವಿವರಿಸುತ್ತ ವಸ್ತುವೇ ಮಾಯವಾಗುತ್ತದೆ. ಎಲ್ಲವನ್ನು ವಿವರವಾಗಿ ನೋಡುವುದು ಈತ, ಆಕೆ ಮತ್ತು ಮೂರ್ತಿಯನ್ನು ಮಾತ್ರ ಹೀಗೆ ವಿವರಿಸದೇ ಇರುವುದು. ಯಾಕೆಂದರೆ ಈ ಇಬ್ಬರೂ ಮಾತ್ರ ಈತನಿಗೆ ಆಪ್ತರಾದ್ದರಿಂದ ಆಪ್ತಳಾಗಿದ್ದ ಲೀಲಾ ಬಗ್ಗೆ ಬೇಸರ ಬಂದ ಕೂಡಲೇ ಅವಳನ್ನು ವಿವರವಾಗಿ ನೋಡಲು ಶುರು ಮಾಡುತ್ತಾನೆಂಬುದು ಗಮನಾರ್ಹ. ಉಳಿದದ್ದಕೆಲ್ಲ ಇವನು ಪರಕೀಯ.

ವಿವರಗಳೇ ಈ ಕಾದಂಬರಿ ತನ್ನ ಅರ್ಥದ ಉತ್ಪತ್ತಿಗೆ ಬಳಸುವ ಸಾಧನಗಳು ಎಂದು ಹೇಳಿದೆ. ವಿವರದಲ್ಲಿ ನೋಡುತ್ತ ಹೋಗುವ ಈ ಕಾದಂಬರಿಯ ಹಿಂದಿರುವ ಪ್ರಜ್ಞೆ ಒಟ್ಟನಲ್ಲಿ ಅನುಭವವನ್ನು ಹೇಳಲು ಪ್ರಯತ್ನಿಸಿದಾಗ್ಗೆಲ್ಲ ಬರವಣಿಗೆ ಸುಳ್ಳೆನ್ನಿಸುತ್ತದೆ. ಬೇರೆ ಕಾದಂಬರಿಗಳಲ್ಲಿ ಸರಿಯನ್ನಿಸುವ ಮಾತುಗಳು ಈ ಕಾದಂಬರಿಗಳಲ್ಲಿ ಯಾಕೆ ನಿಕ್ಷೇಪ್ತಿತವಾಗುತ್ತವೆಂಬುದನ್ನು ಯೋಚಿಸಬೇಕು.

ಒಂದು ಕಡೆ ಮಾತ್ರ ಗಿರಿ ಜಾರಿದ್ದಾರೆ ಎನಿಸುತ್ತದೆ. ಇದು ಸಣ್ಣ ವಿಷಯವಾದರೂ ಎದ್ದು ಕಾಣುತ್ತದೆಂದು, ಹೀಗೆ ಕಾಣುವುದು ಈ ರೀತಿಯ ಕಾದಂಬರಿಯ ವೈಶಿಷ್ಟವೆಂದು ಹೇಳುತ್ತಿದ್ದೇನೆ. ಗುಮಾಸ್ತನೊಬ್ಬ ಮೇಜನ್ನು ಕ್ಷುಲ್ಲಕ ಕಾಗದ ಪತ್ರಗಳ ಗೊಬ್ಬರ ಗುಂಡಿಯನ್ನಾಗಿಸುವ ದೃಶ್ಯ (ಪುಟ ೧೯-೨೦) 'ಈತ'ನ ಕಣ್ಣೆದುರು ನಡೆಯುವುದಿಲ್ಲ. ಆದ್ದರಿಂದ ಈ ವಿವರಗಳು ಯಾಕೆಂದು ನಮಗೆ ಅರ್ಥವಾಗುವುದಿಲ್ಲ.

ಒಂದೇ ಒಂದು ಸಾರಿ ಓದಿ ಅತ್ಯುತ್ಸಾಹದಲ್ಲಿ ಬರೆದ ಮಾತುಗಳು ಮೇಲಿನವು. ಆದರೆ ಇನ್ನೊಮ್ಮೆ ಓದಬೇಕು, ಗೆಳೆಯರ ಜೊತೆ ಚರ್ಚಿಸಬೇಕು ನನ್ನ ಉತ್ಸಾಹವನ್ನು ಓದುಗರಲ್ಲಿ ಹಂಚಿಕೊಳ್ಳುವುದು ಈಗ ಸದ್ಯದ ನನ್ನ ಉದ್ದೇಶವೇ ಹೊರತು ಕೃತಿಯ ವಸ್ತುನಿಷ್ಠ ವಿಮರ್ಶೆಯಲ್ಲ. ಯಾಕೆಂದರೆ ಇದೇ ಕಾದಂಬರಿ ಕಾಫ್ಕ ಕಮೂರಿಂದ ಕಲಿತ ಒಂದು ಬೌದ್ಧಿಕ ಆಟವೆಂದೂ, ತುಂಬಾ ಬುದ್ಧಿಶಾಲಿಯೊಬ್ಬ ಆಡಿದ ಆಟ ಎಂದು ಮೆಚ್ಚಬೇಕೆಂದೂ ವಾದಿಸಬಹುದೇನೋ. ಆದರೆ ನನ್ನ ಮಟ್ಟಿಗೆ ಈ ಕಾದಂಬರಿ ಮನಸ್ಸನ್ನು ಗಾಢವಾಗಿ ಕಲಕಿದೆ.

ವಸ್ತುನಿಷ್ಠ ವಿಮರ್ಶೆಯೆಂದರೂ, ಕೃತಿ ಪರೀಕ್ಷೆಯೆಂದರೂ ನನಗೆ ಈಚೆಗೆ ಬೇಜಾರು. ನಮ್ಮ ವಿಮರ್ಶೆಯ ಭಾಷೆ ಎಷ್ಟು ಉಸಿರು ಕಟ್ಟಿಸುತ್ತಿದೆ ನೋಡಿ, ಯಾರಿಗಾದರೂ ಒಂದು ಪದ್ಯವನ್ನೊ, ಕಥೆಯನ್ನೋ ಕೊಡಿ, ಅವರು ಅದನ್ನು ಓದಿ ತುಂಬ ಯೋಚಿಸುವ ಗಂಟು ಮುಖ ಮಾಡಿ ಇನ್ನೊಮ್ಮೆ ಓದಬೇಕು ಅನ್ನುತ್ತಾರೆ. ಎಲ್ಲಿ ಏನು ಹೇಳಿದರೆ ಸಿಕ್ಕಿಬೀಳುತ್ತೇನೋ ಎನ್ನುವ ದಿಗಿಲು. ಉತ್ಸಾಹವೇ ತಪ್ಪೆನ್ನುವ ಧೋರಣೆ ಕಂಡರೆ ರೇಗುತ್ತಾರೆ. ಬೇದಿ ಇಲ್ಲವೆ ಮಲಬದ್ಧತೆಯಿಂದ ನಮ್ಮ ವಿಮರ್ಶಾ ಪ್ರಜ್ಞೆ ನರಳುತ್ತದೆ.

ಎಲ್ಲ ಬಗೆಯ ಸಾಹಿತ್ಯದಲ್ಲೂ ಒಂದಲ್ಲ ಒಂದು ಗುಣವಿದೆ ಅದನ್ನು ಗ್ರಹಿಸುವುದನ್ನು ಕಲಿಯಬೇಕು ಎನ್ನುವ

ಅಕಡೆಮಿಕ್ ವಿಮರ್ಶಕರು ನಿಜವಾಗಿ ಏನನ್ನೂ ಮೆಚ್ಚಲಾರರು. ಪಕ್ಷಪಾತ ಯಾಕೆ ತಪ್ಪು? ನಮ್ಮ ಅತ್ಯುತ್ತಮ ವಿಮರ್ಶೆ ಬರುವುದು ನಾವು ತುಂಬ ಮೆಚ್ಚುವ ಸಾಹಿತ್ಯವನ್ನು ತೀವ್ರವಾಗಿ ಅನುಭವಿಸಿದಾಗ, ಎಷ್ಟು ವಿಮರ್ಶಕ ಧೋರಣೆಯಿದ್ದರೂ ಕೃತಿಯ ಬಗ್ಗೆ ಪಕ್ಷಪಾತಿಯಾಗಬೇಕೆಂದೂ ಉತ್ಸಾಹ ಹುಟ್ಟಿದಾಗ, ಎಲಿಯಟ್, ಪೌಂಡ್, ಲೀವಿಸ್ ಇದರ ಅತ್ಯುತ್ತಮ ವಿಮರ್ಶೆಯಲ್ಲಿ ಈ ಪಕ್ಷಪಾತ. ತುಂಬ ವಿಮರ್ಶಕ ಪ್ರಜ್ಞೆಯಿದ್ದವನ ಪಕ್ಷಪಾತ ಕಾಣಿಸುತ್ತದೆಯಲ್ಲವೆ? ನವ್ಯ ಸಾಹಿತ್ಯದ ಜೀವಂತಿಕೆ ಸಣ್ಣಗೆ ಉರಿಯುತ್ತಿರುವಾಗ 'ಸಂಕ್ರಾಂತಿ', 'ಗತಿಸ್ಥಿತಿ', 'ಮಹಾಪ್ರಸ್ಥಾನ' ಗಳಿಂದ ಕನ್ನಡದ ಬಗ್ಗೆ ಭರವಸೆ ಹುಟ್ಟುವುದಲ್ಲವೆ? ಇವುಗಳ ಬಗ್ಗೆ ವಿವೇಕದ ವಿಮರ್ಶೆಯ ಜೊತೆಗೇ ಉತ್ಸಾಹದಿಂದಲೂ ಮಾತಾಡುವುದು ಸರಿಯಲ್ಲವೇ? ಅವಶ್ಯವಲ್ಲವೆ?[೪]

ಇದೇ 'ಗತಿಸ್ಥಿತಿ' ಬಗ್ಗೆ ದೀರ್ಘವಾದ ವಿಚಾರ ಚಿಂತನೆಗಳು ಲೇಖನದ ರೂಪದಲ್ಲಿ ಆ ಸಂದರ್ಭದಲ್ಲಿ ಅಭಿವ್ಯಕ್ತವಾದವು.

೧. ಜಿ. ಎನ್. ರಂಗನಾಥರಾವ್ ಸಾಕ್ಷಿ ೧೮ (ಪುಟ ೯೦)ರ ಸಂಚಿಕೆಯಲ್ಲಿ 'ಗತಿಸ್ಥಿತಿ' ಪಾತ್ರ ಪ್ರಧಾನವಾದ ಕಾದಂಬರಿಯಲ್ಲ, ಗತಿಸ್ಥಿತಿ ವ್ಯಕ್ತಿತ್ವ ಪ್ರಧಾನವಾದ ಕಾದಂಬರಿ ಎಂದು ಹೇಳಿದ್ದಾರೆ.

೨. ಇವರೇ ಸಂಕ್ರಮಣದಲ್ಲೂ 'ಗತಿಸ್ಥಿತಿ'ಯ ಬಗ್ಗೆ ಒಂದು ದೀರ್ಘ ಲೇಖನ (ಸಂಚಿಕೆ ೪೯) ಬರೆದಿದ್ದಾರೆ.

೩. ಗತಿಸ್ಥಿತಿ (ಒಂದು ವಿಮರ್ಶೆ) - ಜಾಗೋ ಸಾಕ್ಷಿ ೧೭.

೪. ಗತಿಸ್ಥಿತಿ - ಮರುಚಿಂತನೆ - ಜಿ. ಎನ್. ರಂಗನಾಥರಾವ್, ಸಾಕ್ಷಿ ೧೮.

೫. ಗತಿಸ್ಥಿತಿ - ವಿಮರ್ಶೆಯ ಬಗ್ಗೆ ಒಂದು ಪ್ರತಿಕ್ರಿಯೆ - ಡಿ. ರಂಘನಾಥ್‌ರಾವ್, ಸಾಕ್ಷಿ ೧೯ (ಜಿ. ಎನ್. ರಂಗನಾಥರಾವ್‌ರ ಲೇಖನ ಕುರಿತು)

೬. ಗತಿಸ್ಥಿತಿ - ಒಂದು ವಿಮರ್ಶೆ - ಐದು ಅನುಮಾನಗಳು - ಜಿ.ಎಸ್. ಅವಧಾನಿ - ಸಾಕ್ಷಿ - ೧೯.

೭. ಗಿರಿಯವರ ಗತಿಸ್ಥಿತಿ ವಿಮರ್ಶೆಗೆ ಒಂದು ಸೂಚನೆ - ಕಿತ್ತೂರ ರಾಮಚಂದ್ರ.

೮. ಗತಿಸ್ಥಿತಿ ಅಭ್ಯಾಸ - ಮಹಮ್ಮದ್ ಅಹಮದ್ - ಸಂಕ್ರಮಣ ಜನವರಿ ೨೪.

ಇಷ್ಟೊಂದು ದೀರ್ಘವಾಗಿ 'ಗತಿಸ್ಥಿತಿ' ಚರ್ಚಿತವಾಯಿತು. ಇದು ಈ ಸಂದರ್ಭದ ಪ್ರಾತಿನಿಧಿಕ ಕೃತಿ ಎಂಬಂತೆ ಪುಸ್ತಕ ವಿಮರ್ಶಕರು ಗುರುತಿಸಿದ್ದಾರೆ. ಆದರೆ 'ಗತಿಸ್ಥಿತಿ' ಪ್ರಕಟಗೊಂಡ ಕೆಲವು ವರ್ಷಗಳ ನಂತರ ಓದುಗರಲ್ಲಿ ಅದರ ಅಸ್ತಿತ್ವವೇ ಇಲ್ಲವಾಯಿತು. ಇದು ಅತಿ ವ್ಯಾಮೋಹದ ವಿಮರ್ಶೆ ಹಾಗೂ 'ಪುಸ್ತಕ ವಿಮರ್ಶೆ'ಗೆ 'ಗತಿಸ್ಥಿತಿ'ಯ ಸ್ಥಿತಿ ಅತ್ಯುತ್ತಮ ಉದಾಹರಣೆಯಾಗಿದೆ.

ಅನಂತಮೂರ್ತಿ ಮಾಡಿರುವ 'ಗತಿಸ್ಥಿತಿ' ವಿಮರ್ಶೆಯಲ್ಲಿ ಕೃತಿಯನ್ನು ಆತ್ಮೀಯವಾಗಿ

ಸ್ವೀಕರಿಸಿರುವುದನ್ನು ಕಾಣಬಹುದು. ಅದಕ್ಕೆ ಕಾರಣಗಳು ಹಲವು. 'ಗತಿಸ್ಥಿತಿ' ರೂಪ ಪ್ರಧಾನ ಕಾಲಕ್ಕೆ ಸಂಬಂಧಪಟ್ಟಿದ್ದು ಅವುಗಳಲ್ಲಿ ಒಂದು. ಇಲ್ಲಿ ಈ ಕೃತಿಯ ಮಹತ್ವವನ್ನು ಹೆಚ್ಚು ಒತ್ತು ಮಾಡಿ ಗುರುತಿಸುತ್ತಾರೆ. ಆದರೆ ದೋಷವನ್ನು 'ಈ ರೀತಿಯು ಕಾದಂಬರಿಯು ವೈಶಿಷ್ಟ್ಯವೆಂದು' ಮರೆಮಾಚುತ್ತಾರೆ, ದೋಷವನ್ನು ಒಂದು ಅತ್ಯುತ್ತಮ ಗುಣವೆಂದು ಗುರುತಿಸುತ್ತಾರೆ. ಅಲ್ಲದೆ ದೋಷವೆಂದು ಗುರುತಿಸಲು ಮನಸ್ಸಾಗದೆ 'ಒಂದೇ ಒಂದು ಸಾರಿ ಓದಿ ಅತ್ಯುತ್ಸಾಹದಲ್ಲಿ ಬರೆದ ಮಾತುಗಳು' ಎಂದು ದೋಷವನ್ನು ಸರಳೀಕರಿಸುತ್ತಾರೆ. ಅವರ ಈ 'ಪುಸ್ತಕ ವಿಮರ್ಶಾ' ಮಾದರಿಯನ್ನು ರೂಪ ಪ್ರಧಾನ ಪುಸ್ತಕ ವಿಮರ್ಶೆಯ ಪ್ರಾತಿನಿಧಿಕ ಮಾದರಿಯಾಗಿಯೇ ಗಮನಿಸಬಹುದು. ಆಗಿನ ಪುಸ್ತಕ ವಿಮರ್ಶೆ 'ವಿಮರ್ಶೆಯ ಕೃತಿಯೊಂದಿಗಿನ ತನ್ನ ಉತ್ಸಾಹವನ್ನು ಓದುಗರಲ್ಲಿ ಹಂಚಿಕೊಳ್ಳುವುದು ಸದ್ಯದ ಉದ್ದೇಶವೇ ಹೊರತು' ಕೃತಿಯ ವಸ್ತುನಿಷ್ಠ ವಿಮರ್ಶೆಯಲ್ಲ. ಈ ಹಾದಿಯಲ್ಲಿ ಪುಸ್ತಕ ವಿಮರ್ಶೆಯೂ ಸಹ ವಸ್ತುನಿಷ್ಠತೆಗೆ ಇದಿರಾಗಿ ನಡೆಯಿತು. ವಸ್ತುನಿಷ್ಠತೆ ಕೃತಿಯಲ್ಲಿ ಕಾಣಲಾರದ ಸ್ಥಿತಿಗೆ ಬಂದು ತಲುಪಿತು. ಅಲ್ಲದೆ ತಮ್ಮ ಕೃತಿಗಳನ್ನು ಒಪ್ಪಿಕೊಳ್ಳುವಾಗ ಒಳ್ಳೆ ರೀತಿಯಲ್ಲಿ ವಿಮರ್ಶಿಸುವ ಅವರು "ತುಂಬಾ ಬುದ್ಧಿಶಾಲಿಯೊಬ್ಬ ಆಡಿದ ಆಟವೆಂದು, ಮೆಚ್ಚಬೇಕೆಂದೂ ವಾದಿಸಬಹುದೇನೋ" ಎಂದು ಸಮರ್ಥಿಸಿಕೊಳ್ಳುವ ಯತ್ನಗಳನ್ನು ಕಾಣಬಹುದು. ಹಾಗೆಯೇ ಅವರು ತಮ್ಮ ಕಾಲದ, ಲೇಖಕರ ಕೃತಿಗಳನ್ನೇ ವಿಮರ್ಶೆಗೆ ಆಯ್ದುಕೊಳ್ಳುವಾಗ ಅದನ್ನು ಪಕ್ಷಪಾತವೆಂದು ಕರೆಯದೆ ಅದು ಅಗತ್ಯದ ಅನಿವಾರ್ಯತೆ ಎಂದು ಗುರುತಿಸುತ್ತಾರೆ. ಅಲ್ಲದೆ ನಮ್ಮ ಅತ್ಯುತ್ತಮ ವಿಮರ್ಶೆ ಬರುವುದು ನಾವು ತುಂಬ ಮೆಚ್ಚುವ ಸಾಹಿತ್ಯವನ್ನು ತೀವ್ರವಾಗಿ ಅನುಭವಿಸಿದಾಗ, ಎಷ್ಟು ವಿಮರ್ಶಕ ಧೋರಣೆಯಿದ್ದರೂ ಕೃತಿಯ ಬಗ್ಗೆ ಪಕ್ಷಪಾತಿಯಾಗಬೇಕೆಂದೂ 'ಉತ್ಸಾಹ ಹುಟ್ಟಿದಾಗ' ಎಂಬ ಅತಿರೇಕಕ್ಕೆ ಪುಸ್ತಕ ವಿಮರ್ಶೆ ಕೊಂಡೊಯ್ದಿತು. ಈ ಅತಿರೇಕದಿಂದ ಪುಸ್ತಕ ವಿಮರ್ಶೆ ಏಕೆ ಬರಬರುತ್ತ ತನ್ನ ತನವನ್ನು ಕಂಡು ಕೊಳ್ಳುವ ಪ್ರಯತ್ನದಲ್ಲಿ ಕೃತಿಗಳ ವಿವರವಾದ ಪರಿಶೀಲನೆಗೆ ತೊಡಗಿತ್ತು?

ಈ ಸಂದರ್ಭದಲ್ಲಿ ಲಕ್ಷ್ಯ ಹೆಚ್ಚಾಗಿ ಆ ಕಾಲದ ಕೃತಿಗಳ ಮೇಲೆಯೇ ಏಕೆ ಕೇಂದ್ರಿಕೃತವಾಯಿತು? ಎಂಬುದಕ್ಕೆ ಗಿರಡ್ಡಿ ಗೋವಿಂದರಾಜರವರು ಈ ರೀತಿ ಹೇಳುತ್ತಾರೆ.

ಇದಕ್ಕೆ ಮುಖ್ಯವಾಗಿ ಎರಡು ಕಾರಣಗಳನ್ನು ಕೊಡಬಹುದು. ಒಂದು ನವ್ಯ ಕೃತಿಗಳಲ್ಲಿ ಸಾಂಕೇತಿಕತೆ, ಸಂಕೀರ್ಣತೆ, ಅರ್ಥ ಸಂದಿಗ್ಧತೆ ಮೊದಲಾದವುಗಳಿಂದಾಗಿ ವಿಶ್ಲೇಷಣೆಗೆ ಹೆಚ್ಚು ಅನುಕೂಲವಿದೆ. ಕೃತಿಯ ಬಗ್ಗೆ ಬೆಲೆಯುಳ್ಳದ್ದೇನನ್ನು ಹೇಳುವುದಿಲ್ಲದಿದ್ದಾಗಲೂ ವಿಮರ್ಶಕನಿಗೆ ಮೌಲ್ಯ ಮಾಪನಕ್ಕೆ ಅಗತ್ಯವಾದ ವಿಮರ್ಶಕ ಅಂತದೃಷ್ಟಿ ಇಲ್ಲದಿದ್ದರೂ, ಅರ್ಥ ವಿವರಣೆಯ ದೃಷ್ಟಿಯಿಂದಾದರೂ ವಿಮರ್ಶೆ ಉಪಯುಕ್ತವಾಗುತ್ತದೆ. ನವೋದಯ ಕೃತಿಗಳು ನವ್ಯ ಕೃತಿಗಳಿಗೆ ಹೋಲಿಸಿದಾಗ ಹೆಚ್ಚು ಸರಳವಾಗಿರುವುದರಿಂದ, ವಿಶ್ಲೇಷಣೆ ಕೇವಲ ಸಂಗ್ರಹಾನುವಾದವಾಗಿ ಬಿಡುವ ಪ್ರಸಂಗ ಹೆಚ್ಚು, ಎರಡನೆಯದು ನವ್ಯ ವಿಮರ್ಶಕರಿಗೆ ನವ್ಯ ಸಾಹಿತಿಗಳು, ಲೇಖಕರು ಸಮಕಾಲೀನರಾಗಿರುವುದು. [೧೫]

ಈ ವಿವರಣೆ ನವ್ಯ ವಿಮರ್ಶೆ ಮತ್ತು ರೂಪ ಪ್ರಧಾನ ಪುಸ್ತಕ ವಿಮರ್ಶೆಯ ಧೋರಣೆಗಳೆಲ್ಲವನ್ನು ಸಂಪೂರ್ಣವಾಗಿ ಒಳಗೊಳ್ಳುವಂತೆ ಕಾಣಬರುವುದಿಲ್ಲವಾದರೂ, ಇಲ್ಲಿನ ವಿಚಾರಗಳು ಕೆಲವು

ಸಂದೇಹಗಳಿಗೆ ಎಡೆ ಮಾಡಿಕೊಟ್ಟರೂ ರೂಪ ಪ್ರಧಾನ ವಿಮರ್ಶೆ ರಸ ಪ್ರಧಾನ ಕೃತಿಗಳನ್ನು ಕಡೆಗಣಿಸಿದ್ದು ಕೇವಲ ತನ್ನ ಕೃತಿಗಳನ್ನು ಮೇಲೆತ್ತಿದ್ದು ಎಲ್ಲರಿಗೂ ಗೃಹೀತ ಸಂಗತಿ "ಈ ಸಂದರ್ಭದ ಪುಸ್ತಕ ವಿಮರ್ಶೆ ಸಮಕಾಲೀನ ಸಾಹಿತ್ಯದ ಬಗ್ಗೆ ಹೆಚ್ಚು ಆಸ್ಥೆ ಹೊಂದಿದೆ. ಕೆಲವು ಪತ್ರಿಕೆಗಳಲ್ಲಿ ಹಿಂದಿನ ಸಂಚಿಕೆಯಲ್ಲಿ ಪ್ರಕಟವಾದ ಕಥೆಯದೋ, ಕವಿತೆಯದೋ, ವಿಶ್ಲೇಷಣೆ, ಮುಂದಿನ ಸಂಚಿಕೆಯಲ್ಲೇ ಪ್ರಕಟವಾಗುತ್ತಿತ್ತು. ಆದರೆ ಸಾಮಾನ್ಯವಾಗಿ ಚರ್ಚೆಗೊಳಗಾಗುವ ಕೃತಿಗಳು ನಿಜವಾಗಿಯೂ ಮಹತ್ವದ ಕೃತಿಗಳೇ ಆಗಿವೆ. ಅವುಗಳಲ್ಲಿ ಕೆಲವನ್ನು ಹೆಸರಿಸುವುದಾದರೆ, ಸಂಕ್ರಮಣದಲ್ಲಿ ಪ್ರಕಟವಾದ ಲಂಕೇಶರ ಕಥೆಗಳು (ರಾಜೀವ ತಾರಾನಾಥ) 'ಮೂರುದಾರಿಗಳು', 'ಮುಕ್ತಿ' (ವಿವೇಕ ಶಾನುಭಾಗ), 'ಹಳದಿಮೀನು' (ಆಮೂರ), 'ಸಂಸ್ಕಾರ' (ಎಂ. ಜಿ. ಕೃಷ್ಣಮೂರ್ತಿ), 'ವಂಶವೃಕ್ಷ' (ಗಿರಡ್ಡಿ ಗೋವಿಂದರಾಜು), ಮುಂತಾದ ಕಾದಂಬರಿ, ಕಾರ್ನಾಡರ ನಾಟಕಗಳನ್ನು (ವಿವೇಕ ಶಾನುಭಾಗ), ಜಡಭರತ (ರಾಜೀವ ತಾರಾನಾಥ)ರ ನಾಟಕ ಇವುಗಳ ಸುದೀರ್ಘ ಪುಸ್ತಕ ವಿಮರ್ಶೆಗಳನ್ನು, 'ಮನ್ವಂತರ' ದಲ್ಲಿ ಪ್ರಕಟವಾದ ಕಾರಂತ, ದೇವುಡರ ಕಾದಂಬರಿಗಳು, ಕುವೆಂಪುರ 'ರಾಮಾಯಣ ದರ್ಶನಂ' ಶ್ರೀರಂಗ, ಕಾರ್ನಾಡರ ನಾಟಕಗಳ ಅಭ್ಯಾಸಗಳನ್ನು (ಕುರ್ತಕೋಟಿ), ಸಾಕ್ಷಿಯಲ್ಲಿ ಬಂದ ಗ್ರಾಮಾಯಣ (ಎಂ. ಜಿ. ಕೃಷ್ಣಮೂರ್ತಿ), ಮೂಕಬಲಿ (ಶ್ರೀನಿವಾಸರಾವ್), ಅ ಮನಿ (ನಾಡಿಗ್) ಇವುಗಳ ವಿಶ್ಲೇಷಣೆಯನ್ನು ನೋಡಬಹುದು. ಈ ಮೇಲಿನ ಪಟ್ಟಿಯನ್ನೆಲ್ಲಾ ಅಭ್ಯಸಿಸಿದರೆ ರಸ ಪ್ರಧಾನ ಸಂದರ್ಭದ ಕೃತಿಗಳನ್ನು ಅತಿ ಸರಳವಾಗಿ ಪರಿಗಣಿಸಿರುವುದು ಕಂಡು ಬರುತ್ತದೆ. ಮೇಲೆ ಹೆಸರಿಸುವ ಕೃತಿಗಳ ವಿಶ್ಲೇಷಣೆ ಆ ಕಾಲದ ವಿಮರ್ಶಾ ನಿಲುವನ್ನು ಸ್ಪಷ್ಟಪಡಿಸುತ್ತದೆ.

ಈ ಕಾಲದ ಪುಸ್ತಕ ವಿಮರ್ಶಕರ ವಿಮರ್ಶೆಯ ಇನ್ನೊಂದು ಆಯಾಮವೆಂದರೆ, ಅವರು ಪರಿಶೀಲಿಸುತ್ತಿದ್ದ ಕೃತಿಯನ್ನು ತಮ್ಮ ಅನುಭವಗಳ ಮೂಸೆಯಲ್ಲೇ ಕೃತಿಯ ಆಳಕ್ಕೆ ಇಳಿಯುತ್ತಿದ್ದರು ಆ ದೃಷ್ಟಿಯಲ್ಲೇ ಕೃತಿಯನ್ನು ಮೌಲ್ಯಮಾಪನ ಮಾಡುತ್ತಿದ್ದರು. ಪರಿಣಾಮವಾಗಿ ಕೃತಿಯೊಂದೆ ಅವರಿಗೆ ಮೂಲಭೂತ ಸಮಸ್ಯೆ ಮತ್ತು ಅದನ್ನು ಬಿಡಿಸಿಕೊಳ್ಳುವುದೇ ಪುಸ್ತಕ ವಿಮರ್ಶೆಯಾಗಿ ಪರಿಣಮಿಸಿಬಿಡುತ್ತಿತ್ತು. ಅದಕ್ಕೆ ಪೂರಕವಾಗಿ ವಿಮರ್ಶೆಯ ಪರಂಪರೆಯೊಂದನ್ನು ರೂಢಿಸಿಕೊಂಡು ಬಂದ ಪಾಶ್ಚಾತ್ಯ ವಿಮರ್ಶನ ಶಕ್ತಿ ಮತ್ತೂ ಮಾರ್ಗವಾಯಿತು. ಬಹುಶಃ ಇದೇ ಅವರು ರಸ ಪ್ರಧಾನ ಪುಸ್ತಕ ವಿಮರ್ಶಕರನ್ನು ವಿರೋಧಿಸುವುದಕ್ಕೆ ಕಾರಣವಾಗಿರಲೂಬಹುದು. ವೈಯಕ್ತಿಕ ಅನುಭವದಲ್ಲಿ ಕೃತಿಯನ್ನು ನೋಡ ತೊಡಗಿದಾಗ ಕೃತಿಯ ಶಿಲ್ಪ,ಬಂಧ, ಭಾಷೆ, ಅನುಭವ, ಅಭಿವ್ಯಕ್ತಿ ಇವುಗಳನ್ನು ಹೆಚ್ಚು ಕೇಂದ್ರವಾಗಿಟ್ಟುಕೊಂಡು ಬಗೆ ಬಗೆಯಾಗಿ ಚರ್ಚಿಸಿದರು. ಪುಸ್ತಕ ವಿಮರ್ಶಕರು ಕೃತಿಯನ್ನು ನೆಪ ಮಾಡಿ ತಾವು ವಿಜೃಂಬಿಸಿದರು. ಉದಾ: ಕೆ.ವಿ. ತಿರುಮಲೇಶರರ 'ಮುಖವಾಡಗಳು' ಕವನ ಸಂಕಲನವನ್ನು ಕೆ. ಮರುಳಸಿದ್ದಪ್ಪನವರು [೧೬] ವಿಮರ್ಶಿಸಿದುದನ್ನು ನೋಡಬಹುದು. ಕೃತಿ ವಿಮರ್ಶೆಗೆ ಮೊದಲು ಅವರು ಹಾಕಿರುವ ಪೀಠಿಕೆಯನ್ನು ನೋಡಿದರೆ ಅವರು ಕೃತಿಗಿಂತ ಹೆಚ್ಚು ವಿವರಗಳನ್ನು ಬೇರೆ ನೆಲೆಯಲ್ಲಿ ಚರ್ಚಿಸುತ್ತಾರೆ.

ಒಂದು ದೃಷ್ಟಿಯಲ್ಲಿ

ಪ್ರಕೃತಿಗಿಂತ ಮಾನವನ ಮನಸ್ಸಿಗೆ ಅವನ ಸಮಾಜಕ್ಕೆ ಹೆಚ್ಚಿನ ಸ್ಥಾನವಿದೆ. ಅದರಲ್ಲೂ ಇವೆರಡರ ಸಂಕೀರ್ಣತೆಗೆ ಬಹು ಪ್ರಮುಖ ಸ್ಥಾನ. ಪ್ರಕೃತಿಯು ಕೇವಲ ಸಂಕೇತಗಳಿಗಾಗಿ ಉಪಯೋಗಕ್ಕೆ ಬಂದೀತು.

ಸಾಮಾಜಿಕ ಹಾಗೂ ಸಾಂಸ್ಕೃತಿಕ ಮೌಲ್ಯಗಳು ಮಾನವನ ಸಹಜ ಪ್ರವೃತ್ತಿಗೆ ಅನುಗುಣವಾಗಿ ರೂಪಗೊಂಡು ಪ್ರಕಟಗೊಳ್ಳದೆ ಆ ಪ್ರವೃತ್ತಿಯನ್ನು ನಿರೂಪಗೂಳಿಸುವ, ಅದರ ಸಹಜ ಪ್ರಕಟಣೆಗೆ ಅವಕಾಶವನ್ನು ಒದಗಿಸದ, ಸಾಧ್ಯವಾದರೆ ಅದನ್ನು ಆಳದಾಳಕ್ಕೆ ಒತ್ತಿ- ಯಾಕೆಂದರೆ, ಅದನ್ನು ಸಾಯಿಸಲು ಸಾಧ್ಯವಿಲ್ಲ. ಆದುದರಿಂದ-ತನ್ನ ಹಿಡಿತವನ್ನು ಅದರ ಮೇಲಿರಿಸಿಕೊಳ್ಳುತ್ತವೆ.

ಇಂಥ ಮೌಲ್ಯಗಳ ಮೇಲೆ ನಿರ್ಮಿತವಾಗಿ, ಅವುಗಳಿಂದ ಸಂಪೋಷಿಸಲ್ಪಟ್ಟ ಅನೇಕ ಸಾಮಾಜಿಕ ಸಂಸ್ಥೆಗಳು, ಕಟ್ಟುಪಾಡುಗಳು ವರ್ತನೆ- ಸಂಬಂಧಗಳನ್ನು ಅರಿವು- ಆಚಾರಗಳು -ಇವೆಲ್ಲಾ ಮನುಷ್ಯನಿಗೆ ತಾನು ಏನಿದ್ದೇನೆ ಎಂದು ತಿಳಿದುಕೊಳ್ಳಲಿಕ್ಕಾಗಲಿ, ತನ್ನ ಸತ್ವದ ಆರೋಗ್ಯಕರವಾದ ಬೆಳವಣಿಗೆಗಾಗಲಿ ಅವಕಾಶವನ್ನು ನೀಡುವುದಿಲ್ಲ; ಅದರ ಮೂಲ ಪ್ರವೃತ್ತಿಯು ಪ್ರಬಲ ಶಕ್ತಿಯುತವಾದುದರಿಂದಲೂ ಅದು ಒತ್ತಿದಷ್ಟು ಹೆಚ್ಚು ಪುಟಿಯುವ ಸಾಮರ್ಥ್ಯ ಉಳಿದುದರಿಂದಲೂ ಅದು ಯಾವುದಾದರೂ ರೂಪುಧರಿಸಿ ಮಾನವನ ವರ್ತನೆಯಲ್ಲಿ ಆವಿರ್ಭವಿಸುತ್ತದೆ. ಇಂಥ ಸಂದರ್ಭಗಳಲ್ಲಿ ಮಾನವನು ಕಪಟಿಯಾಗುತ್ತಾನೆ. ತನ್ನ 'ಬೇಳೆ ಬೇಯಿಸಿಕೊಳ್ಳಲು' ಅನೇಕ ದೋಷಗಳನ್ನು ಧರಿಸುತ್ತಾನೆ. ಈ ವೇಷಗಳು ಅವನಿಗೆ ಅನುಕೂಲ ಸಾಧನಗಳಾಗುತ್ತವೆ.

ಆದರೆ ಕೆಲವರು 'ಸತ್ಯ' ಪಕ್ಷಪಾತಿಗಳಿರುತ್ತಾರೆ. ಅವರು ಇಂತಹ ಕೃತಕತೆಯಿಂದ ಹೊರಬಂದು ಸ್ವಾತಂತ್ರ್ಯದ ಉಸಿರನ್ನಾಡಿ, ನೈಜತೆಯ ಬೆಳಕಿನಲ್ಲಿ ತಮಗಂಟಿಕೊಂಡ ಕತ್ತಲೆಯನ್ನು ಕಳೆದುಕೊಂಡು ಬಾಳಬೇಕೆಂದು ಬಯಸುತ್ತಾರೆ. ತಮ್ಮನ್ನು ಆವರಿಸಿಕೊಂಡಿರುವ ಚಿಪ್ಪನ್ನು ಒಡೆಯುವ ಧೈರ್ಯ ಮಾಡುತ್ತಾರೆ, ಆಗ ಅಂತಹ ಕಾರ್ಯ ಮಾಡುವವರನ್ನು, ಉಳಿದವರು ಪರಂಪರಾಗತವಾದ ರೂಢಿ ನಿಯಮಗಳ, ಕಾಯ್ದೆ ಕಾನೂನುಗಳು, ಸಂಘ-ಸಂಸ್ಥೆಗಳ ನೆರವಿನಿಂದ ಸದೆ ಬಡಿಯುತ್ತಾರೆ; ಇಂಥ ಪರಿಸ್ಥಿತಿಯಲ್ಲೂ ಸೂಕ್ಷ್ಮ ಸಂವೇದಿಯಾದ ಸತ್ಯ- ಪಕ್ಷಪಾತಿಯು ಇದ್ದುದನ್ನು ಇದ್ದ ಹಾಗೆಯೇ ಸ್ವೀಕರಿಸಿ ಮೂಲ ಮೌಲ್ಯಗಳನ್ನು ಬೆದಕಿ, ಅವನ್ನು ಪ್ರಕಾಶಗೊಳಿಸುವ ತನ್ನ ಉತ್ಕಟೇಚ್ಛೆಯನ್ನು ಮೆರೆಯಲು ಮುಂದುವರಿಯುತ್ತಾನೆ. ಇದ್ದುದೆಲ್ಲವನ್ನು ಅದು ಮಾಯೆಯೆಂದೂ, ಅನಿತ್ಯವಾದ ಮುಸುಕು ಎಂದೂ, ಕಪಟತ್ವದ ಮುಖವಾಡವೆಂದೂ ತೆರೆದು, ಸಾಧ್ಯವಾದರೆ ಅದನ್ನು ಒಡೆದು ಮುಂದುವರಿಯುತ್ತಾನೆ. ಈ ಮಾತು ಧಾರ್ಮಿಕ ಬಂಡಾಯಗಾರನಿಗೂ, ತತ್ವಜ್ಞಾನಿಗಳೂ, ಅನುಭಾವಿಗಳೂ, ವಿಜ್ಞಾನಿಗೂ ಇನ್ನೂ ಹೆಚ್ಚಿನ ರೀತಿಯಲ್ಲಿ ಕವಿಗೂ ಅನ್ವಯಿಸುತ್ತಾರೆ.

ಮಾನವನ ಇತಿಹಾಸದಲ್ಲಿ ಇದ್ದುದಕ್ಕೆ ವಿರೋಧವನ್ನು ವ್ಯಕ್ತಪಡಿಸುವ, ಇದ್ದುದರಲ್ಲಿ ಅಸಂಪೂರ್ಣತೆಯನ್ನು ಕಾಣುವ, ಅದರಿಂದ ತೃಪ್ತಿಯನ್ನು ಪಡೆಯದ ಪಂಗಡಗಳು ಎದ್ದು, ಬಿದ್ದು ಹೋದದ್ದುಂಟು, ನಿರಂತರವೂ ಪ್ರಯತ್ನಶೀಲನಾದ ಕವಿಯು ಹಳೆಯದನ್ನು ಮೀರಿ ನಡೆಯ ಬಯಸುತ್ತಾನೆ. ಕಾವ್ಯವನ್ನು ಶಬ್ದರೂಪಿಯಾದ ಪ್ರತಿಮೆಯೆಂದು ಅನ್ನುವುದುಂಟು. ಈ ಮಾತು ನವ್ಯಕಾವ್ಯ ಮಾರ್ಗ ಕ್ರಮಿಗಳಿಗೆ, ಬಹುಶಃ ಹೆಚ್ಚು ಅನ್ವಯವಾಗುತ್ತದೆ. ಜೀವನವನ್ನು ಪ್ರತಿಮೀಕರಿಸಿ, ತಕ್ಕ ಶಬ್ದಗಳನ್ನು ಆರೋಪಿಸಿ ಆದಷ್ಟೂ ಸಂಪೂರ್ಣತೆಯನ್ನು ಅವುಗಳಲ್ಲಿ ತುಂಬಿ, ಕಾವ್ಯ ರಚಿಸುವುದು ಅದರಲ್ಲೂ ಸಮರ್ಥರ ಕಾರ್ಯ ಜೀವನವನ್ನು ಸಮಗ್ರವಾಗಿ ವೀಕ್ಷಿಸುವ ನಿರ್ಮಲವಾದ ದೃಷ್ಟಿಪಡೆದ ಅನುಭವವನ್ನು ಆಳವಾಗಿಸುವ ಸಾಮರ್ಥ್ಯ ಅದನ್ನು ಕಾವ್ಯ ವಸ್ತುವನ್ನಾಗಿ ಮಾರ್ಪಡಿಸಿ, ರಸಪಾಕಕ್ಕಿಳಿಸಿ ಅಭಿವ್ಯಕ್ತಿಗೊಳಿಸುವ ಪ್ರತಿಭೆ, ಇವು ಕವಿಯ ಯಶಸ್ಸಿಗೆ ಅತ್ಯಗತ್ಯ. ಅಭಿವ್ಯಕ್ತಗೊಳಿಸಲು ಸ್ವೀಕರಿಸಿದ ಮಾಧ್ಯಮ ಗದ್ಯವೊ, ಪದ್ಯವೋ ಎಂಬುದು ಅಂಥ ಪ್ರಮುಖ ಸಮಸ್ಯೆಯಲ್ಲ. ಆದರೂ ರಸಾನುಭವಕ್ಕೆ ತಕ್ಕ ಮಾಧ್ಯಮವನ್ನು ಆಯ್ದುಕೊಳ್ಳುವ, ಆಯ್ದುಕೊಂಡ ಮಾಧ್ಯಮವು ಕಾವ್ಯವಾಹಕವಾಗಿದೆಯೆಂದು ದೃಢವಾಗಿ ನೆಚ್ಚಿ, ಧೈರ್ಯವಾಗಿ ತೋರಿಸುವ ಧೀಮಂತಿಕೆ ಕವಿಯಾದವನಿಗೆ ಇರಬೇಕೆಂದು ಕಾವ್ಯಾಸಕ್ತರ ಸಾಮಾನ್ಯ ನಿರೀಕ್ಷೆ.

ಈ ಮೇಲಿನ ಪುಸ್ತಕ ವಿಮರ್ಶೆಯ ಪೀಠಿಕೆಯನ್ನು ಗಮನಿಸಿದರೆ ತುಂಬಾ ದೀರ್ಘವಾದ ವಿವರಗಳನ್ನು ಕೃತಿ ವಿಮರ್ಶೆಗಿಂತ ಮೊದಲು ನೀಡಿದ್ದಾರೆ. ರೂಪ ಪ್ರಧಾನ ಸಂದರ್ಭದ (ಅನಂತರವು ಕೆಲವು ಸಂದರ್ಭಗಳಲ್ಲಿ)ಕೆಲವು ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೆ, ವಿರ್ಮಕರು ಕೃತಿಯನ್ನು ನೆಪ ಮಾಡಿ ತಾವು ತಿಳಿದುಕೊಂಡ ವಿಚಾರಗಳನ್ನು ಆ ಪುಸ್ತಕ ವಿಮರ್ಶೆಯ ಮೇಲೆ ಹೇರಿ ತಾವು ವಿಜೃಂಭಿಸುತ್ತಾರೆ? ಹೀಗೆ ಮಾಡುವುದು ಬೌದ್ಧಿಕ ಚರ್ಚೆಗೆ ಒಳಗುಮಾಡಿದಂತೆ ಎಂದೆನಿಸಿದರೂ ಅತಿಯಾದ ಬೌದ್ಧಿಕತೆ ಕೃತಿಯನ್ನು ಕಡೆಗಣಿಸಿ ಕೃತಿ ಹಿನ್ನೆಲೆ, ಮುನ್ನೆಲೆಗಳನ್ನು ಕೃತಿಯ ಲೇಖಕನಿಗಿಂತ ತಾನೇ ಹೆಚ್ಚು ತಿಳಿದಿರುವನಂತೆ ಭಾವಿಸುತ್ತಾರೆ 'ಕ್ರಾಂತಿಯ ಚಿಲುಮೆ ಉಕ್ಕಿಸುವ 'ತಾಯಿ'.'ತಾಯಿ' ಕೃತಿಯನ್ನು ಕುರಿತು ನಟೇಶ್ ದೊಡ್ಡಟ್ಟಿ[೧೭] ಬರೆದಿರುವ ವಿಮರ್ಶೆಯಲ್ಲಿ ಕೃತಿಗಿಂತ ತಾನು ತಿಳಿದುಕೊಂಡ ವಿಚಾರಗಳು ಬಯಲಿಗೆ ಬರಲು ಹೆಚ್ಚು ಯತ್ನಿಸಿವೆ. ಇಡೀ ಪುಸ್ತಕ ವಿಮರ್ಶೆ ಮೊದಲರ್ಧ ತಾನು ತಿಳಿದುಕೊಂಡ ವಿಚಾರಗಳ ಸುರಿಮಳೆಯಾದರೆ ಉಳಿದರ್ಧ ಆ ಕೃತಿಯ ಮೂಲಕೃತಿಯನ್ನು ಸಂಬಂಧಿಸಿದ್ದು, ಕೊನೆಯಲ್ಲಿಯಷ್ಟೇ ಅನುವಾದದ ಕೃತಿಯನ್ನು ಕುರಿತು ಹೇಳುತ್ತಾರೆ. ಈ ಉದಾಹರಣೆ ರೂಪ ಪ್ರಧಾನ ಪುಸ್ತಕ ವಿಮರ್ಶೆಯ ಬೌದ್ಧಿಕಾಡಂಬರದ ಅತಿ ಇನ್ನು ಬಿಟ್ಟಿಲ್ಲದಿರುವುದು ಕಂಡು ಬರುತ್ತದೆ. ಕೃತಿಯನ್ನು ಕಡೆಗಣಿಸಿ ಪುಸ್ತಕ ವಿಮರ್ಶೆಯನ್ನು ತಾವು ಹೇಳಲೇಬೇಕಾದ ವಿಚಾರಗಳಿಗೆ ವೇದಿಕೆಯನ್ನಾಗಿ ನಿರ್ಮಿಸಿಕೊಂಡರೆ ಪುಸ್ತಕ ವಿಮರ್ಶೆಯ ಅರ್ಥವು ಕೆಡುತ್ತದೆ. ವಿಮರ್ಶಕರೇ ಕೃತಿಗಿಂತ ಕೃತಿಕಾರರಿಗಿಂತ ವಿಜೃಂಭಿಸುವುದು ರೂಪ ಪ್ರಧಾನ ಪುಸ್ತಕ ವಿಮರ್ಶೆ ಸಂದರ್ಭದಲ್ಲಿ ಪುಸ್ತಕ ವಿಮರ್ಶೆ ಎದುರಿಸುತ್ತಿದ್ದ ತೊಡಕು. ಗದ್ಯಶೈಲಿಯು ಅಷ್ಟೇ ಪರಿಣಾಮಕಾರಿಯಾಗಿ ವೃದ್ಧಿಗೊಂಡಿತು. ಮನಸ್ಸಿನ ವಿಚಾರಗಳನ್ನು ನೇರವಾಗಿ ಬರಹದಲ್ಲಿಡುತ್ತಿದ್ದರು. ಅದರ ಪರಿಣಾಮವಾಗಿ ಭಾಷೆ ಸಂಕೀರ್ಣವಾದ ಜಡತೆಗೆ ತಿರುಗಿತು. ಅದಲ್ಲದೆ ಕನ್ನಡ ವಿಮರ್ಶೆಯಲ್ಲಿ ಪಾಶ್ಚಾತ್ಯ ವಿಮರ್ಶೆಯ ಪರಿಕಲ್ಪನೆಗಳನ್ನು ಒರೆಹಚ್ಚಿ ಕನ್ನಡೀಕರಿಸುವಲ್ಲಿ ಭಾಷೆಯನ್ನು ಇನ್ನಷ್ಟು ಗಟ್ಟಿಗೊಳಿಸಿದರು. ಭಾಷಾಬಂಧವನ್ನು ಬಿಗಿಯಾಗಿಸಿದರು. ಹಾಗೆಯೇ ಇನ್ನೊಂದು ಕಡೆ ಕಗ್ಗಂಟಾಗಿಸಿದರು.

ಗೋಪಾಲಕೃಷ್ಣ ಅಡಿಗರು ಸಾಕ್ಷಿಯ ಮೊದಲ ಸಂಚಿಕೆಯಲ್ಲಿ ವಿಮರ್ಶೆಯನ್ನು ಕುರಿತು.

ಉತ್ತಮ ವಿಮರ್ಶೆ ಬೆಳೆಯದ್ದಕ್ಕೆ ಮುಖ್ಯ ಕಾರಣ ನಮ್ಮಲ್ಲಿ ಉತ್ತಮ ಸಾಹಿತ್ಯ ವಿಮರ್ಶೆಗೆ ಸಮರ್ಥರಾದವರು ಇಲ್ಲ ಎಂಬುದಲ್ಲ, ಅಂಥ ವಿಮರ್ಶೆಗೆ ಬೇಕಾದ ನೈತಿಕ ಧೈರ್ಯ ತಕ್ಕಷ್ಟು ಬೆಳೆಯಲಿಲ್ಲ ಎಂಬುದೇ ಆಗಿದೆ.

೧. ಅಪ್ರಿಯ ವಿಮರ್ಶೆಯಿಂದ ವೈಯಕ್ತಿಕ ಸಂಬಂಧಕ್ಕೆ ಹಾನಿಯಾದೀತೆಂಬ ಭಯ.

೨. ಅಧಿಕಾರಸ್ಥ ಸಾಹಿತಿಗಳ, ಕೃತಿಗಳ ಬಗ್ಗೆ ಮನಸ್ಸಿಗೆ ಅನಿಸಿದ್ದನ್ನು ಹೇಳಿದರೆ ಅವರಿಂದ ಬರಬಹುದಾದ ಪ್ರತೀಕಾರದ ಭಯ.

೩. ಸ್ನೇಹಿತರ ಬಗ್ಗೆ ದಾಕ್ಷಿಣ್ಯ, ದೊಡ್ಡವರ ಬಗ್ಗೆ ಭಯ, ಮೂರನೆಯವರ ಬಗ್ಗೆ ಔದಾಸೀನ್ಯ ಅಥವಾ ನಿಷ್ಕಾರಣ ವಿರೋಧ- ಇವು ಪ್ರಾಮಾಣಿಕ ವಿಮರ್ಶೆಯನ್ನು ಕುಂಠಿತಗೊಳಿಸಿದವು.[೧೮]

ವಿಮರ್ಶನ ಕಾರ್ಯ ವ್ಯಕ್ತಿನಿಷ್ಠವಾಗಿತ್ತೇ ಹೊರತು ಕೃತಿ ನಿಷ್ಠವಾಗಿರಲಿಲ್ಲ ಎಂಬುದು ಅವರ ವಾದ. ಪುಸ್ತಕ ವಿಮರ್ಶೆಗೆ ಇದೇ ರೀತಿಯ ಪರಿಸ್ಥಿತಿ ಇದ್ದುದರಿಂದ ಪುಸ್ತಕ ವಿಮರ್ಶಕರು ತಾವು ವಿಮರ್ಶಿಸಲು ಎತ್ತಿಕೊಳ್ಳುವ ಕೃತಿಯ ಲೇಖಕರು ಮತ್ತು ಅದರ ಹಿನ್ನೆಲೆಗಳನ್ನು ಬಹಳವಾಗಿ ಗಮನಿಸಿದರೆ 'ಪ್ರಶಂಸಾತ್ಮಕ ಕೃತಿ ವಿಮರ್ಶೆಗಳು' ಆತ್ಮೀಯರ ಕೃತಿಗಳನ್ನು ಕುರಿತವು, 'ದೂಷಣಾತ್ಮಕ' ಕೃತಿ ವಿಮರ್ಶೆಗಳು ವಿರೋಧಿಗಳ ಕೃತಿಗಳನ್ನು ಕುರಿತವುಗಳು ಅಗಿವೆ. ರೂಪ ಪ್ರಧಾನ ಸಂದರ್ಭದಲ್ಲಿ ತಲೆದೋರಿದಂತಹ ಪುಸ್ತಕ ವಿಮರ್ಶೆಯಲ್ಲಿನ ಇಂತಹ ಬಿಕ್ಕಟ್ಟು, ತೊಂದರೆಗಳಿಂದ ಹೊರಳಿಕೊಳ್ಳಲಿಲ್ಲ. ತಮ್ಮ ಆತ್ಮೀಯರ ಕೃತಿಗಳನ್ನು ಅತಿಯಾಗಿ ಹೊಗಳಿ, ಪಾಶ್ಚಾತ್ಯ ವಿಮರ್ಶನ ಕೌಶಲ್ಯದ, ಚಾತುರ್ಯದ, ಶಕ್ತಿಯಿಂದ ಆ ಕೃತಿಗಳನ್ನು ವಿಶ್ಲೇಷಿಸಿ ತೂಗಿ ನೋಡಲೆತ್ನಿಸಿದರು. ಇದರಿಂದ ಆಗಿನ ಕೃತಿ ವಿಮರ್ಶೆಗಳ ಸಂವಹನ ಸಾಮಾನ್ಯರಿಗೆ ನಿಲುಕದೆ ಅನಿವಾರ್ಯ ಕಾರಣದಿಂದ ಆ ಕಾಲದ ಸಾಹಿತಿಗಳೇ ಓದುಗರಾಗಿ ಪಾತ್ರ ನಿರ್ವಹಿಸಬೇಕಾಯಿತು. ಈ ಸಂದರ್ಭದಲ್ಲಿನ ಪುಸ್ತಕ ವಿಮರ್ಶೆಗಳು ಮೌಲ್ಯಮಾಪನವಷ್ಟೇ ಆಗಿರದೆ ಇನ್ನು ಮುಂದಕ್ಕೆ ಹೋಗಿ ಬೌದ್ಧಿಕ ಚರ್ಚೆಗೆ, ವಾಗ್ವಾದಕ್ಕೆ ಎಡೆ ಮಾಡಿಕೊಟ್ಟವು. ಹಲವಾರು ಕೃತಿಗಳು ತುಂಬಾ ಪ್ರೌಢವಾದ ಪುಸ್ತಕ ವಿಮರ್ಶೆಗಳನ್ನು ಪಡೆದವು. ಆಗ ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆಗೆ ಪರಸ್ಪರ ಪ್ರತಿಕ್ರಿಯೆಗಳು ಲೇಖನ ಸ್ವರೂಪದಲ್ಲಿ ಬರುತ್ತಿದ್ದವು.'ಸಂಸ್ಕಾರ' ಕಾದಂಬರಿ ಕುರಿತು 'ಸಂಕ್ರಮಣ' (ಸಂಚಿಕೆ ೧೯)ದಲ್ಲಿ ಎಂ.ಜಿ. ಕೃಷ್ಣಮೂರ್ತಿಯವರು ಲೇಖನ ಬರೆದರು, ಜಿ.ಎಸ್. ಆಮೂರರು ಸಂಕ್ರಮಣ(ಸಂ೨೮) (೧೯೬೯) ರ ಲೇಖನಗಳು ಸಂಸ್ಕಾರ ಕೃತಿಯನ್ನು ಪ್ರೌಢವಾದ ವಿಮರ್ಶನ ನೆಲೆಯಲ್ಲಿ ಚರ್ಚಿಸಿರುವುದನ್ನು ಕಾಣಬಹುದು.ಅಲ್ಲದೆ ಸಂಕ್ರಮಣ ೨೭ರ ಸಂಚಿಕೆಯಲ್ಲಿ ಗಿರಡ್ಡಿ ಗೋವಿಂದರಾಜರ 'ನವ್ಯವಿಮರ್ಶೆ' ಎಂಬ ಲೇಖನಕ್ಕೆ ಶಂಕರ ಮೊಕಾಶಿ ಪುಣೇಕರ, ಜಿ. ಎ. ಜಾಲಿಹಾಳ, ಚಂಪಾ ಮುಂತಾದವರ ಪರಸ್ಪರ ಪ್ರತಿಕ್ರಿಯೆಗಳು, ವಾಗ್ವಾದದ ಮೂಲಕ ಸಾಹಿತ್ಯ ವಿಮರ್ಶೆಗೆ ಅಂತಿಮವಾದ ಸಾರ ದೊರಕಿರುವುದನ್ನು ಇಲ್ಲಿ ಗಮನಿಸಬಹುದು. ಹೀಗೆ ಪುಸ್ತಕ ವಿಮರ್ಶೆಗಳು ಪ್ರೌಢವಾದ ಸ್ವರೂಪ ಪಡೆದುಕೊಂಡಾಗ, ಸರಳ ಲೇಖನಗಳಾಗದೆ ದೀರ್ಘವಾದ ಗಟ್ಟಿ ಲೇಖನಗಳಾಗಿ ರೂಪಿತಗೊಂಡವು. ಈ ಸಂದರ್ಭದಲ್ಲಿ ಬಂದಿರುವ ಯಾವ ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೂ ಸರಳವಾಗಿ ಕಾಣದೆ ಸ್ವತಃ ಅವುಗಳೇ ಒಂದೊಂದು ಕೃತಿಗಳಾಗಿ ನಿಲ್ಲುವ ಸ್ವರೂಪವನ್ನು ಪಡೆದಿವೆ.

ಕನ್ನಡದಲ್ಲಿ ರೂಪ ಪ್ರಧಾನ ಪುಸ್ತಕ ವಿಮರ್ಶೆ ಚಾಲ್ತಿಯಲ್ಲಿದ್ದಾಗ ಅದು ಅಭಿವ್ಯಕ್ತವಾಗುತ್ತಿದ್ದದು ಗ್ರಂಥಗಳ ರೂಪದಲ್ಲಿ ಅಲ್ಲದೇ ಸಾಹಿತ್ಯಕ ನಿಯತಕಾಲಿಗಳಲ್ಲಿ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಪತ್ರಿಕೆಗಳಲ್ಲಿ, ವಿಚಾರ ಸಂಕಿರಣಗಳ ಪ್ರಬಂಧಗಳಲ್ಲಿ, ಕಾಲಾಂತರದಲ್ಲಿ ಇವುಗಳನ್ನು ಗ್ರಂಥಗಳನ್ನಾಗಿ ಕ್ರೋಢೀಕರಿಸಿ ಪ್ರಕಟಿಸಿದರು. ಆದರೂ ಸಾಹಿತ್ಯ ಪತ್ರಿಕೆಗಳ ವಾಗ್ವಾದ ಬರಹಗಳೇ ರೂಪ ಪ್ರಧಾನ ಪುಸ್ತಕ ವಿಮರ್ಶೆಯ ಬೆಳವಣಿಗೆಗೆ ಕಾರಣವಾಗಿರುವುದು ನಿರ್ವಿವಾದ ವಿಚಾರ.

೩. ೩. ಆಶಯ ಪ್ರಧಾನ ಪುಸ್ತಕ / ವಿಮರ್ಶೆ

ಆಶಯ ಪ್ರಧಾನ ಪುಸ್ತಕ ವಿಮರ್ಶೆ ಹಿಂದಿನ ರೂಪ ಪ್ರಧಾನ ಪುಸ್ತಕ ವಿಮರ್ಶೆಯಿಂದ ಹೊರಳಿಕೊಂಡು ಹೊಸ ಪುಸ್ತಕ ವಿಮರ್ಶೆಯ ಹಾದಿಯನ್ನು ಹುಡುಕಲು ಯತ್ನಿಸಿತು. ಇದರ ಫಲವಾಗಿ ವಿಮರ್ಶೆಯ ಮಾನದಂಡಗಳು ಬದಲಾಗಬೇಕೆಂದು ಹೊಸ ಮೀಮಾಂಸೆಯೇ ಸಿದ್ಧಗೊಂಡಿತು. ಈ ದಿಸೆಯಲ್ಲಿಯೇ ಪ್ರತಿಭಾನ್ವಿತ ವಿಮರ್ಶಕರು ರೂಪ ಪ್ರಧಾನ ಪುಸ್ತಕ ವಿಮರ್ಶೆ ಹೊರತಾಗಿ ಬೆಳೆದು ಸಾಹಿತ್ಯ ವಿಮರ್ಶೆಯನ್ನೂ ಬೆಳಸಿದರು. ಈ ಕಾರಣದಿಂದ ಪುಸ್ತಕ ವಿಮರ್ಶೆಯಲ್ಲಿ ಹೊಸ ಸ್ವರೂಪ ರೂಪಗೊಂಡಿತು. ಈ ಬದಲಾವಣೆಯನ್ನೆ ಆಶಯ ಪ್ರಧಾನ ಪುಸ್ತಕ ವಿಮರ್ಶೆ ಎಂದು ಕರೆಯಬಹುದೆನಿಸುತ್ತದೆ.

ಈ ಪರಿಧಿಯಲ್ಲಿ ಬರುವ ಪುಸ್ತಕ ವಿಮರ್ಶೆಯು ಕೇವಲ ಕೃತಿಯಲ್ಲಿಯೇ ಗಿರಕಿ ಹೊಡೆಯಲಿಲ್ಲ,ಅದು ಕೃತಿ ಬಂದ ಹಿನ್ನೆಲೆ, ಸಂಸ್ಕೃತಿಗಳ ನೆಲೆಯಲ್ಲಿ ಕೃತಿಯನ್ನು ಅರ್ಥೈಸುವ ಯತ್ನದಲ್ಲಿ ತೊಡಗಿತ್ತು.

ಸಾಹಿತ್ಯ ವಿಮರ್ಶಕನಿಗೆ ಕೆಲಸದ ಆರಂಭ ಮತ್ತು ಕೊನೆ ಎರಡೂ ಇರುವುದು ಕೃತಿಯೊಂದರ ಆಕೃತಿಯಲ್ಲಿಯೇ. ನಡುವೆ ಮಾತ್ರ ಆತ ಸಮಾಜ, ಚರಿತ್ರೆ, ವರ್ಗ ಇತ್ಯಾದಿಗಳ ಕಡೆಗೆ ತೆರಳುತ್ತಾನೆ, ಆದರೆ ಅಲ್ಲೆಲ್ಲೂ ನಿಲ್ಲದೆ ಆತ ಮರಳಿ ಕೃತಿಯ ಬಂಧಕ್ಕೆ ಮರಳುತ್ತಾನೆ.[೧೯]

ಎನ್ನುವ ಡಿ.ಅರ್. ನಾಗರಾಜ್‌ರವರು ರೂಪ ಮತ್ತು ಆಶಯ ಪ್ರಧಾನ ಪುಸ್ತಕ ವಿಮರ್ಶೆ ಎರಡನ್ನು ಒಳಗೊಂಡಂತೆ ವಿಮರ್ಶೆ ಕಂಡುಕೊಂಡ ಸ್ವರೂಪವನ್ನು ಕುರಿತು ಚರ್ಚಿಸುತ್ತಾರೆ. ಆದರೆ ಈ ಸಂದರ್ಭದ ಪುಸ್ತಕ ವಿಮರ್ಶೆಯನ್ನು ನೋಡುವ ದೃಷ್ಟಿಯೇ ಬೇರೆಯಾಗಿದೆ. ಅದನ್ನು ಅಕಡೆಮಿಕ್ ಶಿಸ್ತಿನಿಂದ ಓದಿ ಅರ್ಥೈಸುವಂತಹದ್ದಲ್ಲ ಅದು ಸಮಾಜ -ಸಾಂಸ್ಕೃತಿಕ ಆಸಕ್ತಿಯನ್ನು ಬಯಸುವಂತಹದ್ದು. ಈ ಕಾಲದಲ್ಲಿ ವಿಮರ್ಶೆಯ ನಿಲುವುಗಳು ಬದಲಾದವು ದೇವನೂರ ಮಹಾದೇವರ 'ಕುಸುಮ ಬಾಲೆ'ಗೆ ಬ್ಲರ್ಬ್ ಬರೆಯುತ್ತ ಪ್ರೊ. ಜಿ. ಹೆಚ್. ನಾಯಕ್‌ರು ಹೀಗೆ ಹೇಳುತ್ತಾರೆ (ಪ್ರಬುದ್ಧ ಕರ್ನಾಟಕ ಸಂಯುಕ್ತ ಸಂಚಿಕೆ, ಅಕ್ಟೋಬರ್, ೮೦ - ಜನವರಿ ೮೧)

'ಕುಸುಮಬಾಲೆ' ಕಿರು ಕಾದಂಬರಿಯ ಪ್ರಕಟಣೆ ಇಂದಿನ ಸೃಜನಶೀಲ ಸಾಹಿತ್ಯದ ಸಂದರ್ಭದಲ್ಲಿ ಒಂದು ಮಹತ್ವದ ಸಾಹಿತ್ಯಕ ಘಟನೆಯಾಗಿದೆ. ಅದರ ರಚನಾ ವಿಧಾನ, ಭಾಷೆಯ ಬಳಕೆ, ನಿರೂಪಣೆಯ ಸ್ವರೂಪ, ದೃಷ್ಟಿ - ಧೋರಣೆ ಇತ್ಯಾದಿಗಳಲ್ಲಿ ಹೊಸತನವಿದೆ; ತಾಜಾತನವಿದೆ; ಜೊತೆಗೆ ವಿಲಕ್ಷಣ ಎನಿಸಬಹುದಾದಂಥ ಕೆಲವು ಅಂಶಗಳೂ ಇವೆ. ಆ ಕಾರಣಗಳಿಂದಾಗಿ ಕಾದಂಬರಿಯ ರೂಪ, ಸಂವಹನ, ಕೇಂದ್ರ ಪ್ರಜ್ಞೆ ಮುಂತಾದವುಗಳಿಗೆ ಸಂಬಂಧಿಸಿದಂತೆ ಪ್ರಶ್ನೆಗಳು ಓದುಗರಿಗೆ, ವಿಮರ್ಶಕರಿಗೆ ಎದುರಾಗಿದೆ. ಅವು ಪ್ರಶಂಸೆ, ವಿಮರ್ಶೆ ಟೀಕೆ ಹೀಗೆ ನಾನಾ ಬಗೆಯ ಪ್ರತಿಕ್ರಿಯೆಗಳನ್ನು ಹುಟ್ಟಿಸಿವೆ. ವಿಮರ್ಶೆಯ ಮಾನದಂಡಗಳನ್ನು ಹೊರಗಿನಿಂದ ಮಾತ್ರ ತಂದು ಅನ್ವಯಿಸಿ ನೋಡದೇ ಕೃತಿಯ ಒಳಗಿನಿಂದಲೂ ಪಡೆದು ವಿಸ್ತರಿಸಿಕೊಳ್ಳುವ ಅಗತ್ಯವನ್ನು ಕೃತಿ ಸೂಚಿಸುತ್ತದೆ, ಒತ್ತಾಯಿಸುತ್ತದೆ. ಈ ಸೂಚನೆ, ಒತ್ತಾಯಗಳಿಗೆ ಸ್ಪಂದಿಸುವ ಸಂವೇದನಾಶೀಲತೆ ಕೃತಿಯನ್ನು ಅನುಭವಿಸಲು, ಅರ್ಥೈಸಲು, ವ್ಯಾಖ್ಯಾನಿಸಲು ಅಗತ್ಯವಾಗುತ್ತದೆ.

'ಕುಸುಮಬಾಲೆ'ಯ ಭಾಷೆ ಕೆಲವರಿಗೆ ಸಂವಹನದ ಸಮಸ್ಯೆಯನ್ನು ಒಡ್ಡಿದೆ. ಭಾಷೆಯ ವಾಚ್ಯಾರ್ಥ ಗ್ರಹಿಕೆಯೇ (Literal Understanding) ತೊಡಕಿನ ಮೂಲವಾದಾಗ ಆ ಕೃತಿಯ ಬಗ್ಗೆ ಸಹಾನುಭೂತಿ ಪರವಾದ ಪ್ರತಿವಾದ ಪ್ರತಿಕ್ರಿಯೆಯನ್ನು ಓದುಗರಿಂದ ನಿರೀಕ್ಷಿಸುವಂತಿಲ್ಲ. ಆದರೆ ಆ ಸಂವಹನದ ತೊಡಕು ಮೂಲತಃ ಬಳಕೆಯಾದ ಭಾಷೆಗೆ ಸಂಬಂಧಿಸಿದ್ದೋ ಅಪರಿಚಿತತೆಯ ಕಾರಣದಿಂದಾಗಿ ಓದುಗನಿಗೆ ಉಂಟಾದ್ದೋ? ಇದು ಮುಖ್ಯ ಪ್ರಶ್ನೆ. ಆ ಕೃತಿಯಲ್ಲಿ ಬಳಕೆಯಾಗಿರುವ ಭಾಷೆಯನ್ನು ಸೃಜನಶೀಲ ಸಂದರ್ಭದಲ್ಲಿ ಸಮರ್ಥಿಸಿಕೊಳ್ಳುವಷ್ಟು ಸತ್ವಶಾಲಿಯಾಗಿದ್ದರೆ ವಾಚ್ಯಾರ್ಥ ಗ್ರಹಿಕೆಯ ನೆಲೆಯಲ್ಲಿಯೇ ಸಂವಹನದ ಸಮಸ್ಯೆಯನ್ನು ಎದುರಿಸುತ್ತಿರುವವರಿಗೆ ಆ ಭಾಷೆಯನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಮಾತ್ರವಲ್ಲ, ಅದು ಅಪೇಕ್ಷಿಸುವ ಸಂವೇದನಾಶೀಲತೆಯನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕೂಡ ತಮ್ಮ ಕಡೆಯಿಂದಲೂ ಅಗತ್ಯವಾದ ಪೂರ್ವ ಸಿದ್ಧತೆ ಮಾಡಿಕೊಳ್ಳುವ ವಿನಯ, ಪರಿಶ್ರಮ ಅಗತ್ಯವಾಗುತ್ತದೆ

ಈ ಮೇಲಿನ ವಿಶ್ಲೇಷಣೆ ಆಶಯನಿಷ್ಠ ವಿಮರ್ಶೆಗೆ ಹೊರಳಿಕೊಂಡ ಸ್ವರೂಪವನ್ನು ತಿಳಿಸುತ್ತದೆ. ಒಂದು ಕೃತಿಯ ಹೊಸ ಬಗೆಯ ರಚನಾ ವಿಧಾನ, ಭಾಷೆ, ನಿರೂಪಣೆಯ ಸ್ವರೂಪ, ದೃಷ್ಟಿ - ಧೋರಣೆ ಇತ್ಯಾದಿಗಳಿಂದ ಸಾಹಿತ್ಯ ವಲಯಕ್ಕೆ ಹೊಸಬಗೆಯ ಸ್ವರೂಪ ನಿರ್ಮಾಣವಾಗಿದೆ. ಈ ವಿಶಿಷ್ಟವಾದ ಕೃತಿಯಿಂದ ಓದುಗರಿಗೆ, ವಿಮರ್ಶಕರಿಗೆ ಎದುರಾಗಿರುವ ಹಲವು ಪ್ರಶ್ನೆಗಳನ್ನು ಗುರುತಿಸುತ್ತಾರೆ. ಇವರು ಪ್ರಶಂಸೆ, ವಿಮರ್ಶೆ, ಟೀಕೆ ಈ ಮೂರನ್ನು ಪ್ರತಿಕ್ರಿಯೆಗಳಾಗಿ ಗುರುತಿಸಿ ಕ್ರಮವಾಗಿ ಪುಸ್ತಕ ವಿಮರ್ಶೆಯ ಆಯಾಮವನ್ನು ತಿಳಿಸುತ್ತಾ ಹೋಗುತ್ತಾರೆ. ಅತಿ ಆತ್ಮೀಯರಾದವರ ಕೃತಿಗಳಿಗೆ ಪ್ರಶಂಸೆಯಾಗಿಯೂ, ವಸ್ತುನಿಷ್ಠ ಸ್ವರೂಪದಲ್ಲಿ ವಿಮರ್ಶೆಯಾಗಿಯೂ, ಮಿತ್ರರಲ್ಲದವರ ಕೃತಿಗಳಾದರೆ ಟೀಕೆಗಳಾಗಿ ರೂಪುಗೊಳ್ಳುವ ಸ್ವರೂಪವನ್ನು ಸೂಚಿಸುತ್ತಾರೆ. ಹೀಗಾಗಿ ಹೊಸ ಬಗೆಯ ಕೃತಿಯ ಪ್ರಕಟಣೆಯಿಂದ, ಹಳೆಯ ವಿಮರ್ಶಾ ಮಾನದಂಡಗಳು ತಮ್ಮ ಶಕ್ತಿ ಕಳೆದುಕೊಂಡಿರುವುದನ್ನು ಗುರುತಿಸುತ್ತಾ ವಿಮರ್ಶೆಯ ಮಾನದಂಡಗಳನ್ನು ಹೊರಗಿನಿಂದ ಮಾತ್ರ ತಂದು ಅನ್ವಯಿಸಿ ನೋಡದೇ ಕೃತಿಯ ಒಳಗಿನಿಂದಲೂ ಪಡೆದು ವಿಸ್ತರಿಸಿಕೊಳ್ಳುವ ಅಗತ್ಯವನ್ನು ಕೃತಿ ಸೂಚಿಸುತ್ತದೆ. ಒತ್ತಾಯಿಸುತ್ತದೆ. ಈ ಸೂಚನೆ, ಒತ್ತಾಯಗಳಿಗೆ ಸ್ಪಂದಿಸುವ ಸಂವೇದನಾಶೀಲತೆ ಕೃತಿಯನ್ನು ಅನುಭವಿಸಲು, ಅರ್ಥವಿಸಲು, ವ್ಯಾಖ್ಯಾನಿಸಲು ಅಗತ್ಯವಾಗುತ್ತದೆ. ಎಂದು ಹೇಳುವಲ್ಲಿ ಪುಸ್ತಕ ವಿಮರ್ಶೆ ಮತ್ತು ಹೊಸ ಆಯಾಮವನ್ನು ಪಡೆದುಕೊಳ್ಳಬೇಕಾದ ಸಾಂಸ್ಕೃತಿಕ ಅನಿವಾರ್ಯತೆಯನ್ನು ಕುರಿತು ಹೇಳುತ್ತದೆ. ಅದು ನಮ್ಮ ಮಾನದಂಡಗಳನ್ನು ಮರು ಪರಿಶೀಲನೆಗೆ ಒಳಪಡಿಸಬೇಕೆನೋ ಎಂಬ ಸಂಶಯ ವ್ಯಕ್ತಪಡಿಸುವ ಈ ಮನೋಭಾವದ ಹಿಂದೆ ಆಶಯನಿಷ್ಠ ಪುಸ್ತಕ ವಿಮರ್ಶೆಗೆ ತುಡಿಯುವ, ಹೊಸದಾಗಿ ರೂಪಿಸಿಕೊಳ್ಳಬೇಕಾದ ಮಾನದಂಡದ ಬಗೆಗೆ ಒತ್ತಡದ ಅಂಶ ಅಡಗಿದೆ. ಅದರ ಜೊತೆಯಲ್ಲಿಯೇ ಪುಸ್ತಕ ವಿಮರ್ಶಕರು, ವಿಮರ್ಶಕರು, ಓದುಗರು ತಮ್ಮ ಓದಿನ ನೆಲೆಯನ್ನು ಬದಲಾಯಿಸಿಕೊಳ್ಳಬೇಕಾದ ಮತ್ತು ಅರ್ಥೈಸಿಕೊಳ್ಳುವ ವಿಧಾನವನ್ನು ಹೊಸದಾಗಿ ರೂಪಿಸಿಕೊಳ್ಳಬೇಕಾದ ಅನಿವಾರ್ಯತೆಯನ್ನು ಕುರಿತು 'ಕೃತಿಗಳು ಆಪೇಕ್ಷಿಸುವ ಸಂವೇದನಾಶೀಲತೆಯನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಕೂಡ ತಮ್ಮ ಕಡೆಯಿಂದಲೂ ಅಗತ್ಯವಾದ ಪೂರ್ವ ಸಿದ್ಧತೆ ಮಾಡಿಕೊಳ್ಳುವ ವಿನಯ, ಪರಿಶ್ರಮ ಅಗತ್ಯವಾಗುತ್ತದೆ' ಎಂದು ಹೇಳುತ್ತಾರೆ. ಈ ಮುಖೇನ ಓದುಗರು ಹೊಸ ಓದುಗಳಿಗೆ

ತೆರೆದುಕೊಳ್ಳುವುದರೊಂದಿಗೆ ಕೆಲವು ಪೂರ್ವ ಸಿದ್ಧತೆಗಳು ಅವಶ್ಯಕ. ಅದಕ್ಕಾಗಿ ವಿನಯ, ಪರಿಶ್ರಮಗಳನ್ನು ಕುರಿತು ಹೇಳುತ್ತಾರೆ. ವಿನಯ ಕೃತಿಯನ್ನು ಒಳಗು ಮಾಡಿಕೊಳ್ಳುವ ರೀತಿಯನ್ನು ತಿಳಿಸಿದರೆ ಕೃತಿಯನ್ನು ವಸ್ತುನಿಷ್ಠವಾಗಿ ಅರ್ಥೈಸಲು ಪರಿಶ್ರಮದ ಅಗತ್ಯತೆಯನ್ನು ಹೇಳುತ್ತಾರೆ. ನಮ್ಮ ಮಾನದಂಡವನ್ನೇ ಮರು ಪರಿಶೀಲನೆಗೆ ಒಳಪಡಿಸಬೇಕೇನೋ ಎಂಬ ಸಂಶಯ ವ್ಯಕ್ತಪಡಿಸುವ ಮಾತಿನಲ್ಲಿ ಈ ಒತ್ತಡದ ಅಂಶ ಎದ್ದು ಕಾಣುತ್ತದೆ) ಸಾಹಿತ್ಯ ಕೃತಿಯ ಸಾಮಾಜಿಕ ಅರ್ಥಮೌಲ್ಯಗಳನ್ನು ವಿಮರ್ಶಕರು ನಿರ್ದಿಷ್ಟವಾಗಿ ಗುರುತಿಸಿದರು. ಸಾಹಿತ್ಯದ ರೂಪ ತಂತ್ರಗಳಿಗಿಂತ ಅದರ ಆಶಯ ನಿಲುವುಗಳನ್ನು ವಿಶ್ಲೇಷಿಸಬೇಕು ಮತ್ತು ಸಾಂಸ್ಕೃತಿಕ ನೆಲೆಯಲ್ಲಿಟ್ಟು ಕೃತಿಯನ್ನು ಅಭ್ಯಸಿಸಬೇಕು. ಹೀಗಾಗಿ ಸಂಸ್ಕೃತಿ ಸಮಾಜಗಳ ಹೊರತಾಗಿ ಯಾವುದೇ ಕೃತಿಯನ್ನು ನೋಡಲಾಗುವುದಿಲ್ಲವೆಂಬುದರ ಕಡೆ ಪುಸ್ತಕ ವಿಮರ್ಶೆ ವಾಲಿತು. ಆದರೆ ಕೆಲವೊಮ್ಮೆ ಗದ್ಯದ ರೀತಿಯಲ್ಲೇ ಪದ್ಯವನ್ನು, ಕಾವ್ಯವನ್ನು ವಿಮರ್ಶಿಸ ಹೊರಟರು ಉದಾಹರಣೆಗೆ ಸಿದ್ದಲಿಂಗಯ್ಯನವರ ಕವಿತೆಗಳಲ್ಲಿ ಸಂಗೀತದ ಅಂಶವನ್ನು ತೆಗೆದುಹಾಕಿಬಿಟ್ಟರೆ ಕೇವಲ ಪದ ಪುಂಜವಾಗಿ ಉಳಿದು ಬಿಡುವ ಅವರ ಕಾವ್ಯ ಕೇವಲ ಹಾಡುಗಾರಿಕೆಗಿಂತ ಹೊರತಾದ ಸಾಧ್ಯತೆಗಳನ್ನು ಹಮ್ಮಿಕೊಂಡಿಲ್ಲ - ಟಿ.ಪಿ.ಅಶೋಕ್[೨೦] ಹೀಗೆ ವಿಮರ್ಶಿಸಿದ್ದು ಹೆಚ್ಚಾಗಿ ರೂಪ ಪ್ರಧಾನ ಮನೋಧರ್ಮವೇ, ಗದ್ಯಕ್ಕೂ ಮತ್ತು ಪದ್ಯಕ್ಕೂ ಬೇರೆಯದೇ ಆದ ವಿಮರ್ಶೆಯ ನಿಲುವುಗಳನ್ನು ಹಿಂದಿನ ಪರಂಪರೆ ಅನ್ವೇಷಿಸಲು ಯತ್ನಿಸಿತು. ಆದರೆ ಈ ಸಂದರ್ಭದ ಪುಸ್ತಕ ವಿಮರ್ಶಕರು ಈ ರೀತಿಯ ನಿಲುವುಗಳನ್ನು ಬದಲಾಯಿಸಿಕೊಳ್ಳದೆ, ಕೃತಿಯ ಕೊರತೆಗಳನ್ನು ನೇರವಾಗಿ ಹೇಳುವ ವಿಮರ್ಶಕ ಮೌಲ್ಯಗುಣವನ್ನು ಪಡೆದುಕೊಂಡರು.

ಯಾವುದೇ ಸಾಹಿತ್ಯ ಸಂಪ್ರದಾಯವಾಗಲಿ ಅದು ಓದುಗನಲ್ಲಿ ಮತ್ತು ವಿಮರ್ಶಕನಲ್ಲಿ ಅದರ ಸೈದ್ಧಾಂತಿಕ ಅಥವಾ ತಾತ್ವಿಕ ಪರಿಕಲ್ಪನೆಗೆ ಪ್ರತಿಕ್ರಿಯಿಸಬೇಕೆಂಬ ಒತ್ತಡವನ್ನು ತರುವುದರಲ್ಲಿ ವಿಫಲವಾದರೆ ಮಹತ್ವಪೂರ್ಣವಾದ ಸಾಹಿತ್ಯ ಸಂಪ್ರದಾಯವಾಗುವುದಿಲ್ಲ [೨೧]

ಈ ಮೇಲೆ ಉಲ್ಲೇಖವನ್ನು ಗಮನಿಸಿದರೆ ಹೊಸ ಸಾಹಿತ್ಯ ನಿರ್ಮಾಣವಾಗುವುದರ ಅಗತ್ಯವಾದ ಓದುಗರ ಮತ್ತು ವಿಮರ್ಶಕರ ಪ್ರತಿಕ್ರಿಯೆಯ ಅಗತ್ಯವನ್ನು ಭಾವಿಸಲಾಗಿದೆ. ಅಂದರೆ ಇಲ್ಲಿ ಪ್ರತಿಕ್ರಿಯ ಬಹಳ ಮುಖ್ಯ ಎಂಬುದು ಗೊತ್ತಾಗುತ್ತದೆ. ಅಲ್ಲದೆ ಪ್ರತಿಕ್ರಿಯೆ ಹೊಸ ಸಾಹಿತ್ಯ ನಿರ್ಮಾಣದಲ್ಲಿ ಮಹತ್ತರ ಪಾತ್ರ ವಹಿಸಬಹುದೆಂಬ ನಿಲುವಿದೆ. ಈ ಪ್ರತಿಕ್ರಿಯೆ ಹಲವು ರೂಪಗಳಲ್ಲಿದೆ. ಮುಖ್ಯವಾಗಿ ಅದು ವಿಮರ್ಶೆ ಮತ್ತು ಪುಸ್ತಕ ವಿಮರ್ಶೆಯೆಂದು ಹೇಳಬಹುದು. ವಿಮರ್ಶೆ ತುಂಬಾ ತಡವಾಗಿ ಬರುವಂಥ ಪ್ರತಿಕ್ರಿಯೆ. ಆದರೆ ಪುಸ್ತಕ ವಿಮರ್ಶೆ ತತ್‌ಕ್ಷಣದ ಪ್ರತಿಕ್ರಿಯೆಯಾಗಿದೆ. ಹೀಗಾಗಿ ಪುಸ್ತಕ ವಿಮರ್ಶೆಗೆ ಒಂದು ಪರಂಪರೆಯನ್ನು ನಿರ್ಮಿಸುವ ಸತ್ವವಿದೆ; ಶಕ್ತಿಯಿದೆ ಎಂಬುದು ಮೇಲಿನ ಮಾತುಗಳಿಂದ ತಿಳಿಯುತ್ತದೆ.

ಈ ಕಾರಣದಿಂದ ವಿಮರ್ಶಾತ್ಮಕ ಪ್ರತಿಕ್ರಿಯೆ ಈ ಸಂದರ್ಭದಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ. ಆದ್ದರಿಂದಲೇ ಆಶಯ ಪ್ರಧಾನ ಪುಸ್ತಕ ವಿಮರ್ಶೆ, ವಿಮರ್ಶೆ ಪರಸ್ಪರ ಪ್ರತಿಕ್ರಿಯೆಗಳಿಂದಲೇ

ಬೆಳೆಯುತ್ತಿದೆಯೆನ್ನಬಹುದು.

ಹಿಂದಿನ ರೂಪ ಪ್ರಧಾನ ಪುಸ್ತಕ ವಿಮರ್ಶೆಯಲ್ಲಿನ ಟೀಕುಟಾಕನ್ನು ವಿರೋಧಿಸುತ್ತ ಕೃತಿಯನ್ನು ಹೊಸದಾಗಿ ನೋಡುವ ದೃಷ್ಟಿ ಬೆಳಸಿದ್ದು ಆಶಯ ಪ್ರಧಾನ ಪುಸ್ತಕ ವಿಮರ್ಶೆಯನ್ನು ನಿರ್ದೇಶಿಸಿದ್ದು ಮಾರ್ಕ್ಸಿಸ್ಟ್ ತಾತ್ವಿಕತೆ. ಬಂಡಾಯ ಸಾಹಿತ್ಯ ಹೇಗೆ ಒಂದೇ ತಾತ್ವಿಕತೆಗೆ ಬದ್ಧವಾಗಿರಲಿಲ್ಲ ಹಾಗೆ ಆಗ ಇದ್ದ ಆಶಯ ಪ್ರಧಾನ ಪುಸ್ತಕ ವಿಮರ್ಶೆಯಲ್ಲಿಯೂ ಲೋಹಿಯಾವಾದಿಗಳು, ಗಾಂಧಿವಾದಿಗಳು, ಅಂಬೇಡ್ಕರ್‌ವಾದಿಗಳು, ಮಾರ್ಕ್ಸಿಸ್ಟರು ಎಲ್ಲರೂ ಒಂದುಗೂಡಿದ್ದರು. ಇದರ ಪರಿಣಾಮವಾಗಿ ವಿಮರ್ಶೆಯ ದಿಕ್ಕು ಹಿಂದಿನ ವಿಮರ್ಶಾ ಪರಂಪರೆಗಿಂತ ಭಿನ್ನವಾಗಿ ನಡೆಯಿತು. ಹೀಗೆ ಬದಲಾದುದರ ಫಲವೇ ರಸ ಪ್ರಧಾನ, ರೂಪ ಪ್ರಧಾನ ಪುಸ್ತಕ ವಿಮರ್ಶೆಗಿಂತ ಗಟ್ಟಿಯಾದ, ಸಾಂಸ್ಕೃತಿಕ ಆವರಣವನ್ನು ಒಳಗೊಂಡ ವಿಮರ್ಶೆಯಾಗಿ ರೂಪುಗೊಳ್ಳುತ್ತಿರುವುದು.

ಬಂಡಾಯ ಸಾಹಿತ್ಯವೆಂದೊಡನೆ ಅದು ಕಲಾ ಮಾಧ್ಯಮದ ಮಾನದಂಡಗಳನ್ನು ನಿರಾಕರಿಸುವುದಿಲ್ಲ, ಬದಲಾಗಿ ಗಂಭೀರವಾಗೇ ಪರಿಗಣಿಸುತ್ತದೆ. ಯಾಕೆಂದರೆ ಅದು'ಸಮಾಜವಾದಿ ವಾಸ್ತವ' ಸೈದ್ಧಾಂತಿಕ ನಿಲುವಿನಿಂದಲೇ ಸಂವೇಗಗೊಂಡದ್ದು. ಹಾಗಂತ ಅವರ ಮಾನದಂಡ ಗತಾನುಗತಿಕವಾಗಲು ಸಾಧ್ಯವಿಲ್ಲ. ಬೇರೆ ಬೇರೆ ಸಾಹಿತ್ಯ ಸಂದರ್ಭ ತನ್ನದೇ ಆದ ಮಾನದಂಡವನ್ನು ಹುಟ್ಟಿಸಿಕೊಳ್ಳುತ್ತದೆ ಎಂದು ಸಾಹಿತ್ಯದ ಅಭ್ಯಾಸಿಗಳೆಲ್ಲ ಬಲ್ಲರು. ಇಂದಿನ ಅಂದರೆ ಮುಖ್ಯವಾಗಿ ಬಂಡಾಯ ಸಾಹಿತ್ಯ ಕಠೋರ ವಾಸ್ತವದಲ್ಲಿ ಚಾರಿತ್ರಿಕ ದ್ವಂದ್ವಮಾನ ದೃಷ್ಟಿಯ ಹಿನ್ನೆಲೆ ಉಳ್ಳದ್ದಾಗಿದೆ [೨೨]

ಇಲ್ಲಿ ಬಂಡಾಯ ವಿಮರ್ಶೆಯ ಚರ್ಚೆಯಿದ್ದರೂ ಅಲ್ಲಲ್ಲಿ ಪುಸ್ತಕ ವಿಮರ್ಶೆಯ ಬಗೆಗಿನ ಚರ್ಚೆ ಕ್ವಚಿತ್ತಾಗಿ ಕಾಣಿಸಿಕೊಂಡಿದೆ. ಬಂಡಾಯ ಸಾಹಿತ್ಯ ಸಂದರ್ಭದ ಆಶಯ ಪ್ರಧಾನ ಪುಸ್ತಕ ವಿಮರ್ಶೆ, ಹಿಂದಿನ ರೂಪಪ್ರಧಾನ ವಿಮರ್ಶೆಯ ಮುಖ್ಯ ನಿಲುವಾದ ಕಲಾಮಾಧ್ಯಮದ ಮಾನದಂಡಗಳನ್ನು ನಿರಾಕರಿಸುವುದಿಲ್ಲವೆಂಬ ಹೇಳಿಕೆ ರೂಪ ಪ್ರಧಾನದ ಕೆಲವು ಲಕ್ಷಣಗಳನ್ನು ಒಳಗೊಂಡಿದ್ದು ಬಂಡಾಯ ಸಾಹಿತ್ಯ ವಿಮರ್ಶೆಯ 'ಚಾರಿತ್ರಿಕ ದ್ವಂದ್ವಮಾನ'ದ ದೃಷ್ಟಿಯನ್ನು ಬೆಳೆಸಿಕೊಂಡಿರುವಂತಹದ್ದು. ಹೀಗಾಗಿ ಪುಸ್ತಕ ವಿಮರ್ಶೆಯಲ್ಲೂ ಇದೇ ನಿಲುವುಗಳನ್ನು ಗುರುತಿಸಬಹುದು. ಹಿಂದಿನ ರೂಪ ಪ್ರಧಾನ ಮಾದರಿಯಲ್ಲಿಯೇ ಕೆಲವು ಪುಸ್ತಕ ವಿಮರ್ಶೆ ಮಾದರಿಗಳು ಚಾಲ್ತಿಯಲ್ಲಿರುವುದನ್ನು ಗಮನಿಸಬಹುದು.

ಆದುದರಿಂದ ಆಶಯ ಪ್ರಧಾನ ಪುಸ್ತಕ ವಿಮರ್ಶೆಯು ಈ ನೆಲದ ಅನಿವಾರ್ಯತೆಯಿಂದಲೇ ಹುಟ್ಟುತ್ತಿದೆ. ಈ ನಿಟ್ಟಿನಲ್ಲಿ ಆಶಯ ಪ್ರಧಾನ ಪುಸ್ತಕ ವಿಮರ್ಶೆಯು ವಾಸ್ತವದ ಛಾಯೆಯನ್ನು ಸಾಂಸ್ಕೃತಿಕ ವಿವರಗಳನ್ನು ಚಿಂತಿಸಲೆತ್ನಿಸುತ್ತದೆ.

ಆಶಯ ಪ್ರಧಾನತೆಯಲ್ಲಿ ಒಳಗೊಳ್ಳುವ ದಲಿತ ಸಾಹಿತ್ಯದ ಪುಸ್ತಕ ವಿಮರ್ಶೆ, ಸ್ತ್ರೀವಾದಿ ಪುಸ್ತಕ ವಿಮರ್ಶೆಯು ಇದೇ ನಿಲುವುಗಳನ್ನು ಒಳಗೊಂಡಿವೆ. ಸ್ತ್ರೀವಾದಿ ಪುಸ್ತಕ ವಿಮರ್ಶೆ ತನ್ನದೇ ಆದ ವಿಮರ್ಶನ ನಿಲುವೊಂದನ್ನು ಸಿದ್ಧಪಡಿಸಿಕೊಂಡಿದೆ. ಈ ಕಾಲದಲ್ಲಿ ಹೋರಾಟ ಮತ್ತು ಸಂಘಟನೆಯು, ಸಾಹಿತ್ಯದ ವಿಮರ್ಶೆಯೂ ಒಂದೆಂದು ಭಾವಿಸಿದ್ದಾರೆ. ನಮ್ಮ ಪ್ರಧಾನ ಸಂಸ್ಕೃತಿಯಲ್ಲಿ

ಸ್ತ್ರೀಯನ್ನು ಕಂಡಿರಿಸಿದ ಬಗೆ, ಸಂಸ್ಕೃತಿಯಲ್ಲಿನ ತಾತ್ವಿಕತೆ ಅದು ಬಳಸಿಕೊಂಡಿರುವ ಹಲವಾರು ಸಂಕೇತ, ರೂಪಕಗಳಲ್ಲಿ ಬೇರೂರಿರುವ ಪುರುಷಾಧಿಕಾರದ ಸ್ವರೂಪಗಳನ್ನು ಬಯಲಿಗೆಳೆಯುವುದಲ್ಲದೆ ಅವುಗಳನ್ನು ವಿಮರ್ಶೆಗೆ ಒಳಪಡಿಸಿ ಅವುಗಳ ವಾಸ್ತವ ರೂಪದ ಬಗ್ಗೆ ಜನತೆಯಲ್ಲಿ ಹೊಸ ರೀತಿಯ ಅರಿವನ್ನು, ಪ್ರಜ್ಞೆಯನ್ನು ಬಳಸುವುದು. ಈ ಸ್ತ್ರೀವಾದಿ ಪುಸ್ತಕ ವಿಮರ್ಶೆಯಲ್ಲಿ ಕಂಡು ಬರುವ ಅಂಶವಾಗಿದೆ. ಈ ಅಂಶಗಳು ಸ್ತ್ರೀಯ ಬದುಕು-ಬರಹದ ಕಡೆಗೆ ಈ ವಿಮರ್ಶೆ ಆಸ್ಥೆವಹಿಸತೊಡಗಿದೆ. ಈ ನೆಲೆಯಲ್ಲಿ ಪ್ರಾತಿನಿಧಿಕವಾಗಿ ಸ್ತ್ರೀವಾದಿ ವಿಮರ್ಶೆಯ ಬಗೆಗಿನ ಕೆಲವು ಮಾತುಗಳನ್ನು ನೋಡುವುದಾದರೆ ಸ್ತ್ರೀವಾದಿ ವಿಮರ್ಶೆಯು ಕೇವಲ ವಿಮರ್ಶಕನ ಕೈಯ ಒಂದು ಉಪಕರಣವಲ್ಲ, ಸಾಮಾಜಿಕ ಬೌದ್ಧಿಕ ಪರಂಪರೆಗಳನ್ನೇ ಪರೀಕ್ಷಿಸುವ ಒಂದು ದೃಷ್ಟಿಕೋನ. ಮಹಿಳೆಯರ ಅಧೀನತೆಯಿಂದ ಮತ್ತು ಈ ಪರಿಸ್ಥಿತಿಯನ್ನು ಬದಲಾಯಿಸುವ ಅವಶ್ಯಕತೆಯಿಂದ ಹುಟ್ಟುವ ದೃಷ್ಟಿಕೋನವೊಂದರಿಂದ ಸಾಹಿತ್ಯ, ಸಂಸ್ಕೃತಿ, ಇತಿಹಾಸ - ರಾಜಕೀಯ ಮತ್ತಿತರ ವಿಷಯಗಳ ಬಗ್ಗೆ ಕೇಳಿ ಬರುತ್ತಿರುವ ಬೇರೆ ಬೇರೆ ಧ್ವನಿಗಳಿಗೆ ಜಾಗಮಾಡಿಕೊಡುವುದು[೨೩] ಸ್ತ್ರೀವಾದಿ ಪುಸ್ತಕ ವಿಮರ್ಶೆಯ ಆಯಾಮವಾಗಿದೆ. ಇದರ ಹಿಂದೆ ಪಾಶ್ಚಾತ್ಯ ಫೆಮಿನಿಸ್ಟ್ ವಿಮರ್ಶೆಯ ಪ್ರಭಾವವಿದ್ದರೂ, ನಮ್ಮ ಕನ್ನಡ ಪುಸ್ತಕ ವಿಮರ್ಶೆಯಲ್ಲಿ ಕನ್ನಡದ್ದೇ ಆದ ಸ್ತ್ರೀವಾದಿ ವಿಮರ್ಶೆ ರೂಪುಗೊಳ್ಳುತ್ತದೆ. ಈ ಹಾದಿಯಲ್ಲೇ ಈಗ ಬರುತ್ತಿರುವ ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೆ ಪುಸ್ತಕ ವಿಮರ್ಶೆಗಳ ಮೂಲಕ ತಮ್ಮ ಚಿಂತನೆಗಳನ್ನು ಹಂಚಿಕೊಳ್ಳುವ ಹೊಸ ಮಾದರಿಗಳು ಬಂಡಾಯ ಸಂದರ್ಭದಲ್ಲಿ ಮೂಡುತ್ತಿವೆ. ವಿಮರ್ಶಕರು ಕೃತಿ ವಿಮರ್ಶೆಯನ್ನು ಮಾಡುತ್ತಲೇ ತಾವು ತಿಳಿದುಕೊಂಡ ವಿಚಾರಗಳನ್ನು ಓದುಗರಿಗೆ ತಲುಪಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಈ ಚಿಂತನೆಗಳು ಮೂಲತಃ ಆ ಕೃತಿಯ ವಿಚಾರಕ್ಕೆ ಸಂಬಂಧಪಟ್ಟಂತೆ ಕಂಡು ಬರದಿದ್ದರೂ, ಅದರ ಒಂದು ಎಳೆ ಇಲ್ಲವೆ ಪೂರ್ತಿ ವಿಚಾರ ಆ ಕೃತಿಯ ಅಮೂರ್ತತೆಯ ವಿಚಾರಕ್ಕೆ ಸ್ಪಂದಿಸುವ ಕೆಲಸವನ್ನು ಮಾಡುತ್ತದೆ.

ಡಾ. ಕೃಷ್ಣಾನಂದ ಕಾಮತರ 'ಅಕ್ಷತ' ಪುಸ್ತಕ ವಿಮರ್ಶೆಯನ್ನು ಬಾಲಸುಬ್ರಹ್ಮಣ್ಯ ಕಂಜರ್ಪಣೆಯವರು *ಸಾಂಸ್ಕೃತಿಕ ಸಂಪನ್ನರಾದ....... ಜನರನ್ನು ಪರಿಚಯಿಸುವುದರ ಜೊತೆಗೆ ಒಂದು ಜಿಲ್ಲೆಗೆ ಸಂಬಂಧಪಟ್ಟಂತಹ ಇತರ ಮುಂದುವರಿದ ಜಾತಿವರ್ಗಗಳ ಮಾಹಿತಿ ಬೆರೆತಾಗ ನಾವು ಗೆಜೆಟಿಯರ್‌ನ ಪುಟಗಳನ್ನು ತಿರುವುತ್ತಿರುವ ಅನುಭವವಾಗುತ್ತದೆ. ಸಾಂಸ್ಕೃತಿಕ ಏಕ ಸೂತ್ರತೆಯಿಲ್ಲದೆ ಕೃತಿ ಬರಿಯ ಮೇಲ್ಪದರದ ಮಾಹಿತಿಗಳನ್ನು ನೀಡುವ ಇನ್ನು ಒಂದು ಕೃತಿಯಾಗುತ್ತದೆ. ಈ ಮಾಹಿತಿಗಳು ಉಪಯುಕ್ತವಾಗಿದ್ದಾಗಲೂ*[೨೪] .... ಎಂದು ಕೃತಿಯ ಬಗೆಗೆ ಮಾಹಿತಿಯನ್ನು ಕೊಡುತ್ತಲೇ ಪುಸ್ತಕ ವಿಮರ್ಶೆಗೆ ಕೈ ಹಾಕುತ್ತಾರೆ.

ಈ ರೀತಿ ಇತರ ವಿವರಗಳನ್ನು ರಿವ್ಯೂನ ಮೂಲಕ ಹೇಳುವುದು ಒಂದು ರೀತಿಯಲ್ಲಿ ಒಳ್ಳೆಯದೇ. ಇದರಿಂದ ಇತರ ವಿವರ, ಚಿಂತನೆಗಳ ಅರಿವು ಓದುಗರಿಗೆ ಆಗುತ್ತದೆ. ಆದರೆ ಈ ರೀತಿಯ ಚಿಂತನೆಗಳನ್ನು ಹಂಚಿಕೊಳ್ಳುವ ನೆಪದಲ್ಲಿ ಕೃತಿಯನ್ನು ಮರೆಯುವ ಸಂಭವವೂ ಉಂಟು ಮತ್ತು ತಾವು ತಿಳಿದುಕೊಂಡ ವಿಚಾರಗಳನ್ನು ಪುಸ್ತಕ ವಿಮರ್ಶೆಯಲ್ಲಿ ಹೇರುವ ಪ್ರಸಂಗವಿರುತ್ತದೆ.

ಈ ನೆಲೆಯಲ್ಲಿ ಎಪ್ಪತ್ತರ ದಶಕದಿಂದೀಚೆಗೆ ಪುಸ್ತಕ ವಿಮರ್ಶೆಯಲ್ಲಿ ತೀವ್ರ ಬದಲಾವಣೆಯಾಗುತ್ತಿದೆ. ಕೃತಿಯನ್ನು ಭಾಷಾ ಪ್ರೌಢಿಮೆಯಿಂದ ಸಡಿಲಿಸಿ ಅದನ್ನು ಕೂಲಂಕುಶವಾಗಿ ಸೂಕ್ಷ್ಮ ಸಂವೇದಿಯಾಗಿ ಅಭ್ಯಾಸ ಮಾಡುವ ಕೃತಿ ನಿಷ್ಠ ವಿಮರ್ಶೆ ಹೆಚ್ಚು ಹೆಚ್ಚಾಗಿ ಬೆಳೆದು ಬರುತ್ತಿದೆ. ಕೃತಿಯನ್ನು ಸಾಂಸ್ಕೃತಿಕ ವಾತಾವರಣದಲ್ಲಿಟ್ಟು ಅರ್ಥೈಸುವ ದೃಷ್ಟಿಕೋನ ಬೆಳದಿದೆ. ಕೃತಿಯನ್ನು ನಮ್ಮ ನೆಲದಿಂದ ನೋಡುವ ವಿಮರ್ಶೆ ಆಶಯ ಪ್ರಧಾನ ಪುಸ್ತಕ ವಿಮರ್ಶೆಯಲ್ಲಿ ರೂಪುಗೊಳ್ಳುತ್ತಿರುವುದು ತುಂಬಾ ಆಶಾದಾಯಕವಾಗಿದೆ.

ಪುಸ್ತಕ ವಿಮರ್ಶೆಯ ಪ್ರಾಥಮಿಕ ಕೆಲಸವೇ ಕೃತಿಯನ್ನು ಕುರಿತು ಪರಿಚಯ ಮಾಡಿಕೊಡುವುದು. ಹೊಸಗನ್ನಡದ ಕಾಲಘಟ್ಟಗಳ ಯಾವುದೇ ಲೇಖನಗಳನ್ನು ಗಮನಿಸಿದರು ಅವುಗಳೆಲ್ಲ 'ಪುಸ್ತಕ ಪರಿಚಯ' ಎಂಬ ಹೆಸರಿದ್ದುದೇ ಹೆಚ್ಚು, ಅದನ್ನು ಒಂದು ವಿಮರ್ಶೆಯಾಗಿ ಗಮನಿಸದಿರುವುದೇ ಹೆಚ್ಚು. ಈಗಲೂ ಕೆಲವು ದಿನಪತ್ರಿಕೆಗಳಲ್ಲಿ ಈ ಹೆಸರಿನಿಂದಲೇ ಕರೆಯಲಾಗುತ್ತಿದೆ. ಈ ಪರಿಚಯದ ಉದ್ದೇಶ ಕೃತಿಯ ಬಗೆಗೆ ಪ್ರಚಾರವು ಆಗಿರುತ್ತದೆ. ಅಲ್ಲದೆ ಕೃತಿಯು ಮುಂದೆ ತೊಡಗಿಕೊಳ್ಳಬಹುದಾದ, ತೊಡಗಿಕೊಳ್ಳಬೇಕಾದ ಬಗೆಗಿನ ಸಲಹೆಗಳೂ ಆಗಿರುತ್ತವೆ. 'ಪ್ರೇಮ ಮತ್ತು ಸರ್ವಾಧಿಕಾರಿಯ ಅಂಧೇರಿ ನಗರ' ಅಬ್ದುಲ್ ಮಜೀದ್ ಖಾನ್‌ರ 'ಅಂಧೇರಿ ನಗರ' ಕಾದಂಬರಿಯನ್ನು ಜಿ.ಪಿ. ರಾಮಪ್ರಸಾದ್‌ರವರು ವಿಮರ್ಶಿಸುತ್ತ[೨೫] ಅವರು ಒಟ್ಟು ಕೃತಿಯ ಆಶಯವನ್ನು ಲೇಖನದ ಶೀರ್ಷಿಕೆಯಿಂದಲೇ ಗುರುತಿಸುತ್ತಾರೆ. ಪುಸ್ತಕ ವಿಮರ್ಶೆಯ ಶೀರ್ಷಿಕೆಯನ್ನು ಮೊದಲೇ ಗುರುತಿಸಿಕೊಂಡು, ಲೇಖನದ ಒಳವಿವರಗಳು ಅದರ ಪರವಾಗಿಯೇ ನಿಲ್ಲುತ್ತ ಹೋಗುತ್ತವೆ. ಹೀಗೆ ಮಾಡುವುದರಿಂದ ಶೀರ್ಷಿಕೆಗಾಗಿ ಬರೆದಿರುವ ಲೇಖನ, ಕೃತಿಗಾಗಿ ಅಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ. ಒಂದು ಸಾಲಿನ ಶೀರ್ಷಿಕೆಯನ್ನು ಲೇಖನದ ಉದ್ದಕ್ಕೂ ವಿಶ್ಲೇಷಿಸುವುದು ಪುಸ್ತಕ ವಿಮರ್ಶೆಯ ಒಂದು ಮಾದರಿಯಾಗಿದೆ.

ಪುಸ್ತಕ ವಿಮರ್ಶೆಗಳಿಂದ ಆಗುವ ಹಲವು ಸಾಧ್ಯತೆಗಳಲ್ಲಿ ಕೃತಿಯನ್ನು ಒಂದು ನೆಪಮಾಡಿ ಅದರ ಮೂಲಕ ಓದುಗರನ್ನು ಸಂವಾದಕ್ಕೆಳೆಯುವ ಕೆಲಸವನ್ನು ಮಾಡುತ್ತದೆ. ಪುಸ್ತಕ ವಿಮರ್ಶೆಯ ಮಾದರಿಯಲ್ಲಿ ಈ ಮಾದರಿ ಅತ್ಯುತ್ತಮವಾದ ಮಾದರಿ ಎನ್ನಬಹುದು.

೧. 'ಖಾಸನೀಸ ಮೂಲಕ ಮೂಗೇಲ ಮತ್ತು ಇತರ ಕತೆಗಳು'

ಲೇ: ರಾಮಚಂದ್ರದೇವ, ವಿಮರ್ಶಕ : ಚಂದ್ರಶೇಖರ ತಾಳ್ಯ.

"ಬದುಕನ್ನು ಬಗೆದು ಅದರ ಎಳೆ ಎಳೆಯನ್ನು ಅತ್ಯಂತ ತಾಳ್ಮೆಯಿಂದ, ಮನಸ್ಸಿಗೆ ತಟ್ಟುವಂತೆ ಕತೆಯಲ್ಲಿನ ಪಾತ್ರಗಳು ನಮ್ಮೊಡನೇ ಇದ್ದು ನಮಗೆಲ್ಲಾ ತಿಳಿಯದೆ ವಿವರಗಳ ಆಯಾಮಗಳನ್ನು ತಿಳಿಸಿಕೊಡುತ್ತಾ, ಒಟ್ಟು ಬದುಕಿನ ಒಳತೋಟಿಗಳನ್ನು ಓದುಗರೆದುರು ಕಲಾತ್ಮಕವಾಗಿ ಬಿಚ್ಚಿಡುವುದು ಖಾಸನೀಸರ ಕಥೆಗಾರಿಕೆಯ ವೈಶಿಷ್ಟ್ಯ.

ಬದುಕಿನ ಯಥಾವತ್ತು ಚಿತ್ರಗಳನ್ನು ಕೊಡುತ್ತಾ ಕೂಡುತ್ತದೋ, ಅಲ್ಲಿಂದ ನೆಗೆದು ಮಾನಸಿಕ ಕಾಲಕ್ಕೆ ಕೊಂಡೊಯ್ದು

ಅಲ್ಲಿ ವ್ಯಕ್ತಿಯ ಅತಂತ್ರ ಸ್ಥಿತಿಯನ್ನು ವಿಡಂಬಿಸುವುದಂತೂ ಖಾಸನೀಸರ ಮತ್ತೊಂದು ಮುಖ್ಯ ಅಂಶ. ಹೀಗೆ ಮಾನಸಿಕ ಕಾಲಕ್ಕೆ ನೆಗೆಯುವಾಗಲೂ ಅದು ಓದುಗನಿಗೆ ಗೊತ್ತಾಗಿಯೂ ಗೊತ್ತಾಗದಂತೆ ನಿರೂಪಿಸುವುದು ಖಾಸನೀಸರ ಪಳಗಿದ ಕತೆಗಾರಿಕೆಯ ಕೈ ಕುಸುರಿಯನ್ನು ಎತ್ತಿ ತೋರಿಸುವಂಥದ್ದು. 'ತಬ್ಬಲಿಗಳು' ಎಂಬ ಅವರ ಕತೆಯಲ್ಲಿ ಬಸ್ಸು ಕೆಟ್ಟು ನಿಲ್ಲುವಲ್ಲಿಂದ ಸುರುವಾಗುವ ಅದರ ವಿವರಗಳು ಬೆಳೆಯುತ್ತಾ ಬೆಳೆಯುತ್ತಾ ಒಂದು ಧಾರ್ಮಿಕ ಪರಿಸರವನ್ನು ಸೃಜಿಸಿ ಅಲ್ಲಿ ಹರಿಯುವ ನದಿ, ರಾಯರ ಬೃಂದಾವನ, ರಥ ಇವುಗಳೊಟ್ಟಿಗೆ ಪಾತ್ರಗಳನ್ನು ಬೆಸೆದು ಅವುಗಳ ಮಾನಸಿಕ ತೊಳಲಾಟ ಚಿತ್ರಿತವಾಗುತ್ತದೆ. ಹಿಂಗೆ ಮಾಡುವಾಗ ಖಾಸನೀಸರು ಎಲ್ಲೂ ವಾಸ್ತವಿಕತೆಯ ವಿವರಗಳಿಂದ ದೂರ ಹೋಗಿದ್ದಾರೆ ಎಂಬ ಗುಮಾನಿ ನಮಗೆ ಬರುವುದೇ ಇಲ್ಲ. ಮೂರ್ತತೆಯ ನೆಲೆಯಿಂದಲೇ ಅಮೂರ್ತತೆಯನ್ನು ಕಟ್ಟಿಕೊಡುತ್ತಲೇ ಅಲ್ಲಿಂದ ಮತ್ತೆ ಮೂರ್ತತೆಯ ನೆಲೆಗೇ ಬಂದು ಮುಟ್ಟುವ ಅವರ ಕಲೆಗಾರಿಕೆ ಅನನ್ಯವಾದ್ದು.

ಈ ಮೇಲಿನ ನನ್ನ ಮನಸ್ಥಿತಿಯಲ್ಲೇ ನಮ್ಮ ರಾಮಚಂದ್ರದೇವರ 'ಮೂಗೇಲ ಮತ್ತು ಇತರ ಕತೆಗಳು'ವನ್ನು ಓದಲು ಪ್ರಾರಂಭಿಸಿದೆ. ಯಾಕೆಂದರೆ ಅವರೇ ತಮ್ಮ ಪ್ರಸ್ತಾವನೆಯಲ್ಲಿ ಹೇಳಿಕೊಂಡಿರುವಂತೆ 'ಮತ್ತೆ ನಾವು ನಮ್ಮ ಭಾರತೀಯ ಸಾಹಿತ್ಯ ಪರಂಪರೆಗೆ, ನಮ್ಮ ಪಂಚತಂತ್ರಕ್ಕೆ, ನಮ್ಮ ಬೇತಾಳ ಕತೆಗಳಿಗೆ, ಮಹಾಭಾರತಕ್ಕೆ, ರಾಮಾಯಣಕ್ಕೆ ಹಿಂತಿರುಗುವುದು ಅಲ್ಲಿಂದ ನಮ್ಮ ಸಾಹಿತ್ಯಿಕ ಪ್ರೇರಣೆಗಳನ್ನು ಪಡೆಯುವುದು ಅತ್ಯಂತ ಅಗತ್ಯವಾಗಿದೆ' ಎಂಬ ಮಾತುಗಳು ನನ್ನಲ್ಲಿ ಮೇಲಿನ ಮನಸ್ಥಿತಿಯನ್ನು ಮೂಡಿಸಿದವು.

ನಮ್ಮ ಪರಂಪರೆಯ ಆಳವನ್ನು ನಾವು ಬಗೆಯುತ್ತಲೇ ನಮ್ಮ ವರ್ತಮಾನವನ್ನು ಕಟ್ಟಿಕೊಡುವುದು ಅತ್ಯಂತ ಮುಖ್ಯವಾದ್ದರಿಂದ ರಾಮಚಂದ್ರದೇವ ಹೇಳುವುದೂ ಕೂಡ ಅಷ್ಟೇ ಮುಖ್ಯವಾಗುವುದು. ಈ ಕಾರಣದಿಂದ ಅವರ ಈ ಕಥಾ ಸಂಕಲನ ಕುತೂಹಲ ಹುಟ್ಟಿಸುತ್ತೆ.

ಈ ಕಥಾ ಸಂಕಲನದಲ್ಲಿ ಒಟ್ಟು ೮ ಕತೆಗಳಿವೆ. ಅವೆಲ್ಲವೂ ಅವರ ಮಾತಿನಂತೆಯೇ ಪರಂಪರೆಯ ಕಥಾ ತಂತ್ರಗಳನ್ನೊಳಗೊಂಡಿವೆ. ಎಲ್ಲಿಂದಲೋ ಪ್ರಾರಂಭವಾಗಿ ಎಲ್ಲಿಗೋ ಎಳೆದೊಯ್ದು ಎಲ್ಲಿಗೋ ಬಿಡುವಂತೆ ಇಲ್ಲಿನ ಅನೇಕ ಕತೆಗಳಲ್ಲಿ ಕಾಲವನ್ನು ದೇಶವನ್ನು ಬೇಕೆಂತಲೇ ಧಿಕ್ಕರಿಸಲಾಗಿದೆ. ಹಿಂಗೆ ಧಿಕ್ಕರಿಸುತ್ತಾ ಅದಕ್ಕೆ ಮೂಲಾಜೂ ಮಾಡಲಾಗಿದೆ. 'ಎಲ್ಲರ ಜೊತೆ ಕ್ರಿಯೆಯ ಮಾರ್ಗವೊ ಒಬ್ಬನ ಅಜ್ಞಾನದ ತಪಸ್ಸಿನ ಮಾರ್ಗವೊ' ಎನ್ನುವ ಅನುಮಾನವನ್ನು ಸ್ಥಾಯಿಯಾಗಿಟ್ಟುಕೊಳ್ಳುವ 'ಯಾತ್ರೆ' ಕತೆಯ ನಾಯಕ ಗೋವಿಂದ ಅಜ್ಞಾತ ತಪಸ್ಸಿನ ಮಾರ್ಗ ಹಿಡಿದು ಗಿರಿಗಹ್ವರಗಳಿಂದ ಕಷ್ಟದ ಜಾಡು ದಾಟಿ, ಸುಖದ, ವಯಸ್ಸೇ ಆಗದ, ಹಸಿವೇ ಕಾಣದ ತುದಿಯನ್ನು ಮುಟ್ಟಿ ಆ ಸ್ಥಿತಿಯಿಂದ ಹಿಂತಿರುಗಬೇಕೆನಿಸಿದರೂ ತಾನು ಆ ಹಿಂದಿನ ಆರಂಭಕ್ಕೆ ಬರಲು ಸಾಧ್ಯವಾಗದೇ ಹೋಗಬಹುದು. ವಾಸ್ತವತೆಯಿಂದ ಜಾರಿಕೊಳ್ಳುವುದನ್ನು ರೈತರ ಆಚೆನದನ್ನು ಭ್ರಮಿಸುವುದನ್ನು ಈ ಕತೆ ಬಿಚ್ಚಿಕೊಡುತ್ತದೆ. ಎಷ್ಟೋ ಸಾವಿರ ಕೋಟಿ ವರ್ಷಗಳಾದ ಮೇಲೂ ಅವನು ಹಿಂತಿರುಗುವುದು ಸಾಧ್ಯವೇ ಆಗದ್ದು ಯಾಕೆಂದರೆ ಅವನ ಮತ್ತು ಅವನಿರುವ ಪರಿಸರಕ್ಕೆ ವಯಸ್ಸೇ ಆಗದೆ ಅವರೆಲ್ಲ ಇದ್ದ ಸ್ಥಿತಿಯಲ್ಲೇ ಇದ್ದು ಬಿಡುವುದರಲ್ಲೇ ಇಡೀ ಕತೆಯ ಧ್ವನಿ ಇದೆ. ಇದನ್ನು ಹೇಳುವ ರೀತಿಗೆ ಇಲ್ಲಿ ಪರಂಪರೆಯ ಕತೆಗಾರಿಕೆಯ ತಂತ್ರ ಬಳಸಿಕೊಳ್ಳಲಾಗಿದೆ. ಇದರಂತೆಯೇ 'ಮೂಗೇಲ', 'ನಕ್ಷತ್ರ ಮುಡಿದವಳು', 'ಒಳ್ಳೆಯವನು' ಎಂಬ ಕತೆಗಳಿವೆ.

'ಮೂಗೇಲ'ದಲ್ಲಿ ಮೂಗು ಉದ್ದವಾಗಿ ವಿಲಕ್ಷಣಗೊಂಡ ಮನುಷ್ಯತ್ವಾರೋಪಿತ, ದೇವತ್ವಾರೋಪಿತವೆಂಬಂತೆ ಕಾಣುವ ಮಗುವಿನ ಬೆಳವಣಿಗೆಯ ಮೂಲಕ ಜೀವ ಮಾಂಸ ಸಂಬಂಧವನ್ನು, ಬದುಕು ವ್ಯಾಪಾರಕ್ಕೆ ತಿರುಗುವುದನ್ನು ಹೇಳುವಲ್ಲಿ ಸಾರ್ಥಕವಾಗುತ್ತದೆ. ಅವ್ವನ ಕರುಳು ಸಂಬಂಧ ಕೂಡ ಕಡಿದು ಹಾಕುವಂತೆ ಆ ಮಗುವಿನ ಮೂಗು ವ್ಯಾಪಾರೀ ಸಂಬಂಧ ಬೆಳಸಿಕೊಳ್ಳುವುದು ಈ ಕತೆಯ ವೈಶಿಷ್ಟ್ಯ.

ಆದರ್ಶವನ್ನು ಹುಗಿದು ಅದರ ಮೇಲೆ ನಾಗರೀಕತೆಯ ಗೋರಿ ಕಟ್ಟಿ ಆದರ್ಶವನ್ನು ತಡಕಾಡುವುದಕ್ಕೂ ಪುರುಸೊತ್ತಿಲ್ಲದೆ ಕನಸುಗಾರಿಕೆಯನ್ನು ಹುಚ್ಚು ಎಂದು ಭಾವಿಸುವ, ತೀರಾ matercal ಆಗುವ, ಮೇಲ್ಪದರಿನ ಬದುಕನ್ನು ನೆಚ್ಚಿರುವ ನಮ್ಮ ಇವತ್ತಿನ ಬದುಕನ್ನು 'ನಕ್ಷತ್ರ ಮುಡಿದವಳು', ಕತೆ ಮಾರ್ಮಿಕವಾಗಿ ಹೇಳುತ್ತದೆ. ಹೆಣ್ಣಿನ ಕೋಮಲತೆ ಮತ್ತು ಆದರ್ಶಗಳನ್ನು ತಳಕು ಹಾಕಿ ಆ ಕೋಮಲತೆಯ ಆದರ್ಶವನ್ನು ನಾಶಮಾಡುವವರು ಬದುಕನ್ನು ಹೇಗೆ ಸಂತೆ ಮಾಡಬಲ್ಲರೆಂಬುದನ್ನು ವಿವರಿಸುತ್ತದೆ. 'ಹೀಗಾಗಿ ಆಕಾಶದ ತಾಪತ್ರಯವಿಲ್ಲದೆ ದಿನನಿತ್ಯದ ಜೀವನದಲ್ಲಿ ಮನುಷ್ಯರು ಈಗ ಬದುಕಬಹುದು ಸಾಧ್ಯವಾಗಿದೆ' ಎಂಬ ನಿರ್ಲಿಪ್ತ ಮಾತುಗಳು ಆ ಇಡೀ ಕತೆಯ ಆಶಯವನ್ನು ಬಿಂಬಿಸುತ್ತದೆ.

ಇದೇ ತರಹದಲ್ಲಿ 'ಒಳ್ಳೆಯವನು', ಜೀವ ಪಕ್ಷಿಯ ಕತೆ' ಇವೆ. ಈ ಮೇಲಿನ ಈ ಕತೆಗಳಿಗಿಂತ ಕೊಂಚ ಭಿನ್ನವಾಗೇ ಕಾಣುವ 'ಸಂಸಾರ', 'ಕ್ರೌಂಚ' ಎಂಬ ಕತೆಗಳು ಭಾವಗೀತೆಯನ್ನೇ ಓದಿದಂತೆ ಅನ್ನಿಸುತ್ತದೆ. ಬೆಚ್ಚಗಿನ ಅನುಭವವನ್ನು ನಮಗೆ ಕೊಡುತ್ತವೆ.

ದೆಹಲಿಯಂಥ ಉರಿಯುವ ಊರಿನ ಒಂದು ಕೋಣೆಯಲ್ಲಿ ಪಾರಿವಾಳಗಳು ಸಂಸಾರ ಹೂಡುವುದೇ ಒಂದು ವಿಪರ್ಯಾಸ. ದಿಲ್ಲಿಯ ಕಾಂಕ್ರೀಟಿನೊಳಗೂ ಜೀವನೀಸೆಲೆ ಹರಿಯುವುದನ್ನು ಕಾಣಿಸುವ ಈ ಕತೆ ದಿಲ್ಲಿಯ ಮನುಷ್ಯರ ಬೇಜವಾಬ್ದಾರಿಯನ್ನು ಅಂದರೆ ಒಟ್ಟಿನ ನಾಗರೀಕ ಮಾನವನ ಬೇಜವಾಬ್ದಾರಿಯನ್ನು ಅಣಕಿಸುತ್ತದೆ. ಆರ್ದ್ರವಾದ ಏನೋ ಒಂದು ಬಂದು ನಮ್ಮ ಮನಸ್ಸನ್ನು ತಟ್ಟುತ್ತದೆ. ಹಾಗೇ 'ಕ್ರೌಂಚ' ಎಂಬ ಕತೆ ಕೂಡ ಇಂಥದೇ ಅನುಭವವನ್ನು ಕಟ್ಟಿಕೊಡುತ್ತೆ. ಕ್ರೌಂಚದ ಮುದಿ ಕ್ರೌಂಚದ ನಿಸ್ಸಹಾಯಕತೆಯ ಮೂಲಕ ಮಾನವ ಕ್ರೌರ್ಯ, ರಕ್ತಸಿಕ್ತ ಜಗತ್ತು, ಅಧಿಕಾರದ ದಾಹ, ಸಾವಿನಂಥ ನಿಗೂಢತೆಯ ಒಡಲಲ್ಲೇ ಇವೆಲ್ಲ ಮೂಡುವುದು ಒಂದು ಗಂಭೀರ ಭಾವಗೀತೆಯಂತೆ ಮನಸ್ಸು ಮುಟ್ಟುತ್ತವೆ.

ಹಿಂಗೆ ಈ ಸಂಕಲನದ ಒಟ್ಟೂ ಕತೆಗಳು ನಮ್ಮ ಪರಂಪರೆಯ ಕಥಾ ತಂತ್ರವನ್ನು ಕೂಡಿಸಿಕೊಂಡು ಕಾಲದೇಶಗಳ ಧಿಕ್ಕಾರದಲ್ಲೇ ವಾಸ್ತವವನ್ನು ಕಟ್ಟಿಕೊಡುವ ಹೊಚ್ಚ ಹೊಸ ಪ್ರಯತ್ನಗಳಾಗಿವೆ. ಆದರೆ ಈ ಕತೆಗಳನ್ನು ನಾನು ಓದುವಾಗ ನನ್ನಲ್ಲಿ ಹುಟ್ಟಿದ ಕೆಲವು ಪ್ರಶ್ನೆಗಳು ನನ್ನನ್ನು ಕಾಡಿವೆ. ವಾಸ್ತವವನ್ನು ವರ್ತಮಾನವನ್ನು ಚಿತ್ರಿಸುವಾಗ ನಾವು ಈ ಹಿಂದಿನ ತಂತ್ರವನ್ನೇ ಯಾಕೆ ಬಳಸಬೇಕು? ಅಥವಾ ಪರಂಪರೆಯ ಸಹಾಯದಿಂದ ಆಧುನಿಕವನ್ನು ಕಟ್ಟಿಕೊಡುವಾಗ ಅವು ಪರಂಪರೆಯ ತಂತ್ರದಿಂದ ಮುಂದುವರಿದ ಆಯಾಮವನ್ನು ಪಡೆದುಕೊಳ್ಳದೇ ಇದ್ದರೆ ಅದನ್ನು ಮಕ್ಕೀಕಾಮಕ್ಕೀ ಇಳಿಸಿದಂತಾಗುವುದಿಲ್ಲವೆ? ಇದೆಲ್ಲವನ್ನು ಬಿಟ್ಟು ನೇರ ಚಿತ್ರಗಳೊಂದಿಗೆ ಒಳತೋಟಿಗರ ಒಳಧ್ವನಿಯನ್ನು ಹೊರಡಿಸುತ್ತಾ ಇಡೀ ಬದುಕಿನ ಸಾರ್ಥಕತೆ ನಿರರ್ಥಕತೆಗಳನ್ನು ಬಿಂಬಿಸುವುದು ಸಾಧ್ಯವಿಲ್ಲವೆ? ಈ ಪ್ರಶ್ನೆಗಳು ನನ್ನಲ್ಲಿ ಹುಟ್ಟಿದ್ದರಿಂದಲೇ ನಾನು ನೆನಸಿಕೊಂಡದ್ದು ಖಾಸನೀಸರ 'ತಬ್ಬಲಿ'ಗಳನ್ನು. ಅಲ್ಲಿ ಅವರು ಸೂಕ್ಷ್ಮವಾಗಿ ವಾಸ್ತವಿಕತೆಯನ್ನು ವತ್ತರಿಸುವ ಮೂಲಕ ವ್ಯಕ್ತಿಯ ಅಸಮತೋಲನವನ್ನು ವೈಯಕ್ತಿಕ ವಿವರಗಳನ್ನು ಕೊಡುವುದೂ ಪರಂಪರೆಯ ಮುಂದುವರಿದ ತಂತ್ರದ ಮೂಲಕವೇ ಆದರೆ ಈ ತಂತ್ರವನ್ನೇ ಬಳಸುವುದು ನಮ್ಮ ಮೇಲ್ನೋಟಕ್ಕೆ ಕಾಣುವುದಿಲ್ಲ ಅಷ್ಟೇ. ದೇವನೂರ ಮಹಾದೇವ ಕೂಡ ಇಂಥ ಪ್ರಯತ್ನವನ್ನು 'ಕುಸುಮ ಬಾಲೆ'ಯಲ್ಲಿ ಮಾಡಿದ್ದಾರೆ. ಮಂಚದ ಆತ್ಮ ಎದ್ದು ವ್ಯಕ್ತಿಯ ಆತ್ಮದ ಜೊತೆ ಸಂಭಾಷಣೆ ನಡೆಸುವುದು, ಜೋತಮ್ಮಗಳು ಆಗಸೆ ಬಾಗಿಲಲ್ಲಿ ನೆರೆದು ಆವರವರ ಸುಖದುಃಖ ಮಾತಾಡುವುದು, ಆ ಮೂಲಕ ಕತೆ ಹೇಳುವುದು, ಇವೆಲ್ಲವೂ ಕತೆಯ ಮೈಯೊಳಗೆ ಹುಟ್ಟಿಕೊಂಡಿದೆ ಎನಿಸುವುದರಿಂದ ಅವೆಲ್ಲ ಪರಂಪರೆಯ ತಂತ್ರವನ್ನು ಮೀರಿ ತಮ್ಮದೆ ತಂತ್ರವನ್ನು ರೂಪಿಸಿಕೊಳ್ಳುತ್ತದೆ. ಈ ಮಾತುಗಳಿಂದ ರಾಮಚಂದ್ರದೇವರ ಕತೆಗಳು ಇದಕ್ಕೆ ಹೊರತಾಗಿವೆಯೆಂದೇನೂ ಅಲ್ಲ. ಆದರೆ ಅದನ್ನು ಸಾಧಿಸುವಾಗ ದೇವ ತಮ್ಮೆಲ್ಲ ಚೈತನ್ಯವನ್ನು ಧಾರೆ ಎರೆದಿಲ್ಲ ಎನಿಸುತ್ತೆ. ಫ್ಯಾಂಟಸಿ ಮತ್ತು ಮನೋವೇಗದ ನಡುವಿನ ವ್ಯತ್ಯಾಸವನ್ನು ಅವರು ಇನ್ನಷ್ಟು ದೊಡ್ಡದು ಮಾಡಿದ್ದರೆ? ಈ ಕತೆಗಳೆಲ್ಲ ಇನ್ನೂ ಸಾರ್ಥಕತೆಯತ್ತ ಹೋಗುತ್ತಿದ್ದುವೇನೋ? ಆದರೆ ಒಂದು ಮಾತು. ಇವು ಫ್ಯಾಂಟಸಿಯ ಅಪಾಯದಿಂದ, ಪಾರಾಗಿರುವುದೇ ದೇವ ಅವರ ಈ ರೀತಿಯ ಕತೆಗಾರಿಕೆಯ ಪ್ಲಸ್ ಅಂಶ. 'ಜೀವಪಕ್ಷಿ'ಯ ಕತೆಯಲ್ಲಿ ಬರುವ 'ಜೀವಪಕ್ಷಿ'ಯ ಕಲ್ಪನೆ. ಆದರ

ಹುಡುಕಾಟದೊಳಗೇ ಇಡೀ ಬದುಕಿನ ದುರಂತವನ್ನು ನೆಯ್ಯುವಾಗ ಎಳೆಎಳೆಗಳನ್ನು ಒತ್ತಾಗಿ ಕೂಡಿಸುವಲ್ಲಿ ದೇವ ಯಾಕೋ ಸೋತಿದ್ದಾರೆ. ವ್ಯಕ್ತಿಯ ತೀರಾ ಅಂತರಂಗದ ಒಳತೋಟೆಯನ್ನು ಅಮೂರ್ತ ಕಲ್ಪನೆಯ ಮೂಲಕ ವಿವರಿಸುವ ಪ್ರಯತ್ನದಲ್ಲಿ ಸೋಲಿದೆ. ಮಾತಿನ ಅಂತರಂಗಕ್ಕೆ ಇಳಿದು ಅಲ್ಲಿಂದ ಚಿಮ್ಮಿದ್ದರೆ ಈ ಕತೆ ಇನ್ನಷ್ಟು ಗಟ್ಟಿಯಾಗುತ್ತಿತ್ತೋ ಏನೋ? ಆದರೆ ಮೂಗೇಲ ಹಂಗೆನಿಸುವುದಿಲ್ಲ. ಅದರೊಳಗಿನ ಮೂಗಿನ ವಿಕಾರವೇ ಕತೆಯೊಟ್ಟಿಗೆ ಬೆಳೆಯುತ್ತಾ ಇಡೀ ವಾಸ್ತವತೆಯನ್ನು ಬಿಚ್ಚಿಡುತ್ತದೆ. ಕ್ರೌಂಚದಲ್ಲೂ ಹಂಗೇ ಕ್ರೌಂಚ ಕೇವಲ ಒಂದು ಹಕ್ಕಿಯಾಗುಳಿಯದೇ ವ್ಯಕ್ತಿಯ ನೋವಿನ, ಹತಾಶೆಯ, ಮಿತಿಯ ಒಳಧ್ವನಿಯಾಗುತ್ತದೆ.

ಹಿಂಗಾಗಿ ದೇವರ ಪ್ರಯತ್ನ ಮೆಚ್ಚುವಂಥದು. ಖಾಸನೀಸರ, ಮಹಾದೇವರ ಇಂಥ ಪ್ರಯೋಗಗಳನ್ನು ನೆನಪಿಗೆ ತರುವಷ್ಟು ಗಟ್ಟಿಯಾಗಿರುವ ದೇವ ಅವರ ಈ ಕತೆಗಳು ಮತ್ತೂ ಬೆಳೆದಲ್ಲಿ ಅವರ ಈ ಪ್ರಯತ್ನ ಕನ್ನಡ ಕತೆಗೇ ಒಂದು ಹೊಸ ತಿರುವು ಕೊಡುವ ಸಾಧ್ಯತೆಯನ್ನು ನಾನು ಅಲ್ಲಗಳೆಯಲಾರೆ. ಷಹಜಾದೆಗೆ ಕತೆ ಹೇಳಲು ಏನಾದರೂ ದಾರಿ ಸಿಕ್ಕರೂ ಸಿಕ್ಕಬಹುದು.

ಈ ಅನಿಸಿಕೆಗಳೂ ನನ್ನ ಮೊದಲ ಓದಿನವಾದ್ದರಿಂದ ಈ ಕತೆಗಳ ಬಗೆಗಿನ ಗ್ರಹಿಕೆ ಕೇವಲ ಮೇಲ್ಪದರಿನದ್ದಾಗಿದ್ದರೂ ಆಗಿರಬಹುದು [೨೬]

ಈ ಪುಸ್ತಕ ವಿಮರ್ಶೆಗೆ ಪ್ರತಿಕ್ರಿಯೆಯಾಗಿ ಸಂವಾದದಲ್ಲಿ ಎನ್. ಎಸ್. ಶ್ರೀಧರ ಮೂರ್ತಿಯವರು, ಪುಸ್ತಕ ವಿಮರ್ಶೆ ಮತ್ತು ವಿಮರ್ಶಕನ ನಿಲುವನ್ನು ಪ್ರಶ್ನಿಸಿ ವಿಶ್ಲೇಷಿಸಿದ್ದಾರೆ"[೨೭]

ಸಂವಾದ ಪತ್ರಿಕೆಯ ಕಳೆದ ಸಂಚಿಕೆಯಲ್ಲಿ (ಜುಲೈ - ಆಗಸ್ಟ್)

ಖಾಸನೀಸರ ಮೂಲಕ ಮೂಗೇಲ ಮತ್ತು ಇತರ ಕತೆಗಳನ್ನು ಪರಿಶೀಲಿಸಿರುವ ಶ್ರೀತಾಳ್ಯರವರು 'ವಾಸ್ತವವನ್ನು ವರ್ತಮಾನವನ್ನು ಚಿತ್ರಿಸುವಾಗ ನಾವು ಈ ಹಿಂದಿನ ತಂತ್ರವನ್ನೇ ಯಾಕೆ ಬಳಸಬೇಕು........" ಇತ್ಯಾದಿ ಕುತೂಹಲಕಾರಕ ಪ್ರಶ್ನೆಗಳನ್ನು ಎತ್ತಿದ್ದಾರೆ. ಈ ಅಭಿಪ್ರಾಯದಲ್ಲಿ ಪ್ರಸ್ತುತ ಸಂಕಲನದ 'ತಂತ್ರ' ಅದರ ಸೋಲಿಗೆ ಕಾರಣ ಎಂಬ ಅಭಿಪ್ರಾಯಕ್ಕೆ ಬಂದಂತೆ ತೋರುತ್ತದೆ. ಆದರೆ ಈ ನಿಲುವನ್ನು ಅವರು ನಿರ್ಣಾಯಾತ್ಮಕ ಪ್ರಕಟಿಸಿಲ್ಲ. ವಿಮರ್ಶೆಯ ಸಂಕೀರ್ಣ ಹಂತಗಳಲ್ಲೆಲ್ಲ 'ಯಾಕೋ ಸೋತಿದ್ದಾರೆ' ಎಂಬ ನಿಲುವಿಗೇ ಬದ್ಧರಾಗುತ್ತ ಸಾಗಿದ್ದಾರೆ. ಹೀಗೆ ಅವರು ಪ್ರಕಟಿಸಿರುವ 'ದ್ವಂದ್ವ'ಗಳು ನನ್ನಲ್ಲಿ ಅನೇಕ ಪ್ರಶ್ನೆಗಳನ್ನೆಬ್ಬಿಸಿದವು. ಅವನ್ನು ಈ ಕೆಳಗಿನಂತೆ ದಾಖಲಿಸಿದ್ದೇನೆ.

ಕಥೆ ಓದುಗನನ್ನು ತಲುಪುವಲ್ಲಿ ಎದುರಿಸಬೇಕಾದ ಅತಿ ಮುಖ್ಯ ಸಮಸ್ಯೆಗಳಲ್ಲಿ 'ಸಂವಹನ' ಪ್ರಮುಖವಾದುದು ಎಂದು ಐ.ಎ. ರಿಚರ್ಡ್ಸ್ ಗುರುತಿಸುತ್ತಾನೆ. ಏಕೆಂದರೆ ಕಥೆಯ ಗ್ರಹಿಕೆ ಓದುಗನ ಅನುಭವದ ಮಿತಿಗೆ ಒಳಪಟ್ಟಿರುತ್ತದೆ. ಆದ್ದರಿಂದ ಅವನು ಗುರುತಿಸುವ ಅಂಶಗಳು ಕಥೆಗಾರನ ಆಶಯದಿಂದ ಭಿನ್ನವಾಗಿರಬಹುದು. ಈ ತೊಂದರೆಯನ್ನು ನಿವಾರಿಸುವ ಅಂಶಗಳಲ್ಲಿ 'ತಂತ್ರ' ಪ್ರಧಾನವಾದದ್ದು. ಇದು ಕಥೆಯ ಒಳಪದರದ ಅಂಶ ಎಂದು ನಾನು ತಿಳಿದಿದ್ದೇನೆ. ಏಕೆಂದರೆ ಕಥೆ ಕಟ್ಟಿಕೊಡುವ ಶಿಲ್ಪದಿಂದ 'ತಂತ್ರ'ವನ್ನು ಕಿತ್ತಿಡಲಾಗದ ಸ್ಥಿತಿಯಲ್ಲಿಯೆ 'ಕಲಾತ್ಮಕತೆ' ಪ್ರಕಟವಾಗುವುದು. 'ಶಬ್ದಾರ್ಥ ಸಹಿತೌ ಕಾವ್ಯ' ಎಂದು ನಮ್ಮ ಪುರಾತನ ಕಾವ್ಯ ಮೀಮಾಂಸಕ ಭಾಮಹ ಗುರುತಿಸಿದ್ದು ಇದನ್ನೇ. ಲೇಖಕನ 'ದರ್ಶನ' ಯಾವ ಸೂಕ್ಷ್ಮ ಸ್ತರಗಳಲ್ಲಿತ್ತೊ ಅದೇ ಸ್ತರದಲ್ಲಿ ಓದುಗನ ಗ್ರಹಿಕೆಯನ್ನು ಮೂಡಿಸುವಲ್ಲಿ ಕತೆಯ ಯಶಸ್ಸು ಅಡಗಿದೆ. ಖಾಸಗಿ ಸಂವೇದನೆಯನ್ನ ದಾಖಲಿಸುವ ಕತೆಗಳೂ ಗೆಲ್ಲುವುದು ತಂತ್ರದಲ್ಲಿಯೇ ಎಂಬುದು ನನ್ನ ನಂಬಿಕೆ. ಈ ಹಿನ್ನೆಲೆಯಲ್ಲಿ ಶ್ರೀ ದೇವರು ಬಳಸಿದ 'ತಂತ್ರ' ಅನಿವಾರ್ಯವಾಗುತ್ತದೆ ಎಂದು ನಾನು ತಿಳಿದಿದ್ದೇನೆ. ಶ್ರೀ ತಾಳ್ಯ ಅವರು, ಹೇಳುವಂತೆ 'ನೇರಚಿತ್ರ'ದಿಂದಲೇ ಒಳಧ್ವನಿ ಹೊರಡಿಸಲು ಪ್ರಯತ್ನಿಸಿದ 'ಪರ್ವ' ವಿಫಲವಾಗಿದ್ದು ಬಹುಶಃ ಈ ಹಂತದಲ್ಲಿಯೆ. ಏಕೆಂದರೆ ಭೈರಪ್ಪನವರು ಬಳಸುವ ನವ್ಯ ದಾಟಿಯ 'ತಂತ್ರ' ಕೊನೆಗೂ 'ಸಂವಿದಾನ'ಕ್ಕೆ ಹೊಂದಿಕೊಳ್ಳದ ಘಟಕವಾಗಿ ಉಳಿಯುತ್ತದೆ.

ವ್ಯಕ್ತಿಯ ತೀರಾ ಅಂತರಂಗದ ಒಳತೋಟಗಳನ್ನು ಅಮೂರ್ತ ಕಲ್ಪನೆಯ ಮೂಲಕ ವಿವರಿಸುವಲ್ಲಿ" ದೇವರು ಸೋತಿದ್ದಾರೆಂದು 'ಜೀವಪಕ್ಷಿ'ಯನ್ನು ಉಲ್ಲೇಖಿಸುತ್ತ ತಾಳ್ಯರು ಹೇಳುತ್ತಾರೆ. ಇಲ್ಲಿ ಅವರು ಕತೆಯ ಆಶಯವನ್ನು ವಾಸ್ತವವನ್ನು ಮೀರುವ ಕನಸುಗಾರಿಕೆ ಇತ್ಯಾದಿ ಮಾನವೀಯ ತುಡಿತ (Impulse)ವಾಗಿ ಗುರುತಿಸಿದಂತೆ ತೋರುತ್ತದೆ. ಆದರೆ ಕತೆ ವರ್ತಮಾನದ ಸಾಧ್ಯತೆಗಳಿಗೆ ಮುಕ್ತವಾಗುವ ಜೊತೆಗೆ ಪರಂಪರೆಯಿಂದ ಪಡೆದುದನ್ನು ಅರ್ಥಪೂರ್ಣವಾಗಿ ಕರಗಿಸಿಕೊಂಡಿರುವಂತೆ ನನಗೆ ಭಾಸವಾಯಿತು.

ಈ ಮೇಲಿನ 'ಪುಸ್ತಕ ವಿಮರ್ಶೆ' ಮತ್ತು ಅದರ ಪ್ರತಿಕ್ರಿಯೆಯನ್ನು ಗಮನಿಸಿದರೆ, ಪುಸ್ತಕ ವಿಮರ್ಶೆಯಲ್ಲಿ 'ತೌಲನಿಕವಾದ ಚರ್ಚೆಯಿದೆ, ಹಾಗೆಯೇ ಒಬ್ಬ ಲೇಖಕನ ಮೂಲಕ ಇನ್ನೊಬ್ಬ ಲೇಖಕನ ಕೃತಿಯನ್ನು ವಿಶ್ಲೇಷಿಸಿರುವುದು ಹೊಸ ಮಾದರಿಯೆನ್ನಬಹುದು. ಇದರಿಂದ ಎರಡರ ನಡುವಿನ ಸ್ವಾಮ್ಯ ಮತ್ತು ವ್ಯತ್ಯಾಸಗಳನ್ನು ಹೇಳುತ್ತಲೇ ಕೃತಿ ಭಿನ್ನವಾಗಿ ನಿಲ್ಲುವ ರೀತಿಯನ್ನು ಗುರುತಿಸಲು ಇಂಥ ಮಾದರಿಗಳಿಂದ ಸಾಧ್ಯವಾಗುತ್ತದೆ. ಇಲ್ಲಿ ಹೋಲಿಸುವ ಲೇಖಕನ ಒಂದು ಕತೆಯ ವಿಶ್ಲೇಷಣೆ ಮಾಡಿ ತೂಗುತ್ತಲೇ ಪ್ರಸ್ತುತ ಕೃತಿಯ ವಿಮರ್ಶೆಗೆ ತೊಡಗಿಕೊಂಡಿದ್ದಾರೆ. ಇದರಿಂದ ಪ್ರಸ್ತುತ ಕೃತಿಯ ಅಂಶಗಳನ್ನು ಅದರ ಅಡಿಯಲ್ಲಿ ಗುರುತಿಸುವ ಯತ್ನವು ನಡೆದಿದೆ. ಇಲ್ಲಿ ಕೃತಿಯ ಮೌಲ್ಯ ನಿರ್ಧರಿಸಿ ಹೇಳಿದ್ದಲ್ಲದೆ ಆ ಕೃತಿಯಿಂದ ಕೆಲವು ಪ್ರಶ್ನೆಗಳನ್ನು ಎತ್ತಿ ಅವುಗಳಲ್ಲಿ ಕೃತಿ ಪೇಲವತೆಯನ್ನು ಕಾಣುವ ರೀತಿಯನ್ನು ಚರ್ಚಿಸುತ್ತಾರೆ. ಇದರಿಂದ 'ಕೃತಿ ವಿಮರ್ಶೆ'ಗೆ ಹೊಸದೊಂದು ಆಯಾಮ ದೊರತಂತಾಗಿದೆ. ಇಷ್ಟೆಲ್ಲ ಒಳ ವಿವರಗಳನ್ನು ಕೊಟ್ಟಂತಹ ವಿಮರ್ಶಕರು ಅಂತಿಮವಾಗಿ ಈ 'ಅನಿಸಿಕೆಗಳು ಮೊದಲ ಓದಿನವು' ಅಥವಾ 'ಮೇಲ್ಪದರಿನವು' ಎಂದು ಹೇಳಿ ವಿನಯ ಪ್ರದರ್ಶಿಸಿದ್ದಾರೆ. ಇದು ವಿಮರ್ಶಕನ ವಿನಯವೆಂದೂ ಹೇಳಿದರೂ, ಒಬ್ಬ ಕೃತಿ ವಿಮರ್ಶಕ ಈ ರೀತಿಯ ವಿನಯ ಪ್ರಕಟಣೆಯಲ್ಲಿ ಅವನ ಆಲೋಚನೆಗಳಿಗೆ ಎಲ್ಲಿಯೋ ತಡೆಯೊಡ್ಡುತ್ತಿದೆ ಎನಿಸುತ್ತದೆ. ಹೀಗೆ ನಿಯಂತ್ರಿಸಬಹುದಾದ ಈ ರೀತಿಯ ಕೃತಿ ವಿಮರ್ಶೆಗಳಿಗೆ ತಾನು ಆ ಕೃತಿ ಬಗೆಗೆ ಹೇಳಬಹುದಾದ ಎಲ್ಲ ವಿಚಾರಗಳನ್ನು ಹೇಳಿದರೂ ಅದು ಅಪೂರ್ಣವೆಂದು ಸ್ವತಃ ಕೃತಿ ವಿಮರ್ಶಕರಿಗೆ ಅನಿಸಿದೆ. ಹೀಗೆ ಅನಿಸುವುದು 'ಮೊದಲ ಓದು', 'ಆತ್ಮೀಯರ ಓದು' ಇನ್ನಿತರ ಯಾವುದೇ ಸಂದರ್ಭಗಳಲ್ಲಿಯೇ. ಆದರೂ ಕೃತಿ ಬಗೆಗೆ ಅಂತಿಮ ನಿರ್ಣಯ ತೆಗೆದುಕೊಳ್ಳುವುದು, 'ಇದಮಿತ್ಥಂ' ಎಂದು ಹೇಳುವ ಯಾವ ಪುರೋಗಾಮಿ ಮನಸ್ಸು ಪುಸ್ತಕ ವಿಮರ್ಶಕನ ಮನಸ್ಥಿತಿಯಲ್ಲಿ ಇರಬೇಕಾಗಿಲ್ಲ ಎಂಬುದನ್ನು ಈ ರೀತಿಯ ಕೃತಿ ವಿಮರ್ಶಕರ ವಿನಯಗಳು ಪ್ರಕಟಿಸುತ್ತವೆ.

ಈ ಕೃತಿ ವಿಮರ್ಶೆಗೆ ಬಂದಿರುವ ಪ್ರತಿಕ್ರಿಯೆಯಲ್ಲಿ 'ಕೃತಿ ವಿಮರ್ಶಕರು ಎಂಥ ಸಂದರ್ಭಗಳಲ್ಲಿ ನುಣುಚಿಕೊಳ್ಳುತ್ತಾರೆ ಎಂಬುದನ್ನು 'ವಿಮರ್ಶೆಯ ಸಂಕೀರ್ಣ ಹಂತಗಳಲ್ಲಿ ಯಾಕೋ ಸೋತಿದ್ದಾರೆ. ಕೃತಿ ವಿಮರ್ಶಕರ ಕೃತಿ ಸೋತಿರುವ ನಿಲುವನ್ನು ಪ್ರತಿಕ್ರಿಯೆಕಾರರು ಎತ್ತಿ ಪ್ರಶ್ನಿಸಿ ಅದಕ್ಕೆ ಸಮರ್ಥವಾದ ಉತ್ತರವನ್ನು ನೀಡಿದ್ದಾರೆ.

ಈ ಮೇಲಿನ ಮಾದರಿಗಳು ಪರಸ್ಪರ ಬೌದ್ಧಿಕ ಆಲೋಚನೆಯನ್ನು ಬೆಳಸುತ್ತವೆ. ಕೃತಿಯ ಮೂಲಕ ಅದರ ಒಳಗಿನ ವಿವರಗಳ ಮೂಲಕವೇ ಹೊರ ಜಗತ್ತಿಗೆ ಸ್ಪಂದಿಸುವ ಚಿಂತನೆಯನ್ನು ಇಂಥ ಪುಸ್ತಕ ವಿಮರ್ಶೆಗಳು ಒಳಗೊಂಡಿರುತ್ತವೆ. ಇಂಥ ಮಾದರಿಗಳು ಓದುಗರನ್ನು ಒಳಗೊಂಡಂತೆ ಲೇಖಕರನ್ನು

ಇವೆರಡನ್ನು ಕುರಿತು ಅವರು ಆಲೋಚಿಸಿ ಕೃತಿ ವಿಮರ್ಶೆಗೆ ಕೈಹಾಕುತ್ತಾರೆ. ಆದುದರಿಂದ ಈ ಸಾಹಿತ್ಯದ ಘಟ್ಟಗಳಲ್ಲಿ ಕಾಲಕಾಲಕ್ಕೆ ಕೃತಿ ವಿಮರ್ಶೆಗಳು ತೀರ ಬಿಗಿ ಎನಿಸುವಂಥ ರೀತಿಯಲ್ಲಿಯೂ, ಇಲ್ಲ ತೀರ ಸಪ್ಪೆ ಎನಿಸುವ ರೀತಿಯಲ್ಲಿಯೂ ಬೆಳೆದು ಬಂದಿವೆ. ಆದರೆ ಒಂದು ಒಳ್ಳೆಯ ಸಾಧ್ಯತೆಯೆಂದರೆ ಈ ಎರಡೂ ಮಾದರಿಗಳು ಪುಸ್ತಕ ವಿಮರ್ಶೆಯನ್ನಂತೂ ಬೆಳಸಿವೆ. ಇಂಥ ಮಾದರಿಗಳಿಂದ ಚಾರಿತ್ರಿಕವಾಗಿ ಪುಸ್ತಕ ವಿಮರ್ಶೆಗಳು ವಿಮರ್ಶಾ ವಲಯದಲ್ಲಿ ಮಹತ್ವವನ್ನು ಪಡೆಯುತ್ತಿರುವುದಕ್ಕೆ ಕಾರಣವಾಗಿದೆ.

ಕೊನೆ ಟಿಪ್ಪಣಿಗಳು:

೧. ಪ್ರಗತಿಶೀಲತೆ ಮುನ್ನುಡಿ ಮಾತುಗಳು.
೨. ಸಾರ್ಥಕ (ನೂರಾರು ವಿಮರ್ಶೆಗಳು ಲೇಖನ).
೩. ವಿಮರ್ಶೆ ಪು. ೪.
೪. ಅದೇ ಪು. ೩.
೫. ಕಾವ್ಯವಿಹಾರ ಪು. ೨೫.
೬. ವಿಮರ್ಶೆ. ಪು. ೧೦.
೭. ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ, ವಿ.ಸೀ. ಪು. ೨೧.
೮. ಸಂಪುಟ ೧೪, ಸಂಚಿಕೆ ೧.
೯. ವಾಗ್ಭೂಷಣ, ಆಗಸ್ಟ್ ೧೯೧೯, ಸಂಚಿಕೆ. ೫.
೧೦. ಸಾಹಿತ್ಯ ವಿಮರ್ಶೆ, ಆರು ಉಪನ್ಯಾಸಗಳು, ಪು. ೧೨೫.
೧೧. ನೀಲಾಂಜನ, ಪು. ೬೩.
೧೨. ಪ್ರಬುದ್ಧ ಕರ್ನಾಟಕ, ೧೯೪೬.
೧೩. ಶತಮಾನ ಕನ್ನಡ ಸಾಹಿತ್ಯ, ಪು. ೨೫೬.
೧೪. ಸಾಕ್ಷಿ ಶರತ್ ಸಂಚಿಕೆ, ೧೯೭೧, ಪು. ೧೧೨.
೧೫. ನೀಲಾಂಜನ, ಪು. ೬೦
೧೬. ಸಂಕ್ರಮಣ ೩೨, ೧೯೯೯, ಅಕ್ಟೋಬರ್.
೧೭. ಅನ್ವೇಷಣೆ ೧೧-೧೨, ಅಕ್ಟೋಬರ್, ೧೯೮೫
೧೮. ಸಾಕ್ಷಿ ಮೊದಲ ಸಂಚಿಕೆ.
೧೯. ಅಮೃತ ಮತ್ತು ಗರುಡ, ಪು. ೭೫.
೨೦. ಪುಸ್ತಕ ಪುರವಣಿ ೪-೧೦, ಅಕ್ಟೋಬರ್ ೧೯೮೦.
೨೧. ಸಾಹಿತ್ಯ ವಿಮರ್ಶೆ, ೧೯೮೩. ಪು.
೨೨. ಸಮಾಜವಾದಿ ವಾಸ್ತವ, ಆರ್. ವಿ. ಭಂಡಾರಿ, ಪು. ೬.
೨೩. ಸ್ತ್ರೀವಾದಿ ವಿಮರ್ಶೆ, ಸಂಪಾದಕರ ನುಡಿ.
೨೪. ಸಂಕ್ರಮಣ ೧, ೨೨೨, ಅಕ್ಟೋಬರ್ ೨೦೦೦, ಪು. ೬೧.
೨೫. ಅನ್ವೇಷಣೆ, ೧೩-೧೪, ೧೯೮೫.
೨೬. ಸಂವಾದ ಸಂಚಿಕೆ ೬, ೧೯೮೭.
೨೭. ಸಂವಾದ ಸಂಚಿಕೆ ೬, ೧೯೮೭.
೨೮. ಅನ್ವೇಷಣೆ ಸಂಚಿಕೆ ೩೭, ೧೯೮೯.

ಅಧ್ಯಾಯ - ೪

ಪುಸ್ತಕ ವಿಮರ್ಶೆಯನ್ನು ರೂಪಿಸುವ ಕೆಲವು ಪ್ರಮುಖ ಸಂಗತಿಗಳು

ಪುಸ್ತಕ ವಿಮರ್ಶೆಯನ್ನು ರೂಪಿಸುವ ಕೆಲವು ಪ್ರಮುಖ ಸಂಗತಿಗಳು

ಪುಸ್ತಕ ವಿಮರ್ಶೆಯ ಬೆಳವಣಿಗೆಯೆಂದರೆ, ಅದು ವಿಮರ್ಶೆಯ ಬೆಳವಣಿಗೆಯೂ ಆಗಿದೆ. ಹಂತ ಹಂತಗಳನ್ನು ದಾಟಿ ಪುಸ್ತಕ ವಿಮರ್ಶೆಯಿಂದ ವಿಮರ್ಶೆಗೆ ಒಂದು ಸ್ವರೂಪ ದೊರೆಯುತ್ತಿದೆ. ಮೊದಲು ಅವು ವೈಯಕ್ತಿಕ ಅಭಿಪ್ರಾಯಗಳಾಗಿದ್ದು ನಂತರ ಲೇಖನ ವಿಮರ್ಶೆ ಹೀಗೆ ಬೆಳೆಯುತ್ತಾ ಒಟ್ಟಾರೆ ಕೃತಿಯ ಅರ್ಥವಿವರಗಳನ್ನು ಒಳಗೊಳ್ಳುತ್ತ ಅಂತಿಮವಾಗಿ ಕೃತಿಗೆ ಒಂದು ಸ್ಥಾನವನ್ನು ದೊರಕಿಸಿಕೊಡುತ್ತದೆ. ಒಂದು ಕೃತಿಯ ಬಗ್ಗೆ ಬಂದ ವಿಮರ್ಶೆ, ಚರ್ಚೆ, ಕೃತಿ ಬಂದ ಕಾಲಕ್ಕೆ ಸೀಮಿತವಾದರೆ ಕೃತಿಯಲ್ಲಿನ ವಿವರಗಳು ಅರ್ಥಸ್ಫುರಣಗಳು ಕೃತಿಯನ್ನು ಹಿಡಿದಿರುವಲ್ಲಿ ಸಾರ್ಥಕತೆಯನ್ನು ಪಡೆದಿರುವುದಿಲ್ಲ, ಆದರೆ ಕೃತಿ ಎಲ್ಲ ಕಾಲಕ್ಕೂ ಚರ್ಚೆಗೊಳಗಾಗುತ್ತಿರಬೇಕು. ಹಾಗಾದಾಗ ಮಾತ್ರ ಕೃತಿ ಜೀವಂತವಾಗಿರಲು ಸಾಧ್ಯ, ಕೃತಿಗೂ ಮನ್ನಣೆ ಸಿಗಲು ಸಾಧ್ಯ, ವಿಮರ್ಶಕರಿಗೂ ಕೂಡ.

ಜಿ. ಎಸ್. ಶಿವರುದ್ರಪ್ಪನವರು ಪುಸ್ತಕ ವಿಮರ್ಶೆ ಬಗ್ಗೆ ಹೀಗೆ ಹೇಳುತ್ತಾರೆ.

ಈಗ ದೈನಂದಿನ ಪತ್ರಿಕಾ ವಿಮರ್ಶೆಯಿಂದ ಹಿಡಿದು ಕೃತಿಯೊಂದನ್ನು ಕುರಿತು ಉದ್ಗ್ರಂಥದ ತನಕ ಇದರ ಹರಹನ್ನು ಗುರುತಿಸಬಹುದು, ದಿನಪತ್ರಿಕೆ, ವಾರ ಪತ್ರಿಕೆ, ಮಾಸಪತ್ರಿಕೆ ಇತ್ಯಾದಿಗಳಲ್ಲಿ ಕೃತಿ ವಿಮರ್ಶೆಗೆ ಒಂದಿಷ್ಟು ಸ್ಥಳ ಮೀಸಲಾಗಿರುತ್ತದೆ. ಬಹುಬೇಗ ವಿಸ್ತಾರವಾದ ಜನ ಸಮೂಹಕ್ಕೆ ಸುದ್ದಿಗಳನ್ನು ಕೊಂಡೊಯ್ಯುವ ಈ ಪತ್ರಿಕೆಗಳಲ್ಲಿ, ಪುಸ್ತಕಗಳನ್ನು ಕುರಿತ ವಿಮರ್ಶೆಯು ವಾರ್ತೆಯ ಅಂಗವಾಗಿ ಜನತೆಯನ್ನು ತಲುಪುತ್ತದೆ. ಇದಲ್ಲದೆ, ಕಲೆ ಸಾಹಿತ್ಯ ವಿಮರ್ಶೆಗೆಂದೇ ಮೀಸಲಾದ ಕೆಲವು ಪತ್ರಿಕೆಗಳೂ ಉಂಟು. ಅವುಗಳ ಗಮನ ಕಾವ್ಯ- ವಿಮರ್ಶೆಗಳಲ್ಲಿ ವಿಶೇಷ ಆಸಕ್ತಿಯುಳ್ಳ ಪರಿಮಿತ ಓದುಗರ ವಲಯದ ಕಡೆಗೆ. ಪತ್ರಿಕೆಗಳಲ್ಲಿ ಸಾಮಾನ್ಯವಾಗಿ ವಾರ, ಮಾಸಿಕ, ಇತ್ಯಾದಿಗಳಲ್ಲಿ ಬರುವ ಗ್ರಂಥ ಪ್ರಶಂಸೆ (Blurb) ಗ್ರಂಥಾವಲೋಕನ (Review), ಇವುಗಳ ಉದ್ದೇಶ ಇಡೀ ಪುಸ್ತಕದ ಸಮಗ್ರ ವಿಮರ್ಶೆ ಹಾಗೂ ಮೌಲ್ಯ ನಿರ್ಣಯ ಅಲ್ಲ, ಅದಕ್ಕೆ ಅಲ್ಲಿ ಸ್ಥಳಾವಕಾಶವೂ ಇಲ್ಲ ಅವುಗಳ ಉದ್ದೇಶ ಇಂಥ ಕೆಲವು ಪುಸ್ತಕಗಳು ಈಗ ತಾನೆ ಬಂದಿವೆ, ಅವುಗಳ ಸಾರ ಇಷ್ಟು, ಅವು ಓದಲು ಅರ್ಹವಾಗಿವೆ, ಅಥವಾ ಇಲ್ಲ, ಎನ್ನುವ ವಿಚಾರಗಳನ್ನು ಪ್ರಚಾರಪಡಿಸುವುದು. ಅದಕ್ಕೆ ತಕ್ಕ ಹಾಗೆ ವಿಮರ್ಶೆ ಮಾಡತಕ್ಕವರು ಓದುಗರಲ್ಲಿ ಕುತೂಹಲ, ಆಸಕ್ತಿಗಳನ್ನು ಉಂಟುಮಾಡುವಷ್ಟರ ಮಟ್ಟಿಗೆ ಆ ಪುಸ್ತಕದ ಸಾರವನ್ನೋ ಭಾಗವನ್ನೋ ಪಂಕ್ತಿಗಳನ್ನೋ ಎತ್ತಿ ತೋರಿಸುತ್ತಾರೆ. ಇಂಥ ಪತ್ರಿಕಾ ವಿಮರ್ಶೆಯಲ್ಲಿ, ಅತ್ಯಂತ ಸಮರ್ಥರಾದ ವಿಮರ್ಶಕರು ದೀರ್ಘವಾದ ಆಲೋಚನೆಯಿಂದ ಅದರ ಬೆಲೆಯನ್ನು ಅಳೆದು ತೂಗಿ ಅದರ ಸಾರವನ್ನು ಸಂಗ್ರಹವಾಗಿ

ರೂಪಿಸಿದರೆ ಅದು ಸಾರ್ಥಕವಾದ ವಿಮರ್ಶೆಯೂ ಆಗಬಹುದು. ಆದರೆ ಅಂಥವರೆಷ್ಟು ಮಂದಿ ನಮ್ಮಲ್ಲಿ ಪತ್ರಿಕೆಗಳಿಗೆ ಬರೆಯುತ್ತಾರೆ. ಅಥವಾ ಬರೆಯುವಂತೆ ಪತ್ರಿಕೆಯವರು ಕೇಳಿಕೊಳ್ಳುತ್ತಾರೆ, ಎಷ್ಟೋ ಪತ್ರಿಕೆಗಳಲ್ಲಿ ಬರುವ ಈ ವಿಮರ್ಶೆಗಳನ್ನು ನೋಡಿದರೆ ಸಂತೆಯ ಹೊತ್ತಿಗೆ ನೇಯ್ದ ಮೂರು ಮೊಳಗಳಾಗಿ ತೋರುವುದು ಸ್ವಾಭಾವಿಕ ಹಾಗೂ ಅನಿವಾರ್ಯ[7].

ಈ ಮೇಲಿನ ಉಲ್ಲೇಖದಲ್ಲಿ ಜಿ. ಎಸ್. ಶಿವರುದ್ರಪ್ಪನವರು ಪುಸ್ತಕ ವಿಮರ್ಶೆ ಬಗೆಗಿನ ಇತರ ಆಯಾಮದ ಕಡೆಗೆ ಚಿಂತನೆ ಹರಿಸುತ್ತಿದ್ದಾರೆ. ಅವರು ಹೇಳುವಂತೆ 'ಪುಸ್ತಕ ವಿಮರ್ಶೆ' ದೈನಂದಿನ ಪತ್ರಿಕೆಯಿಂದ ಉದ್ಗ್ರಂಥದವರೆಗೂ ಹರಡಿದೆ ಎಂದು ಅದರ ವಿಸ್ತೃತ ವ್ಯಾಪ್ತಿಯನ್ನು ಹೇಳುತ್ತಾರೆ. ಆದರೆ ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆಯು ವಾರ್ತೆಯ ಅಂಗವಾಗಿ ಕೆಲಸ ಮಾಡುತ್ತದೆ ಎಂದು ನಿರ್ವಚಿಸುತ್ತಾರೆ. ಇದು ಇಲ್ಲಿ ಪ್ರಶ್ನಾರ್ಹವೆನಿಸುತ್ತದೆ. ಪುಸ್ತಕ ವಿಮರ್ಶೆಯು ಸುದ್ದಿಯ ಒಂದು ಭಾಗದಂತೆ ಪ್ರಕಟವಾದರೆ ಸುದ್ದಿಯ ಎಲ್ಲ ಲಕ್ಷಣಗಳನ್ನು ಪುಸ್ತಕ ವಿಮರ್ಶೆಗೆ ಆರೋಪಿಸಿದಂತಾಗುತ್ತದೆ. ಸುದ್ದಿ ಅಥವಾ ವಾರ್ತೆಗೆ ಪುಸ್ತಕ ವಿಮರ್ಶೆಯಂತೆ ಒಂದು ತುರ್ತು ಮತ್ತು ಮಿತಿ ಎರಡು ಇರುತ್ತದೆ. ಆದರೆ ಸುದ್ದಿ ಸತ್ಯಾಂಶ ಮತ್ತು ನಿಖರತೆಯ ಕಡೆಗೆ ಹೆಚ್ಚು ಗಮನ ವಹಿಸುತ್ತದೆ. ಆದರೆ ಪುಸ್ತಕ ವಿಮರ್ಶೆಯಲ್ಲಿ ಸತ್ಯಾಂಶ ಮತ್ತು ಕೃತಿಯ ಬಗೆಗಿನ ನಿಖರತೆಯನ್ನು ಹುಡುಕುವುದು ಕಷ್ಟವಾಗುತ್ತದೆ. ಇವೆರಡು ಕಾರ್ಯಗಳಲ್ಲಿ ಜರೂರಾದರೂ, ತಾವು ಪಡೆದುಕೊಳ್ಳುವ ಆಯಾಮದಲ್ಲಿ ಭಿನ್ನವಾಗಿವೆ. ಹಾಗಾಗಿ ಪುಸ್ತಕ ವಿಮರ್ಶೆಯನ್ನು ವಾರ್ತೆಯ ಒಂದು ಭಾಗವಾಗಿ ನೋಡುವುದು ಅತೀ ಸರಳೀಕರಿಸಿದಂತೆ ಕಾಣುತ್ತದೆ. ಆದರೆ ನಂತರ ಚರ್ಚೆಯಲ್ಲಿ ಜಿ.ಎಸ್. ಶಿವರುದ್ರಪ್ಪನವರು ನೇರವಾಗಿ ಪುಸ್ತಕ ವಿಮರ್ಶೆಯ ಇತಿ-ಮಿತಿಗಳ ಬಗ್ಗೆ ಮಾತಾಡುತ್ತಾರೆ. ಪುಸ್ತಕ ವಿಮರ್ಶೆ ತನ್ನ ಮಿತಿಗಳಿಂದ ತಾನೇ ನಿರ್ಮಿಸಿಕೊಂಡ ಪರಿಧಿಯಲ್ಲಿಯೇ ಇರುವ ಅನಿವಾರ್ಯ ವಾಸ್ತವ ಸ್ಥಿತಿಯನ್ನು ಹೇಳುತ್ತಾರೆ. ಇದರಾಚೆಗೂ ಮೀರಿ ಬೆಳೆಯಲೂ ಪೂರಕವಾದ ವಾತಾವರಣದ ಬಗ್ಗೆ ವಿವರಿಸುತ್ತಾರೆ. ಅತಿ ತುರ್ತು, ಒತ್ತಡಗಳು ಇಡೀ ಪುಸ್ತಕ ವಿಮರ್ಶೆಯನ್ನು ನಿಯಂತ್ರಿಸುತ್ತವೆ ಎಂದು, ಅವು ಅವಸರದ ಹೆರಿಗೆಗಳಾಗಿ 'ಸಂತೆಯ ಹೊತ್ತಿಗೆ ನೇಯ್ದ ಮೂರು ಮೊಳಗಳಾಗಿ ತೋರುವುದು ಸ್ವಾಭಾವಿಕವೆಂದು ಸ್ಪಷ್ಟಪಡಿಸುತ್ತಾರೆ. ಇದು ಪುಸ್ತಕ ವಿಮರ್ಶೆಗೆ ಇರುವ ಬಿಕ್ಕಟ್ಟು, ಇಂಥ ಸ್ಥಿತಿ ಬದಲಾಗಬೇಕೆಂದು ಪ್ರಯತ್ನ ಪೂರ್ವಕವಾಗಿ ಸೂಚಿಸುತ್ತಾರೆ.

ಇಲ್ಲಿ ಪುಸ್ತಕ ವಿಮರ್ಶೆಗೆ ಇರುವ ಬಿಕ್ಕಟ್ಟು, ಪುಸ್ತಕ ವಿಮರ್ಶೆ ವಿಮರ್ಶೆಯಾಗಿಯೇ ರೂಪುಗೊಳ್ಳಬಹುದಾದ ಸಾಧ್ಯತೆಯನ್ನು ಜಿ. ಎಸ್. ಶಿವರುದ್ರಪ್ಪನವರು ಗುರುತಿಸಿದ್ದಾರೆ. ಅಲ್ಲದೆ ಪುಸ್ತಕ ವಿಮರ್ಶಕರಿಗೆ ಕೃತಿ ವಿಮರ್ಶಿಸಲು ಇರುವ ತೊಡಕನ್ನು ಕುರಿತು ವಿಶ್ಲೇಷಿಸುತ್ತಾರೆ. ಇಲ್ಲಿನ ಮಾತುಗಳನ್ನು ಗಮನಿಸಿದರೆ ಹಿಂದೆ ಪುಸ್ತಕ ವಿಮರ್ಶೆಯನ್ನು ವಿಮರ್ಶೆಯ ಹೆಸರಿನಲ್ಲಿ ಗುರುತಿಸದೆ 'ಗ್ರಂಥ ಪ್ರಶಂಸೆ', 'ಗ್ರಂಥಾವಲೋಕನ' ಎಂದು ಹೆಸರಿಸಲಾಗಿದೆ. 'ಗ್ರಂಥ ಪ್ರಶಂಸೆ', 'ಗ್ರಂಥಾವಲೋಕನ', ಅಂಕಣಗಳ ಉದ್ದೇಶ ಅವುಗಳ ಅರ್ಥದಲ್ಲಿಯೇ ಅಡಗಿದೆ. ಗ್ರಂಥ ಪ್ರಶಂಸೆಯಲ್ಲಿ ಸಹಜವಾಗಿಯೇ ದೋಷಗಳನ್ನು ಕಡೆಗಣಿಸಬೇಕು, ಗುಣಗಳನ್ನು ಪ್ರಶಂಸಿಸಬೇಕು ಎಂಬ ಅರ್ಥ ಅಡಗಿದೆ. ಇದು ಆ ಕಾಲದ ಪುಸ್ತಕ ವಿಮರ್ಶಾ ಮನೋಭಾವವನ್ನು ತಿಳಿಸುತ್ತದೆ.

ಪುಸ್ತಕ ವಿಮರ್ಶೆ ಕೃತಿಯ ಮೂಲದಿಂದ ಹೊರಟು ಅದು ಸಂವಹನಗೊಳ್ಳಬೇಕಾದ ಕಡೆ ತಿರುಗಬೇಕು ಹಾಗೂ ಅದು ತಲುಪಿದ ಹಿಂದಿನ ಸ್ಥಿತಿಯಲ್ಲೇ ಇರದೆ ಸ್ಥಿತ್ಯಂತರಗೊಳ್ಳಬೇಕು ಆಗ ಮಾತ್ರವೇ ಪುಸ್ತಕ ವಿಮರ್ಶೆ ಜೀವಂತವಾಗಿರುತ್ತದೆ. ಜೊತೆಗೆ ಕೃತಿ, ಕೃತಿಯ ಲೇಖಕರೂ ಕೂಡ 'ಕೃತಿ ವಿಮರ್ಶೆ'ಯ ಹುಟ್ಟು ಬೆಳವಣಿಗೆ ಈ ತಂತುಗಳ ವಿಸ್ತಾರ ದೊಡ್ಡದು, ಪತ್ರಿಕೆಗಾಗಿ ಹುಟ್ಟಿ, ಪತ್ರಿಕೆಯಲ್ಲೇ ಸಾಯುವುದಾದರೆ ಕೃತಿ ವಿಮರ್ಶೆ ತೀರ ಸಂಕುಚಿತವಾದ ಅರ್ಥವಾಗಿ ಪರಿಣಮಿಸಿ ಬಿಡುತ್ತದೆ. ಆದರೆ ಕೃತಿ ವಿಮರ್ಶೆ ಸಹೃದಯ ವಿಮರ್ಶಕರಲ್ಲಿ ಹುಟ್ಟಿ, ಪತ್ರಿಕೆಯಲ್ಲಿ ಬೆಳೆದು ಓದುಗ ಚಿಂತನೆಯಲ್ಲಿ ಮಿಳಿತಗೊಂಡು ಅವರಲ್ಲಿ ಬೇರೆ ರೂಪ ಪಡೆದು ಚರ್ಚೆಗಳ ಮೂಲಕ ಜೀವಂತವಾಗಿರುತ್ತದೆ. ಆಗ ಅದು ಪುಸ್ತಕ ವಿಮರ್ಶೆಯ ಜೀವಂತಿಕೆಯ ರಸದ್ರವಿಯಾಗುತ್ತದೆ.

ಪುಸ್ತಕ ವಿಮರ್ಶೆಯೆಂಬ ಹೆಸರಿನಲ್ಲಿ ಮೊದಲಿಗಿಂತ ಹೆಚ್ಚಾಗಿ ವಾರಪತ್ರಿಕೆ, ದಿನಪತ್ರಿಕೆ, ಮಾಸ ಪತ್ರಿಕೆಗಳಲ್ಲಿ ಬರವಣಿಗೆ ಪ್ರಕಟವಾಗುತ್ತಲಿದೆ. ಅವಸರದ ಸಾಹಿತ್ಯಕ್ಕೆ ಅವಸರದ ವಿಮರ್ಶೆ' ಮುಯ್ಯಿಗೆ ಮುಯ್ಯಿ ಎಂಬ ರೀತಿಯಲ್ಲಿಯೇ ಸಾಮಾನ್ಯವಾಗಿ ಈ ಬರವಣಿಗೆ ಇರುವುದು. ಇದರ ಬಹುಭಾಗ ಪುಸ್ತಕ ಪರಿಚಯ, ಎಲ್ಲಿಯೋ ಕೊನೆಗೆ ಒಂದಿಷ್ಟು ವಿಮರ್ಶೆಯ ಅಭ್ಯಾಸ, ಕೆಲವು ಸಲ ಅತಿಸ್ತುತಿ, ಕೆಲವು ಸಲ ಅತಿನಿಂದೆ, ಯಾವುದೇ ವಿಷಯವಿರಲಿ ಯಾವುದೇ ಪ್ರಕಾರವಿರಲಿ, ಅದನ್ನು ಕುರಿತು ಧೈರ್ಯವಾಗಿ ಪುಸ್ತಕ ವಿಮರ್ಶೆಯನ್ನು ಬರೆಯುವ ವಿಮರ್ಶಕ ಸರ್ವಜ್ಞರ ತಂಡವೊಂದು ನಿರ್ಮಾಣ ವಾಗುತ್ತಲಿದೆ. ಒಮ್ಮೊಮ್ಮೆ ಅಪ್ಪಿ ತಪ್ಪಿ ಪರಿಚಿತ ವಿಷಯವುಳ್ಳ ಪುಸ್ತಕವ ಮೇಲೆ ನುರಿತ ವಿಮರ್ಶಕರು ವಿಮರ್ಶೆ ಬರೆಯುತ್ತಾರೆ. ಇವರು ಸಹ ಕೆಲವೊಂದು ಸಲ ಲೇಖಕನ ಕುಲಗೋತ್ರ, ಸ್ವಭಾವ, ಮಾರುತ್ತರ ಕೊಡುವ ಸಾಮರ್ಥ್ಯ, ವಿಮರ್ಶೆಯಿಂದ ತಮಗಾಗುವ ವ್ಯಾವಹಾರಿಕ ಲಾಭ, ಹಾನಿ ಇವನ್ನೆಲ್ಲ ಗಮನಕ್ಕೆ ತಂದು ತುಂಬ ಎಚ್ಚರದಿಂದ ಗುಣಗಳನ್ನು ಎತ್ತಿ ತೋರಿಸುತ್ತ, ದೋಷಗಳನ್ನು ಮರೆ ಮಾಚುತ್ತ ಇಲ್ಲವೇ ತೇಲಿಸಿ ಹೇಳುತ್ತ ಬರೆಯುತ್ತಾರೆ. ಇಂಥ ಕಸರತ್ತು ಮತ್ತು ಕೈಚಳಕಗಳ ಮೂಲಕ ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಆಧುನಿಕವಾದ ಒಲವೊಂದು ವೈಶಿಷ್ಟ್ಯ ಪೂರ್ಣವಾಗಿ ತಲೆಯೆತ್ತಿದೆ. ಈ ಒಲವಿನಲ್ಲಿ ವಿಮರ್ಶಕನ ಸ್ವಸಂರಕ್ಷಣೆಯನ್ನು ಸಾಧಿಸುವ ಮುತ್ಸದ್ದಿತನವಿರಬಹುದು, ಆದರೆ ಬೆಳೆಯಬೇಕಾದ ಹೊಸ ಸಾಹಿತ್ಯಕ್ಕೆ ಅವರಿಂದ ಮಾರ್ಗದರ್ಶನ ದೊರೆಯಲಾರದು ಇದಕ್ಕಿಂತ ಮೌನವೇ ಬೇಕನ್ನುವಂತೆ ತೋರುತ್ತದೆ. ಮೌನವೆಂದರೆ ಅವಸ್ಥೆಯಲ್ಲ, ಮೌನದಲ್ಲಿ ವಿಚಾರ ಪೂರ್ವವಾದ ಅಭಿಪ್ರಾಯ ಸಿದ್ಧವಾಗುತ್ತದೆ. ಆದರೆ ವಿಶಿಷ್ಟ ಪರಿಸ್ಥಿತಿಯ ಮೂಲಕ ಅಭಿವ್ಯಕ್ತವಾಗುವುದಿಲ್ಲ, ಅಭಿವ್ಯಕ್ತಿಯ ಮೂಲಕ ಅವರ ಪ್ರಾಮಾಣಿಕತೆಗೆ ಬಾಧೆ ಬರುವುದಿಲ್ಲ. ವಿಮರ್ಶೆಯ ಕ್ಷೇತ್ರದಲ್ಲಿ ಇಂದು ಉಂಟಾಗಿರುವ ಬಿಕ್ಕಟ್ಟಿಗೆ ಮೌನವೇನೂ ಉಪಾಯವಲ್ಲ. ಆದರೆ ನಿರುಪಾಯ ಪರಿಸ್ಥಿತಿಯಲ್ಲಿ ತಲೆದೋರಿದ ನಕಾರ ರೂಪವಾದ ನಿಲುವಿಗೆ ಗುರುತು ಮಾತ್ರ.[೨]

ರಂ. ಶ್ರೀ. ಮುಗಳಿಯವರ ಈ ವಿಶ್ಲೇಷಣೆ ಎಪ್ಪತ್ತರ ದಶಕದಲ್ಲಿನ ಪುಸ್ತಕ ವಿಮರ್ಶೆಯ ಬಗೆಗೆ ಇದ್ದ ನಿಲುವನ್ನು ತೋರಿಸುತ್ತದೆ. ಆಗ ಪುಸ್ತಕ ವಿಮರ್ಶೆಯನ್ನು ಅವಸರದ ವಿಮರ್ಶೆಯೆಂದು ಅವರು ಕರೆಯುತ್ತಾರೆ. ಆದರೆ ಅದು ಅವಸರವಷ್ಟೇ ಅಲ್ಲ ವಿಮರ್ಶಾ ಬಂಧುತ್ವವೂ ಕಾಠಿಣ್ಯವೂ ಆಗಿತ್ತು. ಕೆಲವೊಮ್ಮೆ ವಿಮರ್ಶೆಯ ಬೆಳವಣಿಗೆಗೆ ಪೂರಕವಾದ ರೂಪವನ್ನು ಕೊಡುತ್ತಿತ್ತು. ಆಗ ಪುಸ್ತಕ ವಿಮರ್ಶೆಗೆ ಇದ್ದಂತಹ ಬಿಕ್ಕಟ್ಟಿನ ಪರಿಸ್ಥಿತಿಯೇ ಎಲ್ಲ ಕಾಲಕ್ಕೂ ಸಂದುತ್ತಾ ಬಂದಿದೆ. ಪುಸ್ತಕ ವಿಮರ್ಶೆ ನಿಯಮ ಮೀರಿ ವರ್ತಿಸುತ್ತದೆ ಎಂಬುದನ್ನು ಇಲ್ಲಿನ ಚಿಂತಕರು ಪತ್ತೆ ಹಚ್ಚಿ ಇಂಥ ವಿಷಮ ಪುಸ್ತಕ ವಿಮರ್ಶೆ ತಟಸ್ಥ ರೂಪವಾಗಿ ಇದ್ದರೂ ಸಾಕು ಎಂಬ ಅಭಿಪ್ರಾಯ ವ್ಯಕ್ತಡಿಸುತ್ತಾರೆ. ಈ ರೀತಿಯ

ವಿಷಮ ಸ್ವರೂಪದ ಪುಸ್ತಕ ವಿಮರ್ಶೆಗಳು ಇಂದು ಬದಲಾಗಿಲ್ಲ ಎಂಬುದು ಸತ್ಯವಾದರೂ, ಪೂರ್ಣ ಸತ್ಯವಾಗಿ ಉಳಿದಿಲ್ಲ.

ಎಲ್.ಎಸ್ ಶೇಷಗಿರಿರಾವ್‌ರವರು *'ಒಂದು ಸಾಹಿತ್ಯ ಕೃತಿಯನ್ನು ಓದಿದಾಗ ಕೃತಿಯನ್ನು ಓದಿದುದರಿಂದ ನನ್ನ ಮೇಲೆ ಏನು ಪರಿಣಾಮ ಆಯಿತು, ಇದರ ಮಹತ್ವ ಏನು? ಈ ಪರಿಣಾಮ ಹೇಗಾಯಿತು, ಎಂಬ ಪ್ರಶ್ನೆಗಳನ್ನು ಕೇಳಿಕೊಂಡು ಇದಕ್ಕೆ ಸಂಬಂಧಿಸಿದ ಇತರ ಪ್ರಶ್ನೆಗಳನ್ನು ಗುರುತಿಸಿ ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುತ್ತ ತಾನೇ ಆ ಪ್ರಯತ್ನದಲ್ಲಿ ಪ್ರಶ್ನೆಗಳ ಜಟಿಲತೆಯನ್ನು ಗುರುತಿಸಲು ಅಗತ್ಯವಾದ ಸಾಧನ ಸಂಪತ್ತನ್ನು ಬೆಳಸಿಕೊಳ್ಳುತ್ತ ವಿಮರ್ಶಕನ ಪ್ರಜ್ಞೆ ತಾನೇ ಬೆಳೆಯುತ್ತದೆ'*[2] ಎಂದು ವಿಮರ್ಶಕರ ಜವಾಬ್ದಾರಿಯನ್ನು ಸ್ಪಷ್ಟಪಡಿಸುತ್ತಾರೆ. ಈ ಪ್ರಜ್ಞೆ ಯಿಟ್ಟು ಕೃತಿ ವಿಮರ್ಶಿಸಬೇಕಾದ ಅಗತ್ಯವಿದೆ ಎಂದು ಭಾವಿಸುತ್ತಾರೆ.

ಆದರೆ ಈ ಮೇಲಿನ ಮಾತುಗಳು ವಿಮರ್ಶಕರ ಸೈದ್ಧಾಂತಿಕತೆಯನ್ನು ನಿರ್ಮಿಸುವ ಮಾತುಗಳಂತೆ ಕಂಡರೂ, ವಿಮರ್ಶಕರನ್ನು ನಿಯಂತ್ರಿಸುತ್ತವೆ. ವಿಮರ್ಶಕರಿಗೆ ಇರಬೇಕಾದ ಅರ್ಹತೆಗಳನ್ನು ಪಟ್ಟಿಮಾಡುತ್ತಿವೆ. ಯಾಕೆಂದರೆ ಇಲ್ಲಿ ಕೇಳಲಾದ ಪ್ರಶ್ನೆಗಳಿಂದಲೇ ವಿಮರ್ಶೆ ಹುಟ್ಟುವುದಿಲ್ಲ. ನನ್ನ ಮೇಲೆ ಏನು ಪರಿಣಾಮ ಆಯಿತು ಎಂಬುದಕ್ಕಿಂತ ಆಕೃತಿ ಕೊಡುವ ಸಾಂಸ್ಥಿಕ ರೂಪ ಎಂಥದ್ದಿರಬಹುದು ಎಂಬುದರ ಕಡೆಗೆ ವಿಮರ್ಶಕರು ತಮ್ಮ ಆಲೋಚನೆಯನ್ನು ಕೇಂದ್ರೀಕರಿಸುತ್ತಾರೆ. ವಿಮರ್ಶೆಗೆ ವೈಯಕ್ತಿಕ ಪ್ರಜ್ಞೆಗಿಂತ ಸಾಂಸ್ಕೃತಿಕವಾದಂಥ ಚಾರಿತ್ರಿಕ ಒತ್ತಾಯವಿರುತ್ತದೆ. ಹಾಗಾಗಿ ಅದು ವೈಯಕ್ತಿಕ ನಿಲುವಿನಲ್ಲೇ ನಿಲ್ಲುವುದಿಲ್ಲ. ಪುಸ್ತಕ ವಿಮರ್ಶೆ ಒಟ್ಟು ಈ ಸ್ವರೂಪವನ್ನೆಲ್ಲ ಒಳಗೊಳ್ಳದಿದ್ದರೂ ಚಾರಿತ್ರಿಕ ಒತ್ತಾಯವನ್ನು ನಿರ್ಮಿಸಬಲ್ಲ ಶಕ್ತಿಯನ್ನು ತಾತ್ಕಾಲಿಕವಾಗಿ ಪಡೆದಿರುತ್ತದೆ. ಪುಸ್ತಕ ವಿಮರ್ಶೆ ಬಂದ ನಂತರ ವಿಮರ್ಶೆಯಾಗುವುದನ್ನು ನೋಡಿದರೆ ಅದಕ್ಕೊಂದು ಕಾಲದ ಚಾರಿತ್ರಿಕ ಒತ್ತಾಯವಿದೆಯೆನಿಸುತ್ತದೆ.

ಪುಸ್ತಕ ವಿಮರ್ಶೆಯ ಕಾರ್ಯ ಓದುಗರಿಗೆ ಸಂವಹನಗೊಳ್ಳಬೇಕಾದ ಕೃತಿಯ ಕಾಠಿಣ್ಯತೆಯನ್ನು ಭೇದಿಸಿ, ಕೃತಿಯೊಳಗಿನ ಓದುಗರಾಗಿ ಅನುಭವಗಳಾಗಿ ರೂಪಿಸಬೇಕು, ಎಷ್ಟೋ ಕೃತಿಗಿಂತ ವಿಮರ್ಶೆಯ ಕಾಠಿಣ್ಯದ ಪೊರೆ ಆವರಿಸಿ ಕೃತಿಯನ್ನು ತಪ್ಪಾಗಿ ಗ್ರಹಿಸುವ ಸಾಧ್ಯತೆಯಿದೆ. ಹಾಗಾದಾಗ ಪುಸ್ತಕ ವಿಮರ್ಶೆಯ ಅಗತ್ಯತೆಯಿಲ್ಲವೆಂದು ಭಾವಿಸುವ ಸಂಭವವುಂಟು, ಈ ರೀತಿಯ ಗುರುತರ ಹೊಣೆಗಾರಿಕೆ 'ಪುಸ್ತಕ ವಿಮರ್ಶಕರ' ಮೇಲಿರುತ್ತದೆ.

ಪುಸ್ತಕ ವಿಮರ್ಶೆಯು ಸಂವಹನಗೊಳ್ಳುವ ತನ್ನ ಸಂವಹನ ಅಂಗಗಳಿಂದ ವಿವಿಧ ಸ್ವರೂಪಗಳನ್ನು ದಾಟಿ ವಿಸ್ತಾಂತರಗೊಳ್ಳುತ್ತದೆ. ಪೂರಕವಾಗಿ ಕೆಲಸ ಮಾಡುವ ಇತರ ಅಂಗಗಳನ್ನು ನೋಡಿದರೆ 'ಪುಸ್ತಕ ವಿಮರ್ಶೆ' ಈ ಅಂಗಗಳ ಕೇಂದ್ರ ಸ್ಥಾನದಲ್ಲಿರುತ್ತದೆ. ಕೃತಿ, ವಿಮರ್ಶೆ, ಪತ್ರಿಕೆ, ಓದುಗ ಹೀಗೆ ವೃತ್ತಾಕಾರದಲ್ಲಿ ತಿರುಗುತ್ತವೆ. ಕೆಲವೊಮ್ಮೆ ಪರ್ಯಾಯವಾಗಿ ಪ್ರತಿಕ್ರಿಯೆ ಹಿಂದಕ್ಕೂ ಮುಂದಕ್ಕೂ ಬರುವುದರಿಂದ ಕೃತಿ ಅನಾವರಣಗೊಳ್ಳುವುದು. ಕೃತಿ ವಿಮರ್ಶೆ ಪತ್ರಿಕೆಯಲ್ಲಿ ಪ್ರಕಟಗೊಂಡರೂ ಅದೇ ಕೇಂದ್ರವಲ್ಲ ಅದೊಂದು ಮಾಧ್ಯಮವಷ್ಟೇ.

ಹೀಗೆ ಜೀವಂತ 'ಪುಸ್ತಕ ವಿಮರ್ಶೆ' ಸದಾ ಚಲನೆಯಲ್ಲಿರುತ್ತದೆ. ಈ ಚಲನೆಯುಳ್ಳ ಪುಸ್ತಕ ವಿಮರ್ಶೆಯು ವಿಮರ್ಶೆಗೆ ಹಂತ ಹಂತವಾಗಿ ತಾತ್ವಿಕತೆಯ ದಾರಿಯನ್ನು ನಿರ್ಮಿಸಿಕೊಡುತ್ತದೆ. ಕೃತಿಯನ್ನು ರಚಿಸಿದ ಲೇಖಕರಿಂದ ಆರಂಭವಾದ ಕೃತಿಯ ಹುಟ್ಟು, ವಿಮರ್ಶಕರಿಂದ ಮರುಹುಟ್ಟನ್ನು ಪಡೆಯುತ್ತದೆ. ವಿಮರ್ಶಕರು ಕೃತಿ ಮತ್ತು ಓದುಗರ ನಡುವೆ ಸೇತುವೆಯಾಗಿರುತ್ತಾರೆ. ಅವರು ಓದುಗರ ಮನದಲ್ಲಿ ಕೃತಿಯ ಮರುಹುಟ್ಟಿಗೂ ಕಾರಣರಾಗುತ್ತಾರೆ. ಇದರಿಂದ ಕೃತಿಗೆ ಸ್ಪಷ್ಟವಾದ ಸ್ವರೂಪ ದೊರಕುತ್ತದೆ. ಕೃತಿಯ ಲೇಖಕರು ತಮ್ಮ ಕೃತಿಗೆ ಆದಷ್ಟು ಒಳ್ಳೆಯ ವಿಮರ್ಶೆ ಬರಲೆಂದು ಬಯಸುತ್ತಾರೆ. ಅದು ಒಳ್ಳೆಯ ವಿಮರ್ಶೆಗೆ ಸಮರ್ಪಕವಾದುದೇ ಎಂಬ ವಿಶ್ಲೇಷಣ ಮನೋಭಾವ ಕೃತಿಕಾರರಿಗಿರಬೇಕು. ಹಾಗೇ ಕೃತಿ ವಿಮರ್ಶಕರು ಸಹ ಕೃತಿಯ ಆಳ ಅಂತರಗಳನ್ನು ಓದಿ ತಿಳಿದುಕೊಳ್ಳಬೇಕಾದ ಅನಿವಾರ್ಯತೆಯಿರುತ್ತದೆ. ಹಾಗಾದಾಗ ಮಾತ್ರ ಆ ಕ್ರಿಯೆ ಪರಸ್ಪರ ಮೇಲಿನಂತೆ ತಿರುಗುತ್ತಿರುತ್ತದೆ. ಇಲ್ಲದಿದ್ದರೆ, ವಿಮರ್ಶಕರಲ್ಲೇ ನಿಂತು ಹೋಗುವ ಸಾಧ್ಯತೆಯಿರುತ್ತದೆ. ವಿಮರ್ಶಕರು ಲೇಖಕರ ಕಡೆಗೆ ಮಾತ್ರ ಗಮನವಿತ್ತರೆ ಅದು ಉತ್ತಮ ವಿಮರ್ಶೆಯಾಗುವುದಿಲ್ಲ ಅದು ಓದುಗರ ದಾರಿ ತಪ್ಪಿಸಿದಂತಾಗುತ್ತದೆ. ವಿಮರ್ಶನ ಕಾರ್ಯವೇನಿದ್ದರೂ *"ಕಲಾಕೃತಿಗಳ ಸೃಷ್ಟೀಕರಣ ಮತ್ತು ಅಭಿರುಚಿಯ ತಿದ್ದುಪಡಿ"* [೪] ಮಾಡಬೇಕು. ಅಭಿರುಚಿಯ ತಿದ್ದುಪಡಿ ವಿಮರ್ಶಕರ ಮಹತ್ತರ ಜವಾಬ್ದಾರಿ. ಇದು ಪುಸ್ತಕ ವಿಮರ್ಶೆಯ ಮುಂದಿನ ಹಂತವಾದರೂ ಪುಸ್ತಕ ವಿಮರ್ಶಕರಿಗೂ ಈ ಸಾಂಸ್ಕೃತಿಕ ಪ್ರಜ್ಞೆಯ ಜವಾಬ್ದಾರಿ ಇರುವುದನ್ನು ಕಾಣಬಹುದು.

೪.೧ ಪುಸ್ತಕ ವಿಮರ್ಶೆ ಮತ್ತು ಪ್ರಕಾಶಕ

ಶಾಸನ ತಾಡವೋಲೆಯಿಂದ ಆಧುನಿಕ ಆಫ್‌ಸೆಟ್ ಮುದ್ರಣ, ಕಂಪ್ಯೂಟರ್ ಮುದ್ರಣ ಮಾಧ್ಯಮವರೆಗೂ (print media)' ಬೆಳೆದು ಬಂದಿರುವ ಬರವಣಿಗೆ ಹೊಸ ಜಗತ್ತಿನ ಯಾಂತ್ರಿಕತೆಯಿಂದ ಬಲಗೊಳ್ಳುತ್ತಿದೆ. ಒಂದೊಂದು ಅಕ್ಷರವನ್ನು ತಿದ್ದಿತೀಡಿ ಮಾಡಬೇಕಾದ್ದುದು ಮನುಷ್ಯನ ಮನಸ್ಸು ಆಧುನಿಕವಾದ ಯಂತ್ರಕ್ಕೆ ಮಾರು ಹೋಗಿದೆ. ಇದರ ಪರಿಣಾಮವಾಗಿ ಬಹುಪಾಲು ಕಾರ್ಯಗಳಿಗೆ ಯಂತ್ರವನ್ನೇ ಅವಲಂಬಿಸಬೇಕಾಗಿದೆ. ಹಾಗೆಯೇ ಆಧುನಿಕ ವಿಚಾರಗಳಿಗೂ ಆರ್ಥಿಕತೆಯ ಬಗೆಗೂ ಯೋಚಿಸಬೇಕಾಗಿದೆ.

ಅ) ಪ್ರಾಚೀನ ಕೃತಿಗಳ ಹಿನ್ನೆಲೆಗಳನ್ನು ಗಮನಿಸಿದಾಗ ಅಲ್ಲಿ ಪ್ರಚಾರ ಮಾಡುವ ಯಾವುದೇ ತೊಂದರೆ ಇರಲಿಲ್ಲ. ತಿಂಗಳುಗಟ್ಟಲೆ, ವರ್ಷಾನುಗಟ್ಟಲೆ, ಕುಳಿತು ಬರೆದ ಗ್ರಂಥವನ್ನು ಆಸ್ಥಾನಕ್ಕೆ ಒಪ್ಪಿಸಿದರೆ ಸಾಕಾಗುತ್ತಿತ್ತು. ಕೃತಿ ಮನ್ನಣೆ, ತಿರಸ್ಕಾರ, ಮುಂತಾದ ಚರ್ಚೆ ಎಲ್ಲದಕ್ಕೂ ಆಸ್ಥಾನವೇ ಕೇಂದ್ರ ವೇದಿಕೆಯಾಗಿ ನಿರ್ಮಾಣವಾಗಿತ್ತು. ಆ ಕಾರಣದಿಂದ ಕೃತಿಯನ್ನು ಎಲ್ಲರಿಗೂ ತಲುಪಿಸಬೇಕೆಂಬ ಯಾವುದೇ ತಹತಹಿಕೆ ಆಗ ಇರಲಿಲ್ಲ. ಆ) ಎಲ್ಲರಿಗೂ ತಲುಪಿಸಲು ಗಮಕಿ ಸಂಪ್ರದಾಯ ಹಾಡುಗಬ್ಬದ ಪರಂಪರೆಯಿತ್ತು ಉದಾಹರಣ ಕುಮಾರವ್ಯಾಸ ಭಾರತ. ಇ) ಜನಪದ ಸಾಹಿತ್ಯದಲ್ಲಿ ಹಾಡುವಾಗ

ಹೇಳಗ ಮತ್ತು ಕೇಳುಗ ಸಂಪ್ರದಾಯಗಳಿವೆ. ಆದರೆ ಈಗ ಓದುಗರು ಕೆಲವರಷ್ಟೇ ಮಾತ್ರ ಅಲ್ಲ. ಆಧುನಿಕ ಶಿಕ್ಷಣಕ್ಕೆ ತೆರೆದುಕೊಂಡ ಮನಸ್ಸುಗಳು, ಔದ್ಯೋಗಿಕ ಕ್ರಾಂತಿ ಎಬ್ಬಿಸಿದ ತಲ್ಲಣದಿಂದ ಬಹುಪಾಲು ಜನ ಜಾಗೃತರಾಗಿದ್ದಾರೆ. ಹಾಗಾಗಿ ಈಗ ಕೆಲವರಿಗಾಗಿಯೇ ಕೃತಿಯನ್ನು ಬರೆಯಲು ಸಾಧ್ಯವಿಲ್ಲ, ಕೃತಿ ಚರ್ಚೆ ಕೆಲವರಷ್ಟೇ ಆಸ್ಥಾನದಲ್ಲಿ ಕುಳಿತು ಮಾಡುವಂತಹದ್ದಲ್ಲ, ಸಾರ್ವಜನಿಕ ವಲಯದಲ್ಲಿ ಚರ್ಚೆ ಹರಿಯಬೇಕೆಂಬುದು ಆಧುನಿಕತೆ ತಂದು ಕೊಟ್ಟ ಚಿಂತನೆ.

ಇಷ್ಟೆಲ್ಲಾ ದಾರಿಗಳನ್ನು ಕೃತಿ ಕಂಡುಕೊಳ್ಳಬೇಕಾಗಿರುವುದರಿಂದ ಕೃತಿಯ ಉತ್ಪಾದನೆ ಪ್ರಸಾರಗಳಲ್ಲಿ ಒಂದು ವಾಣಿಜ್ಯ ವ್ಯಾಪಾರವಾಗಿ ಬೆಳೆಯುತ್ತದೆ. ಅಂದರೆ ಕೃತಿಯಿಂದ ವ್ಯಾಪಾರೀಕರಣವೂ ವಿಸ್ತಾರವಾಗುತ್ತಿದೆ. ಸಾಮಾನ್ಯ ಸರಕುಗಳು ಮಾರಾಟವಾಗುವಂತೆ ಕೃತಿ ಮಾರಾಟವಾಗುತ್ತಿದೆ. ಜಾಹಿರಾತುಗಳು ಕೃತಿ ವ್ಯಾಪಾರಕ್ಕಾಗಿ ಸಿದ್ಧವಾಗುತ್ತಿರುವುದನ್ನು ಕಾಣಬಹುದು. ಲೇಖಕರು ತಾವು ಕೃತಿ ಬರೆದಾಗ ಅದನ್ನು ಹೆಚ್ಚಿನ ಓದುಗರು ಓದಬೇಕೆಂದು ಬಯಸುವುದರಿಂದ ಅನಿರ್ವಾಯವಾಗಿ ಅವರು ಎಲ್ಲರಿಗೂ ಕಳಿಸಲು ಸಾಧ್ಯವಾಗದು, ಅಲ್ಲದೆ ತಮ್ಮ ಕೃತಿಯನ್ನು ಅಚ್ಚು ಹಾಕಿಸಲು ಹೆದರುತ್ತಾರೆ, ಆ ಕಾರಣದಿಂದ ಅವರು ಪ್ರಕಾಶಕರಲ್ಲಿಗೆ ಮೊರೆ ಹೋಗುತ್ತಾರೆ. ಪ್ರಕಟವಾದ ಬಳಿಕ ಅದರ ಪ್ರಚಾರದಭಾಗವಾಗಿ ಪುಸ್ತಕ ವಿಮರ್ಶೆ ಆದಷ್ಟು ಚೆನ್ನಾಗಿ ಬರಲೆಂದು ಆಶಿಸುತ್ತಾರೆ.

ಪ್ರಕಾಶಕರು ಇಲ್ಲಿ ಬಂಡವಾಳಗಾರರಾಗಿರುವುದರಿಂದ ಬಂದಂಥ ಹಸ್ತಪ್ರತಿಗಳನ್ನೆಲ್ಲ ಅಚ್ಚು ಹಾಕಿಸಿ ಮಾರಾಟಕ್ಕೆ ಕಳುಹಿಸಲು ಸಾಧ್ಯವಾಗುವುದಿಲ್ಲ. ಅವರು ಯಾವಾಗಲೂ ವ್ಯವಹಾರಿಕವಾದ ಲಾಭ- ನಷ್ಟದ ಕಡೆಗೆ ಗಮನ ಹರಿಸುತ್ತಾರೆ. ಈ ಸಂದರ್ಭದಲ್ಲಿ ಎಂತಹ ಕೃತಿಗಳನ್ನು ಬಿಡುಗಡೆ ಮಾಡಿದರೆ ಅವುಗಳ ಮಾರಾಟವಾಗುತ್ತದೆ, ಎಂಬುದರ ಕಡೆಗೆ ಅವರ ಮನಸ್ಸು ಆಲೋಚಿಸುತ್ತದೆ. ಈ ಕಾರಣದಿಂದ ಕೆಲವು ಹಸ್ತಪ್ರತಿಗಳನ್ನಷ್ಟೇ ಆಯ್ಕೆ ಮಾಡಿಕೊಳ್ಳುತ್ತಾರೆ. ಇವರು ಇಲ್ಲಿ ಉತ್ಪಾದಕರಾಗುತ್ತಾರೆ. ಇವರು ಅಚ್ಚು ಹಾಕಿಸಿದರೆ ಮಾತ್ರ ಮುಂದಿನ ಚಟುವಟಿಕೆಯಾದ ಓದು, ವಿಮರ್ಶೆ, ಪುಸ್ತಕ ವಿಮರ್ಶೆ ಆರಂಭವಾಗುತ್ತದೆ. ಮೂಲ ಉತ್ಪಾದಕ ಕೃತಿಕಾರರಾದರೂ ಕೃತಿಕಾರರ ವಿಚಾರಗಳನ್ನು ಕೃತಿರೂಪದಲ್ಲಿ ಜನರಿಗೆ ತಲುಪಿಸುವ ಕಾರ್ಯವನ್ನು ಪ್ರಕಾಶಕರು ಮಾಡುವುದರಿಂದ ಇವರೆ ಉತ್ಪಾದಕರಾಗುತ್ತಾರೆ. ಇವರು ಬಂಡವಾಳ ಹೂಡಿ ಒಂದು ಕೃತಿಯನ್ನು ಉತ್ಪಾದಿಸುವುದರಿಂದ ಅದು ಎಷ್ಟು ಬೆಲೆಗೆ ಮಾರಾಟವಾಗುತ್ತದೆ? ಅದಕ್ಕೆ ಬೇಡಿಕೆ ಇದೆಯೇ? ಎಂದೆಲ್ಲಾ ಪ್ರಶ್ನೆಗಳನ್ನು ಹಾಕಿಕೊಂಡೇ ಕೃತಿಯನ್ನು ಪ್ರಕಟಿಸಲು ಮುಂದಾಗುತ್ತಾರೆ. ಇತ್ತೀಚಿನ ತಂತ್ರಜ್ಞಾನವನ್ನು ಬಳಸಿ ಕೃತಿಯನ್ನು ಮುದ್ರಿಸುವುದರಿಂದ ಅವರು ಆ ಎಲ್ಲಾ ರೀತಿಯ ಕೃತಿಗಳ ಪ್ರಕಟಣೆಗೆ ಕೈ ಹಾಕುವುದಿಲ್ಲ. ಹೀಗಾಗಿ ಕೃತಿಗಳು ಮಾರಾಟೀಕರಣದ ಆಯಾಮದಿಂದ ಮೊದಲು ಹುಟ್ಟುತ್ತವೆ. ಆನಂತರವೇ ಅವು ಬೇರೆ ಬೇರೆ ಸ್ವರೂಪಗಳನ್ನು ದಾರಿಗಳನ್ನು ಪಡೆಯುವುದು.

ಈ ಅರ್ಥದಲ್ಲಿ ಪ್ರಕಾಶಕರು ಮತ್ತು ಪುಸ್ತಕ ವಿಮರ್ಶೆಗೂ ನಿಕಟ ಸಂಬಂಧವಿದೆ. ಇದು

ಸಾಹಿತ್ಯೇತರ ಚರ್ಚೆಯಾದರೂ ಬಹು ಮುಖ್ಯ ಚರ್ಚೆ. ಕೃತಿಕಾರರು ಬರೆದ ಕೃತಿಯನ್ನು ಪ್ರಕಟಿಸಲು ಯಾವುದೇ ಪ್ರಕಾಶಕರು ಮುಂದೆ ಬರದಿದ್ದರೆ ಆ ಕೃತಿ ಎಷ್ಟೇ ಮೌಲ್ಯಯುತವಾಗಿದ್ದರೂ ತಲುಪಬೇಕಾದ ಜನರಿಗೆ ತಲುಪದೇ ಹಸ್ತಪ್ರತಿಯಾಗಿಯೇ ಉಳಿಯುತ್ತದೆ. ಆದರೆ ಪ್ರಕಾಶಕರೊಬ್ಬರಿದ್ದಾರೆ, ಎಲ್ಲ ಕೃತಿಗಳ ಪ್ರಕಟಣೆಯಾಗುತ್ತದೆ. (ಈಗ ಲೇಖಕರೇ ಪ್ರಕಾಶಕರಾಗಿರುವುದು ಸಾಮಾನ್ಯ ವಿಚಾರ) ಉತ್ಪಾದನೆಯ ಮೊದಲ ಬಿಂದು ಪ್ರಕಾಶಕರೇ ಆಗಿರುವುದರಿಂದ ಪ್ರಕಾಶಕರಲ್ಲಿ ಸಾಹಿತ್ಯಕವಾದ ಆಸಕ್ತಿಗಿಂತ ಮಾರಾಟೀಕರಣದ ಮನಸ್ಸು ಅವರಲ್ಲಿರುತ್ತದೆ. ಅವರು ಕೃತಿ ಎಷ್ಟು ಮುಖ್ಯ ಎನ್ನುವುದಕ್ಕಿಂತ ಅದು ಎಷ್ಟು ಮಾರಾಟವಾಗುತ್ತದೆ, ಅದಕ್ಕೆ ಬೇಡಿಕೆ ಇರಬಹುದೇ ಎಂಬುದರ ಕಡೆಯೇ ಅವರು ಆಲೋಚಿಸುತ್ತಾರೆ. ಆ ಕಾರಣಕ್ಕಾಗಿ ಅವರು ಹಲವಾರು ಮಾರಾಟ ತಂತ್ರಗಳನ್ನು ಬಳಸುತ್ತಾರೆ. ಕೃತಿಯಿನ್ನು ಅಚ್ಚಿನಲ್ಲಿದ್ದರೆ ಮೊದಲೇ ಜಾಹಿರಾತು ಕೊಡುವುದು, ಪತ್ರಿಕೆಗಳಲ್ಲಿ, 'ವಿಶೇಷ ಪದ ಪಂಕ್ತಿಗಳಿಂದ ಓದುಗರನ್ನು ಆಕರ್ಷಿಸುವಂತೆ ಮಾಡುವುದು' 'ಕೃತಿಯ ಬಗ್ಗೆ ಬ್ರೋಶರ್ ಹಂಚುವುದು' 'ಕೃತಿ ಕುರಿತ ದೊಡ್ಡ ದೊಡ್ಡ ವಿದ್ವಾಂಸರು ಹೇಳಿರುವ ಮಾತುಗಳನ್ನು ಅಚ್ಚು ಹಾಕಿಸುವುದು', 'ಮೊದಲ ಅತ್ಯುತ್ತಮ ಹತ್ತು ಪುಸ್ತಕಗಳು' ಮುಂತಾದವುಗಳ ಮೂಲಕ ತಮ್ಮ ಮಾರಾಟವನ್ನು ಹೆಚ್ಚು ಮಾಡಿಕೊಳ್ಳುವ ಜಾಣ್ಮೆ ಪ್ರಕಾಶಕರಿಗಿರುತ್ತದೆ. ಈ ಸಂದರ್ಭದಲ್ಲಿ ಕೃತಿ ಒಂದು ಸರಕಾಗಿ ಮಾರ್ಪಾಡು ಹೊಂದುತ್ತದೆ. ಸರಕಿನ ಮಾರಾಟ ಇಲ್ಲಿ ಮುಖ್ಯವಾಗುತ್ತದೆ. ಆ ಕಾರಣದಿಂದ ಈ ಸರಕಿನ ಮಾರಾಟಕ್ಕೆ ಪ್ರಕಾಶಕರು ಯೋಚಿಸುತ್ತಾರೆ.

ಕೃತಿ ಪ್ರಕಟಣೆಗೆ ಪ್ರಕಾಶಕರು ಹೀಗೆ ಆಲೋಚಿಸುತ್ತಾರೆ. ಇನ್ನು ಕೃತಿ ಕುರಿತು ಬರೆಯುವ 'ಪುಸ್ತಕ ವಿಮರ್ಶೆ' ಯು ಹೇಗಿರಬೇಕೆಂದು ಪತ್ರಿಕೆಯ ಪ್ರಕಾಶಕರು ಆಲೋಚಿಸುತ್ತಾರೆ. ಹೀಗಿರುವಾಗ ಒಂದು ಕೃತಿ ಕುರಿತು ಬರುವ 'ಪುಸ್ತಕ ವಿಮರ್ಶೆ'ಯು ಕೃತಿ ಪ್ರಕಾಶಕರ ಮಾರಾಟದ ಕ್ರಿಯೆಯನ್ನು ಅವಲಂಬಿಸಿರಬೇಕಾಗಿರುತ್ತದೆ. ಹಾಗೆ ಮಾಧ್ಯಮದ, ಪ್ರಕಾಶಕರ ಮನೋಧರ್ಮವನ್ನು ಗಮನದಲ್ಲಿಟ್ಟು ಕೊಂಡು 'ಪುಸ್ತಕ ವಿಮರ್ಶೆ' ನಡೆಯುತ್ತದೆ. ಈ ಕಾರಣಕ್ಕೆ 'ಪುಸ್ತಕ ವಿಮರ್ಶೆ' ಮಾದರಿಗಳು ಹೆಚ್ಚಾಗಿ ಕೃತಿ ಕೊಳ್ಳುವವರನ್ನು ಆಕರ್ಷಿಸುವಲ್ಲಿ ಹೆಚ್ಚು ಕೆಲಸ ಮಾಡುತ್ತವೆ. ಕೃತಿಯ ಬಗೆಗಿನ ವಿವರ ವಿಶ್ಲೇಷಣೆಗಿಂತ ಪ್ರಕಾಶಕರಾದವರು ಅದನ್ನು ಕೊಂಡುಕೊಳ್ಳಲು ಮಾಡಬೇಕಾದ ತಂತ್ರಗಳನ್ನು ಪುಸ್ತಕ ವಿಮರ್ಶೆಯಲ್ಲಿ ನಿರೀಕ್ಷಿಸುತ್ತಾರೆ. ಇದಕ್ಕಾಗಿ ಪುಸ್ತಕ ವಿಮರ್ಶೆಗಳು ಪ್ರಕಾಶನದ ಭಾಗವಾಗಿಯೇ ಇವೆ.

೪.೨ ಪುಸ್ತಕ ವಿಮರ್ಶೆ ಮತ್ತು ವಿಮರ್ಶೆ

ವಿಮರ್ಶೆ ಮತ್ತು ಪುಸ್ತಕ ವಿಮರ್ಶಕರಿಗೆ ಅಂತರ್‌ಸಂಬಂಧವುಂಟು. ಪುಸ್ತಕ ವಿಮರ್ಶೆ ಮತ್ತು ವಿಮರ್ಶೆಗಳು, ವಿಮರ್ಶಕರ ಕೊಡುಗೆಗಳಾಗಿರುತ್ತವೆ, ವಿಚಾರಧಾರೆಗಳಾಗಿರುತ್ತವೆ. ವಿಮರ್ಶಕರ ಚಿಂತನೆ, ಆಲೋಚನೆ, ವಿಶ್ಲೇಷಣೆಗಳು, ಕೃತಿಯ ಮಟ್ಟದಲ್ಲಿ ನಿಂತರೆ ಪುಸ್ತಕ ವಿಮರ್ಶೆಯಾಗುತ್ತದೆ. ಕೃತಿಯನ್ನು ಮೀರಿ ಪರಂಪರೆಯಲ್ಲಿಟ್ಟು ಚರ್ಚೆ ಮಾಡಿದರೆ ವಿಮರ್ಶೆಯಾಗಿ ಬೆಳೆಯುತ್ತದೆ. ವಿಮರ್ಶಕರು ಎರಡು

ಬಿಂದುಗಳ ನಡುವಿನ ರೇಖೆಯಾಗಿರುತ್ತಾರೆ. ತಮ್ಮ ಬುದ್ಧಿ ಆಲೋಚನೆಗಳು ಒಂದು ಕೃತಿಯನ್ನು ಪರಂಪರೆಯಲ್ಲಿ ಬೆಳೆಸುವ ಮಟ್ಟದಲ್ಲಿರುವುದರಿಂದ ಅವರು ವಿವೇಕಪೂರ್ಣವಾದ ಚರ್ಚೆಗೆ ತೊಡಗಿಕೊಳ್ಳುತ್ತಾರೆ. ತಾವು ಕೃತಿಯಿಂದ ಕಂಡ ಹೊಸ ಹೊಳಹುಗಳನ್ನು ಓದುಗರಿಗಾಗಿ ಅರ್ಥೈಸುತ್ತಾರೆ. ಅಷ್ಟೇ ಅಲ್ಲ ಆ ಮೂಲಕ ಕೃತಿಯ ಬಗೆಗೆ ತಮಗನಿಸಿದ್ದನ್ನು ಹೇಳುತ್ತಾರೆ. ಹಾಗೆಂದ ಮಾತ್ರಕ್ಕೆ ಆ ಕೃತಿಯ ಬಗ್ಗೆ ಹೇಳಿದ್ದೇ ಅಂತಿಮವೆಂದು ಅರ್ಥವಲ್ಲ. ಆದರೆ ಕೃತಿಯ ನಿಲುವಿನ ಬಗೆಗೆ ಚರ್ಚೆಗೆ ದಾರಿ ಮಾಡಿಕೊಡುತ್ತಾರೆ. ಆ ಮೂಲಕ ಇನ್ನಿತರ ಓದುಗರನ್ನು ಚಿಂತಕರನ್ನು ಚಿಂತನೆಗೆ ಒಳಗುಮಾಡುತ್ತಾರೆ.

೪.೨.೧ ವಿಮರ್ಶೆಯೊಂದಿಗೆ ಪುಸ್ತಕ ವಿಮರ್ಶೆ ಬೆಳಸುತ್ತಿರುವವರು

ಕೆಲವು ವಿಮರ್ಶಕರು ತಾವು ವಿಮರ್ಶಕರಾಗಿ ಬೆಳೆದು ಕೃತಿಯನ್ನು ವಿಶ್ಲೇಷಿಸುವ ಮಾದರಿಯಲ್ಲಿ ಕೇವಲ ಕೃತಿಯನ್ನು ವಿವರಿಸುವ ಸ್ವರೂಪದವರಾಗಿರುತ್ತಾರೆ, ಟಿ.ಪಿ. ಅಶೋಕ, ನರಹಳ್ಳಿ ಬಾಲಸುಬ್ರಹ್ಮಣ್ಯರವರ ಪುಸ್ತಕ ವಿಮರ್ಶೆಗಳು ಈ ಸ್ವರೂಪದವುಗಳಾಗಿವೆ. ಇವರ ವಿಮರ್ಶಾ ಲೇಖನಗಳನ್ನು ಗಮನಿಸಿದಾಗ ಇವು ಸರಳವಾಗಿ, ದೀರ್ಘ ಲೇಖನದ ದಾಟಿಯಲ್ಲಿರುತ್ತವೆ. ಆದರೆ ಅವು ಸಾರಾಂಶದ ಸ್ವರೂಪವನ್ನು ಪಡೆದುಕೊಂಡಿರುವ ಅಪಾಯವು ಇದೆ. ಇಡೀ ಕೃತಿಯನ್ನು ಬೆಲೆಗಟ್ಟುವುದಕ್ಕಿಂತ, ಚರ್ಚೆಗೆ ಎಳೆಯುವುದಕ್ಕಿಂತ ಒಟ್ಟು ಕೃತಿ ಒಳಗೊಂಡ ವಿವರ, ಘಟನೆ, ಸನ್ನಿವೇಶ, ಮುಂತಾದವುಗಳ ಮೂಲವೇ ಈ ಮಾದರಿಯವುಗಳಾಗಿರುತ್ತವೆ. ಇದಕ್ಕೆ ಅವರು ವಿಮರ್ಶಿಸುವ ಕೃತಿಯಾಗಲಿ ಕಾರಣ ಅಲ್ಲ. ಅವರು ಕಳುಹಿಸುವ ಪತ್ರಿಕೆ ಮುಖ್ಯವಾಗಿರುತ್ತದೆ. ಮಾಸ ಪತ್ರಿಕೆ 'ಮಯೂರ' ಪತ್ರಿಕೆಗೆ ಬರೆಯುತ್ತಿದ್ದ ಇವರು ತಿಂಗಳಿಗೊಂದು ಪುಸ್ತಕ ವಿಮರ್ಶಿಸುವ ಅಗತ್ಯವಿರುತ್ತದೆಯೇ ಹೊರತು ಚರ್ಚೆಗೆಳೆಯುವ ಯಾವ ಅನಿವಾರ್ಯತೆಯು ಅಲ್ಲಿಲ್ಲ. ಆ ಕಾರಣದಿಂದ ಇವರ ಕೃತಿ ವಿಮರ್ಶೆಗಳು ಸಾರಾಂಶ ಸ್ವರೂಪದವಾಗಿಯೇ ಉಳಿದಿವೆ. ವಿಮರ್ಶಕರಾಗಿ ಹೆಸರು ಮಾಡಿರುವ ಇವರನ್ನು ವಿಮರ್ಶೆಯೊಂದಿಗೆ ಪುಸ್ತಕ ವಿಮರ್ಶೆ ಮಾಡುತ್ತಿರುವವರು ಎಂದು ಕರೆದರು ಇವರು ಕೃತಿಯನ್ನು ಅರ್ಥೈಸುವ ಕಡೆಗೆ, ಭಾಷ್ಯ ಬರೆಯುವ ಕಡೆಗೆ ಗಮನ ವಹಿಸುತ್ತಾರೆಯೆ ಹೊರತು ಇನ್ನ್ಯಾವುದೇ ಚರ್ಚೆಯ ಕಡೆಗೆ ಗಮನ ಹರಿಸುವುದಿಲ್ಲ. ವಿವಿಧ ವಿಮರ್ಶೆಯು ಆಯಾಮಗಳಿಂದ ಕೃತಿಯನ್ನು ತೂಗಿ ನೋಡುವ ಯಾವುದೇ ಕೆಲಸವನ್ನು ಮಾಡಿದಂತೆ ಇವರ 'ಪುಸ್ತಕ ವಿಮರ್ಶೆ'ಗಳು ಕಾಣುವುದಿಲ್ಲ. ಈ ಕಾರಣದಿಂದ ಇವರ ಪುಸ್ತಕ ವಿಮರ್ಶೆಗಳು ಪುಟಗಟ್ಟಲೇ ಕಾಣುತ್ತವೆ. ಆದರೆ ಕೆಲವೊಮ್ಮೆ ಈ ಮಿತಿ ಮೀರಿರುವುದುಂಟು ಅಂತಹ ಸಂದರ್ಭ ಯಾವುದೆಂದರೆ, ಈಗಾಗಲೇ ಹೆಸರು ಮಾಡಿರುವವರ ಕೃತಿಗಳನ್ನು 'ಪುಸ್ತಕ ವಿಮರ್ಶೆ' ಮಾಡುವಾಗ ಇಲ್ಲವೇ ತಮ್ಮ ಆತ್ಮೀಯರ ಕೃತಿಗಳನ್ನು ವಿಮರ್ಶಿಸುವಾಗ ಈ ಮಿತಿಗಳನ್ನು ಮೀರಿರುವುದುಂಟು. ಅಂತಹ ಒಂದು ಪುಸ್ತಕ ವಿಮರ್ಶೆಯ ಮಾದರಿಯನ್ನು ಗಮನಿಸಬಹುದು.

ಸಿದ್ದಲಿಂಗಯ್ಯನವರ 'ಊರುಕೇರಿ' (ವಿಮರ್ಶಕ: ನರಹಳ್ಳಿ ಬಾಲಸುಬ್ರಹ್ಮಣ್ಯ)

ಕನ್ನಡದಲ್ಲಿ ಆತ್ಮಕಥೆಯ ಪ್ರಕಾರಕ್ಕೆ ಇನ್ನೂ ಒಂದು 'ಚರಿತ್ರೆ' ಇಲ್ಲ. ಅದನ್ನೊಂದು ಪ್ರಕಾರವಾಗಿ ಚರ್ಚಿಸುವಷ್ಟು ಅದಿನ್ನು ಬೆಳದಿಲ್ಲ. ಬಂದಿರುವ ಕಥನಗಳೂ ಸಹ ಒಂದು ಬಗೆಯ ದಾಖಲೆಯ ರೀತಿಯ ಬರವಣಿಗೆಗಳೇ ಹೊರತು ಸೃಜನಶೀಲ ಮನಸ್ಸಿನ ವ್ಯಾಪಾರವಾಗಿ ಈ ಪ್ರಕಾರ ಅರಳಿಲ್ಲ. ಅಂತಹ ಚಾರಿತ್ರಿಕ ಅಗತ್ಯವೂ ಒದಗಿ ಬಂದಿಲ್ಲವೆನ್ನುವುದೂ ಇದಕ್ಕೊಂದು ಕಾರಣ, ನಮ್ಮ ಲೇಖಕರು ತಮ್ಮ ಸೃಜನಶೀಲತೆಯ ಉತ್ತುಂಗ ನೆಲೆಯಲ್ಲಿ ಕವಿತೆ, ಕತೆ, ಕಾದಂಬರಿ, ನಾಟಕ, ಮೊದಲಾದ ಪ್ರಕಾರಗಳ ಮೂಲಕ ತಮ್ಮ ಅನುಭವ ವಿಚಾರಗಳಿಗೆ ಅಭಿವ್ಯಕ್ತಿ ನೀಡುತ್ತಾರೆ. ಆತ್ಮಕತೆ - ಒಂದು ಹಂತ ತಲುಪಿದ ನಂತರರದ ಕತೆ. ಸಾಧನೆಯ ದಾಖಲೆ, ನೆನಪಿನ ದೋಣಿಯು ಮೇಲೆ ಆಗುವ ಮನಸ್ಸಿನ ಲಹರಿ. ನಮ್ಮ ಲೇಖಕರಿಗೆ 'ಆತ್ಮಕತೆ ' ಗಾಂಧಿಯಂತೆ ಸತ್ಯಾನ್ವೇಷಣೆಯ ಸಾಧನವಲ್ಲ, ಲಕ್ಷಣ ಗಾಯಕವಾಡರಂತೆ ನೋವಿನ ಚರಿತ್ರೆಯನ್ನು ತಿಳಿಸಿ ಹೇಳುವ ಮಾಧ್ಯಮವೂ ಅಲ್ಲ, ಒಂದು ರೀತಿಯಲ್ಲಿ ಆತ್ಮಕಥೆ. ಸೃಜನಶೀಲತೆಯ ಆಚೆಗಿನ ವಿವರಗಳ ಮಾಹಿತಿ ಸಂಗ್ರಹ ಅದ್ದರಿಂದಲೇ ಒಂದು ಹಂತದ ನಂತರವೇ ನಮ್ಮ ಲೇಖಕರು - ಆತ್ಮಕತೆ ಬರೆಯಲು ಆರಂಭಿಸುವುದು ಅಥವಾ ಹೀಗೂ ಹೇಳಬಹುದು 'ಆತ್ಮಕಥೆ ನಮ್ಮಲ್ಲಿ ಬಿಡುವಿನ ಬರವಣಿಗೆ'.

ಸಿದ್ದಲಿಂಗಯ್ಯನವರ ಆತ್ಮಕಥನ 'ಊರುಕೇರಿ' ಈ ಬಗೆಯದಲ್ಲ. ಅದ್ದರಿಂದಲೇ ಕನ್ನಡದಲ್ಲಿ ಇದು ಹೊಸ ಬಗೆಯ ಕಥನ. ಇದು ಬಡತನದ ನೋವಿನ ಕತೆಯೂ ಅಲ್ಲ. ಸಾಧನೆಗಳ ಚರಿತ್ರೆಯೂ ಅಲ್ಲ. ತಾನು ಬೆಳೆದು ದೊಡ್ಡವನಾದ ಬಗೆಯನ್ನು ದಾಖಲಿಸುವ ಹಂಬಲವೂ ಇಲ್ಲಿಲ್ಲ. ಸೃಜನಶೀಲ ಮನಸ್ಸು ಬಡತನದಲ್ಲಿ ಹೊರಳಾಡುತ್ತಲೆ, ಅದನ್ನು ಗೆಲ್ಲುತ್ತ ಅಪಮಾನ ಅನುಭವಿಸುತ್ತದೆ. ಅದರ ವಿರುದ್ಧ ಹೋರಾಟದ ಮನೋಭಾವವನ್ನು ಬೆಳಸಿಕೊಳ್ಳುತ್ತ ಸಮಾಜದ ವಾಸ್ತವ ಸ್ಥಿತಿಯನ್ನು ಒಪ್ಪಿಕೊಳ್ಳುತ್ತಲೇ, ಅದಕ್ಕೆ ಮುಖಾಮುಖಿಯಾಗುತ್ತ ಸುತ್ತಲಿನ ಪರಿಸರಕ್ಕೆ ಆರೋಗ್ಯ ಪೂರ್ಣವಾಗಿ ಸ್ಪಂದಿಸಿದ ಕಥನವಿದು.

ಸಾಮಾನ್ಯವಾಗಿ ಆತ್ಮಕಥೆಯಲ್ಲಿ 'ನಾನು' ಕೇಂದ್ರವಾಗಿ ಅದರ ಸುತ್ತ ವಿವರಗಳು ಬೆಳೆಯುತ್ತವೆ. ಆದರೆ ಊರು-ಕೇರಿಯಲ್ಲಿ 'ನಾನು' ಎಂಬ 'ಅಹಂ' ಇಲ್ಲ. ಬದಲಾಗಿ 'ನಾನು' ಎಂಬ ಅಸ್ತಿತ್ವವನ್ನು ಕಂಡುಕೊಳ್ಳುವ ಪ್ರಕ್ರಿಯೆಯ ಕಥನವಾಗಿ ಇದು ಮುಖ್ಯ ಆಗುತ್ತದೆ. ನವ್ಯ ಸಾಹಿತ್ಯವನ್ನು ಅಧ್ಯಯನ ಮಾಡಿದ ಯಾರಿಗಾದರೂ ಈ ಕಥನದಲ್ಲಿರುವ ತುಂಟತನ, ವ್ಯಂಗ್ಯ, ತನ್ನನ್ನು ತಾನು ಗುರ್ತಿಸಿಕೊಳ್ಳುವ ಅನ್ವೇಷಣಾಕ್ರಮ ತಟಕ್ಕನೆ ಗಮನ ಸೆಳೆಯುತ್ತದೆ. ಆದರೆ ಆದರಿಂದಾಚೆ ನಿಲ್ಲುವ ಪ್ರಬಂಧ ಧ್ವನಿ ಮಾತ್ರ ಸಿದ್ದಲಿಂಗಯ್ಯನವರಿಗೆ ಅನನ್ಯವಾದುದು. ಮರಾಠಿಯಲ್ಲಿ ಆತ್ಮಕಥನಗಳ ಒಂದು ಪರಂಪರೆಯೇ ಇದೆ. ಸೋನೆ ಕಾಂಬಳೆ ಅವರ 'ಆಠವಣಿಚೆ ಪಕ್ಷಿ' ದಯಾಪವಾರರ 'ಬಲೂತ' ಲಕ್ಷ್ಮಣ ಮಾನೆಯವರ 'ಉಪಾರ' ಲಿಂಬಾಳೆಯವರ 'ಅಕ್ಕರ ಮಾಶಿ' ಗಾಯಕವಾಡರ 'ಉಚಲ್ಯಾ' ಮೊದಲಾದವುಗಳನ್ನು ಇಲ್ಲಿ ನೆನಪಿಸಿಕೊಳ್ಳಬಹುದು, ಆದರೆ ಕನ್ನಡದ 'ಊರುಕೇರಿ' ಇವೆಲ್ಲವುಗಳ ಸಾಲಿನಲ್ಲಿ ನಿಲ್ಲುತ್ತಲೇ ಅವುಗಳಿಂದ ಭಿನ್ನವಾಗುತ್ತದೆಂಬುದೇ ಇದರ ವಿಶಿಷ್ಟತೆ. ಸಿದ್ದಲಿಂಗಯ್ಯ ಸಮಕಾಲೀನ ಸಮಾಜವನ್ನು ಈ ಕಥನದುದ್ದಕ್ಕೂ ಮುಖಾಮುಖಿಯಾಗಿ ಎದುರಿಸುತ್ತದೆ. 'ಸಂಘಟಿತ ಧ್ವನಿಯಾಗಿ ಅಬ್ಬರದ ರಾಜಕಾರಣಿಯ ಆವೇಶದಿಂದ ಮಾತಾನಾಡುವುದೇ ಇಲ್ಲ. ಹೋರಾಟಗಾರನಾಗಿ ಬೆಳೆದು ಬಂದ, ಸಂಘಟನೆಯ ಹಿಂದಿನ ಸಿದ್ದಲಿಂಗಯ್ಯ ಅದರಿಂದ ದೂರನಿಂತು ಅನುಭವಗಳನ್ನು ಪ್ರಸ್ತುತ ಪಡಿಸುವ ಕ್ರಮ ಕಥನಕ್ಕೆ ವಿಶಿಷ್ಟ ಶಕ್ತಿ ತಂದು ಕೊಟ್ಟಿದೆ. ದಲಿತ ಬಂಡಾಯ ಲೇಖಕರಿಗಿಂತ ತುಂಬ ಭಿನ್ನವಾದ ಬಗೆಯಿದು. ಒಂದು ಜನಾಂಗದ ಕತೆ ಹೇಳುತ್ತೇನೆನ್ನುವ ಧೀಮಂತಿಕೆ ಇಲ್ಲಿಲ್ಲ. ತನ್ನಕತೆ ಹೇಳುತ್ತಲೇ ತನ್ನಂಥವರನ್ನೆಲ್ಲ ಒಳಗೊಳ್ಳುವ ಪ್ರಯತ್ನವನ್ನು ಸಿದ್ದಲಿಂಗಯ್ಯ ಮಾಡುತ್ತಾರೆ. ಹಾಗೆಂದು ಇದನ್ನು ದಲಿತರ ನೋವಿನ ಚರಿತ್ರೆಯಾಗಿ ನಾವು ಪರಿಭಾವಿಸುವುದು ಸಾಧ್ಯವಿಲ್ಲ. 'ಉಚಲ್ಯಾ' ಆ ಬಗೆಯದು. ಅಲ್ಲಿ ಲಕ್ಷ್ಮಣ ಗಾಯಕವಾಡ ಹೇಳುತ್ತಾರೆ "ಬಾಲ್ಯದಿಂದ ನಾನು ನನ್ನ ಸುತ್ತಲಿನ ಈ ಉಚಲ್ಯಾ ಜನರ ದಾರಿದ್ರ್ಯ, ಸಂಕಟ, ವೇದನೆಗಳನ್ನೆಲ್ಲ ನೋಡುತ್ತ

ಬಂದಿದ್ದೇನೆ. ಮನುಷ್ಯರಂತೆ ಬದುಕಲು ನಮಗೂ ಹಕ್ಕಿದೆ, ಕಿಸೆಗಳ್ಳತನದ ಈ ವ್ಯವಸಾಯ ಬಿಟ್ಟು, ಸ್ವಂತ ಶಕ್ತಿಯ ಮೇಲೆ ಬದುಕ ಬೇಕು, ಶಿಕ್ಷಣ ಪಡೆಯಬೇಕು, ಅನ್ಯಾಯದ ವಿರುದ್ಧ ಸಂಘಟಿತರಾಗಬೇಕೆಂದು ನಮ್ಮ ಜನರಿಗೆ ತಿಳುವಳಿಕೆ ನೀಡುತ್ತಿರುವ ಸಂದರ್ಭದಲ್ಲೇ ಸವರ್ಣೀಯರಿಗೆ, ಮಧ್ಯಮ ವರ್ಗದವರಿಗೆ, ಬುದ್ಧಿಜೀವಿಗಳಿಗೆ, ಪಟ್ಟ ಭದ್ರರಿಗೆ ನಮ್ಮ ಸಮಾಜದ ನೋವಿನ ಕತೆ ಗೊತ್ತಿಲ್ಲವೆಂಬ ಅರಿವು ನನಗಾಯಿತು. ಹೀಗಾಗಿ ಈ ಎಲ್ಲ ನೋವಿನ ಕತೆಯನ್ನು ಜನರೆದುರಿಗೆ ತೋಡಿಕೊಳ್ಳಬೇಕೆಂಬ ಪ್ರಯತ್ನವೇ ಈ ಬರವಣಿಗೆಯ ಉದ್ದೇಶ" ಲಕ್ಷ್ಮಣ ಗಾಯಕವಾಡರಿಗೆ ತಮ್ಮ ಜನಕ್ಕೆ ತಿಳುವಳಿಕೆ ನೀಡುವ, ಇತರರಿಗೆ ತಮ್ಮ ನೋವಿನ ಕತೆಯನ್ನು ತಿಳಿಸಿ ಹೇಳುವ ಇರಾದೆಯಿದೆ. ಆದ್ದರಿಂದಲೇ ಅಲ್ಲಿ ಸಾಹಿತ್ಯ ಕೃತಿಯ ಅನನ್ಯತೆಗಿಂತ ಸಮಾಜ ಶಾಸ್ತ್ರೀಯ ನೆಲೆ ಮುಖ್ಯವಾಗಿಬಿಡುತ್ತದೆ. ಹೀಗಾಗಿ ಓದುಗರನ್ನು ಒಂದು ನಿರ್ದಿಷ್ಟ ಹಿನ್ನೆಲೆಯ ಮೂಲಕ ಓದುವಂತೆ ಅದು ಒತ್ತಾಯಿಸುತ್ತದೆ. ಎಚ್. ನರಸಿಂಹಯ್ಯನವರ 'ಹೋರಾಟದ ಹಾದಿ'ಯಲ್ಲಿ ನಾವು ಇನ್ನೊಂದು ಮಾದರಿಯನ್ನು ಕಾಣುತ್ತೇವೆ. ಅದೂ ಹೋರಾಟದ ಕಥನವೇ. ಆದರೆ ಅದು ಸ್ವಶಕ್ತಿಯನ್ನು ನಂಬಿ ಬೆಳೆದ ಬಗೆ, ಅಲ್ಲಿಯೂ ತಿಳಿಸಿ ಹೇಳುವ ಹಂಬಲವೇ ಮುಖ್ಯ. ಎಚ್ಚೆನ್ ಹೇಳುತ್ತಾರೆ. "ಈ ಪುಸ್ತಕವನ್ನು ಓದಿ ವಿದ್ಯಾರ್ಥಿಗಳು ಯುವಕರು ತಮ್ಮ ಆತ್ಮ ವಿಶ್ವಾಸವನ್ನು ಸ್ವಪ್ರಯತ್ನವನ್ನು ಹೆಚ್ಚಿಸಿಕೊಳ್ಳುತ್ತಾರೆಂದು ನನ್ನ ನಂಬಿಕೆ" ಇದು ಸ್ವಪ್ರಯತ್ನದಿಂದ ಬೆಳೆದು ಬಂದ ಸಾಧಕನ ಚರಿತ್ರೆ. ಸಿದ್ದಲಿಂಗಯ್ಯನವರ 'ಊರು ಕೇರಿ' ಇವೆರಡಕ್ಕಿಂತಲೂ ಭಿನ್ನ. ಜನರಿಗೆ ತಿಳುವಳಿಕೆ ನೀಡುವ ಹಂಬಲವಾಗಲೀ ಇತರರಿಗೆ ತನ್ನ ನೋವನ್ನು ತೋಡಿಕೊಳ್ಳಬೇಕೆಂಬ ಮನೋಭಾವವಾಗಲೀ ಇಲ್ಲಿಲ್ಲ. ಅಥವಾ ತನ್ನ ಸಾಧನೆಯನ್ನು ಹೆಮ್ಮೆಯಿಂದ ಹಿಂತಿರುಗಿ ನೋಡುವ ಬಗೆಯು ಇದಲ್ಲ. ಸೃಜನಶೀಲ ಮನಸ್ಸಿಗೆ ಸಹಜವಾದ ಕುತೂಹಲ, ಜಡವಾಗದ ಸೂಕ್ಷ್ಮ ಸಂವೇದನೆ ಹಾಗೂ ವಿಶಿಷ್ಟ ಎನ್ನಬಹುದಾದ ತುಂಟತನದ ಮೂಲಕ ತನ್ನನ್ನು ತಾನು ಕಂಡುಕೊಳ್ಳುವ, ತನ್ಮೂಲಕ ಒಂದು ಜನಾಂಗವನ್ನು ಒಂದು ತಲೆಮಾರನ್ನು ಪರಿಚಯಿಸುವ ಪ್ರಯತ್ನ ಇಲ್ಲಿದೆ.

'ಊರು ಕೇರಿ' ಲಲಿತ ಪ್ರಬಂಧದ ಸ್ವರೂಪದಲ್ಲಿ ಇದೆ. ಅದೇ ಲವಲವಿಕೆ, ಅದೇ ತೆಳುಹಾಸ್ಯ, ಅದೇ ಬಗೆಯ ನಿರೂಪಣೆ, ಆದರೆ ಇದು ವಾಸ್ತವದ ಬೆನ್ನೇರಿ ಹೊರಟ ಮನಸ್ಸಿನ ಲಹರಿ ಅಲ್ಲ; ನೋವು ಅಪಮಾನಗಳನ್ನು ಗೆಲ್ಲುವ ಪ್ರತಿಭಾವಿಲಾಸ. ಸಿದ್ದಲಿಂಗಯ್ಯನವರ ವಿಶಿಷ್ಟತೆ ಇರುವುದೇ ಇಲ್ಲಿ. ಡಿ.ಆರ್. ನಾಗರಾಜ ಹಿನ್ನುಡಿಯಲ್ಲಿ ಸರಿಯಾಗಿಯೇ ಹೇಳಿರುವಂತೆ "ಬಡತನ ಮತ್ತು ಪ್ರತಿಭೆಗಳ ನಡುವಣದ ಸಂಬಂಧ ಊರು ಕೇರಿಯ ಒಂದು ಮುಖ್ಯ ವಸ್ತು. ಸಿದ್ದಲಿಂಗಯ್ಯನವರ ಆತ್ಮ ಕತೆಯಲ್ಲಿ ದಲಿತ ಲೇಖಕರ ಕೃತಿಗಳಲ್ಲಿ ನಾವು ನಿರೀಕ್ಷಿಸಬಹುದಾದ ಅನೇಕ ಅಂಶಗಳಿವೆ. ಬಡತನ, ರೊಚ್ಚು, ಅಪಮಾನ ಇತ್ಯಾದಿಗಳೆಲ್ಲ ಇವೆ. ಆದರೆ ಇಡೀ ಕೃತಿಯಲ್ಲಿ ಹೊಸದಾದ ಅನಿರೀಕ್ಷಿತವಾದ ಒಂದು ಮುಖ್ಯಾಂಗವೂ ಇದೆ. ಅದು ಬಡತನ ಮತ್ತು ಹಿಂಸೆಯ ಬಗ್ಗೆ ಭೀತಿಯ ಗೈರುಹಾಜರಿ. ಈ ಕೃತಿಯ ವಸ್ತು ದಲಿತ ಕೃತಿಗಳಿಗೆ ಸಾಮಾನ್ಯವಾದದ್ದು, ಚೇತೋಹಾರಿಯಾದದ್ದು ಬಡತನ, ಜಾತಿ ಅವಮಾನಗಳನ್ನು ಕೊಂಚ ವಕ್ರೀಕರಣಗೊಳಿಸುವ ಮೂಲಕ ಕವಿ ಸಿದ್ದಲಿಂಗಯ್ಯ ಅವನ್ನು ದಾಟುವ ಮಾರ್ಗಗಳನ್ನು ತೋರಿಸುತ್ತಾರೆ." ಲೋಹಿಯಾ ಸೃಜನಶೀಲತೆಯ ಬಗ್ಗೆ ಮಾತನಾಡುವಾಗ ಇದನ್ನು ಹೇಳಿದ್ದಾರೆ. ಜಡವಾದ ರೂಢಿಗತ ಸಮಾಜದಲ್ಲಿ ಚಲನೆ ಉಂಟಾಗಬೇಕಾದರೆ ಮನುಷ್ಯನನ್ನು ಸೃಜನಶೀಲನನ್ನಾಗಿಸುವ ಅಗತ್ಯವಿದೆಯೆಂದು ಲೋಹಿಯಾ ನಂಬಿದ್ದರು. ಸೃಜನಶೀಲತೆಗೆ ವಿಶಿಷ್ಟ ಶಕ್ತಿಯಿದೆ. ಅದು ದಾಸ್ಯವನ್ನು ಕಿತ್ತೊಗೆಯುವ, ಪಟ್ಟಭದ್ರ ವ್ಯವಸ್ಥೆಯನ್ನು ಪ್ರತಿಭಟಿಸುವ, ನೋವು ಅಪಮಾನಗಳನ್ನು ಗೆಲ್ಲುವ ಹಂಬಲವುಳ್ಳದ್ದಾಗಿರುತ್ತದೆ. ವಿರುದ್ಧ ಪರಿಸರದಲ್ಲಿ ತನ್ನ ಬದುಕನ್ನು ಅರ್ಥಪೂರ್ಣ ಮಾಡಿಕೊಳ್ಳಲು ಸದಾ ಹೆಣಗುತ್ತಿರುತ್ತದೆ.

ಮನಸ್ಸು ಜಡವಾಗಿ ಬಿಟ್ಟರೆ ಎಂಥ ನೋವನ್ನು, ಅಪಮಾನವನ್ನು ತಾಳಿಕೊಳ್ಳುವ ಸ್ಥಿತಿ ತಲುಪಿ ಬಿಡುತ್ತದೆ. ಅಂಥಲ್ಲೇ ವಿಧಿವಾದ ನೆರವಿಗೆ ಬರುವುದು. ಅಸಹಾಯಕ ಸ್ಥಿತಿಯ ಅರಿವಿದ್ದು ಅದನ್ನು ಮೀರುವ ಪ್ರತಿಭೆಯಿಲ್ಲದಿದ್ದಾಗ ಸಿನಿಕರಾಗಿ ಬಿಡುವ ಸಾಧ್ಯತೆಯಿರುತ್ತದೆ. ಆಗ ಗೊಣಗಾಟ ಮಾತ್ರ ಸಾಧ್ಯ ,ಇಂಥ ಗೊಣಗಾಟಗಳು ಕ್ರಮೇಣ ಸಿದ್ಧಾಂತಗಳ ಸೋಗು ಹಾಕುತ್ತ ವಿಚಾರ ಗೋಷ್ಠಿಗಳ ವಿಲಾಸಕ್ಕೆ ಸೀಮಿತವಾಗಿಬಿಡುತ್ತವೆ. ಹೀಗಾಗಿ ಇದನ್ನು ಮೀರಲು ಇರುವ ಒಂದೇ

ಹಾದಿಯೆಂದರೆ ಮನಸ್ಸಿನ ಸೃಜನಶೀಲತೆ. ಇದರಲ್ಲಿಯೂ ಒಂದು ದುರಂತವಿದೆ. ನಮ್ಮ ಸಾಮಾಜಿಕ ಸನ್ನಿವೇಶದಲ್ಲಿ ಸೃಜನಶೀಲತೆಗೆ ಸಂಸ್ಥಾರೂಪ ಕೊಡುವ ಪ್ರಯತ್ನ ಕೆಲವರ ಆಸಕ್ತಿ. ಒಮ್ಮೆ ಹೀಗೆ ಪ್ರತಿಭಾ ಸಂಸ್ಥಾರೂಪ ಪಡೆದುಕೊಳ್ಳತೊಡಗಿದ ಕ್ಷಣವೇ ಸಾಂಸ್ಥಿಕ ಶಕ್ತಿ ಪ್ರತಿಭೆಯನ್ನು ಸೃಜನಶೀಲತೆಯನ್ನು ನಿರ್ದೇಶಿಸತೊಡಗುತ್ತದೆ. ಮುಂದೆ ಈ ನಿರ್ದೇಶಿತ ಅಧಿಕಾರವೇ ಸೃಜನಶೀಲತೆಯನ್ನು ನಿಯಂತ್ರಿಸುತ್ತ ಅದನ್ನು ಮುದುಡಿಸುತ್ತದೆ ಅಥವಾ ಪ್ರದರ್ಶನದ ವಸ್ತುವಾಗಿಸುತ್ತದೆ. ಆದ್ದರಿಂದಲೇ ಸಂಸ್ಕೃತಿಯ ಸಾಂಸ್ಥಿಕ ಸ್ವರೂಪದ ವಕ್ತಾರರ ವಸ್ತು ಬಗ್ಗೆ ಸೃಜನಶೀಲ ಪ್ರತಿಭೆಗೆ ಯಾವಾಗಲೂ ಆತಂಕ. ಸಿದ್ದಲಿಂಗಯ್ಯನವರಿಗೆ ಇದರ ಅರಿವಿದ್ದು ಅದನ್ನು ಈ ಕೃತಿಯಲ್ಲಿ ಮೀರಿದ್ದಾರೆಂದೇ ಊರುಕೇರಿ ಮುಖ್ಯವಾಗುತ್ತದೆ.

ಸಿದ್ಧಲಿಂಗಯ್ಯನವರದು ಮೂಲತಃ ನಾಟಕೀಯ ಪ್ರತಿಭೆ. ಇದು ಜನಪದ ಮೂಲವಾದ್ದರಿಂದ 'ಆಟ' ಈ ಪ್ರತಿಭೆಯ ಒಂದು ಮುಖ್ಯ ಲಕ್ಷಣ. ಊರುಕೇರಿಯಲ್ಲಿ ಈ ಬಗೆಯ 'ಆಟ'ದ ವಿಶಿಷ್ಟತೆ ಇಡೀ ಬರವಣಿಗೆಯನ್ನು ರೂಪಿಸಿದೆ. ಈ 'ಆಟ'ದ ಲಕ್ಷಣವೆಂದರೆ ಕ್ರಿಯೆಯಲ್ಲಿ ತನ್ನನ್ನು ಸಂಪೂರ್ಣ ತೊಡಗಿಸಿಕೊಳ್ಳುತ್ತ, ನಂತರದಲ್ಲಿ ಅದರಿಂದ ಪ್ರತ್ಯೇಕವಾಗಿ ನಿಲ್ಲುವ ಶಕ್ತಿ. ಎರಡು ತಂಡಗಳು ಕ್ರೀಡಾಂಗಣದಲ್ಲಿ , ನಟ ರಂಗಭೂಮಿಯಲ್ಲಿ ಇರುವ ಸ್ಥಿತಿಗೂ ನಂತರದ ನೇಪಥ್ಯದ ಸನ್ನಿವೇಶಕ್ಕೂ, ಇರುವ ಅಂತರ ಗಮನಿಸಿ. ಈ ಅಂತರವೇ ಕಲೆಯ ರಹಸ್ಯ. ಸಿದ್ದಲಿಂಗಯ್ಯ ಸಮಕಾಲೀನ ಚರಿತ್ರೆ ಬರೆಯುವ ಸವಾಲನ್ನು ಈ ಕೃತಿಯಲ್ಲಿ ಎದುರಿಸಿದ್ದಾರೆ. ಹಾಗೆ ಬರೆಯುವಾಗ ವರದಿ ಆಗುವ ಅಪಾಯ ಒಂದು ಕಡೆಗಿದ್ದರೆ, ಮತ್ತೊಂದು ಕಡೆ ವಾಸ್ತವವನ್ನು ಕುರುಪಗೊಳಿಸದೆ ಹೇಳುವ ಸವಾಲೂ ಅವರ ಮುಂದಿದೆ. ಕವಿ ಪ್ರತಿಭೆ ಇದನ್ನು ಸಮರ್ಥವಾಗಿ ಎದುರಿಸಿದೆ. 'ತಟಸ್ಥ ತಲ್ಲೀನತೆ' ಈ ಬರವಣಿಗೆಯ ಹಿಂದಿನ ಒಂದು ಶಕ್ತಿ. ತೀವ್ರತೆ ಇದ್ದೂ ಅದನ್ನು ನಿಯಂತ್ರಿಸಬಲ್ಲ ಕಸುವು ಸಿದ್ದಲಿಂಗಯ್ಯನವರಿಗೆ ಇರುವುದರಿಂದಲೇ ಈ ಕಥನ ವಿವರಗಳಲ್ಲಿ ಸೊಕ್ಕದೆ, ನಮ್ಮನ್ನು ಉದ್ರೇಕ ಅಥವಾ ನಿರ್ಲಕ್ಷ್ಯ ಸ್ಥಿತಿಗೆ ತಳ್ಳದೆ ಕಾಡುವ ಶಕ್ತಿ ಪಡೆದುಕೊಳ್ಳುತ್ತದೆ. ಮೊದಲ ಪುಟದ ಈ ಪ್ಯಾರಾವನ್ನು ಗಮನಿಸಿ "ಎಂದಿನಂತೆ ಹುಡುಗರೆಲ್ಲ ನಮ್ಮ ಮನೆಯ ಪಕ್ಕ ಮೋಟುಗೋಡೆಯ ಮೇಲೆ ನಿಂತು ಅಪ್ಪ ಅವ್ವಂದಿರನ್ನು ಕೂಗುತ್ತಿದ್ದಾಗ ನಮಗೆ ಒಂದು ನೋಟ ಕಾಣಿಸಿತು. ಐನೋರ ಹೊಲದಲ್ಲಿ ಇಬ್ಬರು ಮನುಷ್ಯರು ಹೆಗಲ ಮೇಲೆ ನೊಗಹೂಡಿ ಇನ್ನಿಬ್ಬರು ಹೊಲ ಉಳುತ್ತಿದ್ದರು. ನೊಗ ಹೊತ್ತ ಆ ಇಬ್ಬರು ಮನುಷ್ಯರ ಎತ್ತುಗಳಂತೆ ಮುಂದೆ ಹೋಗುತ್ತಿದ್ದರೆ ಇನೊಬ್ಬ ಹಿಂದಿನಿಂದ ಚಾಟಿ ತಿರುಗಿಸುತ್ತಾ ಉಳುಮೆ ಮಾಡುತ್ತಿದ್ದ ದೃಶ್ಯ ಮೋಜಿನಂತೆ ಕಂಡರೂ ನೊಗ ಹೊತ್ತಿದ್ದ ಇಬ್ಬರು ವ್ಯಕ್ತಿಗಳಲ್ಲಿ ಒಬ್ಬ ನನ್ನ ಅಪ್ಪ ಎಂದು ಗೊತ್ತಾದ ಕ್ಷಣದಿಂದ ನನ್ನಲ್ಲಿ ವಿಚಿತ್ರವಾದ ಸಂಕಟ ಶುರುವಾಯಿತು. ಹುಡುಗರಿದ್ದ ಜಾಗಕ್ಕೆ ಬಂದ ಕೆಲವು ಹೆಂಗಸರು 'ಪಾಪ ದ್ಯಾವಣ್ಣನಿಗೆ ಎಂಥ ಕಷ್ಟ ಬಂತು' ಎಂದದ್ದು ನನ್ನ ಕಿವಿಗೆ ಬಿದ್ದು ಮನಸ್ಸಿನ ನೋವು ಇಮ್ಮಡಿಯಾಯಿತು. ಗದ್ದೆಯಲ್ಲಿ ಎತ್ತಾಗಿ ದುಡಿದು ನನ್ನಪ್ಪ ಸಂಜೆ ಮನೆಗೆ ಬಂದಾಗ ಅವ್ವ ಅವನ ಭುಜಕ್ಕೆ ಎಣ್ಣೆ ಕಾಯಿಸಿ ಹಚ್ಚುತ್ತಿದ್ದಳು" ಈ ಸನ್ನಿವೇಶದ ಬಗ್ಗೆ ಎಷ್ಟು ಬೇಕಾದರೂ ವ್ಯಾಖ್ಯಾನ ನೀಡಬಹುದು. ಆದರೆ ಸಿದ್ದಲಿಂಗಯ್ಯ ಹಲ್ಲು ಕಚ್ಚಿದ ಸಂಯಮದಲ್ಲಿ ಇದನ್ನು ನಮ್ಮ ಮುಂದಿಡುತ್ತಾರೆ. ಇಂಥ ಅನೇಕ ಪ್ರಸಂಗಗಳು ಈ ಕಥನದಲ್ಲಿವೆ. ತನ್ನ ತಾಯಿ ಕಸ ಗುಡಿಸುವ ಕೆಲಸ ಮಾಡುತ್ತಿದ ವಿದ್ಯಾರ್ಥಿನಿಲಯದಲ್ಲೇ ಸಿದ್ದಲಿಂಗಯ್ಯ ಇರುತ್ತ ಅಲ್ಲಿನ ಸನ್ನಿವೇಶಗಳನ್ನು ನಿರೂಪಿಸುವ ಕ್ರಮವನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ಯಾವ ಪ್ರಸಂಗದಲ್ಲೇ ಆಗಲಿ ಕವಿ ಸಂಯಮವನ್ನು ಕಳೆದುಕೊಳ್ಳುವುದಿಲ್ಲ, ನೋವು ಅವಮಾನಗಳಿಂದ ವಿಚಲಿತರಾಗುವುದಿಲ್ಲ. ನಗುವ ಶಕ್ತಿಯನ್ನು ಉಳಿಸಿಕೊಳ್ಳುತ್ತಾರೆ.

'ಊರುಕೇರಿ' ಸಿದ್ದಲಿಂಗಯ್ಯನವರ ಬಾಲ್ಯ ಜೀವನ ಹಾಗೂ ಕಾಲೇಜು ದಿನಗಳಿಗೆ ಬಂದು ನಿಲ್ಲುತ್ತದೆ. ನಂತರದ ಎರಡು ದಶಕಗಳನ್ನು ಸಿದ್ದಲಿಂಗಯ್ಯ ಕಳೆದಿದ್ದಾರೆ. ಅದರ ಬಗ್ಗೆ ಬರೆಯುವ ಗೋಜಿಗೆ ಹೋಗಿಲ್ಲ. ಡಿ. ಆರ್. ನಾಗರಾಜ್ ಈ ಬಗ್ಗೆ ಪ್ರಸ್ತಾಪಿಸುತ್ತ "ವಯಸ್ಕ ಸಂವೇದನೆ ತೀವ್ರವಾಗಿ ಆತ್ಮಕಥನ ಬರೆಯುವುದು ಕಷ್ಟವಾಗುತ್ತದೆ. ಏಕೆಂದರೆ ವಯಸ್ಕ ಸ್ಥಿತಿ ತಾರತಮ್ಯ ನಿರ್ಮಾಣದ ವರ್ಗೀಕರಣ ಸ್ಥಿತಿ. ತನ್ನ ಸಾಮಾಜಿಕ ಮುಖವಾಡವನ್ನೆ ಸಮರ್ಥಿಸಿಕೊಳ್ಳುವ, ವಿಸ್ತರಿಸುವ, ವಿವರಿಸುವ ಬರವಣಿಗೆಯಾಗಿ ಆತ್ಮಕಥನ ಬಳಕೆಯಾಗುತ್ತದೆ. ಭರಿಸುವ ನೋಯಿಸುವ, ತನ್ನನ್ನೆ ವಿಕಟವಾಗಿ ಕಾಣುವ

ಗುಣಗಳು ಇಲ್ಲದ ಆತ್ಮಕಥನ ಅಗ್ಗದ ಸ್ವಸಮರ್ಥನೆಯಾಗುತ್ತದೆ." ಎನ್ನುತ್ತಾರೆ. ಹೌದು ಅವರು ಹೇಳುವುದು ನಿಜ, ಆದರೆ ಸಿದ್ದಲಿಂಗಯ್ಯನವರ ಊರುಕೇರಿ ಬಡತನವನ್ನು ಇಕ್ಕಿಮೆಟ್ಟಿ ಪ್ರತಿಭೆಯ ಮೂಲಕ ಅದನ್ನು ಗೆದ್ದ ಹಾಗೆ ಇಲ್ಲಿಯೂ ಅದು ಸಾಧ್ಯವಾಗಬೇಕು ಅಲ್ಲವೇ? ಅಥವಾ ವಯಸ್ಕ ಸ್ಥಿತಿ ತನ್ನನ್ನು ತಾನು ಎದುರಿಸಲಾಗದ ಒಪ್ಪಂದಗಳ ಸ್ಥಿತಿಯೇ? ಊರುಕೇರಿಯಲ್ಲಿ ಬಡತನ ಮತ್ತು ಹಿಂಸೆಯ ಬಗ್ಗೆ ಭೀತಿಯ ಗೈರುಹಾಜರಿ ಒಂದು ಮುಖ್ಯಾಂಗ ಎಂದು ನಾಗರಾಜ್ ಗುರ್ತಿಸುತ್ತಾರೆ. ಆದರೆ ತನ್ನನ್ನು ತಾನು ಎದುರಿಸಲಾಗದ ಅದೇ ಭೀತಿ ಇಲ್ಲಿ ದುತ್ತೆಂದು ಎದುರಾಗಿ ಎರಡು ದಶಕಗಳ ಹಿಂದಕ್ಕೆ ಈ ಕಥನ ನಿಂತಿತೇ? ನಾಗರಾಜರ ಸಮರ್ಥನೆ, ಸಾಹಿತ್ಯ ಚರ್ಚೆಯ ದೃಷ್ಟಿಯಿಂದ ಒಪ್ಪಬಹುದಾದರೂ ಅವರೇ ಹೇಳುವ ಪ್ರತಿಭೆ ಮತ್ತು ವಾಸ್ತವ ಸ್ಥಿತಿಯ ನಡುವಣ ಸಂಬಂಧದ ದೃಷ್ಟಿಯಿಂದ ಚರ್ಚೆ ಬೆಳಸಬಹುದೆನ್ನಿಸುತ್ತದೆ.

ಈ ಕೃತಿಗೆ ಡಿ. ಆರ್. ನಾಗರಾಜ್ ಬರೆದಿರುವ ಹಿನ್ನುಡಿ ಅವರ ಇತರ ಬರವಣಿಗೆಗಿಂತ ಭಿನ್ನವಾಗಿದ್ದು 'ಊರುಕೇರಿ'ಯ ಬರವಣಿಗೆಯ ರೀತಿ ಅವರ ಬರವಣಿಗೆಯ ಸ್ವರೂಪದ ಮೇಲೂ ಪರಿಣಾಮ ಬೀರಿದಂತಿದೆ. ಇದು 'ಊರುಕೇರಿ'ಯ ಶಕ್ತಿ. ಸಿದ್ಧಾಂತಗಳನ್ನು, ಸಮರ್ಥನೆಗಳನ್ನು ಬೌದ್ಧಿಕ ವಿಲಾಸವನ್ನು ದೂರದಲ್ಲಿಟ್ಟು ಅದರ ಸಾರವನ್ನು ಮಾತ್ರ ಸ್ವೀಕರಿಸುವ ಸಿದ್ದಲಿಂಗಯ್ಯನವರ ಪ್ರತಿಭೆಗೆ ಅನಂತಮೂರ್ತಿ ಹೇಳುವ ಹಿತ್ತಲ ಗುಣವಿದೆ. ನಾಗರಾಜ್ ಜಗಲಿಯ ಪ್ರದರ್ಶನದಿಂದ ಇಲ್ಲಿ ಹಿತ್ತಲ ಆಪ್ತತೆಗೆ ಸರಿದಿದ್ದಾರೆ. ಕನ್ನಡ ಸಂಸ್ಕೃತಿಯಲ್ಲಿ 'ಊರು ಕೇರಿ' ಬೀರಬಹುದಾದ ಪ್ರಭಾವದ ಸೂಚನೆಯಿದು ಅನ್ನಿಸುತ್ತದೆ."

ಈ ಉಲ್ಲೇಖವನ್ನು ಗಮನಿಸಿದಾಗ ಪುಸ್ತಕ ವಿಮರ್ಶೆಯನ್ನು ಮಾಡುವ ಸಂದರ್ಭದಲ್ಲಿ ಪುಸ್ತಕ ವಿಮರ್ಶಕರ ಮನೋಧರ್ಮ ಯಾವ ರೀತಿ ಕೆಲಸ ಮಾಡುತ್ತದೆ ಎಂಬುದನ್ನು ಸೂಚಿಸುತ್ತದೆ. ಇವರು ಮುಖ್ಯವಾಗಿ ಕೃತಿಯನ್ನು ಪರಿಸರಕ್ಕೆ ಆರೋಗ್ಯ ಪೂರ್ಣವಾಗಿ ಸ್ಪಂದಿಸಿದ ಕಥನವಿದು, ಎಂದು ನಿರ್ವಚಿಸುತ್ತಾರೆ. ಅಂದರೆ ಈ ಹೇಳಿಕೆಯ ಹಿಂದೆ ಒಂದು ಬಲವಾದ ಸೈದ್ಧಾಂತಿಕ ನಿಲುವಿದೆ. ಈ ಕೃತಿಕಾರರ ಈ ಹಿಂದಿನ ಕೃತಿಗಳು ಎಬ್ಬಿಸಿದ ಕ್ರಾಂತಿ, ರೊಚ್ಚು ರಬಸಗಳು ಅನಾರೋಗ್ಯ ವಾತಾವರಣವನ್ನು ಸೃಷ್ಟಿಸಿದವು ಎಂಬ ನಿಲುವನ್ನು ಪ್ರತಿಪಾದಿಸುವಂತಿದೆ. ಅಂದರೆ ಕೃತಿಯನ್ನು ತಣ್ಣನೆಯ ರೂಪದಲ್ಲಿ, ಆತ್ಮೀಯವಾಗಿ ಹೇಳುವ ನೆಪದಲ್ಲಿ ಕ್ರಾಂತಿಯ ಸ್ವರೂಪವನ್ನು, ನಿಲುವುಗಳನ್ನು ಆರಿಸುವ ಯತ್ನವನ್ನು ಈ ಪುಸ್ತಕ ವಿಮರ್ಶೆ ಮಾಡುತ್ತಿದೆಯೆನಿಸುತ್ತದೆ. ಅದರ ಜೊತೆಯಲ್ಲಿಯೇ ಸಮಕಾಲೀನ ಸಮಾಜವನ್ನು ಈ ಕಥನದುದ್ದಕ್ಕೂ ಮುಖಾಮುಖಿಯಾಗಿ ಎದುರಿಸುತ್ತದೆ ಎಂಬ ಸಾಮಾನ್ಯ ಹೇಳಿಕೆಯನ್ನು ನೀಡಿ ಯಾವುದೇ ಚರ್ಚೆಗೆ ಪುಸ್ತಕ ವಿಮರ್ಶಕರು ಹೋಗುವುದಿಲ್ಲ. 'ಅಬ್ಬರದ ರಾಜಕಾರಣಿಯ ಆವೇಶದಿಂದ ಮಾತನಾಡುವುದೇ ಇಲ್ಲ' ಇಂಥ ಹೇಳಿಕೆಗಳನ್ನು ನೋಡಿದಾಗ ಇಲ್ಲಿ ಕೃತಿಯ ವಿಮರ್ಶೆಗಿಂತ ಲೇಖಕರ ಹಿಂದಿನ ಹಿನ್ನೆಲೆಗಳ ಮೂಲಕ ಪರಿಶೀಲನೆ ನಡೆಯುತ್ತಿದೆ ಅನಿಸುತ್ತದೆ. ಅಂದರೆ ಒಬ್ಬ ರಾಜಕಾರಣಿಯಾಗಿ ಆವೇಶದಿಂದ ಮಾತನಾಡದೆ ಸೌಮ್ಯವಾಗಿರುವುದು ಈ ಪುಸ್ತಕ ವಿಮರ್ಶಕರಿಗೆ ತುಂಬಾ ಆತ್ಮೀಯವಾಗಿದೆ. ಸಮಾಜದ ಸ್ಥಿತಿಯನ್ನು ಕ್ರಾಂತಿಯ ಮೂಲದಿಂದ ನೋಡುವುದು ಇವರಿಗೆ ಭೀತಿಯನ್ನು ತಂದಂತೆ ಕಂಡಿದೆ. ಆದರೆ ಲೇಖಕರಲ್ಲಿನ ಸಂಘಟನೆಯನ್ನು, ಸಂಘಟನ ಶಕ್ತಿಯನ್ನು ಕುರಿತು ಈ ಪುಸ್ತಕ ವಿಮರ್ಶಕರು 'ದೂರ ನಿಂತು ಅನುಭವಗಳನ್ನು ಹೇಳುವುದು, ಮತ್ತು ಅದರಿಂದ ಒದಗಿಬಂದಿರುವ ವಿಶಿಷ್ಟ ಶಕ್ತಿ ಎಂಬವುಗಳು ಕೃತಿಕಾಗಗ ಪಾಸಿಟೀವ್ ಅಂಶಗಳನ್ನು ದಮನಗೊಳಿಸುವ

ಕಡೆಗೆ ಮತ್ತು ಯಥಾಸ್ಥಿತಿವಾದವನ್ನು ಮುಂದುವರಿಸುವ ಕಡೆಗಿದ್ದಾರೆ ಎನಿಸುತ್ತದೆ. ಹಾಗೆಯೇ 'ಒಂದು ಜನಾಂಗದ ಕತೆ ಹೇಳುತ್ತೇನೆನ್ನುವ ಧೀಮಂತಿಕೆ ಇಲ್ಲಿಲ್ಲ' ಎಂದು ಹೇಳುತ್ತಲೇ ಕೃತಿಕಾರಲ್ಲಿನ ಒಂದು ಜನಾಂಗೀಯ ಬದುಕನ್ನು ಅಲ್ಲಗೆಳೆಯುತ್ತಿದ್ದಾರೆನಿಸುತ್ತದೆ. ಪುಸ್ತಕ ವಿಮರ್ಶಕರಿಗೆ ಇಂಥ ಸಮಸ್ಯೆಗಳು ಯಾಕೆ ಮೂಡುತ್ತವೆ?

'ಊರುಕೇರಿ' ಲಲಿತ ಪ್ರಬಂಧದ ಶೈಲಿಯಲ್ಲಿದೆ ಮತ್ತು ನಾಟಕೀಯ ಪ್ರತಿಭೆ, ಒಂದು ಬಗೆಯ 'ಆಟ' ಎಂಬ ವಿಶೇಷಣಗಳು ಮತ್ತು ಮತ್ತೊಂದು ಪ್ರಕಾರದೊಂದಿಗೆ ಸಮೀಕರಿಸುವುದರ ಹಿಂದೆ ಯಾವ ಉದ್ದೇಶಗಳಿರುತ್ತವೆ? ಈ ಪುಸ್ತಕ ವಿಮರ್ಶಕರು ಕೃತಿಯನ್ನು ವಿಶ್ಲೇಷಿಸುವಾಗ ಬಳಸುವ 'ನೋವು ಅಪಮಾನಗಳನ್ನು ಗೆಲ್ಲುವ ಪ್ರತಿಭಾವಿಲಾಸ', 'ಬಡತನ ಮತ್ತು ಹಿಂಸೆಯ ಬಗ್ಗೆ ಭೀತಿಯ ಗೈರುಹಾಜರಿ', 'ಮನಸ್ಸಿನ ಸೃಜನ ಶೀಲತೆ', 'ತಟಸ್ಥ ತಲ್ಲೀನತೆ', 'ನಾಟಕೀಯ ಪ್ರತಿಭೆ', 'ಹಿತ್ತಲ ಗುಣವಿದೆ' ಇಂಥ ಪರಿಭಾಷೆಗಳು ಯಾವುದನ್ನು ನಿರ್ದೇಶಿಸುತ್ತವೆ? ಈ ಪುಸ್ತಕ ವಿಮರ್ಶಕರು ಯಾಕೆ ಇಂಥ ಮೀಮಾಂಸಪರ ಮೌಲ್ಯಮಾಪನದಲ್ಲಿ ತೊಡಗಿದ್ದಾರೆ?

ಪುಸ್ತಕ ವಿಮರ್ಶಕರ ಬಗೆಗೆ ಈ ಬಗೆಯ ಹಲವು ಪ್ರಶ್ನೆಗಳು ಮೂಡುತ್ತವೆ. ಅವುಗಳಿಗೆ ಉತ್ತರಗಳನ್ನು ಹೀಗೆ ಕಂಡುಕೊಳ್ಳಬಹುದು.

ಲೇಖಕರು ಹುಟ್ಟಿ ಬಂದಿರುವ ಪರಿಸರ ಮತ್ತು ಬರೆಯುತ್ತಿರುವ ಪರಿಸರ ಜೊತೆಗೆ ಈ ಪುಸ್ತಕ ವಿಮರ್ಶಕರು ಹುಟ್ಟಿ ಬರೆಯುತ್ತಿರುವ ಪರಿಸರ ಪರಸ್ಪರ ಭಿನ್ನವಾಗಿವೆ. ಅವುಗಳ ನಡುವೆ ಸಾಂಸ್ಕೃತಿಕವಾದಂಥ ಒಂದು ಅಂತರವಿದೆ. ಈ ಅಂತರವನ್ನು ಮುರಿಯುವಿಕೆಯಲ್ಲಿ ಪುಸ್ತಕ ವಿಮರ್ಶಕರು ಸ್ವಲ್ಪ ಆದರ್ಶಮಯವಾದ ಪ್ರೀತಿ ಔದಾರ್ಯಗಳನ್ನು ತೋರಿಸುತ್ತಿರಬಹುದು. ಅದರ ಜೊತೆಯಲ್ಲಿಯೇ ಸಾಂಸ್ಕೃತಿಕ ಬಿಕ್ಕಟ್ಟನ್ನು ಒಂದೇ ಕಾಲಕ್ಕೆ ಸರಿಪಡಿಸಬಹುದೆಂಬ ಧೋರಣೆಯು ಇರಬಹುದು. ಅಂತಹ ಸಂದರ್ಭದಲ್ಲಿ ಇಂತಹ ಸರಳ ಪರಿಹಾರೋಪಾಯ ಕಾರ್ಯಗಳಲ್ಲಿ ಪುಸ್ತಕ ವಿಮರ್ಶಕರು ತೊಡಗುತ್ತಾರೆ. ಹಾಗಾಗಿ ಕೃತಿಯನ್ನು ತುಂಬಾ ಆತ್ಮೀಯವಾಗಿ ದರ್ಶಿಸಿದವರಂತೆ ತೋರ್ಪಡಿಸಿಕೊಳ್ಳುತ್ತಾರೆ.

ಒಂದು ಪ್ರತ್ಯೇಕ ಪ್ರಕಾರವನ್ನು ಮತ್ತೊಂದು ಪ್ರಕಾರದೊಂದಿಗೆ ಹೋಲಿಸುವ ವಿಲಕ್ಷಣ ಪ್ರವೃತ್ತಿಯ ಹಿನ್ನೆಲೆಯೇನು? ಲಲಿತ ಪ್ರಬಂಧಕ್ಕೆ ಅದರದೇ ಆದ ಲಕ್ಷಣಗಳಿವೆ. ಹಾಗೆಯೇ ನಾಟಕಕ್ಕೆ ಮತ್ತು ಜಾನಪದೀಯವಾದ 'ಆಟ'ಕ್ಕೂ ತನ್ನವೇ ಆದ ಲಕ್ಷಣಗಳಿವೆ. ಇತ್ತೀಚಿನ ಆತ್ಮಕತೆಯನ್ನು ಇವುಗಳೊಂದಿಗೆ ಹೋಲಿಸುವುದರ ಹಿಂದೆ ಆತ್ಮಕತೆಯ ಲಕ್ಷಣಗಳನ್ನು ಮತ್ತು ತಾತ್ವಿಕತೆಯನ್ನು ಸರಳೀಕರಿಸಬಹುದು. ಹೀಗೆ ಮಾಡುತ್ತ ಸ್ವತಂತ್ರ ಪ್ರಕಾರವಾಗಿ ಬೆಳೆಯಬಹುದಾದ ವ್ಯಾಪ್ತಿಯನ್ನು ಕಿರಿದುಗೊಳಿಸಬಹುದೆನಿಸುತ್ತದೆ.

ಈ ಪುಸ್ತಕ ವಿಮರ್ಶೆಯಲ್ಲಿ ಮತ್ತೆ ಮತ್ತೆ ಪುನರಾವರ್ತನೆಯಾಗುವುದು ಭಾರತೀಯ ಕಾವ್ಯ ಮೀಮಾಂಸೆಯ ಕಾವ್ಯ ಪರಿಕಲ್ಪನೆಗಳು. ಕೃತಿಯನ್ನು ನೋಡುವ ನೆಪದಲ್ಲಿ ಕೃತಿಯನ್ನು ಮೀಮಾಂಸೆಯ ಪರಿಕರಗಳತ್ತ ಎಳೆದೊಯ್ಯುತ್ತಿದ್ದಾರೆನಿಸುತ್ತದೆ. ಹೀಗೆ ಮಾಡುವುದರ ಹಿಂದೆ ಪುಸ್ತಕ ವಿಮರ್ಶಕರ

ಮನೋಧರ್ಮವು ಹಳೆಯ ವಿಚಾರಗಳ ಪರವಾಗಿದ್ದು, ಹೊಸ ಚಿಂತನೆಯ ಹುಟ್ಟುವಿಕೆಗೆ ತಡೆಯೊಡ್ಡುತ್ತದೆ.

ಈ ಮೇಲಿನ 'ಪುಸ್ತಕ ವಿಮರ್ಶೆ'ಯ ಮಾದರಿಯನ್ನು ಗಮನಿಸಿದರೆ ಕೆಲವು ಸಂಗತಿಗಳು ಸ್ಪಷ್ಟವಾಗುತ್ತವೆ. ಈ ಕೃತಿ ವಿಮರ್ಶೆ ಹೆಚ್ಚಿನ ವಿಶ್ಲೇಷಣೆಗೆ ಒಳಗಾಗಲು, ತರ್ಕಬದ್ಧವಾದ ವಿಮರ್ಶೆಗೆ ಕೃತಿಯನ್ನು ಒಳಪಡಿಸಲು, ಈ ವಿಮರ್ಶಕರು ಕೃತಿ ವಿಮರ್ಶೆಗೆ ಆಯ್ಕೆ ಮಾಡಿಕೊಂಡಿರುವುದು. ಈಗಾಗಲೇ ಹೆಸರಾಗಿರುವ ಲೇಖಕರ ಕೃತಿಯನ್ನು, ಅವರ ಹಿಂದಿನ ಬರವಣಿಗೆಯ ಸ್ವರೂಪವನ್ನು ಗಮನದಲ್ಲಿಟ್ಟುಕೊಂಡು ಚರ್ಚಿಸಲು ಇದರಿಂದ ಸಾಧ್ಯವಾಗಿದೆ ಎನ್ನಬಹುದು. ಅಲ್ಲದೆ ಇಲ್ಲಿ ತೌಲನಿಕವಾಗಿ ಬಳಸಿಕೊಳ್ಳುವ 'ಉಚಲ್ಯಾ', 'ನನ್ನ ಸತ್ಯಾನ್ವೇಷಣೆ', 'ಹೋರಾಟದ ಹಾದಿ' ಈ ಕೃತಿಗಳನ್ನು ಸ್ವತಃ ಅವರೇ ಕೃತಿ ವಿಮರ್ಶೆ ಮಾಡಿರುವುದರಿಂದ ನೀರಾಯಾಸವಾಗಿ ಅವುಗಳನ್ನು ಚರ್ಚಿಸುತ್ತಾರೆ. ಆಯಾ ಕೃತಿಗಳ ಪುಸ್ತಕ ವಿಮರ್ಶೆಯಲ್ಲೂ ಅದೇ ವಾಕ್ಯಗಳನ್ನು ಉಲ್ಲೇಖ ಮಾಡಿರುವುದು ಇಲ್ಲಿ ಗಮನೀಯ. ಆದರೆ ಇಲ್ಲಿನ ಪುಸ್ತಕ ವಿಮರ್ಶೆಯು ದೀರ್ಘವಾಗಿ ಕಂಡರೂ ಕೃತಿ ಕುರಿತ ಚರ್ಚೆಗಿಂತ ಬೇರೆ ಬೇರೆ ವಿವರಗಳು ಎಪ್ಪತ್ತು ಭಾಗದಷ್ಟು ಹಾಸಿಕೊಂಡಿವೆ. ಆನಂತರ ಉಳಿದ ಭಾಗದಲ್ಲಿ ಕೃತಿಯ ಅಂಶಗಳಿಗೆ ಪ್ರವೇಶಿಸುತ್ತಾರೆ. ಇದನ್ನು 'ಹಿನ್ನೆಲೆಯನ್ನೊಳಗೊಂಡ ಪುಸ್ತಕ ವಿಮರ್ಶೆಯ ಮಾದರಿ' ಎನ್ನಬಹುದು. ಆದರೂ ಇಲ್ಲಿನ ಚರ್ಚೆ ಕೃತಿಯ ಮೂಲಕ ವಿಮರ್ಶೆಯ ಛಾಪಿಗೆ ಎಳೆದಿರುವುದು ವಿಮರ್ಶೆ ಬೆಳೆಯಲು 'ಪುಸ್ತಕ ವಿಮರ್ಶೆ' ಮೂಲ ಬುನಾದಿಯಾಗಬಹುದು ಎಂಬುದನ್ನು ತೋರಿಸುತ್ತದೆ.

ಹೀಗೆ ಹೆಚ್ಚು ವಿಶ್ಲೇಷಣೆಗೆ ಒಳಗಾಗಿರುವ ಕೃತಿಗಳನ್ನು ಗಮನಿಸಿದರೆ, ಅವು ಈಗಾಗಲೇ ಹೆಸರಾದ ಪ್ರತಿಷ್ಠಿತ ಲೇಖಕರವುಗಳಾಗಿರುವುದು ಕಂಡುಬರುತ್ತದೆ. ಇದರಿಂದಲೇ 'ಪುಸ್ತಕ ವಿಮರ್ಶೆ' ಯೊಳಗಿಂದಲೇ ವಿಮರ್ಶೆಯ ಚರ್ಚೆಯನ್ನು ಮಾಡುವುದು ಸಾಧ್ಯವಾಗಿದೆ. ಇದರ ಹೊರತಾಗಿ 'ಪುಸ್ತಕ ವಿಮರ್ಶೆ' ಗಳಲ್ಲಿ ಚರ್ಚೆ ಕಂಡುಬರುವುದಿಲ್ಲ . ಹೊಸ ಲೇಖಕರ ಕೃತಿಗಳನ್ನು 'ವಿಮರ್ಶಿಸುವಾಗ' ಈ ರೀತಿಯ ಅನಿವಾರ್ಯತೆ ಇಲ್ಲವೆಂದು ಭಾವಿಸುವುದರಿಂದಲೂ ಹೊಸ ಲೇಖಕರ ಕೃತಿಗಳು ಪುಸ್ತಕ ವಿಮರ್ಶೆಯಲ್ಲೂ ಚರ್ಚಿತ ನೆಲೆಯ ಸಾಧ್ಯತೆಗಳು ತುಂಬಾ ಕಡಿಮೆ. ದೀರ್ಘವಾದ ಚರ್ಚೆಯ ಲೇಖನಗಳು ಹಳೆಯ ಲೇಖಕರಾದವರ ಕೃತಿಗಳಿಗೆ ಬರುವುದು ವಾರ ಪತ್ರಿಕೆಗಳಲ್ಲಿ ತುಂಬಾ ವಿರಳವೇ. ಏಕೆಂದರೆ ವಾರಪತ್ರಿಕೆಗಳಲ್ಲಿ ತುಂಬಾ ಒತ್ತಡವಿರುತ್ತದೆ. ಆದರೆ 'ಮಾಸಪತ್ರಿಕೆ'ಗಳಲ್ಲಿ ಒತ್ತಡದ ಸಾಧ್ಯತೆ ತುಂಬಾ ಕಡಿಮೆ. ಈ ಪತ್ರಿಕೆ ಬಿಡುಗಡೆಯಾಗುವಷ್ಟರೊಳಗೆ ಕೃತಿ ಸಾರ್ವಜನಿಕ ವಲಯದಲ್ಲಿ ಹಳೆಯದಾಗಿರುವ ಸಾಧ್ಯತೆಯಿರುತ್ತದೆ. ಆ ಕಾರಣದಿಂದ ಮಾಸ ಪತ್ರಿಕೆಗಳಲ್ಲಿ ದೀರ್ಘವಾದ ವಿಮರ್ಶಾತ್ಮಕ ಸ್ವರೂಪದ ಪುಸ್ತಕ ವಿಮರ್ಶೆಗಳು ಪ್ರಕಟಗೊಳ್ಳುತ್ತವೆ.

೪.೨.೩ ಪುಸ್ತಕ ವಿಮರ್ಶೆಯಿಂದ ವಿಮರ್ಶಕರಾಗಿ ಬೆಳೆದು ಪುಸ್ತಕ ವಿಮರ್ಶೆಯ ಕೊಂಡಿ ಕಳಚಿಕೊಂಡವರು.

ವಿಶ್ಲೇಷಣೆ, ಪರಿಚಯ ಮುಂತಾದ ರೂಪಗಳಲ್ಲಿ ಅಭಿವ್ಯಕ್ತವಾಗುವ ಪುಸ್ತಕ ವಿಮರ್ಶೆಯನ್ನು

ಮಾಡುವ ಪುಸ್ತಕ ವಿಮರ್ಶಕರ ವಿಮರ್ಶಾ ಕೌಶಲ್ಯವು ಒಂದು ರೀತಿಯ ತಾತ್ವಿಕತೆಯ ಸ್ವರೂಪವನ್ನು ಪಡೆಯುತ್ತಾ ಹೋಗುತ್ತದೆ. ಅದನ್ನು ವಿಮರ್ಶೆಯಲ್ಲಿ ಅಭಿವ್ಯಕ್ತಿಸಲು ಹವಣಿಸುತ್ತದೆ. ತಾತ್ವಿಕ ಮನಸ್ಥಿತಿಯಿಂದ ಕೃತಿಯನ್ನು ಅರ್ಥವಿಸಲು ತೊಡಗಿಕೊಂಡಾಗ ಪುಸ್ತಕ ವಿಮರ್ಶೆಯೆನ್ನುವುದು ಗಟ್ಟಿಯಾದ ಸಾಹಿತ್ಯ ವಿಮರ್ಶೆಯಾಗಿ ರೂಪ ತಾಳುತ್ತದೆ. ಇದಕ್ಕೆ ಪುಸ್ತಕ ವಿಮರ್ಶಕರ ತಾತ್ವಿಕ ಚಿಂತನೆ ಮತ್ತು ಗ್ರಹಿಕೆ ಮುಖ್ಯವಾಗುತ್ತದೆ. ಈ ಮುಖದಲ್ಲಿ ಪುಸ್ತಕ ವಿಮರ್ಶೆಯನ್ನು ಮಾಡುತ್ತ ತಾವು ಸೈದ್ಧಾಂತಿಕ ಚರ್ಚೆಗೆ ಇಳಿಯಬೇಕಾದಾಗ ಅನಿವಾರ್ಯವಾಗಿ ವ್ಯಾಪಕ ಅಧ್ಯಯನವನ್ನು ನಿರೀಕ್ಷಿಸುತ್ತದೆ. ಹೀಗೆ ನಿರೀಕ್ಷಿಸುವುದನ್ನು ತುಂಬಿ ಕೊಡುವ ಯತ್ನದಲ್ಲಿ ಪುಸ್ತಕ ವಿಮರ್ಶಕರು ಹೆಚ್ಚಿನ ಓದನ್ನು ಬುದ್ಧಿಯನ್ನು ದುಡಿಸಿಕೊಳ್ಳಲು ಯತ್ನಿಸುತ್ತಾರೆ. ಇದರ ಪರಿಣಾಮವಾಗಿ ಅವರು ಗಂಭೀರ ವಿಮರ್ಶಕರಾಗಿ ಬೆಳೆಯುತ್ತಾರೆ. ಹೀಗೆ ಬೆಳೆದಾಗ ಅವರಿಗೆ ಪುಸ್ತಕ ವಿಮರ್ಶೆ ತೀರ ಸರಳವೆನಿಸುವ ಪ್ರಾಥಮಿಕವಾಗಿರುವ ವಿಷಯ ಎಂಬ ಸಾಧ್ಯತೆಯಿರುತ್ತದೆ. ಹಾಗಾಗಿ ಅದರ ಕೊಂಡಿ ಕಳಚಿಕೊಳ್ಳಲು ಯತ್ನಿಸುತ್ತಾರೆ. ಅಲ್ಲದೆ ಮತ್ತೊಂದು ಸಮಸ್ಯೆಯೆಂದರೆ ಪುಸ್ತಕ ವಿಮರ್ಶೆಯ ಮೊದಲ ಆಶಯವೇ ಕೃತಿ ಪರಿಚಯ. ಅನಂತರ ಬೆಳವಣಿಗೆಗಳು, ಚರ್ಚೆ ವಿಮರ್ಶೆ ಸೈದ್ಧಾಂತಿಕವಾದ ವಿಶ್ಲೇಷಣೆಗಳು ನಂತರದ ಹಂತಗಳು. ಆದರೆ ವಿಮರ್ಶಕರಾಗಿ ಬೆಳೆದವರು ಅತಿ ಸರಳವಾಗಿ ಕೃತಿಯನ್ನು ಪರಿಚಯ ಮಾಡಿಕೊಡಲು ಕೆಲವೊಮ್ಮೆ ಹೆಣಗಾಡಬೇಕಾಗುತ್ತದೆ. ಸೈದ್ಧಾಂತಿಕ ಚರ್ಚೆಗೆ ವಿಚಾರ ವಿಶ್ಲೇಷಣೆಗೆ ಹೊಂದಿಕೊಂಡ ಅವರ ಬೌದ್ಧಿಕತೆ ಮತ್ತು ಬರವಣಿಗೆ ಸರಳ ಪರಿಚಯ ಕಾರ್ಯಕ್ಕಾಗಿ ಬಹಳ ಅತೃಪ್ತಿಪಡಬೇಕಾಗುತ್ತದೆ. ಆದರೂ ಅವರು ಮಾಡುವ ಕೃತಿ ಪರಿಚಯದಲ್ಲಿ ಸೈದ್ಧಾಂತಿಕ ಚರ್ಚೆ ನುಸುಳುತ್ತದೆ. ಇದು ಗಂಭೀರ ಸಾಹಿತ್ಯಾಸಕ್ತರಿಗೆ ಬಹಳ ಅನುಕೂಲವಾದರೂ ಕೇವಲ ಕೃತಿಯ ಪರಿಚಯವನ್ನು ನಿರೀಕ್ಷಿಸುವವರಿಗೆ ಭಾರವೇನಿಸುತ್ತದೆ. ಆ ಕಾರಣದಿಂದಲೇ ಕೆಲವರು ಪುಸ್ತಕ ವಿಮರ್ಶೆಯಿಂದಲೇ ಬೆಳೆದು ವಿಮರ್ಶಕರಾಗಿ ಪುಸ್ತಕ ವಿಮರ್ಶೆ ಮಾಡಲು ಬಯಸುವುದಿಲ್ಲ .

ಈಗ ಸಾಹಿತ್ಯ ವಿಮರ್ಶಕರಾಗಿ ಹೆಸರು ಮಾಡಿರುವ ವಿಮರ್ಶಕರು ಬಂದಂಥ ಹಿನ್ನೆಲೆಗಳನ್ನು ಗಮನಿಸಿದಾಗ ಅವರೆಲ್ಲರು ಬಹುಪಾಲು ಮೊದಲು ಪುಸ್ತಕ ವಿಮರ್ಶಕರಾಗಿ ಪದಾರ್ಪಣೆ ಮಾಡಿದವರು, ಕೆಲವರು ಕೆಲವು ಪತ್ರಿಕೆಗಳಿಗೆ ಖಾಯಂ ಆದ ಪುಸ್ತಕ ವಿಮರ್ಶಕರಾಗಿ ದುಡಿದವರು. ಇನ್ನು ಕೆಲವರು ಆಗಾಗ್ಗೆ ಪತ್ರಿಕೆಗಳಿಗೆ ಪುಸ್ತಕ ವಿಮರ್ಶೆ ಮಾಡುತ್ತಿದ್ದವರು, ಅಂಥ ಹಲವಾರು ವಿಮರ್ಶಕರನ್ನು ಪಟ್ಟಿಮಾಡಬಹುದು.

ಪುಸ್ತಕ ವಿಮರ್ಶೆಯಿಂದ ಬೆಳೆದ ವಿಮರ್ಶಕರು ಅದರಿಂದಲೇ ದೂರ ಸರಿಯಲು ಹಲವಾರು ಕಾರಣಗಳು ಕಂಡುಬರುತ್ತವೆ. ಪುಸ್ತಕ ವಿಮರ್ಶೆಯಿಂದ ಬೆಳೆದ ವಿಮರ್ಶಕರು ಇನ್ನು ಪುಸ್ತಕ ವಿಮರ್ಶೆಯನ್ನು ಮಾಡುತ್ತಲೇ ತಮ್ಮ ಸುತ್ತ ಇರುವ ಮಿತಿಯನ್ನು ಮೀರಲು ಸಹಜವಾಗಿ ಸಾಹಿತ್ಯ ವಿಮರ್ಶಕರಾಗಿ ರೂಪುಗೊಂಡಿದ್ದಾರೆ. ಅವರು ಮತ್ತೆ ತಮ್ಮ ಹಿಂದಿನ ಹಾದಿಯನ್ನು ಏಕೆ ಅನುಸರಿಸಬೇಕು ಎಂಬ ತೀರ್ಮಾನ ಅತೀ ಸರಳೀಕರಣವೆನಿಸಿದರೂ ಒಂದರ್ಥದಲ್ಲಿ ಈ ಮಿತಿ ಅವರು ಗಟ್ಟಿಯಾದ ಸಾಹಿತ್ಯ

ವಿಮರ್ಶಕರಾಗಿ ಬೆಳೆಯಲು ಸಹಾಯಕ ಅಂಶವಾಗಿದೆ. ತಮ್ಮ ಆಶಯ ಧೋರಣೆಗಳಿಗೆ ಬದ್ಧವಾಗಿರುವ ಸಾಹಿತ್ಯ ವಿಮರ್ಶಕರು ಪುಸ್ತಕ ವಿಮರ್ಶೆಯಲ್ಲಿ ಈ ಎಲ್ಲಾ ಚಿಂತನೆಗಳನ್ನು ಅದರಲ್ಲಿ ಹರಿದು ಬಿಡಲು ಸಾಧ್ಯವಿಲ್ಲ. ಇದಕ್ಕೆ ಪುಟನಿಗದಿ ಮುಖ್ಯ ಕಾರಣ ಎನ್ನಬಹುದು. ಈ ಪುಟ ಮಿತಿ ಪುಸ್ತಕ ವಿಮರ್ಶಕರನ್ನು ಮತ್ತು ಸಾಹಿತ್ಯ ವಿಮರ್ಶಕರನ್ನು ಬೇರೆಯಾಗಿ ನಿಲ್ಲಿಸುವ ಮುಖ್ಯ ಕಾರಣವಾಗಿದೆ ಅಲ್ಲದೆ ಪತ್ರಿಕೆಯು ಆಯ್ಕೆ ಮಾಡಿ ಕಳುಹಿಸುವ ಕೃತಿಯನ್ನು ವಿಮರ್ಶಿಸಬೇಕಾಗಿರುವುದರಿಂದ ತಮ್ಮೆಲ್ಲ ಚಿಂತನೆಗಳನ್ನು ಅದರಲ್ಲಿ ತರಲು ಸಾಧ್ಯವಾಗುವುದಿಲ್ಲ. ಆಗ ಅನಿವಾರ್ಯವಾಗಿ 'ಪುಸ್ತಕ ವಿಮರ್ಶೆ' ಯ ಅಂಕಣವನ್ನು ಸಡಿಲಿಸುವ ಯತ್ನಮಾಡುತ್ತಾರೆ. ಹೀಗೆ ಸಡಿಲಿಕೆಯ ಹಂತದಲ್ಲಿ ಪುಸ್ತಕ ವಿಮರ್ಶೆ ಅತ್ಯಂತ ದೀರ್ಘ ಲೇಖನವಾಗಿ ಪರಿವರ್ತನೆ ಹೊಂದುತ್ತದೆ. ಇಂತಹ ದೀರ್ಘ ಲೇಖನಗಳನ್ನು ಯಾವ ಪತ್ರಿಕೆ ಪ್ರಕಟಿಸಲು ಸಾಧ್ಯ! ಇನ್ನೊಂದು ಕಾರಣವೆಂದರೆ ಪುಸ್ತಕ ವಿಮರ್ಶಕರಿಗೆ ಕೃತಿಯ ಬಗೆಗಿನ ಚರ್ಚೆಗೆ ಮಿತಿಯಿರುತ್ತದೆ. ಅದರಾಚೆಗೆ ಹೋಗುವುದು ತುಂಬಾ ವಿರಳ. ಆದರೆ ಸಾಹಿತ್ಯ ವಿಮರ್ಶಕರಿಗೆ ವಿಶಾಲವಾದ ಸಾಂಸ್ಕೃತಿಕ ಜವಾಬ್ದಾರಿಯಿರುತ್ತದೆ. ಅವರಿಗೆ ಸಮಾಜ, ಇತರ ಕ್ಷೇತ್ರ ಎಷ್ಟು ಮುಖ್ಯವೋ, ಅಷ್ಟೇ ಮುಖ್ಯ ಆ ಕೃತಿಯಾಗಿರುತ್ತದೆ. ಈ ಸಾಂಸ್ಕೃತಿಕ ಜವಾಬ್ದಾರಿಯ ಅನಿವಾರ್ಯತೆಯನ್ನು ಅವರಿಗೆ ಸಾಹಿತ್ಯ ಪರಂಪರೆಯೇ ಬೆಳಸಿರುತ್ತದೆ. ಇದು ಒಂದು ನಿರ್ದಿಷ್ಟ ಕೈಯೊಳಗಿನ ಕೃತಿಯ ವಿವರಗಳನ್ನಷ್ಟೆ ತಡಕುವ ಅಪಾಯವನ್ನು ತಪ್ಪಿಸುತ್ತದೆ. ಸಾಹಿತ್ಯ ವಿಮರ್ಶಕರು ತಮ್ಮದೇ ಆದ ಸೈದ್ಧಾಂತಿಕ ತೀರ್ಮಾನಗಳಿಗೆ, ವಿಚಾರಗಳಿಗೆ, ಬದ್ಧವಾಗಿರುತ್ತಾರೆ. ಆದರೆ ಪುಸ್ತಕ ವಿಮರ್ಶಕರು ತಮ್ಮ ನಿಲುವು ತೀರ್ಮಾನಗಳಿಗೆ ಬದ್ಧವಾಗಿದ್ದರೂ ಅದಕ್ಕಿಂತ ಹೆಚ್ಚಾಗಿ ಅವರು ಪುಸ್ತಕ ವಿಮರ್ಶೆಯನ್ನು ಕಳುಹಿಸುವ ಮಾಧ್ಯಮದ ಸಿದ್ಧಾಂತಗಳಿಗೆ ಬದ್ಧರಾಗಿರಬೇಕು. ಪತ್ರಿಕೆಗೆ ಬದ್ಧರಾಗಿರಬೇಕು, ಏಕೆಂದರೆ ನಮ್ಮಲ್ಲಿ ಬರುತ್ತಿರುವ ಪತ್ರಿಕೆಗಳು ಹೆಸರಿಗೆ ಅಷ್ಟೇ ಪತ್ರಿಕೆಗಳು. ಆದರೆ ಅವು ಭಿನ್ನ ಭಿನ್ನ ಧೋರಣೆ, ನಿಲುವುಗಳನ್ನು ಒಳಗೊಂಡಿರುತ್ತವೆ. ತಮ್ಮ ಪತ್ರಿಕೆ ಇಟ್ಟುಕೊಂಡ ತಾತ್ವಿಕತೆಗಳಿಗೆ ಅನುಗುಣವಾಗಿರುವ ಕೃತಿಯನ್ನಷ್ಟೇ ಆಯ್ದು ಪುಸ್ತಕ ವಿಮರ್ಶಕರಿಗೆ ಕಳುಹಿಸುತ್ತಾರೆ. ಆಗ ಪುಸ್ತಕ ವಿಮರ್ಶಕರು ಅದರ ವಿಮರ್ಶೆಯನ್ನು ಬರೆದು ಕಳುಹಿಸಬೇಕಾಗಿರುತ್ತದೆ. ಈ ಒತ್ತಡದ ಕಾರಣದಿಂದ ಸಾಹಿತ್ಯ ವಿಮರ್ಶಕರು ಪುಸ್ತಕ ವಿಮರ್ಶೆಯಿಂದ ಬಿಡಿಸಿಕೊಳ್ಳಲು ಯತ್ನಿಸುತ್ತಾರೆ.

ಮತ್ತೊಂದು ಆದರ್ಶ ಸಾಹಿತ್ಯ ವಿಮರ್ಶಕರಲ್ಲಿ ರೂಪುಗೊಂಡು ಬಿಟ್ಟಿದೆ. ನಾವು ಈಗಾಗಲೇ ಸಾಹಿತ್ಯ ವಿಮರ್ಶಕರಾಗಿ ಹೆಸರು ಮಾಡಿದ್ದೇವೆ. ಅದಕ್ಕೆ ಪುಸ್ತಕ ವಿಮರ್ಶೆ ಕಾರಣವೆಂದು ಅಲ್ಲಗಳೆಯಲಾಗದು. ಹಾಗೆಯೇ ಹೊಸ ಯುವಕರು ಪುಸ್ತಕ ವಿಮರ್ಶೆಗೆ ತೊಡಗಿಕೊಳ್ಳಲಿ ಎಂಬ ಮನೋಭಾವವು ಅವರು ಪುಸ್ತಕ ವಿಮರ್ಶೆಯಿಂದ ದೂರ ಸರಿಯಲು ಕಾರಣಗಿರಬಹುದು.

ವೃತ್ತಿಪರ ವಿಮರ್ಶಕರು ನೇರ ಸೈದ್ಧಾಂತಿಕ ನಿಲುವಿಗೆ ಬದ್ಧವಾಗಿರುವುದರಿಂದ ಅವರಿಗೆ ಕೃತಿಯ ಪರಿಚಯಾತ್ಮಕತೆ ಮತ್ತು ಪ್ರಚಾರದ ಕೆಲಸಗಳು ತುಂಬಾ ಯಾಂತ್ರಿಕವೆನಿಸುತ್ತವೆ. ವಿಮರ್ಶೆ ಪರಿಚಯ ಮತ್ತು ಪ್ರಚಾರದ ಕೆಲಸಕ್ಕೆ ತೊಡಗಿಸಿಕೊಂಡಾಗ ಬಹಳಷ್ಟು ಮಿತಿಗಳು ಬಂದು ಸೇರುತ್ತವೆ. ಈ

ಮಿತಿಗಳನ್ನು ತಮ್ಮ ಬರವಣಿಗೆಯಲ್ಲಿ ಅಳವಡಿಸಿಕೊಳ್ಳಲು ವೃತ್ತಿಪರ ವಿಮರ್ಶಕರು ಬಹಳಷ್ಟು ಶ್ರಮಪಡಬೇಕಾಗುತ್ತದೆ. ವೃತ್ತಿಪರ ವಿಮರ್ಶಕರು ವಿಮರ್ಶೆಯಲ್ಲಿ ಬೌದ್ಧಿಕ ಚರ್ಚೆ ಮಾಡಲು ಅವಕಾಶವಿದ್ದರೂ ಸಮಯದ ಅಭಾವದಿಂದ ಇಂತಹ ಕೆಲಸಗಳನ್ನು ಮಾಡಲು ವಿಮರ್ಶಕರಿಗೆ ಸಾಧ್ಯವಾಗುವುದಿಲ್ಲ, ಹಾಗಾಗಿ ಪುಸ್ತಕ ವಿಮರ್ಶೆಯಲ್ಲಿನ ಪರಿಚಯಾತ್ಮಕತೆ ಮತ್ತು ಪ್ರಚಾರದ ಕೆಲಸ ಆ ಗುಣಗಳು ವೃತ್ತಿಪರ ವಿಮರ್ಶಕರ ಹಿಂಜರಿಕೆಗೆ ಕಾರಣಗಳಾಗಿವೆ.

೪.೨.೪ ಕೇವಲ ಪುಸ್ತಕ ವಿಮರ್ಶಕರಾಗಿ ಉಳಿದವರು

ಈಗಿನ ದಿನ ಪತ್ರಿಕೆಗಳಲ್ಲಿ ಬರುತ್ತಿರುವ 'ಪುಸ್ತಕ ವಿಮರ್ಶೆ', 'ಪುಸ್ತಕಾವಲೋಕನ' ಅಂಕಣಗಳನ್ನು ನೋಡಿದರೆ ಅಲ್ಲಿ ಗಂಭೀರ ಸಾಹಿತ್ಯ ಚರ್ಚೆ ಕಾಣುವುದು ಅಪರೂಪವಾಗಿದೆ. ಇನ್ನೂ ಸಾಹಿತ್ಯ ವಿಮರ್ಶೆಯ ಬಗೆಗಿನ ಚರ್ಚೆ ಕಾಣುವುದಂತು ದುಸ್ಸಾಧ್ಯ. ಕಾರಣವೆಂದರೆ ವಿಮರ್ಶೆಗೆ ಬೇಕಾದ ಸಿದ್ಧತೆ ಪುಸ್ತಕ ವಿಮರ್ಶೆಗೆ ಬೇಕಾಗಿರುವುದಿಲ್ಲ. ಪುಸ್ತಕ ವಿಮರ್ಶೆಯ ಮಿತಿ ಕೃತಿಯ ಒಳಗೆ, ಒಳಗಿನ ವಿವರಗಳಲ್ಲಿ ಗಿರಕಿ ಹೊಡೆಯುತ್ತದೆ. ಆದರೆ ವಿಮರ್ಶೆಗೆ ಈ ಯಾವುದೇ ಹಿನ್ನೆಲೆ ಬೇಕಿಲ್ಲ. ಕೃತಿಯ ಪರಿಚಯ ಹೇಳಿದರೆ ಸಾಕು. ಅದೂ ಅಲ್ಲದೆ ಪುಸ್ತಕ ವಿಮರ್ಶೆಗೆ ನಿರ್ದಿಷ್ಟವಾದ ವಿಮರ್ಶಕರು ಬೇಕಾಗಿಲ್ಲ, ಯಾರು ಬೇಕಾದರೂ ಬರೆಯಬಹುದು. ಹಾಗೆ ಅದಕ್ಕೊಂದು ನಿರ್ದಿಷ್ಟವಾದ ಚೌಕಟ್ಟೆಂಬುದಿಲ್ಲ ಎಂಬ ಗ್ರಹಿಕೆಯೊಳಗೆ 'ಪುಸ್ತಕ ವಿಮರ್ಶೆ'ಯಾಗುತ್ತಿರುವುದನ್ನು ಈ ಹೊತ್ತಿನ ದಿನ ಪತ್ರಿಕೆಗಳಲ್ಲಿ ಬರುತ್ತಿರುವ 'ಪುಸ್ತಕ ವಿಮರ್ಶೆ'ಗಳನ್ನು ಗಮನಿಸಿದರೆ ತಿಳಿಯುತ್ತದೆ. ಅಲ್ಲಿನ ಪುಸ್ತಕ ವಿಮರ್ಶೆಗಳಿಗೆ ತಾತ್ವಿಕವಾದ ಸ್ವರೂಪವೆಂಬುದೇ ಇರುವುದಿಲ್ಲ. ಕೃತಿಯ ಪರಿಚಯ ಮುಖ್ಯವಾಗುತ್ತದೆ. ಕೃತಿಯನ್ನೇ ಆಗಲಿ ಪೂರ್ಣಪ್ರಮಾಣದಲ್ಲಿ ಚರ್ಚೆಮಾಡುವುದಿಲ್ಲ. ಇದು ಪುಸ್ತಕ ವಿಮರ್ಶೆಯ ಮಿತಿಯಾದರೂ ಅದನ್ನು ಮೀರಿ ಚರ್ಚಿಸಬೇಕಾದ ಅಗತ್ಯತೆಯಿರುತ್ತದೆ. ಕೃತಿ ಓದಿ ತನಗೆ ಅನಿಸಿದ್ದನ್ನು ಬರೆದರೆ 'ಪುಸ್ತಕ ವಿಮರ್ಶೆ'ಯಾಗುತ್ತದೆ. ಎಂಬ ಭಾವ ಬೆಳೆದಿರುವುದರಿಂದ 'ಪುಸ್ತಕ ವಿಮರ್ಶೆ' ಗಳು ಓದುಗರನ್ನು ಹಿಡಿದಿಡಲು ಬಹಳಷ್ಟು ಶ್ರಮಿಸುವಂತೆ ಕಾಣುತ್ತವೆ. ಓದುಗರನ್ನು ಸೆಳೆಯುವಲ್ಲಿ ಅವು ತೊಳಲಾಡುತ್ತಿರುವಾಗ 'ಪುಸ್ತಕ ವಿಮರ್ಶೆ'ಯ ಮೂಲಕ ಕೃತಿ ಓದುಗರನ್ನು ನಿರ್ಮಿಸಿಕೊಳ್ಳುವಲ್ಲಿ ವಿಫಲವಾಗುತ್ತಿವೆ.

ಸಾವಿರಾರು ಪುಟಗಳನ್ನು ಬರೆದರೂ ಒಳನೋಟಗಳಲ್ಲಿನ, ರಿಸ್ಕ್ ತೆಗೆದುಕೊಳ್ಳದ ಬರವಣಿಗೆಯು ಕನ್ನಡದಲ್ಲಿಯೂ ವಿಫುಲವಾಗಿ ಸೃಷ್ಟಿಯಾಗಿದೆ. ಇಂಥ ಬರವಣಿಗೆಯು ಪಾಶ್ಚಾತ್ಯ ಸನ್ನಿವೇಶದಲ್ಲಿ ಚಲ್ಲಿಕೊಂಡಿರುವ ಬರವಣಿಗೆಯನ್ನು ತತ್ವವಾಗಿಯೇ ಅನ್ವಯವಾಗಿಯೇ ಆಮದು ಮಾಡಿಕೊಳ್ಳುವ ಕೆಲಸದಲ್ಲಿಯೂ ತೊಡಗಿರುತ್ತದೆ. ಇಂಥ ಬರವಣಿಗೆಯ ಉಪಯುಕ್ತತೆಯನ್ನು ಸಾರಾಸಗಟಾಗಿ ನಿರಾಕರಿಸಲು ಸಾಧ್ಯವಿಲ್ಲ. ಆದರೆ ಇವು ಬಹುಮಟ್ಟಿಗೆ ಸ್ವೋಪಜ್ಞತೆಯಿಂದ ವಂಚಿತವಾಗಿರುತ್ತವೆ.ಇಂಥ ಬರವಣಿಗೆಯ ಸೋದರ ಸಂಬಂಧಿಗಳನ್ನು ನಿಯತಕಾಲಿಕಗಳ ಅಂಕಣಬರಹಗಳಲ್ಲಿ ಗಮನಿಸಬಹುದು. ಇಂಥ ಕಡೆ ಓದುಗರ ಕಲ್ಪಿತ ಸಾಮಾನ್ಯತೆ ಮತ್ತು ದಡ್ಡತನಗಳು ಎಷ್ಟೋ ಸಲ ವಿಮರ್ಶಕನ ಸಾಮಾನ್ಯತೆಯನ್ನು ಮರೆಮಾಡುವ ಕವಚವಾಗಿ ಬಿಡುತ್ತದೆ. ಅಲ್ಲದೆ, ಇವರು ಸಾಂಸ್ಕೃತಿಕವಾದ ಸಾರ್ವಜನಿಕ ಅಭಿಪ್ರಾಯಗಳನ್ನು ರೂಪಿಸುವ ಸ್ವಘೋಷಿತ ಹೊಣೆಯನ್ನು

ಹೊರುವ ಹುಸಿ ನೆಲೆಗಳನ್ನು ಬೇರೆ ತೋರಿಸುತ್ತಾರೆ. ಸಂಖ್ಯೆ ಮತ್ತು ಪ್ರಮಾಣಗಳ ಲೆಕ್ಕಚಾರದಲ್ಲಿ ಇವರು ಸದಾ ಮುಂದು ಸಹಜವಾಗಿಯೇ ಇವರಿಗೆ ವಿಸಿಬಿಲಿಟಿ ಜಾಸ್ತಿ. ಇವರು ಬೇರೆ ಬೇರೆ ಕಾಲದಲ್ಲಿ ಅತಿ ಗಮನ ಪಡೆದವರಾಗಿರುತ್ತಾರೆ. [೬]

ಕೆಲವು ಪುಸ್ತಕ ವಿಮರ್ಶಕರು ಪೂರ್ಣ ಪ್ರಮಾಣದ ವಿಮರ್ಶಕರೆಂದು ಗುರುತಿಸಿಕೊಳ್ಳುತ್ತಿರುವುದು ಸಾಮಾನ್ಯವಾಗಿ ಬಿಟ್ಟಿದೆ. ಆದರೆ ಈ ಪುಸ್ತಕ ವಿಮರ್ಶಕರು ತಮ್ಮ ಮಿತಿಯನ್ನು ಮೀರಿ ವಿಮರ್ಶಕರಾಗಲು ಯತ್ನಿಸುತ್ತಿಲ್ಲ. ಇದಕ್ಕೆ ಕಾರಣಗಳು ಬೇರೆ ಬೇರೆಯಾದರೂ ಅವರ ಮನೋಭಾವ, ಚಿಂತನೆ ಇಲ್ಲಿ ಮುಖ್ಯವಾಗುತ್ತದೆ. ಕೃತಿಯ ವಿವರಗಳಲ್ಲಿಯೇ ನಿಲ್ಲುವ ವಿಮರ್ಶಕರು ಕೃತಿಯ ವಿವರಗಳನ್ನಷ್ಟೇ ಗಮನಿಸುತ್ತಾರೆ. ಅದನ್ನು ಸೂಕ್ಷ್ಮವಾಗಿ, ಆಲೋಚಿಸಿ, ವಿಶ್ಲೇಷಿಸುವ ಗೋಜಿಗೆ ಹೋಗದಿರುವುದೇ ಅವರು ಕೇವಲ ಪುಸ್ತಕ ವಿಮರ್ಶಕರಾಗಿರುವುದಕ್ಕೆ ಕಾರಣ. ಪುಸ್ತಕ ವಿಮರ್ಶೆಯನ್ನು ಮಾಡುತ್ತ ಈಗಾಗಲೇ ಹಲವಾರು ವಿಮರ್ಶೆಗಳನ್ನು ಮಾಡಿ ಅವುಗಳ ಗಾತ್ರಬಲ ಸಂಖ್ಯಾಬಲದಿಂದ ವೃತ್ತಿಪರ ವಿಮರ್ಶಕರೊಂದಿಗೆ ತಳುಕುಹಾಕಿಕೊಳ್ಳಲು ಯತ್ನಿಸುತ್ತಾರೆಯೇ ಹೊರತು ತಮ್ಮ ಕೃತಿ ವಿಮರ್ಶೆ ಒಳನೋಟಗಳನ್ನು ಕೊಟ್ಟಿದೆಯೋ ಇಲ್ಲವೋ ಎಂಬುದರ ಬಗ್ಗೆ ಯೋಚಿಸುವುದಿಲ್ಲ. ಈ ಹೊತ್ತಿನ ಸಂದರ್ಭದಲ್ಲಂತೂ 'ಪುಸ್ತಕ ವಿಮರ್ಶೆಗಳು ತೀರ ಹಳಸಲಾಗಿರುವಂತೆ ಕಂಡು ಬರುತ್ತವೆ. ಸಾಮಾನ್ಯ ನಿಯತಕಾಲಿಕೆಗಳು ಹೆಸರಿಗೆ ಮಾತ್ರ 'ಪುಸ್ತಕ ವಿಮರ್ಶೆ'ಗಳನ್ನು ಪ್ರಕಟಿಸುತ್ತಿವೆ. ಆದರೆ ಅವುಗಳಲ್ಲಿ ಯಾವುದೇ ಪ್ರೌಢ ವಿಚಾರಗಳು ವಿಶ್ಲೇಷಣೆಗಳೇ ಇರುವುದಿಲ್ಲ. ಓದುಬರಹ ಬಲ್ಲವನ್ನು ಯಾರಾದರೂ ಕೃತಿ ಕುರಿತ ಪರಿಚಯ ಮಾಡಿಕೊಡಬಹುದು ಎಂದು ಭಾವಿಸಿರುವಂತಿದೆ. ಆದರೆ ಅದಕ್ಕೆ 'ಪುಸ್ತಕ ವಿಮರ್ಶೆ' ಯೆಂಬ ಹೆಸರಿದೆ ಎಂಬುದನ್ನು ಅವರು ಮರೆತಿರುವಂತಿದೆ. ಕೃತಿ ವಿಮರ್ಶೆಯಿಂದಲೇ ವಿಮರ್ಶೆ ಬೆಳೆಯುತ್ತಿದೆ. ಎಂದು ವಿಮರ್ಶೆಯ ಮೂಲವನ್ನು ಗುರುತಿಸುವಾಗ ಕೃತಿ ವಿಮರ್ಶಕರೇ ವಿಮರ್ಶಕರಾಗಿ ಬೆಳೆಯುತ್ತಾರೆ ಎಂಬ ಅರ್ಥ ಅದರ ಹಿಂದಿನಿಂದಲೇ' ಸ್ಫೋಟಗೊಳ್ಳುತ್ತದೆ. ಆದರೆ ಇಂದಿನ 'ಪುಸ್ತಕ ವಿಮರ್ಶೆ' ಮತ್ತು ವಿಮರ್ಶಕರು ದಟ್ಟವಾಗಿ ಹೆಚ್ಚು ಪ್ರಬುದ್ಧವಾಗದೇ 'ಪುಸ್ತಕ ವಿಮರ್ಶೆ' ಯಿಂದ ವಿಮರ್ಶೆ ಬೆಳವಣಿಗೆಗೆ ಅಷ್ಟೇನು ಸಹಾಯ ಮಾಡುತ್ತಿಲ್ಲ. ವಿಮರ್ಶೆ ಬೇರೆ ಬೇರೆ ಮೂಲದಿಂದ ಬೆಳೆಯುತ್ತಿದೆಯೇನೋ! ಅದು 'ಪುಸ್ತಕ ವಿಮರ್ಶೆ'ಯ ಕೊಂಡಿ ಕಳಚಿಕೊಂಡಿದೆ ಎಂದು ಈಗಿನ 'ಪುಸ್ತಕ ವಿಮರ್ಶೆ'ಗಳನ್ನು ನೋಡಿದರೆ ಅನಿಸುತ್ತದೆ.

೪.೨.೫ ವಿಮರ್ಶಕರಾಗಿ ಪ್ರಾಸಂಗಿಕವಾಗಿ ಪುಸ್ತಕ ವಿಮರ್ಶೆ ಮಾಡುತ್ತಿರುವವರು

ಈಗಾಗಲೇ ಬೌದ್ಧಿಕವಾಗಿ ಬೆಳೆದು ತಮ್ಮ ಸಿದ್ಧಾಂತಗಳ ಮೂಲಕ ಕೃತಿಗಳನ್ನು ವಿಮರ್ಶಿಸುವ ಕಾರ್ಯವನ್ನು ಕೆಲವು ವಿಮರ್ಶಕರು ಮಾಡುತ್ತಾರೆ. ಇವರಿಗೆ ಇತರ 'ರಿವ್ಯೂ' ಕಾರರಂತೆ ಇದೊಂದು ನಿತ್ಯಕಾಯಕದ ಕೆಲಸವಲ್ಲ, ಪ್ರಾಸಂಗಿಕವಾಗಿಯಷ್ಟೇ ಕೃತಿಯನ್ನು ವಿಮರ್ಶಿಸುತ್ತಾರೆ. ಅತಿ ಮುಖ್ಯವಾದ ಕೃತಿಗಳನ್ನು ಇವರು ಹೆಚ್ಚು ಅರ್ಥೈಸುವುದರಿಂದ, ಕೃತಿಯ ಬಗೆಗೆ ಹೊಸ ರೀತಿಯ ಆಲೋಚನೆಗಳನ್ನು ಹುಟ್ಟುಹಾಕುತ್ತಾರೆ. (ಡಾ. ಪುರುಷೋತ್ತಮ ಬಿಳಿಮಲೆ. ಡಾ. ಸಿ. ಎನ್. ರಾಮಚಂದ್ರನ್, ಆರ್ಕೆ,

ಜಿ. ಹೆಚ್. ನಾಯಕ, ಗಿರಡ್ಡಿ ಗೋವಿಂದರಾಜ, ಹೆಚ್. ಎಸ್. ರಾಘವೇಂದ್ರ ರಾವ್, ಕೆ.ವಿ. ನಾರಾಯಣ, ಎಸ್. ಶಿವಾನಂದ, ಶಿವರಾಮ ಕಾಡನಕುಪ್ಪೆ, ಮುಂತಾದವರ ವಿಮರ್ಶಾ ಲೇಖನಗಳನ್ನು ಗಮನಿಸಬಹುದು) ವೃತ್ತಿ ವಿಮರ್ಶಕರು ಪ್ರಾಸಂಗಿಕವಾಗಿ ಎಲ್ಲೋ ಕೆಲವೊಮ್ಮೆಯಷ್ಟೇ 'ಪುಸ್ತಕ ವಿಮರ್ಶೆ' ಮಾಡುತ್ತಾರೆ. ಇವರ ವಿಮರ್ಶೆಯ ವಿಶಿಷ್ಟತೆಯೆಂದರೆ, ಇವರು ಪುಸ್ತಕ ವಿಮರ್ಶೆಯ ಚೌಕಟ್ಟಿನಲ್ಲಿ ಮಾತ್ರ ನಿಲ್ಲದೆ ಪರಂಪರೆ ಸಮಕಾಲೀನ ಚರ್ಚೆ ಮುಂತಾದ ಚಿಂತನೆಗಳ ಮೂಲಕವೇ ಕೃತಿಯನ್ನು ಅರ್ಥೈಸುವುದು. ಹೀಗೆ ಅರ್ಥೈಸುವಾಗ ಇವರು ಕೃತಿಯ ಒಳ್ಳೆಯ ಗುಣಕ್ಕೆ ಮಾತ್ರ ಮಾರುಹೋಗದೆ ಅದರ ಕೊರತೆಗಳನ್ನು ತೂಗಿ ನೋಡುತ್ತಾರೆ. ಇಂಥ ವಿಮರ್ಶೆಗಳು 'ವಿಮರ್ಶೆ ಮತ್ತು ಪುಸ್ತಕ ವಿಮರ್ಶೆ' ಈ ಎರಡು ಬೇರೆಯೆಂಬಂತೆ ಭಾವಿಸುವುದಿಲ್ಲ ಬದಲಾಗಿ ಒಂದೇ ಪರಿಧಿಯಲ್ಲಿ ಚರ್ಚಿತವಾಗುವಂತೆ ವಿಮರ್ಶಕರು ಚಿಂತಿಸುತ್ತಾರೆ.

ಆದರೆ ಈ ವೃತ್ತಿಪರ ವಿಮರ್ಶಕರು 'ಕೃತಿ ವಿಮರ್ಶೆ' ಗೆ ಎಲ್ಲ ಕೃತಿಗಳನ್ನು ಆರಿಸಿಕೊಳ್ಳುವುದಿಲ್ಲ. ಅವು ಕೃತಿ ವಿಮರ್ಶೆಗೆ ತಮ್ಮ ಅಧ್ಯಯನಕ್ಕೆ ಒಳಪಡುವ ಕೃತಿ, ಹೊಸ ಆಯಾಮವನ್ನೊಳಗೊಂಡ ಕೃತಿ ಮುಂತಾದವುಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ. ಇವರಿಗೆ ಆತ್ಮೀಯರ ಕೃತಿ ಪ್ರತಿಷ್ಠಿತರ ಕೃತಿ, ಈಗಾಗಲೇ ಹೆಸರಾಗಿರುವ ಕೃತಿಗಳನಷ್ಟೇ ಇವರು ಆಯ್ದುಕೊಳ್ಳುವುದಿಲ್ಲ. ಹೊಸ ಲೇಖಕರ ಕೃತಿಗಳನ್ನು ಆಯ್ದು ಕೊಳ್ಳುತ್ತಾರೆ. ಇವರು 'ಪುಸ್ತಕ ವಿಮರ್ಶೆ'ಯ ನೆಪದಲ್ಲಿ ವಿಶ್ಲೇಷಣೆಗೆ, ವಿಮರ್ಶೆಗೆ ಒಳಪಡಿಸುತ್ತಾರೆ. ಇವರಿಗೆ ಕೃತಿಯ ಲೇಖಕರಿಗಿಂತ ಕೃತಿ ಕೊಡುವ ಒಳನೋಟ, ಹೊಳಹುಗಳು ಮುಖ್ಯವಾಗಿರುತ್ತವೆ. ಆದುದರಿಂದ ಇವರು, ಹೊಸ ಪರಂಪರೆಗೆ ಹಾದಿ ಮಾಡಿಕೊಡುವ ಕೃತಿಗಳನ್ನು ಆರಿಸಿಕೊಳ್ಳುತ್ತಾರೆ. ಅಂತಹ ಒಂದೆರಡು ಮಾದರಿಗಳನ್ನು ಗಮನಿಸಬಹುದು.

i. ಸಮುದಾಯದ ಶಿಸ್ತುಬದ್ಧ ಅಧ್ಯಯನ [2] - ಪುಸ್ತಕ ವಿಮರ್ಶಕರು ಪುರುಷೋತ್ತಮ ಬಿಳಿಮಲೆ

ಸಮುದಾಯ ಅಧ್ಯಯನಗಳು ಈಚಿನ ದಿನಗಳಲ್ಲಿ ತುಂಬಾ ಜನಪ್ರಿಯವಾಗುತ್ತಿದೆ. ಚರಿತ್ರೆಯ ಉಪೇಕ್ಷೆಗೆ ಒಳಗಾದ ಜನವರ್ಗಗಳಲ್ಲಿ ನಿರ್ದಿಷ್ಟವಾದ ಗುಂಪೊಂದನ್ನು ಆಯ್ದುಕೊಂಡು ಜಾನಪದದ ವಿದ್ಯಾರ್ಥಿಗಳು ವಿವರಣೆಗಳನ್ನು ನೀಡುತ್ತಿದ್ದಾರೆ. ಮಾನವಶಾಸ್ತ್ರ, ಸಮಾಜಶಾಸ್ತ್ರ, ಸಾಹಿತ್ಯವೇ ಮೊದಲಾದ ಶಿಸ್ತುಗಳ ಸಹಾಯ ಪಡೆಯದೇ ನಡೆಸುವ ಇಂಥ ಅಧ್ಯಯನಗಳು ಎಷ್ಟೋಬಾರಿ ತುಂಬ ದುರ್ಬಲವಾಗಿರುತ್ತದೆಯಾದರೂ, ನಮ್ಮ ಸಂದರ್ಭದಲ್ಲಿ ಅವು ಸ್ವಾಗತಾರ್ಹ. ಬೇರೆ ಶಿಸ್ತಿನ ವಿದ್ವಾಂಸರು ಇಷ್ಟು ಮಾಡುತ್ತಿಲ್ಲವಲ್ಲ? ಹೀಗಾಗಿ ಏನೇ ತೊಂದರೆಗಳಿದ್ದಾಗ್ಯೂ ಜಾನಪದದ ವಿದ್ಯಾರ್ಥಿಗಳು ಸಂಗ್ರಹಿಸಿ ಮಂಡಿಸುವ ವಿವರಗಳಿಗೆ ಸಾಕಷ್ಟು ಮಹತ್ವವಿದೆ.

ಡಾ. ಎಲ್ಲಪ್ಪ ಕೆಕೆಪುರ ಅವರು ನಮ್ಮ ನಾಡಿನ ಸಂಸ್ಕೃತಿಯ ಒಂದು ಭಾಗವಾದ, ಆದರೆ ಸಂಸ್ಕೃತಿಯ ವಕ್ತಾರರಿಂದ ತೀವ್ರವಾದ ಉಪೇಕ್ಷೆಗೆ ಒಳಗಾದ ದೊಕ್ಕಮಕ್ಕಳ ಕುರಿತ ತುಂಬ ಶಿಸ್ತು ಬದ್ಧವಾದ ಅಧ್ಯಯನವೊಂದನ್ನು ನಡೆಸಿದ್ದಾರೆ. ವಿಷಯಗಳಲ್ಲಿ ಅವರು ತುಂಬ ವೈಜ್ಞಾನಿಕವಾದ ಕ್ರಮವನ್ನು ಅನುಸರಿಸಿದ್ದರಿಂದಾಗಿ ಸಮುದಾಯ ಅಧ್ಯಯನಗಳಲ್ಲಿ ಇದಕ್ಕೊಂದು ವಿಶೇಷವಾದ ಸ್ಥಾನ ಪ್ರಾಪ್ತಿಸುತ್ತದೆ. ಸಾಮಾನ್ಯವಾಗಿ ಈ ಬಗೆಯ ಅಧ್ಯಯನಗಳಲ್ಲಿ ಕಂಡುಬರುವ ಗೊಂದಲಗಳಿಂದ ಡಾ.ಕೆಕೆಪುರ ಅವರು ಪಾರಾಗಿರುವುದು ಅಭಿನಂದನೀಯ ವಿಚಾರವಾಗಿದೆ.

ಮಹಾಪ್ರಬಂಧದಲ್ಲಿ ಒಟ್ಟು ೧೨ ಅಧ್ಯಾಯಗಳಿವೆ. ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿಯನ್ನು ಖಚಿತವಾಗಿ ನಿರ್ವಹಿಸಲಾಗಿದೆ. ಈ ಸಮುದಾಯವು ಆಧುನಿಕತೆಯ ಪ್ರಭಾವಕ್ಕೆ ಒಳಗಾಗಿ ಮೂಲ ಸ್ವರೂಪವನ್ನು ಕಳೆದುಕೊಳ್ಳುತ್ತಲಿದೆ, ಹಾಗೆ ಆಧುನಿಕತೆಗೆ ಒಡ್ಡಿಕೊಂಡು ತನ್ನತನವನ್ನು ಕಳೆದುಕೊಳ್ಳುವುದರೊಳಗಾಗಿ ಈ ಸಮುದಾಯದ ಮೂಲ ಹಾಗೂ ಸಾಧ್ಯವಿದ್ದಷ್ಟು ಸಮಗ್ರವಾದ ಸ್ವರೂಪವನ್ನು ದಾಖಲಿಸುವುದು ತುಂಬಾ ಅಗತ್ಯವೆನಿಸಿದೆ. ಇದೇ ಈ ಅಧ್ಯಯನದ ಉದ್ದೇಶವೂ ಆಗಿದೆ. (ಪು ೧) ಎಂದವರು ತಮ್ಮ ಉದ್ದೇಶದ ಬಗ್ಗೆ ಹೇಳಿಕೊಂಡಿದ್ದಾರೆ. ಹಾಗೆಯೇ ಕರ್ನಾಟಕದ ಮತ್ತು ಆಂಧ್ರ ಪ್ರದೇಶಗಳಲ್ಲಿ ತಾನು ಮಾಡಿದ ಕ್ಷೇತ್ರಕಾರ್ಯದ ಬಗೆಗೂ ಅವರು ಸ್ಪಷ್ಟ ವಿವರ ನೀಡಿದ್ದಾರೆ. ತನ್ನ ಅಧ್ಯಯನಕ್ಕೆ ಪೂರಕವಾಗಿ ದೊಕ್ಕಲರ ಬಗೆಗೆ ಇದುವರೆಗೆ ನಡೆಸಲಾದ ಅಧ್ಯಯನಗಳನ್ನು ಸಂಕ್ಷಿಪ್ತವಾಗಿ ಪರಾಮರ್ಶಿಸಿದ್ದಾರೆ. ಮೂರನೆಯ ಅಧ್ಯಾಯದಲ್ಲಿ ದೊಕ್ಕಲು ಮಕ್ಕಳ ಮೂಲಕ್ಕೆ ಸಂಬಂದಿಸಿದಂತೆ ದೊರೆಯುವ ಪೌರಾಣಿಕ, ಸಾಮಾಜಿಕ ಮತ್ತು ಐತಿಹಾಸಿಕ ನಿರೂಪಣೆಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. ಈ ನಿರೂಪಣೆಗಳಲ್ಲಿ ಆದಿ ಜಾಂಬವ ಮುನಿಯ ಜನನಕ್ಕೆ ಸಂಬಂಧಿಸಿದ ಪೌರಾಣಿಕ ಸ್ವರೂಪದ ಕತೆಯೊಂದು ತುಂಬಾ ರೋಚಕವಾಗಿದೆ. ಅಧ್ಯಾಯ ನಾಲ್ಕರಲ್ಲಿ ದೊಕ್ಕಲು ಮಕ್ಕಳ ಮೂಲನೆಲೆಗಳ ಕುರಿತ ಮಾಹಿತಿ ಇದ್ದರೆ, ಐದನೆಯ ಅಧ್ಯಾಯದಲ್ಲಿ ದೊಕ್ಕಲರ ಗೋತ್ರ ಮತ್ತು ಉಪಗೋತ್ರಗಳ ಬಗೆಗೆ ವಿವರಗಳಿವೆ. ಆರನೆಯ ಅಧ್ಯಾಯದಲ್ಲಿ ದೊಕ್ಕಲರ ಜೀವನಾವರ್ತನದ ವಿವರಗಳೂ, ಏಳನೆಯ ಅಧ್ಯಾಯದಲ್ಲಿ ವಾರ್ಷಿಕಾವರ್ತನದಲ್ಲಿ ಕಂಡುಬರುವ ವಿವಿಧ ಆಚರಣೆಗಳನ್ನು ಕುರಿತ ಅಮೂಲ್ಯ ಮಾಹಿತಿಗಳನ್ನು ಕಲೆ ಹಾಕಲಾಗಿದೆ. ಎಂಟು ಮತ್ತು ಒಂಬತ್ತನೆಯ ಅಧ್ಯಾಯದಲ್ಲಿ ದೊಕ್ಕಲರ ಜಾನಪದದ ಕುರಿತು ವಿವರಣೆಗಳಿದ್ದರೆ. ಹತ್ತನೆಯ ಅಧ್ಯಾಯವು ದೊಕ್ಕಲರ ಭಾಷೆಯ ಕುರಿತು ಮಾಹಿತಿ ನೀಡುತ್ತದೆ. ಇಡೀ ಪ್ರಬಂಧದಲ್ಲಿನ ತುಂಬ ದುರ್ಬಲವಾದ ಭಾಗ ಎಂದರೆ, ಒಗಟು, ಗಾದೆ, ಹಾಡು, ಕತೆ, ಲಾವಣಿ ಮತ್ತಿತರ ಪ್ರಕಾರಗಳಿವೆ, ಕೊನೆಯ ಅಧ್ಯಾಯದಲ್ಲಿ ಜನಗಣತಿಯ ವಿವರಗಳಿವೆ.

ವಿಷಯ ಸಂಗ್ರಹಣೆ, ಅವುಗಳ ವರ್ಗೀಕರಣ ಮತ್ತು ಮಂಡನೆಯ ವಿಷಯದಲ್ಲಿ ಡಾ. ಎಲ್ಲಪ್ಪ ಕೆಕೆಪುರ ಅವರ ಅಪೂರ್ವವಾದ ಸಂಯಮವೊಂದನ್ನು ಕಾಯ್ದುಕೊಂಡಿದ್ದಾರೆ. ಡಾ. ರಾಮೇಗೌಡರು ಸರಿಯಾಗಿ ಹೇಳಿರುವಂತೆ 'ಬರವಣಿಗೆಯಲ್ಲಿ ಅಪಾರ ಶ್ರದ್ಧೆ ಸಂಯಮಗಳ ಜೊತೆಗೆ ನಿಖರತೆ ಮತ್ತು ಪ್ರಮಾಣ ಬದ್ಧತೆಗಳು ಪ್ರಾಪ್ತಿಯಾಗಿವೆ' ಸಮುದಾಯಗಳ ಬಗ್ಗೆ ಸಂಶೋಧನೆ ನಡೆಸುವ ವಿದ್ಯಾರ್ಥಿಗಳೆಲ್ಲ ಗಮನಿಸಬೇಕಾದ ಮುಖ್ಯ ಕೃತಿಯಿದು.

ii. ಆರ್ಕೆ ಮಣಿಪಾಲ ಅವರು ಚಂದ್ರಶೇಖರ ಕಂಬಾರರ 'ಸಿಂಗಾರೆವ್ವ ತಾತ್ವಿಕತೆಯ ಸ್ವರೂಪ' ಕೃತಿಯನ್ನು ವಿಮರ್ಶಿಸುತ್ತಾ ಅವರು ಮೊದಲೇ ಹಾಕಿಕೊಳ್ಳುವ ತಾತ್ವಿಕ ಚೌಕಟ್ಟು ವಿಮರ್ಶಾತ್ಮಕ ನಿಲುವನ್ನು ಹೊಂದಿರುವುದನ್ನು ಗುರುತಿಸಬಹುದು.

"ವಸಾಹತುಶಾಹಿಯ ಆಳ್ವಿಕೆಯಲ್ಲಿ ನಮ್ಮ ಸಮಾಜದ ರಚೆನೆಯಲ್ಲುಂಟಾದ ಬಿರುಕನ್ನು ಖಚಿತ ರಾಜಕೀಯ ಗ್ರಹಿಕೆಯೊಂದಿಗೆ ಸಮಗ್ರ ನೋಟದಿಂದ ವಿಶ್ಲೇಷಿಸಿರುವ ಕೃತಿಗಳೇ ನಮ್ಮಲ್ಲಿ ಬಂದಿಲ್ಲ. ಹೆಚ್ಚೆಂದರೆ ಭಗ್ನವಾಗುತ್ತಿರುವ ಊಳಿಗಮಾನ್ಯ ಚೌಕಟ್ಟಿನ ಕುರಿತ ಸರಳೀಕೃತ ಮತ್ತು ಹಳಹಳಿಕೆಯ ದಾಟಿಯ ಕೃತಿಗಳು ಬಂದಿವೆ. 'ಗ್ರಾಮಾಯಣ'ದಂಥ ಕೃತಿಗಳಲ್ಲಿ ಈ ವಸ್ತು ಪೂರ್ಣ ಪ್ರಮಾಣದಲ್ಲಿ ಬಳಕೆಯಾಯಿತಲ್ಲದೆ, ಅದೇ ನೋಸ್ಟಾಲಿಜ್ ಮನೋಧರ್ಮದ ಕಾದಂಬರಿಗಳಿಗೆ ಒಂದು ಪರಂಪರೆ ಹಾಕಿಕೊಟ್ಟಿತೆನ್ನಬಹುದು ...." (ಮುಂಗಾರು ೮,೨. ೧೯೮೭)

ಎಂದು ಪೀಠಿಕೆ ಹಾಕುತ್ತಾ ಕೃತಿಯನ್ನು ವಿಮರ್ಶಿಸತೊಡಗುತ್ತಾರೆ. ಈ ತಾತ್ವಿಕ ಪೀಠಿಕೆ ಕೊಟ್ಟಂಥ ಆವರಣದಲ್ಲಿ ಕೃತಿಯನ್ನಿಟ್ಟು ವಿಶ್ಲೇಷಿಸುವ, ಅದರ ಮೂಲಕವೇ ಇಡೀ ಕೃತಿಯನ್ನು ಗ್ರಹಿಸುವ

ವಿಮರ್ಶಕರ ಮನೋಧರ್ಮವನ್ನು ಇದರಲ್ಲಿ ಕಾಣಬಹುದು.

iii. 'ಬೇಂದ್ರೆ ಮತ್ತು ಭಾವಗೀತದ ಸ್ವರೂಪ' ಎಂಬ ಕೃತಿಯನ್ನು ವಿಮರ್ಶಿಸುತ್ತಾ ಡಾ. ಸಿ. ಎನ್.ರಾಮಚಂದ್ರನ್ (ಪ್ರಜಾವಾಣಿ ಭಾನುವಾರ ೧೦ನೇ ಜನವರಿ ೧೯೯೯) ರವರು ಕೃತಿಯ ಗುಣವನ್ನು ಎತ್ತಿಹಿಡಿಯುತ್ತಾರೆ. *'ಬೇಂದ್ರೆಯವರ ವಿಚಾರಗಳ, ಭಾವನೆಗಳ, ಸಿದ್ಧಾಂತಗಳ ಬೇರುಗಳನ್ನು ಸಫಲವಾಗಿ ಶೋಧಿಸುವುದು. 'ಕೃತಿ ಬೇಂದ್ರೆಯವರ ಕಾವ್ಯಭ್ಯಾಸಗಳಿಗೆ ಒಂದು ಉಪಯುಕ್ತ ಆಕರ ಗ್ರಂಥವಾಗುತ್ತದೆ. ಬೇಂದ್ರೆಯವರ ಅನೇಕ ಕ್ಲಿಷ್ಟ ಕವನಗಳನ್ನು ಅರ್ಥೈಸುವ ಸಮರ್ಥ ಕೈಪಿಡಿಯಾಗುತ್ತದೆ ಎಂದು ಹೇಳುತ್ತಲೇ ಕೃತಿಯಲ್ಲಿ ತುಂಬಿಕೊಂಡಿರುವ ಕೊರತೆಗಳನ್ನು ಸೂಚಿಸುತ್ತಾರೆ. ಇಡೀ ಕೃತಿ 'ಬೇಂದ್ರೆ ಕವನಗಳ ಉದ್ಧರಣ ವ್ಯಾಖ್ಯಾನ, ಉದ್ಧರಣ ಇಷ್ಟಕ್ಕೆ ಸೀಮಿತವಾಗಿದೆ. ಕೃತಿಯ ಹೆಸರು 'ಬೇಂದ್ರೆ ಮತ್ತು ಕನ್ನಡ ಭಾವಗೀತೆ ಸ್ವರೂಪ' ಎಂದಿದ್ದರೂ ಇಡೀ ಕೃತಿಯಲ್ಲಿ ಲೇಖಕರು ಬೇಂದ್ರೆಯವರನ್ನು ಬಿಟ್ಟು ಬೇರೆಯಾವ ಕನ್ನಡ ಭಾವಗೀತೆಯನ್ನು, ಕವಿಯನ್ನು ಚರ್ಚಿಸುವುದಿಲ್ಲ. ಮರೆತೂ ಕೂಡ ವ್ಯಾಪಕವಾಗಿ ಬೆಳೆಯಲು ಕಾರಣವಾದ ರಾಜಕೀಯ - ಸಾಮಾಜಿಕ - ಸಾಹಿತ್ಯಕ ಸಂದರ್ಭದ ಬಗ್ಗೆ ಕೃತಿಯಲ್ಲಿ ಒಂದು ಮಾತೂ ಇಲ್ಲ'.*

ಈ ಮೇಲಿನ ಉದ್ಧರಣೆಯಲ್ಲಿ ಗಮನಿಸುವುದೇನೆಂದರೆ ಪುಸ್ತಕ ವಿಮರ್ಶೆಯು ಇಡೀ ಕೃತಿಯ ಮಹತ್ವವನ್ನು ಹೇಳುತ್ತಲೇ ಅದರಲ್ಲಿ ಇರುವ ಕೊರತೆಗಳನ್ನು ಬಿಚ್ಚಿಡುತ್ತವೆ. ಹೀಗೆ ಕೊರತೆಗಳನ್ನು ಹೇಳುವಲ್ಲಿ ಸಹಜವಾಗಿಯೇ ಈ ಕೃತಿ ಆ ಕೊರತೆಯನ್ನು ತುಂಬಬೇಕಿತ್ತು ಎಂಬ ಆಶಯವು ಅಡಗಿದೆ.

ಮೇಲಿನ ಪುಸ್ತಕ ವಿಮರ್ಶಾ ಮಾದರಿಗಳನ್ನು ಗಮನಿಸಿದರೆ ಒಟ್ಟಾರೆಯಾಗಿ ವಿಮರ್ಶೆಯನ್ನು ವೃತ್ತಿಯನ್ನಾಗಿ, ಪ್ರಮುಖ ಪ್ರಕಾರವಾಗಿ ಸ್ವೀಕರಿಸಿರುವುದು ಕಂಡುಬರುತ್ತದೆ. ಆದರೆ ಅಲ್ಲಿನ ಅಯ್ಕೆ ಅವರವರ ಕ್ಷೇತ್ರಕ್ಕೆ ಸಂಬಂಧಪಟ್ಟಿರುವುದು ಸಹಜವಾಗಿದೆ. ಈ ಮೂರರಲ್ಲಿ ಒಂದು 'ಏರಿಯಾ'ವನ್ನು ಸಂಬಂಧಿಸಿದ್ದಲ್ಲ, ಇನ್ನೊಂದು ಲೇಖಕನೊಬ್ಬನ ಕೃತಿಯನ್ನು ಕುರಿತದ್ದು, ಮತ್ತೊಂದು ಕವಿ ಮತ್ತು ಕಾವ್ಯ ಪರಂಪರೆಯನ್ನು ಕುರಿತದ್ದು, ಇದು ಸಾಮಾನ್ಯ ಸ್ವರೂಪದಲ್ಲಿ ಎದ್ದು ಕಂಡರೂ ಇವುಗಳ ವಿಶ್ಲೇಷಣೆಯು, ಪೂರ್ವ ಹಿನ್ನೆಲೆಯ ವಿನ್ಯಾಸಗಳನ್ನು ವಿಶ್ಲೇಷಿಸುತ್ತಾ ವಿಮರ್ಶೆ ಬೆಳೆಯುತ್ತ ಹೋಗುತ್ತದೆ. ಪುರುಷೋತ್ತಮ ಬಿಳಿಮಲೆ ಜಾನಪದದ ಹೊಸ ಆಲೋಚನೆಗಳನ್ನು ಬಿಂಬಿಸುವ ಕೃತಿಯನ್ನು ಆರಿಸಿಕೊಂಡು, ಜಾನಪದ ಅಧ್ಯಯನದ ಮೂಲಕ, ಸಾಹಿತ್ಯ ವಿಮರ್ಶೆಗೆ ತೊಡಗುತ್ತಾರೆ. ಆರ್ಕೆಯವರು ವಿಮರ್ಶೆಯನ್ನು, ಕೃತಿಯನ್ನು ಪರೀಕ್ಷಿಸಿ ನೋಡುವ, ತಂತ್ರ, ಪ್ರೇರಣೆ, ಪ್ರಭಾವ ಮುಂತಾದವುಗಳನ್ನಿಟ್ಟುಕೊಂಡು ಚರ್ಚಿಸುತ್ತಾರೆ. ಸಿ.ಎನ್. ರಾಮಚಂದ್ರನ್ ಅವರದು ಕೃತಿ ಕೊಡುವ ಒಳನೋಟ ಪರಂಪರೆಯ ಚರ್ಚೆಯ ಸ್ವರೂಪದ್ದು. ಈ ಮೂರು ಮಾದರಿಗಳು ಕೇವಲ ಒಪ್ಪಿತ ನೆಲೆಯಲ್ಲೇ ಕೃತಿಯನ್ನು ವಿಶ್ಲೇಷಿಸುವುದಿಲ್ಲ. ಬದಲಾಗಿ ಕೃತಿಯ ಕೊರತೆಯನ್ನು ನೇರವಾಗಿಯೇ ತೋರಿಸುತ್ತವೆ. ಇಲ್ಲಿನ ಎರಡು ಪುಸ್ತಕ ವಿಮರ್ಶೆಗಳು ಹೊಸ ಲೇಖಕರ ಕೃತಿಗಳಾಗಿರುವುದನ್ನು ಗಮನಿಸಬಹುದು. ಒಂದು ಮಾತ್ರ ಈಗಾಗಲೇ ಪ್ರಸಿದ್ಧಿಯಲ್ಲಿರುವ ಲೇಖಕರ ಕೃತಿಯನ್ನು ಕುರಿತದ್ದು. ಆದರೂ ಈ ಮೂರರಲ್ಲಿ ಸಮನಾಂತರ ಸಂಬಂಧಗಳಿವೆ. ಪ್ರತಿಷ್ಠಿತ ಲೇಖಕರ ಪುಸ್ತಕವನ್ನು ವಿಶ್ಲೇಷಿಸುವಾಗ

ಅವರ ಇತರ ಕೃತಿಗಳ ನಡುವೆ ಪ್ರಸ್ತುತ ಕೃತಿಯನ್ನು ಇಟ್ಟು ಪರೀಕ್ಷಿಸುತ್ತಾರೆ. ಹಾಗೇ ಅವುಗಳಿಗಿಂತ ಭಿನ್ನವಾಗಲು ಹೇಗೆ ಸಾಧ್ಯವಾಗುತ್ತದೆ ಎಂಬುದರ ಚರ್ಚೆಯ ಜೊತೆಗೆ ಅದರ ಪ್ರೇರಣೆ ಇನ್ನೊಂದು ಕೃತಿಯಾಗಿರಬಹುದೇ ಎಂದು ಆ ಕೃತಿಯ ಮತ್ತು ಪ್ರಸ್ತುತ ಕೃತಿಯ ಸಂಬಂಧಾಂತರಗಳನ್ನು ಇಟ್ಟು ನೋಡುತ್ತಾರೆ. ಹಾಗೇ ಇನ್ನೆರಡು ಪುಸ್ತಕ ವಿಮರ್ಶೆಗಳು ಇದೇ ಮಾದರಿಯಲ್ಲಿವೆ. ಇಲ್ಲಿ ಕೃತಿಯಷ್ಟೇ ಮುಖ್ಯವಾಗಿ ಅದರ ವಿವರಣೆಗಳೊಂದಿಗೆ ವಿಮರ್ಶೆ ಬೆಳೆಯುವುದಿಲ್ಲ, ಕೃತಿಯ ತಾತ್ವಿಕ ವಿಚಾರಗಳಿಗೆ ಗಮನಕೊಟ್ಟು ವಿಶ್ಲೇಷಿಸುತ್ತಾರೆ. ಹಾಗೇ ಈ ಪುಸ್ತಕ ವಿಮರ್ಶೆಗಳು ಬಂದಿರುವ ಕಾಲವನ್ನು ಗುರುತಿಸಿದರೆ ಕೆಲವೊಂದು ಅಂಶಗಳು ಕಾಣುತ್ತವೆ. ಒಂದು ಪುಸ್ತಕ ವಿಮರ್ಶೆ ಎಂಬತ್ತರ ದಶಕದ್ದಾದರೆ, ಮತ್ತೆರಡು ತೊಂಬತ್ತರ ದಶಕದ ಕೊನೆಯವು. ಸಹಜವಾಗಿಯೇ ಎಂಬತ್ತರ ದಶಕದ ಪುಸ್ತಕ ವಿಶ್ಲೇಷಣೆಗೆ ಸಮಕಾಲೀನ ಸಮಸ್ಯೆಗಳನ್ನು ಎತ್ತಿಕೊಂಡು ಅದನ್ನು ಪರಿಹರಿಸಿಕೊಳ್ಳಲು ಸಾಹಿತ್ಯ ಎದುರಿಸಿದ ಸವಾಲು, ಮತ್ತು ಅದನ್ನು ಸ್ವೀಕರಿಸಿ ಬಿಡುಗಡೆಗೊಂಡ ಸಾಹಿತ್ಯ ಪರಂಪರೆಯ ಸ್ವರೂಪದೊಂದಿಗೆ ಆರಂಭವಾಗುತ್ತದೆ. ೨೦ನೇ ಶತಮಾನದ ತೊಂಬತ್ತರ ದಶಕದಲ್ಲಿನ ಪುಸ್ತಕ ವಿಮರ್ಶೆಗಳು, ಕೃತಿ ಹೊಂದಿರುವ ವಸ್ತುವು ಹೊಸ ಅಧ್ಯಯನಕ್ಕೆ ತೊಡಗಿಕೊಂಡಾಗ ಮತ್ತು ಅದಕ್ಕೂ ಮುನ್ನ ಇದ್ದಂಥ ಸ್ಥಿತಿಯನ್ನು ವಿಶ್ಲೇಷಿಸುತ್ತದೆ. ಹೊಸ ನಮೂನೆಯ ಅರ್ಥಾಂತರಗಳನ್ನು ಪಡೆದುಕೊಳ್ಳಲು ಹವಣಿಸುವ ಭರದಲ್ಲಿರುವುದನ್ನು ಗುರುತಿಸಿ ಪುಸ್ತಕ ವಿಶ್ಲೇಷಣೆಯ ಆರಂಭಕ್ಕೆ ತೊಡಗಿರುವುದನ್ನು ಕಾಣಬಹುದು. ಹಾಗೆಯೇ ಇಲ್ಲಿನ ಎರಡು ಪುಸ್ತಕ ವಿಶ್ಲೇಷಣೆಗಳು ದಿನ ಪತ್ರಿಕೆಗಳವು ಮತ್ತೊಂದು ಸಾಹಿತ್ಯ ಪತ್ರಿಕೆಗಳದ್ದೂ ಆಗಿರುವುದು ಸಹಜವಾಗಿಯೇ ದಿನ ಪತ್ರಿಕೆ ಪುಸ್ತಕ ವಿಶ್ಲೇಷಣೆಗಳಿಗಿಂತ ಸಾಹಿತ್ಯಕ ಪತ್ರಿಕೆಯ ಪುಸ್ತಕ ವಿಮರ್ಶೆ ತುಂಬಾ ದೀರ್ಘವಾದ ಲೇಖನವಾಗಿದೆ.

ಪ್ರಾಸಂಗಿಕವಾಗಿಯಾದರೂ 'ಪುಸ್ತಕ ವಿಮರ್ಶೆ'ಗೆ ತೊಡಗಿಸಿಕೊಳ್ಳುವ ಪುಸ್ತಕ ವಿಮರ್ಶಕರು, ತುಂಬಾ ದೀರ್ಘವಾದ ಚರ್ಚೆಯ ಮೂಲಕವೇ ಕೃತಿಯನ್ನು ವಿಶ್ಲೇಷಿಸುತ್ತಾರೆ. ಹೀಗೆ ಕೃತಿಯನ್ನು ಪರಿಚಯ ಮಾಡಿಕೊಡುವ ನೆಪದಲ್ಲಿ ಒಂದು ವಿಮರ್ಶಾ ಪರಂಪರೆಯನ್ನು ಬೆಳಸುತ್ತಾ ಹೋಗುತ್ತಾರೆ. ಇವರ ಪುಸ್ತಕ ವಿಮರ್ಶೆಗಳು ತುಂಬಾ ಪ್ರೌಢವಾಗಿರುವುದರಿಂದ, ಕೃತಿಗಳಿಂದ ತುಂಬಾ ಒಳನೋಟಗಳನ್ನು ಅಪೇಕ್ಷಿಸುತ್ತವೆ. ಹಾಗೆ ಸಮಕಾಲೀನ ಸ್ಪಂದಿಸುವ ವಿಚಾರಗಳನ್ನಿಟ್ಟುಕೊಂಡು ಕೃತಿಯನ್ನು ವಿಮರ್ಶಿಸುತ್ತಾರೆ. ಅವರ ವಿಮರ್ಶಾ ವೈಖರಿ ಯಾವಾಗಲೋ ಒಮ್ಮೆ ಪುಸ್ತಕ ವಿಮರ್ಶೆಗೆ ತೊಡಗಿಕೊಂಡರೂ ಅವು ಪುಸ್ತಕ ವಿಮರ್ಶೆಗೆ ಮೌಲಿಕತೆಯನ್ನು ತಂದು ಕೊಡುತ್ತವೆ. ಆಗಾಗ್ಗೆ ಇಂಥವರು 'ಪುಸ್ತಕ ವಿಮರ್ಶೆ' ಮಾಡುತ್ತಿದ್ದರೆ, 'ಪುಸ್ತಕ ವಿಮರ್ಶೆ'ಯ ಬಗೆಗೆ ಒಂದು ತಾತ್ವಿಕ ಚೌಕಟ್ಟು ಲಭಿಸುತ್ತದೆ. ಪುಸ್ತಕ ವಿಮರ್ಶೆ ಮನಸ್ಸಿಗೆ ಬಂದದ್ದನ್ನು ಬರೆಯಬಹುದೆಂಬ ಗ್ರಹಿಕೆ ಸಾಮಾನ್ಯ ಪುಸ್ತಕ ವಿಮರ್ಶಕರಿಂದ ದೂರ ಸರಿಯುತ್ತದೆ.

೪.೨.೨.೧ ಪುಸ್ತಕ ವಿಮರ್ಶೆಯ ಮೂಲಭೂತ ಲಕ್ಷಣಗಳು (ಸಾಹಿತ್ಯ ವಿಮರ್ಶೆ ನಡುವಿನ ಸಾಮಾನ್ಯ ವ್ಯತ್ಯಾಸಗಳೊಂದಿಗೆ)

ಪುಸ್ತಕ ವಿಮರ್ಶೆ ಅಧ್ಯಯನ ಮಾಡುವ ಸಂದರ್ಭದಲ್ಲಿ ಇದರ ಸಾಂಸ್ಕೃತಿಕ ಮಹತ್ವವನ್ನು ಗುರುತಿಸಿಕೊಳ್ಳಬೇಕು. ಹಾಗೆ ಗುರುತಿಸುವಾಗ ಸಾಹಿತ್ಯ ವಿಮರ್ಶೆಗಿಂತ ಪುಸ್ತಕ ವಿಮರ್ಶೆ ಹೇಗೆ ಭಿನ್ನವಾಗಿದೆ, ಎಂಬುದರ ಪರ್ಯಾಲೋಚನೆ ನಡೆಸಬೇಕು. ಪುಸ್ತಕ ವಿಮರ್ಶೆಯು ತಾತ್ಕಾಲಿಕವಾಗಿಯಾದರೂ ಕೃತಿಯ ಮೇಲೆ ಜನಾಭಿಪ್ರಾಯವನ್ನು ರೂಪಿಸುವುದರಿಂದ 'ಪುಸ್ತಕ ವಿಮರ್ಶೆ' ಸಾಹಿತ್ಯ ವಿಮರ್ಶೆಗಿಂತ ಹೆಚ್ಚು ಮಹತ್ವವುಳ್ಳದ್ದು ಒಂದು ಕೃತಿ ಕುರಿತು ಮೊದಲು ಬಂದ ವಿಶ್ಲೇಷಣೆ ಸಾಹಿತ್ಯ ಓದುಗರ ಜನಾಭಿಪ್ರಾಯ ಸ್ವರೂಪದ್ದಾಗಿರುತ್ತದೆ. ಆದರೆ ಅದೇ ಕೃತಿ ಸಾಹಿತ್ಯ ವಿಮರ್ಶೆಯಾಗಿ ಬಂದಾಗ ಅದು ವಿದ್ವಾಂಸರ ಚರ್ಚೆಯ ವಸ್ತುವಾಗುತ್ತದೆ. ಆದರೆ ಅದು ಮೊದಲ ಮಾರ್ಗಸೂಚಿ ಹಿಂದಿನ ಪುಸ್ತಕ ವಿಮರ್ಶೆಯೆಂಬುದನ್ನು ಮರೆಯಲಾಗದು. ಆದರೆ ಒಂದು ಕೃತಿಯ ಸಮಗ್ರ ವಿಮರ್ಶೆಯ ಮೂಲ ಈ ಕೃತಿಯ ಪುಸ್ತಕ ವಿಮರ್ಶೆ ಎಂಬುದು ಗಮನಕ್ಕೆ ಬಂದ ವಿಚಾರ ಅದರೆ ಇದು ಕಡ್ಡಾಯವಲ್ಲ ಕೃತಿಯ ಬಗೆಗಿನ ಚರ್ಚೆಗೆ 'ಪುಸ್ತಕ ವಿಮರ್ಶೆ' ಮೊದಲ ಮೆಟ್ಟಿಲಾಗಿರುತ್ತದೆ. ಈಗಿರುವ ಇವೆರಡು ಸಂಬಂಧಗಳನ್ನು ಅವುಗಳ ನಡುವೆ ಇರುವ ವ್ಯತ್ಯಾಸಗಳ ಮೂಲಕ ವಿವೇಚಿಸಬಹುದು.

ಅ. ಪುಸ್ತಕ ವಿಮರ್ಶೆ ತತ್‌ಕ್ಷಣದ ಪ್ರತಿಕ್ರಿಯೆಯ ಪ್ರತಿಫಲ - ಸಾಹಿತ್ಯ ವಿಮರ್ಶೆ ಚಿಂತನೆಯ ಫಲ.

ಸಾಹಿತ್ಯ ಪ್ರಪಂಚಕ್ಕೆ ಪ್ರತಿದಿನ ಸಾವಿರಾರು ಕೃತಿಗಳು ಬಂದು ಬೀಳುತ್ತಿವೆ. ಅವುಗಳೆಲ್ಲವನ್ನು ಓದುವ ತಾಳ್ಮೆ, ಸಮಯ ಆಧುನಿಕ ಓದುಗರಿಗಿಲ್ಲ. ಒಂದು ಒಳ್ಳೆಯ ಕೃತಿಯನ್ನು ಆರಿಸಿಕೊಳ್ಳುವ ಆಯ್ಕೆ ಗುಣ ಸ್ವ-ಓದೇ ಆಗಿರುವುದರಿಂದ ಆಯ್ಕೆ ಸ್ವಲ್ಪ ಕಷ್ಟದ್ದಾಗುತ್ತದೆ. ಆಗ ಅವರು ಪುಸ್ತಕ ವಿಮರ್ಶೆಯ ಮೊರೆ ಹೋಗುತ್ತಾರೆ. ಪುಸ್ತಕ ವಿಮರ್ಶಕರಿಗೂ ಇದೇ ರೀತಿಯ 'ಒತ್ತಡ' ಇರುತ್ತದೆ. ಪುಸ್ತಕ ವಿಮರ್ಶೆಗೆಂದು ಬರುವ ಕೃತಿಗಳನ್ನು ಓದಿ ಚಿಂತಿಸಿ 'ವಿಮರ್ಶೆ' ಬರೆಯಲು ಹೆಚ್ಚು ಸಮಯ ಬೇಕಾಗಿರುವುದರಿಂದ ಮತ್ತು ಕೃತಿಗಳನ್ನು ಬಂದ ಸಂದರ್ಭದಲ್ಲಿಯೇ ಅತಿ ಬೇಗನೆ ಪರಿಚಯ ಮಾಡಿಕೊಡಬೇಕೆಂದು ಒತ್ತಡ ಇರುವುದರಿಂದ ಇವೆಲ್ಲರಿಂದ ಮುಕ್ತರಾಗಲು ಪುಸ್ತಕ ವಿಮರ್ಶಕರು ಕೃತಿ ಬಗೆಗಿನ ಓದಿನ ಮೊದಲ ಪ್ರತಿಕ್ರಿಯೆಯನ್ನು ನೀಡುತ್ತಾರೆ. ಚಿಂತನೆಯ ಆಳಕ್ಕೆ ಇಳಿಯುವ ಸಾಧ್ಯತೆ ತುಂಬಾ ಕಡಿಮೆ. ಈ ಸ್ವರೂಪದ ಒಂದು ಮಾದರಿಯನ್ನಿಟ್ಟುಕೊಂಡು ವಿವರಗಳನ್ನು ಚರ್ಚಿಸಬಹುದು.

೧. ಕಾವ್ಯಜೀವಿ ಅವರ 'ಆರೋಹಣ' ಕವನ ಸಂಕಲನವನ್ನು ಮುಕುಂದರಾಜ್ ಅವರು ಪುಸ್ತಕ ವಿಮರ್ಶೆ ಮಾಡಿರುವ ಒಂದು ಮಾದರಿ.[೮]

ಕಾವ್ಯ ಜೀವಿ ಅವರ 'ಆರೋಹಣ ಕವನ ಸಂಕಲನದಲ್ಲಿ ಮೂವತ್ತೊಂದು ಕವಿತೆಗಳ ಜೊತೆಗೆ ಹಲವಾರು ಹನಿಗವಿತೆಗಳು ಸೇರಿಕೊಂಡಿವೆ. ಇದು ಇವರ ಮೂರನೆಯ ಕವನ ಸಂಕಲನ. ಎರಡು ಸಂಕಲನ ತಂದಿರುವ ಕವಿಯೊಬ್ಬ

ತನ್ನ ಮೂರನೆಯ ಸಂಕಲನದಲ್ಲಿ ತೋರಬೇಕಾದ ಶ್ರದ್ಧೆ ಮತ್ತು ಪ್ರೌಢಿಮೆಯನ್ನು ತೋರಿರುವುದು ಸಮಾಧಾನದ ಸಂಗತಿ ತನ್ನೊಳಗೆ ಹುಟ್ಟುವ ಕವಿತೆಗೆ ಬಾಹ್ಯ ಆಕೃತಿ ಕಟ್ಟುವ ಕಲೆಗಾರಿಕೆ ಇಲ್ಲಿನ ಬಹುತೇಕ ಕವಿತೆಗಳಲ್ಲಿ ಇಲ್ಲದಿದ್ದರೂ ಆರಿಸಿದ ಕೆಲವು ಕವಿತೆಗಳನ್ನು ಓದಿದಾಗ ಕಾವ್ಯಜೀವಿಯವರ ಕಾವ್ಯೋತ್ಸಾಹದ ಅರಿವನ್ನು ಸಹೃದಯನಿಗೂ ವ್ಯಕ್ತಪಡಿಸಲಿಚ್ಚಿಸುತ್ತೇನೆ.

ಮೊದಲನೇ ಕವಿತೆ 'ಬದುಕು' ಬದುಕಿನ ನಿಷ್ಠುರತೆಯನ್ನು ಗೇಯಾತ್ಮಕ ಬಂಧದಲ್ಲಿ ಹಿಡಿದು ಕೊಡುವ ಉತ್ತಮ ಕವಿತೆ. ಇದೇ ರೀತಿಯ ಲಯದಲ್ಲಿ ಮೂಡುವ ಕೆಳಗಿನ ಸಾಲುಗಳಲ್ಲಿ ಕಾವ್ಯಜೀವಿಯವರ ಪ್ರತಿಭೆ ಹೊಮ್ಮುತ್ತದೆ.

ಹಾಡುಗಳ ಹಿಂದೀಗ ಕಣ್ಣೀರು ಕಡಲುಂಟು
ಸವಿಗನಸುಗಳ ಸವಿಯ ಬಿಸಿ ಬೂದಿಯುಂಟು
ನನ್ನ ಹಾಡಿನ ಹಿಂದೆ ವಿಷ ಕುಡಿದ ಕೊರಳುಂಟು
ಮರುಳುಗಾಡಿನ ಪಥಿಕ ದಾಹವುಂಟು! (ನೆನಪುಗಳು)

ದುಡಿಯುವವರ ಬೆವರಿನಲಿ ಅತ್ತರನು ಕೊಳ್ಳುತ್ತ
ಘಮಘಮಿಸುವರೆಗೆಲ್ಲ ದೀಪಾವಳಿ
ಅಸಹಾಯ ರಕ್ತದಲಿ ಓಕುಳಿಯನಾಡುತ್ತ
ತಿಲಕ ಹಚ್ಚುವರಿಗೆಲ್ಲ ದೀಪಾವಳಿ.

'ರಾಗಗಳು' ಕವಿತೆಯಲ್ಲೂ ಇಂತಹ ಸಾಲುಗಳನ್ನು ಗಮನಿಸಬಹುದು. ಬೇಲಿ ಮೇಲಿನ ಬಟ್ಟೆ 'ಹೀಗೊಂದು ಪತ್ರ'. ಕವಿ ಕಣವಿ, ಅವರೋಹಣ, ಮಾತುಗಳ ಮಾತಲ್ಲ, ಮುಂತಾದ ಕವಿತೆಗಳು ಸಹೃದಯರಿಗೆ ಆಪ್ತವಾಗುತ್ತವೆ.

ಮೊದ ಮೊದಲಿನ ಕವಿತೆಗಳು ಪಡ್ಡೆ ಹುಡುಗರ ಪ್ರಣಯದಂತೆ ಎಂದು ಹೇಳುವ ಮಟ್ಟದಿಂದ ಮುಂದೆ ಸಾಗಿ ಪ್ರೌಢ, ಗಾಢ ಮತ್ತು ಸಾಂದ್ರ ಅನುಭವಗಳ ಮಿಳಿತವನ್ನು ಸಾಧಿಸದಿದ್ದರೆ ಇವರ ಕಾವ್ಯ ನಿಜವಾಗಿಯು ನಿಶಿತಮತಿಯ ಕಾವ್ಯವೇ ಆಗುತ್ತಿತ್ತು.

ಈ ಮೇಲಿನ ಉಲ್ಲೇಖವನ್ನು ಗಮನಿಸಿದಾಗ ಪುಸ್ತಕ ವಿಮರ್ಶಕರು ನೇರವಾಗಿ ಪುಸ್ತಕ ವಿಮರ್ಶೆಗೆ ತೊಡಗಿರುವುದು ಕಂಡುಬರುತ್ತದೆ. ಈ ಸಂಕಲನದಲ್ಲಿರುವ ಕವಿತೆಗಳ ಸಂಖ್ಯೆಯನ್ನು ಲೆಕ್ಕಹಾಕಿ ಹೇಳಿದ್ದಾರೆ. ಇದು ಇವರ ಮೂರನೆ ಸಂಕಲನ ಎಂದು ಗುರುತಿಸಿದ್ದಾರೆ. ಆದರೆ ಇನ್ನೆರಡು ಕೃತಿಗಳ ಸ್ವರೂಪದ ಬಗೆಗೆ ಹೇಳಿಲ್ಲ. ನೇರವಾಗಿ ಈ ಕೃತಿಯಲ್ಲಿ ಶ್ರದ್ಧೆ ಮತ್ತು ಪ್ರೌಢಿಮೆಯನ್ನು ತೋರಿಸುವುದು ಸಮಾಧಾನದ ಸಂಗತಿ ಎಂಬ ತೀರ್ಮಾನ ಮಾಡುತ್ತಾರೆ. ಅಂದರೆ ಕೆಲವೊಮ್ಮೆ ಪುಸ್ತಕ ವಿಮರ್ಶೆಯಲ್ಲಿ ಪ್ರಸ್ತುತ ಕೃತಿಯ ಮಹತ್ವವನ್ನು ಹೇಳತೊಡಗಿದಾಗ ಹಿಂದಿನ ಕೃತಿಗಳ ಹೆಸರನ್ನು ಎತ್ತಿ ಅವುಗಳ ಮೌಲ್ಯವನ್ನು ಅಮೂರ್ತವಾಗಿಸುವ ಯತ್ನಗಳನ್ನು ಕಾಣಬಹುದು. ಅಲ್ಲದೆ ಈ ಕೃತಿ ಸಮಾಧಾನದ ಕೃತಿ ಎಂದು ಹೇಳುತ್ತಲೇ ಸತ್ವಯುತವಾದ ಕವಿತೆಗಳು ಇಲ್ಲ ಎಂಬ ನಿಲುವಿಗೆ ಪುಸ್ತಕ ವಿಮರ್ಶಕರು ಬರುತ್ತಾರೆ. ಪುಸ್ತಕ ವಿಮರ್ಶಕರ ಈ ದ್ವಂದಕ್ಕೆ ಕಾರಣವೇನು?

ಇಲ್ಲಿ ಎರಡು ಅಂಶಗಳು ಸ್ಪಷ್ಟವಾಗುತ್ತವೆ. ಏನೆಂದರೆ ಈ ಕೃತಿ ಲೇಖಕರ ಹಿಂದಿನ ಎರಡು ಕೃತಿಗಳ ವಿವರಗಳನ್ನು ಕೊಡದಿರುವುದಕ್ಕೆ ಸಮಯ ಮತ್ತು ಸ್ಥಳದ ಅಭಾವ, ಮತ್ತು ಪುಸ್ತಕ ವಿಮರ್ಶೆ

ತುರ್ತಿನ ಕೆಲಸವಾಗಿರುವುದು. ಕೆಲವೊಮ್ಮೆ ಕೃತಿ ಪುಸ್ತಕ ವಿಮರ್ಶಕರಿಗೆ ಮೆಚ್ಚಿಗೆಯಾಗದಿದ್ದರೂ ಪರಿಚಯ ಮಾಡಿಕೊಡಬೇಕಾದ ಅನಿವಾರ್ಯತೆ ಇರುವುದರಿಂದ 'ವೈಯಕ್ತೀಕರಣಕ್ಕೆ ತಂದುಕೊಂಡು ಕುತೂಹಲ ವ್ಯಕ್ತಪಡಿಸಲಿಚ್ಚಿಸುತ್ತೇನೆ' ಎಂಬ ನಿರ್ದೇಶನಗಳ ಮೂಲಕ ಕೃತಿಯ ವಿಮರ್ಶೆ ಮಾಡುತ್ತಾರೆ. ಅಲ್ಲದೆ. 'ತನ್ನೊಳಗೆ ಹುಟ್ಟುವ ಕವಿತೆಗೆ ಬಾಹ್ಯ ಆಕೃತಿ ಕಟ್ಟುವ ಕಲೆಗಾರಿಕೆ ಇಲ್ಲಿನ ಬಹುತೇಕ ಕವಿತೆಗಳಲ್ಲಿ ಇಲ್ಲದಿದ್ದರೂ ಆರಿಸಿದ ಕೆಲವು ಕವಿತೆಗಳನ್ನು ಓದಿದಾಗ ಕಾವ್ಯಜೀವಿಯರ ಕಾವ್ಯೋತ್ಸಾಹದ ಅರಿವು ಸಹೃದಯರಿಗೆ ಉಂಟಾಗುತ್ತದೆ ಎಂದು ಪುಸ್ತಕ ವಿಮರ್ಶೆಯ ಪ್ರಾರಂಭದಲ್ಲಿ ಕವಿತೆಯ ಕೊರತೆಯನ್ನು ಹೇಳಿದವರು ಅಂತ್ಯದ ವೇಳೆಗೆ ಕೆಲವು ಕವಿತೆಗಳು ಸಹೃದಯರಿಗೆ ಆಪ್ತವಾಗುತ್ತವೆ ಎಂಬ ನಿಲುವಿಗೆ ಬರುತ್ತಾರೆ. ಇಲ್ಲಿ ಗುರುತಿಸಬಹುದಾದ ಅಂಶವೆಂದರೆ ತಕ್ಷಣದ ಪ್ರತಿಕ್ರಿಯೆ ನೀಡುವ ಸಂದರ್ಭದಲ್ಲಿ ಅವಸರದ ಓದಿನಿಂದ ಪುಸ್ತಕ ವಿಮರ್ಶೆಯ ಆರಂಭ ಗೊಂದಲಮಯದಿಂದ ರೂಪಗೊಂಡಿದೆ. ಆದರೆ ಕಡೆಕಡೆಗೆ ಕೃತಿಯ ಒಳವಿವರಗಳಿಗೆ ಹೋಗುತ್ತಿದ್ದಂತೆ ಕೃತಿ ಸ್ಪಷ್ಟವಾಗುತ್ತಿರುವುದನ್ನು ಗುರುತಿಸಬಹುದು.

ಇದರ ಜೊತೆಗೆ ಪುಸ್ತಕ ವಿಮರ್ಶಕರು ಕೃತಿಯ ಕೊರತೆಗಳನ್ನು ಆರಂಭದಲ್ಲಿ ಎತ್ತಿದ್ದು, ಕೊನೆ ಕೊನೆಗೆ ಈ ಸಂಕಲನದ ಕವಿತೆಗಳು ಹೊಸದಾರಿ ಹಿಡಿದು ಸಾಗಿರುವ ಬಗೆಯನ್ನು ಗುರುತಿಸುತ್ತಾರೆ. ಈ ಹೊಸ ದಾರಿಗೆ ಹೊರಳಬೇಕಾದಾಗ ನಿಶ್ಚಿತವಾದ ತೊಡರುಗಳನ್ನು ತಪ್ಪಿಸಿಕೊಂಡು ಕವಿ ನಡೆದಿದ್ದಾರೆ ಎಂಬುದನ್ನು ಗುರುತಿಸುತ್ತಾರೆ. 'ಕವಿ ಕಲಾತ್ಮಕತೆಯನ್ನು ಪಡೆಯದೆ ಕವಿತೆ ರಚಿಸುವುದು' ಎಂದು ಪ್ರಾರಂಭದಲ್ಲೂ, ಆನಂತರ 'ಕವಿತೆಗಳು ಪ್ರೌಢ ಅನುಭವ ಸಾಂದ್ರತೆಯನ್ನು ಪಡೆದು ಸಾರ್ಥಕತೆಯನ್ನು ಪಡೆದಿವೆ' ಎಂದು ಹೇಳುವುದರ ಮುಖೇನವೇ ಪುಸ್ತಕ ವಿಮರ್ಶೆ ಈ ಎರಡು ರೀತಿಯ ಆಲೋಚನೆಗಳಿಗೂ ಸತ್ವ ಒದಗಿಸಿದೆ.

ಇದು ಕೃತಿ ಓದಿದ ತಕ್ಷಣ ರೂಪುಗೊಳ್ಳುವ ಪ್ರತಿಕ್ರಿಯೆಯಾಗಿರುವುದರಿಂದ ಇದಕ್ಕೆ ಬಹಳ ಗಂಭೀರ ಹಿನ್ನೆಲೆ, ತಾತ್ವಿಕ ಸಿದ್ಧಾಂತಗಳು ಇರುವುದಿಲ್ಲ. ಇಲ್ಲಿ ಕೃತಿಯೇ ಮುಖ್ಯ ಕೇಂದ್ರವಾಗಿರುತ್ತದೆ. ಕೃತಿಯ ವಿವರಗಳಿಂದ ಪುಸ್ತಕ ವಿಮರ್ಶೆ ಆರಂಭವಾಗುತ್ತದೆ. ಹೀಗೆ ತತ್‌ಕ್ಷಣದ ಪ್ರತಿಕ್ರಿಯೆ ನೀಡುವುದರಿಂದ ಕೆಲವೊಮ್ಮೆ ಕೃತಿಯ ಬಗೆಗೆ ಅತಿರೇಕದ ದೋಷಾರೋಪಗಳು, ಅವ್ಯಾಪ್ತಿ ದೋಷಗಳು ಬಂದೊದಗುವ ಸಾಧ್ಯತೆಗಳಿರುತ್ತವೆ. ಆದರೆ ಸಾಹಿತ್ಯ ವಿಮರ್ಶೆ ಮೊದಲ ಓದಿನಿಂದ ಹುಟ್ಟುವುದಿಲ್ಲ. ಅದಕ್ಕೆ ಇತರ ಓದಿನ, ಗ್ರಹಿಕೆ, ಚಿಂತನೆ, ಕೆಲವೊಮ್ಮೆ ಇತರ ವಿದ್ವಾಂಸರುಗಳ ಜೊತೆ ಅನುಸಂದಾನ ಮಾಡುವುದರ ಮೂಲಕ ವಿಸ್ತಾರವಾದ ವಿಮರ್ಶೆ ರೂಪುಗೊಳ್ಳುತ್ತದೆ. ಸಾಹಿತ್ಯ ವಿಮರ್ಶೆಗೆ ಪೂರ್ವ ಹಿನ್ನೆಲೆಯಾಗಿ ಪುಸ್ತಕ ವಿಮರ್ಶೆ ನೆರವಾಗುತ್ತದೆ. ಆ ಮೂಲಕವೇ ಸಾಹಿತ್ಯ ವಿಮರ್ಶೆ ರೂಪುಗೊಳ್ಳಲು ಪೂರಕವಾದ ವಾತಾವರಣವನ್ನು ನಿರ್ಮಾಣ ಮಾಡಿರುತ್ತದೆ. ಕೆಲವೊಮ್ಮೆ ಸಾಹಿತ್ಯ ವಿಮರ್ಶೆಗಳು ಪುಸ್ತಕ ವಿಮರ್ಶೆಯ ಮೇಲೆ ನಿಂತಿರುತ್ತವೆ.

ಆ. ಪುಸ್ತಕ ವಿಮರ್ಶೆ ಮೊದಲ ಓದು, ಮೊದಲ ನೋಟ- ಸಾಹಿತ್ಯ ವಿಮರ್ಶೆ ಮೊದಲ ಓದಲ್ಲ.

ಪುಸ್ತಕ ವಿಮರ್ಶೆ ಮೊದಲ ಓದಿನಿಂದ ಹುಟ್ಟುವಂತಹದ್ದು. ಒಂದು ಕೃತಿ ಬಿಡುಗಡೆಯಾದಾಗ ಅದರ ಪರಿಚಯದ ಒತ್ತಡದ ತುರ್ತು ಇರುವುದರಿಂದ ಮತ್ತು ಮಾಧ್ಯಮದ ಬಿಡುಗಡೆ ಈ ಎಲ್ಲ ಅಂಶಗಳು ಸೇರಿರುವುರಿಂದ ಕೃತಿಯನ್ನು ತಾತ್ವಿಕ ವಿಶ್ಲೇಷಣೆಗೆ ಒಳಪಡಿಸಲು ಸಾಧ್ಯವಾಗುವುದಿಲ್ಲ.

'ಶ್ರೀರಂಗ ಸಂಪುಟ ಆಯ್ದ ನಾಟಕಗಳು' ಎಂಬ ಪುಸ್ತಕವನ್ನು ಪ್ರಕಾಶ ಗರುಡ ಅವರು 'ಪುಸ್ತಕ ವಿಮರ್ಶೆ' ಮಾಡಿರುವ ರೀತಿಯನ್ನು ಗಮನಿಸಬಹುದು. ಬಹಳ ದೊಡ್ಡ ಪುಸ್ತಕವನ್ನು ಅತಿ ಸರಳವಾಗಿ ಕೆಲವೇ ಸಾಲುಗಳಲ್ಲಿ ಪುಸ್ತಕ ವಿಮರ್ಶೆ ಮಾಡಿರುವುದು ಗಮನೀಯ.[೮]

ಶ್ರೀರಂಗ ಸಂಪುಟ -೧ ಆಯ್ದ ನಾಟಕಗಳು ಸಂ: ಟಿ.ಪಿ. ಅಶೋಕ ಪುಸ್ತಕ ವಿಮರ್ಶಕರು ಪ್ರಕಾಶಗರುಡ.

ದಿ. ಶ್ರೀರಂಗರ ಸೃಜನ ಸಾಹಿತ್ಯವನ್ನು ಸಮಗ್ರವಾಗಿ ಪ್ರಕಟಿಸುವುದರ ಮೂಲಕ ಅವರ ಎಲ್ಲ ಅತ್ಯುತ್ತಮ ಬರವಣಿಗೆಗಳೂ ಕನ್ನಡ ಓದುಗರಿಗೆ ಸುಲಭವಾಗಿ ಸಿಗಬೇಕು ಎಂಬ ಆಶಯವನ್ನಿಟ್ಟುಕೊಂಡ ಕನ್ನಡ ವಿಶ್ವವಿದ್ಯಾಲಯ ಇದೀಗ ಅವರ ಆಯ್ದ ನಾಟಕಗಳ ಪ್ರಥಮ ಸಂಪುಟವನ್ನು ಪ್ರಕಟಿದೆ.

ಪ್ರಸ್ತುತ ಕೃತಿಯನ್ನು ಟಿ.ಪಿ. ಅಶೋಕ ಸಂಪಾದಿಸಿ ಅವರೇ ಉಪಯುಕ್ತ ಪ್ರಸ್ತಾವನೆಯನ್ನು ಬರೆದಿದ್ದಾರೆ. ಈ ಸಂಪುಟದಲ್ಲಿ ಶ್ರೀರಂಗರ ಪ್ರಾತಿನಿಧಿಕ ನಾಟಕಗಳೆಂದು ಗುರುತಿಸಲ್ಪಡುವ ಒಟ್ಟು ಒಂಬತ್ತು ನಾಟಕಗಳಿವೆ. ಹರಿಜನ್ವಾರ (೧೯೩೪) ಪ್ರಪಂಚ ಪಾಣಿಪತ್ತು (೧೯೩೪), ಪರಮೇಶ್ವರ ಪುಲಕೇಶಿ (೧೯೩೬), ಸಂಧ್ಯಾಕಾಲ (೧೯೩೬), ಮತ್ತು ಸ್ವಾತಂತ್ರ್ಯೋತ್ತರದಲ್ಲಿ ಬರೆದ ಶೋಕ ಚಕ್ರ (೧೯೫೭), ಕತ್ತಲೆ ಬೆಳಕು (೧೯೫೯), ಕೇಳು ಜನಮೇಜಯ (೧೯೬೦), ಸಂಜೀವಿನಿ (೧೯೬೧), ರಂಗ ಭಾರತ (೧೯೬೫)

ಈ ಸಂಪುಟದ ಸಂಪಾದಕರೇ ಹೇಳುವಂತೆ 'ಕನ್ನಡ ನಾಡು ಹೆಚ್ಚಾಗಿ ನಾಟಕಕಕಾರ ಶ್ರೀರಂಗರಿಗೇ ಪ್ರತಿಕ್ರಿಯಿಸಿದೆ. (ಪುಟ. ೨) ಒಂದು ದೃಷ್ಟಿಯಲ್ಲಿ ಇದು ನಿಜ ಕೂಡಾ. ತಮ್ಮ ಜೀವಿತ ಕಾಲದಲ್ಲಿ ಶ್ರೀರಂಗರು ನಾಟಕ ರಚನೆಯಲ್ಲಿ ತಮ್ಮನ್ನು ಸೀಮಿತಗೊಳಿಸಿಕೊಳ್ಳದೆ, ನಾಟಕ ರಚನೆಯ ಜೊತೆ ಜೊತೆಗೆ ರಂಗಶಿಕ್ಷಣ, ರಂಗ ಕಮ್ಮಟಗಳು, ನಾಟಕೋತ್ಸವಗಳು ಹೀಗೆ ಹಲವು ರೀತಿ ತಮ್ಮನ್ನು ತೊಡಗಿಸಿಕೊಂಡು ಸಮಕಾಲೀನ ಜೀವನಕ್ಕೆ ನೇರ ಸ್ಪಂದಿಸುವಂಥ ಅರ್ಥಪೂರ್ಣವಾದ ರಂಗಭೂಮಿಯೊಂದನ್ನು ಕಟ್ಟಲು ಪ್ರಯತ್ನಿಸಿದರು. ಹಾಗಾಗಿ ಕನ್ನಡದ ಜನತೆ ಅಷ್ಟೇ ಏಕೆ ಇಡೀ ಭಾರತದ ಜನತೆ ನಾಟಕಕಾರ ಶ್ರೀರಂಗರಿಗೇ ಪ್ರತಿಕ್ರಿಯಿಸಿದೆ. ಶ್ರೀರಂಗರು ಇತಿಹಾಸದ ಪುಟಗಳಿಗೆ ಸೇರಿ ಇಂದಿಗೆ ಸುಮಾರು ಎಂಟು ವರ್ಷಗಳಾದವು. ಕನ್ನಡ ರಂಗಭೂಮಿ ಈಗ ಅವರ ಪ್ರಾತಿನಿಧಿಕ ನಾಟಕಗಳನ್ನೊಳಗೊಂಡ ಈ ಸಂಪುಟ ಓದುಗರನ್ನು ಮರುಚಿಂತನೆಗೆ ಒಳಪಡಿಸುವುದರಲ್ಲಿ ಸಂಶಯವಿಲ್ಲ.

ಈ ಮೇಲಿನ ಪುಸ್ತಕ ವಿಮರ್ಶೆ ನೇರವಾಗಿ ಪುಸ್ತಕದ ವಿಚಾರಕ್ಕೆ ಬರದೆ ಪ್ರಕಟಣೆ ಮತ್ತು ಪ್ರಕಾಶನದ ಬಗೆಗೆ ಹಾಗೂ ಉದ್ದೇಶಗಳನ್ನು ಹೇಳುತ್ತಿದೆ. ಇದು ಒಂದು ರೀತಿಯಲ್ಲಿ ಪ್ರಕಟಣೆ, ಪ್ರಕಾಶನದ ಉದ್ದೇಶಗಳು, ಕೃತಿ ಮಾಹಿತಿಯ ವಿವರಗಳನ್ನು ನೀಡುತ್ತಿದೆ ಎಂದು ಭಾವಿಸಿದರೂ

ಕೆಲವೊಮ್ಮೆ ಅನಗತ್ಯವಾದ ವಿವರಗಳು ತುಂಬಿಕೊಳ್ಳುತ್ತವೆ. ಈ ಪುಸ್ತಕ ವಿಮರ್ಶೆಯ ಕೃತಿಯಲ್ಲಿನ ಮುನ್ನುಡಿಯನ್ನು ಹೆಕ್ಕಿಕೊಂಡು ಅದರ ತಳಪಾಯದ ಮೇಲೆ ತಮ್ಮ ಪುಸ್ತಕ ವಿಮರ್ಶೆಯನ್ನು ಕಟ್ಟಿರುವುದನ್ನು ಗುರುತಿಸಬಹುದು. ಪ್ರಸ್ತುತ ಕೃತಿಯ ಒಳವಿವರಗಳನ್ನು ಪ್ರತ್ಯೇಕವಾಗಿ ಹೇಳದೆ ಶ್ರೀರಂಗರು ನಾಟಕದ ಬಗ್ಗೆ ಬೆಳೆದು ಬಂದ ವಿವರಗಳನ್ನು ವಿವರಿಸುತ್ತಾರೆ. ನಾಟಕಕಾರರು ಬೆಳೆದಿರುವ ಪರಿಸರ, ಈಗಿನ ಸಾಂಸ್ಕೃತಿಕ ಪರಿಸರ ಇವೆರಡನ್ನು ಹೆಚ್ಚು ವಿವರಿಸಿರುವ ಪುಸ್ತಕ ವಿಮರ್ಶಕರು ಕೃತಿಯ ಒಳಗಿನ ವಿವರಗಳಿಗೆ ತೊಡಗಿಲ್ಲ. ಆದರೂ ಈ ಸಂಪುಟ ಓದುಗರನ್ನು ಮರುಚಿಂತನೆಗೆ ಒಳಪಡಿಸುವುದರಲ್ಲಿ ಸಂಶಯವಿಲ್ಲ ಎಂಬ ತೀರ್ಮಾನಕ್ಕೆ ಬರುತ್ತಾರೆ. ಅದಕ್ಕೆ ಕಾರಣಗಳನ್ನು ಶೋಧಿಸಿಲ್ಲ. ಹೇಗೆ ಒಳಪಡುತ್ತಾರೆ? ಆ ಕೃತಿ ಬೀರಬಹುದಾದ ಪರಿಣಾಮಗಳೇನು? ಓದುಗರಿಗೆ ಸ್ಪಂದಿಸುವ ಬಗೆ ಹೇಗೆ? ಎಂಬ ವಿಶ್ಲೇಷಣೆಗೆ ತೊಡಗಿಲ್ಲ. ಇದಕ್ಕೆ ಕಾರಣವೂ ಇದೆ. ಈ ಪ್ರತಿಕ್ರಿಯೆ ಕೃತಿಯು ಮೊದಲ ಓದಿನಿಂದ ರೂಪಗೊಂಡಿರುವಂಥದ್ದು. ಹಾಗಾಗಿ ಇಲ್ಲಿ ಯಾವ ನಿರ್ದೇಶಾತ್ಮಕ ತೀರ್ಮಾನಗಳನ್ನು, ಪರಿಹಾರಗಳನ್ನು ನೀಡಿಲ್ಲ. ಬದಲಾಗಿ 'ಆಗಬಹುದು' ಎಂಬ ನಿರೀಕ್ಷೆಯಲ್ಲಿ ಪುಸ್ತಕ ವಿಮರ್ಶೆ ರೂಪ ಪಡೆದಿದೆ.

ಅಂದರೆ ಪುಸ್ತಕ ವಿಮರ್ಶಕರು ಇಲ್ಲಿ ಕೃತಿಯಿಂದ ಪಡೆದ ಮೊದಲ ಅಭಿಪ್ರಾಯವನ್ನು ಲೇಖನವಾಗಿಸಿದ್ದಾರೆ. ಆದರೆ ಇದಕ್ಕೆ ಚರ್ಚೆ ಮುಂತಾದವುಗಳು ಸೇರುತ್ತಾ ಹೋಗಿದ್ದರೆ ಈ ಲೇಖನದ ಸ್ವರೂಪವೇ ಬದಲಾಗುತ್ತಿತ್ತು. ಮೊದಲನೋಟ ವಿಶೇಷವಾಗಿ ಕೃತಿಯ ವಿವರಗಳನ್ನು ಸಂಗ್ರಹವಾಗಿ ಕೆಲವೇ ಸಾಲುಗಳಲ್ಲಿ ಹೇಳಲಾಗಿರುತ್ತದೆ. ಇನ್ನೂ ಕೆಲವು ಪತ್ರಿಕೆಗಳಲ್ಲಿ ಮೊದಲನೋಟ ಎಂಬ ಅಂಕಣದಲ್ಲಿ ವಿಮರ್ಶಕರ (ಕೃತಿ ವಿಮರ್ಶಕರ) ಹೆಸರುಗಳು ಇರುವುದಿಲ್ಲ. ಈ ಮೊದಲ ನೋಟದ ಮುಖ್ಯ ಉದ್ದೇಶ ವಿಶ್ಲೇಷಣೆಗಿಂತ 'ಈ ಕೃತಿ' ಹೊರಬಂದಿದೆ ಎಂಬುದನ್ನು ತಿಳಿಸುವುದಾಗಿರುತ್ತದೆ. ಆದುದರಿಂದ ಇಂಥ ಕಡೆಯಲ್ಲೆಲ್ಲ ತಾತ್ವಿಕ ವಿಶ್ಲೇಷಣೆಯ ಸಾಧ್ಯತೆ ತುಂಬಾ ಕಡಿಮೆ. ಆದರೆ ಸಾಹಿತ್ಯ ವಿಮರ್ಶೆ ಒಂದೇ ಓದಿನಿಂದ ಹುಟ್ಟುವಂತಹದ್ದಲ್ಲ. ಅದಕ್ಕೆ ಹಲವಾರು ಓದುಗಳ ಹಿನ್ನೆಲೆಯಿರುತ್ತದೆ. ಅಷ್ಟೇ ಅಲ್ಲದೆ ಇತರ ಕೃತಿಗಳ ಬಗೆಗೆ ಅರಿವಿರಬೇಕಾಗಿರುತ್ತದೆ. ಕೃತಿಯ, ಸಮಗ್ರ ಅಧ್ಯಯನ, ವಿಶ್ಲೇಷಣೆಗೆ ಒಳಪಡಿಸಲು ವಿಮರ್ಶಕರು ಯತ್ನಿಸುತ್ತಾರೆ. ಇದಕ್ಕೆ ವಿಮರ್ಶಕರ ಓದಿನ ಹಿನ್ನೆಲೆಯು ಕಾರಣವಾಗಿರುತ್ತದೆ. ಈ ಕಾರಣದಿಂದ ಸಾಹಿತ್ಯ ವಿಮರ್ಶೆಗೆ ಹಲವು ಓದುಗಳು ನಿಚ್ಚಳವಾಗಿ ಬೇಕಾಗಿರುತ್ತದೆ.

೯. ಪುಸ್ತಕ ವಿಮರ್ಶೆ ಪರಿಚಯಾತ್ಮಕತ / ಪ್ರಚಾರ - ಸಾಹಿತ್ಯ ವಿಮರ್ಶೆ ವಿಸ್ತಾರವಾದ ಆಳವಾದ ಸೈದ್ಧಾಂತಿಕ ಚರ್ಚೆ.

ಹಸ್ತಪ್ರತಿಯಿಂದ ಮುದ್ರಣ ಮಾಧ್ಯಮಕ್ಕೆ ರೂಪಾಂತರ ಹೊಂದಿದ ಬರಹ ಹಲವು ಜನರಿಗೆ ತಲುಪಬೇಕೆಂಬ ಮಹದಾಸೆಯಿಂದ ಮುದ್ರಣ ಮಾಧ್ಯಮಕ್ಕೆ ಹೆಚ್ಚು ಒತ್ತು ಬೀಳುತ್ತಿದೆ. ಈ ಕಾರಣದಿಂದ ಕೃತಿ ಪ್ರಕಟವಾದಾಗ ಲೇಖಕರಿಗೆ ತನ್ನ ಕೃತಿ ಓದುಗರ ಗಮನಕ್ಕೆ ಬರಬೇಕೆಂಬ ಆಸೆಯಿಂದ ಅವರು ಮಾಧ್ಯಮಗಳಿಗೆ ಪ್ರಚಾರಕ್ಕಾಗಿ ಕಳುಹಿಸುತ್ತಾರೆ. ಅಲ್ಲಿ ಆ ಕೃತಿಯ ಪರಿಚಯವನ್ನು ಪುಸ್ತಕ ವಿಮರ್ಶಕರಿಂದ

ಮಾಡಿಸುತ್ತಾರೆ. ಹೀಗೆ ಪರಿಚಯ ಮಾಡಿಸುವ ನಿಟ್ಟಿನಲ್ಲಿ ಪ್ರಚಾರದ ಅಂಶವು ಅಡಗಿರುತ್ತದೆ. ಏಕೆಂದರೆ ಸಾಹಿತ್ಯವೆಂಬುದು ವ್ಯಾಪಾರೀಕರಣವಾಗಿ ರೂಪಗೊಂಡು 'ಪುಸ್ತಕೋದ್ಯಮ'ದ ರೂಪ ತಾಳಿದೆ. ಈ ಕಾರಣದಿಂದ ಪುಸ್ತಕ ವಿಮರ್ಶೆಯಲ್ಲಿ ಕೃತಿಯ ಪರಿಚಯದ ರೂಪವಾಗಿ ಕಂಡರೂ ಅದರ ಹಿಂದೆ ಪ್ರಚಾರದ ಉದ್ದೇಶವು ಅಡಗಿರುತ್ತದೆ.

ಪ್ರಬುದ್ಧ ಕರ್ನಾಟಕದಲ್ಲಿ ಪ್ರಾರಂಭದಲ್ಲಿ ಬರುತ್ತಿದ್ದ ಪುಸ್ತಕ ವಿಮರ್ಶೆಗಳು ಹೆಚ್ಚಾಗಿ ಪರಿಚಯದ ಅಂಶಗಳನ್ನು ಗಮನದಲ್ಲಿರಿಸಿಕೊಂಡು ಪ್ರಕಟವಾಗುತ್ತಿದ್ದುದನ್ನು ಕಾಣಬಹುದು.

'ಪ್ರೇಮಾಹುತಿ' ಲೇ: ಶ್ರೀಮಾನ್ ಟಿ.ವಿ. ರಾವ್, (ವಿಮರ್ಶಕರು - ಡಿ. ಎಲ್. ಎನ್.) *ಪ್ರಣಯದ ಸ್ವರೂಪವನ್ನು ಈ ಕಾದಂಬರಿ ತಿಳಿಸುತ್ತದೆ. ಕಮಲೆ ವಾಸುದೇವ, ಮದನ ಮೋಹನರಾಯ- ಇವರು ಮುಖ್ಯಪಾತ್ರಗಳು. ಕಮಲೆ ಮದನ ಮೋಹನನ ವಿವಾಹಿತ ಪತ್ನಿ, ವಾಸುದೇವನ ಪ್ರಣಯಿನಿ ತನ್ನ ದೇಹವನ್ನು ಪತಿಗೆ ಅರ್ಪಣಮಾಡಿ ಆತ್ಮವನ್ನು ವಾಸುದೇವನಿಗೆ ನಿವೇದಿಸುತ್ತಾಳೆ. ನಿರ್ಮಲವಾದ ಪ್ರತಿಫಲಾಪೇಕ್ಷೆಯಿಲ್ಲದ ಪ್ರಣಯಾಗ್ನಿಯಲ್ಲಿ ಕಮಲೆ ವಾಸುದೇವರ ಆತ್ಮಗಳು ನೊಂದು ನಲುಗಿ ಒಂದಾದುದನ್ನು ಜಾಣ್ಮೆಯಿಂದ ಲೇಖಕರು ವರ್ಣಿಸುತ್ತಾರೆ. ಒಂದು ಬಗೆಯ ಉದಾತ್ತ ಆವರಣ ಕಾದಂಬರಿಯನ್ನು ಕವಿದುಕೊಂಡಿದೆ. ಲೇಖಕರಲ್ಲಿ ಹೃದಯದ ಗೂಢ ಭಾವಗಳನ್ನು ತಿಳಿಯುವ ಬಗೆಗಣ್ಣಿದೆ. ಅಲ್ಲಲ್ಲಿ ಬರುವ ಪ್ರಕೃತಿ ವರ್ಣನೆಗಳು ಪ್ರಣಯದ ಆವರಣಕ್ಕೆ ಹೊಂದಿಕೊಂಡಿವೆ. ಆದರೆ ಕೆಲವೆಡೆಗಳಲ್ಲಿ ವರ್ಣನೆಯೂ ಪಾತ್ರಗಳ ಮನೋಧರ್ಮದ ವಿಭಜನೆಯೂ ಕೊಂಚ ಹೆಚ್ಚಾಗಿರುವಂತೆ ಕಂಡುಬಂದು ಬೇಸರ ಹುಟ್ಟಿಸುವ ಹಾಗಿದೆ. ಪಾತ್ರಗಳ ಕಾರ್ಯದಿಂದಲೂ ಆಡುವ ಮಾತುಗಳಿಂದಲೂ ಅವರ ಸ್ವಭಾವವನ್ನು ನಿರೂಪಿಸುವುದು. ಇಂತಹ ಕೆಲವು ಚಾತುರ್ಯದಿಂದ ಕಾದಂಬರಿಕಾರರು ಹೆಚ್ಚು ಮೆಚ್ಚಿಗೆಯನ್ನು ಪಡೆಯಬಹುದು.*[೧೦]

ಈ ಮೇಲಿನ ಉಲ್ಲೇಖವು ಇದು ಪುಸ್ತಕ ವಿಮರ್ಶೆಯ ರೂಪದಲ್ಲಿರುವ ಅತಿ ಸಣ್ಣ ಪ್ರತಿಕ್ರಿಯೆಯಾಗಿದೆ. ಇಲ್ಲಿನ ಪುಸ್ತಕ ವಿಮರ್ಶೆಯ ಸ್ವರೂಪದಲ್ಲಿ ಕಾದಂಬರಿಯನ್ನು ಮುಖ್ಯಾಂಶದ ರೀತಿಯಲ್ಲಿ ಕಟ್ಟಿಕೊಡಲಾಗಿದೆ. ಹಾಗಾಗಿ ಈ ಪುಸ್ತಕ ವಿಮರ್ಶೆ ಗಾತ್ರದಲ್ಲಿ ತುಂಬಾ ಸರಳವಾಗಿದೆ. ಇದು ಕೃತಿಯ ಒಳವಿವರಗಳನ್ನು ಕುತೂಹಲದಾಯಕವಾಗಿ ಹೇಳುತ್ತಾ, ಏಕಕಾಲದಲ್ಲಿ ಪರಿಚಯ ಮಾಡುವ ಮತ್ತು ಓದುಗರಿಗೆ ಕೊಳ್ಳುವ ಪ್ರೇರಣೆಯನ್ನು ಮಾಡುತ್ತದೆ. ಈ ಪುಸ್ತಕ ವಿಮರ್ಶೆಯಲ್ಲಿ ಕಂಡುಬರುವ 'ಜಾಣ್ಮೆ', 'ಉದಾತ್ತ', 'ಆವರಣ' ಪದಗಳು ಈ ಪುಸ್ತಕ ವಿಮರ್ಶೆ ಬಂದಂಥ ಕಾಲಘಟ್ಟದ ಮನೋಧರ್ಮವನ್ನು ತಿಳಿಸುತ್ತವೆ. ತುಂಬಾ ರಸರೂಪಿಯಾಗಿ ಹೇಳುವ ಬಗೆಯನ್ನು ಇದರಲ್ಲಿ ಕಾಣಬಹುದು. 'ಹೃದಯದ ಗೂಢ ಭಾವಗಳನ್ನು ತಿಳಿಯುವ ಬಗೆಗಣ್ಣಿದೆ' ಎಂದು ಉಲ್ಲೇಖಿಸುವುದು ಲೇಖಕರನ್ನು ಉದಾತ್ತೀಕರಿಸುವ ಆ ಕಾಲದ ಮನೋಧರ್ಮವು ಎದ್ದು ಕಾಣುತ್ತದೆ. ಅತಿ ನವಿರಾಗಿ ಪುಸ್ತಕ ವಿಮರ್ಶೆಯನ್ನು ಮಾಡಲಾಗಿದೆ. ಪುಸ್ತಕ ವಿಮರ್ಶೆಯ ಕೊನೆಯಲ್ಲಿ ಒಂದು ಪ್ರೀತಿಯ ಆದೇಶವನ್ನು ಕೊಡಲಾಗಿದೆ. ಇವು ಮಿತವಾದರೆ ಕಾದಂಬರಿ ಹೆಚ್ಚು ಮೆಚ್ಚಿಕೆಯನ್ನು ಪಡೆಯಬಹುದು ಎಂಬಲ್ಲಿ ಆತ್ಮೀಯ ನಿಲುವನ್ನು ಕಾಣಬಹುದು. ಇಂತಹ ನಿಲುವುಗಳು ಏಕಾಗುತ್ತವೆ? ಎಂಬುದನ್ನು ಆಲೋಚಿಸಿದಾಗ ಆ ಕಾಲಘಟ್ಟದಲ್ಲಿ ಇದ್ದಂಥ ಸಾಂಸ್ಕೃತಿಕ ತುಡಿತ ಹೊಸ ಸಾಹಿತ್ಯಕ್ಕೆ ತೆರೆದುಕೊಳ್ಳುತಿದ್ದ ಹೊಸ ಪೀಳಿಗೆ

ಮತ್ತು ಅದನ್ನು ಬೆಳೆಸಬೇಕು ಎಂದು ಸಾಹಿತ್ಯದ ಬಗೆಗಿದ್ದ ಕಾಳಜಿ ಇವುಗಳಿಂದ ಪುಸ್ತಕ ವಿಮರ್ಶೆಗಳಲ್ಲಿ ದೋಷಗಳಿಗಿಂತ ಗುಣಗಳ ವಿಶ್ಲೇಷಣೆಯಿರುತ್ತಿತ್ತು. ಈ ರೀತಿಯ ಸರಳವಾದ ಕೃತಿ ಪರಿಚಯದಿಂದ ಹೊಸದಾಗಿ ಬರೆಯುವವರಿಗೆ ಪ್ರೇರೇಪಿಸುವ ಜೊತೆಗೆ ಎಲ್ಲರಿಗೂ ಸರಳವಾಗಿ ಅರ್ಥಮಾಡಿಸುವ ಜವಾಬ್ದಾರಿಯನ್ನು ಪುಸ್ತಕ ವಿಮರ್ಶಕರು ಹೊಂದಿದ್ದರು. ಅಲ್ಲದೆ ಪುಸ್ತಕ ವಿಮರ್ಶಕರು ಇದರ ಜೊತೆಗೆ ಇಲ್ಲಿನ ಇನ್ನೊಂದು ಮುಖ್ಯ ಆಶಯ ಕೃತಿಯನ್ನು ಕೊಳ್ಳಲು ಓದುಗರನ್ನು ಪ್ರೇರೇಪಿಸುವ, ಮೆಚ್ಚಿಗೆ ಪದಗಳು ಹೆಚ್ಚಾಗಿ ಓದುಗರಿಗೆ ಆಸಕ್ತಿ ಮೂಡಿಸುವ ಕೆಲಸ ಮಾಡುವುದನ್ನು ಕಾಣಬಹುದು.

ಪುಸ್ತಕ ವಿಮರ್ಶೆಯ ಇನ್ನೊಂದು ಸ್ಥಿತಿ ಪ್ರಚಾರ ಕೆಲಸ. ಈ ಶತಮಾನದ ಪ್ರಾರಂಭದಲ್ಲಿ ವ್ಯಾಪಾರವಿರದಿದ್ದರೂ ಸಾಹಿತ್ಯದ ಪ್ರಚಾರದ ಕಾರ್ಯ ಅತ್ಯಂತ ಅವಶ್ಯಕತೆಯಿತ್ತು. ಹಾಗಾಗಿ ಪುಸ್ತಕ ವಿವರಗಳನ್ನು ಸರಳವಾಗಿ ಹೇಳಿ ಓದುಗರನ್ನು ಕೃತಿಯ ಕಡೆ ಮತ್ತು ಸಾಹಿತ್ಯದ ಕಡೆ ಸೆಳೆಯುವ ಕೆಲಸ ಸುಪ್ತವಾಗಿ ನಡೆಯುತ್ತಿತ್ತು. ಆದರೆ ಇತ್ತೀಚಿನ ದಿನಗಳಲ್ಲಿ ಪ್ರಕಾಶಕರು ವ್ಯಾಪಾರಿ ಮನೋಧರ್ಮ, ಪರಿಚಯ ಮತ್ತು ಪ್ರಚಾರ ಎರಡು ಅಂಶಗಳನ್ನು ಪುಸ್ತಕ ವಿಮರ್ಶೆಯಲ್ಲಿ ಅಳವಡಿಸಿಕೊಳ್ಳಲು ಒತ್ತಾಯಿಸುತ್ತಿದೆ. ಇದರಿಂದ ಪ್ರೇರಿತವಾದ ಪುಸ್ತಕ ವಿಮರ್ಶೆಗಳ ಪುಸ್ತಕ ವ್ಯಾಪಾರೀಕರಣವನ್ನು ಗಮನದಲ್ಲಿಟ್ಟುಕೊಂಡು ಕೃತಿ ಪರಿಚಯದ ಜೊತೆ ಪ್ರಚಾರದ ಕಾರ್ಯವನ್ನು ಮಾಡಿಸುತ್ತಿದೆ.

ಆದರೆ ಇಂತಹ ಅಂಶಗಳು ಎಲ್ಲ ಪುಸ್ತಕ ವಿಮರ್ಶೆಗಳಲ್ಲಿ ಕಂಡುಬರುವುದಿಲ್ಲ. ಕೆಲವೊಮ್ಮೆಯಷ್ಟೇ ಪ್ರಚಾರದ ಅಂಶವನ್ನು ಅಳವಡಿಸಿಕೊಂಡಿರುತ್ತವೆ. ಆದರೆ ಸಾಹಿತ್ಯ ವಿಮರ್ಶೆಗೆ ಈ ಯಾವುದೇ ಉದ್ದೇಶವಿರುವುದಿಲ್ಲ. ಸಾಹಿತ್ಯ ವಿಮರ್ಶೆಯ ಆಶಯ ಪುಸ್ತಕ ವಿಮರ್ಶೆಗಿಂತ ವ್ಯಾಪಕವಾದುದು. ಕೃತಿ ಕುರಿತು ಪರಿಚಯ, ಪ್ರಚಾರ ಇದಾವುದೇ ಆಶಯಗಳು ಇದರಲ್ಲಿ ಇರುವುದಿಲ್ಲ. ಬದಲಾಗಿ ಆ ಕೃತಿಯ ಬಗೆಗೆ ವಿಸ್ತಾರವಾದ, ಆಳವಾದ ಚರ್ಚೆಯಿರುತ್ತದೆ. ಈ ಮೂಲಕವೇ ವಿಮರ್ಶೆ ಬೆಳೆಯುತ್ತಾ ಹೋಗುತ್ತದೆ. ಜೊತೆಗೆ ಕೃತಿಯ ಆಳ ವಿವರಗಳನ್ನು ಒಳಚಿಂತನೆಗಳನ್ನು ಅನಾವರಣ ಮಾಡುತ್ತಾ ಸಾಗುತ್ತದೆ. ಸೈದ್ಧಾಂತಿಕ ವಾಗ್ವಾದಕ್ಕೆ ವೇದಿಕೆಯಾಗಿ ಮುಂದಿನ ಚರ್ಚೆಗೆ ಅನುವು ಮಾಡಿಕೊಡುವ ಕೆಲಸವನ್ನು ಸಾಹಿತ್ಯ ವಿಮರ್ಶೆ ಮಾಡುತ್ತದೆ.

ಈ. ಪುಸ್ತಕ ವಿಮರ್ಶೆಗೆ ಪತ್ರಿಕೆಯ ಮಾಧ್ಯಮ ಅನಿವಾರ್ಯ- ಸಾಹಿತ್ಯ ವಿಮರ್ಶೆಗೆ ಪತ್ರಿಕೆ ಅನಿವಾರ್ಯವಲ್ಲ.

ಪುಸ್ತಕ ವಿಮರ್ಶೆ ರೂಪುಗೊಳ್ಳುವುದು ಕೃತಿಯ ಮೊದಲ ಓದಿನಿಂದ ಹಾಗೆಯೇ ಅದು ಇತರರಿಗೆ ಸಂವಹನಗೊಳ್ಳಲು ಮಾಧ್ಯಮ ಅನಿವಾರ್ಯವಾಗಿರಬೇಕು. ಪತ್ರಿಕೆಗಳೇ ಈ ರೀತಿಯ ಕೆಲಸವನ್ನು ಹೆಚ್ಚು ಮಾಡುತ್ತಿವೆ. ಕೆಲವೊಮ್ಮೆ ಪ್ರಾಸಂಗಿಕವಾಗಿ ದೂರದರ್ಶನ, ಆಕಾಶವಾಣಿಗಳಲ್ಲಿ ಕೃತಿ ಕುರಿತು ಪರಿಚಯ ಬರಬಹುದು. ರಾಜೇಂದ್ರ ಚನ್ನಿಯವರ 'ಅಧ್ಯಯನ' ವಿಮರ್ಶಾ ಪುಸ್ತಕದ [illegible] ಮೊದಲು ಆಕಾಶವಾಣಿಯಲ್ಲಿ ಪ್ರಸಾರವಾಯಿತು. ಆನಂತರ ಅದೇ ಲೇಖನ ಫೆಬ್ರವರಿ -

ಮಾರ್ಚ್ ೧೯೯೦ (೨೧೦, ೨೧೧, ೨೧೨) ರ ಸಂಕ್ರಮಣದಲ್ಲಿ ಬಿ. ಗಣಪತಿಯವರು ಪ್ರಕಟಿಸಿದರು. ಅದಕ್ಕೂ ಮುನ್ನ ಸಂವಾದ (೯ನೇ ಸಂಚಿಕೆ ಮೇ-ಜೂನ್ ೧೯೮೮)ರಲ್ಲಿ ಸಿ.ಎನ್.ರಾಮಚಂದ್ರನ್ ಅವರು ಬರಹದ ಲೇಖನದಲ್ಲಿ (ಪು. ೬೨) ಪರಿಚಯಿಸಿದ್ದರು. ಪತ್ರಿಕೇತರ ಮಾಧ್ಯಮಗಳಲ್ಲಿ ಪ್ರಾಸಂಗಿಕವಾಗಿ ಪುಸ್ತಕ ಪರಿಚಯ ಕಂಡು ಬಂದರೆ, ಪತ್ರಿಕೆಗಳಲ್ಲಿ 'ಪುಸ್ತಕ ಪರಿಚಯ / ವಿಮರ್ಶೆ' ಒಂದು ಖಾಯಂ ಅಂಕಣವಾಗಿಯೇ ಪ್ರಕಟಗೊಳ್ಳುತ್ತಿದೆ. ಪತ್ರಿಕೆ ಒಂದು ಜನಸಂಪರ್ಕ ಮಾಧ್ಯಮವಾಗಿರುವುದರಿಂದ ಅದರಲ್ಲಿ ಪ್ರಕಟಗೊಳ್ಳುವ ವಿಷಯಗಳು ನೇರವಾಗಿ ಜನರಿಗೆ ತಲುಪುತ್ತವೆ. ಈ ಕಾರಣದಿಂದ ಕೃತಿ ಕುರಿತ ಪರಿಚಯ ಪ್ರಕಟವಾಗುವುದಕ್ಕೆ ಲೇಖಕರಿಗೆ ಮತ್ತು ಪುಸ್ತಕ ವಿಮರ್ಶಕರಿಗೆ ಪತ್ರಿಕೆ ತುಂಬಾ ಅನಿವಾರ್ಯವಾದ ಮಾಧ್ಯಮವಾಗಿ ರೂಪುಗೊಂಡಿದೆ. ಆದರೆ ಸಾಹಿತ್ಯ ವಿಮರ್ಶೆಯೆಂಬುದು ಒಂದೇ ಸನ್ನಿವೇಶದಲ್ಲಿ, ಒಂದೇ ಹಿನ್ನೆಲೆಯಲ್ಲಿ ರೂಪುಗೊಳ್ಳುವುದಿಲ್ಲ. ಹಲವಾರು ಪೂರಕವಾದ ವಾತಾವರಣಗಳು ವಿಮರ್ಶೆ ಸೃಷ್ಟಿಯಾಗುವುದರಲ್ಲಿ ಸಹಕಾರಿಯಾಗುತ್ತವೆ. ಕೆಲವು ವಿಮರ್ಶೆಗಳು ವಿಚಾರಸಂಕಿರಣಗಳಲ್ಲಿ ಮಂಡಿತವಾಗಿರುತ್ತವೆ. ಇನ್ನು ಕೆಲವೊಮ್ಮೆ ಸಂಭಾವನಾ ಗ್ರಂಥ, ಅಭಿನಂದನ ಗ್ರಂಥಗಳಿಗೆ ಬರೆದ ಲೇಖನಗಳಾಗಿರುತ್ತವೆ. ಇವೆಲ್ಲವುಗಳ ಒಟ್ಟು ಸಮೂಹ ವಿಮರ್ಶೆಯಾಗುತ್ತವೆ. ಕೆಲವೊಮ್ಮೆಯಷ್ಟೇ ಪತ್ರಿಕೆಯಲ್ಲಿ ವಿಮರ್ಶೆ ಪ್ರಕಟವಾದರೂ ಅದಕ್ಕೆ ಪತ್ರಿಕೆ ಅನಿವಾರ್ಯವೇನಲ್ಲ. ಬಂದಿರುವ ವಿಮರ್ಶಾ ಸಂಕಲನಗಳನ್ನು ಗಮನಿಸಿದರೆ ಅಲ್ಲಿನ ಲೇಖನಗಳೆಲ್ಲ ಯಾವುದೋ ಸಂಕಿರಣಗಳಲ್ಲಿ ಮಂಡಿತವಾದವುಗಳು ಇಲ್ಲವೇ ಇನ್ಯಾವುದೋ ಒತ್ತಡದಿಂದ ಬರೆದಂಥ ಲೇಖನಗಳಾಗಿರುತ್ತವೆ. ಆದರೂ ವಿಮರ್ಶೆಯ ತಾತ್ವಿಕ ಚರ್ಚೆ ಆ ಲೇಖನಗಳ ಒಟ್ಟಾರೆ ಇಂಗಿತವಾಗಿರುತ್ತದೆ.

ಉ. ಪುಸ್ತಕ ವಿಮರ್ಶೆಗಳು ಕಿರು ಲೇಖನದ ರೂಪದಲ್ಲಿರುತ್ತದೆ. - ಸಾಹಿತ್ಯ ವಿಮರ್ಶೆಗೆ ನಿರ್ದಿಷ್ಟ ಗಾತ್ರವೆಂಬುದು ಇರುವುದಿಲ್ಲ.

ಪುಸ್ತಕ ವಿಮರ್ಶೆಗಳು ಮೂಲಭೂತವಾಗಿ ಕೃತಿ ಪರಿಚಯದ ಉದ್ದೇಶವುಳ್ಳದ್ದಾಗಿರುತ್ತವೆ. ಇವುಗಳು ಕೃತಿಯ ವಿವರಗಳನ್ನಷ್ಟೇ ಹೇಳುವುದರಿಂದ ಅವುಗಳ ವಿಸ್ತಾರ ಕಿರು ಲೇಖನದ ರೂಪವಾಗಿರುತ್ತದೆ. ಅಂತಹ ಮಾದರಿಗಳೇ ಪುಸ್ತಕ ವಿಮರ್ಶೆಯ ದೇಹಗಳಾಗಿವೆ. ಒಂದು ಮಾದರಿ.

ಆತ್ಮೀಯ ಕವನಗಳು - ಅಸಲೀ ಅನುಭವಗಳು[೧೧]

ಅರವಿಂದ ಮಾಲಗತ್ತಿಯವರ 'ಮೂಕನಿಗೆ ಬಾಯಿಬಂದಾಗ' ಕವನ ಸಂಕಲನವನ್ನು ಡಾ. ಕಾಳೇಗೌಡ ನಾಗವಾರರು ವಿಮರ್ಶಿಸುತ್ತಾ *ಕನ್ನಡ ಸಾಹಿತ್ಯದ ಎಪ್ಪತ್ತರ ದಶಕದ ವಿಧ್ಯಮಾನಗಳನ್ನು ಗಮನಿಸಿ ಆದರಿಂದ ಹೇರಳ ಸ್ಫೂರ್ತಿ ಪಡೆದಿರುವ ದಲಿತ ಯುವ ಕವಿ ಅರವಿಂದ ಮಾಲಗತ್ತಿ ತಮ್ಮ ಚೊಚ್ಚಲ ಸಂಕಲನವಾದ 'ಮೂಕನಿಗೆ ಬಾಯಿಬಂದಾಗ' ಕೃತಿಯ ಮೂಲಕ ದಲಿತ ಜನಾಂಗದ ಅಸಲೀ ಅನುಭವಗಳನ್ನು ಕಾವ್ಯವಾಗಿಸುವ ಶ್ರಮ ಪ್ರಯತ್ನಗಳಲ್ಲಿ ತೊಡಗಿದ್ದಾರೆ. ಸಾಂಪ್ರದಾಯಕ ಸವರ್ಣೀಯ ವಲಯ ದಿಗ್ಭ್ರಮೆಗೊಳ್ಳುವಂತೆ ಸಿಟ್ಟಿನಿಂದ ಮೈಚಳಿ ಬಿಟ್ಟು*

ಅಸಮಾನತೆ ಮತ್ತು ದೌರ್ಜನ್ಯದ ವಿರುದ್ಧ ಹೊಸ ದನಿ ತೆಗೆದಿದ್ದಾರೆ. ಈ ಹಿಂದೆ ಹೊಲೆ ಮಾದಿಗರ ಹಾಡು ಸಂಕಲನವು ಮೊದಲ ಬಾರಿಗೆ ಸಾಹಿತ್ಯ ಕ್ಷೇತ್ರಕ್ಕೆ ತೆರೆದ, ತೋರಿಸಲ್ಪಟ್ಟ ಆ ಅದೇ ದೀನದಲಿತ ಲೋಕದ ಬದುಕಿನ ವಿವರಗಳ ಉತ್ತರ ಕರ್ನಾಟಕದ ಆವೃತ್ತಿ ಇದಾಗಿದೆ. ಇವತ್ತಿಗೂ ಅಸ್ಪೃಶ್ಯತೆ ತನ್ನೆಲ್ಲ ಕರಾಳ ಮುಖಗಳೊಡನೆ ಜೀವಂತವಾಗಿರುವ ಗ್ರಾಮೀಣ ವಲಯದ ಚಿತ್ರಣ ಮಾಲಗತ್ತಿಯವರ ಕವನಗಳಲ್ಲಿ ದಟ್ಟವಾಗಿ ಮೂಡಿ ಬಂದಿದೆ. ಇಲ್ಲಿನ ಎಷ್ಟೋ ವಿವರಗಳು ವಾಸ್ತವವಾಗಿ ಕಥಾಸಾಹಿತ್ಯದ ಚೌಕಟ್ಟಿನಲ್ಲಿ ದಾಖಲುಗೊಳ್ಳಬೇಕಿತ್ತೇನೋ ಅಂತ ನಡುನಡುವೆ ಅನ್ನಿಸತೊಡಗುತ್ತದೆ. ಅಲ್ಲಲ್ಲಿ ನಿಸ್ಸಹಾಯಕ. ರೊಚ್ಚು ಮುಂದಾಗಿ ಮಾತುಗಾರಿಕೆಯ ಗದ್ಯ ಅವತರಿಸಿ, ಕಾವ್ಯಾಂಶ ಗೌಣಗೊಳ್ಳುತ್ತಾ ನಡೆದಿರುವುದು ಉಂಟು. ದಲಿತರ ಬಾಳಿಗೆ ಹಿಡಿದಿರುವ ನಿರಂತರ ಗ್ರಹಣದ ಸ್ಥಿತಿಯನ್ನು ಅರಿತಿರುವ ಸರಸ್ವತಿಯನ್ನು ಕುರಿತು

ರನ್ನ ನಿನ್ನ ಬಾಂಡಾರದ ಮುದ್ರೆನ್ ವಡೆದ
ಆದರೆ ನಾನು
ದುಶ್ಶಾಸನ ಸೀರೆ ಸೆಳೆದಂಗೆ ನಿನ್ನ ಸೀರೆ ಸೆಳಿತೀನಿ
ಮಾನ ಕಳಿಯಾಕಲ್ಲ
ಮುಚಗೊಳ್ಳಕ

ಎಂದು ಹೇಳಿ ನೋವಿನಾಳದೆದೆಗೆ ಚಲ್ಲುತ್ತಾರೆ. ಹೋಳಿ ಹುಣ್ಣಿಮೆಯ ಓಕುಳಿ ಹಬ್ಬದಲ್ಲಿ ಊರ ದಣಿಗಳು ದಲಿತ ಯುವತಿಯರ ಮೇಲೆ ಬಣ್ಣದ ನೀರು ಚೆಲ್ಲಿ

ಮಾರಿಗಿ ಹೊಡ್ದ, ಮೈತೊಯ್ಸಿ
ಮಲಿ ದಡ ನೋಡುತಾರ

ಇಂಥ ಶೋಷಕ ಸಂಸ್ಕೃತಿ ಸೂಕ್ಷ್ಮಗಳು ಪ್ರತಿಕ್ಷಣವು ಕಣ್ಣೆದರು ನಾಟ್ಯವಾಡುತ್ತಿರುತ್ತವೆ. ಆಳುವ ವರ್ಗ ಮತ್ತು ಅಧಿಕಾರಶಾಹಿಯ ಹೊಸ ನಾಗರೀಕತೆಯ ನೆರವಿನಿಂದ ದಲಿತರ ಸುಲಿಗೆಯ ದಿಕ್ಕಿನಲ್ಲಿ ತೀವ್ರ ಪೈಪೋಟಿಗೆ ನಿಂತಿರುವುದು ಈ ಕವಿಗೆ ತೀಕ್ಷ್ಣವಾಗಿ ಗೋಚರಿಸಿದೆ.

ಬರ್ತಾವು, ಬರ್ತಾವು
ನಾವು ಹೊಲ್ದ ಕಾಲ್ಮರಿ
ನಮ್ಮ ಕೇರ್‍ಯಾಕ ಬರ್ತಾವು
ಬೆಳ್ಳಿ ಚುಕ್ಕಿ ಜೋಡಿ
ಮಟಾ ಮಾಯಾಕ್ಕಾವು.

ಎಂಬ ಸುಂದರ ಸಾಲುಗಳಲ್ಲಿ ಆರಂಭವಾಗುವ 'ಜೋಗತಿ ಕಲ್ಲು' ಎಂಬ ಹಾಡು ಸಹ ಅದೇ ಯಜಮಾನಿಕೆಯ ಇತರ ಮಗ್ಗಲುಗಳನ್ನು ಕೇಳುಗರ ಕರುಳಿರಿಯುವಂತೆ ಚಿತ್ರಿಸುತ್ತದೆ. 'ಒಂದು ದನಿ','ಓಕುಳಿ', 'ನೆರಳು ಒಡ್ಲ ಸಂಕಟ' ಮುಂತಾದವು ಇದೇ ಜಾಡನ್ನು ಅನುಸರಿಸಿರುವ ಇತರ ಉತ್ತಮ ಕವನಗಳು.

ಈ ಮೇಲಿನ ಪುಸ್ತಕ ವಿಮರ್ಶೆಯಲ್ಲಿ ಕೃತಿಗೆ ಸಂಬಂಧಿಸಿದ ವಿವರಗಳನ್ನು ಅತಿ ಸಂಕ್ಷಿಪ್ತವಾಗಿ ಕೊಡಲಾಗಿದೆ. ಕೃತಿ ವಿಮರ್ಶಕರು ಕೃತಿ ಬಂದ ಪರಿಸರದ ಹಿನ್ನೆಲೆಯನ್ನು ಹೇಳುತ್ತಾ ನೇರವಾಗಿ ಕೃತಿಯ ಒಳಗಿನ ಕವಿತೆಗಳನ್ನು ಉಲ್ಲೇಖಿಸುತ್ತಾರೆ. ಆದರೆ ಆ ಉಲ್ಲೇಖಿತ ಕವಿತೆಗಳ ಅರ್ಥ ವಿಶ್ಲೇಷಣೆಗೆ ತೊಡಗದೆ ಮತ್ತೊಂದು ಕವಿತೆಯನ್ನು ಉಲ್ಲೇಖಿಸುತ್ತಾರೆ. ಇಲ್ಲಿ ಕವಿತೆಯನ್ನು ಕುರಿತು ಹೇಳಬಹುದಾದ

ವಿವರಗಳಿದ್ದರೂ ಪುಸ್ತಕ ವಿಮರ್ಶಕರು ಅದರಿಂದ ಯಾಕೆ ದೂರ ಸರಿದಿದ್ದಾರೆ ಎಂಬ ಪ್ರಶ್ನೆ ಉದ್ಭವಿಸುತ್ತದೆ. ಆದರೆ ಹೀಗೆ ಕೃತಿಯ ಒಳವಿವರಗಳಿಗೆ ವಿಶ್ಲೇಷಣೆಯನ್ನು ಮಾಡುತ್ತಾ ಹೋದರೆ ಅದು ರಿವ್ಯೂನಿಂದ ರೂಪಾಂತರ ಹೊಂದಿ ಸಾಹಿತ್ಯ ವಿಮರ್ಶೆಯಾತೊಡಗುತ್ತದೆ. ಜೊತೆಯಲ್ಲಿ ಇದು ಮೊದಲ ಓದಿನ ಪ್ರತಿಕ್ರಿಯೆ. ಯಾವುದೇ ಚಿಂತನೆಗೆ ಇಳಿಯದೆ ಮೊದಲ ಗ್ರಹಿಕೆಗೆ ಸಿಕ್ಕ ಅಭಿಪ್ರಾಯವಾಗಿದೆ. ಆದರೆ ಈ ಸಂಕಲನದ ಹಿಂದಿನ ಹಿನ್ನೆಲೆಯಲ್ಲಿ ಎಪ್ಪತ್ತರ ದಶಕದ ವಿದ್ಯಮಾನ ಮತ್ತು ಅದರಿಂದ ಪಡೆದ ಸ್ಫೂರ್ತಿಯನ್ನು ಗುರುತಿಸುತ್ತಿದ್ದಾಗ ಎಪ್ಪತ್ತರ ದಶಕದಲ್ಲಿನ ಸಾಂಸ್ಕೃತಿಕ ಬಲಾವಣೆ ಮತ್ತು ಹೋರಾಟ ಇಂಥ ಕೃತಿಗಳಿಗೆ ಪ್ರೇರಣೆಯಾಗಿದೆ. ಆದರೆ ಈ ಕಾವ್ಯವನ್ನು ಅವರು ಕೃತಿಕಾರರ ಸ್ವಾನುಭವ, ಸಾಂಸ್ಥಿಕ ಅನುಭವ ಎಂದು ಗುರುತಿಸದೆ ಅಸಲೀ ಅನುಭವಗಳನ್ನು ಕಾವ್ಯವಾಗಿಸುವಾಗಿನ ಶ್ರಮ ಮತ್ತು ಪ್ರಯತ್ನ ಎದ್ದು ಕಾಣುತ್ತವೆ ಎನ್ನುತ್ತಾರೆ. ಹಾಗಾಗಿ ಇವರ ಈ ಸಂಕಲನದಲ್ಲಿನ ಕವಿತೆಗಳು ಸತತ ಶ್ರಮದಿಂದಲೇ ರೂಪತಾಳಿವೆ ಎಂಬ ನಿಲುವಿಗೆ ವಿಮರ್ಶಕರು ಬರುತ್ತಾರೆ. ಆಗಿನ ಸಾಂಸ್ಕೃತಿಕ ಸಂದರ್ಭದಲ್ಲಿ ದಲಿತ ಬರೆಯುತ್ತಿದ್ದುದು ಒಂದು ರೀತಿಯ ಶ್ರಮವೇ. ಅನುಭವಗಳು ಕೇವಲ ಮೇಲ್ವರ್ಗದವರವು ಮಾತ್ರ ಎಂದು ಗುರುತಿಸುವ ವಾದಕ್ಕೆ ವಿರುದ್ಧವಾಗಿ ಇಂತಹವುಗಳು ಪ್ರತಿವಾದವಾಗಿ ನಿಲ್ಲುತ್ತಿದ್ದವು ಎಂಬ ಸಾಂಸ್ಕೃತಿಕ ವಾಗ್ವಾದವನ್ನು ಹೇಳುತ್ತಿದ್ದಾರೆ. ಆದರೆ ಇವರು ಈ ಸಂಕಲನವನ್ನು ಇನ್ನೊಂದು ಕೃತಿಗೆ ಹೋಲಿಸಿ ಉತ್ತರ ಕರ್ನಾಟಕದ ಆವೃತ್ತಿ ಎಂದು ಗುರುತಿಸುವುದು ಸರಳ ತೀರ್ಮಾನವೆನಿಸುತ್ತದೆ. ಈ ಹೇಳಿಕೆಯ ಹಿಂದೆ ಒಂದು ಕೃತಿಯ ಅನುಕರಣೆಯಿದೆ ಎಂಬ ಗುಮಾನಿಯಿದೆ. ಇಂಥ ಸಂದರ್ಭದಲ್ಲಿ ಪುಸ್ತಕ ವಿಮರ್ಶಕರು ಇನ್ನೊಂದು ಪುಸ್ತಕ ಹೋಲಿಕೆ ನೀಡುವುದರೊಂದಿಗೆ ಪ್ರಸ್ತುತ ಕೃತಿಯನ್ನು ಅಲ್ಲಗಳೆಯಬಹುದು. ಇನ್ನೊಂದು ನೆಲೆಯಲ್ಲಿ ಒಂದು ಪ್ರಾದೇಶಿಕ ದೃಷ್ಟಿಯಲ್ಲಿ ಗುರುತಿಸುವ ಹೊಣೆಗಾರಿಕೆ ಎಂದೆನಿಸುತ್ತದೆ. ಪ್ರಾದೇಶಿಕ ಪ್ರಾಮುಖ್ಯತೆಯನ್ನು ನೀಡುವ ಯತ್ನ ಈ ಬರಹದ ಹಿನ್ನೆಲೆಯಲ್ಲಿದ್ದರೂ ಅದರ ಇನ್ನೊಂದು ಮಗ್ಗುಲು ಮತ್ತೊಂದು ಕೃತಿಯ ನಕಲು ಎಂಬುದರ ಧ್ವನಿಯನ್ನು ಸೂಚಿಸುತ್ತದೆಯೆನಿಸುತ್ತದೆ. ಇವರು ಇಲ್ಲಿ ಮಾಡಿರುವ ಪುಸ್ತಕ ವಿಮರ್ಶೆಯು ಒಂದು ರೀತಿ ಸಾಂಪ್ರದಾಯಕ ಮನಸ್ಥಿತಿಯಿಂದ ಕೂಡಿದೆಯೆನಿಸುತ್ತದೆ. ಕಾವ್ಯ ಸ್ವರೂಪದ ಪ್ರಶ್ನೆಗಳನ್ನಿಟ್ಟುಕೊಂಡು ಈ ಅಸಲೀ ಲಕ್ಷಣಗಳನ್ನು ಪಟ್ಟಿ ಮಾಡಿಕೊಂಡಂತೆ ಕಾಣುತ್ತದೆ. ಅದಕ್ಕಾಗಿ ಈ ಸಂಕಲನದಲ್ಲಿ ಎದುರಾಗುವ ತೊಡರು ಗದ್ಯದ ಅತಿಕ್ರಮ ದಿಂದ ಆಗಿದೆ ಎಂದು ಭಾವಿಸುತ್ತಾರೆ. ಅಂದರೆ ಪದ್ಯ ಪ್ರಕಾರಕ್ಕೆ ಕೆಲವು ಲಕ್ಷಣಗಳಿವೆ. ಗದ್ಯ ಪ್ರಕಾರಕ್ಕೆ ಕೆಲವು ಲಕ್ಷಣಗಳಿವೆ ಎಂಬ ನಿಲುವಿನಲ್ಲಿ ಪುಸ್ತಕ ವಿಮರ್ಶಕರಿದ್ದಾರೆ. ಅದರ ಜೊತೆಯಲ್ಲಿ ಈ ಎರಡು ಪ್ರಕಾರಗಳ ನಡುವಿನ ಕಂದಕವನ್ನು ನಾಶಪಡಿಸಿದ ಸಾಂಸ್ಕೃತಿಕ ಸಂದರ್ಭದಲ್ಲಿ ಇವರು ಪುಸ್ತಕ ವಿಮರ್ಶೆ ಮಾಡುತ್ತಿದ್ದಾರೆ.

ಈ ಕೃತಿ ವಿಮರ್ಶೆ ಕಿರು ಲೇಖನವಾಗಿದ್ದು ಸರಳವಾಗಿಯೇ ಕೃತಿಯ ವಿವರಗಳನ್ನು ಎತ್ತಿ ತೋರಿಸಿದೆ. ಈ ರೀತಿಯ ಕಿರುಲೇಖನಗಳು ಕೆಲವೊಮ್ಮೆ ಮೊದಲ ಓದು, ಮೊದಲ ನೋಟ, ನಾನು ಓದಿದ ಪುಸ್ತಕ, ನಾನು ನೋಡಿದ ಪುಸ್ತಕ, ಗ್ರಂಥಾಂತರಂಗ, ಅವಲೋಕನ, ಪುಸ್ತಕ ಮಾಹಿತಿ

ಮುಂತಾದ ಹೆಸರುಗಳಲ್ಲಿ ಪುಸ್ತಕ ವಿಮರ್ಶೆ ನಡೆಯುತ್ತದೆ. ಇವುಗಳೆಲ್ಲ ಕಿರು ಲೇಖನದ ರೂಪದಲ್ಲಿರುತ್ತವೆ. ಇದಕ್ಕೆ ಪತ್ರಿಕೆ ನಿಗದಿಪಡಿಸಿದ ಸ್ಥಳವೂ ಕಾರಣವಾಗಿರುತ್ತದೆ. ಪುಸ್ತಕ ವಿಮರ್ಶೆಗಳ ರಚನೆಯ ಹಿಂದೆ 'ಸ್ಥಳ ನಿಗದಿ' ಯು ಪುಸ್ತಕ ವಿಮರ್ಶೆಗಳು ದೀರ್ಘವಾಗುವುದನ್ನು ನಿಯಂತ್ರಿಸುತ್ತದೆ. ಕೆಲವೊಮ್ಮೆ 'ಮಯೂರ'ದಂಥ ಪತ್ರಿಕೆಗಳು 'ಸ್ಥಳ ನಿಗದಿ'ಯನ್ನು ಮೀರಿ ಪ್ರಕಟಿಸುವ ಅಪವಾದಗಳು ಇವೆ. ಆದರೆ ಈ ಸಾಧ್ಯತೆ ಇತರ ಪತ್ರಿಕೆಗಳಲ್ಲಿ ತುಂಬಾ ಕಡಿಮೆ. ಸಾಹಿತ್ಯ ವಿಮರ್ಶೆಗೆ ಈ ರೀತಿಯ ನಿಬಂಧನೆ ಇರುವುದಿಲ್ಲ. ಅದು ಕೃತಿ ಕುರಿತು ಆರಂಭವಾಗಿ ಆ ಕೃತಿಯ ಪ್ರಕಾರ, ಪ್ರಕಾರದ ಲೇಖಕರು ಕೃತಿ ಕೊಡುವ ದರ್ಶನ ಮುಂತಾದವುಗಳ ಚರ್ಚೆ ಮಾಡುವುದರಿಂದ 'ವಿಮರ್ಶೆಯ ಗಾತ್ರ ದೊಡ್ಡದಾಗಬಹುದು. ಇಲ್ಲಿ ಗಾತ್ರಕ್ಕಿಂತ ಕೃತಿ ಚರ್ಚೆ ಮುಖ್ಯವಾಗುತ್ತದೆ. ಸ್ಥಳ ಮಿತಿ ಸಾಹಿತ್ಯ ವಿಮರ್ಶೆಯಲ್ಲಿ ಕಂಡು ಬರುವುದಿಲ್ಲ.

ಊ. ಪುಸ್ತಕ ವಿಮರ್ಶೆ ತನ್ನ ಉದ್ದೇಶಿತ ಕೃತಿಯಲ್ಲಿಯೇ ನಿಲ್ಲುತ್ತದೆ - ಆದರೆ ಸಾಹಿತ್ಯ ವಿಮರ್ಶೆ ಕೃತಿಯನ್ನು ಮೀರಿ ಇತರ ವಿವರಗಳ ಮೂಲಕ ಚಿಂತನೆ ಮಾಡುತ್ತದೆ.

ಪುಸ್ತಕ ವಿಮರ್ಶೆಗಾಗಿ ಪತ್ರಿಕೆಗೆ ಕಳುಹಿಸುವ ಲೇಖಕರು ಆಗ ತಾನೇ ಬಿಡುಗಡೆ ಮಾಡಿದ ತಮ್ಮ ಕೃತಿಯನ್ನಷ್ಟೇ ಕಳುಹಿಸುವುದರಿಂದ, ಅಲ್ಲದೆ ಅವರಿಗೆ ಆ ಕೃತಿ ಮಾತ್ರ ಜನರಿಗೆ (ಓದುಗರಿಗೆ) ಪರಿಚಯವಾದರೆ ಸಾಕು ಎಂಬ ನಿಲುವು ಇರುವುದರಿಂದ ಉದ್ದೇಶಿತ ಕೃತಿಯಷ್ಟೇ ವಿಮರ್ಶೆಗೆ ಒಳಗಾಗುತ್ತದೆ. ಇದಲ್ಲದೆ ಪುಸ್ತಕ ವಿಮರ್ಶಕರಿಗೂ ಅವರದೇ ಆದ ಕೆಲವು ಆಯ್ಕೆಗಳಿರುತ್ತವೆ. ಇಲ್ಲವೆ ಪತ್ರಿಕೆಯವರ ಆಯ್ಕೆಗಳಿಗೆ ಬದ್ಧವಾಗಿ ಅವರು ಪುಸ್ತಕ ವಿಮರ್ಶಿಸಬೇಕಾಗುತ್ತದೆ. ಸ್ಥಳ ಮಿತಿಯ ಕಾರಣಗಳಿಂದ ಲೇಖಕರು ಕಳುಹಿಸಿದ ಕೃತಿಯನ್ನು ವಿಮರ್ಶಿಸಲು ತೊಡಗುತ್ತಾರೆ. ಈ ಸಂದರ್ಭದಲ್ಲಿ ಅನಿವಾರ್ಯವಾಗಿ ಪುಸ್ತಕ ವಿಮರ್ಶಕರ ವಸ್ತುವಾಗಿ ಕೇವಲ ಕೃತಿಯೇ ನಿಲ್ಲುತ್ತದೆ. ಅವರ ಕ್ರಿಯೆ ಆ ಕೃತಿಯಲ್ಲಿಯೇ ಕೇಂದ್ರಿಕೃತವಾಗಿ ಕೃತಿಯೇತರ ಚರ್ಚೆಗಳು ನಡೆಯುವುದಿಲ್ಲ. ನಡೆದರೂ ತುಂಬಾ ವಿರಳ. ಕೆಲವು ವಿಮರ್ಶಕರು ಈ ಮಿತಿ ಮೀರಿ ಪುಸ್ತಕ ವಿಮರ್ಶೆ ಮಾಡುತ್ತಾರೆ. ಟಿ.ಪಿ. ಅಶೋಕರ ಪುಸ್ತಕ ವಿಮರ್ಶೆಗಳು ಈ ಮಾದರಿಯವು. ಇವರು ಮಾಡಿರುವ ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೆ, ಕೃತಿ ವಿಮರ್ಶೆ ಕೃತಿಯ ಒಳಗೆ ಸುತ್ತುವುದಿಲ್ಲ, ಕೃತಿ ಲೇಖಕರ ಇತರ ಕೃತಿಗಳನ್ನು ಕುರಿತು ಅವರ ಆಯ್ಕೆ ಲೇಖನದಲ್ಲಿ ಚರ್ಚಿಸುತ್ತಾರೆ. ಈ ರೀತಿಯ ವಿಮರ್ಶೆಗಳಿಗೆ, ಕಾರಣಗಳು ಅವರು ಆಯ್ಕೆ ಮಾಡಿಕೊಳ್ಳುವ ಕೃತಿಯಲ್ಲಿಯೇ ಅಡಗಿರುತ್ತವೆ. ಅವರು ಪುಸ್ತಕ ವಿಮರ್ಶೆಗೆ ಆಯ್ಕೆ ಮಾಡಿಕೊಳ್ಳುವುದು ಪ್ರತಿಷ್ಠಿತರ ಪುಸ್ತಕಗಳನ್ನು. ಈಗಾಗಲೇ ಹೆಸರು ಮಾಡಿರುವ ಕೃತಿಗಳನ್ನು. ಈ ಆಯ್ಕೆ ಅವರ ಪುಸ್ತಕ ವಿಮರ್ಶೆ ಲೇಖಕರ ಇತರ ಕೃತಿಗಳನ್ನು ಕುರಿತು ಚರ್ಚಿಸುವಂತೆ ಮಾಡುತ್ತದೆ. ಬೇರೆ ಲೇಖಕರ ಕೃತಿಗಳನ್ನು ಆಯ್ದುಕೊಳ್ಳುವಾಗ ಸಹಜವಾಗಿಯೇ ಕೇವಲ ಆ ಕೃತಿಯ ಅವರ ಪುಸ್ತಕ ವಿಮರ್ಶೆಯ ಕೇಂದ್ರವಾಗುತ್ತದೆ. ಇದು ಪುಸ್ತಕ ವಿಮರ್ಶಕರ ಭಿನ್ನ ಮನೋಧರ್ಮವನ್ನು ತಿಳಿಸುತ್ತದೆ. ಪುಸ್ತಕ ವಿಮರ್ಶೆ ಉದ್ದೇಶಿತ ಕೃತಿಯನ್ನು ಏಕೆ ಕುರಿತದ್ದಾಗಿರುತ್ತದೆ ಎಂಬುದಕ್ಕೆ ಕಾರಣವೂ ಆಗಿದೆ. ಆದರೆ ಸಾಹಿತ್ಯ

ವಿಮರ್ಶೆಯು ತನ್ನ ಚಿಂತನೆ, ವಿಶ್ಲೇಷಣೆ, ಆಯ್ದು ಕಟ್ಟುವಲ್ಲಿನ ರಚನೆ, ಈ ಸ್ವರೂಪಗಳಲ್ಲಿ ಪುಸ್ತಕ ವಿಮರ್ಶೆಗಿಂತ ಭಿನ್ನವಾಗಿರುತ್ತದೆ. ಸಾಹಿತ್ಯ ವಿಮರ್ಶಕರು ತಮ್ಮ ಮುಂದಿನ ಕೃತಿಯನ್ನಷ್ಟೇ ವಿಶ್ಲೇಷಿಸುವುದಿಲ್ಲ, ಜೊತೆಗೆ ಆ ಲೇಖಕರ ಇತರ ಕೃತಿಗಳ ಮೇಲೂ ಬೆಳಕು ಚೆಲ್ಲುವ ಕೆಲಸವನ್ನು ಮಾಡುತ್ತಾರೆ. ಇದರೊಂದಿಗೆ ಕೃತಿಯ ಒಳನೋಟಗಳನ್ನು ಕುರಿತು ಚರ್ಚಿಸುತ್ತಾರೆ. ಸಾಹಿತ್ಯ ವಿಮರ್ಶೆಯಲ್ಲಿ ಸ್ವಆಯ್ಕೆ ಇರುವುದರಿಂದ ಕೃತಿಯನ್ನು ಹೇಗೆ ಬೇಕಾದರೂ ಚರ್ಚಿಸುವ ಸ್ವಾತಂತ್ರ್ಯ ಸಾಹಿತ್ಯ ವಿಮರ್ಶಕರಿಗೆ ಇರುತ್ತದೆ. ಪರಂಪರೆ, ಸಾಂಸ್ಕೃತಿಕ ಸಂದರ್ಭ ಮುಂತಾದ ದೃಷ್ಟಿಕೋನಗಳಿಂದ ಕೃತಿಯ ವಿವಿಧ ಆಯಾಮಗಳನ್ನು ತೆರೆದು ತೋರಿಸುತ್ತಾರೆ. ಈ ರೀತಿಯ ಅವಕಾಶ ಸಾಹಿತ್ಯ ವಿಮರ್ಶೆ ಬೌದ್ಧಿಕವಾಗಿ ಬೆಳೆಯಲು ನೆರವು ನೀಡುತ್ತದೆ. ಆದರೆ ಪುಸ್ತಕ ವಿಮರ್ಶೆಗೆ ಈ ರೀತಿಯ ಅವಕಾಶಗಳು ಕೂಡಿ ಬರುವುದಿಲ್ಲ.

ಪುಸ್ತಕ ವಿಮರ್ಶೆ ತನ್ನ ಸ್ವರೂಪದಿಂದ ಬೆಳೆದು ಸಾಹಿತ್ಯ ವಿಮರ್ಶೆಗೆ ಪ್ರೇರಣೆಯಾಗುತ್ತದೆ ಮತ್ತು ಅವುಗಳ ನಡುವಿನ ವ್ಯತ್ಯಾಸಗಳನ್ನು ಕಂಡುಕೊಳ್ಳಲು ಒಂದು ಮಾದರಿಯನ್ನಿಟ್ಟುಕೊಂಡು ಚರ್ಚಿಸಬಹುದು.

ಅರವತ್ತರ ದಶಕದಲ್ಲಿ ಅನಂತಮೂರ್ತಿಯವರ ಸಂಸ್ಕಾರ ನವ್ಯ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಸಂದರ್ಭದಲ್ಲಿ ಪ್ರಕಟವಾದ ಕಾದಂಬರಿ. ಇದಕ್ಕೆ 'ಸಂಸ್ಕಾರ ಒಂದು ಪ್ರತಿಕ್ರಿಯೆ' ಎಂಬ ಹೆಸರಿನಲ್ಲಿ ಸಂಕ್ರಮಣ ೧೯ (೧೯೬೭)ರಲ್ಲಿ ಎಂ.ಜಿ. ಕೃಷ್ಣಮೂರ್ತಿಯವರು ವಿಮರ್ಶೆ ಪ್ರಕಟಿಸಿದರು. ಆನಂತರ ಸಂಸ್ಕಾರದ ಕೃತಿಯ ಬಗ್ಗೆ ವಿಮರ್ಶೆಗಳ ಸರಣಿಯೇ ಹರಿದು ಬಂತು.

'ಸಂಸ್ಕಾರ' - ಜಿ.ಎಸ್. ಆಮೂರ ಸಂಕ್ರಮಣ, ೨೮ - ೧೯೬೯

'ಸಂಸ್ಕಾರ ಮತ್ತೆ ಓದಿದಾಗ' - ಎನ್. ನಾಗರಾಜನ್ ಸಾಕ್ಷಿ ೧೧, ೧೯೭೦-೭೧

'ಅನಂತಮೂರ್ತಿಯವರ ಕಥಾ ಸಾಹಿತ್ಯ' - ಜಿ.ಎಚ್. ನಾಯಕ್, ಸಾಕ್ಷಿ ೧೧, ೧೯೭೦-೭೧

'ಅನಂತಮೂರ್ತಿಯವರ ಕಥಾಸಾಹಿತ್ಯ ಪ್ರತಿಕ್ರಿಯೆ' - ರಾಮಚಂದ್ರದೇವ ಸಾಕ್ಷಿ, ೧೨, ೧೯೭೧

'ಗೊಡ್ಡು ಬ್ರಾಹ್ಮಣ್ಯ ಮತ್ತು ಧೂತ ಚಾರ್ವಾಕಮತ' - ಕೆ.ಎನ್. ಭಗವಾನ್ ಸಂಕ್ರಮಣ ೭೩, ೧೯೭೭

ಈ ವಿಮರ್ಶಾ ಸರಣಿಯನ್ನು ಗಮನಿಸಿದರೆ ಒಂದೊಂದು ವಿಮರ್ಶೆಯು ಒಂದೊಂದು ರೀತಿಯಲ್ಲಿ ತನ್ನದೇ ಆದ ಸಾಹಿತ್ಯ ತತ್ವ ಹಾಗೂ ಲೋಕದೃಷ್ಟಿಯಿಂದ ಕೂಡಿರುವುದು ತಿಳಿಯುತ್ತದೆ. ಇವೆಲ್ಲವೂ ಸೇರಿ 'ಸಂಸ್ಕಾರ' ಕೃತಿಯ ಚರ್ಚೆಯನ್ನು ಬೆಳಸಿವೆ.

ಆರಂಭದ ಎಂ.ಜಿ. ಕೃಷ್ಣಮೂರ್ತಿಯವರ ವಿಮರ್ಶೆ ಕೃತಿಯ ಪುಸ್ತಕ ವಿಮರ್ಶೆಯಿಂದ ಪ್ರಾರಂಭವಾಗಿ ಅದರ ಮೂಲಕವೇ ಕೃತಿಯ ಬಗೆಗಿನ ಪ್ರಮುಖ ದೃಷ್ಟಿಕೋನವನ್ನು ಪ್ರತಿಪಾದಿಸುತ್ತದೆ. ನಮ್ಮ ಸಂಸ್ಕೃತಿಯ ತಳಹದಿಗಳಾದ ಮೌಲ್ಯಗಳ ಬಗ್ಗೆ ಮೂಲಭೂತ ಪ್ರಶ್ನೆಗಳನ್ನು ಎತ್ತುವ ಸಂಸ್ಕಾರಕ್ಕೆ ಓದುಗ ಆಭಾರಿಯಾಗಿರಬೇಕು ಎಂಬ ನಿಲುವಿಗೆ ವಿಮರ್ಶೆಯನ್ನು ಬೆಳೆಸುತ್ತಾರೆ. ಇದರ ಜೊತೆಯಲ್ಲಿ ಸಂಸ್ಕಾರವನ್ನು ಕೃತಿಯ ತಂತ್ರ, ವಿನ್ಯಾಸ, ಅರ್ಥವ್ಯಾಪನೆಯನ್ನು ಪ್ರಸ್ತಾಪಿಸುತ್ತಾ ಅದರ ವಿವರ ವಿವರವನ್ನು ಸೂಕ್ಷ್ಮವಾಗಿ ವಿಶ್ಲೇಷಿಸುತ್ತಾರೆ.

ನಂತರ ಬರೆದ ಜಿ.ಎಸ್. ಆಮೂರರು 'ಸಂಸ್ಕಾರ ಕೃತಿಯ ಮತ್ತಷ್ಟು ವಿವರಗಳನ್ನು ವಿವರಿಸುತ್ತಾ ನವ್ಯ ಮಾದರಿಯ ಹಿನ್ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಅವರು ಸಂಸ್ಕಾರ ಮೂಲಭೂತ ಪ್ರಶ್ನೆಗಳನ್ನು ಎತ್ತುತ್ತದೆಯಷ್ಟೇ ಅಲ್ಲದೆ ಅದಕ್ಕೆ ತನ್ನದೇ ಆದ ಉತ್ತರಗಳನ್ನು ಕೂಡ ಕೊಡುತ್ತದೆ. ಸಾಂಪ್ರದಾಯಕ ಮೌಲ್ಯಗಳನ್ನು ತಿರಸ್ಕರಿಸಿ ನವ್ಯ ಮೌಲ್ಯಗಳನ್ನು ಪುರಸ್ಕರಿಸುತ್ತದೆ' ಎಂಬ ನಿಲುವಿಗೆ ಬರುತ್ತಾರೆ.

ಎಸ್. ನಾಗರಾಜ್‌ರವರು ತಮ್ಮ ವಿಮರ್ಶೆಯಲ್ಲಿ ಸಂಸ್ಕಾರದಲ್ಲಿ ಪ್ರಾಣೇಶಚಾರಿ ಪಾತ್ರ ಕೇಂದ್ರ ಪಾತ್ರವೇ ಹೊರತು ಕಾದಂಬರಿಯ ಕೇಂದ್ರ ಪ್ರಜ್ಞೆಯಲ್ಲ ಎಂಬ ಹೊಸ ಚಿಂತನೆಯನ್ನು ಪ್ರತಿಪಾದಿಸುತ್ತಾರೆ.

ಇದರ ಮೂಲಕ ಸಂಸ್ಕಾರದ ಕೇಂದ್ರ ಪಾತ್ರ ಮತ್ತು ಕೇಂದ್ರ ಪ್ರಜ್ಞೆಯಲ್ಲಿನ ವ್ಯತ್ಯಾಸಗಳನ್ನು ಗುರುತಿಸುತ್ತಾ, ಪರಸ್ಪರ ಭಿನ್ನತೆಗಳನ್ನು ವಿವರಿಸಿ ಪ್ರಾಣೇಶಚಾರಿ ಕಾದಂಬರಿಯ ಕೇಂದ್ರಪಾತ್ರವಾಗಿ ಮಾತ್ರ ಉಳಿಯುತ್ತದೆ. ಕೇಂದ್ರ ಪ್ರಜ್ಞೆಯಾಗಿ ಬೆಳೆಯಲಾರದಿದ್ದಕ್ಕೆ ಕಾರಣಗಳನ್ನು ತಮ್ಮ ವಿಮರ್ಶೆಯಲ್ಲಿ ಹುಡುಕಿ ತೋರಿಸುತ್ತಾರೆ.

ಇವು ಅರವತ್ತರ ದಶಕದಲ್ಲಿ ಬಂದಂಥ ವಿಮರ್ಶೆಗಳು. ಆದರೆ ಎಪ್ಪತ್ತರ ದಶಕದಲ್ಲಿ ಬಂದಂಥ ಪ್ರೊ. ಕೆ.ಎಸ್. ಭಗವಾನ್‌ರ ಗೊಡ್ಡು ಬ್ರಾಹ್ಮಣ್ಯ ಮತ್ತು ಧೂತ ಚಾರ್ವಾಕ ಮತ ವಿಮರ್ಶೆ ಮೇಲಿನವುಗಳಿಗಿಂತ ಭಿನ್ನವಾದುದು. ಈ ವಿಮರ್ಶೆ ಸಂಸ್ಕಾರ ಕೃತಿಯಲ್ಲಿನ ಹಲವು ಒಳ ಅರ್ಥಗಳನ್ನು ಶೋಧಿಸುವ ಸೋಲು-ಗೆಲುವನ್ನು ನಿರ್ಧರಿಸುವ ಕಡೆಗಿದೆ. ಈ ಲೇಖನದಲ್ಲಿ ಭಗವಾನರು ಸಂಸ್ಕಾರ ಕೃತಿಯ ಮೂಲಕ ಅನಂತಮೂರ್ತಿಯವರ ಇಡೀ ಸಾಹಿತ್ಯವನ್ನು ಬೆಲೆಗಟ್ಟಲು ಯತ್ನಿಸುತ್ತಾರೆ. ಹಾಗಾಗಿ "ನಾರಾಯಣಪ್ಪ ಪ್ರತಿನಿಧಿಸುವುದು ಧೂತ ಚಾರ್ವಾಕ ಮತವನ್ನೇ ಹೊರತು ಸುಶಿಕ್ಷಿತ ಚಾರ್ವಾಕ ಮತವನ್ನಲ್ಲ ಇದು ಅನಂತಮೂರ್ತಿಯವರ ಒಟ್ಟು ಕಥಾ ಸಾಹಿತ್ಯಕ್ಕೆ ಒಪ್ಪುವ ಮಾತು" ಎಂಬ ನಿಲುವಿನಲ್ಲಿ ಸಂಸ್ಕಾರದ ಚರ್ಚೆಗೆ ತೊಡಗುತ್ತಾರೆ.

ಪ್ರೊ. ಭಗವಾನ್‌ರವರು ಇಡೀ ಸಾಹಿತ್ಯವನ್ನು ಶೂದ್ರ ಮತ್ತು ಬ್ರಾಹ್ಮಣ ಎಂಬ ನೆಲೆಯಲ್ಲಿ ವಿಂಗಡಿಸಿ ಆದರ ಮೂಲಕ ಅನಂತಮೂರ್ತಿಯವರ ಸಾಹಿತ್ಯವನ್ನು ಮತ್ತು ಸಂಸ್ಕಾರವನ್ನು ಶೂದ್ರ ನೆಲೆಯಲ್ಲಿ ವಿಶ್ಲೇಷಿಸುತ್ತಾರೆ. ಸಂಸ್ಕಾರ ಕಾದಂಬರಿಯಲ್ಲಿ ಬ್ರಾಹ್ಮಣ್ಯವೇ ಪ್ರಮುಖ ಪಾತ್ರವಹಿಸುವುದರಿಂದ ಲೇಖಕರು ಬ್ರಾಹ್ಮಣ್ಯದ ಪರವಾಗಿ ನಿಲ್ಲುತ್ತಾರೆ ಎಂಬುದನ್ನು ವಿಮರ್ಶಕರು ಪತ್ತೆಹಚ್ಚಿ ಬ್ರಾಹ್ಮಣ್ಯದ ಜೀವವಿರೋದಿ ಸ್ವರೂಪವನ್ನು 'ಬ್ರಾಹ್ಮಣ್ಯ ವಿಚಾರಹೀನವಾದುದು ಅವೈಜ್ಞಾನಿಕವಾದುದು' ಎಂಬ ಮಾತುಗಳಲ್ಲಿ ಅಲ್ಲದೆ 'ಪ್ರಾಣೇಶಚಾರ್ಯರು ಸೂಳೆ ಚಂದ್ರಿಯನ್ನು ಸಂಭೋಗಿಸುವುದನ್ನು ಕ್ಷಮ್ಯಗೊಳಿಸಲು ಹಾಗೂ ಓದುಗರ ಸಹಾನುಭೂತಿಯನ್ನು ಗಳಿಸಲನುಕೂಲವಾಗುವಂತೆ ಕಾದಂಬರಿಕಾರರು ಅವರಿಬ್ಬರ ಮಡದಿಯನ್ನು ರೋಗಗ್ರಸ್ತೆಯರನ್ನಾಗಿ ಮಾಡಿಬಿಟ್ಟಿದ್ದಾರೆ' ಎಂಬ ಮಾತುಗಳಲ್ಲಿ ಸ್ಪಷ್ಟಪಡಿಸುತ್ತಾರೆ. ಇದರಿಂದ ಈ ಲೇಖನದಲ್ಲಿ ವಿಮರ್ಶಕರು ಅಬ್ರಾಹ್ಮಣ ನೆಲೆಯಲ್ಲಿ ನಿಂತು ಕಾದಂಬರಿಯ ಗತಿ ಬೆಳವಣಿಗೆ ಕೇಂದ್ರವನ್ನು ಗುರುತಿಸುತ್ತಾರೆ. ಈ ಹಿನ್ನಲೆಯಲ್ಲಿ ಕಾದಂಬರಿಯ ಪ್ರಮುಖ ಪಾತ್ರಗಳನ್ನು ಗೊಡ್ಡು ಬ್ರಾಹ್ಮಣ್ಯದ ರೂಪವಾಗಿ ಪ್ರಾಣೇಶಚಾರಿಯನ್ನು ಧೂತ ಚಾರ್ವಾಕ ಮತದ ಪ್ರತಿಪಾದಕನಾಗಿ ನಾರಾಯಣಪ್ಪನನ್ನು ಗುರುತಿಸುತ್ತಾರೆ. ಅಲ್ಲದೆ ಈ ಲೇಖನದಲ್ಲಿ ಈ ಕೃತಿಯ ಪರವಾಗಿ ಬಂದಿರುವ ಹಿಂದಿನ ವಿಮರ್ಶಕರ ನಿಲುವನ್ನು ಪ್ರಶ್ನಿಸುತ್ತಾರೆ.

ಈ ವಿಮರ್ಶೆಯಲ್ಲಿ ಶೂದ್ರರ ಪರವಾಗಿ ನಿಲ್ಲುವ ಈ ವಿಮರ್ಶಕರು ಕಾದಂಬರಿಯ ಒಳ ಪದರಗಳಲ್ಲಿ ಶೂದ್ರ ವಿರೋಧಿ ವಿವರಗಳನ್ನು ಎತ್ತಿ ತುಂಡರಿಸುತ್ತಾರೆ. "ಕುದಿಯುವ ಚಾರಿತ್ರಿಕ ಸಂಕ್ರಮಣ ಸಮಯದಲ್ಲಿ ಪಂಚಮರನ್ನು ದೇವಸ್ಥಾನದೊಳಕ್ಕೆ ಬಿಡಿ ಎನ್ನುವುದು ಎಂಥ ವಿಪರ್ಯಾಸ ಭಯಂಕರ ಪ್ರತಿಗಾಮಿ ಧೋರಣೆ" ಎಂಬ ಸಮಾನತಾ ವಿರೋಧಿ ನೆಲೆಯನ್ನು ಖಂಡಿಸುತ್ತಾರೆ. ಅಲ್ಲದೆ ಮತ್ತೊಬ್ಬ ಬ್ರಾಹ್ಮಣ ಲೇಖಕರಾದ ಬೈರಪ್ಪನವರನ್ನು ಅನಂತಮೂರ್ತಿಯವರಿಗೆ ಹೋಲಿಸಿ 'ಈ ಇಬ್ಬರೂ ಲೇಖಕರು ಸಾಂಸ್ಕೃತಿಕವಾಗಿ ಜಳ್ಳಾಗುತ್ತಾರೆ, ತೂರಿಹೋಗುತ್ತಾರೆ.' ಎಂಬ ನಿಲುವಿಗೆ ಬರುತ್ತಾರೆ.

ಇವರ ವಿಮರ್ಶೆಯಲ್ಲಿ ಕೃತಿ ವಿಮರ್ಶೆ ನೆಪದಲ್ಲಿ ಬೆಳೆದು ತಾತ್ವಿಕ ವಿಮರ್ಶೆಯಾಗುವ ಈ ಲೇಖನದಲ್ಲಿ ಲೇಖಕರು-

- ಸಂಸ್ಕಾರವನ್ನು ಸಾಂಪ್ರದಾಯಕ ಮೌಲ್ಯಗಳ ಪರವಾಗಿ ನಿಲ್ಲುವುದನ್ನು ವಿಶ್ಲೇಷಿಸಿ ಇದರ ಮುಖ್ಯ ಸೋಲನ್ನು ಗುರುತಿಸಿ ಇಡೀ ಕೃತಿ ಬ್ರಾಹ್ಮಣ್ಯ ಮೌಲ್ಯಗಳ ಪರವಾಗಿ ನಿಲ್ಲುವುದನ್ನು ಪತ್ತೆ ಹಚ್ಚುತ್ತಾರೆ.

- ಒಳ್ಳೆಯ ಸಾಹಿತ್ಯ ಕೃತಿಗಳ ಲಕ್ಷಣಗಳನ್ನು, ಕೆಟ್ಟ ಕೃತಿಯ ದೋಷಗಳನ್ನು ಈ ವಿಮರ್ಶೆಯ ಮೂಲಕ ವಿವರಿಸುತ್ತಾರೆ.

- ಬ್ರಾಹ್ಮಣ ಶೂದ್ರ ಎಂಬ ವಿಭಿನ್ನ ನೆಲೆಗಳಲ್ಲಿ ಕೃತಿಯನ್ನು ವಿಶ್ಲೇಷಿಸಿ ವಿಮರ್ಶಕರು ಶೂದ್ರ ನೆಲೆಯ ಪರವಾಗಿ ನಿಲ್ಲುತ್ತಾರೆ.

- ಬ್ರಾಹ್ಮಣ ಲೇಖಕರ ಮತ್ತು ಶೂದ್ರ ಲೇಖಕ ಇಬ್ಬರೂ ತಮ್ಮ ಕೃತಿಗಳಲ್ಲಿ ಹೆಣ್ಣಿನ ಲೈಂಗಿಕ ವಿವರಗಳನ್ನು ಬಳಸಿಕೊಳ್ಳುವುದನ್ನು ತೌಲನಿಕವಾಗಿ ಚರ್ಚಿಸುತ್ತಾರೆ.

- ಅನಂತಮೂರ್ತಿ ಮತ್ತು ಮಹಾನ್ ಲೇಖಕರಾದ ಕುವೆಂಪು ಇವರಿಬ್ಬರ ನಡುವಿನ ಸೃಜನಶೀಲತೆಯ ವ್ಯತ್ಯಾಸಗಳನ್ನು ಗುರುತಿಸಿ ಶೂದ್ರರ ಪರವಾಗಿ ನಿಲ್ಲುವ ಕುವೆಂಪು ಹೇಗೆ ಸಮಾನತಾ ಪ್ರತಿನಿಧಿಯಾಗಿ ಶೂದ್ರ ಪ್ರಜ್ಞೆಯನ್ನು ಪ್ರತಿಪಾದಿಸುತ್ತಾರೆ, ಎಂಬುದರ ವಸ್ತುನಿಷ್ಠ ವಿಶ್ಲೇಷಣೆಗೆ ತೊಡಗುತ್ತಾರೆ.

- ಕಾಮ ಕೇಂದ್ರಿತ ವಿಚಾರವನ್ನು ತಮ್ಮ ಕೃತಿಗಳಲ್ಲಿ ವಸ್ತುವಾಗಿಸಿಕೊಂಡಿರುವ ನವೋದಯ ಮತ್ತು ನವ್ಯದ ಮೌಲ್ಯಗಳನ್ನು ಚರ್ಚಿಸುತ್ತಾರೆ.

- ಬಂಡಾಯದ ಶೂದ್ರ ನೆಲೆಯಲ್ಲಿ ನವ್ಯ ಸಾಹಿತ್ಯವನ್ನು ತೀಕ್ಷ್ಣ ವಿಮರ್ಶೆಗೆ ಒಳಗುಮಾಡುತ್ತಾರೆ.

- ಪಾತ್ರಗಳ ಚರ್ಚೆಯ ಮೂಲಕ ಕೃತಿ ತಾಳುವ ಜೀವನ ದೃಷ್ಟಿಯನ್ನು ಚರ್ಚಿಸುತ್ತಾರೆ.

ಪ್ರೊ. ಕೆ.ಎಸ್. ಭಗವಾನರ ವಿಮರ್ಶೆ ಕೃತಿಯ ಚರ್ಚೆಯಿಂದಲೇ ಆರಂಭಗೊಂಡು ಅದು ಲೇಖಕರ ಕಡೆಗೆ, ಅವರ ಒಟ್ಟಾರೆ ನವ್ಯಪಂಥ ಹಾಗೂ ಅದಗ ಜೀವನ ಮೌಲ್ಯಗಳನ್ನು ವಿಶ್ಲೇಷಿಸುವತ್ತ ಸರಿಯುತ್ತದೆ. ವಿಮರ್ಶಕರು ಸಂಸ್ಕಾರದಲ್ಲಿ ಕೃತಿಯ ಲೇಖಕರು ಹೇಗೆ ಬ್ರಾಹ್ಮಣ್ಯದ ಪರವಾಗಿ ನಿಲ್ಲುತ್ತಾರೆ ಎಂಬುದನ್ನು ಉದಾಹರಣೆ ಸಮೇತ ಸ್ಪಷ್ಟಪಡಿಸುತ್ತಾರೆ. 'ಸಂಸ್ಕಾರ, ಬ್ರಾಹ್ಮಣರ ವಿಡಂಬನೆಯಂತೆ ಕಂಡರೂ, ಬ್ರಾಹ್ಮಣ್ಯದ ಮಂಡನವೇ ಅದರ ಉದ್ದೇಶ' ಎಂಬುದಾಗಲಿ ಕಾದಂಬರಿಯ ತುಂಬಾ ಅವನತಿ ಹೊಂದಿದ ಗಬ್ಬು ಬ್ರಾಹ್ಮಣ್ಯದ ಪ್ರಸ್ತಾಪ ಅದರ ಪ್ರತಿಪಾದನೆ, ಬ್ರಾಹ್ಮಣಿಕೆಯ ಸಮರ್ಥನೆ' ಇದೆ ಎನ್ನುತ್ತಾರೆ.

ಒಂದೇ ಕೃತಿಯ ಬಗ್ಗೆ ವಿವಿಧ ಕಾಲಘಟ್ಟದಲ್ಲಿ ವಿವಿಧ ಪಂಥದ ವಿಮರ್ಶಕರು ವಿಶ್ಲೇಷಿಸಿದ ಈ ಮೇಲಿನ ಮಾದರಿಗಳನ್ನು ಗಮನಿಸಿದರೆ ಈ ಪ್ರಶ್ನೆಗಳು ಏಳುತ್ತವೆ. ಒಂದೇ ಕೃತಿಯ ಬಗ್ಗೆ ಈ ರೀತಿಯ ವಿಶ್ಲೇಷಣೆ ಬರಲು ಕಾರಣವೇನು? ಅದಕ್ಕೆ ಕಾಲಘಟ್ಟ ಕಾರಣವೆ? ವಿಮರ್ಶಕರ ಸೈದ್ಧಾಂತಿಕ ಹಿನ್ನೆಲೆ ಕಾರಣವೇ? ಆದರೆ ಈ ವಿಮರ್ಶೆಗಳ ಸೂಕ್ಷ್ಮ ವಿಶ್ಲೇಷಣೆಗೆ ತೊಡಗಿದಾಗ ಇಂಥ ಕೃತಿ ವಿಮರ್ಶೆಗಳ ಭಿನ್ನತೆಗೆ ಕಾರಣಗಳನ್ನಾಗಿ ವಿಮರ್ಶಕರ ವೈಯಕ್ತಿಕ ಹಿನ್ನೆಲೆ, ಅವರು ಯಾವ ಪಂಥದವರು, ಸಾಮಾಜಿಕ ಹಿನ್ನೆಲೆ, ಸೈದ್ಧಾಂತಿಕ ಹಿನ್ನೆಲೆ, ಈ ವಿಮರ್ಶೆಗಳು ಹುಟ್ಟಿದ ಕಾಲಘಟ್ಟ, ಆ ಕಾಲಘಟ್ಟದಲ್ಲಿ ಕರ್ನಾಟಕದಲ್ಲಿ ನಡೆದ ಚಾರಿತ್ರಿಕ ಬೆಳವಣಿಗೆಗಳು ಇತ್ಯಾದಿಗಳನ್ನು ಗುರುತಿಸಬಹುದು.

ಈ ಮೇಲಿನ ಆರು ಮಾದರಿಗಳಲ್ಲಿ ಎಂ.ಜಿ.ಕೆ., ಆಮೂರ., ನಾಗರಾಜನ್, ಜಿ.ಎಚ್. ನಾಯಕ್, ರಾಮಚಂದ್ರದೇವರ ವಿಮರ್ಶೆಗಳು ಹೆಚ್ಚು ಕಡಿಮೆ ಒಂದೇ ರೀತಿಯಲ್ಲಿವೆ ರೂಪನಿಷ್ಠ ಮಾದರಿ ಅನುಸರಿಸಿವೆ. ಅಂದರೆ ಒಂದೊಂದು ಲೇಖನಗಳು ಕೃತಿಯ ರೂಪ, ತಂತ್ರ, ಪಾತ್ರ ಪೋಷಣೆ, ಸಂಪ್ರದಾಯ ಮೌಲ್ಯ ಇವುಗಳ ಕಡೆ ಹೆಚ್ಚು ಕೇಂದ್ರಿಕರಿಸಿ ಕೃತಿಯ ಶ್ರೇಷ್ಠತೆಯನ್ನು ಹೇಳುವ ಕೆಲಸ ಮಾಡುತ್ತವೆ. ಆದರೆ ಪ್ರೊ. ಕೆ.ಎಸ್. ಭಗವಾನರ ವಿಮರ್ಶೆ ಇವುಗಳೆಲ್ಲವುದಕ್ಕಿಂತ ಭಿನ್ನವಾಗಿದೆ ಮತ್ತು ವಿಶಿಷ್ಟವಾಗಿದೆ. ಇವರ ವಿಮರ್ಶೆಯಲ್ಲಿ ಒಂದು ರೀತಿಯ ಸಾಮಾಜಿಕ ಹೊಣೆಗಾರಿಕೆ ಕಂಡು ಬರುತ್ತದೆ. ಸಮಾಜೋ-ಸಾಂಸ್ಕೃತಿಕ ದೃಷ್ಟಿ ಇದರಲ್ಲಿ ಎದ್ದು ಕಾಣುತ್ತದೆ.

ಒಂದೇ ಕೃತಿಯ ಬಗ್ಗೆ ಬಂದಿರುವ ಈ ವಿವಿಧ ವಿಮರ್ಶಾ ಮಾದರಿಗಳಿಗೆ ಪ್ರಮುಖಕಾರಣ, ಒಂದೇ ಪುಸ್ತಕ ವಿವಿಧ ಪಂಥದಡಿ ಸಾಹಿತ್ಯ ಪರಂಪರೆಯ ಬೇರೆ ಬೇರೆ ಅರ್ಥಕ್ಕೆ ಒಳಪಟ್ಟಿರುವುದು ಆರಂಭದ ಐದು ವಿಮರ್ಶೆಗಳು ನವ್ಯ ಸಂದರ್ಭ ಉಚ್ಛ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಬಂದಂಥವು,

ಅವು ರೂಪ ತಂತ್ರ ವಿನ್ಯಾಸದ ಕಡೆ ಹೆಚ್ಚು ಒತ್ತು ನೀಡಿದೆ. ಆದರೆ ಭಗವಾನರು ಬರೆಯುವ ಹೊತ್ತಿಗೆ ಕೂಡ ಒಂದು ರೀತಿಯ ಶೂದ್ರ ನೆಲೆಯ ಜನಾಂದೋಲನ ಆರಂಭವಾಗಿತ್ತು. ಇಡೀ ಸಾಹಿತ್ಯವನ್ನು ಶೂದ್ರ ನೆಲೆಯಲ್ಲಿ ವಿಮರ್ಶಿಸುವ ವಾತಾವರಣ ನಿರ್ಮಾಣವಾಗಿತ್ತು. ತೇಜಸ್ವಿ ಈ ಬಗೆಯ ವಿಮರ್ಶಾ ಕ್ರಮವನ್ನು ಆರಂಭಿಸಿದ್ದರು. ಅದು ಅಗತ್ಯ ಕೂಡ ಆಗಿತ್ತು. ಆದುದರಿಂದ ಇವರ ವಿಮರ್ಶೆಯಲ್ಲಿ ಹಲವು ಆಯಾಮಗಳ ಮೂಲಕ ಕೃತಿಯನ್ನ ವಿಶ್ಲೇಷಿಸುವುದು ಮತ್ತು ಕೃತಿಯ ಪರಿಣಾಮವನ್ನು ಕುರಿತು ಚರ್ಚಿಸಿರುವುದು ಇಡೀ ಕೃತಿಯನ್ನು ಕೃತಿಬಂದ ಪಂಥವನ್ನು ಸೈದ್ಧಾಂತಿಕವಾಗಿ ಪ್ರಶ್ನಿಸುವುದು ಇವುಗಳೆಲ್ಲ ಸಾಧ್ಯವಾಗಿರುವುದು ಶೂದ್ರನೆಲೆಯ ಆಲೋಚನೆಯಿಂದ ಎನ್ನಬಹುದು.

ಒಟ್ಟಾರೆ ಇವುಗಳೆಲ್ಲವನ್ನೂ ಗಮನಿಸಿದರೆ ಪುಸ್ತಕ ವಿಮರ್ಶೆಯು ಕೂಡ ಸಾಹಿತ್ಯ ವಿಮರ್ಶಾ ಚರಿತ್ರೆಯ ಭಾಗವಾಗಿ ಬೆಳವಣಿಗೆ ಹೊಂದುವುದನ್ನು ಕಾಣಬಹುದು. ಅಲ್ಲದೆ ಕನ್ನಡ ವಿಮರ್ಶೆಯು ಪುಸ್ತಕ ವಿಮರ್ಶೆಯ ಚಿಂತನೆಯ ಚರಿತ್ರೆಯಾಗಿ ಬೆಳೆದಿರುವುದನ್ನು ಗುರುತಿಸಬಹುದು.

ಒಂದೇ ಕೃತಿಯ ಬಗ್ಗೆ ಬಂದಿರುವ ಪುಸ್ತಕ ವಿಮರ್ಶೆ ಮತ್ತು ಸಾಹಿತ್ಯ ವಿಮರ್ಶೆ ಇವುಗಳನ್ನು ಗಮನಿಸಿದರೆ ವ್ಯತ್ಯಾಸಗಳು ತಿಳಿಯುತ್ತವೆ. ಪುಸ್ತಕ ವಿಮರ್ಶೆ ಕೃತಿಯ ಆಳಕ್ಕೆ ಹೆಚ್ಚು ಇಳಿಯುವುದಿಲ್ಲ. ಆದರೆ ಸಾಹಿತ್ಯ ವಿಮರ್ಶೆ ಕೃತಿಯ ಎಲ್ಲ ಆಯಾಮಗಳನ್ನು ಚರ್ಚಿಸಲು ಹವಣಿಸುತ್ತದೆ. ಆದರೂ ಸಾಹಿತ್ಯ ವಿಮರ್ಶೆ ಮತ್ತು ಪುಸ್ತಕ ವಿಮರ್ಶೆ ನಡುವೆ ಏನೇ ವ್ಯತ್ಯಾಸಗಳನ್ನು ಹುಡುಕಿದರೂ ಕೆಲವೊಮ್ಮೆ ಇವು ಅಳಿಸಿಹೋಗುತ್ತವೆ.

ಮೌಖಿಕ ರೂಪದ ಪುಸ್ತಕ ವಿಮರ್ಶೆ

ವೇಗಗೊಳ್ಳುತ್ತಿರುವ ಇಂದಿನ ಸಂದರ್ಭದಲ್ಲಿ ಪುಸ್ತಕ ವಿಮರ್ಶೆ ಬೇರೆ ರೂಪವನ್ನು ಪಡೆಯುತ್ತಿದೆ. ಇದು ಕೇವಲ ಬರಹಗೊಂಡು ಮುದ್ರಣರೂಪದಲ್ಲಿ ಪ್ರಕಟವಾಗುವ ಪ್ರಕಾರವಾಗಿ ಮಾತ್ರ ಉಳಿದಿಲ್ಲ. ಈ ರೀತಿಯ ಮೌಖಿಕ ರೂಪದಲ್ಲಿ ಕೃತಿಯ ಬಗೆಗೆ ಚರ್ಚೆ ನಡೆಯುತ್ತಲೇ ಇರುತ್ತದೆ. ಅದು ಕೃತಿ ಬಿಡುಗಡೆ ಸಂದರ್ಭದಲ್ಲಿ, ಅಥರಾ ಸಾಹಿತ್ಯದ ಚರ್ಚೆ ನಡೆಯುವಾಗ, ತರಗತಿಯಲ್ಲಿ ಉಪನ್ಯಾಸ ಮಾಡುವಾಗ, ಹೊಟೇಲಿನಲ್ಲಿ ಓದುಗರು ಸೇರಿದಾಗ, ವಿಚಾರವಂತರ ಸಮ್ಮುಖದಲ್ಲಿ, ಚರ್ಚಾಗೋಷ್ಠಿಗಳಲ್ಲಿ, ವಿಚಾರ ಸಂಕಿರಣಗಳಲ್ಲಿ ಇನ್ನೂ ಹಲವು ಸಂದರ್ಭಗಳಲ್ಲಿ ಮೌಖಿಕ ರೂಪದಲ್ಲಿ ಪುಸ್ತಕ ವಿಮರ್ಶೆ ನಡೆಯುತ್ತಿರುತ್ತದೆ. ಆದರೆ ಇದಕ್ಕೆ ಲಿಖಿತ ದಾಖಲೆಗಳಿಲ್ಲವಾದರೂ ಪರಿಣಾಮ ದೃಷ್ಟಿಯಿಂದ ಮಹತ್ವದ್ದಾಗಿದೆ. ಕೃತಿ ಕುರಿತ ಚರ್ಚೆಗಳು ಓದುಗರು ಸಂಧಿಸಿದಾಗ ನಡೆಯುತ್ತಲೇ ಇರುತ್ತವೆ. ಆ ಚರ್ಚೆಗಳು ಕೇವಲ ಸಾಹಿತ್ಯ ಕೃತಿಗಳಿಗೆ ಸಂಬಂಧಿಸಿದವಷ್ಟೇ ಆಗಿರುವುದಿಲ್ಲ. ಸಾಹಿತ್ಯೇತರ ಕೃತಿಗಳು ಆ ಪರಿಧಿಯಲ್ಲಿ ಬಂದು ಸೇರುತ್ತವೆ. ಪುಸ್ತಕ ವಿಮರ್ಶೆ ಮುದ್ರಣಗೊಂಡು ಪ್ರಕಟವಾಗುವುದು ನಿಂತು ಹೋದರೂ ಈ ರೀತಿಯ ಮೌಖಿಕ ರೂಪದಲ್ಲಿ ಪುಸ್ತಕ ವಿಮರ್ಶೆ ಸದಾ ಜೀವಂತವಾಗಿ ಇರುತ್ತದೆ.

ಹೀಗೆ ಪುಸ್ತಕ ವಿಮರ್ಶೆಗೂ ಸಾಹಿತ್ಯ ವಿಮರ್ಶೆಗೂ ಹಲವು ಭಿನ್ನ ವ್ಯತ್ಯಾಸಗಳಿದ್ದರೂ ಎರಡು ಪರಸ್ಪರ ಕೂಡಿಕೊಂಡವುಗಳಾಗಿವೆ. ಇವೆರಡಕ್ಕೂ ಪರಸ್ಪರ ಅಂತಸ್ಸಂಬಂಧವಿದೆ. ಒಂದರ ಹುಟ್ಟು ಮತ್ತೊಂದರ ಬೆಳವಣಿಗೆ ಒಟ್ಟಾಗಿಯೇ ನಡೆಯುತ್ತದೆ.

ಪತ್ರಿಕೆ ಮತ್ತು ವಿಮರ್ಶೆ

ಪತ್ರಿಕೆಗಳ ಹುಟ್ಟು ಆಧುನಿಕ ತಂತ್ರಜ್ಞಾನದ ಫಲ. ಅದರ ಬೆಳವಣಿಗೆ ವಿಚಾರ ಚಿಂತನೆಯ ಅಭಿವ್ಯಕ್ತಿಯಿಂದಾದುದು. ಬೌದ್ಧಿಕ ಚಿಂತನೆಯ ಅಭಿವ್ಯಕ್ತಿ ಮೂಲ ಮಾಧ್ಯಮ ಮತ್ತು ವೇದಿಕೆಯಾಗಿ

ಪತ್ರಿಕೆ ಕೆಲಸ ಮಾಡುತ್ತದೆ. ಕಲ್ಲಚ್ಚಿನಿಂದ ಆಧುನಿಕ ಆಫ್‌ಸೆಟ್‌ವರೆಗೆ ವಿವಿಧ ಹಂತಗಳನ್ನು ದಾಟಿ ಬಂದಿದ್ದರೂ ಅದರ ಜನಪ್ರಿಯತೆ ಹೆಚ್ಚುತ್ತಲೇ ಇದೆ. ಇಂದು ಪತ್ರಿಕೆ ಜನಜೀವನದ ಒಂದು ಪ್ರಮುಖ ಅಂಗವಾಗಿ ಬಿಟ್ಟಿದೆ. ಅದು ಆಧುನಿಕ ಅಂತರ್ಜಾಲಗಳಿದ್ದಾಗ್ಯೂ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿಲ್ಲ. ಪತ್ರಿಕೆಗಳು ಮಾನವ ಜೀವನದ ಸಂಬಂಧವಿರಿಸಿಕೊಂಡಾಗಲೇ ಅದರ ಉಳಿವು. ಇದರಿಂದಲೇ ಇಂದು ಪತ್ರಿಕೆ ಜನಮುಖಿ ಮಾಧ್ಯಮವಾಗಿ ಜನಸಾಮಾನ್ಯರ ವಿಚಾರಗಳಿಗೂ ಸ್ಪಂದಿಸುತ್ತಿದೆ. ಅದು ಒಟ್ಟಾರೆ ಪತ್ರಿಕೋದ್ಯಮದ ಪ್ರಮುಖ ಆಶಯ ಕೂಡ.

೧೬೬೦ರಲ್ಲಿ ಇಂಗ್ಲೆಂಡಿನಲ್ಲಿ ಮೊಟ್ಟ ಮೊದಲ ದಿನಪತ್ರಿಕೆ ಆರಂಭವಾದಂದಿನಿಂದ ಹಿಡಿದು ಇಲ್ಲಿಯವರೆಗೆ ಪತ್ರಿಕೆಗಳ ಮಹತ್ವ ಹೆಚ್ಚಾಗುತ್ತಲೇ ಇದೆ. ಭಾರತದಲ್ಲಿ ೧೭೮೧ರಲ್ಲಿ 'ಬೆಂಗಾಲ್ ಗೆಜೆಟ್' ಆರಂಭವಾಯಿತು. ಇದಕ್ಕೆ ಮೂಲ ಪ್ರೇರಣಕರ್ತರು ಇಂಗ್ಲೀಷರು. ಹಾಗೆಯೇ ಕನ್ನಡದಲ್ಲೂ ಸಹ ೧೮೪೩ರಲ್ಲಿ ಬಾಸೆಲ್ ಮಿಷನ್ ಪಾದ್ರಿ ರೆವರೆಂಟ್ ಫಾದರ್ ಹರ್ಮನ್ ಮೊಗ್ಲಿಂಗ್ 'ಮಂಗಳೂರು ಸಮಾಚಾರ' ಎಂಬ ಪತ್ರಿಕೆಯನ್ನು ಸ್ಥಾಪಿಸಿದುದು ಕನ್ನಡ ಪತ್ರಿಕೆ ಇತಿಹಾಸದಲ್ಲೇ ಮಹತ್ತರ ದಿನವಾಗಿದೆ. ಆದರೆ ಆ ದಿನ ಪತ್ರಿಕೆ ಸುದ್ದಿಗಳಿಗೆ ಮೀಸಲಾಗಿತ್ತು. ಸಂಪೂರ್ಣ ಸಾಹಿತ್ಯ ಪರಿಸರವನ್ನು ಒಳಗೊಂಡ 'ಸಾಹಿತ್ಯ ಪತ್ರಿಕೆ' ಬರಲು ಸ್ವಲ್ಪ ತಡವಾಯಿತು. ಅಲ್ಲದೆ ಸಾಹಿತ್ಯಕ ಪತ್ರಿಕೆಗಳು ಬಂದಂಥ ಸಂದರ್ಭದಲ್ಲಿ ಅವುಗಳನ್ನು 'ಸಾಹಿತ್ಯಕ ಪತ್ರಿಕೆಗಳು' ಎಂಬ ಹೆಸರಿನಲ್ಲಿ ಕರೆಯುತ್ತಿರಲಿಲ್ಲ.

ಹಿಂದಿನ ಪತ್ರಿಕೆಗಳನ್ನು ಮತ್ತು ಅವು ನಡೆದು ಬಂದ ದಾರಿಯನ್ನು ಅವಲೋಕಿಸಿದರೆ, ಸಾಹಿತ್ಯದ ಬಗ್ಗೆ ಇದ್ದಂತಹ ಒಲವು ತುಂಬಾ ಕಡಿಮೆಯೇ. ಕವನವನ್ನೊ ಕತೆಯನ್ನೊ, ಪ್ರಕಟಿಸಿ ಸಾಹಿತ್ಯದ ಕೆಲಸ ಇಷ್ಟೇ ಎಂದು ಶುಷ್ಕವಾಗಿಬಿಟ್ಟಿದ್ದವು. ಆದರೆ ಇತ್ತೀಚೆಗೆ ಪತ್ರಿಕೆಗಳಲ್ಲಿ ಸಾಹಿತ್ಯಕ್ಕೆ ಸಂಬಂಧಪಟ್ಟ ಎಲ್ಲ ಪ್ರಕಾರಗಳನ್ನು ಸಾಮಾನ್ಯ ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತಿದೆ. 'ಪುಸ್ತಕ ವಿಮರ್ಶೆ'ಯನ್ನು ಗಮನಿಸಿದರೆ ಅದರ ವ್ಯಾಪ್ತಿ ಎಲ್ಲ ಪತ್ರಿಕೆಗಳಿಗೂ ಹಬ್ಬಿದೆ. ಆದರೆ ಪತ್ರಿಕೆಗಳು ಪುಸ್ತಕವನ್ನು ವಿಮರ್ಶಿಸುತ್ತಿರುವ, ಪರಿಚಯಿಸುತ್ತಿರುವ ರೀತಿ ಭಿನ್ನವಾದುದಾಗಿದೆ. ಈಗಿನ ಪತ್ರಿಕೆಗಳಲ್ಲಿ ಕೆಲವು ಅಂಕಣಗಳನ್ನು ಅದಕ್ಕಾಗಿಯೇ ಮೀಸಲಿರಿಸಿರುವ ಈ ಸಂದರ್ಭ 'ಪುಸ್ತಕ ವಿಮರ್ಶೆ' ಕ್ಷೇತ್ರದಲ್ಲಿ ಮೈಲಿಗಲ್ಲಾಗಿದೆ ಎಂದು ಭಾವಿಸಬಹುದು.

ಸಾಹಿತ್ಯ ಪತ್ರಿಕೆಗಳ ಪ್ರಸರಣ ತುಂಬಾ ಕಡಿಮೆ. ಆದರೆ ವಿಚಾರದಲ್ಲಿ ಮಾತ್ರ ಅಗಾಧವಾದುದು. ಅವುಗಳ ವೈವಿಧ್ಯವು ಒಂದು ಸಾಹಿತ್ಯ ಪತ್ರಿಕೆಗೂ ಮತ್ತೊಂದು ಸಾಹಿತ್ಯ ಪತ್ರಿಕೆಗೂ ತುಂಬಾ ವಿಭಿನ್ನ. ಅಲ್ಲದೆ 'ಸಾಹಿತ್ಯ ಪತ್ರಿಕೆ'ಗಳು ಸಾಮಾನ್ಯ ಪತ್ರಿಕೆಗಳಿಗಿಂತ ಭಿನ್ನ ನೆಲೆಯಲ್ಲಿ ಸಾಹಿತ್ಯಾಸಕ್ತರನ್ನು ಚಿಂತಿಸುವಂತೆ ಮಾಡುತ್ತವೆ. ಸಾಮಾನ್ಯ ಪತ್ರಿಕೆಗಳಿಗೆ ಒಂದು ಕೃತಿಯನ್ನು ಹೆಚ್ಚು ಜನರಿಗೆ ತಲುಪಿಸುವ ಹಾಗೂ ಆ ಕೃತಿಯನ್ನು ಜನಪ್ರಿಯಗೊಳಿಸುವ ಶಕ್ತಿಯಿರುತ್ತದೆ. ಆದರೆ ಇವು ಸೃಜನಶೀಲತೆಯಿಲ್ಲದ ಕೇವಲ ಸಾಂದರ್ಭಿಕ ಘಟನೆಗಳ ಆಧಾರದ ಮೇಲೆ ರಚಿತವಾಗಿರುವ. ಆದರೆ ಓದುಗರಿಂದ ಅಪಾರ ಬೇಡಿಕೆಯಿರುವ ಸಾಹಿತ್ಯವನ್ನು ಪ್ರಕಟಿಸುತ್ತವೆ. ಇಂಥ ಸಾಹಿತ್ಯದಿಂದ ಓದುಗರು ಮಾಂತ್ರಿಕ ಪರಿಹಾರ, ತಾತ್ಕಾಲಿಕವಾಗಿ

ಮನಸ್ಸಿನ ಆಸೆಗಳನ್ನು ಪೂರೈಸಿಕೊಂಡರೂ ಇವು ಅವರ ವ್ಯಕ್ತಿತ್ವ ವಿಕಾಸಕ್ಕೆ ಮತ್ತು ಅಭಿರುಚಿ ನಿರ್ಮಾಣಕ್ಕೆ ಪೂರಕವಾಗಿ ದುಡಿಯುವುದಿಲ್ಲ. ಇಂತಹ ಬರವಣಿಗೆ ಸಾಹಿತ್ಯ ಪರಂಪರೆಗೆ ಯಾವುದೇ ರೀತಿಯ ಮೌಲ್ಯಾತ್ಮಕ ಕೊಡುಗೆಯನ್ನು ನೀಡದೆ ಓದುಗನಿಗೆ ದೃಢವಾಸ್ತವದ ಬದುಕನ್ನು ಪರಿಚಯಿಸದೆ ಅವರನ್ನು ಭ್ರಮಾಲೋಕದಲ್ಲಿರಿಸುತ್ತವೆ. ಸಾಮಾನ್ಯವಾಗಿ 'ಸಾಮಾನ್ಯ ಪತ್ರಿಕೆ'ಗಳ ಆಶಯ ಮತ್ತು 'ಸಾಹಿತ್ಯ ಪತ್ರಿಕೆ'ಗಳ ಆಶಯ ಮತ್ತು ಅವುಗಳ ಪರಿಣಾಮ ಭಿನ್ನ ನೆಲೆಯದ್ದಾಗಿರುತ್ತದೆ. ಅದಕ್ಕಾಗಿ ಸಾಹಿತ್ಯ ಪತ್ರಿಕೆಗಳ ಸಂಪಾದಕರು ಕಟು ಎಚ್ಚರದಿಂದ ಒಂದೊಂದು ಸಂಚಿಕೆಯನ್ನು ಪ್ರಕಟಮಾಡಬೇಕಾಗುತ್ತದೆ. ಇದರ ಪ್ರಕಟಣೆಯಾದ ತಕ್ಷಣ ತೀಕ್ಷ್ಣ ಪ್ರತಿಕ್ರಿಯೆಗಳು ಬರುವುದರಿಂದ ಮತ್ತು ಆ ಪತ್ರಿಕೆಯಲ್ಲಿನ ವಿಚಾರಗಳು ತಲುಪುವುದು ಸಾಮಾನ್ಯವಾದ ಓದುಗರಿಗಲ್ಲದ ಕಾರಣದಿಂದ ಚರ್ಚೆ, ಮಂಥನಗಳ ಮೂಲಕ ಬಹು ಎಚ್ಚರದಿಂದ ಅವರು ವಿಚಾರಗಳನ್ನು ಸಂಪಾದಿಸಬೇಕಾಗುತ್ತದೆ.

ಸಾಹಿತ್ಯದ ಯಾವುದೇ ಪ್ರಕಾರಗಳನ್ನು ಅಧ್ಯಯನ ಮಾಡುವಲ್ಲಿ ಸಾಹಿತ್ಯ ಪತ್ರಿಕೆಗಳು ಪ್ರಮುಖ ಪಾತ್ರ ವಹಿಸುತ್ತವೆ. *ಸಾಹಿತ್ಯ ಪತ್ರಿಕೆಗಳು ಅಂದಂದಿನ ಸಾಹಿತ್ಯ ಕೃತಿಗಳ, ಸಾಹಿತ್ಯಕ ಚಳುವಳಿಗಳ ವಿವರಗಳನ್ನು ತಿಳಿಸುವ ಅಪರೂಪದ ದಾಖಲೆಗಳಾಗಿವೆ. ಅಲ್ಲದೆ ಸಾಹಿತ್ಯದ ಮುಖ್ಯ ಮಾರ್ಗಸೂಚಿಗಳಾಗಿ ಕೆಲಸ ನಿರ್ವಹಿಸಿವೆ. ಅಂದಂದಿನ ಸಾಂಸ್ಕೃತಿಕ ಸಂದರ್ಭಗಳಲ್ಲಿ, ಸಾಹಿತ್ಯಕ ವಾತಾವರಣವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಿವೆ, ಕಾಲಕಾಲಕ್ಕೆ ಕನ್ನಡ ಸಾಹಿತ್ಯದ ನೆಲೆ- ಬೆಲೆ ಕಟ್ಟುವುದರಲ್ಲಿ ವಿಮರ್ಶೆಯನ್ನು ಬೆಳಸುವುದರಲ್ಲಿ ಸಹಕಾರಿಯಾಗಿವೆ (ಪು-೧೭)*[೨] 'ಪುಸ್ತಕ ವಿಮರ್ಶೆ' ಗಳನ್ನು ಪ್ರಕಟಿಸುತ್ತ ವಿಮರ್ಶೆಯ ಬೆಳವಣಿಗೆಗೆ ಸಹಾಯಕವಾಗಿವುದು ಗಮನಾರ್ಹ.

ಪುಸ್ತಕ ವಿಮರ್ಶೆಯು ಎಲ್ಲ ರೀತಿಯ ಪತ್ರಿಕೆಗಳಲ್ಲೂ ಕಂಡು ಬರುವುದಿಲ್ಲ. ಅದಕ್ಕೆ ಅನೇಕ ಕಾರಣಗಳಿವೆ. ಆ ಪತ್ರಿಕೆಗಳು ಇಟ್ಟುಕೊಂಡ ಸೈದ್ಧಾಂತಿಕ ನಿಲುವುಗಳು ಬಹುಮುಖ್ಯವಾಗುತ್ತವೆ. ಏಕೆಂದರೆ ಎಲ್ಲ ಪತ್ರಿಕೆಗಳು ಎಲ್ಲ ರೀತಿಯ ಪುಸ್ತಕಗಳನ್ನು ವಿಮರ್ಶಿಸುವುದಿಲ್ಲ. ಅವುಗಳು ಒಂದೊಂದು ತಾತ್ವಿಕತೆಗೆ ಬದ್ಧವಾಗಿರುತ್ತವೆ. ಮಾರ್ಕ್ಸಿಸ್ಟ ನಿಲುವನ್ನು ಒಳಗೊಂಡ ಪತ್ರಿಕೆಗಳು ಪ್ರಜಾಪ್ರಭುತ್ವವಾದೀ ಕೃತಿಗಳನ್ನು ಕುರಿತು ವಿಮರ್ಶಿಸುವುದಿಲ್ಲ, ರಾಜಕೀಯಕ್ಕೆ ಬದ್ಧವಾದ ಪತ್ರಿಕೆ ರಾಜಕೀಯಕ್ಕೆ ಸಂಬಂಧಪಟ್ಟ ಕೃತಿಗಳನ್ನು ಮಾತ್ರ ವಿಮರ್ಶಿಸುತ್ತವೆ. ಹಾಗೆಯೇ ಧಾರ್ಮಿಕ ಪತ್ರಿಕೆ ಧಾರ್ಮಿಕ ಕೃತಿಗಳನ್ನು, ಸ್ತ್ರೀಯರಿಗಾಗಿ ಪ್ರಕಟಿತವಾಗುತ್ತಿರುವ ಪತ್ರಿಕೆ ಸ್ತ್ರೀಯರ ಕೃತಿಗಳನ್ನು ಕುರಿತು ವಿಮರ್ಶಿಸುತ್ತವೆ.

೪.೩.೧. ರಾಜಕೀಯ ಸೈದ್ಧಾಂತಿಕ ಹಿನ್ನೆಲೆಯುಳ್ಳ ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆ

ಕೆಲವು ಪತ್ರಿಕೆಗಳು ಪುಸ್ತಕ ವಿಮರ್ಶೆಗಳನ್ನು ಪ್ರಕಟಿಸುವುದೇ ಇಲ್ಲ. ಅವುಗಳು ಕೃತಿಯನ್ನು ಗಂಭೀರವಾಗಿ ತೆಗೆದುಕೊಂಡಿರುವುದಿಲ್ಲ. ಅಲ್ಲದೆ ಅವರು ಬಿಸಿ ಬಿಸಿ ಸುದ್ದಿಗೆ ಒತ್ತು ಕೊಡುತ್ತಾರೆಯೇ ಹೊರತು ಕೃತಿಯ ವಿವರಗಳಿಗೆ ಅಲ್ಲ. ಕಾರಣ ಒಂದು ಪತ್ರಿಕೆಗೆ ನಿರ್ದಿಷ್ಟ ಓದುಗರು ಇರುವುದರಿಂದ ಅವರು ಅನಿವಾರ್ಯವಾಗಿ ಆ ಓದುಗರ ಅಭಿರುಚಿಗೆ ಅನುಗುಣವಾಗಿ ಸುದ್ದಿಗಳನ್ನು, ವಿವರಗಳನ್ನು ನೀಡಬೇಕಾಗುತ್ತದೆ. ಉದಾಹರಣೆಗೆ 'ಲಂಕೇಶ್ ಪತ್ರಿಕೆ', 'ಅಗ್ನಿ', 'ಹಾಯ್ ಬೆಂಗಳೂರು' ಮೂರೂ

ಟ್ಯಾಬ್ಲಾಯಿಡ್ ಪತ್ರಿಕೆಗಳಾದರೂ ಇವುಗಳ ಓದುಗ ವಲಯ ಒಂದಕ್ಕೊಂದು ಭಿನ್ನ. 'ಲಂಕೇಶ್ ಮತ್ತು ಅಗ್ನಿ ಪತ್ರಿಕೆ'ಯಲ್ಲಿ ಬರುವ ಸಾಹಿತ್ಯಕ ಚರ್ಚೆ 'ಹಾಯ್ ಬೆಂಗಳೂರು' ಪತ್ರಿಕೆಯಲ್ಲಿ ಬರುವುದಿಲ್ಲ. ಲಂಕೇಶ್ ಮತ್ತು ಅಗ್ನಿ ಪತ್ರಿಕೆಗಳು ಸಾಹಿತ್ಯ, ರಾಜಕೀಯ ಮತ್ತು ಸಾಮಾಜಿಕ ಚಿಂತನೆಗಳಿಗೆ ಹೆಚ್ಚು ಒತ್ತು ನೀಡಿದರೆ, 'ಹಾಯ್ ಬೆಂಗಳೂರು' ಪತ್ರಿಕೆಯ ಓದುಗರು ರೊಚ್ಚು, ಅತ್ಯಾಚಾರ ಮುಂತಾದವುಗಳ ವಿಷಯಗಳಿಗೆ ಹೆಚ್ಚು ಆಸಕ್ತರಾಗುವುದರಿಂದ ಸಾಹಿತ್ಯಕ ವಿಚಾರದ ಕಡೆ, ಕೃತಿ ಪರಿಚಯದ ಕಡೆ ಗಮನ ಕೊಡುವುದಿಲ್ಲ. ಈ ಕಾರಣದಿಂದ ಈ ಪತ್ರಿಕೆಯಲ್ಲಿ 'ಕೃತಿ ವಿಮರ್ಶೆ', ಅಂಕಣ ಇಲ್ಲ. ಇಲ್ಲಿ ಯಾವ ಕೃತಿಯ ಪರಿಚಯವು ಕಂಡುಬರುವುದಿಲ್ಲ. ಅದರೆ ಪ್ರಾಸಂಗಿಕವಾಗಿ ಕೆಲವೊಮ್ಮೆ ಪ್ರಕಟವಾಗುತ್ತವೆ. ಅಲ್ಲದೆ 'ಜನ ವಿಮುಕ್ತಿ', 'ಸ್ವತಂತ್ರ ಕರ್ನಾಟಕ', 'ಜನಮತ', 'ಬಹುಮತ' ಮುಂತಾದ ಪತ್ರಿಕೆಗಳು ಪುಸ್ತಕ ವಿಮರ್ಶೆಯನ್ನು ಪ್ರಕಟಿಸುವುದಿಲ್ಲ. ಜನ ವಿಮುಕ್ತಿ ಕ್ರಾಂತಿಕಾರಿ ಮಾಸ ಪತ್ರಿಕೆ ಇದು ಕ್ರಾಂತಿಕಾರಿ ಸುದ್ದಿಯನ್ನು ಬಿತ್ತರಿಸುವ ಮಾಸ ಪತ್ರಿಕೆ, ತಿಂಗಳಿಗೊಂದು ಸಂಚಿಕೆಯಾಗಿರುವುದರಿಂದ ಪುಸ್ತಕ ವಿಮರ್ಶೆ ಕಂಡುಬರುವುದಿಲ್ಲ. ಕ್ರಾಂತಿಕಾರಿ ಪುಸ್ತಕಗಳನ್ನಾದರೂ ವಿಮರ್ಶಿಸಬಹುದಿತ್ತು. ಇಲ್ಲಿ ದಾಖಲೆಗೊಂಡ ವಿಚಾರಗಳ ಬಗ್ಗೆ ಒತ್ತು ನೀಡದೆ ಇಲ್ಲಿನ ವಿಚಾರಗಳೇ ಆದಷ್ಟು ಮೊದಲ ದಾಖಲೆಗಳಾಗುವಂತೆ ಈ ಪತ್ರಿಕೆ ಬಯಸುತ್ತದೆ. ಈ ಕಾರಣದಿಂದ ಇಲ್ಲಿ ಪುಸ್ತಕ ವಿಮರ್ಶೆಯಿರುವುದಿಲ್ಲ, ಇದು ಕಮ್ಯುನಿಸ್ಟ್ ಆಶಯಗಳಿಗೆ ಬದ್ಧವಾಗಿದೆ. 'ಸ್ವತಂತ್ರ ಕರ್ನಾಟಕ' ದ ಉದ್ದೇಶ ಸಂಪಾದಕರೇ ಹೇಳುವಂತೆ 'ಕನ್ನಡ ರಾಷ್ಟ್ರೀಯ ವಿಮೋಚನಾ ಹೋರಾಟವೆಂದರೆ ಪ್ರಧಾನವಾಗಿ ಇಲ್ಲಿನ ರೈತಾಪಿ ವರ್ಗಗಳು, ಕಾರ್ಮಿಕರು, ಕುಶಲಕರ್ಮಿ, ಮತ್ತಿತ್ತರ ಮಧ್ಯಮ ವರ್ಗಗಳು ಹಾಗೂ ವಿದೇಶಿ ದಲ್ಲಾಳಿಗಳಿಂದ ಇಲ್ಲಿನ ವ್ಯಾಪಾರಿ - ಕೈಗಾರಿಕೋದ್ಯಮಿ ವರ್ಗಗಳು ಇವರೆಲ್ಲರ ವಿಮೋಚನೆಯ ಹೋರಾಟವೇ ಆಗಿದೆ, ಎಂದಿದ್ದಾರೆ. ಈ ಕಾರಣದಿಂದ ಇಂಥ ಗಂಭೀರ ರಾಜಕೀಯ ಸೈದ್ಧಾಂತಿಕ ಧ್ಯೇಯೋದ್ದೇಶಗಳನ್ನು ಹೊಂದಿರುವ ಬಹುಪಾಲು ಪತ್ರಿಕೆಗಳು ಪುಸ್ತಕ ವಿಮರ್ಶೆಯನ್ನು ಪ್ರಕಟಿಸುವುದಿಲ್ಲ.

೪.೩.೨ ಟ್ಯಾಬ್ಲಾಯಿಡ್‌ಗಳಲ್ಲಿ ಪುಸ್ತಕ ವಿಮರ್ಶೆಯ ಸ್ವರೂಪ

ಪತ್ರಿಕೆಗಳಲ್ಲಿ ಬರುತ್ತಿರುವ ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೆ ವಾರ ಪತ್ರಿಕೆಗಳಲ್ಲೇ ಹೆಚ್ಚಾಗಿ ಪುಸ್ತಕ ವಿಮರ್ಶೆ ಕಂಡುಬರುತ್ತವೆ. ಪಾಕ್ಷಿಕ, ಮಾಸಿಕ, ತ್ರೈಮಾಸಿಕ ಪತ್ರಿಕೆಗಳಲ್ಲಿ 'ಪುಸ್ತಕ ವಿಮರ್ಶೆ' ಕಂಡು ಬರುವುದು ತುಂಬಾ ಅಪರೂಪ. ಸಾಮಾನ್ಯವಾಗಿ 'ಪುಸ್ತಕ ವಿಮರ್ಶೆ'ಯೆಂದರೆ ಪತ್ರಿಕೆಯ ಮಟ್ಟಿಗೆ ಪ್ರಚಾರವಾಗಿರುತ್ತದೆ. ಪತ್ರಿಕೆ ಮಾಹಿತಿಯನ್ನು ಪ್ರಚಾರ ಮಾಡುವ, ಪ್ರಸರಣ ಮಾಡುವ, ಜನರಿಗೆ ತಲುಪಿಸುವ ಮಾಧ್ಯಮವಾಗಿರುತ್ತದೆ. ಇಂಥ ಪತ್ರಿಕೆಗಳಲ್ಲಿ ಕೃತಿ ಬಂದ ಮೊದಲ ವಾರದಲ್ಲಿಯೇ ಅದರ ಪರಿಚಯ ಪ್ರಕಟಣೆಯಾಗಬೇಕಾಗಿರುತ್ತದೆ. ಇಲ್ಲಿ ಮಾಹಿತಿ ಪ್ರದಾನವೇ ಮುಖ್ಯವಾಗಿರುವುದರಿಂದ ಪಾಕ್ಷಿಕ, ಮಾಸ, ತ್ರೈಮಾಸಿಕ ಪತ್ರಿಕೆಗಳು ಪ್ರಕಟವಾಗುವ ಹೊತ್ತಿಗೆ ಕೃತಿ ಹಳೆಯದಾಗಿರುತ್ತದೆ. ಅದಕ್ಕಾಗಿ ಈ ತರದ ಪತ್ರಿಕೆಗಳಲ್ಲಿ 'ಪುಸ್ತಕ ವಿಮರ್ಶೆ' ಪ್ರಕಟವಾಗುವುದು

ಕಡಿಮೆ ಆದರೆ 'ಲಂಕೇಶ್ ಪತ್ರಿಕೆ' ವಾಗ್ವಾದಗಳಿಗೆ ಸದಾ ಮುಕ್ತ ವಾತಾವರಣವನ್ನು ನಿರ್ಮಿಸುತ್ತಿರುವ ಪತ್ರಿಕೆ. ರಾಜಕೀಯದ ಸಮರ್ಥ ಎದುರಾಳಿಯಾಗಿ ನಿಂತಿರುವ ಈ ಪತ್ರಿಕೆ ತನ್ನ ಧೋರಣೆ ಸೈದ್ಧಾಂತಿಕ ನಿಲುವುಗಳು, ಪತ್ರಿಕೆಯ ಆಶಯಗಳು ಸಾಹಿತ್ಯ ಕ್ಷೇತ್ರದಲ್ಲಿ ತಲ್ಲಣ ಉಂಟುಮಾಡುವಷ್ಟು ಪರಿಣಾಮಕಾರಿಯಾಗಿದೆ. ಸ್ವತಃ ಸಾಹಿತ್ಯ ಆಸಕ್ತಿಗಾಗಿ ಸಾಹಿತಿಯಾಗಿ ಲಂಕೇಶ್‌ರು ಪತ್ರಿಕೆಯನ್ನು ರಾಜಕೀಯ - ಸಾಹಿತ್ಯ ಎರಡೂ ಮುಖದಲ್ಲೂ ಬೆಳಸಿದ್ದಾರೆ. ಇದು ತನ್ನ ಸಾಧ್ಯತೆಯಲ್ಲಿ ಆಕರ್ಷಕವಾಗಬಹುದಾದ ರಾಜಕೀಯವನ್ನು ಅಸ್ತ್ರವಾಗಿಸಿಕೊಂಡಿರುವ ಪತ್ರಿಕೆ. ಇದರಲ್ಲಿ ಬರುವ ಸಾಹಿತ್ಯಕ ಪುಟಗಳು ಒಂದು ಸಾಹಿತ್ಯಕ ಪತ್ರಿಕೆ ಎಷ್ಟರ ಮಟ್ಟಿಗೆ ಸಾಹಿತ್ಯ ವಿಚಾರವನ್ನು ನಿರ್ವಹಿಸುವವೋ ಅಷ್ಟು ಕೆಲಸವನ್ನು ಇದು ನಿರ್ವಹಿಸುತ್ತಿದೆ. ನಮ್ಮ ವಿಶ್ವ ಸಾಹಿತ್ಯ ಪತ್ರಿಕೆಗಳ ಮಾತು ಸಹಸ್ರದಲ್ಲಿದ್ದರೆ, 'ಲಂಕೇಶ್ ಪತ್ರಿಕೆ'ಯ ಮಾತು ಲಕ್ಷಗಳಲ್ಲಿದೆ, ಇದರಿಂದ ಆ ಪತ್ರಿಕೆಗೆ ಪತ್ರಿಕೋದ್ಯಮದ ಸವಾಲುಗಳನ್ನು ಎದುರಿಸಲು ಸಾಧ್ಯವಾಗಿದೆ. ಉಧ್ಯಮದ ಮಾದರಿಯಲ್ಲೇ ಬೆಳೆಯಲು ಸಾಧ್ಯವಾಗಿದೆ.

ಲಂಕೇಶ್ ಪತ್ರಿಕೆಯಲ್ಲಿನ 'ಪುಸ್ತಕ ವಿಮರ್ಶೆ' ಇತ್ತ ಸಾಮಾನ್ಯ ಪತ್ರಿಕೆಗಳ ನಡುವಿಗೂ ಸಿಲುಕದ ಅತ್ತ ಸಾಹಿತ್ಯ ಪತ್ರಿಕೆಗಳ ಪುಸ್ತಕ ವಿಮರ್ಶೆ ಪರಿಧಿಗೆ ಒಳಗಾಗದೆ, ಇವೆರಡರ ನಡುವೆ ತೀರ ಭಿನ್ನವಾದ ಅಷ್ಟೇ ಹರಿತವಾದ ವಿಮರ್ಶೆಯನ್ನು ಮಾಡುತ್ತಿದೆ. ಈ ಪತ್ರಿಕೆಯಲ್ಲಿ ಬರುವ ಪುಸ್ತಕ ವಿಮರ್ಶೆಗಳನ್ನು ಓ.ಎಲ್. ನಾಗಭೂಷಣಸ್ವಾಮಿಯವರು 'ವಿಮರ್ಶೆ ಶಿಕ್ಷೆಯ ತೀರ್ಪಿನಂತೆ' ಎಂದೇ ಕರೆಯುತ್ತಾರೆ. ಅವರು ಲಂಕೇಶ್ ಪತ್ರಿಕೆಯ ವಿಮರ್ಶೆ ಕುರಿತು ಹೀಗೆ ಹೇಳುತ್ತಾರೆ.

ಲಂಕೇಶ್ ಪತ್ರಿಕೆಯ ಯಾವುದೋ ಒಂದು ಸಂಚಿಕೆಯಲ್ಲಿ ಸಂಪಾದಕರು ವಿಮರ್ಶೆಯ 'ಕಾಲಂ' ನಿಷ್ಠುರವಾಗಿರಬೇಕು. ಪುಸ್ತಕ ತನಗೆ ಕೊಟ್ಟ ಸಂತೋಷವನ್ನು ಮುಕ್ತವಾಗಿ ಹೇಳಿಕೊಳ್ಳಬೇಕು, ಅಭಿಪ್ರಾಯ ನಿರ್ದಿಷ್ಟವಾಗಿ ವ್ಯಕ್ತವಾಗಬೇಕು ಎಂಬ ಅಪೇಕ್ಷೆಗಳನ್ನು ಸೂಚಿಸಿದ್ದ ನೆನಪು ಇದೆ. ಸ್ವತಃ ಲಂಕೇಶ್ ಬರೆದ ರಿವ್ಯೂಗಳು ಮತ್ತು ಇತರರು ಬರೆದ ರಿವ್ಯೂಗಳು ಗುಣ ಮತ್ತು ಧೋರಣೆಗಳಲ್ಲಿ ತೀರ ಭಿನ್ನವಾಗಿರುತ್ತವೆ. ಲಂಕೇಶ್ ಬರವಣಿಗೆ ಅವರ ಸೃಜನಶೀಲ ವ್ಯಕ್ತಿತ್ವದ ಒಂದು ವಿಸ್ತರಣೆಯಂತೆ ಕಂಡರೆ ಇತರ ಅನೇಕರು ಬರೆದ ರಿವ್ಯೂಗಳು ಲಂಕೇಶ್ ಧೋರಣೆ-ತೀರ್ಮಾನಗಳನ್ನು ಆವಾಹಿಸಿಕೊಂಡು ಅನುಕರಿಸಿ ಬರೆದಂತೆ ಇರುತ್ತದೆ. ಈ 'ಕಾಲಂ'ನ ರಿವ್ಯೂಗಳಿಗೆ ಇನ್ನೊಂದು ಮುಖ್ಯಲಕ್ಷಣ ಇದೆ. ಅದೇನೆಂದರೆ ಓದುಗರನ್ನು ವಿಚಾರಶೀಲರನ್ನಾಗಿಸುವುದಕ್ಕಿಂತ ಪುಸ್ತಕದ ವಿಷಯ ಸೂಚಿಸುವ ಸಂಗತಿಯ ಬಗ್ಗೆ ಯೋಚನೆಗೆ ತೊಡಗುವಂತೆ ಪ್ರೇರೇಪಿಸುವುದಕ್ಕಿಂತ ರಿವ್ಯೂ ನ್ಯಾಯಧೀಶ ಒಬ್ಬನು ಬರೆದ ಶಿಕ್ಷೆಯ ತೀರ್ಪಿನ ದಾಟಿಯಲ್ಲಿರುತ್ತದೆ. ನೂರಕ್ಕೆ ತೊಂಬತ್ತು ಭಾಗ 'ರಿವ್ಯೂ'ಗಳು ತಾವು ಪರಿಶೀಲಿಸುವ ಕೃತಿಯ ದೌರ್ಬಲ್ಯ ಮತ್ತು ಕೊರತೆಗಳನ್ನು ಎತ್ತಿ ತೋರಿಸುವುದಕ್ಕೆ ಕೊಡುವ ಪ್ರಾಮುಖ್ಯತೆ ಹೆಚ್ಚಿರುತ್ತದೆ. ಇಷ್ಟು ಹೇಳಿದರೂ ಕನ್ನಡದ ಇತರ ಪತ್ರಿಕೆಗಳಲ್ಲಿ ಬರುವ ರಿವ್ಯೂಗಳಿಗಿಂತ 'ಪತ್ರಿಕೆ'ಯ ರಿವ್ಯೂ ಬಹುಶಃ ಹೆಚ್ಚು ಜೀವಂತ. ರಿವ್ಯೂ ಹೀಗಲ್ಲ ಇರಬೇಕಾದದ್ದು ಅನ್ನುವ ಭಿನ್ನಾಭಿಪ್ರಾಯವನ್ನಾದರೂ ಪ್ರಚೋದಿಸುತ್ತವೆ. ಉಳಿದವು ಅಷ್ಟು ಮಾಡಲಾರವು. ರಿವ್ಯೂ ಮಾಡುವ ವ್ಯಕ್ತಿಯ ಗ್ರಹಿಕೆ, ಮೌಲ್ಯ ಪ್ರಜ್ಞೆ ಹೇಗೆ ಇರುತ್ತದೋ ಹಾಗೆಯೇ ಬೇರೆಯವರೂ ಕೃತಿ ಬರೆಯಲು ಸಾಧ್ಯವಿಲ್ಲವಷ್ಟೇ. ಇಂಥ ಪುಸ್ತಕದಲ್ಲಿ ಇಂಥದ್ದು ಇಲ್ಲ, ಇಂಥದ್ದು ಹೀಗೆ ಇರಬೇಕಾಗಿತ್ತು. ಎಂಬ ಎರಡೂ ಧೋರಣೆ ನಿಷ್ಫಲ. ತನಗೆ ಕಂಡದ್ದು ಕಂಡ ಹಾಗೆ, ತನಗೆ ಇರುವ ಭಾಷೆಯಲ್ಲಿ ಬರೆಯುವಾತ ಬರೆದಿರುತ್ತಾನೆ. 'ಹೀಗಿರಬೇಕಿತ್ತು ಅಂದರೆ ಹಾಗೆನ್ನುವವರರೇ ಬರೆಯಬೇಕು 'ಹೀಗಿಲ್ಲ' ಅಂದರೆ ಬರೆದಾತ ತನಗೆ ಸಾಧ್ಯವಿರುವಷ್ಟು ಮಾತ್ರ ಬರೆಯಬಲ್ಲ 'ವಸ್ತುನಿಷ್ಠ' 'ರಿವ್ಯೂ' ನಿಜವಾಗಿ ವಸ್ತುನಿಷ್ಠ ಪಾರಿಭಾಷಿಕಗಳ ಭಾಷೆಯಲ್ಲಿ ಪ್ಯಾಕೇಜು ಮಾಡಲಾಗಿರುತ್ತದೆ.[೭೩]

ಈ ಪತ್ರಿಕೆ ಸಮಾಜವಾದ, ಲೋಹಿಯಾವಾದ ಸಿದ್ಧಾಂತಗಳು ಇಡೀ ಪತ್ರಿಕೆಯ ಜೀವಾಳವಾಗಿರುವಂತೆ ಈ ಪತ್ರಿಕೆಯಲ್ಲಿ ಬರುವ ವಿಮರ್ಶೆಗಳು ಈ ರೀತಿಯ ಧೋರಣೆಗಳನ್ನು ಉಳ್ಳವುಗಳು ಆಗಿವೆ. ಇಲ್ಲಿನ ಬಹುಪಾಲು ಕೃತಿ ವಿಮರ್ಶೆಗಳನ್ನು ಅಭ್ಯಸಿಸಿದರೆ, ಕೃತಿಯನ್ನು ವಿಮರ್ಶಿಸುವಾಗ 'ಕೃತಿ' ವಿಮರ್ಶೆಯ ಕೇಂದ್ರವಾಗಿದ್ದರೂ ಪಾಶ್ಚಾತ್ಯ ಚಿಂತನೆಯ ಒಂದು ವಿಷಯವನ್ನು ಎತ್ತಿಕೊಂಡು ಅದರ ಕೊಡುಗೆಗಳು, ಅದಕ್ಕೆ ಇತರ ಚಿಂತಕರು ಅರ್ಥೈಸಿದ ರೀತಿ ಇವುಗಳನ್ನು ಹೇಳುತ್ತ ಕೃತಿ ಆ ಚಿಂತನೆಗೆ ಒಗ್ಗುತ್ತದೆಯೇ ಎಂಬುದರ ಕಡೆಗೆ ಗಮನ ಹರಿಯುತ್ತದೆ. ಕೃತಿಯಲ್ಲಿನ ವಿಚಾರಗಳು ಪಾಶ್ಚಾತ್ಯ ಚಿಂತನೆಯ ಸಾರವನ್ನು ಹೀರಿಕೊಂಡಿದೆಯೇ ಎಂಬುದನ್ನು ವಿಶ್ಲೇಷಿಸಲಾಗುತ್ತದೆ. ಕೆಲವೊಮ್ಮೆ ಕೃತಿ ನೆಪವಾಗಿ ಪಾಶ್ಚಾತ್ಯ ಚಿಂತನೆಗಳು ಪ್ರಧಾನವಾಗಿ ನಿಲ್ಲುವ ಸಾಧ್ಯತೆಯೂ ಇದೆ.

ಇಲ್ಲಿನ ವಿಮರ್ಶೆ ತುಂಬಾ ವಸ್ತುನಿಷ್ಠವಾಗಿದ್ದು, ಕೃತಿನಿಷ್ಠ ವಿಮರ್ಶೆಯ ಹತ್ತಿರ ಇದೆ. ಇಲ್ಲಿನ ವಿಮರ್ಶೆಗಳು ಮಾಸ್ತಿ- ತಿರುಮಲಾಂಬರ ಕೃತಿ ಬಗ್ಗೆ ಮಾಡಿದ ವಿಮರ್ಶೆಯನ್ನು ನೆನಪಿಗೆ ತರುತ್ತವೆ. ಈ ಪತ್ರಿಕೆಯ ಪುಸ್ತಕ ವಿಮರ್ಶೆಯ ಮತ್ತೊಂದು ಮಾದರಿಯೆಂದರೆ, ಕೃತಿಯ ವಿಚಾರಗಳು ತನ್ನ ತತ್ವ ಸಿದ್ಧಾಂತಗಳಿಗೆ ವಿರುದ್ಧವಾಗಿದ್ದರೆ, ಒಟ್ಟಾರೆ ಕೃತಿಯನ್ನು ಅಲ್ಲಗಳೆದು ವಸ್ತುನಿಷ್ಠವಾಗಿ ವಿರೋಧಿಸುವುದೂ ಉಂಟು. ಇದರ ಅತಿರೇಕ ಕೆಲವೊಮ್ಮೆ ಒಳ್ಳೆಯ ಕೃತಿಗಳನ್ನು ಮೂಲೆಗುಂಪು ಮಾಡುವುದೂ ಉಂಟು.

ಸಂಪಾದಕರಾಗಿದ್ದ ಲಂಕೇಶರವರು ಈ ಎಲ್ಲಾ ತೊಂದರೆಗಳಿಂದ 'ಪುಸ್ತಕ ವಿಮರ್ಶೆ'ಯನ್ನು ತಪ್ಪಿಸಲು ತಮ್ಮ ಪತ್ರಿಕೆಯಲ್ಲಿ ಹಲವಾರು ಸಲ 'ಆದರ್ಶ ಪುಸ್ತಕ ವಿಮರ್ಶೆ' ಹೇಗಿರಬೇಕೆಂದು ಲೇಖನಗಳನ್ನು ಬರೆಯುತ್ತಿದ್ದರು. ಆದರೆ ವಾಸ್ತವವಾಗಿ ಅದನ್ನು ಪಾಲಿಸುವಲ್ಲಿ ಆ ಪತ್ರಿಕೆಯೇ ಎಡವಿರುವುದುಂಟು. ಆ ಪತ್ರಿಕೆಯಲ್ಲಿ ಬರುವ 'ಒಳ್ಳೆ ಪುಸ್ತಕ ವಿಮರ್ಶೆ'ಗಳು ಪತ್ರಿಕೆಗೆ ಹತ್ತಿರವಾಗಿರುವವರೇ ಆಗಿರುತ್ತಿವೆ.

ಈ ಪತ್ರಿಕೆಯ 'ಪುಸ್ತಕ ವಿಮರ್ಶೆ'ಯ ಬಗ್ಗೆ ಏನೆಲ್ಲಾ ಉದ್ರೇಕಕಾರಿ ಬರಹಗಳು ಬಂದರೂ ಇದರ ವಸ್ತುನಿಷ್ಠ ವಿಮರ್ಶೆಯನ್ನು ಯಾರೂ ಅಲ್ಲಗೆಳೆಯುವಂತಿಲ್ಲ. ಇದರಲ್ಲಿನ ವಿಮರ್ಶೆಗಳು ಇತರ ಸಾಮಾನ್ಯ ಪತ್ರಿಕೆಗಳಂತೆ ಧಾವಂತವಾಗಿ ಕಚಿತವಾಗುವಂತಹವುಗಳಾಗಿರಲಿಲ್ಲ. ಒಂದು ಸಾಹಿತ್ಯಕ ಮನಸ್ಸಿನ ಮನೋಭಾವವೇ ಅದರಲ್ಲಿ ಅಭಿವ್ಯಕ್ತವಾಗುತ್ತಿತ್ತು. ಕೆಲವೊಮ್ಮೆಯಷ್ಟೇ ವಿಮರ್ಶೆಗಳು ರಾಜಕೀಯವಾಗಿ ವರ್ತಿಸಿದವು.

೪.೩.೩ ಪಂಥಬದ್ಧ ಪತ್ರಿಕೆಗಳು ಹಾಗೂ ಪುಸ್ತಕ ವಿಮರ್ಶೆಗಳ ಸ್ವರೂಪ

ಪುಸ್ತಕ ವಿಮರ್ಶೆಗಳು ಆಯಾ ಪತ್ರಿಕೆಯ ಒಲವು ನಿಲುವುಗಳನ್ನು ಪ್ರತಿಪಾದಿಸುತ್ತವೆ. ಒಂದು ಪತ್ರಿಕೆ ಯಾವ ವಿಚಾರಗಳನ್ನು ಪ್ರತಿಪಾದಿಸುತ್ತದೆ, ಅದು ಯಾವ ತತ್ವಗಳಿಗೆ ಬದ್ಧವಾಗಿದೆ, ಎಂಬುದನ್ನು ಆ ಪತ್ರಿಕೆಯನ್ನು ಓದುವ ಓದುಗರಿಂದ ಗುರುತಿಸಬಹುದು. ಇದನ್ನು ಸಾಹಿತ್ಯ ಪತ್ರಿಕೆಗಳಿಗೂ ಅನ್ವಯಿಸಿ ಹೇಳಬೇಕು. ಪತ್ರಿಕೆಗಳು ಒಂದು ಸಾಹಿತ್ಯ ಪಂಥವನ್ನು ಕಟ್ಟಿ ಬೆಳಸುವಲ್ಲಿ ಮಹತ್ವದ ಪಾತ್ರವನ್ನು

ವಹಿಸುತ್ತವೆ. 'ಸಾಕ್ಷಿ', 'ರುಜುವಾತು', 'ಸಂಕ್ರಮಣ', 'ಅನ್ವೇಷಣೆ' ಮುಂತಾದವುಗಳ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಗೋಪಾಲಕೃಷ್ಣ ಅಡಿಗರ ಸಂಪಾದಕತ್ವದಲ್ಲಿ ಬರುತ್ತಿದ್ದ 'ಸಾಕ್ಷಿ'ಯಿಂದ ನವ್ಯಸಾಹಿತ್ಯ ಹೆಚ್ಚು ಪ್ರವರ್ಧಮಾನಕ್ಕೆ ಬಂದಿತು. ಅವರು ಮೊದಲ ಸಂಚಿಕೆಯಲ್ಲಿ ಪತ್ರಿಕೆಯ ಧ್ಯೇಯಧೋರಣೆಗಳನ್ನು ವಿವರಿಸುತ್ತಾ 'ಇದು ಯಾವುದೇ ಒಂದು ವ್ಯಕ್ತಿಯ, ಗುಂಪಿನ ಅಥವಾ ಪಂಥದ ಮುಖವಾಣಿಯಾಗಲು ಬಯಸುವುದಿಲ್ಲ. ಎಲ್ಲ ಬಗೆಯ ವಿಚಾರಗಳಿಗೂ ಸಿದ್ಧಾಂತಗಳ ಮಂಡನೆಗೂ ಇಲ್ಲಿ ಯಾವಾಗಲೂ ಅವಕಾಶ ಉಂಟು" ಎಂದು ತಮ್ಮ ಪತ್ರಿಕೆಯ ಉದ್ದೇಶವನ್ನು ಸ್ಪಷ್ಟಪಡಿಸುತ್ತಾರೆ. ಬಹಳ ಗಂಭೀರವಾದ ಉದ್ದೇಶದಿಂದ ಪ್ರಾರಂಭವಾದ 'ಸಾಕ್ಷಿ' ಕ್ರಮೇಣ ತನ್ನ ಮೂಲದ ಉದ್ದೇಶವನ್ನು ಮರೆತು ನವ್ಯ ಚಳುವಳಿಯ ಜೊತೆ ಜೊತೆಯಲ್ಲಿಯೇ ಬೆಳೆಯಿತು. ಎಪ್ಪತ್ತರ ದಶಕದ ಕೊನೆಯಲ್ಲಿ ಕ್ರಮೇಣ ಜನರಲ್ಲಿ ನವ್ಯ ಸಾಹಿತ್ಯದ ಮೇಲಿನ ಆಸಕ್ತಿ, ಕಳಕಳಿ, ಒಲವು ಕಡಿಮೆಯಾದಂತೆಲ್ಲ ಚಳವಳಿಯ ಮುಖವಾಣಿಯಾದ 'ಸಾಕ್ಷಿ'ಯು ತನ್ನ ಅಸ್ತಿತ್ವವನ್ನು ಕಳೆದುಕೊಳ್ಳಬೇಕಾಯಿತು. 'ಸಾಕ್ಷಿ' ಇದ್ದಂಥ ನವ್ಯ ಘಟ್ಟದಲ್ಲಿ ವಿಮರ್ಶೆಯ ವಿವಿಧ ಮಾದರಿಗಳು ಮುನ್ನೆಲೆಗೆ ಬಂದವು. ಏಕೆಂದರೆ ಆ ಸಂದರ್ಭದ ಸಾಹಿತಿಗಳಿಗೆ ಇಂಗ್ಲೀಷ್ ಸಾಹಿತ್ಯದ ಹಿನ್ನೆಲೆಯಿತ್ತು. ಅದರ ಪರಿಣಾಮವಾಗಿ ಕನ್ನಡದ ವಿಮರ್ಶೆಯಲ್ಲಿ ಅನೇಕ ತೀವ್ರ ತರವಾದ ಬದಲಾವಣೆಯಾಗತೊಡಗಿದವು. ಕೃತಿಯನ್ನು ಕೇಂದ್ರವಾಗಿರಿಸಿಕೊಂಡು ಕೃತಿನಿಷ್ಠೆ ವಿಮರ್ಶೆ, ಕೃತಿಯ ಬಂಧ, ವಸ್ತು, ತಂತ್ರ, ಭಾಷೆಯ ಮೂಲಕ ಕೃತಿಯನ್ನು ಮೌಲ್ಯೀಕರಿಸಲು ಮುಖ್ಯ ವೇದಿಕೆಯನ್ನು 'ಸಾಕ್ಷಿ' ನಿರ್ಮಾಣ ಮಾಡಿತ್ತು. ಈಗ 'ಸಾಕ್ಷಿ' ಪತ್ರಿಕೆ ಇತಿಹಾಸವಾಗಿದೆ. 'ಸಾಕ್ಷಿ' ಯಂತಹ ಗಂಭೀರ ಪತ್ರಿಕೆಯೊಂದು ನಿಂತು ಹೋಗಿದ್ದೇ ಈಗ ಒಂದು ಸಮುದಾಯಕ್ಕೆ ಸೀಮಿತವಾದ ದೃಷ್ಟಿಕೋನದಿಂದ. 'ಸಾಕ್ಷಿ'ಯ ಅವಸಾನ ಸಾಹಿತ್ಯ ಕ್ಷೇತ್ರಕ್ಕೆ ಆದ ನಷ್ಟವೇ ಸರಿ. ಹೀಗೆ 'ಸಾಕ್ಷಿ' ಒಂದು ಪಂಥದ ಸೀಮಿತ ಓದುಗರ ಮುಖವಾಣಿಯಾಗಿ ಕೊನೆಗೆ ತನ್ನ ಸ್ಥಾನ ಕಳೆದುಕೊಂಡದ್ದು ಉಳಿದ ಪತ್ರಿಕೆಗಳಿಗೆ ಚಾರಿತ್ರಿಕ ಸತ್ಯವಾಗಿ ಕಾಣುತ್ತದೆ. ಸಾಕ್ಷಿಯಂತೆ ಯು.ಆರ್. ಅನಂತಮೂರ್ತಿಯವರ ಸಂಪಾದಕತ್ವದಲ್ಲಿ ಬರುತ್ತಿದ್ದ 'ರುಜುವಾತು' ಕೇವಲ ನವ್ಯದ ಹಾದಿ ಹಿಡಿದು ಬಹಳ ಸೀಮಿತ ವರ್ಗದ, ಸೀಮಿತ ಓದುಗರ ಪತ್ರಿಕೆಯಾಗಿ ತನ್ನ ಅವನತಿಗೆ ತಾನೇ ಕಾರಣವಾಯಿತು.

ಇದಲ್ಲದೆ ಹೊಸ ಆಲೋಚನೆ, ವಿಮರ್ಶೆಯ ಬಗೆಗಿನ ಹೊಸ ಚಿಂತನೆಗೆ ಅವಕಾಶ ಮಾಡಿಕೊಡುವ ಉದ್ದೇಶದಿಂದ ಪ್ರಾರಂಭಗೊಂಡ 'ಮನ್ವಂತರ' ಹತ್ತು ವರ್ಷಗಳ ಅವಧಿಯಲ್ಲಿ ಹತ್ತು ಸಂಚಿಕೆಗಳನ್ನು ಪ್ರಕಟಿಸಿತು. ೧೯೬೨ರಲ್ಲಿ ಮನೋಹರ ಗ್ರಂಥಮಾಲೆ (ಧಾರವಾಡ) ಯಿಂದ ಆರಂಭವಾದ ಈ ಪತ್ರಿಕೆ ವಿಮರ್ಶೆಗಾಗಿ ಮೀಸಲಾಗಿತ್ತು. ಹೊಸ ರೀತಿಯ ದೃಷ್ಟಿಕೋನ, ಚಿಂತನೆಗಳು ಈ ಪತ್ರಿಕೆ ವಿಮರ್ಶೆಯ ಜೀವಾಳವಾಗಿದ್ದವು. ಅದು ಕೇವಲ ಹತ್ತೇ ಸಂಚಿಕೆಗಳನ್ನು ಪ್ರಕಟಿಸಿದರೂ ಪ್ರಕಟಿಸಿದ ಪ್ರತಿಯೊಂದು ಸಂಚಿಕೆಗಳು ಅತ್ಯಂತ ಮೌಲಿಕವಾದ ಸಂಗ್ರಹಗಳನ್ನು ಒಳಗೊಂಡಂತವುಗಳಾಗಿವೆ. ಬೇಂದ್ರೆಯವರ 'ಕಾವ್ಯೋದ್ಯೋಗ'ದಿಂದ ಹಿಡಿದು ಕೀರ್ತಿನಾಥ ಕುರ್ತಕೋಟಿಯವರ 'ಭೃಂಗದ ಬೆನ್ನೇರಿ' ಯವರೆಗೆ, ಇದರ ಜೊತೆಗೆ ಹಲವು ಸಂಚಿಕೆಗಳಲ್ಲಿನ ಗಮನಾರ್ಹವಾದ ಕನ್ನಡ ಕೃತಿ ಸಮೀಕ್ಷಕ

ಬರಹಗಳು 'ಮನ್ವಂತರ'ದಲ್ಲಿವೆ. ಕನ್ನಡ ವಿಮರ್ಶನ ಕ್ಷೇತ್ರಕ್ಕೆ ಹಲವು ವಿಮರ್ಶಾ ಕೃತಿಗಳನ್ನು, ಸಂಶೋಧನಾತ್ಮಕ ಪ್ರಬಂಧಗಳನ್ನು 'ಮನ್ವಂತರ' ಪತ್ರಿಕೆ ನೀಡಿತು.

ಪತ್ರಿಕೆಗಳಲ್ಲಿ ಒಂದೇ ಸ್ವರೂಪದ ಪುಸ್ತಕ ವಿಮರ್ಶೆಗಳು ಪ್ರಕಟವಾಗುವುದಿಲ್ಲವೆಂದು ಈಗಾಗಲೇ ತಿಳಿದಿದೆ. ಹಾಗೇ ಕೆಲವು ಪತ್ರಿಕೆಗಳಲ್ಲಿ ದೀರ್ಘವಾದ 'ಪುಸ್ತಕ ವಿಮರ್ಶೆ'ಗಳು ಮತ್ತು ಅತಿ ಸರಳವೆನ್ನಬಹುದಾದ 'ಪುಸ್ತಕ ವಿಮರ್ಶೆ'ಗಳು ಮತ್ತು ಅತಿ ಸರಳವೆನ್ನಬಹುದಾದ 'ಪುಸ್ತಕ ವಿಮರ್ಶೆ'ಗಳು ಪ್ರಕಟವಾಗುತ್ತವೆ. ಸಂವಾದ ಪತ್ರಿಕೆಗಳಲ್ಲಿ 'ಹೊಸ ಓದು' ಎಂಬ ಅಂಕಣದಲ್ಲಿ ದೀರ್ಘವಾಗಿ ಕೃತಿಗಳ ಚರ್ಚೆಯಿದ್ದರೆ, 'ಮೊದಲ ನೋಟ' ಎಂಬ ಇನ್ನೊಂದು ಅಂಕಣ ಕೆಲವು ಮುಖ್ಯ ಕೃತಿಗಳನ್ನು ಪರಿಚಯಿಸುತ್ತದೆ, ಹಾಗೆ, 'ಹೊಸತು'ವಿನಲ್ಲಿ 'ಒಳ್ಳೆಯ ಓದು', 'ನಾನು ಓದಿದ ಪುಸ್ತಕ', ಎಂಬ ಅಂಕಣಗಳು, 'ಶೂದ್ರ', ಕನ್ನಡ ವಿಶ್ವವಿದ್ಯಾಲಯದ 'ಪುಸ್ತಕ ಮಾಹಿತಿ' ಪತ್ರಿಕೆಗಳ ಕೆಲವು ಅಂಕಣಗಳು ಈ ಸ್ವರೂಪದವಾಗಿವೆ.

'ಮೊದಲ ನೋಟ' ಎಂಬ ಹೆಸರಿನಲ್ಲಿ ಪ್ರಕಟವಾಗುವ ಕೃತಿ ಸಾಮಾನ್ಯವಾಗಿ ಎಲ್ಲ ಪತ್ರಿಕೆಗಳಲ್ಲಿಯೂ ಕಾಣಬಹುದು, ತರಂಗದ 'ಗ್ರಂಥಾಂತರಂಗ', ಪುಸ್ತಕ ಮಾಹಿತಿಯ 'ಮೊದಲ ನೋಟ' ಕನ್ನಡ ನುಡಿಯ, 'ಪುಸ್ತಕ ಪರಿಚಯ', 'ಹೊಸತು' ಪತ್ರಿಕೆಯ 'ಒಳ್ಳೆಯ ಓದು' ಮುಂತಾದ ಹೆಸರಿನಲ್ಲಿ ಪ್ರಕಟವಾಗುತ್ತವೆ. ಅಂತಹ ಮಾದರಿಗಳನ್ನು ಕೆಲವನ್ನು ನೋಡಬಹುದು.

i. 'ಶ್ರೀ ರಾಮಾಯಣ ಮಹಾನ್ವೇಷಣಂ' ಮಹಾಕಾವ್ಯ ದ್ವಿತೀಯ ಸೋಪಾನ (ಎಂ. ವೀರಪ್ಪ ಮೊಯಿಲಿ)

ಇಪ್ಪತ್ತೊಂದನೆಯ ಶತಮಾನದ ಕನ್ನಡದ ಮೊದಲ ಮಹಾಕಾವ್ಯ 'ಶ್ರೀ ರಾಮಾಯಣ ಮಹಾನ್ವೇಷಣಂ' ಖ್ಯಾತ ಸೃಜನಾತ್ಮಕ ಕವಿ, ಕಾದಂಬರಿಕಾರ, ಕಥೆಗಾರ, ನಾಟಕಕಾರ, ಪ್ರಬಂಧಕಾರ ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಶ್ರೀ ವೀರಪ್ಪ ಮೊಯಿಲಿ ಇದರ ಕರ್ತೃ. ಮೊದಲ ಸಂಪುಟದಲ್ಲಿ ರಾಮಲಕ್ಷ್ಮಣ ಸೀತೆಯರನ್ನು ಚಿತ್ರಕೂಟದ ತನಕ ಕರೆತಂದ ಶ್ರೀ ಮೊಯಿಲಿಯವರು ಈ ಎರಡನೆ ಸಂಪುಟದಲ್ಲಿ ಅವರನ್ನು ಸುಗ್ರೀವನ ಸಖ್ಯ ಬಯಸಿ ಋಷ್ಯಮೂಕ ಪರ್ವತದ ಒಳಗೆ ಕರೆ ತಂದಿದ್ದಾರೆ. ಪ್ರಾಚೀನ ಮಹಾಕಾವ್ಯದ ದಿವ್ಯ ಕಾಥಾಧಾರೆಯ ರಮ್ಯ ನಿರೂಪಣೆ ಜೊತೆಯಲ್ಲಿ ಆಧುನಿಕ ಅನ್ವೇಷಕರಾಗಿ ಯುಗದ ಸ್ಪಂದನಗಳಾದ ಸ್ತ್ರೀಪರ ಚಿಂತನೆ, ಶೋಷಿತರ ಬದುಕು ಬವಣೆಗಳನ್ನು ಅಂದಿನ ಪಾತ್ರಗಳ ಮೂಲಕ ಪ್ರತಿಮಿಸುವ, ಸ್ತುತ್ಯರ್ಹ ಕೆಲಸವನ್ನು ಮಾಡಿರುತ್ತಾರೆ. ಮೊದಲನೆ ಸೋಪಾನಕ್ಕಿಂತ ಇದರಲ್ಲಿ ನಿರೂಪಣೆ ಖಚಿತತೆ ಹಾಗೂ ತೀಕ್ಷ್ಣತೆ ಪಡೆದಿದ್ದು ಭಾಷೆ ಪ್ರೌಢಿಮೆ ಗಳಿಸಿರುವುದನ್ನು ಗಮನಿಸಬಹುದು.[೧೪]

ii. ಕಳಚಿದ ಕೊಂಡಿ ಚಿನುವಾ ಅಚಿಬೆ, (ಅನುವಾದ : ಪ್ರಮೋದ ಮುತಾಲಿಕ)

ಈ ಶತಮಾನದ ಅತಿ ಮಹತ್ವದ ವಿಶ್ವಸಾಹಿತಿಗಳಲ್ಲಿ ಒಬ್ಬರಾದ ಚಿನುವಾ ಅಚಿಬೆಯ ಖ್ಯಾತ ಕಾದಂಬರಿಯ ಕನ್ನಡ ರೂಪಾಂತರ, ವಸಾಹತುಶಾಹಿಯು ಆಫ್ರಿಕಾಕ್ಕೆ ಪ್ರವೇಶಿಸಿದಾಗ, ಸಂಪ್ರದಾಯ ಮತ್ತು ಆಧುನಿಕತೆಗಳ ನಡುವೆ ಒಂದು ತೀವ್ರವಾದ ಸಂಘರ್ಷ ಏರ್ಪಟ್ಟಿತು. ಆ ಸಂಕ್ರಮಣ ಕಾಲದ ದಟ್ಟವಾದ ಅನುಭವಗಳ ಚಿತ್ರಣ ಈ ಕಾದಂಬರಿಯಲ್ಲಿದೆ.[೧೫]

iii. ಮತಾಂತರ ಮತ್ತು ಇತರ ಲೇಖನಗಳು (ಡಾ. ವಿ. ಮುನಿವೆಂಕಟಪ್ಪ)

'ಬಾಣಲೆಯಿಂದ ನೇರ ಬೆಂಕಿಗೆ' ಎಂಬ ಅರಿವು ಇಲ್ಲದೆ ಒಂದು ಮತದಲ್ಲಿ ವಿಶ್ವಾಸ ಕಳೆದುಕೊಂಡ ಜನರು ಇನ್ನೊಂದಕ್ಕೆ ಮತಾಂತರಗೊಳ್ಳುವುದು ಸಾಮಾನ್ಯ. ಮಾನವೀಯ ಮೌಲ್ಯಗಳನ್ನು ಬದಿಗೊತ್ತಿ ಜಾತಿಯ ಪ್ರಾಧಾನ್ಯತೆ ಪಡೆದು ದೌರ್ಜನ್ಯ ಹೆಚ್ಚಿನ ಸಂದರ್ಭಗಳಲ್ಲೆಲ್ಲ ಶೋಷಿತರು ಮೊದಲು ಯೋಚಿಸುವುದು ಮತಾಂತರವನ್ನು. ಇಲ್ಲಿನ ವೈಚಾರಿಕ ಲೇಖನಗಳು ಧರ್ಮ ನಿರಪೇಕ್ಷ ಭಾರತದ ಜನತೆಗೆ ತಿಳುವಳಿಕೆ ಮೂಡಿಸಲು ಪ್ರಯತ್ನಿಸಿವೆ.'[೧೬]

ಪುಸ್ತಕ ವಿಮರ್ಶೆಗೆ ಮೀಸಲಾಗಿರುವ ಕನ್ನಡ ವಿಶ್ವವಿದ್ಯಾಲಯದ 'ಪುಸ್ತಕ ಮಾಹಿತಿ' ಪತ್ರಿಕೆಯು 'ತಿಂಗಳ ಪುಸ್ತಕ', 'ನಮ್ಮ ಪ್ರಕಟಣೆ', 'ಪರಿಶೀಲನೆ', 'ಮೊದಲ ನೋಟ', 'ಹಳೆಯ ಪುಸ್ತಕ', 'ನಾವು ನೋಡಿದ ಪುಸ್ತಕ' ಎಂಬ ಆರು ಅಂಕಣಗಳ ಅಡಿಯಲ್ಲಿ ಪುಸ್ತಕವನ್ನು ಪರಿಚಯ ಮಾಡಿಕೊಡುತ್ತದೆ.

iv. ಗುಬ್ಬಚ್ಚಿ (ಲೇ. ಚಂದ್ರಶೇಖರ ಶಿ. ಹಿರೇಮಠ)

ಮಕ್ಕಳ ಕುರಿತು ಬರೆದ ಕವನ ಸಂಕಲನವಿದು. ಭಾಷೆ ಅಭಿವ್ಯಕ್ತಿ ಸರಳವಾಗಿದ್ದು ಶಿಶು ಸಾಹಿತ್ಯ ಪ್ರಕಾರಕ್ಕೆ ಹೇಳಿ ಮಾಡಿಸಿದ ಶೈಲಿ. ಉಂಡಿಬೇಕು. ಉಂಡಿಬೇಕು ನನಗೆ ತಿನ್ನಲು! ಚೆಂಡು ಬೇಕು, ಬೇಕು ನಿತ್ಯ ಆಡಲು!! ಎಂಬಂತಹ ಪದ್ಯಗಳಲ್ಲಿ ಪ್ರಾಸ - ಅನುಪ್ರಾಸ, ಲಯ ಎಲ್ಲವೂ ಸಂಯೋಜನೆಗೊಂಡಿವೆ. ಕನ್ನಡ ನಾಡು ನುಡಿ, ಪ್ರಕೃತಿ, ನೀರು, ಗಾಳಿ, ಬೆಳಕು ಮುಂತಾದವುಗಳ ಜೊತೆಗೆ ಆದರ್ಶ ಶಿಕ್ಷಕ, ಶಾಲಾ ಆವರಣ, ವಾತಾವರಣ ಎಲ್ಲವನ್ನು ಕುರಿತು ಇಲ್ಲಿ ವಸ್ತುವಾಗಿವೆ. ಕವನಗಳಿಗೆ ಅನುರೂಪವಾದ ಭಾವಚಿತ್ರಗಳು ಮಕ್ಕಳನ್ನು ರಂಜಿಸುತ್ತವೆ. ಆಕರ್ಷಣೀಯವಾದ ಮುಖಪುಟದಿಂದ ಪುಸ್ತಕಕ್ಕೆ ಮೆರಗು ಬಂದಿದೆ?[೧೭]

v. ಆಲೂರ ವೆಂಕಟರಾವ್ (ಲೇ. ವರದರಾಜ ಹುಯಿಲಗೋಳ)

ಕರ್ನಾಟಕದ ಕುಲಪುರೋಹಿತರೆನ್ನುವ ಅನ್ವರ್ಥವೆನ್ನಿಸಬಹುದಾದ ಅಭಿನಾಮವನ್ನು ಗಳಿಸಿದ ಆಲೂರ ವೆಂಕಟರಾವ್ ಕನ್ನಡದ ನವೋದಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿಕೊಟ್ಟ ಪ್ರಮುಖರಲ್ಲಿ ಒಬ್ಬರು. ವರದರಾಜ ಹುಯಿಲಗೋಳರು ಈ ಪುಸ್ತಕದಲ್ಲಿ ಆಲೂರರವರನ್ನು ಅತ್ಯಂತ ಅಭಿಮಾನಪೂರ್ವಕವಾಗಿ ನೆನಪಿಸಿಕೊಂಡಿದ್ದಾರೆ. ಸ್ವಲ್ಪ ಆಯ ತಪ್ಪಿದರೂ ಮತೀಯವೆಂದು ತೋರಬಹುದಾದ ಆಧ್ಯಾತ್ಮ ವಿಚಾರವಾದದ ವ್ಯಕ್ತಿತ್ವದ ವೆಂಕಟರಾಯರನ್ನು ಲೇಖಕರು ಎಲ್ಲಿಯೂ ನಿಷ್ಠುರವಾದ ವಾಗ್ವಾದಕ್ಕೆ ಎಳೆಸುವುದಿಲ್ಲ. ಹೀಗಾಗಿ ಈ ಪುಸ್ತಿಕೆಯು ಕೇವಲ ಪ್ರಾಥಮಿಕ ಪರಿಚಯಾತ್ಮಕ ನೆಲೆಯಲ್ಲಿಯೇ ನಿಲ್ಲುತ್ತದೆ. ಆಲೂರರ ಕ್ರಿಯಾಶೀಲ ವ್ಯಕ್ತಿತ್ವದ ದೂರದ ಪರಿಚಯ ಈ ಪುಸ್ತಕದಿಂದ ಸಾಧ್ಯವಾಗುತ್ತದೆ. ಅವರ ಕ್ರಿಯಾಶೀಲತೆಯ ಆಳ ವಿಸ್ತಾರಗಳನ್ನು ಅವುಗಳ ಅಂದಿನ ಸಂದರ್ಭದಲ್ಲಿನ ಮಹತ್ವವನ್ನು ಹೊಸ ಜನಾಂಗದವರಿಗೆ ಮನಗಾಣಿಸುವಂತೆ ಚಿತ್ರಿಸಲಾಗಿಲ್ಲವೆನ್ನಿಸುತ್ತದೆ.[೧೮]

ಈ ಮೇಲಿನ ಮಾದರಿಗಳನ್ನು ಗಮನಿಸಿದರೆ ಇವುಗಳು ಅತಿ ಸರಳವಾಗಿವೆ. ಇವುಗಳು ಒಟ್ಟಾರೆ ಕೃತಿಯ ಆಶಯವನ್ನು ಕುರಿತು ಹೇಳುತ್ತವೆ. ಕೃತಿ ಒಡಮೂಡಿ ಬಂದ ಹಿನ್ನೆಲೆಗಳನ್ನಷ್ಟೇ ಹೇಳಿ ಮುಗಿಸುತ್ತವೆ. ಇಲ್ಲಿ ಕೃತಿಯ ವಸ್ತು ಏನಿದೆ ಎಂದು ವಿವರ ಕೊಡುವುದಕ್ಕಿಂತ ಕೃತಿ ಹೊಂದಿರುವ ಮತ್ತು ಪ್ರತಿಪಾದಿಸುವ ಆಶಯವನ್ನಷ್ಟೆ ಗಮನಿಸುತ್ತಾರೆ. ಇನ್ನೊಂದು ವಿಷಯವೆಂದರೆ ಈ 'ಮೊದಲ ನೋಟ'ದಲ್ಲಿ ಕೃತಿ ಪರಿಚಯಕಾರರ ಹೆಸರು ಸಾಮಾನ್ಯವಾಗಿ ಕಂಡು ಬರುವುದಿಲ್ಲ, ಹಾಗಾಗಿ ಆ ಮೊದಲ ನೋಟದಲ್ಲಿ

ಪುಸ್ತಕ ವಿಮರ್ಶಕರ ಮನೋಭಾವಕ್ಕಿಂತ ಪತ್ರಿಕೆಯ ತತ್ವಗಳು ಅಡಕವಾಗಿರುತ್ತವೆ.

ಒಂದೇ ಕೃತಿ ಕುರಿತು 'ಮೊದಲ ನೋಟ' ಮತ್ತು 'ಪುಸ್ತಕ ವಿಮರ್ಶೆ' ಹೇಗೆ ಬರುತ್ತದೆ ಎಂಬುದರ ವಿಶ್ಲೇಷಣೆಯನ್ನು ಗಮನಿಸಬಹುದು.

'ಮೊದಲ ನೋಟ' - ಮಣ್ಣಿನ ಗುಣ (ಕೋರಗಲ್ ವಿರೂಪಾಕ್ಷಪ್ಪ)

ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ ಓದಿದ ಒಂದು ಹಾಗೂ 'ಸುಧಾ'ವಾರ ಪತ್ರಿಕೆಯಲ್ಲಿ ಪ್ರಕಟಿಸಿದ ಎಂಟು-ಹೀಗೆ ತಮ್ಮ ಇತ್ತೀಚಿನ ಒಂಬತ್ತು ಕಥೆಗಳನ್ನು ಲೇಖಕರು ಇಲ್ಲಿ ಸಂಕಲಿಸಿ ಕೊಟ್ಟಿದ್ದಾರೆ. ಮೊದಲ ಕಥೆ 'ಹಸಿರೆಲೆ' ಬಿಟ್ಟರೆ ಮಿಕ್ಕೆಲ್ಲವೂ ಹೈದರಾಬಾದ್ ಕರ್ನಾಟಕದ ಹಳ್ಳಿಗಾಡಿನ ಹಿನ್ನೆಲೆ ಹೊಂದಿವೆ. ಈ ಎಲ್ಲಾ ಕಥೆಗಳಲ್ಲೂ ಹಳ್ಳಿಗಾಡಿನ ಸಾಮಾನ್ಯ ಜನ ತಮ್ಮ ಮಣ್ಣಿನ ಗುಣ'ಗಳನ್ನು ಕಳೆದುಕೊಂಡು ತಮ್ಮ ಒಟ್ಟು ಬದುಕಿನ ನೆಮ್ಮದಿ ಕಳೆದುಕೊಳ್ಳುತ್ತಿರುವ ದುರಂತಗಳ ಚಿತ್ರಣವಿದೆ. ಕೊಪ್ಪಳದ ಸುತ್ತಮುತ್ತದಲ್ಲಿನ ಜನಜೀವನದ ಆಡು ಭಾಷೆಯನ್ನು ಸಶಕ್ತವಾಗಿ ಬಳಸಿಕೊಂಡು ಸ್ವಾರಸ್ಯಕರವಾಗಿ ಕತೆ ಹೇಳಬಲ್ಲ ಈ ಲೇಖಕರ ದೌರ್ಬಲ್ಯವೆಂದರೆ ಕತೆಯಲ್ಲಿ ಸ್ವತಃ ತಾನೇ ಪ್ರವೇಶಿಸಿ ಕಥೆಯ ಹರಿವನ್ನು manipulate ಮಾಡಿ ಅದನ್ನು ಒಂದು anticlimax ನಲ್ಲಿ ಮುಕ್ತಾಯಕ್ಕೆ ತರುವ ಗೀಳು. ಕಥೆಗಾರನೂ ಹೀಗೆ 'ಮಣ್ಣಿನ ಗುಣ' ಕಳೆದುಕೊಂಡರೆ ಹಳ್ಳಿಗಾಡಿನ ಹಿನ್ನೆಲೆಯಿದ್ದರೂ ಕಥೆಗಳಲ್ಲಿ ಹೊಡೆಯುವುದು 'ಮಸಾಲೆ ದೋಸೆ' ವಾಸನೆಯೇ .... ತಮ್ಮ ಮೊದಲ ಕಥಾಸಂಕಲನ 'ನ್ಯಾಯ'ದ ಮೂಲಕ ಆಸೆ ಹುಟ್ಟಿಸಿದ್ದ ಈ ಲೇಖಕರು ಜನಪ್ರಿಯತೆಯ ಉರುಳಿಗೆ ಸಿಕ್ಕಿರುವುದು ವಿಷಾದನೀಯ?[೯೯]

'ಪುಸ್ತಕ ವಿಮರ್ಶೆ' ಮಣ್ಣಿನ ಗುಣ ಲೇ. ಕೋರಗಲ್ ವಿರೂಪಾಕ್ಷಪ್ಪ ವಿಮರ್ಶಕರು - (ಎಸ್ ವಿ. ಪ್ರಭಾವತಿ)

ಈಗಾಗಲೇ ಒಳ್ಳೆಯ ಕಥೆಗಾರರೆಂದು ಹೆಸರು ಮಾಡಿರುವ ಕೋರಗಲ್ ವಿರೂಪಾಕ್ಷಪ್ಪನವರ ಎರಡನೆಯ ಸಂಕಲನ ಇದು. ಮೊದಲನೆಯ ಸಂಕಲನ 'ನ್ಯಾಯ' ಅನೇಕ ವಿಮರ್ಶಕರಿಂದ ಮೆಚ್ಚುಗೆಯ ಮಾತುಗಳನ್ನು ಕಂಡಿದೆ. ವೃತ್ತಿಯಿಂದ ಗಣಿತದ ಅಧ್ಯಾಪಕರಾಗಿರುವ ವಿರೂಪಾಕ್ಷಪ್ಪನವರ ಈ ಸಂಕಲನದ ಒಂಬತ್ತು ಕಥೆಗಳಿಗೂ ಮುಖ್ಯವಸ್ತು ಗ್ರಾಮೀಣ ಬದುಕು, ಕೊಪ್ಪಳದ ಸುತ್ತ ಮುತ್ತಲು ಸಾಂಸ್ಕೃತಿಕ ಪರಿಸರ, ಗ್ರಾಮ ಜೀವನದ ಭಾಷೆಯ ಸೊಗಡು ಇವುಗಳಿಂದ ಕೂಡಿರುವ ಈ ಎಲ್ಲಾ ಕತೆಗಳೂ ಈಗಾಗಲೇ ನಾಡಿನ ಹಲವಾರು ಪತ್ರಿಕೆಗಳಲ್ಲಿ ಆಕಾಶವಾಣಿಯಲ್ಲಿ ಬೆಳಕು ಕಂಡ ಪತ್ರಿಕೆಯ ಹೆಸರು ಮತ್ತು ಇಸವಿ ನಮೂದಿತವಾಗಿದೆ.

"ನನ್ನ ಕತೆಗಳು ನಗರದ ನಾಗರೀಕತೆಯಿಂದ ದೂರ ಉಳಿದು ಹಳ್ಳಿಯ ಮುಗ್ಧ ಬದುಕಿನಲ್ಲಿ ಹುಟ್ಟಿ ಬೆಳೆಯುತ್ತವೆ." ಎಂದು ಲೇಖಕರೇ ಹೇಳಿರುವುದು ಮತ್ತು ಉತ್ತರ ಕರ್ನಾಟಕದ ಅದರಲ್ಲೂ ಹೈದರಾಬಾದ್ ಕರ್ನಾಟಕದ ಮಣ್ಣಿನ ಭಾಷೆ ಭಾವನೆಗಳಿಂದ ಕೂಡಿ ಈ ಸಂಕಲನದ ಹೆಸರು ನಿಜವಾಗಿಯೂ ಅನ್ವರ್ಥವಾಗಿದೆ. ಮಣ್ಣಿನಿಂದ ದೂರವಾಗಿ ಬದುಕುತ್ತಿದ್ದರೂ ತಮ್ಮ ಬೇರುಗಳನ್ನೆಲ್ಲಾ ಮಣ್ಣಿನಲ್ಲೇ ಗುರುತಿಸುವ ಕತೆಗಾರರಿಗೆ ಆ ಮಣ್ಣಿನ ಪ್ರತಿಯೊಂದು ಅನುಭವವೂ, ಪ್ರತಿಯೊಂದು ಘಟನೆಯೂ ಕತೆಯಾಗುತ್ತದೆ, ಕಾವ್ಯವಾಗುತ್ತದೆ. ಅನಕ್ಷರತೆ, ಮೂಢತೆ ಸಂಪ್ರದಾಯಬದ್ಧ ಬದುಕು ಈ ಮೂರನ್ನು ನಮ್ಮ ಊರಿನಲ್ಲಿ ಕಂಡಿದ್ದೇನೆ ಎನ್ನುವ ಲೇಖಕರಿಗೆ ಅದನ್ನೇ ಕತೆಯಾಗಿಸುವ ಜಾಣ್ಮೆ ಇದೆ. ಮೌಢ್ಯ ಹಾಗೂ ಶೋಷಣೆಯ ವಿರುದ್ಧದ ಪ್ರಗತಿಪರ ಧ್ವನಿ ಇದೆ. ಸನ್ನಿವೇಶ ನಿರ್ಮಾಣ, ವಾತಾವರಣ ಸೃಷ್ಟಿ, ಇವುಗಳಲ್ಲಿ ಸಂಯಮ, ಮಾನವೀಯ ಕಳಕಳಿ, ನೊಂದವರ ಬಗ್ಗೆ ಅನುಕಂಪ, ಶೋಷಿಸುವವರ ವಿರುದ್ಧ ಸಿಟ್ಟು -ಇವು ಈ ಎಲ್ಲಾ ಕತೆಗಳ ಸ್ಥಾಯಿಯಾಗಿವೆ.

'ಹಸಿರೆಲೆ' ಆಧುನಿಕ ಪರಿಸರದಲ್ಲಿ ಶಿಥಿಲಗೊಳ್ಳುವ ಮಾನವೀಯ ಸಂಬಂಧಗಳನ್ನು ಚಿತ್ರಿಸಿದರೂ ಕಥೆಯ ಅಂತ್ಯ ಆಶಾ ಭಾವನೆಯಿಂದ ಕೂಡಿದೆ. 'ಕಥೆ ಅಂದ್ರೆ ಕಥೆ ಅಲ್ಲ ತನ್ನ ಊರಿನ ವ್ಯಕ್ತಿಯೇ. ಮಣ್ಣಿನ ಋಣ ತಾಯಿಯ ಋಣ ಕಡಿದು ಕೊಂಡು ಯಾಂತ್ರಿಕವಾಗಿ ಬಿಡುವುದರ ಚಿತ್ರ. ಬಂದರೆ ಜೀವನದ 'ಚಿತ್ರ ಬರೀರಿ' ಎಂದು ಕಥೆಗಾರರಿಗೆ ತಾಕೀತು ಮಾಡುವ ರಂಗಪ್ಪನೇ ಕಥೆಗೆ ವಸ್ತುವಾಗಿ ಬಿಡುತ್ತಾನೆ. 'ಶಿಷ್ಯ' ವಿಶಿಷ್ಟವಾಗಿದೆ. ಉದ್ದಕ್ಕೂ ಶಿಷ್ಯನ ವರ್ತನೆ ಬಗ್ಗೆ ಅನುಮಾನ ಮೂಡಿಸಿ ಕೊನೆಗೆ ಗುರುವೇ ಶಂಕಿತನ ಸ್ಥಾನದಲ್ಲೇ ನಿಲ್ಲುತ್ತಾನೆ. 'ಮುಖವಾಡ' ಇದ್ದಕ್ಕಿದಂತೆ ಗೋಚರವಾಗುವ ಹರಿದ ಕಿವಿ. ಆರುಬೆರಳು ಹಳೆಯ ಕತೆಯನ್ನು ಬಿಚ್ಚಿ ಬಿಡುತ್ತವೆ. ಹೊಸ ಸಂಬಂಧವನ್ನು ಕೊಚ್ಚಿ ಬಿಡುತ್ತವೆ. "ಬೆಲ್ಲದ ಸುತ್ತು" ಹಣವಿದ್ದರೆ ಮಾತ್ರ ಬಂಧು ಬಾಂಧವ ಎಂಬ ಸತ್ಯವನ್ನು ಮನಮುಟ್ಟುವಂತೆ ಹೇಳುತ್ತದೆ. "ಕೊಲ್ಲವವ ಕಾಯುವವ" ವರ್ಗ ವೈಷಮ್ಯದ ಎಳೆಗಳನ್ನು ತನ್ನೊಳಗಿಟ್ಟುಕೊಂಡು ಅತ್ಯಂತ ಕುತೂಹಲಕರವಾದ ರೀತಿಯಲ್ಲಿ ಅಂತ್ಯವಾಗುತ್ತದೆ. ಸಂಕಲನಕ್ಕೆ ಶೀರ್ಷಿಕೆಯಿತ್ತ 'ಮಣ್ಣಿನ ಗುಣ' ಸಂಕಲನದ ಅತ್ಯುತ್ತಮ ಕಥೆ ಯಾವ ಆಡಂಬರವಿಲ್ಲದೆ ಈ ಕತೆಯ ಗಂಗವ್ವ ತನ್ನ ಗೊತ್ತುಗುರಿಗಳನ್ನು ಕಂಡು ಕೊಳ್ಳುವುದು ಅತ್ಯಂತ ಸಹಜವಾಗಿದೆ.

ಲವಲವಿಕೆಯ ಜೀವನೋತ್ಸಾಹ, ದೇಸಿ ಸೊಗಡಿನ ಭಾಷೆ, ಬಂಡಾಯ ಮನೋಧರ್ಮ ಕತೆಗಳ ಅಂತರಂಗದ ಗುಣಾತ್ಮಕ ಅಂಶಗಳು.[೨೦]

ಮೇಲಿನ ಈ ಎರಡು ಮಾದರಿಗಳನ್ನು ಗಮನಿಸಿದರೆ 'ಮೊದಲ ನೋಟ'ದಲ್ಲಿ ಪರಿಚಯಾತ್ಮಕ ಧ್ವನಿಯಲ್ಲಿ ಲೇಖಕ ಹೊರಳಿರುವ ದಾರಿಯನ್ನು ಮತ್ತು ಬದಲಾಯಿಸಿಕೊಳ್ಳಬೇಕಾದ ನಿಲುವನ್ನು 'ಹಳ್ಳಿಗಾಡಿನ ಹಿನ್ನೆಲೆಯಿದ್ದರೂ ಕಥೆಗಳಲ್ಲಿ ಹೊಡೆಯುವುದು ಮಸಾಲೆ ದೋಸೆ ವಾಸನೆಯೇ' ಎಂದು ರೂಪಕಗೊಳಿಸುವುದರ ಮೂಲಕ ಗುರುತಿಸಲಾಗಿದೆ. 'ಮೊದಲ ನೋಟ' ನೇತ್ಯಾತ್ಮಕ ನೆಲೆಯ ದೃಷ್ಟಿಯಾದರೆ, 'ಪುಸ್ತಕ ವಿಮರ್ಶೆ' ಇದಕ್ಕಿಂತ ಭಿನ್ನವಾದುದಾಗಿದೆ. ಸಂಕ್ರಮಣದ ಈ ಲೇಖನದಲ್ಲಿ ಒಳ್ಳೆಯ ಕಥೆಗಾರರೆಂದು ಹೇಳುತ್ತಲೇ ವಿಮರ್ಶೆಗೆ ಪ್ರವೇಶಿಸಲಾಗಿದೆ. ಆ ಮೂಲಕ ಕೃತಿಯ ಇತರ ಬಾಹ್ಯಪರಿಕರಗಳ ಮೂಲಕ ಒಳಪ್ರವೇಶಿಸಲಾಗಿದೆ. ಲೇಖಕನ ಮಾತುಗಳನ್ನು ಎತ್ತಿಕೊಂಡು, ಅವರ ಮಾತುಗಳನ್ನು ಸಮರ್ಥಿಸುವಂತೆ ವಿಮರ್ಶೆ ರಚಿತವಾಗಿದೆ. ಪ್ರತಿಯೊಂದು ಕತೆಯು ಗೆಲ್ಲುವ ಬಗೆಯನ್ನು ಒಂದೊಂದೇ ಸಾಲಿನಲ್ಲಿ ಕತೆಯ ಸಾರವನ್ನು ಹೇಳುವುದರ ಮೂಲಕ ಗುರುತಿಸಿದ್ದಾರೆ. ಈ ಎರಡು ಮಾದರಿಗಳ ಸ್ವರೂಪಗಳು ಬೇರೆ ಬೇರೆಯಾಗಿವೆ, ಆದರೆ ಕೃತಿ ಮಾತ್ರ ಒಂದೇ. ಒಂದು ತಿರಸ್ಕಾರದ ನೆಲೆಯಲ್ಲಿ ಕೃತಿಯ ಸೋಲನ್ನು ಗುರುತಿಸಿದರೆ. ಮತ್ತೊಂದರಲ್ಲಿ ಒಪ್ಪಿತ ನೆಲೆಯಲ್ಲಿಯೇ ಕೃತಿಯನ್ನು ಎತ್ತಿ ಹಿಡಿಯಲಾಗಿದೆ. ಒಂದೇ ಕೃತಿ ಕುರಿತ ಈ ಎರಡೂ ಲೇಖನಗಳಿಗೂ ಒಂದೊಂದು ವರ್ಷದ ಅಂತರವಿದೆ. ಈ 'ಕಾಲ' ದ ಅಂತರ ಪುಸ್ತಕ ವಿಮರ್ಶೆಯಲ್ಲಿ ಸರಿಯಾಗಿ ಕೃತಿಯನ್ನು ಅರ್ಥೈಸುವುದಕ್ಕೆ ಕಾರಣವಾಗಿರಬಹುದು. ಅಲ್ಲದೆ ವಿಮರ್ಶಕರು ಕೃತಿಯನ್ನು ಕಾಲದ ಗಡು ದಾಟಿ ವಿಶ್ಲೇಷಿಸಿರುವುದು ಇದಕ್ಕೆ ಕಾರಣವಾಗಿರಬಹುದು. ಕೆಲವೊಮ್ಮೆ ಅವರ ಮನೋಭಾವವು, ಇಲ್ಲವೇ ಪತ್ರಿಕೆಗಳ ಹಿಂದಿನ ತಾತ್ವಿಕ ಧೋರಣೆ ಇವುಗಳ ಪೂರಕ ಅಂಶಗಳಾಗಿರಬಹುದಾಗಿದೆ.

೪.೩.೪ ಸೈದ್ಧಾಂತಿಕ ಹಿನ್ನೆಲೆಯ ಪತ್ರಿಕೆಗಳು ಮತ್ತು ಪುಸ್ತಕ ವಿಮರ್ಶೆ

ಪತ್ರಿಕೆಗಳು ಪುಸ್ತಕ ವಿಮರ್ಶೆಗೆ ಬಂದಂಥ ಎಲ್ಲ ಕೃತಿಗಳನ್ನು ವಿಮರ್ಶಿಸುವುದಿಲ್ಲ. ಅವುಗಳಿಗೆ ತನ್ನದೇ ತಾತ್ವಿಕ ಸಿದ್ಧಾಂತಗಳಿರುತ್ತವೆ. ಪ್ರತಿಯೊಂದು ಪತ್ರಿಕೆಯು ಒಂದಲ್ಲ ಒಂದು ತತ್ವಗಳಿಗೆ ಬದ್ಧವಾಗಿರುತ್ತದೆ. ಹಾಗೆಯೇ ಅದರ ಮೂಲಭೂತವಾದಂತಹ ಆಶಯಗಳು, ಅದನ್ನು ಅವಲಂಬಿಸಿರುವ ಓದುಗರು, ಇವುಗಳನ್ನು ಒಳಗೊಂಡ ವಿಚಾರಗಳನ್ನು ಆ ಪತ್ರಿಕೆ ನೀಡುತ್ತದೆ. ಓದುಗರ ಪಾತ್ರವೇ ಪತ್ರಿಕೆಯ ಕೇಂದ್ರ ಬಿಂದು ಮತ್ತು ಮಹತ್ತರವಾದುದರಿಂದ ಅನಿವಾರ್ಯವಾಗಿ ಓದುಗರು ಬಯಸುವ ವಿಚಾರಗಳಿಗೆ ಪತ್ರಿಕೆಯು ಒತ್ತು ನೀಡಬೇಕಾಗಿರುತ್ತದೆ. ಈ ಕಾರಣ ಒಂದು ಪತ್ರಿಕೆಯ ಕೃತಿ ವಿಮರ್ಶೆಗೂ ಇನ್ನೊಂದು ಪತ್ರಿಕೆಯ ಪುಸ್ತಕ ವಿಮರ್ಶೆಗೂ ಭಿನ್ನ ವ್ಯತ್ಯಾಸಗಳಿರುತ್ತವೆ. ಎಡಪಂಥೀಯ ವಿಚಾರಕ್ಕೆ ಬದ್ಧವಾದ ಪತ್ರಿಕೆಗಳು ಹೆಚ್ಚು ಎಡಪಂಥೀಯ ವಿಚಾರಗಳನ್ನೊಳಗೊಂಡ ಕೃತಿಗಳಿಗೆ ಮಹತ್ವ ಕೊಡುತ್ತವೆ. ಹಾಗೆಯೇ ಧಾರ್ಮಿಕವಾದೀ ನಿಲುವನ್ನು ಹೊಂದಿರುವ ಪತ್ರಿಕೆಗಳು ಧಾರ್ಮಿಕ ಕೃತಿಗಳನ್ನು ವೈಭವೀಕರಿಸಿ ವಿಮರ್ಶಿಸುವುದನ್ನು ಕಾಣಬಹುದು. ಕೆಲವು ಮಹಿಳಾ ಪತ್ರಿಕೆಗಳು ಕೇವಲ ಮಹಿಳೆಯರ ಕೃತಿಗಳನಷ್ಟೇ ವಿಮರ್ಶಿಸುತ್ತದೆ. ಹೀಗೆ ಆಯಾ ಪತ್ರಿಕೆಯ ಆಶಯಗಳಿಗನುಗುಣವಾಗಿ ಪುಸ್ತಕಗಳ ಆಯ್ಕೆ ಈ ಪುಸ್ತಕ ವಿಮರ್ಶೆ ರೂಪು ಪಡೆಯುತ್ತದೆ.

ಮಹಿಳಾ ಜಾಗೃತಿ ಪತ್ರಿಕೆಯಲ್ಲಿ ಬಂದ ಒಂದು ಪುಸ್ತಕ ವಿಮರ್ಶಾ ಮಾದರಿ ಹೀಗಿದೆ.

'ಮಹಿಳಾ ಅಧ್ಯಯನ' (ಲೇಖಕರು : ನೇಮಿಚಂದ್ರ ವಿಮರ್ಶಕರು - ಶ್ರೀ)

ಮಹಿಳಾ ಅಧ್ಯಯನ ಅಥವಾ ಸ್ತ್ರೀವಾದಿ ವಿಮರ್ಶೆ ಬಹಳಷ್ಟು ಮಟ್ಟಿಗೆ ಸಾಹಿತ್ಯ ಹಾಗೂ ಸಂಸ್ಕೃತಿಯ ಪರಿಧಿಗೆ ಸೀಮಿತವಾಗಿ ಬಿಟ್ಟಿದೆ. ವಿಜ್ಞಾನದ ಓದಿಗೆ ಸ್ತ್ರೀವಾದಿ ವಿಚಾರಗಳನ್ನು ಅಳವಡಿಸುವುದಂತೂ ತೀರ ವಿರಳ ಬಹಳಷ್ಟು ಜನರ ಪ್ರಕಾರ ವಿಜ್ಞಾನ ಹಾಗೂ ತಂತ್ರಜ್ಞಾನ ಈ ಎಲ್ಲಾ ತರದ ವಿಮರ್ಶೆಗಳನ್ನು ಮೀರಿದ 'ಕಳಂಕರಹಿತ' ಜ್ಞಾನ. ಆದರೆ ವಿಜ್ಞಾನ ಪುರುಷ ಕೇಂದ್ರಿತ ಪೂರ್ವಗ್ರಹಗಳನ್ನು ಮೀರಿದ್ದಲ್ಲ ಎಂಬುದನ್ನು ಇತ್ತೀಚಿನ ದಿನಗಳಲ್ಲಿ ಸ್ತ್ರೀವಾದಿಗಳು ಉದಾಹರಣೆಗಳ ಮೂಲಕ ತೋರಿಸಿದ್ದಾರೆ. ವಿಜ್ಞಾನ ಲೋಕದ ಈ ಸ್ತ್ರೀವಾದಿ ಹೊಸ ಚಿಂತನೆಗಳನ್ನು ಕನ್ನಡದ ಹೆಣ್ಣುಮಕ್ಕಳಿಗೆ ಪರಿಚಯಿಸುವ ಪ್ರಯತ್ನವಾಗಿ ನೇಮಿಚಂದ್ರರವರ 'ಮಹಿಳಾ ಅಧ್ಯಯನ' ಎಂಬ ಪುಸ್ತಕ ಹೊರ ಬಂದಿದೆ. ಈ ಪ್ರಬಂಧ ಸಂಗ್ರಹದ ಮೊದಲ ಪ್ರಬಂಧದಲ್ಲಿ ನೇಮಿಚಂದ್ರ ಹೀಗೆನ್ನುತ್ತಾರೆ. "ಸ್ತ್ರೀವಾದಿ ದೃಷ್ಟಿಕೋನವು ಕೇವಲ ಸಾಹಿತ್ಯವನ್ನು ಓದುವ ಅಥವಾ ವಿಮರ್ಶಿಸುವ ಹೊಸ ಪರಿಯಾಗಿ ಮುಗಿಯುವುದಿಲ್ಲ. ಸ್ತ್ರೀವಾದವು ಸುತ್ತು ಪ್ರಪಂಚವನ್ನು ಬದಲಿಸುವ ಪ್ರಜ್ಞಾಪೂರ್ವಕ ಪ್ರಯತ್ನದ ಮಹತ್ವಕಾಂಕ್ಷೆಯನ್ನು ಹೊಂದಿದೆ.

ಮುಂದಿನ ಪ್ರಬಂಧ ಮೊಟ್ಟ ಮೊದಲ ವೈದ್ಯಕೀಯ ರಂಗ ಪ್ರವೇಶಿಸಿದ ಮಹಿಳೆಯರು ಎದುರಿಸಿದ ಸವಾಲುಗಳನ್ನು ಚರ್ಚಿಸುತ್ತದೆ. ಆಗ್ನಡೈಸ್ ಎಂಬ ಗ್ರೀಕ್ ಮಹಿಳೆ ಕ್ರಿ. ಪೂ ನಾಲ್ಕನೇ ಶತಮಾನದಲ್ಲಿ ಗಂಡು ವೇಷ ಧರಿಸಿ ವೈದ್ಯಶಾಸ್ತ್ರ ಕಲಿತಳಂತೆ. ಆವಳ ಪ್ರಸಿದ್ಧಿಯನ್ನು ಕಂಡು ಕರುಬಿದ ಆನೇಕರು ಈಕೆ ಸ್ತ್ರೀಯರನ್ನು ಕೆಡಿಸುತ್ತಾಳೆ ಎಂದು ಆರೋಪಿಸಿದರಂತೆ, ತನ್ನ ಜೀವ ಉಳಿಸಿಕೊಳ್ಳಲು ಈಕೆ ತಾನು ಸ್ತ್ರೀ ಎಂಬುದನ್ನು ಬಯಲು ಮಾಡಿದಾಗ ಈಕೆ ಪುರುಷರಿಗೆ ಮೀಸಲಾದ ಕ್ಷೇತ್ರವನ್ನು ಪ್ರವೇಶಿಸಿದ ಆರೋಪ ಹೊರ ಬೇಕಾಯಿತು. "ಮೂಲತಃ ಔಷಧಿ, ಮದ್ದು, ಆರೋಗ್ಯ ಸುಧಾರಣೆ, ಬಸಿರು ಬಾಣಂತನಗಳಲ್ಲಿ ಆರೈಕೆ ಇವು ಹೆಂಗಸರ ಕೈಯಲಿದ್ದವು. ವೈದ್ಯಕೀಯ ವ್ಯವಸ್ಥಿತ ಸಂಸ್ಥೆಯಾಗಿ ರೂಪುಪಡೆದಂತೆ ಕೈಗಾರಿಕಾ ಕ್ರಾಂತಿಯೊಡನೆ

'ವಾಸಿ ಮಾಡುವ ಕ್ರಿಯೆ' ಹಣದ ಮೌಲ್ಯ ಪಡೆದಂತೆ ಅದು ಪೂರ್ಣ ಪುರುಷರ ಹಕ್ಕಿನ ರಂಗವಾಗಿ ಮಹಿಳೆಯರನ್ನು ಹೊರತು ಪಡಿಸಿತು" ಎನ್ನುತ್ತಾರೆ ನೇಮಿಚಂದ್ರ. ರೋಗ ನಿವಾರಣೆ ಮಾಡಿದ ಸ್ತ್ರೀಯರನ್ನು ಮಾಟಗಾತಿಯರೆಂಬ ಹಣೆಪಟ್ಟಿ ಹಚ್ಚಿ ಜೀವಂತ ಸುಟ್ಟ ಘಟನೆಗಳನ್ನು ಈ ಪ್ರಬಂಧ ಚರ್ಚಿಸುತ್ತದೆ. ಭಾರತದ ವೈದ್ಯಕೀಯ ರಂಗದಲ್ಲಿ ಸ್ತ್ರೀಯರ ಸಾಧನೆಯ ಪ್ರಸ್ತಾಪ ಕೂಡ ಈ ಪ್ರಬಂಧದಲ್ಲಿ ಇದೆ. ಭಾರತದ ಪ್ರಪ್ರಥಮ ವೈದ್ಯ ಆನಂದಿ ಬಾಯಿ ಜೋಶಿ, ಈಕೆ ಬಹಳ ಕಷ್ಟಪಟ್ಟು ವಿದೇಶದಲ್ಲಿ ವೈದ್ಯಕೀಯ ಪದವಿ ಗಳಿಸಿ ಭಾರತಕ್ಕೆ ಹಿಂದಿರುಗಿದಾಗ ಕ್ಷಯರೋಗಕ್ಕೆ ತುತ್ತಾಗಿದ್ದಳು. ಈಕೆಯ ಕುಟುಂಬದ ವೈದ್ಯ ವಿದೇಶದಿಂದ ಹಿಂದಿರುಗಿದಳು ಎಂಬ ಕಾರಣಕ್ಕಾಗಿ ಚಿಕಿತ್ಸೆ ನೀಡಲು ನಿರಾಕರಿಸಿದ್ದರಿಂದ ಈಕೆ ಇಪ್ಪತ್ತೆರಡನೆ ವಯಸ್ಸಿನಲ್ಲಿ ತೀರಿಕೊಂಡದ್ದು ಚರಿತ್ರೆಯ ವಿಪರ್ಯಾಸ.

ಈ ಸಂಕಲನದಲ್ಲಿ ಭಾರತದ ಮಹಿಳಾ ವೈಮಾನಿಕರು ಹಾಗೂ ವಿಜ್ಞಾನಿಗಳ ಬಗ್ಗೆ ಕೂಡ ಪ್ರಬಂಧಗಳಿವೆ. ಸ್ವತಃ ಇಂಜಿನಿಯರ್ ಆದ ನೇಮಿಚಂದ್ರ ತಮ್ಮ ಓದಿನ ದಿನಗಳಲ್ಲಿ ತಾವು ಎದುರಿಸಿದ ಸವಾಲುಗಳ ಬಗ್ಗೆ ಮಾತನಾಡುತ್ತಾ ಹೀಗೆನ್ನುತ್ತಾರೆ. "ನಮ್ಮ ಹೆಣ್ಣು ಮಕ್ಕಳ ಮುಂದಿರುವ ಮಾದರಿಗಳೇನು? ಮಾಧ್ಯಮಗಳು ನಿರಂತರವಾಗಿ ಬಿತ್ತರಿಸುವ ರೋಲ್ ಮಾಡಲ್‌ಗಳು ಯಾವುವು? ಸುಶ್ಮಿತಾಸೇನ್, ಐಶ್ವರ್ಯರಾಯ್, ಯುಕ್ತಾಮುಖಿ ಇವರೇ ಸ್ತ್ರೀ ಮಾದರಿಗಳಂತೆ ಸತತವಾಗಿ ಬಿತ್ತರಿಸುವುದನ್ನು ನೋಡುತ್ತೇವೆ. ಇವರು ಕೇವಲ ಮಾಧ್ಯಮಗಳ ಕೊಳ್ಳುಬಾಕ ಸಂಸ್ಕೃತಿ ರೂಪಿಸಿದ 'ಸೌಂದರ್ಯ ರಾಣಿಯರು' ಮಾತ್ರ. ಇವೇ ಮಾಧ್ಯಮಗಳು ವಿಜ್ಞಾನ, ಸಾಹಿತ್ಯ, ಕಲೆ, ವೈಮಾನಿಕ, ಸೇನೆ, ಇಂತಹ ಹತ್ತು ಹಲವು ರಂಗಗಳಲ್ಲಿ ಹೆಣ್ಣಿನ ಸಾಧನೆಯನ್ನು ಇಷ್ಟು ಪರಿಯಲ್ಲಿ ಬಿಂಬಿಸಿ, ಬಿತ್ತರಿಸುವುದಿಲ್ಲ, ಹಾಡಿ ಹೊಗಳುವುದಿಲ್ಲ"

'ಮಹಿಳೆ ಮತ್ತು ವಿಜ್ಞಾನ' ಎಂಬ ಪ್ರಬಂಧ ಸ್ತ್ರೀವಾದಿಗಳು ವಿಜ್ಞಾನ ಮೂಲತಃ ಪಿತೃ ಪ್ರಧಾನ ಮೌಲ್ಯಗಳಿಂದ ಕೂಡಿದೆ ಎಂಬುದನ್ನು ಸಾಬೀತುಪಡಿಸಿದ ರೀತಿಯನ್ನು ಚರ್ಚಿಸುತ್ತದೆ. ಉದಾಹರಣೆಗೆ ನಮ್ಮ ಎಷ್ಟು ಜಾಹಿರಾತುಗಳು ಹೇಗೆ ಪುರುಷ ಕೇಂದ್ರಿತವಾಗಿವೆ ಎಂದು ಹೇಳುತ್ತಾ ನೇಮಿಚಂದ್ರ ಹೀಗೆನ್ನುತ್ತಾರೆ. "...... ಏಡ್ಸ್ ಜಾಹಿರಾತುಗಳು ಪುರುಷ ಕೇಂದ್ರಿತವಾಗಿದ್ದು ಕಾಂಡಮ್ಸ್ ಧರಿಸಿ ಏಡ್ಸ್ ನಿಂದ ತಪ್ಪಿಸಿಕೊಳ್ಳಿ' ಎಂದು ಕೇವಲ ಪುರುಷರ ಸುರಕ್ಷೆಯನ್ನು ಹೇಳುತ್ತದೆಯೇ ಹೊರತು, ಮಹಿಳೆಯ ರಕ್ಷಣೆಗೆ ಆಕೆಯ ನಿಯಂತ್ರಣದಲ್ಲಿರುವ ಹೊಸ ಸಾಧನಗಳತ್ತ ವಿಜ್ಞಾನ ಹೆಚ್ಚು ಗಮನ ಹರಿಸಿಲ್ಲ."

ನಮ್ಮ ಮಾನವ ಶಾಸ್ತ್ರದ ಸಂಶೋಧನೆಗಳು ಕೂಡ ಹೇಗೆ ಪುರುಷಕೇಂದ್ರಿತ ಪೂರ್ವಗ್ರಹಿಕೆಗಳಿಂದ ಕೂಡಿವೆ ಎಂಬುದನ್ನು 'ಸ್ತ್ರೀವಾದ ಮತ್ತು ಮಾನವ ಶಾಸ್ತ್ರ' ಎಂಬ ಪ್ರಬಂಧ ನಿರೂಪಿಸುತ್ತದೆ. ಈ ರಂಗ ಪ್ರವೇಶಿಸಿದ ಸ್ತ್ರೀಯರು ಮೂಲ ಸಿದ್ಧಾಂತಗಳಾದ 'ಗಂಡು ಮೂಲತಃ ಬೇಟೆಗಾರ','ಹೆಣ್ಣು ಮೂಲತಃ ಸಂಗ್ರಾಹಕಿ'ಎಂಬ ನಂಬಿಕೆಗಳನ್ನು ಪ್ರಶ್ನಿಸಿದ, ಬುಡಮೇಲು ಮಾಡಿದ್ದರ ಬಗ್ಗೆ ಚರ್ಚೆ ಇದೆ.

'ಗರ್ಭಧರಿಸುವ ಗಂಡುಗಳು 'ಪ್ರಬಂಧ ಗಂಡು ಕಡಲುಕುದುರೆಗಳು, ಗರ್ಭಧರಿಸಿ, ಮಕ್ಕಳನ್ನು ಪೋಷಿಸುವ ವಿಶೇಷತೆಯನ್ನು ಚರ್ಚಿಸುತ್ತದೆ. ಈ ಉದಾಹರಣೆ ನಾವು 'ಪ್ರಕೃತಿ ಸಹಜ' ಎಂದು ನಂಬುವ ವಿಚಾರಗಳನ್ನು ಬುಡಮೇಲು ಮಾಡಿ ಪ್ರಕೃತಿ ನಾವು ಬಗೆದಷ್ಟು ಏಕರೂಪಿಯಲ್ಲ ಎಂಬುದನ್ನು ಸಾಬೀತುಪಡಿಸುತ್ತದೆ.

ಮುಂದಿನ ಪ್ರಬಂಧ ಸೌಂದರ್ಯದ ಗೀಳು ಹೇಗೆ 'ಅನರೋಕ್ಸಿಯ' ಎಂಬ ತಿನ್ನುವ ವ್ಯಾಧಿಗೆ ದಾರಿ ಮಾಡಿಕೊಡ ಬಲ್ಲದು ಎಂಬುದರ ಬಗ್ಗೆ ಬೆಳಕು ಚಲ್ಲುತ್ತದೆ. ಮತ್ತೊಂದು ಪ್ರಬಂಧ ಸ್ತನದ ಕ್ಯಾನ್ಸರ್ ಹೆಚ್ಚಾಗುವುದಕ್ಕೆ ಸ್ತ್ರೀವಾದಿ ಚಳುವಳಿಯೇ ಕಾರಣ ಎಂದು ವೈದ್ಯರು ವಿಜ್ಞಾನಿಗಳು, ಪ್ರತಿಪಾದಿಸಿದನ್ನು ಕಟುವಾಗಿ ಟೀಕಿಸುತ್ತದೆ.

'ಮಹಿಳೆ ಮತ್ತು ಶೌಚಾಲಯ' ಎಂಬ ಪ್ರಬಂಧ ಮಹಿಳೆಯರಿಗೆ ಮೂಲ ಅಗತ್ಯವಾದ ಶೌಚಾಲಯ ಕೂಡ ದೊಡ್ಡ ಸಮಸ್ಯೆಯಾಗಿದೆ ಎನ್ನುತ್ತಲೇ, ಇಂತಹ ವಿಷಯಗಳಲ್ಲಿ ಸಂಕೋಚ ತೊರೆದು ಮೂಲಭೂತ ಅಗತ್ಯಗಳ ಬಗ್ಗೆ ಹೋರಾಡುವುದು ಅಗತ್ಯ ಎನ್ನುತ್ತಾರೆ ನೇಮಿಚಂದ್ರ.

ತಮ್ಮ ಬರಹ ಹಾಗೂ ಸ್ತ್ರೀವಾದಿ ಚಿಂತನೆಯ ನಂಟಿನ ಬಗ್ಗೆ ಮಾತನಾಡುತ್ತಾ ಕೊನೆಗೆ ನೇಮಿಚಂದ್ರ ಹೀಗೆನ್ನುತ್ತಾರೆ ಬದುಕಿಗಳವಡಿಸಿದ ಸ್ತ್ರೀವಾದದಲ್ಲಿ ನನಗೆ ನಂಬಿಕೆ ಇಲ್ಲ. ಕೃತಿ ಬೇರೆ ಕೃತಿಕಾರಳೇ ಬೇರೆ ಎಂಬ ದ್ವಂದ್ವವೂ ನನಗಷ್ಟು ಅರ್ಥವಾಗುವುದಿಲ್ಲ. ಒಂದು ಕೃತಿ ಕೃತಿಕಾರಳ ಜೀವನ ದರ್ಶನ, ಧೋರಣೆ, ಚಿಂತನೆಯನ್ನು ಪ್ರತಿಬಿಂಬಿಸಬೇಕು. ಬರಹದಲ್ಲಿ ಅಪ್ಪಟ ಸ್ತ್ರೀವಾದಿಯಾಗಿ, ನಿಜ ಜೀವನದಲ್ಲಿ ಅದಕ್ಕೆ ತದ್ವಿರುದ್ಧವಾಗಿ ನಡೆದುಕೊಳ್ಳುವುದು ನನಗೆ ವಿಚಿತ್ರವಾಗಿ ಅಪ್ರಮಾಣಿಕವಾಗಿ ಕಾಣುತ್ತದೆ.[೨೧]

ಈ ಮೇಲಿನ ಮಾದರಿಯಂತೆ 'ಜಾಗೃತಿ ಪತ್ರಿಕೆ' ಮಹಿಳೆಯರ ಕೃತಿಗಳನ್ನು ಮಾತ್ರ ವಿಶ್ಲೇಷಿಸುತ್ತಾರೆ. ಆದರೆ ಬಂದಂಥ ಮಹಿಳೆಯರ ಎಲ್ಲಾ ಕೃತಿಗಳನ್ನು ವಿಮರ್ಶೆಗೆ ಒಳಪಡಿಸುವುದಿಲ್ಲ. ಆ ಕೃತಿಗಳು ಮಹಿಳೆಯ ವಿಚಾರಗಳನ್ನೆ ಒಳಗೊಂಡಿರುವುದು ತುಂಬಾ ಅವಶ್ಯಕವಾಗಿರಬೇಕು, ಆಗ ಮಾತ್ರವೇ ಜಾಗೃತಿ ಪತ್ರಿಕೆಯಲ್ಲಿ 'ಕೃತಿ' ವಿಮರ್ಶೆಗೆ ಒಳಗಾಗುತ್ತದೆ. ಹೀಗೆ ಎಲ್ಲ ಪತ್ರಿಕೆಗಳಿಗೂ ಅವುಗಳದೇ ಆದ ಆಯ್ಕೆಗಳಿರುತ್ತವೆ. ಈ ಆಯ್ಕೆಗಳನ್ನಷ್ಟೇ ಅವರು ವಿಮರ್ಶಿಸುತ್ತಾರೆ.

ಚಂದ್ರಶೇಖರ ಕಂಬಾರ ಅವರ 'ಸಿಂಗಾರೆವ್ವ ಮತ್ತು ಅರಮನೆ'

(ಪ್ರಜಾವಾಣಿ ಜುಲೈ ೧೯೮೨ ರಲ್ಲಿ ಬಂದ ಪುಸ್ತಕ ವಿಮರ್ಶೆ, ವಿಮರ್ಶಕರು ಟಿ.ಪಿ. ಅಶೋಕ)

ಚಂದ್ರಶೇಖರ ಕಂಬಾರರ ಎರಡನೆಯ ಕಾದಂಬರಿ, "ಸಿಂಗಾರೆವ್ವ ಮತ್ತು ಅರಮನೆ" ಪ್ರೀತಿ -ದ್ವೇಷಗಳ ಅದ್ಭುತ ಲೋಕವೊಂದನ್ನು ನಮ್ಮ ಮುಂದೆ ತೆರೆದಿಡುವ ವಿಶಿಷ್ಟಕೃತಿ. ಜಾನಪದದ ಸೊಗಡನ್ನೂ, ಆಧುನಿಕ ಪ್ರಜ್ಞೆಯನ್ನು ಒಟ್ಟಿಗೆ ಮೈಗೂಡಿಸಿಕೊಂಡು ಬರೆಯುವ ಕಂಬಾರರ ಬರವಣಿಗೆಯ ಸಾಮಾನ್ಯ ಲಕ್ಷಣಗಳನ್ನು ಇಲ್ಲೂ ಕಾಣಬಹುದು. ಅವರ ಮೊದಲ ಕಾದಂಬರಿ 'ಕರಿಮಾಯಿ'ಯಂತೆಯೇ ಸಿಂಗಾರೆವ್ವ ಮತ್ತು ಅರಮನೆ ಕೂಡ ಸ್ಥಿರ ಜಗತ್ತೊಂದು ಕಣ್ಮರೆಯಾಗುತ್ತಿರುವ ಚಿತ್ರವೇ ಆಗಿದ್ದರೂ ಕಂಬಾರರ ನಾಸ್ಟಲ್ಜಿಯಾ, ಸಂಪ್ರದಾಯ ಪ್ರಿಯತೆ ಮತ್ತು ಕೆಲವೊಮ್ಮೆ ಇದರಿಂದ ಹುಟ್ಟುವ ಪ್ರತಿಗಾಮಿ ಧೋರಣೆಗಳಿಂದ ಬಿಡಿಸಿಕೊಂಡು ಬಂದಿರುವುದು ಮೆಚ್ಚುಗೆಯ, ಸಮಾಧಾನದ ಸಂಗತಿಯಾಗಿದೆ. ಹೀಗಾಗಿ 'ನಾಯಿಕತೆ' 'ಕಾಡು ಕುದುರೆ' ನಾಟಕಗಳಲ್ಲಿ ಧ್ವನಿತವಾಗುತ್ತಿದ್ದ ಬದಲಾವಣೆಗಳು "ಸಿಂಗಾರೆವ್ವ ಮತ್ತು ಅರಮನೆ" ಕಾದಂಬರಿಯಲ್ಲಿ ಗಟ್ಟಿಗೊಂಡು ಕಂಬಾರರ ಬರವಣಿಗೆಯ ಸಂದರ್ಭದಲ್ಲಿ ಮತ್ತೊಂದು ಮುಖ್ಯ ಘಟ್ಟವನ್ನು ಸಾಂಕೇತಿಸುತ್ತದೆ ಎನಿಸುತ್ತದೆ.

ಇದಕ್ಕೆ ಒಂದು ಮುಖ್ಯ ಕಾರಣವೆಂದರೆ ಕಂಬಾರರು ಈ ಕೃತಿಯಲ್ಲಿ ಅಸಾಧಾರಣ ವಿಮರ್ಶಕ ವಿವೇಕವನ್ನೂ ಕಲಾತ್ಮಕ ಎಚ್ಚರವನ್ನೂ ಕಾಯ್ದುಕೊಳ್ಳಲು ಸಾಧ್ಯವಾಗಿರುವುದು. ಕತೆಯಲ್ಲಿ ನೇರವಾಗಿ ಪಾಲುಗೊಳ್ಳದ ನಿರೂಪಕಿ, ತಾನೇ ಒಂದು ಮುಖ್ಯ ಪಾತ್ರವಾಗಿದ್ದ ಶಿವನಿಂಗವ್ವ ಇಲ್ಲಿ ಕತೆ ಹೇಳುತ್ತಾರೆ. ಶಿವಾಪುರದ ಅರಮನೆಯ ಕತೆಯಲ್ಲಿ ಹಲವು ಉಪಕತೆಗಳೂ ವೈಯಕ್ತಿಕ ವೃತ್ತಾಂಶಗಳೂ ಹಾಸು ಹೊಕ್ಕಾಗಿ ನಿರೂಪಕ ಮತ್ತು ಶಿವನಿಂಗವ್ವರ ವಿವರಣೆಗಳು ಒಂದು ಮಟ್ಟದಲ್ಲಿ ಮನುಷ್ಯನ ಅಂತರಂಗದ ಅದಮ್ಯ ಭಾವನೆಗಳನ್ನು ಇನ್ನೊಂದು ಮಟ್ಟದಲ್ಲಿ ಅನಿವಾರ್ಯವೆಂಬಂತೆ ಚಲ್ಲಿಸುತ್ತಿರುವ ಬದುಕಿನ ಗತಿಯನ್ನು ಏಕಕಾಲದಲ್ಲಿ ದಾಖಲಿಸುತ್ತ ಸಂಕೀರ್ಣವಾಗುತ್ತದೆ. ಶಿವಲಿಂಗವ್ವನ ನಿರೂಪಣೆ ನಿರೂಪಕ ಭಾಷೆಯಷ್ಟೇ ಅಲ್ಲ, ಕೆಲವೊಮ್ಮೆ ಪ್ರಜ್ಞೆಯಲ್ಲೂ ಸೋಸಿಬಂದಂತೆ ಕಾಣುವುದರಿಂದ ಅಲ್ಲಲ್ಲಿ ತೆಳು ಎನಿಸಿದರೂ ಭಾವತಿರೇಕದಿಂದ ತಪ್ಪಿಸಿಕೊಂಡಿದೆ. ಅಂದರೆ ಓದುಗರು ಶಿವನಿಂಗವ್ವ ಹೇಳುವ ಕತೆ ಮತ್ತು ಆ ಘಟನಾವಳಿಗಳಿಗೆ ಅವಳದೇ ಆದ ಪ್ರತಿಕ್ರಿಯೆಗಳು ಹಾಗೂ ಇವೆಲ್ಲವುಗಳಿಗೆ ನಿರೂಪಕನ ವಿವರಣೆ ಮತ್ತು ಪ್ರತಿಕ್ರಿಯೆಗಳನ್ನೂ ಸೂಕ್ಷ್ಮವಾಗಿ ಗುರುತಿಸಿಕೊಳ್ಳಲು ಸಾಧ್ಯವಾಗುವಂಥ ನೈತಿಕ ಪರೀಕ್ಷೆ ಕೃತಿಯ ಬಂಧದಲ್ಲೇ ಅಂತರ್ಗತವಾಗಿರುವುದರಿಂದ ಪ್ರಬುದ್ಧವಾಗಿದೆ. ಕಂಬಾರರ ಬರವಣಿಗೆಯ ಪ್ರಮುಖ ಆಕರ್ಷಣೆಯಾದ ಉತ್ತರ ಕರ್ನಾಟಕದ ದೇಸಿ ಈ ಕಾದಂಬರಿಯಲ್ಲಿ ಸಮರ್ಥವಾಗಿ ದುಡಿಸಿಕೊಳ್ಳಲ್ಪಟ್ಟಿದೆ. ರೋಚಕವಾದ ಅನುಭವವನ್ನು ಕೊಡುತ್ತದೆ.

ಸಿಂಗಾರವ್ವ ಮತ್ತು ಅರಮನೆ'ಯಲ್ಲಿ ಪ್ರಧಾನವಾದ ಮೂರು ಎಳೆಗಳಿವೆ. ಹಣದಾಸೆಗಾಗಿ ಮಗಳು ಸಿಂಗಾರೆವ್ವನನ್ನು ಮೊದಲು ಹೆಣಕ್ಕೂ ಅನಂತರ ಜೀವಂತ ಪ್ರೇತದಂತಿದ್ದ ದೇಸಾಯಿಗೂ ಮದುವೆ ಮಾಡಿದ, ಸಾಯುವವರೆಗೂ ಒಂದಲ್ಲ ಒಂದು ಬಗೆಯಲ್ಲಿ ಸಿಂಗಾರೆವ್ವನನ್ನು ಕಾಡಿದ ಗೌಡ ಕ್ರೌರ್ಯದ ಭೌತರೂಪವನ್ನೇ ಪ್ರತಿನಿಧಿಸುವಂತಿದ್ದಾನೆ. ಕೈತಪ್ಪಿ ಹೋಗುತ್ತಿರುವ ಜಹಗೀರುದಾರಿಕೆಯ ದರ್ಪ, ವೈಭವಗಳನ್ನು ಬಯಲಾಟದ ಮಹಾರಾಜನ ಪಾತ್ರದಲ್ಲಿ ಕಾಣುತ್ತ, ಸೂಳೆಯರ ತೊಡೆಗಳನ್ನು ನೋಡುತ್ತ 'ಬೆಹೋಶ್' ಆಗುತ್ತಿದ್ದ ದೇಸಾಯಿ 'waste land' ಗೆ ಸಂಕೇತವೆಂಬಂತಿದ್ದಾನೆ. ವಿವಿಧ ಬಗೆಗಳಲ್ಲಿ ತನ್ನನ್ನು ಶೋಷಿಸುತ್ತಿದ್ದ ಗೌಡನನ್ನು ತೀವ್ರವಾಗಿ ದ್ವೇಷಿಸುತ್ತಲೇ ಅವನ ಮಗಳು ಸಿಂಗಾರೆವ್ವನನ್ನು ಗಾಢವಾಗಿ ಪ್ರೀತಿಸುತ್ತಿದ್ದು ಗೌಡನಿಂದ ಓಡಿಸಲ್ಪಟ್ಟು ದೇಸಾಯಿಯ ಗುಲಾಮನಾಗಿ, ಕೊನೆಗೆ ಸಿಂಗಾರೆವ್ವನ ಪ್ರಿಯಕರನೂ ಆದ ಹೊಲೆಯ ಮರ‍್ಯಗೌಡನ ಕ್ರೌರ್ಯವನ್ನೂ, ಕೊನೆಗೆ ಸಿಂಗಾರೆವ್ವನ ಕೋಮಲತೆಯನ್ನು ಒಟ್ಟಿಗೆ ರೂಢಿಸಿಕೊಂಡ ಅತ್ಯಂತ ನಿಗೂಢ, ಸಂಕೀರ್ಣ ವಿಲಕ್ಷಣ ಪಾತ್ರ. ಈ ಮೂವರೂ ಸಿಂಗಾರವ್ವನ ಜೀವನವನ್ನು ಬೇರೆ ಬೇರೆ ಕೋನಗಳಿಂದ ಪ್ರವೇಶಿಸಿ ಪರಸ್ಪರ ಸಂಬಂಧಗಳಲ್ಲಿ ಮತ್ತು ಸಿಂಗಾರೆವ್ವನೊಡನೆ ಸಂಬಂಧದಲ್ಲಿ ಒಟ್ಟಿಗೆ ನಿಜವಾಗಿ ಕಾಡುತ್ತಾರೆ. ಇಂಥ ವಿಲಕ್ಷಣ ಸಂಬಂಧಗಳಲ್ಲಿ ಇವುಗಳು ಸಹಜವಾಗಿಯೇ ತಂದೊಡ್ಡುವ ನೂರು ಬವಣೆ ಸವಾಲುಗಳಲ್ಲಿ ಸಿಂಗಾರೆವ್ವನ ವ್ಯಕ್ತಿತ್ವ ಆದರಲ್ಲಿ ಆಳ ಅಗಲಗಳಲ್ಲಿ ಎದ್ದು ನಿಲ್ಲುತ್ತದೆ. ಇವೆಲ್ಲವುಗಳಲ್ಲಿ ತಾನೂ ಒಂದು ಪಾತ್ರವಾಗಿ, ಇವುಗಳಿಗೆ ಸಾಕ್ಷಿಯಾಗಿ ಕೊನೆಗೆ ನಿರೂಪಕಳಾಗಿ ಬೆಳೆಯುವ ಸಿಂಗಾರೆವ್ವನ ಸೇವಕಿ ಸ್ನೇಹಿತೆ ಶಿವನಿಂಗವ್ವ ತನ್ನ ಭಾವತೀವ್ರತೆ ಪ್ರಬುದ್ಧತೆಗಳಿಂದ, ವರ್ತಮಾನ ಮತ್ತು ಭೂತಕ್ಕೆ ಸಂಪರ್ಕ ಕಲ್ಪಿಸುವ ಅರ್ಥಪೂರ್ಣ ಕೊಂಡಿಯಾಗಿ ಬೆಳೆಯುತ್ತ ಕೃತಿಯ ಭಾವ ಪ್ರಪಂಚದ ಕೇಂದ್ರವೆಂಬಂತೆ ನಿಲ್ಲುತ್ತಾಳೆ. ನಿರೂಪಕನ ಮಧ್ಯಪ್ರವೇಶ ಕಿರಿ ಕಿರಿ ಎನಿಸದೆ ಓದುಗರು, ಇನ್ನೇನು ಶಿವಲಿಂಗವ್ವನ ವರ್ಣನೆಗಳಲ್ಲಿ ಮುಳುಗಿ ಹೋಗುತ್ತಾರೆ ಎಂಬಲ್ಲಿ ಸೂಕ್ಷ್ಮವಾಗಿ ತಡೆಯುತ್ತ ಎಚ್ಚರದ ಓದಿಗೆ ಪೂರಕವಾಗುವಂತಿದೆ.

ದೇಸಾಯಿ ದೇಸಗತಿಯ ಅವನತಿ ವೈಭವೀಕೃತವಾಗದೆ, ಮರ‍್ಯಾನ ಉತ್ಕಟ ಪ್ರೇಮ ಆದರ್ಶೀಕರಣಕ್ಕೆ ಒಳಗಾಗಿದೆ. ಸಿಂಗಾರೆವ್ವನ ಕೋಮಲತೆ ತೆಳುವಾಗದೆ, ಶಿವನಿಂಗವ್ವನ ವರ್ಣನೆ ಪಾಂಪಸ್ ಆಗದ ಈ ಕಾದಂಬರಿ ಅಸಾಧಾರಣ, ಸಮತೋಲನವನ್ನೂ, ಕುತೂಹಲವನ್ನೂ ಕಾಯ್ದುಕೊಳ್ಳುತ್ತದೆ. ಅರಮನೆಯ ಭೌತಿಕ ವಿವರಗಳು, ಭಾವಪ್ರಪಂಚ ಆ ಪ್ರಪಂಚಕ್ಕೆ ಊರವರ ಪ್ರತಿಕ್ರಿಯೆಗಳು, ಅರಮನೆಯಲ್ಲಿರುವ ಪಾತ್ರಗಳ ಒಳ ಸಂಬಂಧಗಳು ಊರು - ಅರಮನೆ ಸಂಬಂಧಗಳು ಬದಲಾಗುತ್ತಿರುವ ಸಾಮಾಜಿಕ, ಸಾಂಸ್ಕೃತಿಕ , ಆರ್ಥಿಕ ಸಂಬಂಧಗಳನ್ನು ಅರ್ಥಪೂರ್ಣವಾಗಿ ಸೆರೆಹಿಡಿಯುತ್ತವೆ. ಹೀಗಾಗಿ ಈ ಕಾದಂಬರಿ ಮನುಷ್ಯನ ಅಂತರಂಗದ ಆಳಪಾತಾಳಗಳಿಗೆ ನಮ್ಮನ್ನು ಕರೆದೊಯ್ಯುವಂತೆ ದೃಗ್ಗೋಚರ ರಾಜಕೀಯ ಬದಲಾವಣೆಗಳಿಗೂ ಸಾಕ್ಷಿಯಾಗಿ ದಟ್ಟವಾದ ಅನುಭವ ಕೊಡುತ್ತದೆ. ಮಹತ್ವಪೂರ್ಣ ಚರ್ಚೆಗಳಿಗೆ ವಸ್ತುವಾಗಬಲ್ಲ ಸಾಮರ್ಥ್ಯ 'ಸಿಂಗಾರೆವ್ವ ಮತ್ತು ಅರಮನೆ'ಗೆ ಖಂಡಿತ ಇದೆ ಎಂದಷ್ಟೇ ಈ ಸಂದರ್ಭದಲ್ಲಿ ಹೇಳಬಹುದು.

'ಸಿಂಗಾರೆವ್ವ' ದ ತಾತ್ವಿಕತೆಯ ಸ್ವರೂಪ' - ಆರ್ಕೆ ಮಣಿಪಾಲ

ಚಂದ್ರಶೇಖರ ಕಂಬಾರರ 'ಸಿಂಗಾರೆವ್ವ ಮತ್ತು ಅರಮನೆ' ಕೃತಿಯ ಪುಸ್ತಕ ವಿಮರ್ಶೆ 'ಮುಂಗಾರು' ಸಂ ೮, ಸಂ೨. ೧೯೮೭

ವಸಾಹತುಶಾಹಿಯ ಆಳ್ವಿಕೆಯಲ್ಲಿ ನಮ್ಮ ಸಮಾಜದ ರಚನೆಯಲ್ಲುಂಟಾದ ಬಿರುಕನ್ನು ಖಚಿತ ರಾಜಕೀಯ ಗ್ರಹಿಕೆಯೊಂದಿಗೆ ಸಮಗ್ರ ನೋಟದಿಂದ ವಿಶ್ಲೇಷಿಸಿರುವ ಕೃತಿಗಳೇ ನಮ್ಮಲ್ಲಿ ಬಂದಿಲ್ಲ. ಹೆಚ್ಚೆಂದರೆ ಭಗ್ನವಾಗುತ್ತಿರುವ ಊಳಿಗಮಾನ್ಯ ಚೌಕಟ್ಟಿನ ಕುರಿತ ಸರಳೀಕೃತ ಮತ್ತು ಹಳಹಳಿಯ ಧಾಟಿಯ ಕೃತಿಗಳು ಬಂದಿವೆ. 'ಗ್ರಾಮಾಯಣ'ದಂಥ ಕೃತಿಗಳಲ್ಲಿ ಈ ವಸ್ತು ಪೂರ್ಣ ಪ್ರಮಾಣದಲ್ಲಿ ಬಳಕೆಯಾಯಿತಲ್ಲದೆ, ಅದೇ ನೋಸ್ಟಾಲ್ಜಿಕ್ ಮನೋಧರ್ಮದ ಕಾದಂಬರಿಗಳಿಗೆ ಒಂದು ಪರಂಪರೆ ಹಾಕಿಕೊಟ್ಟಿತೆನ್ನಬಹುದು. ರಾವ್‌ಬಹದ್ದೂರರ ನಂತರದ ತಲೆಮಾರಿನ ಶಕ್ತ ಲೇಖಕ ಕಂಬಾರರಲ್ಲೂ ಈ ವಸ್ತು, ಏಕತಾನ ಮತ್ತು ಸುಲಭ ತರ್ಕದ ತಾತ್ವಿಕತೆಯಲ್ಲಿ ನಿರೂಪಣೆಗೊಂಡಿರುವುದನ್ನು ಗಮನಿಸಬಹುದು. ಈ ಪರಂಪರೆಯ ಕಾದಂಬರಿಗಳು,

ಅರಮನೆಯ ವೈಭವ ವಿಲಾಸಗಳೊಂದಿಗೆ ಆ ಸ್ಥಾವರ ಸಂಪತ್ತನ್ನು ಸಂರಕ್ಷಿಸಿಕೊಳ್ಳಲಾಗದ, ಅದನ್ನು ನಿಭಾಯಿಸಿಕೊಂಡು ಹೋಗಲಾರದ ಗೌಡರು, ದೇಸಾಯಿಗಳು (ವ್ಯವಸ್ಥೆಯ ಪ್ರತಿನಿಧಿಗಳು) ಷಂಡರೂ ಭಂಡರೂ ಹಾಸ್ಯಾಸ್ಪದರೂ ಆಗಿ ಚಿತ್ರಣಗೊಂಡಿರುವುದು ಕೂಡ ಈ ವ್ಯವಸ್ಥೆಯ ನಾಶಕ್ಕೆ ಬದ್ಧವಾಗಿರುವುದನ್ನು ತರ್ಕಬದ್ಧಗೊಳಿಸುವ ಜೊತೆಗೇ ಈ ಚಿತ್ರಣ ಸರಳೀಕೃತ ತಾತ್ವಿಕತೆಯ ಅನುರಣನವಾಗಿಬಿಡುತ್ತದೆ.

ಹೆಣ್ಣಿನ ಫಲವತ್ತತೆ ಪ್ರಕೃತಿಯ ಫಲವತ್ತತೆ. ಅದು ಒಂದು ವರ್ಗದ ಸ್ವಾಮ್ಯವಾಗಲಾರದು. ಹಾಗಿದ್ದರೆ, ಅದು ಕಾಲದ ವ್ಯವಸ್ಥೆಯ ವೈಪರೀತ್ಯದಿಂದ ಉದ್ಭವವಾದುದು. ಅಂತಹ ವ್ಯವಸ್ಥೆ ಬದಲಾಗಲೇಬೇಕಾದುದು, ಬದಲಾಗಬೇಕಾದ ಸ್ವರೂಪ ಯಾವುದಿರತಕ್ಕದು ಎಂಬ ಕುರಿತು ಕಂಬಾರರ ಎಲ್ಲ ಕೃತಿಗಳು (ಮುಖ್ಯವಾಗಿ ಕಾದಂಬರಿ ಮತ್ತು ನಾಟಕಗಳು) ತಮ್ಮದೇ ಆದ ರೀತಿಯ ಕಾಳಜಿಯನ್ನು ವ್ಯಕ್ತಪಡಿಸುತ್ತವೆ. ಈ ಕಾಳಜಿ ಕಂಬಾರರ ಕೃತಿಗಳಲ್ಲಿ ಪ್ರೇಮ ಕಾಮಗಳ ಅವಿನಾಭಾವ ಮತ್ತು ದೈವಿಕತೆಯೊಂದಿಗೆ, ಲೈಂಗಿಕ ಮುಕ್ತತೆ -ಸೃಷ್ಟಿ ಮತ್ತು ಹೊಸ ವ್ಯವಸ್ಥೆಯ ಉದಯದ ಸಮೀಕರಣದ ರೂಪದಲ್ಲಿ ಮೂರ್ತಗೊಳ್ಳುತ್ತದೆ. ಲೇಖಕರು ಹೊಸ ಸೃಷ್ಟಿ ಕುರಿತು ತನ್ನ ತಾತ್ವಿಕ ಆಶಯಗಳನ್ನು ಲೈಂಗಿಕ ಸ್ವಾತಂತ್ರದ ಮೂಲಕ ಧ್ವನಿಸುತ್ತಿದ್ದಾರೆಂದೇ ಇವರ ಕೃತಿ ವಿಶ್ಲೇಷಣೆ ಮತ್ತು ಮೌಲ್ಯ ಮಾಪನ ತೊಡಕಿನದಾಗಿ ಬಿಡುತ್ತದೆ. ದೈವೀ ಅನುಭವಗಳ ಅಭಿವ್ಯಕ್ತಿಗಾಗಿ ಲೈಂಗಿಕ ಪ್ರತಿಮೆಗಳ ಧಾರಾಳ ಬಳಕೆಯನ್ನು ಕಂಬಾರರ ಪ್ರಮುಖ ತಾತ್ವಿಕ ನೆಲೆಯಾಗಿ ಕಂಡುಕೊಳ್ಳುವ ವಿಮರ್ಶಕ ಡಾ|| ಡಿ.ಆರ್. ನಾಗರಾಜ್ ಈ ಅಂಶವನ್ನು 'ಕವಿಗೆ ಶಿಷ್ಟೇತರ ಪರಂಪರೆಗಳ ಜೊತೆಗೆ ಇರುವ ಆಳವಾದ ಸಂಬಂಧಕ್ಕೆ ಅನ್ವಯಿಸುತ್ತಾರೆ. ಆದರೆ ಈ ಪ್ರತಿಮೆಗಳ ಧಾರಾಳತನವೇ ಈ ಲೇಖಕರ ಎಲ್ಲ ಕೃತಿಗಳಲ್ಲೂ ಮತ್ತೆ ಮತ್ತೆ ಕಾಣಿಸಿಕೊಳ್ಳುವ ಮೂಲ ಮಾತೃಕೆಯಾಗಿರುವಷ್ಟರ ಮಟ್ಟಿಗೆ, ಈ ಕೃತಿಗಳ ತಾತ್ವಿಕತೆಯ ಪರಿಧಿ ಅಮುಕಲ್ಪಟ್ಟಿರುವುದನ್ನು ಅವರು ಗುರುತಿಸಿಲ್ಲ. ಶಿಷ್ಟೇತರ ಪರಂಪರೆಗಳನ್ನು ತಮ್ಮ ಕಾವ್ಯರಚನೆಯಲ್ಲಿ ಬಳಸಿಕೊಳ್ಳುವ ನೆರೂಡನಂಥವರು ತನ್ನ 'ಕ್ಯಾಂಟೋ ಜನರಲ್' ನಲ್ಲಿ ಕಟೆಯುವ ನವವಸಾಹತುಶಾಹಿ-ಬಂಡವಾಳಶಾಹಿ ಕೌರ್ಯದ ಪರಿಣಾಮಕಾರಿ ಶಿಲ್ಪ ಕಂಬಾರರಂಥವರಿಗೆ ಎಟುಕದಿರುವುದು ಆ 'ಆಳವಾದ ಸಂಬಂಧ'ದ ಸ್ವರೂಪದಲ್ಲಿರುವ ದೋಷಗಳನ್ನು ನಿರ್ದೇಶಿಸುತ್ತಿರಬಹುದು ಎಂಬುದನ್ನೂ ವಿಚಾರಿಸಬೇಕಾಗಿದೆ.

ಇಳಿ ವಯಸ್ಸಿನಲ್ಲಿ ಹೆಣ್ಣಿನ ಒಲವಿನ ನೈಜ ದರ್ಶನದ ಮೂಲಕ ಕಣ್ಣು ತೆರೆಸಿಕೊಳ್ಳುವ, ಮನುಷ್ಯರಾಗುವ, ಜೀಕೆ ಮಾಸ್ತರರ ಬದುಕು. ತನ್ನ ನಿಷ್ಠುರತೆಯನ್ನು ಬಿಟ್ಟು ಸೂಕ್ಷ್ಮತೆಗೆ ತೆರೆದುಕೊಳ್ಳುವುದು ಅರ್ಥಪೂರ್ಣವೆನಿಸುತ್ತದೆ. (ಜೀಕೆ ಮಾಸ್ತರರ ಪ್ರಣಯ ಪ್ರಸಂಗ) ಆದರೆ ಲೇಖಕರ ಅನೇಕ ನಾಟಕಗಳಲ್ಲಿ ಲೈಂಗಿಕ ಬಿಡುನಡತೆ, ಸಾಮಾಜಿಕ ಕಟ್ಟುಪಾಡು ಮೀರಿದ ಲೈಂಗಿಕ ಸಂಬಂಧಗಳೇ ಸ್ವಾತಂತ್ರ್ಯ ಸಮಾನತೆಗಳ ಹೊಸ ವ್ಯವಸ್ಥೆಯ ಸೃಷ್ಟಿಗೆ ರಹದಾರಿ ಎಂಬ ಸ್ವೀಕೃತಿ ಸಿದ್ಧಾಂತಕ್ಕೆ ತಾತ್ವಿಕತೆಯನ್ನು ಅರ್ಥಪೂರ್ಣತೆಯನ್ನು ಇಳಿಸಿಬಿಡುತ್ತದೇನೋ ಎನ್ನುವ ಆತಂಕಕ್ಕೆ ಆಸ್ಪದವಿದೆ. ಸರಳಗೊಳಿಸಿ ಹೇಳುವುದಾದರೆ ಲೇಖಕರು ಚಿತ್ರಿಸುವ ಹೊಸ ವ್ಯವಸ್ಥೆಯ ಹರಿಕಾರರಾಗುವ ವ್ಯಕ್ತಿಗಳಲ್ಲ. ಕಿಲಾಡಿಗಳು ಅಥವಾ ಸ್ವೇಚ್ಛಾಚಾರಿಗಳಾಗಿರುವುದು, ಆ ವ್ಯವಸ್ಥೆಯ ನೈಜ ಸ್ವರೂಪವನ್ನು ಕೆಲಮಟ್ಟಿಗೆ ಸರಳ ಸೂತ್ರಕ್ಕೆ ಇಳಿಸಿದಂತಾಗುತ್ತದೆ ಎಂಬ ಭಯವು ನಿರಾಧಾರವೇನಲ್ಲ.

ಇನ್ನೊಂದು ಮುಖ್ಯ ಅಂಶವೆಂದರೆ, ನವ್ಯ ಸಾಹಿತ್ಯದ ಪ್ರಮುಖ ಕಾಳಜಿಯಾಗಿದ್ದ ದೇಹ -ಮನಸ್ಸುಗಳೊಳಗಣ ಸಂಘರ್ಷದ ನಿರೂಪಣೆ, ಕಂಬಾರರ ಕೆಲವು ಕೃತಿಗಳಲ್ಲಿ ಕಾಣಿಸಿಕೊಳ್ಳುತ್ತಿದ್ದು (ಉದಾ.. ಈಚಿನ 'ಸಿರಿಸಂಪಿಗೆ, ಎಂಬ ಯಕ್ಷಗಾನ ಪ್ರಸಂಗ (?)ದಲ್ಲೂ ಇದನ್ನು ಗಮನಿಸಬಹುದಾಗಿದೆ) ಮೂಲತಃ ಬಂಡವಾಳಶಾಹಿ ವ್ಯವಸ್ಥೆಯ ಅನಿಷ್ಟವಾಗಿರುವ ಈ ಬದುಕು, ಜಾನಪದ ಆಶಯ ಮತ್ತು ಆಕೃತಿಯುಳ್ಳ ಕೃತಿಗಳಿಗೆ ಮೂಲಭೂತವಾಗಿ ಎಷ್ಟರ ಮಟ್ಟಿಗೆ ಸಲ್ಲುತ್ತದೆ ಎಂಬ ಪ್ರಶ್ನೆಯನ್ನು ನಮ್ಮ ವಿಮರ್ಶಕರು ಎತ್ತಿಕೊಳ್ಳಬೇಕಾಗಿದೆ. ದೇಹ - ಮನಸ್ಸುಗಳ ನಡುವಣ ಬಿರುಕಿನ, ವಿಕ್ಷಿಪ್ತತೆಯ ಸ್ಥಿತಿಯ ಚಿತ್ರಣ, ನವ್ಯ ಸಾಹಿತ್ಯದ ವೈಚಾರಿಕತೆಯ ಪ್ರಮುಖ ನೆಲೆಯಾಗಿದೆ ಆದರೆ ಈ ವೈಚಾರಿಕತೆಯ ನೆಲೆಯೇ ತಳರಹಿತವೆಂಬುದನ್ನು ಗಮನಿಸಬೇಕು, ಏಕೆಂದರೆ, ದೇಹದೊಳಗಿರುವ, ದೇಹದಿಂದ, ಪುಷ್ಟವಾದ, ದೇಹ ಬಿನ್ನವಾದ ಮನಸ್ಸನ್ನು ವಿಚ್ಛೇದಗೊಳಿಸಿ, ಮನಸ್ಸನ್ನು ದೇಹಕ್ಕಿಂತ ಮಿಗಿಲಾಗಿ ಕಾಣುವುದು ಹೇಗೆ ತಿರುವುಮುರುವಾದ ತರ್ಕವೋ ಹಾಗೆಯೇ ದೇಹಕ್ಕೆ ಕೊಡುವ

ಮಹತ್ವದಲ್ಲಿ ದೇಹ ಮನಸ್ಸುಗಳ ಅವಿಭಾಜ್ಯತೆಯ ಸರಳ ತರ್ಕವನ್ನು ಕಡೆಗಣಿಸುವುದು ಹುಸಿ ವೈಚಾರಿಕತೆಯ ಕಾಲಯಾಪನೆಯೇ ಆದೀತು. ಹಾಲಿ ವ್ಯವಸ್ಥೆಗೆ ಪರ್ಯಾಯವಾಗಿ ಹೊಸದೊಂದು ವ್ಯವಸ್ಥೆಯನ್ನು ಸೃಷ್ಟಿಸಿರುವ ಹುಮ್ಮಸ್ಸು, ಕಲಾಕೃತಿಯಲ್ಲಿ ಆ ಹೊಸ ವ್ಯವಸ್ಥೆಯ ಸಮಗ್ರವಾದ ಸಮರ್ಪಕವಾದ ಪೂರ್ವಕಲ್ಪನೆ ಹೊಂದಿರಬೇಕಾದುದು ಅನಿವಾರ್ಯವಾಗಿದೆ. ಈ ಪೂರ್ವ ಕಲ್ಪನೆ, ಈ ರಾಜಕೀಯ ಚಿಂತನೆ, ಜಾನಪದವನ್ನು ಬಳಸಿಕೊಂಡೂ ಅದನ್ನು ಮೀರಿ ನಿಲ್ಲುವ, ಆ ಮೂಲಕ ಅದರ ಒಟ್ಟು ಜನಪರ ಆಶಯಗಳಿಗೇ ನ್ಯಾಯ ಸಲ್ಲಿಸುವ ಒಂದು ಪರಿಕ್ರಮವೂ ಆಗಿದೆ ಎಂದು ನನ್ನ ಭಾವನೆ.

'ಸಿಂಗಾರೆವ್ವ ಮತ್ತು ಅರಮನೆ'ಯಲ್ಲಿ ದೇಸಾಯಿಯ ಪಡಪೋಸಿತನ ಮತ್ತು ಅವನ ಮಾವ ಗೌಡನ ಧೂರ್ತ ತನಗಳಿಂದ ಅವರ ಕುಟುಂಬ ಕಷ್ಟಕ್ಕೆ ಬೀಳುವ, ಒಡೆದು ಹೋಗುವ ಮೂಲಕ, ಹೊಸ ವ್ಯವಸ್ಥೆಯ ಆಗಮನಕ್ಕೆ ದಾರಿ ತೆರೆಯುವ ಆಶಯವನ್ನು ಧ್ವನಿಸಲಾಗಿದೆ. ಫೀನಿಕ್ಸ್‌ನಂಥ ಹೊಲೆಯ ಮರ‍್ಯಾ ಮತ್ತು ಅವನ ಕಿಲಾಡಿತನ, ಅಂಥವನನ್ನೂ ತನ್ನ ಸಜ್ಜನಿಕೆ ಮತ್ತು ಚಾಣಾಕ್ಷತೆಗಳಿಂದ ತಿದ್ದಿ ತೀಡಿ ಮನುಷ್ಯನನ್ನಾಗಿ ಶಿಲ್ಪಿಸುವ, ಆತನ ಉದ್ವೃತ್ತಕಾಮವನ್ನು ಪ್ರೇಮದ ನಿರ್ಮಲ ಧಾರೆಯನ್ನಾಗಿಸುವ ಸಿಂಗಾರೆವ್ವನ ಪಾತ್ರ, ಎಲ್ಲ ಕಷ್ಟಗಳನ್ನು ಅನುಭವಿಸಿ ಅನ್ಯಾಯ ಅಪಮಾನಗಳಿಗೆ ಸೆಟೆದು ನಿಲ್ಲುವ ಸ್ವಾಭಿಮಾನಿ ಪಾತ್ರ, ತುಂಬು ಜೀವಂತಿಕೆಯ ಫಲವತ್ತತೆಯ ಪಾತ್ರ. ಹೆಣ್ಣಿನ ತೊಡೆ ನೋಡುವುದಕ್ಕೆ ಹಣ ಪೋಲು ಮಾಡಿ ಅದನ್ನು ನೋಡುತ್ತಲೇ ಬೇಹುಷಾ ಆಗಿ ಬೀಳುವ ಸರಗಂ ದೇಸಾಯಿಯನ್ನು ಸಂಸಾರದ ಹೊಣೆ ಹೊರಲು ಹಚ್ಚುವ ವಿಫಲ ಪ್ರಯತ್ನ ನಡೆಸಿದ ಸಿಂಗಾರೆವ್ವ ಈ ಹೊಣೆಯಿಂದ ದೇಸಾಯಿ ಚ್ಯುತನಾದಾಗ, ಒಂದು ಬಾರಿ ತಾನು, ಧಿಕ್ಕರಿಸಿದ್ದ ಹೊಲೆಯನನ್ನು ಪಕ್ಕದಲ್ಲಿ ಮಲಗಿಸಿಕೊಂಡು ಬಸಿರಾಗುವ ಸಿಂಗಾರೆವ್ವ, ಅರಮನೆಯ ಕಂಬ ಕಂಬಕ್ಕೂ ಜೀವ ತುಂಬಬೇಕೆಂಬ ಬಯಕೆ ಉಳ್ಳವಳು. ಹೀಗಾಗಿ ಇವಳ ಬಯಕೆ ಹೆಣ್ಣಿನ ಸ್ವಾತಂತ್ರ್ಯ ಮತ್ತು ಪೀಳಿಗೆಯನ್ನು ಮುಂದುವರಿಸಿಕೊಂಡು ಹೋಗಬೇಕಾಗಿರುವ ಆಕೆಯ ಹೊಣೆಯ ದೃಷ್ಟಿಯಿಂದ ಅನೈತಿಕವೆನಿಸಲಾರದು.

ಷಂಬನಾದ ದೇಸಾಯಿ ('ಕರಿಮಾಯಿ'ಯ ನಪುಂಸಕ ನಿಂಗೂನಂತೆ) ಬಸುರನ್ನು ನಾಶಮಾಡಲು ತಲೆಯಿಂದ ತಿವಿದರೂ, ಅದನ್ನು ಉಳಿಸಿಕೊಂಡು ಗುಂಡು ಹೊಡೆದು ಆತ್ಮಹತ್ಯೆ ಮಾಡಿಕೊಂಡ ಆತನನ್ನು ತಾನೇ ಕೊಂದೆನೆಂದು ಜೈಲು ಸೇರಿ ಗಂಡು ಮಗುವಿಗೆ ಜನ್ಮಕೊಟ್ಟು ಸಾಯುವುದರ ಮೂಲಕ ಹೆಣ್ಣಾಗಿ ತನ್ನ ಹೊಣೆಯನ್ನು ದಿಟ್ಟತನ ಸ್ವಾಭಿಮಾನ-ಘನತೆಗಳೊಂದಿಗೆ ಸಾಕ್ಷಾತ್ತಾಗಿಸುತ್ತಾಳೆ, ಸಿಂಗಾರೆವ್ವ, ಆಕೆಯ ಮಗ ರವಿಚಂದ್ರ, ಮುಂದೆ ಆ ಅರಮನೆಯ ಕಟ್ಟಡವನ್ನು ಊರಿನ ಶಾಲೆಗೆ ದಾನ ಮಾಡುವುದರ ಮೂಲಕ ಸಿಂಗಾರೆವ್ವನ ಬಯಕೆಗೆ ಜೀವ ತುಂಬುತ್ತದೆ.

ಹೊಲೆಯ ಮರ‍್ಯಾ, ಸಿಂಗಾರೆವ್ವ ಸತ್ತ ಮೂರೇ ದಿನಗಳಲ್ಲಿ ಹಾವಿನಿಂದ ಕಚ್ಚಿಸಿಕೊಂಡು ಸಾಯುವ ಮೂಲಕ ದಾಂಪತ್ಯೇತರ ಪ್ರೇಮದ ಸಾಧ್ಯತೆಯ ಒಂದು ಮುಖವನ್ನು ಆವಿಷ್ಕಾರ ಮಾಡುತ್ತಾನೆ, ಇಲ್ಲಿ 'ಅನಧಿಕೃತ' ಪ್ರೇಮ ತನ್ನ ಅರ್ಪಣ ಭಾವದ ಮೂಲಕ ಅಧಿಕೃತವಾಗುತ್ತದೆ; ಅಮರವಾಗುತ್ತದೆ.

ಕಂಬಾರರ ನಾಟಕಗಳಲ್ಲಿ ಬಂಡುಕೋರ ಪಾತ್ರಗಳು ವ್ಯವಸ್ಥೆಯ ವಿರುದ್ಧವಾದ ತಮ್ಮ ಹೋರಾಟದಲ್ಲಿ ಯಶಸ್ವಿಯಾದರೂ, ಸಾವನ್ನು ಅನುಭವಿಸುವುದು ಲೇಖಕ ತಾತ್ವಿಕ ಗ್ರಹಿಕೆಯಲ್ಲಿನ ಸಿದ್ಧತತ್ವಕ್ಕೆ ಅನುಸಾರವಾಗಿಯೇ ಬರುತ್ತದೆ ಎನ್ನಬೇಕು. 'ಸಿಂಗಾರೆವ್ವ' ದಲ್ಲೂ ಬಿರುಕು ಬಿಟ್ಟ ವ್ಯವಸ್ಥೆಯ ವಿನಾಶವನ್ನು ಲೋಕಕ್ಕೆ ಸಾರಿ ಹೇಳಿ ಹೊಸ ವ್ಯವಸ್ಥೆಯ ಉದಯಕ್ಕೆ ನಾಂದಿಹಾಡ ಬೇಕಾಗಿದ್ದ ಮರ‍್ಯಾ ಕಾದಂಬರಿಯ ಅಂತ್ಯದಲ್ಲಿ ಸಾಯುತ್ತಾನೆ. ಉದ್ದೇಶಪೂರ್ವಕವಾಗಿ ಆತ ತನ್ನನ್ನು ತಾನು ಸಾಯಿಸಿಕೊಳ್ಳುವುದು ಪ್ರೇಮದ ಆದರ್ಶೀಕರಣವನ್ನು ಸಾಕ್ಷಾತ್ತಾಗಿಸಿರುವುದರ ಜತೆಗೇ ಬಿಟ್ಟುಕೊಡುವ ತಾತ್ವಿಕತೆ ಕೂಡಾ ಈ ಸಿದ್ಧತತ್ವಕ್ಕೆ ವ್ಯತಿರಿಕ್ತವಾಗಿಯೇನೂ ಇಲ್ಲ. ಈ ಸಿದ್ಧತತ್ವವಾದರೂ ಕಂಬಾರರ ಕಲ್ಪನೆಯ ಕಾಂತಿಯ ಸ್ವರೂಪಕ್ಕೆ ಸಂಬಂಧಿಸಿರುವಂಥಾದ್ದೇ ಆಗಿದೆ. ಹೆಣ್ಣನ್ನು ನೆಲಕ್ಕೆ, ಹೆಣ್ಣಿನ ಫಲವತ್ತತೆಯನ್ನು ಭೂಮಿಯ ಫಲವತ್ತತೆಗೆ ಸಮೀಕರಿಸಿ ಬರೆಯುವುದರಿಂದ ಈ ನೆಲದಲ್ಲಿ ಹುಟ್ಟಿ ಬೆಳೆದು ಕಟಾವು ಮಾಡಿಸಿಕೊಳ್ಳುವ ಬೆಳೆಯ ಮೂಲಮಾತೃಕೆಯಲ್ಲಿ ಈ ನೆಲವನ್ನು ಆಳುವ ಶಕ್ತಿಯ ವಿರುದ್ಧದ ಹೋರಾಟದ ನೆಲೆಬೆಲೆಗಳನ್ನು ನಿರ್ಧರಿಸುವ ಪ್ರವೃತ್ತಿ ಕಂಬಾರರ ಕೃತಿಗಳಲ್ಲಿ ಡಾಳಾಗಿದೆ. ಸಸ್ಯ ಜಗತ್ತಿನ ವಿಕಾಸ ಮತ್ತು

ವಿನಾಶದ ಚಕ್ರೀಯ ವರ್ತನೆಗೆ ಸಂವಾದಿಯಾಗಿ ಕ್ರಾಂತಿಯ ಮಾದರಿಯಾಗಿದೆ. ಹಾಗಾಗಿ ಕಂಬಾರರ ಕಲ್ಪನೆಯ 'ಕ್ರಾಂತಿ' ಮತ್ತು ಯಥಾಸ್ಥಿತಿವಾದದ ತೆಕ್ಕೆಗೆ ಬಂದು ಬೀಳುವಂತೆ ಅನಿಸುತ್ತದೆ. ನಾಟಕಗಳ ಅಂತ್ಯದ ಸ್ವರೂಪ ಮತ್ತು ಅನುರಣಿಸುವ ಧ್ವನಿಶಕ್ತಿಗಿಂತ ತುಸು ಭಿನ್ನವಾದ ಅಂತ್ಯವನ್ನು ಪಡೆದಿರುವ 'ಸಿಂಗಾರೆವ್ವ' ನಾಯಕಿಯ ಬಯಕೆ ಅವಳು ಸತ್ತ ಮೇಲಾದರೂ ಈಡೇರುವುದರ ಮೂಲಕ ಬೇರೊಂದು ಚಲನಶೀಲ ವ್ಯವಸ್ಥೆಯನ್ನು ತೆರೆದು ತೋರಿಸಬಹುದಾದರೂ, ಇದು ಪೂರ್ತಿಯಾಗಿ ಊಳಿಗಮಾನ್ಯ ಚೌಕಟ್ಟನ್ನು ನಾಶ ಮಾಡುವ ಶಕ್ತಿಗಳ ಸಂಘರ್ಷದ ಸಮರ್ಪಕವಾದ ಪ್ರಸ್ತುತೀಕರಣವಲ್ಲ ಎಂದೇ ಹೇಳಬೇಕಾಗುತ್ತದೆ.

ಇದೇ ಲೇಖಕರ ಹಿಂದಿನ ಕಾದಂಬರಿಗಳಾದ 'ಕರಿಮಾಯಿ' ಮತ್ತು 'ಜೀಕೆ ಮಾಸ್ತರ.....' 'ಸಿಂಗಾರೆವ್ವ' ತಾತ್ವಿಕತೆಯ ದೃಷ್ಟಿಯಿಂದ ಹೆಚ್ಚು ಪ್ರಬುದ್ಧವಾಗಿ ಮೂಡಿ ಬಂದಿರುವುದನ್ನು ಗಮನಿಸಿಯೂ ಈ ಮಾತನ್ನು ಇಲ್ಲಿ ದಾಖಲಿಸಬೇಕಾಗಿದೆ. ಗ್ರಾಮೀಣ ಬದುಕಿನ ವಿವಿಧ ಪಾತ್ರಗಳ ಜೀವಂತ ಚಿತ್ರವನ್ನು ಕಟ್ಟಿಕೊಡಬಲ್ಲ 'ಕರಿಮಾಯಿ' ತನ್ನ ತಾತ್ವಿಕತೆಯನ್ನು ಬಿಟ್ಟು ಕೊಡುವುದಿಲ್ಲ. ಹೆಚ್ಚೆಂದರೆ, ಬಿಡಿ ಬಿಡಿ ಪ್ರಸಂಗಗಳ ಮತ್ತು ಪಾತ್ರಗಳ ಪರಿಚಯದಂತೆ, ಗ್ರಾಮೀಣ ಜಗತ್ತಿನಲ್ಲಿ ಆಧುನಿಕತೆಯ ಸೋಂಕಿನಿಂದ ಉಂಟಾಗುತ್ತಿರುವ ಸ್ಥಿತ್ಯಂತರವನ್ನು ಹಾಸ್ಯಪೂರ್ಣಶೈಲಿಯಲ್ಲಿ ಮಂಡಿಸುವಷ್ಟಕ್ಕೆ ನಿಂತು ಬಿಡುತ್ತದೆ. ಅದೇ 'ಜೀಕೆ ಮಾಸ್ತರ............' ಒಂದು ನೀಳ್ಗತೆಯಾಗಿದ್ದು, ಪೂರ್ತಿ ಸಿನಿಮೀಯಾ ಪ್ರಸಂಗಗಳಿಂದ ಕೂಡಿದೆ. 'ಸಿಂಗಾರೆವ್ವ' ದಲ್ಲೂ ಇಂಥ ಪ್ರಸಂಗ ಇಲ್ಲವೆಂದಲ್ಲ, ಆದರೆ ಒಟ್ಟು ಕಾದಂಬರಿಯ ಸ್ವರೂಪ ಮತ್ತು ಪ್ರಭಾವದ ದೃಷ್ಟಿಯಿಂದ 'ಸಿಂಗಾರೆವ್ವ' ತನ್ನ ಆಶಯ ಮತ್ತು ಅದಕ್ಕೆ ಅನುಗುಣವಾದ ಆ ಕೃತಿಯ ಕಲಾತ್ಮಕತೆಯಲ್ಲಿ ಹೆಚ್ಚು ಮೌಲಿಕವಾದುದು ಅನಿಸುತ್ತದೆ. ಈ ಲೇಖಕರ ನಾಟಕಗಳ ಅಂತ್ಯದಲ್ಲಿ, ಕ್ರಾಂತಿ ಕುರಿತ ಸಿನಿಕತನ ಹಾಗೂ ಯಥಾಸ್ಥಿತಿ ಕುರಿತ ಅಸಡ್ಡಾಳತನದ ಭಾವನೆ ಮೂಡಿದರೆ, ಈ ಕಾದಂಬರಿಯಲ್ಲಿ ಈ ಪ್ರವೃತ್ತಿ ಅಷ್ಟಾಗಿ ಕಾಣಿಸುವುದಿಲ್ಲ ಎಂಬುದು ಸಮಾಧಾನದ ಸಂಗತಿಯಾಗಿದೆ. ಆದರೆ ಈ ಅಂಶವನ್ನು ಕಾದಂಬರಿಯ ತಾತ್ವಿಕತೆಯಲ್ಲಾಗಿರುವ ಬೆಳೆವಣಿಗೆ ಎಂದು ಗುರುತಿಸುವಾಗಲೂ ಈ ಬೆಳವಣಿಗೆ ಕೂಡ ಹೊಂದಾಣಿಕೆಯ ನಮೂನೆಯದ್ದಾಗಿರುವುದನ್ನು ಕಡೆಗಣಿಸುವಂತಿಲ್ಲ. ಅಂದರೆ ಹೊಲೆಯ - ಮರ್‍ಯಾನೊಂದಿಗೆ ಕೂಡಿಕೊಂಡು ಗಂಡು ಮಗುವಿಗೆ ಜನ್ಮ ಕೊಡುತ್ತಲೇ ಗೌಡತಿ ಸಾಯುವುದು; ಅವಳೊಂದಿಗೆ ಮರ್‍ಯಾ ಸಾಯುವುದು ಇಂಥ ಅಂತ್ಯವನ್ನು ಕಾದಂಬರಿಕಾರರು ಕಲ್ಪಿಸಬಲ್ಲರೇ ವಿನಾ, ದೇಸಾಯಿ ಆತ್ಮಹತ್ಯೆ ಮಾಡಿಕೊಂಡ ಮೇಲೆ ಅರಮನೆಯಲ್ಲಿ ಗೌಡತಿ ಮರ್‍ಯಾನೊಂದಿಗೆ ಸಂಸಾರ ನಡೆಸಿ, ಕಂಬ ಕಂಬಕ್ಕೂ ಜೀವ ತುಂಬುವ ತನ್ನ ಆಸೆಯನ್ನು ಅರ್ಥಪೂರ್ಣವಾಗಿ ನೆರವೇರಿಸಿಕೊಳ್ಳುವ ಸಾಧ್ಯತೆಯನ್ನಲ್ಲ. ಈ ಹೊಂದಾಣಿಕೆಯ ಸ್ವರೂಪದ ತಾತ್ವಿಕತೆಯ ಮಿತಿ ಕಂಬಾರರ ಪ್ರಧಾನ ಕಾಳಜಿಯಾಗಿರುವ ಮುಕ್ತ ಲೈಂಗಿಕತೆಗೆ ಅಲವತ್ತಿಕೊಂಡುಬರುವ ಅಸಮರ್ಪಕ ವೈಚಾರಿಕ ಭೂಮಿಕೆಯಿಂದಲೇ ನಿಷ್ಪನ್ನವಾಗಿರುವಂತಿದೆ.

ಸ್ವಾರಸ್ಯದ ಸಂಗತಿ ಎಂದರೆ 'ಸಿಂಗಾರೆವ್ವ' ಕಾದಂಬರಿ, ವಸ್ತು ಮತ್ತು ತಂತ್ರ-ಎರಡರಲ್ಲೂ ಎಮಿಲಿ ಬ್ರಾಂಟಿಯ ಪ್ರಸಿದ್ಧ ರಮ್ಯ ಕಾದಂಬರಿಯ 'ವುದರಿಂಗ್ ಹೈಟ್ಸ' ನ್ನು ಹತ್ತಿರದಿಂದ ಹೋಲುತ್ತಿರುವುದು. 'ಸಿಂಗಾರೆವ್ವ'ದಲ್ಲಿ ಗೌಡತಿಯ ಒಡನಾಡಿನೇ ಶಿವನಿಂಗವ್ವನ ನಿರೂಪಣೆಯ ಮೂಲಕ ಕತೆ ಬೆಳೆದರೆ ಇಲ್ಲಿ ಹಿರಿಯ ಕಿರಿಯ ಕೆಥರೀನ್‌ಗಳ ನಿಕಟವರ್ತಿ, ಅವರ ಪೋಷಕಿಯಾದ ಶ್ರೀಮತಿ ಡೀನ್ ಕತೆ ಹೇಳುತ್ತಾಳೆ. ಮಧ್ಯ ಮಧ್ಯೆ ನಿರೂಪಕ (ಕಾದಂಬರಿಕಾರ) ತನ್ನ ವ್ಯಾಖ್ಯಾನಗಳ ಮೂಲಕ ಕತೆಗೆ ಇತರ ಸಂಗತಿಗಳನ್ನು ನಿರೂಪಿಸಿದರೆ ಇಲ್ಲಿ ಬಾಡಿಗೆದಾರ ಲಾಕ್ ವುಡ್ ಕತೆಯ ಆರಂಭ -ಅಂತ್ಯಗಳಲ್ಲಿ ಕಾಣಿಸಿಕೊಂಡು ಕತೆಯ ವಸ್ತುವಿನ ಕಾಲ ಮತ್ತು ರಚನೆಯ ಕಾಲದ ನಡುವಣ ಅಂತರವನ್ನು ತುಂಬಿಸುವ ಮಾತುಗಳನ್ನು ಆಡುತ್ತಾನೆ.

ಎರಡರಲ್ಲೂ ಕಷ್ಟಕ್ಕೊಳಗಾಗುವ ಹೆಣ್ಣು ಪಾತ್ರಗಳು ಮತ್ತು ಆಗಾಗ ಅವರು ಉನ್ಮಾದಕ್ಕೊಳಗಾಗುತ್ತಾರೆ. ಹೈಟ್ಸ್ ನಲ್ಲಿ ವೈದ್ಯನ ಮೂಲಕ ಆರೈಕೆಯಾದರೆ ಇಲ್ಲಿ ಮರ್‍ಯಾನ ನಾಟಿ ವೈದ್ಯರಿಂದ ಗೌಡತಿಗೆ ವಾಸಿಯಾಗುತ್ತದೆ. ಜತೆಗೆ ಇಲ್ಲಿ ತಾಂತ್ರಿಕ ಹುಚ್ಚಯ್ಯ ಸಂತಾನಕ್ಕಾಗಿ ತಾಂತ್ರಿಕ ವಿಧಿಗಳನ್ನು ನಡೆಸುವುದನ್ನು ಗಮನಿಸಬೇಕು. ದಾರಿ ತಪ್ಪಿದ ಗಂಡನನ್ನು ದಾರಿಗೆ ತರಲು ಸಿಂಗಾರೆವ್ವ ಮನವೊಲಿಸುವ ತಂತ್ರವನ್ನು ಅನುಸರಿಸಿದರೆ ಹೈಟ್ಸ್‌ಲ್ಲಿ ಪಾಠಗಳ ಮೂಲಕ ಈ ಕೆಲಸ ನಡೆಯುತ್ತದೆ.

ಸರಗಂ ದೇಸಾಯಿಯಂಥದೇ ರೋಗಗ್ರಸ್ತ, ದುರ್ಬಲ ಪಾತ್ರ ಎಡ್ಗರನದು. ಹೀತ್‌ಕ್ಲೀಫ್‌ನಂತೂ ತನ್ನ ಒರಟು ವರ್ತನೆಯೊಳಗೂ ಜೀವಂತ ಪ್ರೇಮದಿಂದಾಗಿ ಮರ್ಯಾನಿಗೆ ಹತ್ತಿರವಾಗುತ್ತಾನೆ. ಒಂದರಲ್ಲಿ ತನ್ನ ಪ್ರೇಯಸಿ ಸತ್ತ ನೋವಿನಿಂದ ಊಟ ಸ್ವೀಕರಿಸದೆ ಸಾಯುವುದಿದ್ದರೆ, ಇನ್ನೊಂದರಲ್ಲಿ ನಾಗರಹಾವನ್ನು ಹಿಡಿದು ಕಚ್ಚಿಸಿಕೊಂಡು ಸಾಯುವುದಿದೆ. ಎರಡರಲ್ಲೂ ಕೋರ್ಟು ವ್ಯವಹಾರಗಳ ವಿವರವಾದ ಉಲ್ಲೇಖವಿದೆ. ಗಂಡು ಪಾತ್ರಗಳ ದಬ್ಬಾಳಿಕೆ, ದಾರ್ಷ್ಟ್ಯ, ಸಣ್ಣತನ, ಸ್ವಾರ್ಥ, ದೈಹಿಕ ದೌರ್ಬಲ್ಯಗಳ ವಿರುದ್ಧ ಧ್ರುವದಲ್ಲಿ ಹೆಣ್ಣು ಪಾತ್ರಗಳು ಪ್ರೇಮ ತ್ಯಾಗಗಳ ದಿಟ್ಟ ಮೂರ್ತಿಗಳಾಗಿ ಎದ್ದು ನಿಲ್ಲುವುದು ಎರಡಕ್ಕೂ ಸಮಾನವಾಗಿದೆ.

ಈ ಸಾದೃಶ್ಯವನ್ನು ಗಮನಿದಾಗ ಇದು ಆಕಸ್ಮಿಕವಾಗಿರುವುದಕ್ಕಿಂತ ನೇರ ಪ್ರಭಾವ ಫಲವಾಗಿದೆ ಎನ್ನಬೇಕಾಗುತ್ತದೆ. ವರ್ಣನೆ, ಪಾತ್ರಕಲ್ಪನೆ ವಸ್ತು, ವಿನ್ಯಾಸ, ಎಲ್ಲವೂ ಈ ಮಾತನ್ನು ಸಮರ್ಥಿಸುತ್ತವೆ. ಹಾಗಿದ್ದರೂ ಕಾದಂಬರಿಕಾರರು 'ಹೈಟ್ಸ್'ನಿಂದ ಪ್ರೇರಣೆ, ಸ್ಫೂರ್ತಿ, ಪ್ರಭಾವ ಪಡೆದಿರುವ ಸಂಗತಿಯ ಕುರಿತು ಚಕಾರ ಎತ್ತದಿರುವುದು ಆಶ್ಚರ್ಯಕರ.

ಆದರೆ ಇಲ್ಲೊಂದು ಮಾತನ್ನು ಹೇಳಬೇಕು. ಎಂಥ ವಸ್ತುವನ್ನು ಪ್ರಾದೇಶಿಕ ಸೊಗಡಿನ ಸ್ವತಂತ್ರ ಕೃತಿಯನ್ನಾಗಿ ಕಲ್ಪಿಸುವ ಮಾಂತ್ರಿಕ ಚೈತನ್ಯ, ಸೃಜನಶೀಲ ಪ್ರತಿಭೆ ಕಂಬಾರರದು ಎಂಬಲ್ಲಿ ಎರಡು ಮಾತಿರಲಾರದು. ಇಲ್ಲಿನ ಬಹುತೇಕ ಘಟನೆಗಳನ್ನು, ವಿವರಗಳನ್ನು ಸ್ಥಳೀಕೃತಗೊಳಿಸಲಾಗಿದ್ದು, ಬೇರೆಯೇ ಪರಿಸರದ ಸ್ವತಂತ್ರ ಪ್ರಭಾವಳಿ ನೀಡಲಾಗಿದೆ. ಮರ್ಯಾ, ಸಿಂಗಾರವ್ವ, ದೇಸಾಯಿ, ಹುಚ್ಚಪ್ಪ - ಎಲ್ಲ ಪಾತ್ರಗಳೂ ತಮ್ಮದೇ ಅನನ್ಯತೆಯೊಂದಿಗೆ ಒಡೆದು ಮೂಡಿದ್ದು, ದಟ್ಟವಾದ ಪ್ರಭಾವ ಮಾಡುವಲ್ಲಿ ಸಫಲವಾಗುತ್ತವೆ.

ಸಾಮಾನ್ಯವಾಗಿ ಗೌಡರೆಲ್ಲ ಭಂಡರು, ಕಚ್ಚೆ ಹರುಕರು, ದುರ್ಬಲರು ಎಂಬ ಕಂಬಾರರ ಕೃತಿಗಳ ಗ್ರಹೀತ ತತ್ವಕ್ಕೆ ಅನುಸಾರವಾಗಿಯೇ ಇಲ್ಲಿಯ ದೇಸಾಯಿಯ ಚಿತ್ರಣ ನೀಡಲಾಗಿದ್ದರೂ, ಆತನ ವ್ಯಕ್ತಿತ್ವ ದುರ್ಬಲ ಅಂಶಗಳನ್ನು ಸರಳೀಕರಿಸದೆ ತುಸು ದ್ವಂದ್ವಾತ್ಮಕವಾಗಿ ಪರಿಭಾವಿಸಿರುವುದು ಮುಖ್ಯವಾಗಿದೆ. ಆತನ ಕಲಾ ಪ್ರೇಮ ದಾನ ಶೂರತ್ವ, ಸೇವಕರ ಕುರಿತಾದ ವಿಪರೀತ ವಿಶ್ವಾಸ ಇವೆಲ್ಲಾ ಇಷ್ಟಾತ್ಮಕ ಗುಣಗಳಾಗಿರುವುದಕ್ಕೆ ಪ್ರತಿಯಾಗಿ ಆತನ ಹುಂಬತನ ಮತ್ತು ದೌರ್ಬಲ್ಯಗಳ ಸಂರಕ್ಷಣಾ ತಂತ್ರವೂ ಆಗಿದೆ ಎಂಬ ಮನೋವಿಶ್ಲೇಷಣಾತ್ಮಕ ಅಂಶಗಳನ್ನು ಕಾದಂಬರಿ ಪ್ರಕಟವಾಗಿ (ಪು ೨೦೦) ಮತ್ತು ಸೂಕ್ಷವಾಗಿ ಧ್ವನಿಸುತ್ತದೆ. ಮರ್ಯಾನನ್ನು ಪೋಲೀಸರಿಗೆ ಒಪ್ಪಿಸಬೇಕೆಂದು ಗೌಡ ತಂತ್ರ ನಡೆಸಿದಾಗ, ಅರಮನೆಯನ್ನು ಹರಾಜು ಹಾಕಲು ಸೆಟ್ಟಿ ಕುತಂತ್ರ ಹೂಡಿದಾಗ, ದೇಸಾಯಿಯ ವ್ಯಕ್ತಿತ್ವದ ಈ ಗುಣಗಳು ಹೆಚ್ಚು ಉಜ್ವಲವಾಗಿ ಪ್ರಕಾಶಗೊಳ್ಳುತ್ತವೆ. ಆತನ ಗತವೈಭವದ ಮೆಲುಕು, ಕೈಲಾಗದುದರ ಹಪಹಪಿಕೆಯಾಗುತ್ತದೆ; ಮನೆತನದ ಮೇಲಿನ ಗೌರವವನ್ನು ಆತ ತನ್ನ ಚರ್ಯೆಯಲ್ಲಿ, ಕೃತಿಯಲ್ಲಿ ಸಾರ್ಥಕಗೊಳಿಸುವುದಿಲ್ಲ ಎಂದೇ ಆತ ಹಾಸ್ಯಾಸ್ಪದನಾಗುತ್ತಾನೆ. ಅವನ ವ್ಯಕ್ತಿತ್ವದಲ್ಲಿನ ಈ ದುರ್ಬಲ ಅಂಶಗಳು ಮುಖ್ಯವಾಗಿ ಆತನ ನಾಟಕ ಪ್ರೇಮದ ಹೆಸರಿನಲ್ಲಿ ಆಧುನಿಕತೆಯ ಗೀಳು, ಪ್ರದರ್ಶನ ಪ್ರಿಯತೆ - ಒಟ್ಟು ಗ್ರಾಮೀಣ ವ್ಯವಸ್ಥೆ, ಹೊಸ ಆರ್ಥಿಕ ಪಲ್ಲಟದ ಸ್ಥಿತಿಯಲ್ಲಿ ಹೆಚ್ಚೆಚ್ಚು ನಗರಾಕ್ರಾಂತವಾಗಿ ವಿಘಟನಶೀಲವಾಗುತ್ತಿರುವುದು ಧ್ವನಿಸುವ ನೆಲೆಯಲ್ಲಿ ನಿರೂಪಣೆಗೊಂಡಿದೆ. ಕಂಬಾರರ ಪ್ರಧಾನ ಕಾಳಜಿಯಾಗಿರುವ ಈ ಹಳ್ಳಿ - ನಗರಗಳೊಳಗಣ ತಾರತಮ್ಯ, ವಿಕರ್ಷಣೆ - ಆಕರ್ಷಣೆಗಳ ದ್ವಂದ್ವ ಇಲ್ಲಿಯೂ ಕೆಲಸ ಮಾಡಿದೆ. ನಗರದಲ್ಲಿ ಮನೆಮಾತಾಗಿರುವ ನಾಚುವಾಲಿಗಳನ್ನು, ಕೊಲ್ಲಾಪುರದ ರಾಜರ ಸೂಳೆಯನ್ನು ತರಿಸಿಕೊಂಡು ಅವರೊಂದಿಗೆ ಅಭಿನಯಿಸುವುದು. ಅವರಿಗಾಗಿ ದುಂದು ವೆಚ್ಚ ಮಾಡುವುದು. ಅವರ ತೊಡೆ ನೋಡಿ ಬಹುಷಾ ಆಗಿ ಬೀಳುವ ದೇಸಾಯಿಯ ವ್ಯಕ್ತಿತ್ವದ ವಿವರ ಕಟ್ಟಿಕೊಡುವ ಅನುಭವದ ತೀವ್ರತೆ, ಮೂರ್ತತೆ ಒಂದು ಕಡೆ; ಕತೆ ಹೇಳುವ ಸೀನಗೆವ್ವ ಪೇಟೆಯ ಬಗ್ಗೆ ಮುಗ್ಧ ಹಳ್ಳಿಗನ ಮಾಮೂಲು ಭ್ರಮಾತ್ಮಕ ಉತ್ಪ್ರೇಕ್ಷಿತ ಪ್ರತಿಕ್ರಿಯೆ ನೀಡುವುದು ಇನ್ನೊಂದು ಕಡೆ ಇವು ಕಾದಂಬರಿಕಾರನ ಕಾಳಜಿಯನ್ನು ಬರಿದೇ ಸೂಚಿಸುವುದಿಲ್ಲ, ಈ ಕಾಳಜಿಯಿಂದ ಕಾದಂಬರಿಯ ಆಕೃತಿಯೂ ನಿಯಂತ್ರಿತವಾಗುವ ಸ್ವರೂಪವನ್ನು ಬಣ್ಣಿಸುತ್ತವೆ.

ಮೇಲಿನ ಎರಡು ಮಾದರಿಯ ಪುಸ್ತಕ ವಿಮರ್ಶೆಗಳನ್ನು ನೋಡಿದರೆ ಎರಡು ವಿಮರ್ಶೆಗಳು

ಒಂದೇ ಕೃತಿಯನ್ನು ಕುರಿತವುಗಳು ಮತ್ತು ಈ ಕೃತಿಯನ್ನು ವಿಮರ್ಶಿಸಿರುವವರು ಈಗಾಗಲೇ ವಿಮರ್ಶಕರೆಂದು ಹೆಸರು ಪಡೆದಿರುವವರು. ಹೀಗೆ ಸಮಾನಾಂತರ ಹೊಂದಿದ್ದರು ಈ ಕೃತಿ ವಿಮರ್ಶೆಗಳು ಲೇಖನ ಸ್ವರೂಪದಲ್ಲಿ ರೂಪ ವ್ಯತ್ಯಾಸಗಳಲ್ಲಿ ಭಿನ್ನವಾಗಿವೆ. ಒಂದು ಲೇಖನ ದಿನಪತ್ರಿಕೆಗೆ ಬರೆದಿರುವಂತಹದ್ದು, ಇನ್ನೊಂದು ಸಾಹಿತ್ಯ ಪತ್ರಿಕೆಗೆ ಬರೆದಿರುವಂತಹದ್ದು. ಆ ಕಾರಣದಿಂದ ಈ ಲೇಖನಗಳು ಗಾತ್ರ, ವಿಶ್ಲೇಷಣೆ, ವಿಮರ್ಶೆಯ ಸ್ವರೂಪದಲ್ಲಿ ಪರಸ್ಪರ ಬೇರೆ ಬೇರೆಯಾಗಿವೆ. ಪ್ರಜಾವಾಣಿಯಲ್ಲಿ ಟಿ.ಪಿ. ಅಶೋಕ ಮಾಡಿರುವ ಪುಸ್ತಕ ವಿಮರ್ಶೆಯಲ್ಲಿ 'ಕೃತಿ' ಮುಖ್ಯವಾಗಿ ಕೃತಿಯ ಘಟನೆ, ವಿವರ ಆಶಯಗಳಿಗೆ ಹೆಚ್ಚು ಒತ್ತು ಬಿದ್ದಿದೆ. ಹಾಗೆ ಕೃತಿಯನ್ನು ವಿವಿಧ ಭಾಗವಾಗಿ ಒಡೆದು ಪರಿವೀಕ್ಷಿಸುವ ಮಾದರಿಯು ಕಂಡುಬರುತ್ತದೆ. ಲೇಖಕರ ಇತರ ಕೃತಿಗಳು ಇಲ್ಲಿ ಕೇವಲ ಅಚಾನಕ್ಕಾಗಿ ಬಂದಿವೆಯೇ ಹೊರತು, ಪ್ರಸ್ತುತ ಕೃತಿಯ ಜೊತೆಯಲ್ಲಿ ವಿಶ್ಲೇಷಣೆಗೆ ಒಳಗಾಗುವ ಉದ್ದೇಶದಿಂದ ಬಂದಿಲ್ಲ. ಅದರೆ ಆರ್ಕೆ ಮಣಿಪಾಲ ಅವರ ವಿಮರ್ಶೆ ಪ್ರಜಾವಾಣಿ ಪತ್ರಿಕೆಯ ವಿಮರ್ಶೆಗಿಂತ ತೀರ ಭಿನ್ನ. ಇವರು ಕೊಟ್ಟಿರುವ ಶೀರ್ಷಿಕೆಯೇ 'ಸಿಂಗಾರೆವ್ವದ ತಾತ್ವಿಕತೆಯ ಸ್ವರೂಪ' ಎಂದಿರುವುದರಿಂದ ಲೇಖನದಲ್ಲಿ ಕೃತಿಯ ತಾತ್ವಿಕತೆಗೆ ಹೆಚ್ಚು ಒತ್ತು ಬಿದ್ದಿದೆ. ಇವರು ಕೃತಿ ವಿಮರ್ಶೆಗೆ ತೊಡಗಿಸಿಕೊಳ್ಳುವ ಮೊದಲು ಕೃತಿ ಬಂದಿರುವ ಹಿನ್ನೆಲೆಯನ್ನು ಮತ್ತು ಅದೇ ಪರಂಪರೆಯಲ್ಲಿ ಬೆಳೆದು ಬಂದಿರುವ ಇತರ ಕಾದಂಬರಿಗಳನ್ನು ಕುರಿತು ಚರ್ಚಿಸುತ್ತಾರೆ. ಇವರು ಕೃತಿಯ ಮೂಲಕವೇ ಸಮಕಾಲೀನ ವಿಚಾರಗಳನ್ನು ಕುರಿತು ಚರ್ಚಿಸುತ್ತಾರೆ. ಸಮಕಾಲೀನಕ್ಕೆ ಕೃತಿ ಸ್ಪಂದಿಸಬೇಕಾದರೆ ಏನೆಲ್ಲ ಅಂಶಗಳನ್ನು ಒಳಗೊಂಡಿರಬೇಕು ಎಂಬುದನ್ನು ಕೃತಿಯ ಮೂಲಕವೇ ಎತ್ತಿ ತೋರಿಸುತ್ತಾರೆ. ಇವರು ಕೃತಿ ವಿಮರ್ಶೆಗೆ ಬಂದಿರುವ ಕೃತಿಯನ್ನಷ್ಟೇ ಚರ್ಚೆಗೆ ವಸ್ತುವಾಗಿಸಿಕೊಂಡಿಲ್ಲ. ಅದಕ್ಕೆ ಪೂರಕವಾಗಿ ಅದೇ ಲೇಖಕರ ಸೃಜನಶೀಲತೆಯ ಮೂಲವನ್ನು ಗುರುತಿಸುತ್ತಾರೆ. ಅಲ್ಲದೆ, ಪ್ರಸ್ತುತ ಕೃತಿಗೆ ಪ್ರೇರಣೆ ನೀಡಿರುವ ಕೃತಿಯನ್ನು ಸಹ ಚರ್ಚೆಗೆ ವಸ್ತುವಾಗಿಸಿಕೊಂಡಿದ್ದಾರೆ. ಪ್ರೇರಣೆಯ ಕೃತಿ ಮತ್ತು ಪ್ರಸ್ತುತ ಕೃತಿ ಇವೆರಡಕ್ಕೂ ಎಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ, ಅದಕ್ಕಿಂತ ಇದು ಹೇಗೆ ಬೇರೆಯಾಗಿ ನಿಲ್ಲುತ್ತದೆ, ಎಂಬುದನ್ನು ಗುರುತಿಸುತ್ತಾರೆ. ವಿಮರ್ಶೆಯ ಇನ್ನೊಂದು ವಿಧಾನವೆಂದರೆ ಕೃತಿಯೊಳಗೆ ಕೆಲವು ಪ್ರಶ್ನೆಗಳನ್ನು ಎತ್ತಿ ಅದನ್ನು ವಿಮರ್ಶಾ ಪರಂಪರೆಯಲ್ಲಿಟ್ಟು ವಿಶ್ಲೇಷಿಸುತ್ತಾರೆ. ಈ ಎಲ್ಲಾ ಕಾರಣದಿಂದ 'ಈ ಪುಸ್ತಕ ವಿಮರ್ಶೆ' ಸಂಪೂರ್ಣ ವಿಮರ್ಶೆಯ ಸ್ವರೂಪವನ್ನು ಪಡೆದುಕೊಂಡುಬಿಟ್ಟಿದೆ.

ಆದರೆ ಪ್ರಜಾವಾಣಿ 'ಪುಸ್ತಕ ವಿಮರ್ಶೆ' ಈ ಮಟ್ಟಕ್ಕೆ ಬೆಳೆದಿಲ್ಲ. ಇದಕ್ಕೆ ಹಲವಾರು ಕಾರಣಗಳಿವೆ. ಪ್ರಜಾವಾಣಿಯ ಲೇಖನ ಸೀಮಿತ ಮನಸ್ಸಿನ ಓದುಗರನ್ನು ಗಮನದಲ್ಲಿಟ್ಟುಕೊಂಡು ವಿಮರ್ಶಿಸಿದ ಲೇಖನ. ಅಲ್ಲದೆ, ತುಂಬಾ ತುರ್ತು ಈ ಲೇಖನಕ್ಕೆ ಒತ್ತು ಬಿದಿದ್ದೆ, ಮತ್ತು ದಿನ ಪತ್ರಿಕೆ ಕೊಟ್ಟಿರುವ ಸ್ಥಳಮಿತಿ ಈ ಕಾರಣಗಳಿಂದ ಗಾತ್ರದಲ್ಲೂ ಈ ಲೇಖನ ಕಡಿಮೆಯಿದೆ. ಹಾಗೆಯೆ ಚರ್ಚಿಸುವ ವಿಚಾರಗಳಲ್ಲೂ ಕೊರತೆಯಿದೆ. ಸಾಹಿತ್ಯ ಪತ್ರಿಕೆಯಲ್ಲಿ ಬಂದಿರುವ ಪುಸ್ತಕ ವಿಮರ್ಶೆ ತಾತ್ವಿಕತೆಯ ಸ್ವರೂಪ ಪಡೆಯಲು ತುರ್ತಿಲ್ಲ, ಇಲ್ಲಿ ಪುಸ್ತಕ ಪರಿಚಯ ವಿವರಗಳಿಗಿಂತ ವಿಮರ್ಶೆಯ ಕಡೆ ಹೆಚ್ಚು

ಚರ್ಚಿತವಾಗಬೇಕು ಎಂಬ ಆಶಯ, ಅದಕ್ಕೆ ಪೂರಕವಾಗಿ ಸಾಹಿತ್ಯ ಪತ್ರಿಕೆಯ ಗಂಭೀರ ಓದುಗರು ಇವೆಲ್ಲವುಗಳು ಈ ವಿಮರ್ಶೆಯ ರೂಪ ದಿನಪತ್ರಿಕೆಯ ಪುಸ್ತಕ ವಿಮರ್ಶೆಗಿಂತ ಭಿನ್ನವಾಗಲು ಕಾರಣವಾಗಿದೆ. ಆರ್ಕೆಯವರ ಕೃತಿ ಕುರಿತ ಚರ್ಚೆ ಕೃತಿಯ ಮುಂದಿನ ವಿಮರ್ಶೆಗೆ ದಾರಿ ಮಾಡಿಕೊಡುವಂತೆ ಪ್ರಶ್ನೆಗಳನ್ನು ಎತ್ತಿರುವುದು ಕಂಡುಬರುತ್ತದೆ. ಈ ಎಲ್ಲ ಕಾರಣಗಳಿಂದ ಸಾಹಿತ್ಯ ಪತ್ರಿಕೆಯ ವಿಮರ್ಶೆಗೆ ಸಾಂಸ್ಕೃತಿಕ ಆಯಾಮ ತಾನಾಗಿಯೇ ಲಭಿಸಿದೆ.

ಹೀಗೆ ಹಲವು ಕಾರಣಗಳಿಂದ ಒಂದೇ ಕೃತಿ ವಿವಿಧ ವಿಮರ್ಶಕರ ವಿವಿಧ ಪತ್ರಿಕೆಗಳಲ್ಲಿ ಪ್ರಕಟಗೊಂಡರೆ ವಿಮರ್ಶೆಗಳು ಒಂದೇ ತೆರನಾಗಿರುವುದಿಲ್ಲ, ವಿಭಿನ್ನ ಧೋರಣೆಗಳು ತಾತ್ವಿಕ ದೃಷ್ಟಿಗಳನ್ನು ಪಡೆಯುತ್ತವೆ.

ದೈನಿಕ ನಿಯತಕಾಲಿಕೆಗಳಲ್ಲಿ ಬರುತ್ತಿದ್ದ ಪುಸ್ತಕ ವಿಮರ್ಶೆಗಳು ನಿರ್ದಿಷ್ಟ ಓದುಗರನ್ನು ಅವಲಂಬಿಸಿರುವುದರಿಂದ ಅಲ್ಲದೆ, ಪತ್ರಿಕೆಯ ಪ್ರಸರಣ ಸಂಖ್ಯೆಯ ಮೇಲೆ ನಿಂತಿರುವುದರಿಂದ ಅವುಗಳಲ್ಲಿ ಈ ಮೊದಲು ಗಂಭೀರವಾದ ಪುಸ್ತಕ ವಿಮರ್ಶೆಗೆ ತೊಡಗಿರಲಿಲ್ಲ. ಆದರೆ ಸಾಹಿತ್ಯ ಪತ್ರಿಕೆಗಳಲ್ಲಿ ಪ್ರಸರಣ ಕಡಿಮೆಯಿದ್ದರೂ ಗಂಭೀರವಾಗಿಯೇ ಪುಸ್ತಕ ವಿಮರ್ಶೆಗಳು ನಡೆಯುತ್ತವೆ. ಇದಕ್ಕೆ ಗಂಭೀರವಾದ ಓದುಗರೇ ಮುಖ್ಯ ಕಾರಣವೆನ್ನಬಹುದು. ಆದರೆ ಇಂದು ಪುಸ್ತಕ ವಿಮರ್ಶೆಗಳು ಕೇವಲ ಸಾಹಿತ್ಯ ಪತ್ರಿಕೆಗಳಿಗೆ ಖಾಯಂ ಆಗದೆ ಅವುಗಳು ಈಗ ವಾರ ಪತ್ರಿಕೆ, ಪಾಕ್ಷಿಕ, ಮಾಸ, ತ್ರೈಮಾಸಿಕ ಮುಂತಾದ ಪತ್ರಿಕೆಗಳಲ್ಲೂ ಪ್ರಕಟವಾಗುತ್ತಿವೆ.

೪.೩.೫. ಪುಸ್ತಕ ವಿಮರ್ಶೆಯನ್ನು ನಿಲ್ಲಿಸುತ್ತಿರುವ ಪತ್ರಿಕೆಗಳು

ಪುಸ್ತಕ ವಿಮರ್ಶೆ ಎಲ್ಲ ಪತ್ರಿಕೆಗಳಿಗೂ ವ್ಯಾಪಿಸಿರುವ ಹಿನ್ನೆಲೆಯಲ್ಲಿಯೇ ಕೆಲವು ಪತ್ರಿಕೆಗಳು ಪುಸ್ತಕ ವಿಮರ್ಶಾ ಅಂಕಣವನ್ನು ನಿಲ್ಲಿಸುತ್ತಿವೆ, ಇಲ್ಲವೆ ಪ್ರಾಸಂಗಿಕವಾಗಿ ಪ್ರಕಟಿಸುತ್ತಿವೆ. ಲಂಕೇಶ್, ಹಾಯ್ ಬೆಂಗಳೂರು, ಅಗ್ನಿ ಮುಂತಾದವುಗಳಲ್ಲಿ ಪುಸ್ತಕ ವಿಮರ್ಶೆ ಖಾಯಂ ಅಂಕಣವಾಗಿ ಪ್ರಕಟವಾಗುತ್ತಿಲ್ಲ. ಇವುಗಳು ರಾಜಕೀಯ, ರೋಚಕ ಸುದ್ದಿಗಳಿಗೆ ಹೆಚ್ಚು ಮನ್ನಣೆ ನೀಡುತ್ತಿರುವುದು ಇದಕ್ಕೆ ಕಾರಣವೆಂದೆನಿಸಬಹುದು. ರೋಚಕ ಸುದ್ದಿ ವಿಚಾರಗಳು ಕೇವಲ ಕ್ಷೇತ್ರ ಕಾರ್ಯ ಮಾಡಿದರೆ ಸಿದ್ಧವಾಗುತ್ತವೆ. ಇವೆಲ್ಲ ಪ್ರಚಲಿತ ವಿದ್ಯಾಮಾನಗಳಾಗಿ ಸದಾ ಕಣ್ಣಿಗೆ ಕಾಣುತ್ತಿರುತ್ತವೆ. ಹಾಗಾಗಿ ಇವು ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುವುದಿಲ್ಲ. ಆದರೆ ಪುಸ್ತಕ ವಿಮರ್ಶೆಯ ಅಂಕಣವನ್ನು ಪ್ರಕಟಿಸಬೇಕೆಂದರೆ ತುಂಬಾ ತಾಳ್ಮೆನಿರತ ಓದು ಅವಶ್ಯಕ. ಅಲ್ಲದೆ ಪುಸ್ತಕ ವಿಮರ್ಶೆ ತುರ್ತಿಗೆ ಒಗ್ಗಿಕೊಳ್ಳುವಂಥ ಪ್ರಕಾರವಾಗುವುದಿಲ್ಲ. ಏನೇ ಆದರೂ ಕೃತಿಯನ್ನು ಸಂಪೂರ್ಣವಾಗಿ ಓದಿಯೇ ಪುಸ್ತಕ ವಿಮರ್ಶೆಗೆ ತೊಡಗಿಕೊಳ್ಳಬೇಕಾಗುತ್ತದೆ. ಆದರೆ ಈ ವೇಗಗೊಳ್ಳುತ್ತಿರುವ ಆಧುನಿಕತೆಯೂ ಓದುವ ತಾಳ್ಮೆಯನ್ನು ಕಳೆದುಕೊಳ್ಳುತ್ತಿದೆ. ಅಲ್ಲದೆ ಓದುಗರು ಕೃತಿಗಿಂತ ರಮ್ಯ ರೋಚಕ ವಿಷಯಗಳ ಕಡೆ ಗಮನ ವಹಿಸುವುದೂ ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆ ನಿಲ್ಲಿಸುತ್ತಿರುವುದಕ್ಕೆ ಕಾರಣವಾಗಿದೆ.

೪.೪ ಪುಸ್ತಕ ವಿಮರ್ಶೆಯ ಓದುಗ

ಒಂದು ಸಾಹಿತ್ಯ ಕೃತಿ ರಚನೆಯಾಗುವುದು ಕೇವಲ ಕೆಲವೇ ಜನರ ಹಿತಾಸಕ್ತಿಗಾಗಿ ಅಲ್ಲ, ಹಾಗೆಯೇ ಅದು ಕೆಲವೇ ಜನರ ಹಿತಾಸಕ್ತಿಗೆ ರಚನೆಯಾದರೆ ಅದು ಕೆಲವರಷ್ಟೇ ಬರೆದ ಕೆಲವರಷ್ಟೇ ಓದಬಹುದಾದ ರೂಪವಾಗಿ ಉಳಿಯುತ್ತಿತ್ತು. ಆದರೆ ಸಾಹಿತ್ಯ ಇದನ್ನು ಮೀರಿ ಹೆಚ್ಚು ಜನರಿಗೆ ತಲುಪಬೇಕೆಂಬ ಆಶಯದಿಂದ ಹುಟ್ಟಿದ್ದು. ಒಂದು ಸಾಹಿತ್ಯ ಕೃತಿ ಇಷ್ಟೆಲ್ಲ ಗುರಿಗಳನ್ನು ಇಟ್ಟುಕೊಂಡಿರುವಾಗ ಅದರ ಪರಿಧಿಯಲ್ಲೇ ಬರುವ ವಿಮರ್ಶೆಯು ಸಹ ಸಾಹಿತ್ಯದ ಕೆಲಸವನ್ನೆ ಮಾಡಬೇಕಾಗುತ್ತದೆ. ಸಾಹಿತ್ಯ ಕೃತಿಯನ್ನು ಓದಿದಾಗ ಆಗುವ ಅನುಭವಕ್ಕೂ ಅದನ್ನು ಕುರಿತು ಬರೆದಿರುವ ಲೇಖನ ವಿಮರ್ಶೆಗಳನ್ನು ಓದಿದಾಗ ಆಗುವ ಅರ್ಥಗಳಿಗೂ ವ್ಯತ್ಯಾಸವಿರುತ್ತದೆ. ಈ ವ್ಯತ್ಯಾಸ ಕಂಡುಬಂದರೆ ಅದು ಓದುಗರಿಗೂ ವಿಮರ್ಶೆಗೂ ಒಂದು ಸಂಬಂಧವಿದೆಯೆಂದೇ ಅರ್ಥ. ಇಲ್ಲವೇ ಓದುಗನಿಗೆ ಸಾಹಿತ್ಯ ಕೃತಿ ಕೇವಲ ಅನೌಪಚಾರಿಕವಾದ ಓದಾಗಿ ಪರಿಣಮಿಸುತ್ತದೆ. ಒಂದು ಕೃತಿ ಓದಿದಾಗ ಹೇಗೆ ಅನಿಸಿತು ಎಂಬುದಾದರೂ ಓದುಗರಿಗೆ ಹೊಳೆಯಬೇಕು. ಹಾಗೇ ಹೊಳೆದಾಗಲೇ ಪುಸ್ತಕ ವಿಮರ್ಶೆಯ ಪ್ರಾಥಮಿಕ ಸುಳುಹು ದೊರೆತಂತೆ. ಅಲ್ಲಿಂದಲೇ ವಿಮರ್ಶೆ ಮತ್ತು ಓದುಗರ ನಡುವೆ ಸಂವಾದವೇರ್ಪಡುತ್ತದೆ. ಬಾಂಧವ್ಯ ಬೆಳೆಯುತ್ತ ಹೋಗುತ್ತದೆ.

ಒಂದು ಕೃತಿಯನ್ನು ಒಬ್ಬರು ಓದಿದಾಗ ಒಂದು ರೀತಿ ಅನಿಸಬಹುದು ಇನ್ನೊಬ್ಬರು ಓದಿದಾಗ ಇನ್ನೊಂದು ರೀತಿ ಅನಿಸಬಹುದು. ಆದರೆ ಎರಡೂ ಸತ್ಯ. ಈ ಎರಡರ ಅಭಿಪ್ರಾಯಕ್ಕೆ ಮೂಲ ಆ 'ಕೃತಿ'ಯೇ ಆಗಿರುತ್ತದೆ. ಇದು ವಿಮರ್ಶಕರ ಮನೋಭಾವಕ್ಕೆ ಸಂಬಂಧಪಟ್ಟಿದ್ದರೂ ಓದುಗರ ಮನಸ್ಸಿಗೂ ಸಂಬಂಧಪಟ್ಟಿರುತ್ತದೆ. ವಿಮರ್ಶಕರು ಯಾರನ್ನು ಗಮನದಲ್ಲಿಟ್ಟುಕೊಂಡು ವಿಮರ್ಶೆ ಬರೆಯಬೇಕೆಂಬುದು ಮೂಲಭೂತ ಪ್ರಶ್ನೆ, ಲೇಖಕರ ಮೇಲೆ, ಓದುಗರ ಮೇಲೆ, ಅಥವಾ ತಾವು ಲೇಖನ ಕಳಿಸುತ್ತಿರುವ ಪತ್ರಿಕೆಯು ಯಾರ ಪರ ಇದೆ ಎಂಬುದರ ಅರಿವು, ಇವುಗಳೆಲ್ಲ ವಿಮರ್ಶೆಯ ಒಂದು ಅಂಶವಾಗಿ ಪರಿಣಮಿಸಬಹುದು. ಆದ್ದರಿಂದ ಪುಸ್ತಕ ವಿಮರ್ಶೆಯ ಬೆಳವಣಿಗೆಯ ಹಂತಗಳಲ್ಲಿ ಓದುಗರು ಬಹುಮುಖ್ಯ ಆಕರವಾಗಿ ಪರಿಣಮಿಸುತ್ತಾರೆ. ಅವರಿಗೆ ವಿಮರ್ಶೆ ಯಾವ ರೀತಿ ಮುಟ್ಟುತ್ತಿದೆ, ಅದರಿಂದ ಅವರಿಗೆ ಸಾಹಿತ್ಯ ಕೃತಿಯನ್ನು ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತಿದೆಯೇ ಎಂಬುದನ್ನು ವಿವೇಚಿಸಬಹುದಾಗಿದೆ. ಓದುಗರನ್ನು ಹಿಂದಿನಿಂದ ಗುರುತಿಸುತ್ತಿದ್ದ ರೀತಿಯನ್ನು ರಹಮತ್ ತರೀಕೆರೆ ಹೀಗೆ ವಿವರಿಸುತ್ತಾರೆ.

ಸಾಮಾನ್ಯವಾಗಿ ಲೇಖಕರು ಎಲ್ಲ ತೊಂದರೆಗಳನ್ನು ಓದುಗರಲ್ಲೇ ಹುಡುಕುತ್ತಾರೆ. ಸಂವಹನದ ತೊಡಕನ್ನು ತೀವ್ರವಾಗಿ ಎದುರಿಸಿದ ನವ್ಯರಂತೂ ಸ್ವಲ್ಪವೂ ಆತ್ಮವಿಮರ್ಶೆಯನ್ನು ಮಾಡಿಕೊಳ್ಳದೆ ಎಲ್ಲ ಪಾಪವನ್ನು ಓದುಗರ ತಲೆ ಮೇಲೆಯೇ ಹೊರಿಸುತ್ತಿದ್ದರು. ಅಷ್ಟೇ ಅಲ್ಲ 'ನನಗೆ ಅರ್ಥವಾಗುತ್ತಿಲ್ಲ' ಎಂದ ಓದುಗರ ಸಮಸ್ಯೆಯನ್ನು ಸಹಾನುಭೂತಿಯಿಂದ ಪರಿಶೀಲಿಸದೆ, ಅವರ ಸಂವೇದನೆಯನ್ನೇ 'ಗ್ರಾಮ್ಯಬುದ್ಧಿ' ಎಂದು ಜರೆದಿರುವುದು ಕಾಣುತ್ತದೆ.[೨೨] ಇದು ನವ್ಯ ಪಂಥವನ್ನು ಕುರಿತದ್ದಾರೂ ಇನ್ನಿತರ ಸಂದರ್ಭದಲ್ಲಿ ಲೇಖಕರು ತಮ್ಮ ಕೃತಿಯ ಅಪಯಶಸ್ಸಿಗೆ ಓದುಗರರನ್ನೇ ಅನುಮಾನಾಸ್ಪದವಾಗಿ ನೋಡುತ್ತಿದ್ದರು. ನವೋದಯ ಸಂದರ್ಭದಲ್ಲಿಯೂ ಕೂಡ 'ಸಹೃದಯನಾದವನು ಸೂಕ್ಷ್ಮಗ್ರಾಹಿಯಾಗಿದ್ದು ಊಹನ

ಪ್ರತಿಭೆಯಿಂದಲೂ ವ್ಯಾಸಂಗದಿಂದಲೂ ಕೂಡಿಕೊಂಡವ ನಾಗಿರಬೇಕು[೨೩] ಎಂದು ಓದುಗನ ಮೇಲೆ ಒತ್ತಡವನ್ನು ಹೇರಿ ಕೃತಿಯನ್ನು ಓದಲು ಪೂರ್ವ ಸಿದ್ಧತೆ ಅಗತ್ಯವೆಂದು ಪರಿಗಣಿಸಿದ್ದನ್ನು ಕಾಣಬಹುದು.

ವಿಮರ್ಶಕನ ಜೊತೆಯಲ್ಲಿಯೇ ಸಹೃದಯನಾದವನು ಕೃತಿಯ ಪ್ರಥಮ ಪರಿಚಯಕ್ಕೆ ಹೊರಡಬಾರದು. ತಾನು ಮೊದಲು ಆಸ್ವಾದಿಸಿ ಅದನ್ನು ಕುರಿತು ತನ್ನ ಅನುಭವವನ್ನು ತಾನೇ ಪರಿಭಾವಿಸಿ ವಿವೇಚಿಸಿ, ಅನಂತರ ಅದನ್ನು ಕುರಿತು ವಿಮರ್ಶಕರು ಏನನ್ನಾದರೂ ಹೇಳಿದ್ದಾರೆಯೇ ಎನ್ನುವುದನ್ನು ಗಮನಿಸುವುದು ಒಳ್ಳೆಯದು, ವಿಮರ್ಶೆಯನ್ನೋದಿದ ಮೇಲೆ ಆ ಕೃತಿಯನ್ನು ಕುರಿತು ನೀವು ರೂಪಿಸಿಕೊಂಡ ಭಾವನೆಗಳು, ವಿಮರ್ಶಕನ ಭಾವನೆಗಳಿಂದ ಖಚಿತವಾಗಬಹುದು, ಸಮರ್ಥಿತವಾಗಬಹುದು, ವಿಸ್ತರಿಸಬಹುದು ಅಥವಾ ಮಾರ್ಪಾಟನ್ನೇ ಹೊಂದಬಹುದು. ನಿಮ್ಮ ಅಭಿಪ್ರಾಯಗಳೊಂದಿಗೆ ವಿಮರ್ಶಕನ ಅಭಿಪ್ರಾಯಗಳು ಹೊಂದಿಕೊಂಡರೆ, ನಿಮ್ಮದನ್ನೇ ಖಚಿತಪಡಿಸಿದರೆ, ಸಮರ್ಥಿಸಿದರೆ, ಅನಿಸುತ್ತದೆ, ಇದೇ ಭಾವ ಭಾವನೆಗಳು ನನ್ನಂತೆ ಬೇರೆಯವರಿಗೂ ಬಂದ ಕಾರಣ ನನ್ನ ಆಲೋಚನೆ ಸಮರ್ಪಕವಾಗಿದೆ ಎಂದು; ಒಂದು ವೇಳೆ ನಿಮ್ಮ ಅಭಿಪ್ರಾಯಗಳಿಗೂ ವಿಮರ್ಶಕನ ಅಭಿಪ್ರಾಯಗಳಿಗೂ ಏನೇನೂ ತಾಳೆಯಾಗದಿದ್ದರೆ, ಇಲ್ಲಿ ಈ ವ್ಯತ್ಯಾಸಕ್ಕೆ ಏನು ಕಾರಣವಿರಬಹುದೆನ್ನುವ ವಿಚಾರ ಪ್ರಚೋದನೆಗೆ ಅವಕಾಶವಾಗುತ್ತದೆ. ಹಾಗಲ್ಲದೆ, ವಿಮರ್ಶಕನ ಆಲೋಚನೆಗಳಿಂದ ನಿಮ್ಮ ಅಭಿಪ್ರಾಯಗಳು ತಿದ್ದುಪಡಿಯಾಗದಿದ್ದರೆ ಅಥವಾ ಉತ್ತಮವಾದ ಮಾರ್ಪಾಟನ್ನು ಹೊಂದಿ ಅರಿವಿನ ಸೀಮಾರೇಖೆ ವಿಸ್ತರಿಸಿದರೆ, ಅದರಿಂದ ಲಾಭವೂ ಹರ್ಷವೂ ಆಗುತ್ತದೆ. ವಿಮರ್ಶಕನ ಬಗೆಗೆ ಗೌರವವೂ ಮೂಡುತ್ತದೆ.[೨೪]

ಓದುಗನ ತಿಳಿವಿನ ಅಭಿಪ್ರಾಯ ವಿಮರ್ಶಕರ ಚಿಂತನಕ್ಕೆ ಹತ್ತಿರವಾಗಿರುವುದೆಂದು ಪರಿಭಾವಿಸುವಂತೆ ಈ ಮಾತುಗಳಿವೆ. ಓದುಗರ ವಿಚಾರ-ಚಿಂತನಕ್ಕೂ, ವಿಮರ್ಶಕರ ವಿಚಾರ ಮಂಡನಕ್ಕೂ ನೇರವಾದ ಸಂಬಂಧ ಕಲ್ಪಿಸುವತ್ತ ಹೊರಳಿರುವುದು ಓದುಗರನ್ನು ಮಹತ್ವದವರೆಂದು ತಿಳಿದಿರುವುದರಿಂದಲೇ ಸಾಧ್ಯವಾಗಿದೆ.

ಪುಸ್ತಕ ವಿಮರ್ಶೆಯ ಸ್ವರೂಪವನ್ನು ಗಮನಿಸುತ್ತಿದ್ದಂತೆ ಪುಸ್ತಕ ವಿಮರ್ಶೆಯ ಮೊದಲ ಕಾರ್ಯ ಪುಸ್ತಕದ ವಿವರಗಳನ್ನೂ, ವಿಚಾರಗಳನ್ನು ಓದುಗರಿಗೆ ತಲುಪಿಸುವಂತಾದ್ದಾಗಿರುತ್ತದೆ. ಅದು ಪರಿಚಯಾತ್ಮಕವಾಗಿ, ವಿಶ್ಲೇಷಣಾತ್ಮಕವಾಗಿ ಅಥವಾ ತಾತ್ವಿಕ ಸಿದ್ಧಾಂತದ ಮೂಲಕ ವಿಮರ್ಶಿಸುತ್ತದೆ. ಪರಿಚಯಾತ್ಮಕವಾಗಿ ಇಡೀ ಪುಸ್ತಕದ ವಿವರಗಳನ್ನು ಹೇಳುವುದರಿಂದ ಅವು ಸಾಮಾನ್ಯರಿಗೂ ಅರ್ಥವಾಗುತ್ತವೆ. ವಿಶ್ಲೇಷಣಾತ್ಮಕವಾಗಿ, ರಸಾತ್ಮಕವಾಗಿ ಹೇಳುವುದು ಅಲ್ಲಿನ ವಿವರಗಳನ್ನು, ವರ್ಣನೆಗಳನ್ನು ಸರಳವಾದ ದೃಷ್ಟಿಯಲ್ಲಿ ಚರ್ಚಿಸುವುದರಿಂದ ಕೃತಿಯಲ್ಲಿನ ವಿವರಗಳು ಸಾಮಾನ್ಯ ಓದುಗರಿಗೆ ಸಹಜವಾಗಿಯೇ ಸಂವಹನಗೊಳ್ಳುತ್ತವೆ. ಈ ಪರಿಧಿಯಲ್ಲಿ ಬರುವ ಓದುಗರನ್ನು ಸಾಮಾನ್ಯ ಓದುಗರೆಂದು ಗುರುತಿಸಬಹುದು. ಒಂದು ತಾತ್ವಿಕವಾದ ಸಿದ್ಧಾಂತಕ್ಕೆ ಬದ್ಧವಾಗಿ ಪ್ರಕಟವಾದ ಪುಸ್ತಕ ವಿಮರ್ಶೆಯನ್ನು ಓದಿ ತಮ್ಮ ವಿಚಾರಗಳನ್ನು ಅದರೊಂದಿಗೆ ಹೇಳುತ್ತಾ ಪ್ರತಿಕ್ರಿಯೆ ನೀಡುವವರನ್ನು 'ಗಂಭೀರ ಓದುಗ'ರೆಂದು ಕರೆಯಬಹುದು. ಇವರು ಪುಸ್ತಕ ವಿಮರ್ಶೆಯ ಓದುಗರು ಮಾತ್ರರಾಗಿರುವುದಿಲ್ಲ, ವಿಮರ್ಶೆಯನ್ನು ಗಂಭೀರವಾಗಿ ಬಲ್ಲವರು, ತಿಳಿದವರು ಆಗಿರುತ್ತಾರೆ.

ಹಿಂದಿನಿಂದಲೂ ಓದುಗರಿಗೆ ಇದ್ದ ಸ್ಥಾನವನ್ನು ಗುರುತಿಸುತ್ತ ಬಂದರೆ *ಸಾಹಿತ್ಯ ಶಾಸ್ತ್ರಗಳಲ್ಲಿ ಪ್ರಾಯೋಗಿಕ ವಿಮರ್ಶೆಗಾಗಿ ವಿಮರ್ಶೆ ಗುಣ, ರೀತಿ, ಅಲಂಕಾರಗಳ ಚರ್ಚೆಗೆ ಸೀಮಿತವಾಗಿದ್ದರೆ ಟೀಕಾಕಾರರ ವ್ಯಾಖ್ಯಾನಗಳಲ್ಲಿ ಶಬ್ದಾರ್ಥ,*

ಪದನ್ವಯ, ಅಲಂಕಾರ, ಸಮಾನ ಪ್ರಯೋಗಗಳ ವಿವರಣೆಗೆ ಸಮಾವೇಶಗೊಳ್ಳುತ್ತಿತ್ತು ಎಂದರೆ ಓದುಗರಿಗೆ ಒಂದು ಕೃತಿಯನ್ನು ಅರ್ಥಮಾಡಿಕೊಳ್ಳಲು ಬೇಕಾದ ಕನಿಷ್ಠ ಮಿತಿಯ ಅನುಕೂಲತೆಗಳನ್ನು ಮಾತ್ರ ಒದಗಿಸಲಾಗುತ್ತಿತ್ತು, ರಸಾನುಭವದ ಸಂಪೂರ್ಣ ಜವಾಬ್ದಾರಿ ಓದುಗರದೇ ಆಗಿತ್ತು. ರಸಾನುಭವದ ರಹಸ್ಯವನ್ನು ಒಡೆಯಲು ವಿಮರ್ಶಕ(ಸಹೃದಯ) ಯತ್ನಿಸುತ್ತಿರಲಿಲ್ಲ. ಏಕೆಂದರೆ ರಸಾನುಭೂತಿಯ ಅನಿರ್ವಚನೀಯತೆಯ ಅರಿವು ಅವನಿಗಿದ್ದಿತು [೨೫]

ಎಂಬುದು ಕಾವ್ಯಮೀಮಾಂಸೆಯ ಸಾಮಾಜಿಕನನ್ನು ಗಣನೆಗೆ ತೆಗೆದುಕೊಂಡು ಅದರ ಮೂಲಕ ವಿಮರ್ಶೆಯ ನೆಲೆಯನ್ನು ಓದುಗರಲ್ಲಿ ಗುರ್ತಿಸುತ್ತಿದ್ದಾರೆ. ರಸಾನುಭವದ ಚರ್ಚೆ ಸಂಪೂರ್ಣವಾಗಿ ಕಾವ್ಯ ಮೀಮಾಂಸೆಯಲ್ಲಿ ಬಹುದೊಡ್ಡ ಚರ್ಚೆ. ಆ ಚರ್ಚೆಯ ಮೂಲಕವೇ ಕಾವ್ಯಮೀಮಾಂಸೆ ಬೆಳೆಯುತ್ತದೆ. ಭಾರತೀಯ ಕಾವ್ಯಮೀಮಾಂಸೆಯಲ್ಲಿ ಬರುವ 'ಸಹೃದಯ'ನ ಪರಿಕಲ್ಪನೆ ತುಂಬಾ ಮೌಲಿಕವಾದದ್ದು, ಓದುಗ / ಪ್ರೇಕ್ಷಕ ಮತ್ತು ವಿಮರ್ಶಕ ಇವರಿಬ್ಬರನ್ನೂ ಒಳಗೊಳ್ಳುವ 'ಸಹೃದಯ'ನು *ವಾಚಕ ಸ್ಪಂದನ ಸಿದ್ಧಾಂತಗಳು ಪ್ರಬುದ್ಧ ಓದುಗ (informed Reader)' ಆದರ್ಶ ಓದುಗ (ideal Reader) ವಿವಕ್ಷಿತ ಓದುಗ (implied Reader) (ಪು ೧೫)* ರೆಂದು ಒಟ್ಟಾರೆ ಓದುಗನನ್ನು ಈ ನೆಲೆಯಲ್ಲಿ ಅಧ್ಯಯನ ಮಾಡುತ್ತಾರೆ. *ಶಬ್ದಾರ್ಥ ನಿವರ್ಚನೆಯಲ್ಲಿ ಪಾಂಡಿತ್ಯವಿರುವ ಹಾಗೂ ಸಾಹಿತ್ಯಕ ಸಂವೇದನೆಯಿರುವ ಸಹೃದಯನನ್ನು ಸ್ಟ್ಯಾನ್ಲಿಫಿಶ್ informed Reader ಎಂದು ಕರೆಯುತ್ತಾರೆ* [೨೬] ಇಲ್ಲಿ ಈ Reader Response theoryಯ ಮೂಲಕ ಅಧ್ಯಯನಕ್ಕೆ ತೊಡಗದೆ ಪುಸ್ತಕ ವಿಮರ್ಶೆಗೆ ಓದುಗರು ಯಾವ ರೀತಿ ಪ್ರತಿಕ್ರಿಯಿಸುತ್ತಾರೆ, ಅವರ ವಿಚಾರಧಾರೆಗಳು ವಿಮರ್ಶೆಯಲ್ಲಿ ಹೇಗೆ ಪ್ರತಿಸ್ಪಂದಿಸುತ್ತವೆ, ಎಂಬುದರ ಅಧ್ಯಯನವನ್ನು ಇದರಲ್ಲಿ ಮಾಡಲಾಗುತ್ತದೆ.

ಪುಸ್ತಕ ವಿಮರ್ಶೆಯ ಓದುಗರ ಬಗ್ಗೆ ಯೋಚಿಸಿದಾಗಲೆಲ್ಲಾ ಹಲವು ನಿಲುವುಗಳು ಬಂದು ನಿಲ್ಲುತ್ತವೆ. ಏಕೆಂದರೆ ಪುಸ್ತಕ ವಿಮರ್ಶೆಯ ಓದುಗರು ಕೇವಲ 'ಟೈಂಪಾಸ್' ಓದುಗರಲ್ಲ. ಅವರಲ್ಲೂ ವಿಮರ್ಶನ ಶಕ್ತಿಯು ಇರುತ್ತದೆ. ಅಲ್ಲದೆ ಆ ಪುಸ್ತಕ ವಿಮರ್ಶೆಯನ್ನು ಓದಿ ಕೃತಿಯ ಪ್ರವೇಶವನ್ನು ಮಾಡುತ್ತಾರೆ. ಆನಂತರ ಪುಸ್ತಕ ವಿಮರ್ಶಕರ ಹುಳುಕುಗಳನ್ನು ಎತ್ತಿ ತೋರಿಸುವ ಜಾಣ್ಮೆಯು ಕೆಲವೊಮ್ಮೆ ಅವರಿಗಿರುತ್ತದೆ. ಅಲ್ಲದೆ ಅವರು ಸಮಾಜದಲ್ಲಿರುದರಿಂದ ಅವರ ಪ್ರತಿಕ್ರಿಯೆ ಆಗಿರುತ್ತದೆ. ಒಟ್ಟಾರೆ ಸಮಾಜವು ಪುಸ್ತಕಕ್ಕೆ ಕೊಡುವ ಪ್ರತಿಕ್ರಿಯೆ ಆಗಿರುತ್ತದೆ. *ಕನ್ನಡ ವಿಮರ್ಶೆಯು ಮೊದಲಿನಿಂದಲೂ ಸಮಾಜಮುಖಿಯೇ ವಿನಾ ಜೀವನಮುಖಿಯೇ ವಿನಾ ಕಲಾಮುಖಿಯಲ್ಲ. ಆದ್ದರಿಂದಲೇ ಸಾಹಿತ್ಯ ತತ್ವ, ವಿಮರ್ಶಾ ಪಂಥಗಳು ಶೈಲಿ -ಪ್ರತಿಮೆ-ಪ್ರತೀಕಗಳಂಥ ಪರಿಕರಗಳು, ಛಂದಸ್ಸು ಶಿಲ್ಪಗಳಂಥ ಆಕೃತಿ ನಿರ್ದಿಷ್ಟಗಳು ನಮ್ಮ ವಿಮರ್ಶಕ ಓದುಗರನ್ನು ತಮ್ಮ ಪ್ರತ್ಯೇಕತೆಯೇ ಆಕರ್ಷಿಸಿರುವುದು ಬಹಳ ಕಡಿಮೆ* [೨೭] ಎಂಬುದು ಓದುಗರನ್ನು ವಿಮರ್ಶೆಯ ನಡುವಿನ ಅಂತರವನ್ನು ಕುರಿತು ಹೇಳಿದುದ್ದಾಗಿದೆ.

ವಿದ್ಯುನ್ಮಾನವಾದದಿಂದ ಪ್ರಭಾವಿತರಾದ ವಿಮರ್ಶಕರು ಒಂದು ಸಾಹಿತ್ಯಕ ಕೃತಿಯನ್ನು ಓದುವಾಗ ಅದರ ಭಾಷಿಕ ರಚನೆಗಳು, ಶೈಲಿ ಇವೇ ಮುಂತಾದವುಗಳನ್ನು ನಿರ್ಲಕ್ಷಿಸುತ್ತಾರೆ. ಅವರ ಲಕ್ಷ್ಯವೆಲ್ಲಾ ಕೃತಿಯ ಮೂಲಕ ಕೃತಿಕಾರನ ಪ್ರಜ್ಞೆಯನ್ನು ಅವನು ಈ ವಿಶ್ವವನ್ನು ಗ್ರಹಿಸುವ ಪ್ರಜ್ಞೆಯ ನೆಲೆಯನ್ನು ಮುಟ್ಟುವುದು. ಇದೊಂದು ವಿಧದ ಪರಕಾಯ ಪ್ರವೇಶ - ಓದುಗನಿಗೆ ಒಂದು ಕೃತಿಯನ್ನು ಓದಲು ತೊಡಗಿದ ಕೂಡಲೇ ಓದುಗನು ತನ್ನ ಸ್ವತಂತ್ರ ಅಸ್ತವನ್ನು ಕಳೆದುಕೊಂಡು

ಕೃತಿಕಾರನ ಪ್ರಜ್ಞೆಯೊಡನೆ ಒಂದಾಗುತ್ತಾನೆ. ಅಂತಹ ಓದುಗನಿಗೆ ಕೃತಿಯೆಂದರೆ ಒಬ್ಬನ ಚೇತನವು ಮತ್ತೊಬ್ಬನ ಚೇತನವನ್ನು ಪ್ರವೇಶಿಸಲು ಅನುವು ಮಾಡಿಕೊಡುವಂತಹ ಮಾಯಾವಸ್ತು. ಕೃತಿಕಾರನ ಮತ್ತು ಓದುಗನ ಪ್ರಜ್ಞೆಸ್ತರಗಳು ಒಂದಾಗುವ (ಓದುವಿಕೆಯ ಕಾಲದಲ್ಲಿ) ಅದ್ಭುತ ಅನುಭವಗಳು ಕ್ಷಣದಲ್ಲಿ (mystic moment) ನಾನು -ಇತರರು, ಕರ್ತೃ -ಕರ್ಮ ಎಂಬ ದ್ವಂದ್ವಗಳು ದೂರವಾಗಿ ಓದುಗನು (ವಿಮರ್ಶಕನು) ತನ್ನ ವೈಯಕ್ತಿಕ ಭೌತಿಕತೆಯನ್ನು ಮೀರಲು ಶಕ್ತನಾಗುತ್ತಾನೆ [೨೮]

ಈ ವಿಶ್ಲೇಷಣೆ ಓದುಗರು ಕೃತಿ ಪ್ರವೇಶಕ್ಕೆ ತೊಡಗುವ ಸ್ಥಿತಿಯನ್ನು ಹೇಳುತ್ತದೆ. ಹಾಗೆಯೇ 'ಪುಸ್ತಕ ವಿಮರ್ಶೆ'ಯನ್ನು ಓದುವಾಗ ತನ್ನ ಚಿಂತನೆಗಳನ್ನು ಆ ವಿಮರ್ಶೆಗೆ ಒಂದಾಗಿಸುವ ಮೂಲಕ ಓದುಗ ಓದಿಗೆ ತೊಡಗುತ್ತಾರೆ.

'ಪುಸ್ತಕ ವಿಮರ್ಶೆ'ಯ ಓದುಗನನ್ನು ಅರ್ಥೈಸಿಕೊಳ್ಳುವಾಗ ಎರಡು ರೀತಿಯ ಪ್ರಶ್ನೆಗಳು ಉದ್ಭವಿಸುತ್ತವೆ. ಪುಸ್ತಕ ವಿಮರ್ಶೆಯನ್ನು ಓದಿಕೊಂಡು ಕೃತಿ ಪ್ರವೇಶಿಸುವ ಓದುಗರು ಒಂದು ಕಡೆಯಾದರೆ, ಪುಸ್ತಕ ವಿಮರ್ಶೆಯನ್ನಷ್ಟೇ ಓದಿ ಕೃತಿಯನ್ನು ತಿಳಿದಿದ್ದೇನೆಂಬ ಭಾವಿಸಿರುವ ಓದುಗರು. ಓದುಗರಿಗೆ ಕೃತಿ ವಿಮರ್ಶೆಯೊಂದಿಗೆ ಸಂವಾದಕ್ಕಿಳಿಯಬೇಕೆ? ಇಲ್ಲ ಪುಸ್ತಕ ವಿಮರ್ಶೆ ಕೇವಲ ಮಾರ್ಗವಾಗಿ ಕೃತಿಯ ಸಂವಾದಕ್ಕಿಳಿಯಬೇಕೆ? ಎಂಬ ಗೊಂದಲಗಳು ಕಾಡುತ್ತವೆ. ಆದರೆ ಈ ಅಧ್ಯಯನದಲ್ಲಿ ಪುಸ್ತಕ ವಿಮರ್ಶೆ ಓದುಗರಿಗೆ ಸಂವಹನಗೊಳ್ಳುವ ಬಗೆ ಹೇಗೆ ಮತ್ತು ಅದರಿಂದ ಅವರ ಮನಸ್ಸಿಗೆ ಕೃತಿಯ ಓದಿಗೆ ಆಗುವ ಪರಿಣಾಮ ಎಂಬುದಷ್ಟೇ ಗಮನದಲ್ಲಿರಿಸಿಕೊಳ್ಳಲಾಗಿದೆ. ನಮ್ಮ ಸಾಹಿತ್ಯ ಅಂತರದಲ್ಲಿ ಓದುಗರಿಗಿರುವ ನಿಲುವನ್ನು ಹೀಗೆ ಗುರುತಿಸಬಹುದು.

ನಮ್ಮಲ್ಲಿ ಒಬ್ಬ ಸಾಮಾನ್ಯ ಓದುಗನಿಗೆ ಎನ್. ನರಸಿಂಹಯ್ಯ, ಕೆ. ಸರೋಜರಾವ್ ಮುಂತಾದ ಲೇಖಕರೇ ಹೆಚ್ಚು ಹತ್ತಿರ. ಇಂಥ ಸಾಹಿತ್ಯ ಗಾತ್ರ ಮತ್ತು ಪರಿಣಾಮ ಎರಡೂ ದೃಷ್ಟಿಯಿಂದ ಸಮೃದ್ಧ, ನಮ್ಮ ಸಮಾಜದ ಪರಿಸರಗಳ ಬಗೆಗೆ ಭ್ರಮಾತ್ಮಕವಾದ ಮೌಲ್ಯಗಳನ್ನು ಪರಿಸರದ ಕ್ರೌರ್ಯದಿಂದ ಜರ್ಝರಿತನಾದ ಓದುಗ ಇಂಥ ಕರಾಳ ಮಾದಕತೆಗೆ ಸಹಜವಾಗಿ ಒಗ್ಗಿ ಹೋಗುತ್ತಾನೆ. ತನ್ನ ಮನಸ್ಸಿನ ಸಿದ್ಧ ಪ್ರತಿಕ್ರಿಯೆಗಳನ್ನು ಆತ ಈ ಕಾದಂಬರಿಗಳ ಸುಳ್ಳು ತರ್ಕದಿಂದ ಸಮರ್ಥಿಸಿಕೊಳ್ಳುತ್ತಾನೆ. ಅಕ್ಷರಸ್ಥ ಸಾಮಾನ್ಯ ಮನುಷ್ಯನಲ್ಲಿ ಇಂಥ ಸಂಸ್ಕೃತಿ ಪ್ರಸಾರಕ್ಕೆ ಒಗ್ಗುವ ವಾತಾವರಣವೂ ಇದೆ. ತಮ್ಮ ಎಲ್ಲಾ ದೌರ್ಬಲ್ಯಗಳೊಡನೆಯೂ ನವೋದಯ ಸಾಹಿತ್ಯ, ಪ್ರಗತಿ ಶೀಲ ಸಾಹಿತ್ಯ ಉನ್ನತವಾದ ಕೆಲವು ಜೀವನದ ಆದರ್ಶಗಳನ್ನು ಹೊಂದಿದೆ. ಈ ಆದರ್ಶಗಳು ಅಕ್ಷರಸ್ಥ ಸಮುದಾಯದ ಮೇಲೆ ಗಾಢ ಪ್ರಭಾವ ಬೀರಲಾಗದ ಹಾಗೆ ಈ ಕಮರ್ಷಿಯಲ್ ಸಾಹಿತ್ಯ ದಟ್ಟವಾಗಿ ಹಬ್ಬಿದೆ. ಒಂದು ಜನಾಂಗದ ಅತ್ಯುತ್ತಮ ಲೇಖಕರಾದ ಕುವೆಂಪು, ಬೇಂದ್ರೆ, ತೇಜಸ್ವಿ, ಲಂಕೇಶ್, ದೇವನೂರು ಮುಂತಾದವರಿಗೂ, ಅಕ್ಷರಸ್ಥರಿಗೂ ಸಂವಾದವಿಲ್ಲದೇ ಇರುವುದು ಒಂದು ಕರಾಳ ಸಾಂಸ್ಕೃತಿಕ ಸಂಘರ್ಷ

ಹೀಗೆ ಸಾಮಾನ್ಯ ಓದುಗರಿಂದ ವಿಮುಖವಾಗಿರುವ ಸಾಹಿತ್ಯ ಮತ್ತೊಮ್ಮೆ ತನ್ನನ್ನು ಆತ್ಮ ವಿಮರ್ಶೆ ಮಾಡಿಕೊಳ್ಳಬೇಕಾಗಿದೆ. ಸಾಮಾನ್ಯ ಓದುಗರಿಗೆ ತಲುಪುವಲ್ಲಿ ಸಾಹಿತ್ಯ ಸಂವಹನ ಎಲ್ಲಿ ಎಡವುತ್ತಿದೆ, ಎಂಬುದಕ್ಕೆ ಸಾಂಸ್ಕೃತಿಕ ಕಾರಣಗಳನ್ನು ಹುಡುಕಿಕೊಳ್ಳಬೇಕಾಗಿದೆ. ಇಲ್ಲದೆ ಹೋದರೆ ಓದುಗನೊಬ್ಬ ಸಾಹಿತ್ಯ ವಿಮುಖನಾಗುತ್ತ ಕೊನೆಗೆ ಇಡೀ ಸಮಾಜವೇ ಈ ಹಂತಕ್ಕೆ ತಲುಪಿಬಿಡಬಹುದು. ಹೀಗಾಗಿ ಸಾಹಿತ್ಯವೆಂಬುದು ಮತ್ತೊಮ್ಮೆ ಜನಸಾಮಾನ್ಯರಿಗಾಗಿ ಹೊಸ ರೀತಿಯ ಆಲೋಚನೆಗಳಿಂದ ಎಚ್ಚೆತ್ತುಕೊಳ್ಳಬೇಕಾಗುವುದು. ಸಾಮಾನ್ಯರಿಗೂ ತಲುಪುವ ಹಾಗೇ ಸಾಹಿತ್ಯಗ ಆಶಯದ

ರೂಪಿತವಾಗಬೇಕು. ಆಗ ಸಾಮಾನ್ಯ ಓದುಗ, ಸಾಹಿತ್ಯ, ಸಾಹಿತಿಗ ನಡುವೆ ಸದೂರ ಸಂಬಂಧ ಏರ್ಪಡುತ್ತದೆ.

ಪುಸ್ತಕ ವಿಮರ್ಶೆ ಓದುಗರಿಗೆ ಸುಲಭವಾಗಿ ಸಂವಹನಗೊಳ್ಳಲು ಹೊಸಗನ್ನಡದ ಪ್ರಾರಂಭದಲ್ಲಿ ಓದುಗರ ಲೋಕ ಬೆಳೆಯಲು ಬೇಕಾದ ರಸ ವಿಮರ್ಶೆಯನ್ನು ಸ್ವತಃ ಶ್ರೀಯವರೇ ಪ್ರಬುದ್ಧವಾಗಿ ಬರೆದರು, ಬರೆದುದಕ್ಕಿಂತ ಹೆಚ್ಚಾಗಿ ಬೇರೆಯವರನ್ನು ಪ್ರಭಾವಿಸಿದರು. ಇವರ ದೃಷ್ಟಿ ಏನಿದ್ದರೂ ಕೃತಿಯನ್ನು ಓದುಗರಿಗೆ ಸುಲಭವಾಗುವಂತೆ ಬೆಂಬಲವಾಗುವ ಕಡೆಗೆ ಇದ್ದುದ್ದರಿಂದ ಕೃತಿಯನ್ನು ಆಹ್ವಾನವಾಗಿ ತೆಗೆದುಕೊಳ್ಳುವ ಗೋಜಿಗೆ ಹೋಗುತ್ತಿರಲಿಲ್ಲ. 'ಗುಣ ಗ್ರಹಣ ನೀತಿ' ಇವರ ಈ ಮಿತಿಯನ್ನು ಹೆಚ್ಚಿಸಿತು.

ಅನಂತರ ನವೋದಯ ಸಾಮಾನ್ಯ ಓದುಗ ಮತ್ತು ಸಾಹಿತ್ಯದ ನಡುವೆ ಇರುವ ಕಂದಕವನ್ನು ಸೇತುವೆಯನ್ನು ನಿರ್ಮಾಣ ಮಾಡಿತು. ನವೋದಯ ಯುಗದ ಎಲ್ಲ ವಿಮರ್ಶಕರಲ್ಲಿದ್ದ ಎರಡು ಸಾಮಾನ್ಯ ಗುಣಗಳನ್ನು ಎಲ್.ಎಸ್. ಶೇಷಗಿರಿರಾಯರು ಹೀಗೆ ಗುರುತಿಸಿದ್ದಾರೆ .....*ಕೃತಿ ರಚನೆ, ಕೃತಿ ವಿಮರ್ಶೆಗಳಲ್ಲಿ ಬರಹಗಾರನ ಹೊಣೆಯನ್ನು ಕುರಿತು ಇವರದು ಸದಾ ಎಚ್ಚರವಾದ ಪ್ರಜ್ಞೆ. ಎರಡನೆಯದಾಗಿ ಈ ಕಾಲದ ಸಾಹಿತ್ಯ ವಿಮರ್ಶೆ ಬಹುಮಟ್ಟಿಗೆ ವಿವರಣಾತ್ಮಕವಾದದ್ದು. ಈ ವಿಮರ್ಶಕರು ತಮ್ಮ ಸಂತೋಷವನ್ನು ಓದುಗರೊಂದಿಗೆ ಹಂಚಿಕೊಂಡು ತೃಪ್ತಿ ಪಟ್ಟರು. ಸೂಕ್ಷ್ಮ ವಿಶ್ಲೇಷಣೆ ಇವರಲ್ಲಿ ವಿರಳ. ಆದರೆ ತಾವು ಬರೆಯುವುದು ಸಾಮಾನ್ಯ ಓದುಗರಿಗೂ ಅರ್ಥವಾಗಬೇಕೆಂಬ ಕಾಳಜಿಯಿಂದ ಬರೆದರು. ಸಾಹಿತ್ಯಕ್ಕೂ ಸಾಮಾನ್ಯ ಓದುಗನಿಗೂ ಸೇತುವೆಯಾದರು*[೩೦] ಈ ಕಾರಣದಿಂದ ಈ ಕಾಲದಲ್ಲಿ ಸಾಮಾನ್ಯ ಗಂಭೀರ, ಎಂಬ ವಿಭಾಗದ ಪ್ರಶ್ನೆಯೇ ಏಳಲಿಲ್ಲ.

ಕೃತಿಯೊಂದಿಗಿನ ನಮ್ಮ ಒಡನಾಟ ನಿರಂತರವಾಗಿ ಹೊಸತರ ಹುಡುಕಾಟವಾಗಿರುತ್ತದೆ. ಅದಕ್ಕೆ ಮುಗಿತಾಯವೆಂಬುದೇ ಇಲ್ಲ. ಏಕೆಂದರೆ ಕೃತಿಯು ಒಂದೊಂದು ಬಾರಿಯ ಓದಿಗೂ ಒಂದೊಂದು ರೀತಿಯ ಅರ್ಥಗಳು ವ್ಯಂಜಿಸುತ್ತಾ ಹೋಗುತ್ತವೆ. ಒಂದು ಕೃತಿಯು ಮುಖ್ಯವಾಗಿ ಓದಿಗೆ ಸದಾತೆರೆದು ಕೊಂಡಿರಬೇಕಾಗುತ್ತದೆ. ಹಾಗಾದಾಗಲೇ ಅದು ಹಲವಾರು ಅರ್ಥಗಳಿಗೆ, ಹಲವಾರು ಓದುಗಳಿಂದ ಪದರ ಪದರವಾಗಿ ಬಿಚ್ಚಿಕೊಳ್ಳುತ್ತದೆ, ಕೃತಿಕಾರನನ್ನು ಹೇಗೆ ಕೃತಿಯ ಮೂಲಕ ಗುರ್ತಿಸುತ್ತೆವೆಯೋ ಅಂದರೆ ಕೃತಿಕಾರರು ಕೃತಿಯಿಂದಲೇ ಹುಟ್ಟುತ್ತಾರೆ ಎಂದು ಭಾವಿಸಿದರೆ ಓದುಗರು ಕೂಡ ಕೃತಿಯ ಓದಿನಲ್ಲಿ ಸೃಷ್ಟಿಯಾಗಿತ್ತಾರೆ, ಜಿ. ಎಸ್. ಶಿವರುದ್ರಪ್ಪನವರು ಓದುಗರ ವಿಶ್ಲೇಷಣಾ ಮನೋಧರ್ಮವನ್ನು ಕುರಿತು ಹೀಗೆ ಹೇಳುತ್ತಾರೆ. *ವಿಮರ್ಶೆ ಮೂಲತಃ ನಮ್ಮದಲ್ಲದ ಭಿನ್ನ ಮನೋಧರ್ಮಗಳನ್ನು ಒಳಹೊಕ್ಕು ನೋಡುವ ಪ್ರಯತ್ನ* [೩೧] *ಮತ್ತೊಂದು ಮನಸ್ಸನ್ನು ಗ್ರಹಿಸಬೇಕಾದರೆ ಮೊದಲು ಅದರ ವೈಚಿತ್ರ್ಯಗಳನ್ನು ಸಹಿಸಿಕೊಳ್ಳಬೇಕು. ಕೇವಲ ವಿಚಾರ ವಿಶ್ಲೇಷಣೆಗಿಂತ ಪರಿಭಾವನೆ, ವಿಶೇಷವಾದ ಆತ್ಮ ಪ್ರತ್ಯಯಕ್ಕಿಂತ ಕೃತಿಯಲ್ಲಿ ತನ್ಮಯವಾಗುವಿಕೆ. ಇವುಗಳಿಂದ ಅಗ್ರಾಹ್ಯವಾದ ಸೂಕ್ಷ್ಮವಾದ ಪ್ರತಿಭಾವಂತನ ಮನಸ್ಸು ವಿಮರ್ಶಕನಿಗೆ ವಶವಾಗುತ್ತದೆ.* [೩೨]

ಸಾಮಾನ್ಯವಾಗಿ ಈ ಪರಿಧಿಯಲ್ಲಿ ಬರುವ ಓದುಗರು 'ಪುಸ್ತಕ ವಿಮರ್ಶೆ'ಯನ್ನು ಓದಿ ಅನಂತರ ಕೃತಿಯ ಪ್ರವೇಶ ಮಾಡುವುದಿಲ್ಲ. ಈ ಸಾಧ್ಯತೆಗಳು ತುಂಬಾ ಕಡಿಮೆಯೇ. ಇದಕ್ಕೆ

ಪೂರಕವಾಗಿಯೇ ಪುಸ್ತಕ ವಿಮರ್ಶಕರು ಕೃತಿಯನ್ನು ಕುರಿತು ಹತ್ತನ್ನೆರಡು ಸಾಲಿನಲ್ಲಿ ಕೃತಿಯ ವಿವರಗಳನ್ನು ಹೇಳುತ್ತಾರೆ. ಈಗ ನಾವು ಯಾವುದೇ ಪತ್ರಿಕೆಗಳನ್ನು ನೋಡಿದರೂ ಸಹ ಈ ರೀತಿಯ ಸರಳವಾದ ಪುಸ್ತಕ ವಿಮರ್ಶೆಯಿರುತ್ತದೆ. ಪುಸ್ತಕ ವಿಮರ್ಶೆ ಎನ್ನುವುದಕ್ಕಿಂತ 'ಪುಸ್ತಕಾವಲೋಕನ' 'ಮೊದಲನಯ ನೋಟ' ಹೀಗೆ ಹಲವು ಹೆಸರುಗಳಿಂದ ಕರೆಯಬಹುದು. ಪುಸ್ತಕ ವಿಮರ್ಶೆಗಳು ಓದುಗರ ಅಭಿರುಚಿಯನ್ನು ಹೆಚ್ಚಿಸುತ್ತಾ ಹೋಗಬೇಕು. ಆದರೆ ಓದುಗರದೂ ಒಂದು ನಿಲುವಿದೆ. ಅವರು ಪುಸ್ತಕ ವಿಮರ್ಶೆಯನ್ನು ಓದಿ ಪ್ರತಿಕ್ರಿಯೆಗಳನ್ನು ಕೆಲವೊಮ್ಮೆ ನೀಡುತ್ತಾರೆ. ಆದರೆ ಇವರ ಪ್ರತಿಕ್ರಿಯೆ ಸಾಮಾನ್ಯ ಪತ್ರಿಕೆಯಲ್ಲಿ ಪ್ರಕಟವಾಗುತ್ತದೆ. ಒಂದು ಉದಾಹರಣೆಯನ್ನು ಗಮನಿಸುವುದಾದರೆ 'ದಿವ್ಯ' ಕೃತಿ ಕುರಿತು ಸುಮತೀಂದ್ರ ನಾಡಿಗರ 'ಕಾಮ ಪ್ರಚೋದಕ, ಅಸಂಭಾವ್ಯ ದಿವ್ಯ ಕಾದಂಬರಿ' ಎಂಬ ಪುಸ್ತಕ ವಿಮರ್ಶೆ ಮಾರ್ಚಿ ೩೧ರಲ್ಲಿ 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ಪ್ರಕಟವಾಯಿತು. ಒಂದು ವಾರದ ನಂತರ ೭ ಏಪ್ರಿಲ್ ರಂದು ಅದೇ ಪತ್ರಿಕೆಯಲ್ಲಿ ಸಾಮಾನ್ಯ ಓದುಗರಿಂದ ತೀವ್ರ ಪ್ರತಿಕ್ರಿಯೆಗಳು ಬಂದವು.

ಮಾರ್ಚಿ ೩೧, ೨೦೦೨ ಸಾಪ್ತಾಹಿಕ ವಿಜಯದಲ್ಲಿ ಪ್ರಕಟವಾದ ಡಾ. ಸುಮತೀಂದ್ರ ನಾಡಿಗರ 'ಕಾಮ ಪ್ರಚೋದಕ, ಅಸಂಭಾವ್ಯ ದಿವ್ಯ ಕಾದಂಬರಿ' ಲೇಖನಕ್ಕೆ ತೀವ್ರ ಪ್ರತಿಕ್ರಿಯೆಗಳು ಬರುತ್ತಿವೆ. ಆಯ್ದ ಕೆಲವು ಪತ್ರಿಕೆಗಳನ್ನು ಇಲ್ಲಿ ಪ್ರಕಟಿಸುತ್ತಿದ್ದೇವೆ

i) ಬಾಲಿಶ ವಿಮರ್ಶೆ

ಸುಮತೀಂದ್ರ ನಾಡಿಗರ ವಿಮರ್ಶಾ (?) ಲೇಖನ ಬಾಲಿಶ, ಅರ್ಥಹೀನ ಹಾಗೂ ಗಾಂಭೀರ್ಯರಹಿತ ಬರಹ. 'ದಿವ್ಯ' ನನ್ನ ದೃಷ್ಟಿಯಲ್ಲಿಯೂ ಒಂದು ಶ್ರೇಷ್ಠ ಕೃತಿ ಅಲ್ಲ. ಅದರ ಕೊನೆಯ ಭಾಗವಂತೂ ತೀರ ಸಿನಿಮೀಯ ಹಾಗೂ ಕೃತ್ರಿಮ. ಆದರೆ ಅದರಲ್ಲೂ ಕಾಮ ಪ್ರಚೋದಕತೆ, ಅಶ್ಲೀಲತೆಗಳನ್ನು ಆರೋಪಿಸುವುದು ಹಾಸ್ಯಾಸ್ಪದ. ಅನಂತಮೂರ್ತಿಯವರ 'ಪ್ರಶ್ನೆ', 'ಸಂಸ್ಕಾರ', 'ಭವ', 'ಅವಸ್ಥೆ'ಗಳಲ್ಲಿರುವ ಲೈಂಗಿಕ ವರ್ಣನೆಗಳ ಶೇಕಡಾ ೫ ರಷ್ಟು ಸಹ 'ದಿವ್ಯ' ದಲ್ಲಿಲ್ಲ. ದಿವ್ಯದಲ್ಲಿ ಲೈಂಗಿಕತೆ ಸಂಪೂರ್ಣವಾಗಿ ಸೂಚ್ಯವೂ, ಸಾಂಕೇತಿಕವೂ ಆಗಿರುವುದೇ ಒಂದು ವಿಶೇಷವೆಂದು ಮೊದಲ ಓದಿನಲ್ಲಿ ನನಗೆ ಅನಿಸಿತ್ತು.

ಲೈಂಗಿಕತೆ, ಕಾಮ ಪ್ರಚೋದನೆ, ಅಶ್ಲೀಲತೆ - ಇವುಗಳ ಅರ್ಥ, ವ್ಯಾಖ್ಯಾನ, ತೀರ್ಪು, ತೀರ್ಮಾನಗಳನ್ನು ಸರಳೀಕರಿಸಲು ಸಾಧ್ಯವಿಲ್ಲ. ಎಲ್ಲಾ ದೇಶದ ಎಲ್ಲಾ ಕಾಲದ ಸಾಹಿತ್ಯದಲ್ಲೂ ಅವು ಬೇಕಾದಷ್ಟಿವೆ. ಸಂಸ್ಕೃತಿ ಸಾಹಿತ್ಯದಲ್ಲಂತೂ ದೇವ -ದೇವತೆಗಳ ಸ್ತೋತ್ರದಲ್ಲೂ ಸಹ ಸಂಭೋಗ, ಹೆಣ್ಣಿನ ಅಂಗಾಂಗ ವರ್ಣನೆ ಬೇಕಾದಷ್ಟಿವೆ,ಕಾವ್ಯಗಳಲ್ಲಂತೂ ಕೇಳುವುದೇ ಬೇಡ. ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅ.ನ.ಕೃ. ಒಬ್ಬರೇ ಲೈಂಗಿಕ ವರ್ಣನೆಗಳನ್ನು ಮಾಡಿದವರಲ್ಲ. ಕುವೆಂಪು ಕೃತಿಗಳಲ್ಲೂ ಅವು ಸಾಕಷ್ಟಿವೆ. ಬಹುಶಃ ಕಾರಂತ, ಮಾಸ್ತಿ ಇವರಿಬ್ಬರನ್ನು ಬಿಟ್ಟರೆ ಎಲ್ಲರೂ ತಮ್ಮ ತಮ್ಮ ಶಕ್ತ್ಯಾನುಸಾರ ಲೈಂಗಿಕ ವರ್ಣನೆಗಳನ್ನು ಮಾಡಿದ್ದಾರೆ. ನವ್ಯ ಬಂಡಾಯ ಕಾಲದಲ್ಲಂತೂ ಲೈಂಗಿಕತೆ ತಾನೇ ತಾನಾಗಿ ವಿಜೃಂಭಿಸಿದೆ. ಹೀಗಿರುತ್ತಾ ನಾಡಿಗರು ಹಠಾತ್ತನೇ ಹಳೇ ಮಡಿವಂತ, ಶಿಕ್ಷೆಯಂತೆ ಅನಂತಮೂರ್ತಿಗಳ 'ದಿವ್ಯ' ದಲ್ಲಿ ಕಾಮ ಪ್ರಚೋದಕತೆ, ಅಶ್ಲೀಲತೆ ಕಂಡಿರುವುದು ಆಶ್ಚರ್ಯಕರವಷ್ಟೇ ಅಲ್ಲ 'ಏನಕೇನ ಪ್ರಕಾರೇಣ' ಪ್ರಸಿದ್ಧರಾಗುವ ಚಪಲವೇ ನಾಡಿಗರು ಹೀಗೆ ಬರೆಯಲು ಕಾರಣವಾಗಿದ್ದರೆ, ಅದು ಇನ್ನೂ ಖಂಡನೀಯ. ಇದರ ಅರ್ಥ ಅನಂತಮೂರ್ತಿ ವಿಮರ್ಶಾತೀತರೆಂದಲ್ಲ. ಅವರ ಕೃತಿಗಳೂ, ಮಾತುಗಳೂ ವಿಚಾರಗಳೂ, ವಿಮರ್ಶೆಗೆ ಟೀಕೆಗೆ ಅಥವಾ ಖಂಡನೆಗೆ ಅರ್ಹವಾಗಿರಬಹುದು, ವೈಯಕ್ತಿಕವಾಗಿ ನಾನು ಅವರ ಅನೇಕ ಹೇಳಿಕೆಗಳನ್ನೂ ಒಪ್ಪುವುದಿಲ್ಲ. ಆದರೆ ನಾಡಿಗರು 'ದಿವ್ಯ'ದ ಮೇಲೆ ಮಾಡಿರುವ ಆರೋಪಕ್ಕೆ ಏನೇನೂ ಅರ್ಥವಿಲ್ಲ. ಇಂಥ ಬೇಜವಾಬ್ದಾರಿತನ, ಹುಡುಗಾಟ ಅಥವಾ ತುಂಟಾಟ ಸಾಹಿತ್ಯ ಕ್ಷೇತ್ರದ ಆರೋಗ್ಯಕ್ಕೆ ಖಂಡಿತ ಒಳ್ಳೆಯದಲ್ಲ.

ಬೆಂಗಳೂರು — ಕೆ.ವಿ. ಭಟ್

ii). 'ದಿಟ್ಟ ವಿಮರ್ಶೆ'

ಡಾ. ಅನಂತಮೂರ್ತಿಯವರ ಜಾತ್ಯತೀತತೆಯ ಮತ್ತು ಆಧ್ಯಾತ್ಮಿಕತೆಯ ಸೋಗನ್ನು ಮತ್ತು ಮುಖವಾಡವನ್ನು ಚನ್ನಾಗಿ ಬಹಿರಂಗಗೊಳಿಸಿದ್ದಾರೆ. 'ದಿವ್ಯ' ಕಾದಂಬರಿಯಲ್ಲಿ ಆಧ್ಯಾತ್ಮಿಕತೆಯ 'ದಿವ್ಯ' ದರ್ಶನವನ್ನು ಮೂಡಿಸಲು ಹೊರಟ ಅನಂತಮೂರ್ತಿಯವರು, ಕಾಮಶಾಸ್ತ್ರದ ದರ್ಶನವನ್ನು ಮಾಡಿಸಿದ್ದಾರೆ. ಕಾಮ ಪ್ರಚೋದಕವಾದ ಅಶ್ಲೀಲ ಭಾಷೆ, ಅಶ್ಲೀಲ ವರ್ಣನೆಗಳಿಂದ ತುಂಬಿದೆ. ಇಂಥ ಕೀಳು ಅಭಿರುಚಿಯ ಕಾದಂಬರಿಯನ್ನು ಬರೆದಿರುವುದು ಶ್ರೇಷ್ಠವಾದ ಜ್ಞಾನಪೀಠ ಪ್ರಶಸ್ತಿಯನ್ನು ಪಡೆದವರಿಗೆ ಶೋಭಿಸಲಾರದು. ಎಲ್ಲರಿಗೂ ಗೊತ್ತಿರುವ ವಿಷಯವೆಂದು ನಗ್ನವಾಗಿ ಬೀದಿಯಲ್ಲಿ ಓಡಾಡಬಹುದೇ? ಹೋಳಿ ಹುಣ್ಣಿಮೆಯಲ್ಲಿ ಕೂಗುವ ಅಶ್ಲೀಲ ಶಬ್ದಗಳನ್ನು ಗ್ರಂಥಗಳಲ್ಲಿ ಬಳಸುವುದು ಯೋಗ್ಯವೆನಿಸಲಾರದು. ಗ್ರಂಥದ ಭಾಷೆ, ಗೌರವವನ್ನೂ ಕಾಪಾಡುವುದು ಲೇಖಕರ ಕರ್ತವ್ಯವಾಗಿದೆ.

ಡಾ. ಅನಂತಮೂರ್ತಿಯವರಿಗೆ ಪೂರ್ಣವಾಗಿ ಪರಂಪರೆಯ ಧಾರ್ಮಿಕತೆಯಲ್ಲಿ ಆಧ್ಯಾತ್ಮಿಕತೆಯಲ್ಲಿ ಅಥವಾ ಪೂರ್ಣವಾಗಿ ಆಧುನಿಕ ವೈಚಾರಿಕತೆಯಲ್ಲಿ ವಿಶ್ವಾಸವಿಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಹಳೆಯ ಮತ್ತು ಹೊಸ ವಿಚಾರಗಳ ತಾಕಲಾಟಗಳ ಮಧ್ಯದಲ್ಲಿ ತ್ರಿಶಂಕುವಿನಂತೆ ತೊಳಲಾಡುತ್ತಾ ಯಾವುದೇ ಪರಿಹಾರವನ್ನೂ ಕಾಣದೆ, ಸುಮತೀಂದ್ರ ನಾಡಿಗರು ಇವರ 'ದಿವ್ಯ'ದ ಹೀನಮಟ್ಟದ ಸಾಹಿತ್ಯವನ್ನು ಮತ್ತು ಪೊಳ್ಳುತನವನ್ನು ಚನ್ನಾಗಿ ವ್ಯಕ್ತಪಡಿಸಿ ಅಭಿನಂದನೀಯರಾಗಿದ್ದಾರೆ.

ಮಾಳಮಡ್ಡಿ — ಲಕ್ಷ್ಮಣ ಜೋಶಿ.

iii). ನೆನೆದ ತಾರೆ ನೋಡಿ ನೋಡಿ.

ಮಳೆಯಲ್ಲಿ ನೆನೆದ ತಾರೆಯರನ್ನು ಹಲವಾರು ಸಿನಿಮಾಗಳಲ್ಲಿ ಕಂಡು ಆನಂದಿಸಿದ ಮನಸ್ಸು ತನ್ನ ಕಣ್ಣು ಸರಿದಲೆಲ್ಲಾ ಅದೇ ಬಗೆಯ ದೃಶ್ಯಗಳಿಗೆ ಹಾರೈಸುವುದು ಸ್ವಾಭಾವಿಕ ಎಂದು ಸುಮತೀಂದ್ರ ನಾಡಿಗರ 'ದಿವ್ಯ' ಕಾದಂಬರಿ ಕುರಿತ ಬರಹ ದೃಢಪಡಿಸಿದೆ.

ಬೆಂಗಳೂರು — ಬಿ. ಆರ್. ನಾಗೇಶ್.

iv). ವಯಸ್ಸು ಕಂಡದ್ದು

ಈ ಲೇಖನವೂ ಅನಂತಮೂರ್ತಿಯವರದೇ ಸಂಚಿರಬಹುದೆ? ಶಾಲಾ ಕಾಲೇಜುಗಳಲ್ಲಿ ಓದುವ ಹದಿಹರೆಯದವರಿಗೂ 'ದಿವ್ಯ'ವನ್ನು ಪಿಡಿಯುವ ಆಸೆ ಬರಲೆಂದು ಮತ್ತು ಆ ಮೂಲಕ 'ದಿವ್ಯ' ಜನಪ್ರಿಯವಾಗಲೆಂದು ಮಾಡಿರಬಹುದೇ? ಅನಿಸಿತು. ಏಕೆಂದರೆ 'ದಿವ್ಯ'ದಲ್ಲಿ ನಾಡಿಗರು ಉದ್ಧರಿಸಿದ ಭಾಗಗಳು ಆಯಾಯ ಸಂದರ್ಭಗಳಲ್ಲಿ ಕಾಮ ಪ್ರಚೋದಕವಾಗಿಯಾಗಲೀ ಕಾಣಿಸುವುದಿಲ್ಲ.

ಪ್ರಾಯಶಃ ನಾಡಿಗರ ವಯಸ್ಸಿಗೆ 'ದಿವ್ಯ' ಹಾಗೆ ಕಂಡಿತೇನೋ ಗೊತ್ತಿಲ್ಲ.

ಬೆಂಗಳೂರು — ಕೆ. ಬಿ. ಅಭಿಷೇಕ.

V). ಎಲ್ಲಾಕಡೆ ಇದೇರಿ

ಹಿತಮಿತವಾದ ಕಾಮ ಪ್ರೇಮ ಇತ್ತೀಚೆಗಿನ ಸಾಹಿತ್ಯ, ಜನಪದ, ಸಿನಿಮಾ, ನಾಟಕ- ಜಾಹೀರಾತು ಎಲ್ಲಾಕಡೆ ಇದೆ. 'ಕಾಮ ಪ್ರಚೋದಕ, ಅಸಂಭಾವ್ಯ' ಇತ್ಯಾದಿ ಟೀಕೆ ಮಾಡಿರುವ ಡಾ. ಸುಮತೀಂದ್ರ ನಾಡಿಗರು ಮತ್ತೆ ಮತ್ತೆ ಓದಿ ಬಾಯಿ ಚಪ್ಪರಿಸಿಕೊಳ್ಳುವ ಅಗತ್ಯವೇನಿತ್ತು?

ಮುದ್ದೇಬಿಹಾಳ — ಕೆ.ಜಿ. ಭದ್ರಣ್ಣನವರ.

vi). *ಸ್ವಾಮಿ ನಾಡಿಗರೆ ತಮಗೆ ತುಂಬಾ ಆಭಾರಿಯಾಗಿದ್ದೇವೆ. ಯಾಕಂದ್ರ ಅಷ್ಟೊಂದು ದುಡ್ಡು ಕೊಟ್ಟು ಕೊಳಕು ಸಾಹಿತ್ಯ ಓದೋದನ್ನು ತಪ್ಪಿಸಿದ್ದಕ್ಕೆ ಇನ್ನೊಮ್ಮೆ ತಮಗೆ ನಮಸ್ಕಾರ.*

ಕುದುರೆಮುಖ *ಜನಗೊಂಡ.*

ಈ ಮೇಲಿನ ಉದ್ಧರಣಗಳು 'ಪುಸ್ತಕ ವಿಮರ್ಶೆ' ಕುರಿತು ಪ್ರತಿಕ್ರಿಯಿಸಿದ ಸಾಮಾನ್ಯ ಓದುಗರ ಕೆಲವು ಮಾದರಿಗಳು. ಇಲ್ಲಿನ ಓದುಗರು ನೀಡಿರುವ ಶೀರ್ಷಿಕೆಯೇ 'ಬಾಲಿಶ ವಿಮರ್ಶೆ', 'ದಿಟ್ಟ ವಿಮರ್ಶೆ', 'ನೆನೆದ ತಾರೆ ನೋಡಿ ನೋಡಿ', 'ವಯಸ್ಸು ಕಂಡದ್ದು', 'ಎಲ್ಲಾಕಡೆ ಇದೇರಿ' ಇವುಗಳೆಲ್ಲ ಪುಸ್ತಕ ವಿಮರ್ಶಕನ ಮನೋಭಾವನ್ನು ಪ್ರಶ್ನಿಸಿವೆ. ಪುಸ್ತಕ ವಿಮರ್ಶಕರು ಕೃತಿ ಬಗ್ಗೆ ವಿಮುಖ ಧೋರಣೆ ತಾಳಿದರೆ ಸಾಮಾನ್ಯ ಓದುಗರು ಆ ಕೃತಿಗೆ ತಾಳುವ ನಿಲುವು ಹೇಗಿರುತ್ತದೆ ಎಂಬುದಕ್ಕೆ ಕೊನೆಯ ಪ್ರತಿಕ್ರಿಯೆ ಸಾಕ್ಷಿಯಾಗಿದೆ. ಸಾಮಾನ್ಯ ಓದುಗರಿಗೂ ವಿಮರ್ಶೆ ದಕ್ಕುವುದಿಲ್ಲ ಎಂಬ ಹೇಳಿಕೆಗೆ ಯಾವುದೇ ಅರ್ಥವಿಲ್ಲವೆಂಬುದು ಈ ಪ್ರತಿಕ್ರಿಯೆಗಳನ್ನು ನೋಡಿದರೆ ತಿಳಿಯುತ್ತದೆ. ವಿಮರ್ಶಕರ ಮನೋಭಾವವನ್ನು ಪ್ರಶ್ನಿಸುವ ಅವರ ವಿಮರ್ಶೆಯನ್ನು ತೀಕ್ಷ್ಣ ವಿಶ್ಲೇಷಣೆಗೆ ಒಳಪಡಿಸುವ ಯತ್ನವನ್ನು ಸಾಮಾನ್ಯ ಓದುಗರು ಮಾಡಿದ್ದಾರೆ. ಕೆಲವೊಮ್ಮೆ ವಿಮರ್ಶೆ ಓದಿ ಕೃತಿಗೆ ಪ್ರವೇಶ ಮಾಡುವ ಓದುಗರಿಗೆ ಇಂಥ ಪುಸ್ತಕ ವಿಮರ್ಶೆಗಳು ದಾರಿ ತಪ್ಪಿಸುವುದು ಉಂಟೆದು ಮೇಲಿನ ಪ್ರತಿಕ್ರಿಯೆ ಸ್ಪಷ್ಟಪಡಿಸುತ್ತದೆ. ಓದುಗರು ಈ ಮೇಲಿನ ತರದ ವಿಮರ್ಶೆಗಳನ್ನು ನೀಡುವಾಗ ಆ ಪುಸ್ತಕ ವಿಮರ್ಶೆ ಅವರಿಗೆ ಎಷ್ಟು ಪ್ರಭಾವ ಬೀರಬಹುದು. ಆದರೂ ಕೃತಿ ಕುರಿತು, ಪುಸ್ತಕ ವಿಮರ್ಶೆ ಕುರಿತು ಯೋಚಿಸುವಂತೆ ಮಾಡಿರುವುದು 'ಪುಸ್ತಕ ವಿಮರ್ಶೆ' ಎಂಬುದನ್ನು ಮರೆಯಲಾಗದು.

ಕೆಲವು ಪುಸ್ತಕ ವಿಮರ್ಶೆಗಳು ಹೆಚ್ಚಾಗಿ ಕೃತಿಯ ಪ್ರವೇಶಕ್ಕೆ ಬೇಕಾದ ಸಿದ್ಧತೆಗಳನ್ನು ಓದುಗರಲ್ಲಿ ಮಾಡಲು ಯತ್ನಿಸುತ್ತವೆ. ಕೃತಿಯನ್ನು ಈ ನೆಲೆಯಲ್ಲಿ ಓದಬೇಕು, ಅರ್ಥೈಸಿಕೊಳ್ಳಬೇಕು ಎಂಬ ನಿಬಂಧನೆಗಳನ್ನು ಪುಸ್ತಕ ವಿಮರ್ಶಕರು ಕೊಡುವುದುಂಟು. ಹಾಗಾದರೆ ಕೃತಿಗೆ ಇದೊಂದೇ ಅರ್ಥವೆಂದು ನಿರ್ಬಂಧಿಸುವ ಗಡಿರೇಖೆಯಾಗಿರುತ್ತದೆ. ಕೃತಿಗೆ ಒಂದೇ ಅರ್ಥ ಇರುವುದಿಲ್ಲ. ಅದು ಹಲವಾರು ಅರ್ಥಗಳನ್ನು ತನ್ನ ಗರ್ಭದಲ್ಲಿ ಹುದುಗಿಸಿಕೊಂಡಿರುತ್ತದೆ. ಈ ಕಾರಣದಿಂದಲೇ ಒಂದೇ ಪುಸ್ತಕದ ಬಗ್ಗೆ ಬಂದ ಹಲವಾರು ವಿಮರ್ಶೆಗಳು ಒಂದೇ ತೆರನಾಗಿರುವುದಿಲ್ಲ. ಒಂದೊಂದು ಒಂದೊಂದು ರೀತಿಯಲ್ಲಿನ ವಿಚಾರಗಳನ್ನು ಅಭಿವ್ಯಕ್ತಿಸಿರುತ್ತವೆ. ಈ ಅಭಿವ್ಯಕ್ತಿಯ ಮೂಲಧಾರೆ ಆ ಕೃತಿಯೇ ಆದರೂ ಅದು ಕೊಡುವ ಅನುಭವ ಭಿನ್ನವಾಗಿರುತ್ತದೆ. ಹಾಗೆಯೇ ಸಾಮಾನ್ಯ ಓದುಗರೆಲ್ಲರೂ ಕೃತಿಯನ್ನು ಒಂದೇ ರೀತಿ ಅರ್ಥಮಾಡಿಕೊಳ್ಳುತ್ತಾರೆ. ಆದುದರಿಂದಲೇ ಕೃತಿ ಸಂವಹನ ಸಮಸ್ಯೆಯು ಕೇವಲ ಸಾಹಿತ್ಯಕವಾದುದಲ್ಲ ಸಾಂಸ್ಕೃತಿಕ ವಿವರಣೆ ಬಯಸುವ ಸಾಹಿತ್ಯೇತರ ಪ್ರಶ್ನೆಯಾಗಿದೆ[೩೩] ಈ ಕಾರಣದಿಂದ ಅದು ಸಾಂಸ್ಕೃತಿಕ ಪಠ್ಯವಾಗಿ, ಅನುಭವವಾಗಿ ರೂಪುಗೊಳ್ಳುತ್ತಿರುವುದು. ಕೃತಿ ಸಂವಹನದ ಸಾಧ್ಯತೆಯು ಸಹ ಓದುಗರ ಅಭಿರುಚಿಯ ಮೇಲೆ, ಕೆಲವೊಮ್ಮೆ ಆಯ್ಕೆಯ ಮೇಲೂ ನಿಂತಿರುತ್ತದೆ. ಎಲ್ಲ ಕೃತಿಗಳನ್ನು ಎಲ್ಲರೂ ಓದುವುದಿಲ್ಲವೆಂಬಂತೆ, ಬಂದಂಥ ಎಲ್ಲ ಪುಸ್ತಕ ವಿಮರ್ಶೆಗಳನ್ನು ಎಲ್ಲ ಓದುಗರು ಓದುವುದಿಲ್ಲ, ಪುಸ್ತಕ ವಿಮರ್ಶೆ ನವ್ಯದಲ್ಲಿ ಗಂಭೀರ ಸಾಹಿತ್ಯಾಸಕ್ತರಿಗೆ ಮಾತ್ರ ಮೀಸಲಾಗಿತ್ತು.

ನಿರ್ದಿಷ್ಟ ಕೃತಿಯೊಂದರ ಕುರಿತು ವಿಮರ್ಶಕರಿಬ್ಬರು ವಿಭಿನ್ನ ಮತ್ತು ವಿರುದ್ಧ ತೀರ್ಮಾನಗಳಿಗೆ ಬಂದಾಗ ಓದುಗ, ಸಾಹಿತ್ಯಾಭಿಮಾನಿ, ತನ್ನ ಹೊಣೆಯನ್ನು ತಾನು ನಿರ್ವಹಿಸಬೇಕಾಗುತ್ತದೆ. ತನಗೆ ಯಾರ ಅಭಿಪ್ರಾಯ ಹೆಚ್ಚು ಸಮಂಜಸ ಎಂಬುದನ್ನು ಪರೀಕ್ಷಿಸಲಿಕ್ಕಾಗಿಯೇ ಕೃತಿಯನ್ನು ಓದಲು ಹೊರಡದೆ, ಯಾವ ವಿಮರ್ಶಕ ಹೆಚ್ಚು ಕೃತಿನಿಷ್ಠನಾಗಿದ್ದಾನೆ? ಸಾಹಿತಿಯ ವಿನಯವನ್ನು ಗ್ರಹಿಸುವ ತನ್ನ ಪಾಲಿನ ವಿನಯವನ್ನು ಪರಮಾವಧಿ ಪ್ರಮಾಣದಲ್ಲಿ ಪ್ರಕಟಿಸಿದ್ದಾನೆ? ಎಂಬ ಜಿಜ್ಞಾಸೆಗೆ ಓದುಗ ಇಳಿಯಬೇಕಾದ ಅಗತ್ಯವನ್ನು ಇಂದಿನ ಸಮಾಜ ಮತ್ತು ಸಾಹಿತ್ಯ ಹೆಚ್ಚೆಚ್ಚು ಅಪೇಕ್ಷಿಸುತ್ತದೆ ಅನಿಸುತ್ತದೆ. ಹೀಗೆ ಅಭಿಪ್ರಾಯಗಳ ಮಧ್ಯೆ ಆಯ್ಕೆ ಮಾಡುವ, ಯುಕ್ತಾಯುಕ್ತಗಳನ್ನು ಪರಿಶೀಲಿಸುವ ಅರ್ಹತೆ ಓದುಗನಲ್ಲಿರಬೇಕಾಗುತ್ತದೆ. ಇದನ್ನೆ ನಾವು 'ಮೂರನೆಯ ವಿನಯ - ಓದುಗನ ವಿನಯ' ಎಂದು ವರ್ಣಿಸಬಹುದು. ಅಭಿಪ್ರಾಯ ಭೇದಗಳನ್ನು ಗೌರವಿಸುತ್ತಲೇ ಆ ಅಭಿಪ್ರಾಯಕ್ಕೆ ಕೃತಿಯಲ್ಲಿ ಎಷ್ಟರಮಟ್ಟಿಗೆ ಆಧಾರಗಳವೆ ಎಂಬುದನ್ನು ಕಂಡುಕೊಂಡು, ವಿಮರ್ಶಕನ ಅಭಿಪ್ರಾಯಗಳ ತೂಕವನ್ನು ಅಳೆಯುವ ಓದುಗ ವಿಮರ್ಶೆಗಷ್ಟೇ ಅಲ್ಲದೆ, ಸಾಹಿತ್ಯ ಕೃತಿಗೂ ನಿಜವಾದ ನ್ಯಾಯ ಸಂದಾಯ ಮಾಡಬಲ್ಲ ಇಂಥ 'ಮುಡಿವ ಭೋಗಿ'ಗಳನ್ನೇ ಕೃತಿಕಾರ ಅಂತಿಮವಾಗಿ ಬಯಸುವುದು[೨೪]

ಇದು ಓದುಗನ ತೊಡಕನ್ನು ಕುರಿತು ಆಲೋಚಿಸುವ ಬಗೆಗಿನ ವಿಶ್ಲೇಷಣೆಯಾಗಿದೆ. ಕೃತಿಕಾರರ ವಿನಯ, ವಿಮರ್ಶಕರ ವಿನಯವು ಒಂದು ಕೃತಿ ಪ್ರವೇಶಕ್ಕೆ ಎಷ್ಟು ಮುಖ್ಯ ಎಂಬುದನ್ನು ಕುರಿತು ಚರ್ಚಿಸುತ್ತಾರೆ. ಸಾಮಾನ್ಯ ಓದುಗರ ಗ್ರಹಿಕೆಗೆ ಸಿಗುವ ಅಭಿಪ್ರಾಯಗಳು ಅವರು ಪುಸ್ತಕ ವಿಮರ್ಶೆಗೆ ಪ್ರತಿಸ್ಪಂದಿಸುವಾಗ ಕೃತಿಯ ಬಗೆಗಷ್ಟೇ ಅವರು ತೀರ್ಮಾನ ತೆಗೆದುಕೊಳ್ಳುತ್ತಾರೆ. ಹೊರತು ಪುಸ್ತಕ ವಿಮರ್ಶೆ ಹೇಗಿದೆ? ಎಂಬುದರ ಬಗೆಗೆ ಆಲೋಚಿಸುವುದಿಲ್ಲ, ಪುಸ್ತಕ ವಿಮರ್ಶೆಯಿಂದ ಕೃತಿಯನ್ನು ಓದಲು ಕೊಂಡುಕೊಳ್ಳಬಹುದೇ ಎಂಬ ನಿರ್ಧಾರಕ್ಕೆ ಬರುತ್ತಾರೆ. ಅವರು ಪುಸ್ತಕ ವಿಮರ್ಶೆಯಿಂದ ಕೃತಿ ಓದಲು ಪ್ರೇರಣೆಯಾಗುತ್ತದೆಯೇ ಎಂಬುದಷ್ಟೇ ನಿರೀಕ್ಷಿಸುತ್ತಾರೆ.

ಸಾಹಿತ್ಯದ ಹುಟ್ಟು ಬೆಳವಣಿಗೆಗಳನ್ನು ಹೆಚ್ಚಾಗಿ ನಿರ್ಧರಿಸುವವರು ಓದುಗರು. ಓದುಗರು ಇಲ್ಲದೆ ಸಾಹಿತ್ಯದ ಯಾವುದೇ ಪ್ರಕಾರ ಯಶಸ್ಸನ್ನು ಪಡೆಯಲು ಸಾಧವಿಲ್ಲ. ವಿಮರ್ಶೆಗೂ ಈ ಮಾತುಗಳು ಅನ್ವಯಿಸುತ್ತವೆ. *ನಿಜವಾದ ಓದುಗರು ಕೃತಿಯನ್ನು ಬರೀ ಅರ್ಥವಿಸುವ ಆರಾಧಿಸುವ, ಭಕ್ತರಲ್ಲ, ಪ್ರಶ್ನಿಸುವ, ತೀರ್ಪಿಸುವ ವಿಮರ್ಶನ ಗುಣದವರು ಆಗಿರುತ್ತಾರೆ.* [೨೫] ಆದುದರಿಂದ ವಿಮರ್ಶೆ ಬೆಳೆಯಲು ಓದುಗರು ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಓದುಗರ ಚಿಂತನೆ ಬೆಳೆದಂತೆ ವಿಮರ್ಶೆಯೂ ಬೆಳೆಯುತ್ತ ಹೋಗುತ್ತದೆ. ಗಂಭೀರ ಓದುಗರು ತಮ್ಮ ಬೌದ್ಧಿಕ ವಿಚಾರದ ಮೂಲಕ ಚರ್ಚೆಗೆ ತೊಡಗುವುದರಿಂದಲೇ ವಿಮರ್ಶೆಗೆ ಒಂದು ಮೌಲ್ಯ, ಸ್ಥಾನ ದೊರಕಲು ಸಾಧ್ಯ.

ಗಂಭೀರ ಓದುಗರು ತಮ್ಮನ್ನು ಸಾಹಿತ್ಯದಲ್ಲಿ ಸಂಪೂರ್ಣವಾಗಿ ತೊಡಗಿಸಿಕೊಂಡವರಾಗಿರುತ್ತಾರೆ. ಇವರು ವಿಮರ್ಶೆಯ ತಾತ್ವಿಕತೆಯ ಸ್ವರೂಪದ ಅರಿವನ್ನು ಸಂಪೂರ್ಣವಾಗಿ ಬಲ್ಲವರಾಗಿರುತ್ತಾರೆ. ಕೇವಲ ಸಮಯ ಕಳೆಯುವುದಕ್ಕಷ್ಟೇ ಸಾಹಿತ್ಯವನ್ನು ಓದುವುದಿಲ್ಲ. ತನ್ನ ಜೀವನದ ಒಂದು ಭಾಗವಾಗಿಯೇ ಸಾಹಿತ್ಯವನ್ನು ಪರಿಭಾವಿಸಿಕೊಂಡಿರುತ್ತಾರೆ. ಇವರ ಮೂಲಕ ಸಾಹಿತ್ಯ ಕೃತಿಯನ್ನು ನೋಡುವುದು ತಾತ್ವಿಕವಾದ ವಿಮರ್ಶೆಯ ಚರ್ಚೆಯೇ ಆಗುತ್ತದೆ. ನಿಲುವಿಗೆ ಅನುಗುಣವಾಗಿಯೇ ಹೆಚ್ಚಿನ ಸಾಹಿತ್ಯ ಪತ್ರಿಕೆಗಳು ಕೆಲಸ ಮಾಡುತ್ತವೆ. ಸಾಹಿತ್ಯ ಪತ್ರಿಕೆಗಳು ಪ್ರಮುಖವಾಗಿ ಇಂತಹ ಓದುಗರ ಆಲೋಚನೆಗಳನ್ನೇ

ಅವಲಂಬಿಸಿರುತ್ತವೆ. ಅವು ಹೊಸ ಹೊಸ ಚಿಂತನೆಗಳಿಗೆ, ವಿಚಾರಗಳಿಗೆ ಎಡೆ ಮಾಡಿಕೊಡುವುದರಿಂದ ಗಂಭೀರ ಓದುಗರು ಅವುಗಳನ್ನು ಗಂಭೀರವಾಗಿ ಪರಿಗಣಿಸಿ ಅದಕ್ಕೆ ಪ್ರತಿಕ್ರಿಯೆಯನ್ನು ತೋರುತ್ತಾರೆ. ಇವರ ಈ ರೀತಿಯ ಪ್ರತಿಕ್ರಿಯೆಯಿಂದ ಹೊಸ ಆಲೋಚನೆ, ಸಿದ್ಧಾಂತಗಳಿಗೆ ನಾಂದಿಯಾಗಿ ಹೊಸ ವಿಚಾರಗಳ ಚರ್ಚೆಗೆ ಸಾಹಿತ್ಯ ಪತ್ರಿಕೆಯನ್ನು ಒಂದು ವೇದಿಕೆಯಾಗುವಂತೆ ಮಾಡುತ್ತಾರೆ. ನವ್ಯ ಘಟ್ಟದಲ್ಲಿ ಬಂದಂಥ ಪತ್ರಿಕೆ ಇಂತಹ ಓದುಗರನ್ನೇ ಪ್ರಮುಖವಾಗಿ ಅವಲಂಬಿದ್ದವು. 'ಸಾಕ್ಷಿ'ಯ ಮೊದಲ ಸಂಚಿಕೆಯಲ್ಲಿ ಅದರ ಸಂಪಾದಕರಾದ ಅಡಿಗರು ಕೃತಿ ನಿಷ್ಠ ವಿಮರ್ಶೆಗೂ ವಸ್ತುನಿಷ್ಠ ವಿಚಾರಕ್ಕೂ ಒಂದು ವೇದಿಕೆಯಾಗುವ ಹಾಗೇ 'ಸಾಕ್ಷಿ' ಎಂಬ ಪತ್ರಿಕೆಯೊಂದನ್ನು ಪ್ರಕಟಿಸಬೇಕೆಂಬ ಹಂಬಲ ನಮ್ಮಲ್ಲಿ.... ಎಂಬ ಈ ಮಾತು ಗಂಭೀರವಾಗಿ ಸಾಹಿತ್ಯಕ್ಕೆ ತೊಡಗಿಸಿಕೊಂಡ ಓದುಗರನ್ನು ಗಮನದಲ್ಲಿರಿಸಿಕೊಂಡು ಹೇಳಿದುದಾಗಿದೆ. ಹಾಗೆಯೇ ಈಗಲೂ ಎಡಪಂಥೀಯ ನಿಲುವುಗಳಿಗೆ ತಾನು ಬದ್ಧವಾಗಿದ್ದುಕೊಂಡು ಸಮಕಾಲೀನವಾದಂಥ ವಾಸ್ತವಗಳಿಗೆ ಯಾವಾಗಲೂ ಪ್ರತಿಕ್ರಿಯೆ ಕೊಡುತ್ತ ಅದನ್ನು ರೂಪಿಸತಕ್ಕಂತಹ ಲೇಖನಗಳನ್ನು ಪ್ರಕಟಿಸುತ್ತ ಅದಕ್ಕೊಂದು ಚಾಲನೆಯನ್ನು ನೀಡಿರುವ 'ಸಂಕ್ರಮಣ' ಬಂಡಾಯದ ಹಿನ್ನೆಲೆಯಾಗಿ ನಿಂತುಕೊಂಡು ಪ್ರಚಾರ ಮಾಡುತ್ತ ಚಳವಳಿಯನ್ನು ಗಟ್ಟಿಗೊಳಿಸುತ್ತ ಒಂದು ಸಮೂಹವನ್ನು ನಿರ್ಮಿಸಿದೆ. ಆದರೆ 'ಸಾಕ್ಷಿ'ಯಂತೆ ನಿಂತುಹೋಗದೆ, ಇಂದಿಗೂ 'ಸಂಕ್ರಮಣ' ಸಾಹಿತ್ಯ ಪತ್ರಿಕೆಗಳ ಗುಂಪಿನಲ್ಲಿ ಇನ್ನು ಉಳಿದು ಕೊಂಡಿರುವುದು ಗಂಭೀರವಾದ ಓದುಗರ ಆಲೋಚನೆಗಳಿಂದಲೆ ಎಂದು ಹೇಳಬಹುದು.

ಹೊಸಗನ್ನಡದ ಆರಂಭಿಕ ಕಾಲದಲ್ಲಿ ಸೃಜನಶೀಲತೆಯ ವಿಚಾರದಲ್ಲಿ ಓದುಗರ ಬಗೆಗೆ ಸಾಮಾನ್ಯ ಮತ್ತು ಗಂಭೀರ ಎಂಬ ಭಾವನೆ ಮೊಳಕೆಯೊಡೆಯದ ಕಾರಣ, ಅಲ್ಲಿ ಇವರಿಬ್ಬರಿಗೂ ಸಂವಹನವಾಗುವಂತೆ ಸಾಹಿತ್ಯವನ್ನು ಹೇಗೆ ರಚಿಸುವುದು, ವಿಮರ್ಶಿಸುವುದು ಎಂಬ ತೊಂದರೆ ತಪ್ಪಿತ್ತು. ಆಗ ತಾನೇ ನಮ್ಮ ಸಮಾಜ ಆಧುನಿಕ ಶಿಕ್ಷಣಕ್ಕೆ ತೆರೆದುಕೊಳ್ಳಲಾರಂಭಿಸಿತು. ಕಾರಣ ಶಿಕ್ಷಣ ಪಡೆದ ಎಲ್ಲರೂ ಓದುಗರಾಗಿಯೇ ನಿರ್ಮಾಣರಾದರೂ ಅವವ ಏಕಮುಖ ಓದಾಗದೆ ಸಂಸ್ಕೃತದಿಂದ ಪಡೆದ ಮೀಮಾಂಸಕ ಓದು ಅವರ ಹಿನ್ನೆಲೆಗಿತ್ತು. ಬಿ. ಎಂ. ಶ್ರೀಯವರು ಮಾಡಿದ ಕೃತಿಗಳ ಪರಿಚಯ 'ಇಂಗ್ಲೀಷ್ ಗೀತೆಗಳು' ಸಂಕಲನಕ್ಕೆ ತೀ. ನಂ ಶ್ರೀ ಮಾಡಿದ ಪುಸ್ತಕ ವಿಮರ್ಶೆ, ಕುವೆಂಪು ವಿಮರ್ಶಾ ಸಂಕಲನಗಳು, ಪುತಿನ ಅವವ ಕಾವ್ಯ ಕುತೂಹಲ ಮುಂತಾದವುಗಳನ್ನು ಇಲ್ಲಿ ಹೆಸರಿಸಬಹುದು.

೪.೫ ಪುಸ್ತಕ ವಿಮರ್ಶೆ ಮತ್ತು ಲೇಖಕರ ಸಂಬಂಧ

ಸೃಜನಶೀಲತೆಯೆಂಬುದು ಕವಿಯ ಭಾವನಾಲೋಕದ ವ್ಯಾಪಾರವಾಗಿ ಅವರಿಗೆ ಅರಿವಿಗೆ ಬಾರದ ರೀತಿಯಲ್ಲಿ ಅಪ್ರಜ್ಞಾಪೂರ್ವಕವಾಗಿ ಯಾವುದೋ ಪರಾವೇಶದಿಂದ ರಚಿತವಾಗುವ ಸಂದರ್ಭವೇ ಹೆಚ್ಚು. ಕೆಲವೊಮ್ಮೆ ತನಗೆ ತಾನೇ ವಿಸ್ಮಯಪಡುವಂತೆ ರಚಿತವಾದುದು ಎಂದು ಲೇಖಕರು ಹೇಳುವುದೂ ಉಂಟು. ಸೃಜನಶೀಲತೆಯ ಕಾರ್ಯವೆನ್ನುವುದು ತಾತ್ವಿಕ ಸಿದ್ಧಾಂತಗಳ ಚಿಂತನೆಯಲ್ಲಿ ಉದ್ಭವಿಸುವುದು

ತುಂಬಾ ವಿರಳವೆಂದೇ ಹೇಳಬಹುದು. ಆದರೆ ವಿಮರ್ಶೆಯ ಕಾರ್ಯದಲ್ಲಿ ಈ ಮೇಲಿನ ಮಾತುಗಳನ್ನು ಒಪ್ಪಲಾಗುವುದಿಲ್ಲ. ಏಕೆಂದರೆ ವಿಮರ್ಶೆ ಯಾವುದೇ ಭಾವೋದ್ರೇಕಕ್ಕೆ ಒಳಗಾಗಿ, ಇಲ್ಲವೆ ಸ್ಫೂರ್ತಿಗೆ ಒಳಗಾಗಿ ಕಂಡರಿಸುವ ಸೃಜನ ಶಕ್ತಿಯಲ್ಲ. ಅದು ಕೃತಿಯನ್ನು ಓದಿ ಅದರಿಂದ ಪಡೆದ ಜ್ಞಾನ ಮತ್ತು ತನ್ನ ವಿಚಾರಶಕ್ತಿ ಇವುಗಳ ಪರಸ್ಪರ ತಿಕ್ಕಾಟದಿಂದ ಮಥಿಸುವಿಕೆಯಿಂದ ಅಭಿಪ್ರಾಯ ರೂಪ ತಾಳುತ್ತದೆ. ನಂತರವೇ ಅದು ಲೇಖನವಾಗಿ ವಿಮರ್ಶೆಯ ಪರಿಧಿಯಲ್ಲಿ ನಿಲ್ಲುತ್ತದೆ. ಹಾಗಾದಾಗ ಮಾತ್ರವೇ ವಿಮರ್ಶೆಗೆ ತಾತ್ವಿಕತೆಯ ನೆಲೆ ಸಿಗಲು ಸಾಧ್ಯ. ಅಂದರೆ ವಿಮರ್ಶೆ ಸಾಮಾನ್ಯವಾಗಿ ಭಾವೋದ್ರೇಕತೆಯ ಸ್ಥಿತಿಯಲ್ಲಿ ಹುಟ್ಟುವುದೂ ಅಲ್ಲ.

ಲೇಖಕರು ತಾವು ಕೃತಿಯನ್ನು ರಚಿಸುವಾಗಲೇ ಆ ಕೃತಿಯ ಬಗ್ಗೆ ಅಪಾರವಾದ ವಿಶ್ವಾಸವನ್ನು, ನಂಬಿಕೆಯನ್ನು ಇಟ್ಟುಕೊಂಡಿರುತ್ತಾರೆ. ಕೆಲವೊಮ್ಮೆ ಅವರೇ ಕೃತಿಯ ಬಗೆಗಿನ ಆಶಯಗಳು ಇವುಗಳೆಂದು ಪಟ್ಟಿಗಳನ್ನು ತಯಾರಿಸಿಕೊಂಡಿರುತ್ತಾರೆ. ಅಲ್ಲದೆ ಕೆಲವು ನಿರ್ದಿಷ್ಟ ಓದುಗರು ಅವರ ಕಣ್ಣ ಮುಂದಿರುತ್ತಾರೆ. ಭೈರಪ್ಪನವರ ಮತ್ತು ಅನಂತಮೂರ್ತಿಯವರ ಕಾದಂಬರಿಗಳು, ದೇವನೂರರ ಕೃತಿಗಳು ಅಲ್ಲದೆ ತುಂಬಾ ಹೆಸರೇ ಗೊತ್ತಿಲ್ಲದವರ ಕಾದಂಬರಿಗಳು ಸಾಹಿತ್ಯ ಪ್ರಪಂಚಕ್ಕೆ ಏಕಕಾಲಕ್ಕೆ ಬಂದು ಬೀಳುತ್ತಿವೆ. ಭೈರಪ್ಪನವರ ಕೃತಿಗಳು ಒಂದು ನಿರ್ದಿಷ್ಟ ಓದುಗರನ್ನು ಈಗಾಗಲೇ ಪಡೆದುಕೊಂಡು ಬಿಟ್ಟಿವೆ. ಅವರ ಸೃಜನಶೀಲತೆಯ ಮಿತಿಯೂ ಅಷ್ಟೇ ಆ ಓದುಗರನ್ನೆ ಕುರಿತದ್ದಾಗಿರುವುದರಿಂದ ಅವರ ಆ ಕೃತಿಗಳ ಮೂಲಕ ಸಾಮಾನ್ಯ ಜನರ ಹತ್ತಿಕ್ಕಲಾರದ ಬಯಕೆಗಳಿಂದ ಆರಂಭವಾಗುತ್ತವೆ. ಆ ಕೃತಿಗಳ ಮೂಲಕ ಸಾಮಾನ್ಯರು ತಮ್ಮ ಕೈಗೂಡದ ಆಸೆಗಳನ್ನು ಈಡೇರಿಸಿಕೊಳ್ಳುತ್ತಿದ್ದೇವೆಯೆಂದೆ ಭ್ರಮಿಸುತ್ತಾರೆ. ಸಹಜವಾಗಿಯೇ ಅವರ ಕೃತಿಗಳ ಓದುಗರು, ಸಾಹಿತ್ಯ ಕೃತಿಯನ್ನು ಓದುವವರಿಗಿಂತ ಮೇಲ್ಪಟ್ಟವರಾಗಿರುತ್ತಾರೆ. ಒಂದು ಸಾಹಿತ್ಯ ಕೃತಿಗಳಿಸುವ ಯಶಸ್ಸಿಗಿಂತ ಹೆಚ್ಚಿನ ಯಶಸ್ಸನ್ನು ಅವರ ಕೃತಿಗಳು ಪಡೆಯುತ್ತಿವೆ. ಇದಕ್ಕೆ ಕಾರಣ ಮತೀಯವಾದ, ಸುಪ್ತವಾಗಿ ಆದರೆ ಅನಂತಮೂರ್ತಿ, ದೇವನೂರರ ಕೃತಿಗಳ ಓದುಗರ ವಲಯ ತುಂಬಾ ಕಿರಿದಾದುದು. ಇವುಗಳನ್ನು ಕೇವಲ ಸಾಹಿತಿಗಳು, ಸಾಹಿತ್ಯಾಸಕ್ತರು ಮಾತ್ರ ಓದಬಹುದಾದ ಪುಸ್ತಕಗಳು ಎಂಬ ಭಾವ ಸಾಮಾನ್ಯರಲ್ಲಿದೆ. ಹಾಗೆ ಸಾಹಿತ್ಯಾಸಕ್ತರಲ್ಲೂ ಸಹ ಆ ಕೃತಿಗಳ ಬಗ್ಗೆ ಒಂದು ರೀತಿಯ ವಿಶೇಷ ವ್ಯಾಕುಲತೆ ಅಡಗಿದೆ. ಸಾಮಾನ್ಯರಿಗೂ ಈ ಕೃತಿಗಳಿಗೂ ಅಂತರ ತುಂಬಾ ದೂರವೇ ಇದೆ. ದಲಿತ ಸಂಸ್ಕೃತಿಗಳ ಆಳದಿಂದ ಹೊರಟ ದೇವನೂರರ ಕೃತಿಗಳು ಸಾಮಾನ್ಯರ ಬದುಕಿನ ವಸ್ತುವನ್ನು ಕುರಿತೇ ಆದರೂ ಸಾಮಾನ್ಯರನ್ನು ತಲುಪಿಲ್ಲ. ಕಾರಣ ಅವು ಸಾಮಾನ್ಯರಿಗೆ ಸಂವಹನಗೊಳುತ್ತಿಲ್ಲವೆಂಬ ವಾದ. ಈ ಬಗೆಯದೆ ವಾಲೀಕಾರರ 'ಬೆಳ್ಳ' ಕಾದಂಬರಿ ಎದುರಿಸಿದ ಮೊದಲ ಸವಾಲೇನಿಸುತ್ತದೆ. ಆದುದರಿಂದಲೇ 'ಬೆಳ್ಳ' ಪ್ರಾದೇಶಿಕ ಭಾಷೆಯನ್ನು ಬಳಸಿಕೊಂಡಿದ್ದಾಗ್ಯೂ ಯಶಸ್ಸನ್ನು ಪಡೆಯಲಿಲ್ಲ. ನವ್ಯ ವಿಮರ್ಶಕರಂತೂ ಈ ಕೃತಿಯನ್ನು ಕಂಪೋಜ್ ಮಾಡಿದವರು ಮಾತ್ರ ಓದಿರಬೇಕು ಎಂದು ಪ್ರಜಾವಾಣಿಯಲ್ಲಿ ಬರೆದರು. ಪುಸ್ತಕ ವಿಮರ್ಶಕರ ಕುರುಡುಗಣ್ಣಿನಿಂದ 'ಬೆಳ್ಳ' ಭಾಷಿಕವಾಗಿಯೂ ಸ್ಥಾನ ಪಡೆಯಲಿಲ್ಲ. ಆದರೆ ದೇವನೂರರ

ಕೃತಿಗಳು ಯಶಸ್ಸನ್ನು ಪಡೆದವು. ಕಾರಣ ದೇವನೂರರ ಕಾದಂಬರಿಗಳು ಬಂದಂಥ ಸಂದರ್ಭ ದಲಿತ ಸಂವೇದನೆಯ ಕಾಲ, ದಲಿತ ಸಂವೇದನೆ ಉದ್ರಿಕ್ತ ಸಮಯ ಒಂದು ರೀತಿಯಲ್ಲಿ 'ದಲಿತ ಸಂಸ್ಕೃತಿ' ತನ್ನದನ್ನು ಕಂಡುಕೊಳ್ಳಲು ಹವಣಿಸುತ್ತಿದ್ದ ಕಾಲ. ಈ ಸಂಗಮದ ಫಲವಾಗಿ ಆ ಕೃತಿಗಳು ಯಶಸ್ಸನ್ನು ಪಡೆದವು. ಆದರೆ 'ಬೆಳ್ಳ', 'ನವ್ಯ ವಿಮರ್ಶಾ ದೃಷ್ಟಿ' ಉಚ್ಚ್ರಾಯ ಸ್ಥಿತಿಯಲ್ಲಿದ್ದ ಕಾಲದಲ್ಲಿ ಪ್ರಕಟಗೊಂಡಿತ್ತು. ನವ್ಯ ಕಾಲದಲ್ಲಿ ಹೆಣ್ಣಿನ ಹಸಿ ಕಾಮನೆಗಳ ಕಡೆ ಕಣ್ಣಿರಿಸಿದ್ದ ವಿಮರ್ಶಕರ ಕಣ್ಣಿಗೆ, ಓದುಗರ ಕಣ್ಣಿಗೆ (ಆ ಕಾಲದಲ್ಲಿ ಓದುಗರು ನವ್ಯದ ಪ್ರತಿಷ್ಠಿತ ಸಾಹಿತಿಗಳೇ ಆಗಿದ್ದರು) 'ಬೆಳ್ಳ' ಗೋಚರಿಸಲಿಲ್ಲ. ಆ ಕಾರಣದಿಂದ 'ಬೆಳ್ಳ' ಪಡೆಯಬೇಕಾದ ಸ್ಥಾನವನ್ನು ಪಡೆಯಲಿಲ್ಲ, ಸಿಗಬೇಕಾದ ಸ್ಥಾನದಿಂದ ನವ್ಯ ವಿಮರ್ಶೆ ಅದನ್ನು ಕೆಳಕ್ಕೆಸೆಯಿತು. ಈ ಕಾದಂಬರಿಗೆ ಆದ ತೊಂದರೆ ಎಲ್ಲಿ? ಎಂದು ಆಲೋಚಿಸಿದಾಗ ಅದು ಸಹಜವಾಗಿ ಆ ಕಾಲದ ವಿಮರ್ಶೆಯ ಮಾನದಂಡಗಳ ಕಡೆ ಹರಿಯುತ್ತದೆ. ನವ್ಯ ಸಾಹಿತ್ಯ ಹಾಕಿಕೊಂಡಿದ್ದ ವಿಮರ್ಶಾ ಮಾನದಂಡದ ಗೆರೆಯ ಹತ್ತಿರ 'ಬೆಳ್ಳ' ಸುಳಿಯಲಾಗಲಿಲ್ಲ. ಆ ಕಾಲದ ಇನ್ನುಳಿದ ಕೃತಿಗಳು ಯಶಸ್ಸು ಪಡೆದುದೇಕೆಂದರೆ, ಬಹುಪಾಲು ಅವುಗಳ ರಚನೆಯ ಮನಸ್ಸಿನಲ್ಲಿ ವಿಮರ್ಶಕರ ಬಗೆಗಿನ ದೃಷ್ಟಿ ಮತ್ತು ವಿಮರ್ಶಕರು ಇಟ್ಟುಕೊಂಡ ಮಾನದಂಡಗಳ ಕಡೆಗೆ ಸೃಜನಶೀಲ ಲೇಖಕರು ಗಮನ ಹರಿಸಿದ್ದು. ಅಲ್ಲದೆ ಕೃತಿ ಬಯಸುವ ಓದುಗ ಸಮುದಾಯವನ್ನು ಕೃತಿಯೇ ನಿರ್ಧರಿಸುವಂತಹದ್ದಾಗಿತ್ತು.

ಒಂದರ್ಥದಲ್ಲಿ ಪ್ರಕಟಿಸಿದ ಮೇಲೆ ಕೃತಿಯ ಜತೆ ಲೇಖಕರ ಹಂಗು ಹರಿಯಬೇಕು. ಆದರೆ ಲೇಖಕರಿಗೆ ಅದರ ಮೇಲಿನ ಮೋಹ ಬಿಡುವುದಿಲ್ಲ. ನಾಲ್ಕು ಜನರ ಗಮನ ಸೆಳೆಯಲಿ ಎಂದು ಭಾವಿಸುತ್ತಾರೆ. ಒಳ್ಳೆಯ ವಿಮರ್ಶೆ ಪ್ರಕಟವಾಗುವಂತೆ ಪ್ರಯತ್ನಿಸುತ್ತಾರೆ. ಸಾಧ್ಯವಾದರೆ ಬೇರೆ ಭಾಷೆಗೂ ಭಾಷಾಂತರಿಸುತ್ತಾರೆ. ಇವೆಲ್ಲ ಕೃತಿ ಬಗೆಗಿನ ಅತಿ ವ್ಯಾಕುಲದ ಸಹಜ ಕ್ರಿಯೆಗಳು ಆದರೆ ವಿಮರ್ಶೆಗೆಂದು ಕೃತಿ ಕಳಿಸಿದಾಗ ಅಥವಾ ತಾವಾಗಿ ವಿಮರ್ಶೆ ಬಂದಾಗ ವಿಮರ್ಶಕರ ಅಭಿಪ್ರಾಯಗಳನ್ನು ಗೌರವದಿಂದ ಸ್ವೀಕರಿಸಬೇಕಾದದ್ದು ಕರ್ತವ್ಯ. ಎಂದರೆ ಆ ಅಭಿಪ್ರಾಯಗಳನ್ನೆಲ್ಲ ಲೇಖಕರು ಒಪ್ಪಬೇಕೆಂದಲ್ಲ. ಅಭಿಪ್ರಾಯಗಳನ್ನು ಒಪ್ಪದೆಯೂ ಸೌಜನ್ಯದಿಂದ ಸ್ವೀಕರಿಸುವುದು ಸಾಧ್ಯ. ಟೀಕಿಸಿದಾಗಲೆಲ್ಲ ಯಾವ ಯಾವದೋ ಉದ್ದೇಶಗಳನ್ನು ಹುಡುಕಿ ಆರೋಪಿಸಿ ಪ್ರತಿಯಾಗಿ ಟೀಕಿಸತೊಡಗಿದರೆ ವಿಮರ್ಶಕರು ಮೌನವಾಗಬೇಕಾಗುತ್ತದೆ. ಲೇಖಕರು ಹೀಗೆ ವಿಮರ್ಶಕರ ಮೇಲೆ ಹರಿಹಾಯುತ್ತ ತಮ್ಮ ಕೃತಿಗಳನ್ನು ಸಮರ್ಥಿಸಿಕೊಳ್ಳತೊಡಗಿದರೆ, ಆ ಸಂದರ್ಭದಲ್ಲಿ ವಿಮರ್ಶಕರನ್ನು ಎದುರಾಳಿಯ ಸ್ಥಾನದಲ್ಲಿರಿಸಿ ಅವರ ವೈಯಕ್ತಿಕ ವಿಷಯಗಳನ್ನು ಬಹಿರಂಗಗೊಳಿಸಿ ಅವಹೇಳನ ಮಾಡತೊಡಗಿದರೆ ವೈಯಕ್ತಿಕ ಮಾನವೀಯ ಸಂಬಂಧಗಳು ಹದಗೆಡುತ್ತವೆ. ೧೯೪೬ರಲ್ಲಿ ಸಾರ್ತ್ರೆ ಸ್ಥಾಪಿಸಿದ 'ಲೆಸ್ ಟೆಂಪ್ಸ್ ಮಾಡರ್ನ್ಸ್' ಪತ್ರಿಕೆಯಲ್ಲಿ ಒಂದು ಪುಸ್ತಕ ವಿಮರ್ಶೆಯ ಕಾರಣಕ್ಕಾಗಿ ಸಾರ್ತ್ರೆ ಮತ್ತು ಕಮು ಅವರ ಸಂಬಂಧಗಳು ಹಳಸಿಕೊಂಡಿದ್ದನ್ನು ನೆನಪಿಸಿಕೊಳ್ಳಬಹುದು.[೬] ಯಾವುದೇ ಲೇಖಕರು ತಾವು ಕೃತಿ ರಚಿಸುವ ಸಂದರ್ಭದಲ್ಲಿ ಅಥವಾ ಪ್ರಕಟಣೆಯಾದಾಗ ತಮ್ಮ ಕೃತಿ ವಿಮರ್ಶೆಯಾಗಬೇಕು, ಚರ್ಚೆಗೊಳಗಾಗಬೇಕು

ಎಂದು ಬಯಸುವುದು ಸಹಜವೇ. ಅದರ ಮೊದಲ ಹೆಜ್ಜೆಯೆ ಅವರ ಕೃತಿಯ ‘ಪುಸ್ತಕ ವಿಮರ್ಶೆ’ ಯಾಗಿರುತ್ತದೆ. ಆದುದರಿಂದ ಆ ಪುಸ್ತಕ ವಿಮರ್ಶೆಯು ತಪ್ಪುದಾರಿ ತುಳಿದರೆ ಆ ಕೃತಿಯ ಬಗೆಗೆ ನಿರುತ್ಸಾಹ ಉಂಟು ಮಾಡುವ ಭದ್ರವಾದ ಕಗ್ಗಂಟನ್ನು ನಿರ್ಮಿಸುವ ವಿಮರ್ಶೆಯಾಗಿ ತೊಡಗಿಬಿಡುತ್ತದೆ. ಆದುದರಿಂದ ವಿಮರ್ಶಕರು ಕೃತಿಗೆ ತುಂಬಾ ವಿಧೇಯರಾಗಿರಬೇಕಾಗಿರುತ್ತದೆ. ವಿಧೇಯರಾಗಿರಬೇಕು ಎಂದರೆ ಕೃತಿಯನ್ನು ಎತ್ತಿ ಹೊಗಳುವ ಕಡೆ ಮಾತ್ರ ಗಮನ ಹರಿಸಬೇಕು ಎಂದು ಅರ್ಥವಲ್ಲ. ಕೃತಿಕಾರನ ವಿನಯದ ನೈಜ ಸ್ವರೂಪದ ಅನಾವರಣ ಮಾಡಲು ಸಾಧ್ಯವಾಗುವುದು ‘ವಿಮರ್ಶಕ ವಿನಯ’ ದಿಂದಲೇ ಎಂಬುದರಿಂದ ವಿಮರ್ಶಕನ ಹೊಣೆಗಾರಿಕೆಯನ್ನೆ ಸಾರಿ ಹೇಳಿದಂತಾಗುತ್ತದೆ. ವಿಮರ್ಶಕನ ಮಟ್ಟಿಗೆ ‘ವಿನಯ’ ವೆಂದರೆ ಸಾರತಃ ಕೃತಿ ನಿಷ್ಠತೆಯೇ ಆಗಿದೆ. ಇಂಥ ವಿನಯ ಸಂಪನ್ನ ವಿಮರ್ಶಕ ಕೃತಿಕಾರನಿಗಿಂತ ಕೃತಿಯನ್ನು ಹೆಚ್ಚು ಗೌರವದಿಂದ ಎದುರುಗೊಳ್ಳುತ್ತಾನೆ. ಅದನ್ನು ಸವಾಲಾಗಿ ಸ್ವೀಕರಿಸುತ್ತಾನೆ. ಕೃತಿ ಅಂದರೆ ಅದು ಸೃಷ್ಟಿಯಾದ ಕಾಲ, ಅದನ್ನು ಸೃಷ್ಟಿಮಾಡಿದ ಸಮಾಜ ಇವೆಲ್ಲವುಗಳನ್ನು ಒಳಗಿನ ಪುರಾವೆಗಳ ಬಲದಿಂದ ಗ್ರಹಿಸುತ್ತಾರೆ. ಇತರ ಶಿಸ್ತುಗಳ ಪರಿಜ್ಞಾನ ಮತ್ತು ಸೂಕ್ಷ್ಮ ಒಳನೋಟಗಳಿದ್ದಷ್ಟು ಆತನ ಗ್ರಹಿಕೆ ಪ್ರಾಮಾಣಿಕವಾಗಿರುತ್ತದೆ. ‘ವಿನೀತ’ವಾಗಿರುತ್ತದೆ.[೩೨]

ಹೀಗಾಗಿ ವಿಮರ್ಶಕರಾದವರು ಈ ಎಲ್ಲ ವಿನಯಗಳನ್ನು ತೋರಿಸದಿದ್ದರೂ ಕೊನೆಯ ಪಕ್ಷ ಓದುಗರು ಹೇಗೆ ಕೃತಿ ಪ್ರವೇಶಿಸಬೇಕು ಎಂಬುದರ ಸಾಮಾನ್ಯ ತಿಳಿವನ್ನು ಮಾಡಿಕೊಟ್ಟರೂ ಲೇಖಕರಿಗೆ ನ್ಯಾಯ ಒದಗಿಸಿದಂತಾಗುತ್ತದೆ. ಇದು ‘ಕೃತಿ ವಿಮರ್ಶೆ’ಯ ಕಡೆಯ ಆದರ್ಶವೆನ್ನಬಹುದು. ಲೇಖಕರಾದವರು ತಾವು ಕೃತಿಯನ್ನು ರಚಿಸುವಾಗ ಅನಿವಾರ್ಯವಾಗಿ ನಿರ್ದಿಷ್ಟ ಓದುಗರನ್ನು ಗಮನದಲ್ಲಿರಿಸಿಕೊಂಡಂತೆ, ಇತ್ತೀಚೆಗೆ ನಿರ್ದಿಷ್ಟ ವಿಮರ್ಶಕರನ್ನು ಮನದಲ್ಲಿಟ್ಟುಕೊಂಡು ಆ ಮಾದರಿಗಳಿಗೆ ಅನುಗುಣವಾಗಿ ಕೃತಿ ರಚಿಸುವ ಸಾಹಸ ಕಾರ್ಯವು ನಡೆಯುತ್ತಿದೆ. ನವ್ಯದ ಸಂದರ್ಭದಲ್ಲಂತೂ ವಿಮರ್ಶಕರಿಗಾಗಿ ಕೃತಿ, ಲೇಖಕರನುದ್ದೇಶಿಸಿ ವಿಮರ್ಶೆ ಎಂಬಂತಹ ವಾತಾವರಣವೇ ಸೃಷ್ಟಿಯಾಗಿಬಿಟ್ಟಿತ್ತು. ಈ ಕಾರಣಕ್ಕಾಗಿಯೇ ನವ್ಯದಲ್ಲಿ ಕೃತಿಗಳು ಲೇಖಕರ ಮತ್ತು ವಿಮರ್ಶಕರಿಬ್ಬರ ಪಾಠಗಳಾಗಿ ನಿಂತು ಬಿಟ್ಟವು. ಇವುಗಳನ್ನು ದಾಟಿ ಓದುಗರ ಸಮುದಾಯವನ್ನು ತಲುಪಲಿಲ್ಲ. ಅಷ್ಟೇ ಅಲ್ಲ ಆ ಕಾಲದಲ್ಲಿ ಓದುಗರ ಸಮುದಾಯವೆಂದರೆ ಪಾಂಡಿತ್ಯವುಳ್ಳ ವಿಮರ್ಶಕರ ಇಲ್ಲವೇ ಮತ್ತೊಂದು ಲೇಖಕರ ಮತ್ತು ವಿಮರ್ಶಕರ ಗುಂಪಾಗಿತ್ತು. ಈ ರೀತಿಯ ಅತಿರೇಕ ಇತ್ತೀಚೆಗೆ ಕಡಿಮೆಯಾಗುತ್ತಿದೆ.

ನವೋದಯ ಸಂದರ್ಭವು ಈ ರೀತಿಯ ತೊಂದರೆಗಳಿಂದ ತಪ್ಪಿಸಿಕೊಂಡಿತು. ಅಲ್ಲಿ ಲೇಖಕರು ಮತ್ತು ವಿಮರ್ಶಕರು ಎಂಬ ಪ್ರತ್ಯೇಕ ಭಾಗವಿರಲಿಲ್ಲ. ಈ ಸಂದರ್ಭದಲ್ಲಿ ವಿಮರ್ಶೆ ಮತ್ತು ಸೃಜನೆ ಇವೆರಡು ಕಾರ್ಯವನ್ನು ಒಬ್ಬರೇ ನಿರ್ವಹಿಸುತ್ತಿದ್ದರು. ಇವರು ಬೇರೆಯವರ ಪುಸ್ತಕವನ್ನು ವಿಶ್ಲೇಷಿಸುತ್ತ ತಮ್ಮನ್ನು ತಮ್ಮ ಕೃತಿಯನ್ನು ತಾವೇ ಸಮರ್ಥಿಸಿಕೊಳ್ಳುತ್ತಿದ್ದರು. (ಈ ಅತಿರೇಕ ನವ್ಯವನ್ನು ಬಿಟ್ಟಿಲ್ಲ. ನವ್ಯರು ತಮ್ಮ ಪಂಥದ ನಿಲುವುಗಳನ್ನು ಸಮರ್ಥಿಸಿಕೊಳ್ಳುತ್ತಿದ್ದರು) ಆ ಕಾಲದಲ್ಲಿ ವಿಮರ್ಶೆಗಾಗಿ ಮೀಸಲಿದ್ದ ಯಾವುದೇ ಪ್ರತ್ಯೇಕ ಪುಸ್ತಕ ವಿಮರ್ಶಕರಿರಲಿಲ್ಲ. ವಿಮರ್ಶೆ ಅವರಿಗೆ ಸೃಜನೆಯ ಒಂದು ಭಾಗವಾಗಿತ್ತು. ಆತ್ಮೀಯವಾಗಿ ವಿಮರ್ಶೆಯನ್ನು ಬರೆಯುತ್ತ ಕೃತಿ ಬಗೆಗೆ ತಮ್ಮ ಸಲಹೆ ಸೂಚನೆಗಳನ್ನು

ವಿಮರ್ಶೆಯ ನೆಪದಲ್ಲಿ ನೀಡುತ್ತಿದ್ದರು. ಅವರು ಓದುಗರಿಗೆ ಇವು ತಲುಪುತ್ತವೆ ಎನ್ನುವುದಕ್ಕಿಂತ ಕೃತಿಯ ಲೇಖಕರು ತಮಗೆ ಆತ್ಮಿಯರು ಅವರಿಗೆ ವೈಯಕ್ತಿಕವಾಗಿ ಬರೆಯುತ್ತಿದ್ದೇನೆ ಎಂಬಂತೆ ಆ ಕಾಲದ ಲೇಖನಗಳು ಕಾಣುತ್ತವೆ. ಉದಾಹರಣೆಗೆ ತೀ.ನಂ.ಶ್ರೀಯವರ 'ಯೆಂಡ್ಮುಡ್ಕ ರತ್ನ' ಕೃತಿಯ ಬಗ್ಗೆ ಬರೆದ ವಿಮರ್ಶೆಯನ್ನು ಗಮನಿಸಬಹುದು. ಈ ವಿಮರ್ಶೆಯು ಸೃಜನಶೀಲತೆಯ ಸ್ವರೂಪದಲ್ಲಿ ಆರಂಭವಾಗಿದೆ. ಇಲ್ಲಿ ಪದ್ಯದ ಸಾಲುಗಳನ್ನು ಎತ್ತಿಕೊಂಡು ಅರ್ಥೈಸಲಾಗಿದೆ. ಹಾಗೇ ವಿವರಣೆ ನೀಡುತ್ತಾ ಕವಿಗೆ ಆತ್ಮೀಯವಾದ ಮಾತುಗಳನ್ನು ಹೇಳುತ್ತಾರೆ. 'ಯೆಂಡ್ಮುಡ್ಕ ರತ್ನ'ನು ತನ್ನ ಪದಗಳನ್ನು ಹಾಡಿ ನಮ್ಮ ಸಾಹಿತ್ಯ ಪ್ರಪಂಚದಲ್ಲಿ ಒಂದು ಕ್ರಾಂತಿಯನ್ನುಂಟು ಮಾಡಿದ್ದಾನೆ. ಎಂದು ಹೇಳುತ್ತಲೇ "ರತ್ನನು ಹಾಡಿದಾಗ ಕೇಳುವುದಕ್ಕೆ ಬಲು ಚನ್ನಾಗಿರುತ್ತದೆ. ಬರವಣಿಗೆಯು ಮಾತ್ರ ಹಲವು ಅಕ್ಷರಗಳು ನುಂಗಿ ಹೋಗಿ ಉಳಿದವು ಒಂದಕ್ಕೊಂದು ಅಂಟಿಕೊಂಡಿರುವುದರಿಂದ ಓದಿ ಕೊಳ್ಳುವವರಿಗೆ ಪದ ಸ್ವರೂಪ ಗ್ರಹಣವು ತೊಂದರೆ ಕೊಡುತ್ತವೆ" ಎಂದು ಪರಿಚಯದಲ್ಲಿ ರಿಯಾಯಿತಿ ತೋರುವುದುಂಟು, ಇದು ತನ್ನ ಆತ್ಮೀಯರಾದವರ ಕೃತಿ ಎಂಬ ಭಾವವು ಆ ಲೇಖನದ ಉದ್ದಕ್ಕೂ ಎದ್ದು ಕಾಣುತ್ತದೆ. ಆದರೂ ಮೊದಲು ಹೇಳಿದಕ್ಕೂ ಕೊನೆಯಲ್ಲಿ ಹೇಳಿರುವ ವಾಕ್ಯಗಳ ನಡುವೆಯೇ ತೀನಂಶ್ರೀ ಅವರು ಮನಸ್ಸು ಪುಸ್ತಕ ವಿಮರ್ಶೆ ಯಾವ ರೀತಿ ಇರಬೇಕು ಎಂಬ ಚರ್ಚೆಗೆ ಒಳಗಾಗಿರುವಂತೆ ಕಂಡು ಬರುತ್ತದೆ. ಅದರಲ್ಲಿನ ದೋಷಗಳನ್ನು ಕೇವಲ ಅಕ್ಷರಗಳೆಂದು ಗಮನಿಸಿದರೂ ಬೇರೆ ರೀತಿಯ ಓದಿಗೆ ಪರಿತಪಿಸುವಂತೆ ಕಾಣಸುತ್ತದೆ. ಈ ಲೇಖನವು ಆತ್ಮೀಯರಾದವರಿಗೆ ಬರೆದ ವೈಯಕ್ತಿಕ ಕಾಗದದ ಸ್ವರೂಪದಂತಿದೆ. ಇಡೀ ಪುಸ್ತಕ ವಿಮರ್ಶೆಯಲ್ಲಿ ದೋಷಗಳನ್ನು ಗಮನಿಸಿದಂತೆ ಕಾಣಬರುವುದಿಲ್ಲ.

ಪುಸ್ತಕ ವಿಮರ್ಶೆ ಮತ್ತು ಲೇಖಕರ ಸಂಬಂಧವನ್ನು ಪರಾಮರ್ಶಿಸಿದರೆ ಸಹಜವಾಗಿಯೇ ಲೇಖಕರಿಗೆ ಪುಸ್ತಕ ವಿಮರ್ಶೆಗಳು ತೃಪ್ತಿಯನ್ನು ಕೊಟ್ಟಿಲ್ಲ. ತಾವು ಕೃತಿಯ ಬಗೆಗೆ ಇಟ್ಟುಕೊಂಡಿದ್ದ ಒಳ್ಳೆಯ ನಂಬುಗೆಗಳು ಧೂಳೀಪಟವಾಗುವ ಹೇಳಿಕೆಗಳು ಪುಸ್ತಕ ವಿಮರ್ಶಯಲ್ಲಿ ಬರುತ್ತಿವೆ ಎಂಬ ಲೇಖಕರ ಹೇಳಿಕೆಗಳನ್ನು ಪರಾಮರ್ಶಿಸಿದರೆ, ಅವರಲ್ಲಿ ಪುಸ್ತಕ ವಿಮರ್ಶೆಯ ಒಳ್ಳೆ ನಿಲುವಿಗಿಂತ ವಿರೋಧಿ ನಿಲುವೇ ವ್ಯಕ್ತವಾದಂತಿದೆ. ವಸ್ತುನಿಷ್ಠವಾಗಿ ಪುಸ್ತಕವನ್ನು ವಿಮರ್ಶಿಸಿದರೆ ವಿಮರ್ಶಕರು ಲೇಖಕರ ವಿರೋಧವನ್ನು ಕಟ್ಟಿಕೊಳ್ಳಬೇಕಾಗುತ್ತದೆ.

ಈ ಬಗ್ಗೆ ತಿರುಮಲೇಶರವರು 'ಅನ್ವೇಷಣೆ' ಪತ್ರಿಕೆಗೆ ಬರೆದಿದ್ದ ಬಹಿರಂಗ ಪತ್ರವನ್ನು ನೋಡಬಹುದು. ಇದರಲ್ಲಿ ಲೇಖಕ ಮತ್ತು ಪುಸ್ತಕ ವಿಮರ್ಶಕ ಇವರಿಬ್ಬರ ನಡುವಿನ ಸಂಬಂಧವನ್ನು ಕುರಿತು ವಿಶ್ಲೇಷಿಸುತ್ತಾರೆ. ಕೆ.ವಿ. ತಿರುಮಲೇಶ್‌ರವರು ಆರ್.ಜಿ. ಹಳ್ಳಿನಾಗರಾಜ್‌ರವರ 'ಸಿಡಿದವರು' ಕಥಾ ಸಂಕಲನವನ್ನು ಪ್ರಜಾವಾಣಿಯಲ್ಲಿ 'ಪುಸ್ತಕ ವಿಮರ್ಶೆ' ಮಾಡಿದಾಗ ಲೇಖಕರಿಂದ ಬಂದಂಥ ಪ್ರತಿಕ್ರಿಯೆಯನ್ನು ಕುರಿತು ಒಂದು ಬಹಿರಂಗ ಪತ್ರದ ರೀತಿಯಲ್ಲಿ ಬರೆದಿದ್ದಾರೆ. ಅದರಲ್ಲಿ ಅನೌಪಚಾರಿಕವಾಗಿ, ಅಚಾನಕ್ಕಾಗಿ 'ಪುಸ್ತಕ ವಿಮರ್ಶೆ'ಯ ಚರ್ಚೆಯ ಪ್ರಸ್ತಾಪ ಬಂದರೂ, ವಿಮರ್ಶಕರು ಮತ್ತು ಲೇಖಕರ ನಡುವಿನ ಸಂಘರ್ಷಾತ್ಮಕ ವಾಗ್ವಾದವನ್ನು ಗುರುತಿಸಬಹುದು.

ಪ್ರಜಾವಾಣಿಯಿಂದ ಪುಸ್ತಕ ವಿಮರ್ಶೆಗೆಂದು ನಿಮ್ಮ ಕಥಾ ಸಂಕಲನ 'ಸಿಡಿದವರು' (ಆರ್. ಜಿ. ನಾಗರಾಜ್) ನನ್ನ ಕೈಗೆ ಬಂತು. ಕತೆಗಳ ತುಂಬ ಕಂಡುಬರುವ ನಿಮ್ಮ ಕಳವಳವನ್ನು ನಾನು ಮೆಚ್ಚಿದರೂ, ಅದನ್ನು ಪ್ರಕಟಿಸಿದ ವಿಧಾನವನ್ನು ಮೆಚ್ಚಲಿಲ್ಲ. ಮುಖ್ಯವಾಗಿ, ನೀವು ಸೃಷ್ಟಿಸಿದ ಕಥಾಪಾತ್ರಗಳು ಹೇಗೆ ಕ್ರಾಂತಿಯ ಹೊಣೆಯನ್ನು ಹೊರಲಾರವು ಎಂಬುದನ್ನು ನಾನು ಎತ್ತಿ ತೋರಿಸಿದೆ. ಈ ವಿಮರ್ಶೆ ಪ್ರಕಟವಾದ ತಕ್ಷಣ ನನ್ನನ್ನು ದ್ವೇಷಿಸುವ ಮಂದಿಯಲ್ಲಿ ನೀವೂ ಸೇರಿಕೊಳ್ಳುತ್ತೀರಿ, ಅಲ್ಲದೆ 'ಅನ್ವೇಷಣೆ'ಯ ಮುಂದಿನ ಸಂಚಿಕೆಯಲ್ಲಿ ನನ್ನನ್ನು ಚೆನ್ನಾಗಿ ಝಾಢಿಸುತ್ತೀರೆಂದು ಅಂದುಕೊಂಡಿದ್ದೆ. ಆದರೆ ಹಾಗಾಗಲೇ ಇಲ್ಲ! ಆದಕ್ಕೆ ಬದಲು ಆ ವಿಮರ್ಶೆಯನ್ನು ಮೆಚ್ಚಿ ನೀವೂ ನನಗೆ ಪತ್ರ ಬರೆದಿರಿ. ಅದರಿಂದ ಕೆಲವು ಸಂಗತಿಗಳು ಮನದಟ್ಟಾದವು ಎಂದು ಒಪ್ಪಿಕೊಂಡಿರಿ, ಇಂಥದೊಂದು ಪತ್ರವನ್ನು ನಾನು ಖಂಡಿತಕ್ಕೂ ನಿರೀಕ್ಷಿಸಿರಲಿಲ್ಲ. ನಿಮಗೆ ಹಾಗೆಯೇ ತಿಳಿಸಿ ಪತ್ರ ಬರೆದೆ.

ನಿಮ್ಮ ಪುಸ್ತಕದ ಬಗ್ಗೆ ನಾನು ಹೇಳಿದ್ದೆ ಕೊನೆಯ ಮಾತು ಎಂದು ನಾನು ಅಂದೂ ತಿಳಿದುಕೊಂಡಿರಲಿಲ್ಲ, ಇಂದೂ ಹಾಗೆ ತಿಳಿದುಕೊಳ್ಳುವುದಿಲ್ಲ. ನಾನು ಹೇಳಿದ ಮಾತುಗಳಲ್ಲೇ ತಪ್ಪಿರಬಹುದು. ಅದನ್ನು ಇನ್ನೊಬ್ಬರು ಎತ್ತಿ ತೋರಿಸಬೇಕಾಗುತ್ತದೆ. ಯಾರನ್ನೇ ವಿಮರ್ಶಿಸುವಾಗಲೂ ನಾನು ಈ ಎಚ್ಚರವನ್ನು ಮನಸ್ಸಿನಲ್ಲಿ ಇಟ್ಟುಕೊಂಡಿರುತ್ತೇನೆ. ಹಾಗಿದ್ದರೂ ನಾನೂ ಕೂಡ ಲೇಖಕನ 'ಅಹಂ'ಗೆ ಒಳಗಾದ ಅನೇಕ ಪ್ರಸಂಗಗಳುಂಟು. ಇವುಗಳಲ್ಲಿ ನನ್ನ ಮನಸ್ಸನ್ನು ಇಂದಿಗೂ ಬಹಳವಾಗಿ ಕೊರೆಯುವ ಒಂದು ಪ್ರಸಂಗವನ್ನಿಲ್ಲಿ ಹೇಳಲೇಬೇಕು. ಅದು ನನ್ನ ಕವನ ಸಂಕಲನ 'ಮುಖಾಮುಖಿ'ಯ ಬಗ್ಗೆ ಶಾಂತಿನಾಥ ದೇಸಾಯಿಯವರು ನವ್ಯದ ವಿರೋಧಿಗಳನ್ನು ಮೆಚ್ಚಿಸಲು ನವ್ಯ ಚಳವಳಿಯನ್ನು ಜರೆಯುವುದಕ್ಕೆಂದು ನನ್ನ ಕೃತಿಯನ್ನು ಒಂದು ನೆಪವಾಗಿ ತೆಗೆದುಕೊಂಡಿದ್ದಾರೆ ಎಂಬುದು ನನ್ನ ಅಭಿಪ್ರಾಯವಾಗಿತ್ತು. ನಾನು ಹೀಗೆ ಬರೆಯಬಾರದಾಗಿತ್ತು ಎಂದು ನನಗೆ ಆನಿಸಿದೆ. ದೇಸಾಯಿಯವರ ವಿಮರ್ಶೆ ಸರಿಯಾಗಿರಬಹುದು ಎಂದೂ ತೋರಿದೆ. ಅಂದಿನ ಕಲುಷಿತ ವಾತಾವರಣ ನನ್ನ ಮನಸ್ಸನ್ನು ಮಂಕುಗೊಳಿಸಿರಬೇಕು, 'ಮಹಾಪ್ರಸ್ಥಾನ' ದ ಅತಿ ವಿಜೃಂಭಣಾತ್ಮಕ ಶೈಲಿಯನ್ನು ಪುನರಾವರ್ತಿಸದೆ ಇರಲೆಂದು ನಾನು 'ಮುಖಾಮುಖಿ'ಯನ್ನು ಗದ್ಯದತ್ತ ಕೊಂಡೊಯ್ದೆ. ಅದೇ ರೀತಿ ರಾಮಾಯಣ, ಮಹಾಭಾರತ, ಪುರಾಣ ಪ್ರತಿಮೆಗಳನ್ನು ಮತ್ತೆ ಮತ್ತೆ ಉಪಯೋಗಿಸುವುದೂ ನನಗೆ ಬೇಕಿರಲಿಲ್ಲ. ದೇಸಾಯಿಯವರು ಈ ನನ್ನ ಸಂಕಲ್ಪಗಳನ್ನು ಗುರುತಿಸದೆ ಹೋದರಲ್ಲ ಎಂದು ನನಗೆ ಬೇಸರವೂ ಆಗಿತ್ತು. ಅದೇನೆ ಇದ್ದರೂ ದೇಸಾಯಿಯವರ ಉದ್ದೇಶವನ್ನು ಸಂದೇಹದಿಂದ ನೋಡಬಾರದಾಗಿತ್ತು ಈ ತಪ್ಪನ್ನು ನಂತರ ತಿದ್ದಿಕೊಳ್ಳಲು ಯತ್ನಿಸಿದ್ದೇನೆ. ಹಲವರು ತಪ್ಪಾಗಿ ಕಲ್ಪಿಸಿಕೊಳ್ಳುವಂತೆ ದೇಸಾಯಿ ಮತ್ತು ನಾನು ಪರಸ್ಪರ ವೈರಿಗಳಾಗಿಲ್ಲ! ನನಗವರು ಒಬ್ಬ ಹಿರಿಯ ಮಿತ್ರರು. ಸಾಹಿತ್ಯಕವಾಗಿ ನಮ್ಮಲ್ಲಿ ಭಿನ್ನಾಭಿಪ್ರಾಯಗಳಿರಬಹುದಾದರೂ ಪರಸ್ಪರರ ಪ್ರಾಮಾಣಿಕತೆಯನ್ನು ಪ್ರಶ್ನಿಸುವಷ್ಟು ದೂರ ನಾವು ಹೋಗಿಲ್ಲ (ದೇಸಾಯಿಯವರು ಬಹುಶಃ ಎಂದೂ ಇಂಥ ತಪ್ಪು ಮಾಡಿರಲಾರರು, ಆಗಾಗ ಎಡವುತ್ತಿರುವವನು ನಾನೇ) ನಂತರ ದೇಸಾಯಿಯವರ 'ಬೀಜ' ಕಾದಂಬರಿಯನ್ನು 'ಪ್ರಜಾವಾಣಿ'ಯಲ್ಲಿ ವಿಮರ್ಶಿಸುವ ಅವಕಾಶ ನನಗೆ ಒದಗಿ ಬಂದಿತ್ತು. ಈ ಪುಸ್ತಕದ ವಿಮರ್ಶೆಯಲ್ಲಿ ನಾನು ಎಲ್ಲಾ ಪೂರ್ವಗ್ರಹಗಳಿಂದಲೂ ದೂರನಿಂತು ವಸ್ತುನಿಷ್ಠವಾಗಿ ಕೃತಿಯ ಮೌಲ್ಯ ಮಾಪನ ಮಾಡುವುದರಲ್ಲಿ ಸಮರ್ಥನಾಗಿದ್ದೇನೆಂದು ನನ್ನ ನಂಬಿಕೆ -ಎಂದರೆ ವಸ್ತುನಿಷ್ಠ ಎಷ್ಟು ಸಾಧುವೋ ಅಷ್ಟರ ಮಟ್ಟಿಗೆ.[೩೮]

ಈ ಮೇಲಿನ ಮಾತುಗಳು ಲೇಖಕರು ಮತ್ತು ಪುಸ್ತಕ ವಿಮರ್ಶಕರ ನಡುವಿನ ತಾತ್ವಿಕ ಗೊಂದಲಗಳನ್ನು ಕುರಿತು ವಿಶ್ಲೇಷಿಸುತ್ತಿವೆ. ಒಂದು ರೀತಿಯಲ್ಲಿ ಲೇಖಕರ ಮತ್ತು ವಿಮರ್ಶಕರ ಇಬ್ಬರ ಮನೋಭಾವಗಳು 'ಪುಸ್ತಕ ವಿಮರ್ಶೆ'ಯ ಸಂದರ್ಭದಲ್ಲಿ ಯಾವ ರೀತಿಯ ಕೆಲಸವನ್ನು ಮಾಡುತ್ತವೆ ಎಂಬುದನ್ನು ತೋರಿಸುತ್ತವೆ. ಈ ಉಲ್ಲೇಖದಲ್ಲಿ ಕೃತಿಕಾರ -ಪುಸ್ತಕ ವಿಮರ್ಶಕರ,ನಡುವಿನ ಕಾರ್ಯಗಳ ಬಗೆಗಿನ ಚರ್ಚೆಯಿದೆ. ಇಲ್ಲಿ ಪುಸ್ತಕ ವಿಮರ್ಶೆ ಬಗೆಗೆ ಲೇಖಕರು ತಳೆಯಬಹುದಾದ ನಿಲುವು ಮತ್ತು

ಪುಸ್ತಕ ವಿಮರ್ಶಕರ ಸಾಮಾಜಿಕ ಹೊಣೆಗಾರಿಕೆ ಮುಂತಾದ ಅಂಶಗಳು ಕಂಡುಬರುತ್ತವೆ. 'ಕೃತಿ ಮೆಚ್ಚಿದರೂ' ಪ್ರಕಟಿಸಿದ ವಿಧಾನ ಮೆಚ್ಚದಿರುವುದು, ಅವುಗಳಿಗೆ ಕಾರಣಗಳನ್ನು ಪುಸ್ತಕ ವಿಮರ್ಶಕರು ಕೊಡುತ್ತ ಪುಸ್ತಕ ವಿಮರ್ಶೆ ಪ್ರಕಟವಾದ ನಂತರ ಪುಸ್ತಕ ವಿಮರ್ಶಕರು ಎದುರಿಸಬೇಕಾದ ಸನ್ನಿವೇಶವನ್ನು ಆತಂಕ ತಲ್ಲಣಗಳನ್ನು ಹೇಳುತ್ತವೆ. ಪುಸ್ತಕ ವಿಮರ್ಶೆ ಲೇಖಕರ ಪರವಾಗಿಲ್ಲದಿದ್ದರೆ ಪುಸ್ತಕ ವಿಮರ್ಶಕರು ಎದುರಿಸಬೇಕಾದ ಸವಾಲುಗಳು ಯಾವ ಬಗೆಯವೆಂಬದುನ್ನು ಕಾಣಬಹುದು. ವಸ್ತುನಿಷ್ಠತೆ ಮತ್ತು ಲೇಖಕ ಇವೆರಡರ ಬಗೆಗಿನ ಸಂಘರ್ಷಾತ್ಮಕ ವಾಗ್ಯುದ್ಧವಿದೆ. ಅದರ ಜೊತೆಗೆ ಪುಸ್ತಕ ವಿಮರ್ಶಕರ ಹೊಣೆಗಾರಿಕೆ ವಿಷಯವು ಇದೆ. 'ನಾನು ಹೇಳಿದ್ದೆ ಕೊನೆಯಮಾತಲ್ಲ' ಎಂಬುದು ಪುಸ್ತಕ ವಿಮರ್ಶೆ ಅಂತಿಮವಲ್ಲ ಅದೊಂದು ಪ್ರತಿಕ್ರಿಯೆ ಎಂಬ ನಿಲುವಿದೆ. ಪುಸ್ತಕ ವಿಮರ್ಶಕರ ಮತ್ತು ಲೇಖಕರ ನಡುವಿನ ಸಂವಾದದ ಜೊತೆಗೆ ಪುಸ್ತಕ ವಿಮರ್ಶೆ ತಂದೊಡ್ಡುವ ವಿಷಮತೆಗಳನ್ನು ಪುಸ್ತಕ ವಿಮರ್ಶಕರು ತಮ್ಮ ವೈಯಕ್ತಿಕ ಸಂಗತಿಯ ಜೊತೆ ವಿವರಿಸುತ್ತಾರೆ. ಇಲ್ಲಿ ಕೃತಿಯ ಜೊತೆ ನಡೆಯುವ ಇತರ ವೈಯಕ್ತಿಕ ಸಾಂಸ್ಕೃತಿಕ ವಾಗ್ವಾದಗಳು ಹೇಗೆ ಪುಸ್ತಕ ವಿಮರ್ಶೆಗೆ ವಸ್ತುವಾಗುತ್ತವೆ ಎಂಬುದು ತಿಳಿಯುತ್ತದೆ. ಕೃತಿಯನ್ನು ನೆಪವಾಗಿ ತೆಗೆದುಕೊಂಡು ಅದರ ಮೂಲಕ ಇನ್ನಿತರ ವಿವರಗಳಿಗೆ ಹೋಗುವುದು ಇವೆಲ್ಲ ಪುಸ್ತಕ ವಿಮರ್ಶೆಯಿಂದಾಗುವ ಪ್ರತಿಕೂಲ ವಾತಾವರಣವನ್ನು ತೋರಿಸುತ್ತದೆ.

ಇಲ್ಲಿ ಕೃತಿಕಾರ - ಪುಸ್ತಕ ವಿಮರ್ಶಕರ ನಡುವಿನ ಕಾರ್ಯಗಳ ಬಗೆಗಿನ ಚರ್ಚೆಯಿದೆ. ಪುಸ್ತಕ ವಿಮರ್ಶೆ ಬಗೆಗೆ ಲೇಖಕರು ತಳೆಯಬಹುದಾದ ನಿಲುವು ಮತ್ತು ಪುಸ್ತಕ ವಿಮರ್ಶಕರ ಸಾಮಾಜಿಕ ಹೊಣೆಗಾರಿಕೆ ಮುಂತಾದ ಅಂಶಗಳು ಕಂಡುಬರುತ್ತವೆ. 'ಕೃತಿ ಮೆಚ್ಚಿದರೂ ಪ್ರಕಟಿಸಿದ ವಿಧಾನ, ಮೆಚ್ಚದಿರುವುದು, ಅವುಗಳಿಗೆ ಕಾರಣಗಳನ್ನು ಪುಸ್ತಕ ವಿಮರ್ಶೆಯ ಪ್ರತಿಕ್ರಿಯೆಯಲ್ಲಿ ಕೊಡುತ್ತ ಪುಸ್ತಕ ವಾಸ್ತವವಾಗಿ ಇಂಥ ತೊಂದರೆಗಳು ಮತ್ತು ಗೊಂದಲಗಳ ನಿವಾರಣೆ 'ಪುಸ್ತಕ ವಿಮರ್ಶೆ'ಯಲ್ಲಿ ತುಂಬಾ ಕಷ್ಟ. ಹೀಗಾಗಿ 'ಪುಸ್ತಕ ವಿಮರ್ಶೆ'ಗೆ ಇದೇ ನಿರ್ದಿಷ್ಟವಾದ ಗಟ್ಟಿಮಾದರಿ ಎಂದು ಕಟ್ಟನ್ನು ನಿರ್ಮಾಣ ಮಾಡಲು ಸಾಧ್ಯವಿಲ್ಲ. ಅದು ಲೇಖಕರ ವಿಮರ್ಶಕರ, ವಿವಿಧ ಮನೋಭಾವಗಳಿಗೆ ತಕ್ಕಂತೆ ವರ್ತಿಸುವ ಕೆಲವೊಮ್ಮೆ ವ್ಯಕ್ತಿರಿಕ್ತವಾಗಿ ನಡೆಯುವ ಸಂದರ್ಭಗಳು ಉಂಟು. ಇಲ್ಲಿನ ಪುಸ್ತಕ ವಿಮರ್ಶಕರಿಗೆ ಕೃತಿಯನ್ನು ತೀರ ವಸ್ತುನಿಷ್ಠವಾಗಿ ಬರೆದಾಗ ಲೇಖಕರ ವೈರವನ್ನು ಕಟ್ಟಿಕೊಳ್ಳಬೇಕು ಎಂಬ ಭಯವು ಇದೆ ಹಾಗೆಯೇ ಪುಸ್ತಕ ವಿಮರ್ಶಕರಾದವರು ತಾವು ಬರೆದದ್ದೇ ಅಂತಿಮ ಎಂದು ಪರಿಭಾವಿಸದೇ ಇರುವ ಸ್ಥಿತಿಯೂ ಇದೆ.

ಕೆಲವೊಮ್ಮೆ ಕೃತಿ ರಚಿತವಾದ ಸಂದರ್ಭದಲ್ಲಿ ಆ ಪುಸ್ತಕದ ಬಗ್ಗೆ ಬಂದ ಒಳ್ಳೆಯ ವಿಮರ್ಶೆಯು ಯಶಸ್ಸನ್ನು ಪಡೆಯುತ್ತದೆ. ಆದರೆ ಕೃತಿ ನೆಲೆನಿಲ್ಲದೆ ಹೋಗಬಹುದು. ನವ್ಯದ ಸಂದರ್ಭದಲ್ಲಿ ಗಿರಿಯವರ 'ಗತಿಸ್ಥಿತಿ' ಪ್ರಕಟವಾಗುವುದಕ್ಕಿಂತ ಮುಂಚೆಯೇ ವಿಮರ್ಶಕರಿಂದ ಅಪಾರವಾದ ಮನ್ನಣೆಯನ್ನು ಪಡೆಯಿತು. ಹಾಗೇ 'ಪುಸ್ತಕ ವಿಮರ್ಶೆ' ಈ ಕೃತಿಯನ್ನು ನವ್ಯದ ಪ್ರಾತಿನಿಧಿಕ ಕೃತಿಯೆಂದೇ ಪರಿಗಣಿಸಿ ಬಿಟ್ಟಿತು. ಆದರೆ ಕೃತಿ ಪ್ರಕಟವಾದಾಗ ಅದು ನಿರೀಕ್ಷಿಸಿದ ಯಶಸ್ಸನ್ನು ಪಡೆಯಲಿಲ್ಲ. 'ಗತಿಸ್ಥಿತಿ'ಯ 'ಪುಸ್ತಕ

ವಿಮರ್ಶೆ'ಯ ಸ್ಥಿತಿಯೇ ಬದಲಾಯಿತು. ಇದು ನವ್ಯದಲ್ಲಿನ ಪುಸ್ತಕ ವಿಮರ್ಶೆಯನ್ನಷ್ಟೇ ಹೇಳದೆ ಪುಸ್ತಕ ವಿಮರ್ಶೆಯಲ್ಲಿನ ಅತಿರೇಕದ ಬಗೆಗಿನ ಮಾದರಿಯನ್ನೂ ಹೇಳುತ್ತಿದೆ. ಆದುದರಿಂದ *ಲೇಖಕ - ವಿಮರ್ಶಕರ ಪರಸ್ಪರ ಸಹಾಯದಿಂದಲೇ ಉತ್ತಮ ವಿಮರ್ಶೆಯಾಗಲೀ ಉತ್ತಮ ಅಭಿರುಚಿಯಾಗಲೀ ಬೆಳೆಯಲು ಸಾಧ್ಯ.*[೩೯]

ಎಂಬ ಜಿ.ಎಸ್. ಶಿವರುದ್ರಪ್ಪನವರ ಮಾತು ಪುಸ್ತಕ ವಿಮರ್ಶೆಯಲ್ಲಿರಬೇಕಾದ ತಾತ್ವಿಕತೆಯನ್ನು ಪುಸ್ತಕ ವಿಮರ್ಶಕರ ಮತ್ತು ಲೇಖಕರ ಸಂಕೀರ್ಣ ಸಂಬಂಧವನ್ನು ಒತ್ತಿ ಹೇಳುತ್ತದೆ.

ಕೊನೆ ಟಿಪ್ಪಣಿಗಳು:

೧. ವಿಮರ್ಶೆಯ ಪೂರ್ವ ಪಶ್ಚಿಮ - ಪು. ೧೫೨-೧೫೩.
೨. ವಿಮರ್ಶೆಯ ವ್ರತ - ರಂ. ಶ್ರೀ. ಮುಗಳಿ, ಪು. ೨೭-೨೮.
೩. ಸಾಹಿತ್ಯ ಸಂಚಯ - ಪು. ೩೯೩.
೪. ವಿಮರ್ಶೆ : ಎಲಿಯೆಟ್ - ಅನು: ನಾಗರಾಜ. ಆರ್. ಪು. ೨೩.
೫. ಮಯೂರ - ಆಗಸ್ಟ್, ೧೯೯೯.
೬. ಶತಮಾನದ ಸಾಹಿತ್ಯ ವಿಮರ್ಶೆ, ಪು. XXX
೭. ದೊಕ್ಕಲು ಮಕ್ಕಳು ಒಂದು ಅಧ್ಯಯನ - ಪುಸ್ತಕ ವಿಮರ್ಶಕರು ಪುರುಷೋತ್ತಮ ಬಿಳಿಮಲೆ - ಪ್ರಜಾವಾಣಿ, ಭಾನುವಾರ, ೨ ಮೇ, ೧೯೯೯.
೮. ಅನ್ವೇಷಣೆ - ಸಂಚಿಕೆ, ೩೬, ೧೯೯೦.
೯. ಪುಸ್ತಕ ಮಾಹಿತಿ, ಸಂಪುಟ ೧, ಸಂಚಿಕೆ ೧೨.
೧೦. ವಿನಾಯಕ ಸಂಚಿಕೆ , ೧೯೩೫.
೧೧. ಪ್ರಜಾವಾಣಿ ಸಾಪ್ತಾಹಿಕ ಪುರವಣಿ - ೧೮-೦೨, ೧೯೮೯.
೧೨. ಸಾಹಿತ್ಯ ಪತ್ರಿಕೆಗಳು ಇತಿಹಾಸ - ವರ್ತಮಾನ.
೧೩. ಸಾಹಿತ್ಯ ಸಂವಾದ ಸಂಚಿಕೆ ೫೪-೫೫, ೨೦೦೦.
೧೪. ಕನ್ನಡ ನುಡಿ, ಎಪ್ರಿಲ್ ೨೦೦೨, ಪು. ೨೪.
೧೫. ಹೊಸತು, ಜನವರಿ ೨೦೦೦, ಪು. ೧೯.
೧೬. ಹೊಸತು - ಆಗಸ್ಟ್ ೨೦೦೦, ಪು. ೪೫.
೧೭. ಪುಸ್ತಕ ಮಾಹಿತಿ - ಮಾರ್ಚ್ ೨೦೦೨, ಪು. ೧೭.
೧೮. ಸಾಹಿತ್ಯ ಸಂವಾದ - ೫೧, ಸೆಪ್ಟಂಬರ್ ೧೯೯೯.
೧೯. ಸಂವಾದ ೩೨-೩೩, ೧೯೯೩.
೨೦. ಸಂಕ್ರಮಣ ೨೬೧, ೧೯೯೪.
೨೧. ಜಾಗೃತಿ - ಮಾರ್ಚ್ - ಎಪ್ರಿಲ್ ೨೦೦೨.
೨೨. ಪ್ರತಿಸಂಸ್ಕೃತಿ - ಪು. ೯೩.
೨೩. ಯುಗಧರ್ಮ ಮತ್ತು ಸಾಹಿತ್ಯದರ್ಶನ, ಪು. ೩೬೮.
೨೪. ವಿಮರ್ಶೆಯ ಪೂರ್ವ ಪಶ್ಚಿಮ, ಪು. ೧೨.
೨೫. ಜಿ.ಎಸ್. ಆಮೂರ, ವಿಮರ್ಶೆಗೆ ಬಂದ ವಿಪತ್ತು.
೨೬. ಓದುಗರು ಮತ್ತು ಓದುವಿಕೆ, ಪು. ೧೫.
೨೭. ಶತಮಾನ ಸಾಹಿತ್ಯ ವಿಮರ್ಶೆ, ಪು xxix
೨೮. ಓದುಗರು ಮತ್ತು ಓದುವಿಕೆ, ಪು. ೧೭.
೨೯. ಅಮೃತ ಮತ್ತು ಗರುಡ, ಪು. ೫೭.
೩೦. ಹೊಸಗನ್ನಡ ಸಾಹಿತ್ಯ - ಪು. ೨೬೮.
೩೧. ವಿಮರ್ಶೆಯ ಪೂರ್ವ ಪಶ್ಚಿಮ - ಪು. ೧೫.
೩೨. A.V.D. Nostrant `Litarary Criticism in American' ಪು. ೭೭.
೩೩. ಪ್ರತಿಸಂಸ್ಕೃತಿ - ಪು. ೬೧.

೩೪. ಆರ್ಕೆ ಮಣಿಪಾಲ - ಅನ್ವೇಷಣೆ ೨೨-೨೩, ಡಿಸೆಂಬರ್ ೮೭.

೩೫. ಪ್ರತಿ ಸಂಸ್ಕೃತಿ - ಪು. ೬೧.

೩೬. ಡಾ. ಟಿ. ಸುಬ್ರಹ್ಮಣ್ಯ 'ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಸ್ತಿತ್ವವಾದ'
ಮೈಸೂರು ವಿವಿಗೆ ಸಲ್ಲಿಸಿದ ಅಪ್ರಕಟಿತ ಪಿಎಚ್.ಡಿ ಪ್ರಬಂಧ.

೩೭. ಲೇಖನ, ವಿಮರ್ಶೆಯ ಸವಾಲು - ಆರ್ಕೆ ಮಣಿಪಾಲ.

೩೮. ಸಾಹಿತ್ಯದ ರೀತಿ ನೀತಿಗಳು : ಒಂದು ಬಹಿರಂಗ ಪತ್ರ, ಅನ್ವೇಷಣೆ ೩,೪ - ೧೯೮೭.

೩೯. ವಿಮರ್ಶೆಯ ಪೂರ್ವ ಪಶ್ಚಿಮ, ಪು. ೧೦೮.

ಅಧ್ಯಾಯ - ೫

ಕೆಲವು ಪ್ರಾತಿನಿಧಿಕ ಪುಸ್ತಕ ವಿಮರ್ಶೆಗಳ ಅಧ್ಯಯನ

ಕೆಲವು ಪ್ರಾತಿನಿಧಿಕ ಪುಸ್ತಕ ವಿಮರ್ಶೆಗಳ ಅಧ್ಯಯನ

೨೦ನೇ ಶತಮಾನದ ಇತಿಹಾಸವನ್ನು ಅವಲೋಕಿಸಿದಾಗ ಪುಸ್ತಕ ವಿಮರ್ಶೆಯು ಸೂಕ್ಷ್ಮವಾಗಿ ಬೆಳೆದು ಬಂದಿರುವುದನ್ನು ಕಾಣಬಹುದು. ಅದು ತನ್ನದೇ ಆದ ಸ್ವರೂಪವನ್ನು ಪಡೆದುಕೊಂಡಿರುವುದು ಖಚಿತವಾದುದಾದರೂ ಪೂರ್ಣ ಪ್ರಮಾಣದಲ್ಲಿ ಚರ್ಚಿತವಾಗಿಲ್ಲವೆಂಬುದು ಎದ್ದು ಕಾಣುವ ಸಂಗತಿಯಾಗಿದೆ. ದೀರ್ಘವಾಗಿ ಇಡೀ ೨೦ನೇ ಶತಮಾನವನ್ನು ಅವಲೋಕಿಸಿದಾಗ ಪುಸ್ತಕ ವಿಮರ್ಶೆಗೆ ಇತ್ತೀಚೆಗೆ ಸ್ಪಷ್ಟರೂಪ ದೊರಕುತ್ತಿದೆ. ಅದು ಹಲವಾರು ಮಿತಿ-ತೊಡರುಗಳನ್ನು ಎದುರಿಸುತ್ತಾ ಮುಂದುವರೆದಿದೆ. ಹೀಗಾಗಿ ಈ ಪ್ರಸ್ತುತ ಅಧ್ಯಾಯದಲ್ಲಿ ಕೆಲವು ಪ್ರಾತಿನಿಧಿಕ ಪುಸ್ತಕ ವಿಮರ್ಶೆಗಳನ್ನಿಟ್ಟುಕೊಂಡು ಪುಸ್ತಕ ವಿಮರ್ಶೆಯ ಸ್ಪಷ್ಟ ನಿಲುವನ್ನು ಗುರುತಿಸಲು ಯತ್ನಿಸಲಾಗಿದೆ.

ಒಂದು ಪತ್ರಿಕೆಯಲ್ಲಿ ಪ್ರಕಟವಾದ ಪುಸ್ತಕ ವಿಮರ್ಶೆಗಳ ವಿಶ್ಲೇಷಣೆ

೫.೧ ಲಂಕೇಶ್ ಪತ್ರಿಕೆ

'ಲಂಕೇಶ್ ಪತ್ರಿಕೆ' ಟ್ಯಾಬ್ಲಾಯಿಡ್ ಸ್ವರೂಪದ ವಾರ ಪತ್ರಿಕೆ. ಇದರಲ್ಲಿ ಪುಸ್ತಕ ವಿಮರ್ಶೆಗಳು ಸುದ್ದಿಗಳು ಎಷ್ಟು ನೇರ ಮತ್ತು ಆಕ್ಷೇಪಣೆಯಿಂದ ಕೂಡಿರುತ್ತವೋ ಅದೇ ಸ್ವರೂಪವನ್ನು ಪುಸ್ತಕ ವಿಮರ್ಶೆಗಳೂ ಪಡೆದಿರುತ್ತವೆ. 'ಲಂಕೇಶ್ ಪತ್ರಿಕೆಯ' ಪುಸ್ತಕ ವಿಮರ್ಶೆಗಳ ವಿಶಿಷ್ಟತೆಯೆಂದರೆ, ಬೇರೆ ಪತ್ರಿಕೆಗಳಲ್ಲಿ ಪುಸ್ತಕ ವಿಮರ್ಶೆಗಳಿಗಾಗಿ ಕೃತಿಗಳನ್ನು ಲೇಖಕರು ಇಲ್ಲವೇ ಪ್ರಕಾಶಕರು ಕಳಿಸಬೇಕು ಆದರೆ 'ಲಂಕೇಶ್ ಪತ್ರಿಕೆ'ಯು ಹಾಗೆ ತರಿಸಿಕೊಳ್ಳದೇ ತಾನೇ ಓದಿ ವಿಮರ್ಶಿಸುತ್ತದೆ. ಇದೇ ಸ್ವರೂಪ 'ಅಂಕಣ' ಪತ್ರಿಕೆಯಲ್ಲೂ ಇತ್ತು. ಆದರೆ 'ಅಂಕಣ' ಎಲ್ಲ ಸಂಚಿಕೆಗಳಲ್ಲೂ ಪುಸ್ತಕ ವಿಮರ್ಶೆಗಳನ್ನು ಪ್ರಕಟಿಸುತ್ತಿರಲಿಲ್ಲ. ಎಂದೂ ಅದು ಖಾಯಂ ಆದ 'ಪುಸ್ತಕ ವಿಮರ್ಶಾ ಅಂಕಣ'ವನ್ನು ನಿರ್ಮಿಸಿಕೊಂಡಿರಲಿಲ್ಲ. ಆದರೆ 'ಲಂಕೇಶ ಪತ್ರಿಕೆ' ಪುಸ್ತಕ ವಿಮರ್ಶೆಗೆ ಖಾಯಂ ಅಂಕಣ ನಿರ್ಮಿಸಿ ಕೊಂಡು ಸುದ್ದಿಯಷ್ಟೇ ಮಹತ್ವ ನಿಡಿತ್ತು.

ಈ ಪತ್ರಿಕೆಯ ಪುಸ್ತಕ ವಿಮರ್ಶೆಗಳ ಮುಖ್ಯ ನಿಲುವುಗಳು

i. ಲೇಖಕರ ಉದ್ದೇಶ ಮತ್ತು ನಿಜವಾದ ದೌರ್ಬಲ್ಯ ಹುಡುಕುವುದು

ಲಂಕೇಶ್ ಪತ್ರಿಕೆಯಲ್ಲಿ ಬರುವ ಪುಸ್ತಕ ವಿಮರ್ಶೆಗಳ ಮುಖ್ಯ ಲಕ್ಷಣವೇ, ಪಿ. ಲಂಕೇಶ್, 'ಮಣ್ಣು ಸೇರಿತು ಬೀಜ' ಮತ್ತು 'ಹಕ್ಕಿ ಮತ್ತು ಅವಳು' ಕೃತಿಗಳ ವಿಮರ್ಶೆಯಲ್ಲಿ ಹೇಳುವಂತೆ 'ಲೇಖಕರ ಉದ್ದೇಶ ಮತ್ತು ನಿಜವಾದ ದೌರ್ಬಲ್ಯ ಗುರುತಿಸುವುದಾಗಿತ್ತು.' ಈ ಲಕ್ಷಣವನ್ನು ಲಂಕೇಶ್ ಪತ್ರಿಕೆಯಲ್ಲಿ ಬಂದ ಬಹುಪಾಲು ಎಲ್ಲ ಪುಸ್ತಕ ವಿಮರ್ಶೆಗಳಿಗೂ ಅನ್ವಯಿಸಿ ಹೇಳಬಹುದು.

ii. ಶೀರ್ಷಿಕೆಗಳ ಮುಖಾಂತರವೇ ಪುಸ್ತಕಗಳ ಅರ್ಥವನ್ನು ನೀಡುವುದು.

ಲಂಕೇಶ್ ಪತ್ರಿಕೆಯಲ್ಲಿ ಬರುತ್ತಿದ್ದ ಪುಸ್ತಕ ವಿಮರ್ಶೆಗಳ ಒಟ್ಟು ಸಾರ ಅವರು ಕೊಡುವ ಶೀರ್ಷಿಕೆಗಳಲ್ಲೇ ಅಡಗಿರುತ್ತಿತ್ತು. ಕೃತಿಯು ಕೊಡುವ ವಿಚಾರವನ್ನು ಶೀರ್ಷಿಕೆಗಳಲ್ಲೇ ಕೇಂದ್ರೀಕರಿಸುತ್ತಿದ್ದರು. ಉದಾಹರಣೆಯಾಗಿ ಕೆಲವನ್ನು ಹೀಗೆ ನೋಡಬಹುದು.

೧) ಶಾಂತಿನಾಥ ದೇಸಾಯಿಯವರ ಕೊನೆಯ ಕಾದಂಬರಿ : ಮಾನವಶಾಸ್ತ್ರೀಯ ವಿವರಣೆಗಳ ಅಬ್ಬರ (ಓಂಣಮೋ-ಕೃತಿ)

೨) ಸ್ಪಷ್ಟತೆ ಇಲ್ಲದೆ ವೈಚಾರಿಕ ಗೊಂದಲಗಳು (ಧರ್ಮ ಮತ್ತು ವೈಚಾರಿಕತೆ - ಬಿ. ವಿ. ವೀರಭದ್ರಪ್ಪ)

೩) ಎಕ್ಕುಂಡಿ ಕಾವ್ಯದ ಮೂಲ ದೌರ್ಬಲ್ಯಗಳ ಕನ್ನಡಿ (ಗೋದಿಯ ತೆನೆಗಳು - ಸು. ರಂ. ಎಕ್ಕುಂಡಿ)

೪) ವಿಮರ್ಶನ ಚಾತುರ್ಯ, ಗಣ್ಯತೆಯ ಪ್ರದರ್ಶನ (ನವ್ಯಲೋಕ - ಅನಂತಮೂರ್ತಿ)

೫) ಹಾಲು ಸಕ್ಕರೆ ಬೆರೆತ ಹೊಸ ರೀತಿಯ ವಿಷ (ಗೀತಭಾರತಿ - ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ)

೬) ಬರಡು ಮನಸ್ಸಿನ ತಡೆರಹಿತ ಅಶ್ಲೀಲತೆ (ಸಾರ್ಥ - ಎಸ್.ಎಲ್. ಭೈರಪ್ಪ)

೭) ನೆನಪಿನ ಗಣಿಯಿಂದ ತೆಗೆದದ್ದು ಏನು? (ನೆನಪಿನ ಗಣಿಯಿಂದ - ಗೋಪಾಲಕೃಷ್ಣ ಅಡಿಗ)

೮) ಕನ್ನಡ ವಿಶ್ವವಿದ್ಯಾಲಯದಲ್ಲಿರುವ ಬಾಲಿಶ ಅಧ್ಯಯನಗಳು. (ಶೋಧನ - ಎಸ್. ಎಸ್. ಅಂಗಡಿ)

೯) ಅಪಕಲ್ಪನೆಯ ಸ್ತ್ರೀವಾದಿ ಭಾಷಣಗಳು (ಸ್ತ್ರೀವಾದ ಮತ್ತು ಭಾರತೀಯತೆ, ಧರ್ಮ - ಶ್ರೀಧರಣಿ ಮಾಲಗತ್ತಿ)

ಈ ಮೇಲಿನ ಎಲ್ಲ ಶೀರ್ಷಿಕೆಗಳನ್ನು ಗಮನಿಸಿದರೆ ಇವುಗಳು ನೇರವಾದ ಟೀಕೆಗಳಿಗೆ ಗುರಿಯಾದುದರ ರೂಪಗಳಾಗಿವೆ, ತುಂಬಾ ನೇತ್ಯಾತ್ಮಕವಾದ ಹೇಳಿಕೆಗಳಾಗಿವೆ ಎಂದು ತೋರುತ್ತದೆ. ಆದರೆ ಈ ಶೀರ್ಷಿಕೆಗಳಡಿಯಲ್ಲಿ ಇರುವ ಪುಸ್ತಕ ವಿಮರ್ಶೆಗಳ ಸತ್ವವು ಈ ಶೀರ್ಷಿಕೆಯ ಧೋರಣೆಯನ್ನು ಸ್ಪಷ್ಟಪಡಿಸುತ್ತ ಹೋಗುತ್ತದೆ. ಶೀರ್ಷಿಕೆಗಳೇ ಪುಸ್ತಕ ವಿಮರ್ಶೆಗಳು ತಳೆಯುವ ದೃಷ್ಟಿಯನ್ನು ತಿಳಿಸುತ್ತವೆ. ಅದರ ಜೊತೆಗೆ ಈ ಶೀರ್ಷಿಕೆಗಳಲ್ಲಿ ಕೃತಿಗಳ ಬಗೆಗೆ ಮೌಲ್ಯ ವಿವೇಚನೆಯ ದೃಷ್ಟಿಯಿರುತ್ತದೆ. ಇಂಥವುಗಳಿಂದ ಸಮರ್ಥವಾದ ಕೃತಿಯನ್ನು ಆರಿಸುವ ಯತ್ನವಿದೆ. ಅದಕ್ಕೆ ತೀರ ನಿಷ್ಠುರವಾದ ನಿಲುವುಗಳಿಂದಾದರೂ ಒಳ್ಳೆಯ ಕೃತಿಯನ್ನು ಹುಡುಕಿ ಶ್ಲಾಘಿಸಬೇಕು ಎಂಬ ದೃಷ್ಟಿಯನ್ನು ಕಾಣಬಹುದು. ಈ ಶೀರ್ಷಿಕೆಗಳನ್ನು ಓದಿದ ಕೂಡಲೇ ಕೃತಿಯ ಆಂತರ್ಯದ ವಿವರವು, ಪತ್ರಿಕೆಯ ಆಶಯ, ಧೋರಣೆಗಳು ಎದ್ದು ಕಾಣುತ್ತವೆ.

iii ಲೇಖಕರ ಸೃಜನಶೀಲತೆಯ ವಿಶ್ಲೇಷಣೆಯ ಮೂಲಕ ಪುಸ್ತಕ ವಿಮರ್ಶೆ

ಲಂಕೇಶ್ ಪತ್ರಿಕೆಯ ಪುಸ್ತಕ ವಿಮರ್ಶಕರು ತಮ್ಮ ಪುಸ್ತಕ ವಿಮರ್ಶೆಯಲ್ಲಿ ಸೃಜನಶೀಲತೆ ಪ್ರಶ್ನೆಯನ್ನು ಎತ್ತುತ್ತಾರೆ. ಅದು ಪ್ರತಿಭೆಯ ಗೈರುಹಾಜರಿಯಾದ ಸಂದರ್ಭದಲ್ಲಿ, ಕೃತಿಯಲ್ಲಿ ಕೊರತೆಗಳು ಕಂಡು ಬಂದಾಗ ಇಂತಹ ನಿಲುವುಗಳನ್ನು ತೋರುತ್ತಾರೆ. ಉದಾ:

೧. *'ಆಂತರಾಳ' ಕಾದಂಬರಿಯ ಹೊತ್ತಿಗಾಗಲೇ ಕೊಂಚ ಇಳಿಮುಖವಾಗಿದ್ದ ತಮ್ಮ ಸೃಜನಶೀಲತೆಯನ್ನು ಮರಳಿ ಪಡೆಯಲು ಈ ಧಾರ್ಮಿಕ ಜಗತ್ತಿನ ಶೋಧನೆ ನೆರವಾಗಬಹುದು ಎಂಬ ನಿರೀಕ್ಷೆ ಕೂಡ ದೇಸಾಯಿಯರಲ್ಲಿತ್ತೇನೋ. (ಒಂಣಮೋ - ಅಕ್ಟೋಬರ್ ೦೭. ೧೯೯೮)*

೨. *ಇವೆರಡೂ ಪುಸ್ತಕಗಳು ಭಿನ್ನ ಹಿನ್ನೆಲೆಯ ಇಬ್ಬರು ಬರೆದರೂ ಕೆಲವು ವಿಷಯಗಳಲ್ಲಿ ಕುತೂಹಲಕರವಾಗಿವೆ. ಬರೆಯುವ ಭಾಷೆಯಲ್ಲಿಯೇ ಮಗ್ನವಾಗಿ ಹೋಗುವವರೊಬ್ಬರು, ಬರವಣಿಗೆಯ ಲಹರಿಯನ್ನರಿಯದ ಇನ್ನೊಬ್ಬರು ಓದುಗರಲ್ಲಿ 'ಇದೇ ನಿಜವಾದ ಸಾಹಿತ್ಯವಿರಬಹುದು' ಎಂಬ ಭ್ರಮೆ ಹುಟ್ಟಿಸುವುದರಲ್ಲಿ ಇಲ್ಲಿ ಯಶಸ್ವಿಯಾಗುತ್ತಾರೆ. (ಮಣ್ಣು ಸೇರಿತು ಬೀಜ, ಹಕ್ಕಿ ಮತ್ತು ಅವಳು, - ೧೭.೧೨.೧೯೯೭)*

೩. *ಅಡಿಗರನ್ನು ಓದಿದ ಒಬ್ಬರಿಗೆ ಹೀಗೆ ಬರೆಯಲು ಕಷ್ಟವಾಗಲಾರದು. (ಪವಾಡ - ೦೭-೦೪-೯೯)*

೪. *ಮೋಹನ್ ಅವರ ಕತೆಗಳು ಉತ್ಪ್ರೇಕ್ಷೆಯಿಂದಲೂ ಬಸವಳಿದಿವೆ. ಇದರಿಂದಾಗಿ ಕೊಂಚ ಮಾನವೀಯ ಆಸಕ್ತಿ ತೋರುವ ಅವರ ಕೆಲವು ಕಥಾಭಾಗಗಳು ಕೂಡ ಮಸುಕಾಗುತ್ತವೆ. (ಸಂಕಟಪುರದ ನಾಟಕ ಪ್ರಸಂಗ ೨೯-೧೦-೧೯೯೯)*

೫. *ಲಕ್ಕಪ್ಪಗೌಡರು ಗಂಭೀರವಾಗಿ ಬರೆಯುವುದನ್ನು ಕಲಿತರೆ ಒಳ್ಳೆಯದು (ಅನ್ವಾರ್ಥಕೋಶ - ೦೭-೦೪-೯೯)*

ಈ ಮೇಲಿನ ಉಲ್ಲೇಖಗಳು ನೇರವಾಗಿ ಲೇಖಕರ ಸೃಜನಶೀಲತೆಯನ್ನು ಪ್ರಶ್ನಿಸುವಂಥವುಗಳು. ಸೃಜನಶೀಲತೆಯ ವಿಚಾರದಲ್ಲಿ ಲೇಖಕರು ತಳೆಯುವ ಧೋರಣೆಗಳು ಕೃತಿಯನ್ನು, ಬರವಣಿಗೆಯನ್ನು ನಿರ್ಧರಿಸುತ್ತವೆ. ಇಲ್ಲಿ ಲೇಖಕರ ಸೃಜನಶೀಲತೆ ಬತ್ತುತ್ತಿರುವ ಬಗ್ಗೆ, ಭ್ರಮೆ ಹುಟ್ಟಿಸುತ್ತಿರುವುದರ ಬಗೆಗೆ, ಲೇಖಕರ ಪ್ರತಿಭೆಯನ್ನೆ ಇನ್ನೊಬ್ಬ ಖ್ಯಾತ ಲೇಖಕರ ಸೃಜನಶೀಲತೆಗೆ ಅಂಟಿಸುವುದು, ಲೇಖಕರ

ಸೃಜನಶೀಲತೆ ಬೇರೆಯವರ ಅನುಕರಣೆಯಿಂದ ಕ್ರಿಯಾಶೀಲತೆ ಕಳೆದುಕೊಳ್ಳುತ್ತಿರುವ ಬಗೆಗೆ, ಸೃಜನಶೀಲತೆಯು ಸರಳವಾಗುತ್ತಿದೆ. ಎಂದು ಗುರುತಿಸುವುದರ ಮೂಲಕ ಕೃತಿ ಸರಳವಾಗುವುದರ ರೀತಿಯನ್ನು ಹೇಳುವುದು, ಈ ಆಕ್ಷೇಪಣೆಗಳು ಲೇಖಕರ ಸೃಜನಶೀಲತೆಗೆ ಸಂಬಂಧ ಪಟ್ಟವುಗಳಾದರೂ, ಅವುಗಳ ಮುಖೇನ ಕೃತಿಯು ಸಾಧಿಸುವ ಯಶಸ್ಸಿಗೆ ತಡೆಯೊಡ್ಡುವ ಅಪಾಯವನ್ನು ಕುರಿತು ವಿಶ್ಲೇಷಿಸುತ್ತಾರೆ.

iv. ಈ ಪತ್ರಿಕೆಯ ಕೆಲವು ಪುಸ್ತಕ ವಿಮರ್ಶಕರ ವಿಮರ್ಶಾ ನಿಲುವುಗಳು

ಲಂಕೇಶ ಪತ್ರಿಕೆಯಲ್ಲಿ ಹಲವು ಸ್ತರದ ಪುಸ್ತಕ ವಿಮರ್ಶಕರು ಪುಸ್ತಕಗಳನ್ನು ವಿಮರ್ಶಿಸಿದ್ದರು ಅವುಗಳು ಆಂತರ್ಯದಲ್ಲಿ ಒಂದೇ ಧೋರಣೆಗೆ ಬದ್ಧವಾಗಿರುವುದನ್ನು ಗುರುತಿಸಬಹುದು. ಆದರೆ ಪುಸ್ತಕ ವಿಮರ್ಶೆಗೆ ತಾವು ಕೃತಿಗಳನ್ನು ಆಯ್ಕೆ ಮಾಡಿಕೊಳ್ಳುವಲ್ಲಿ ಮಾತ್ರ ಸ್ವ ಆಲೋಚನೆಯ ವಿವರಗಳು ಕಾರಣವಾಗಿವೆ.

(ಅ) ಪಿ. ಲಂಕೇಶ

ಪಿ. ಲಂಕೇಶರವರ ಪುಸ್ತಕ ವಿಮರ್ಶಾ ನಿಲುವುಗಳನ್ನು ಹೀಗೆ ಗುರುತಿಸಬಹುದು.

ಕೃತಿಯ ಕೊರತೆಗಳನ್ನು ಹೇಳುವುದು, ಅದಕ್ಕೆ ಕಾರಣಗಳನ್ನು ಹುಡುಕಿ ಅದರ ವಿಶ್ಲೇಷಣೆ ಮಾಡುವುದು. ಕೃತಿಯ ಗೊಂದಲಗಳನ್ನು ನಿವಾರಿಸಲು ತಮ್ಮ ಸಮರ್ಥನೆ ನೀಡುವುದು. ಲೇಖಕರುಗಳ ಅಪಕ್ವ ನಿಲುವುಗಳು, ಆಲೋಚನೆ, ತಿಳಿವಳಿಕೆಗಳ ಬಗೆಗೆ ಗುಮಾನಿ, ಕೃತಿ ಒಳಗೊಂಡ ವಿವರಗಳ ಸಂಕ್ಷಿಪ್ತೀಕರಣ. ಕೃತಿ ಬಿಟ್ಟುಕೊಡುವ ಒಳನೋಟಗಳನ್ನು ಶೋಧಿಸುವ ಯತ್ನ, ಹಲವು ಮುಖ್ಯ ಲೇಖಕರ ಜೊತೆಯಲ್ಲಿ ಚರ್ಚಿಸುವುದು, ವೈಯಕ್ತಿಕ ವಿವರಗಳನ್ನು ಹುಡುಕುವುದು ಇಂಗ್ಲೀಷ್ ಪದಗಳನ್ನು ಕನ್ನಡದಂತೆ ಸರಾಗವಾಗಿ ಬಳಸುವುದು.

ಕೆಲವೊಮ್ಮೆ ನೇರವಾಗಿ ಕೃತಿಯ ಲೇಖಕರು ಕೃತಿ ಬಗೆಗೆ ಹೇಳಿದ ಮಾತುಗಳ ಉಲ್ಲೇಖದೊಂದಿಗೆ ಅದೇ ಸ್ವರೂಪದ ಇನ್ನೊಬ್ಬರ ಕೃತಿಯ ಪ್ರಾಸಂಗಿಕ ಯಶಸ್ಸು, ಅನಂತರ ಅದು ಹಳಸಲು ಆದದ್ದಕ್ಕೆ ವಿವರಣಗಳನ್ನು ನೀಡಿ ಪ್ರಸ್ತುತ ಕೃತಿಯ ಅಪಯಶಸ್ಸು ಕುರಿತು ಹೇಳುವುದು. ಅವರು ತಮ್ಮ ಸಮರ್ಥನೆಗಾಗಿ ಆದಷ್ಟು ಮೂಲಕೃತಿಯ ವಿವರಗಳನ್ನು ಒರೆಹಚ್ಚುವುದು, ಎರಡನ ಹಂತದ ಮಾಹಿತಿಯನ್ನು ಅಲ್ಲಗಳೆಯುವುದು ಒಂದಾದರೆ, ಇನ್ನೊಂದು ಲಂಕೇಶರು ತಾವು ಮಾಡಿದ ಪುಸ್ತಕ ವಿಮರ್ಶೆಯ ಅಂತ್ಯದಲ್ಲಿ ಪ್ರಸ್ತುತ ಕೃತಿಯಲ್ಲಿ ಚರ್ಚಿಸಬಹುದಾದ ಭಾಗವನ್ನು ಯಥಾವತ್ತಾಗಿ ಹೇಳಿ ಅದಕ್ಕೆ ಪ್ರತಿಕ್ರಿಯೆ, ವಿಮರ್ಶೆಗಳು ಓದುಗರಲ್ಲಿ ಹುಟ್ಟುವಂತೆ ಮಾಡುವುದು.

ಇನ್ನು ಸ್ಪಷ್ಟವಾಗಿ ಅವರ ಪುಸ್ತಕ ವಿಮರ್ಶೆಯ ಲಕ್ಷಣವನ್ನು ಒಂದು ಪುಸ್ತಕ ವಿಮರ್ಶೆಯನ್ನಿಟ್ಟು ಕೊಂಡು ಚರ್ಚಿಸಬಹುದು.

ಅವರು ಎಸ್. ಎಲ್. ಭೈರಪ್ಪನವರ 'ಸಾರ್ಥ' ಕಾದಂಬರಿಗೆ ಬರೆದ ಪುಸ್ತಕ ವಿಮರ್ಶೆ ಅತ್ಯುತ್ತಮ ಆದರ್ಶ ಪುಸ್ತಕ ವಿಮರ್ಶೆಯಾಗಿದೆ (ಸೆಪ್ಟಂಬರ್ ೯, ೧೯೯೮, ಲಂಕೇಶ್ ಪತ್ರಿಕೆ). ಈ ಪುಸ್ತಕ ವಿಮರ್ಶೆಯು ಮೇಲಿನ ಎಲ್ಲ ಲಕ್ಷಣಗಳನ್ನು ಒಳಗೊಂಡಿದೆ. ಇವರು ಬಳಸಿರುವ ಕ್ರಿಯೆ ವಿಶೇಷವಾಗಿ ಆಕ್ಷೇಪಣೆಗಳ ಮೂಲಕ ಕೃತಿಯ ವಿವರಗಳಿಗೆ ಪ್ರವೇಶಿಸಿದ್ದಾರೆ. ಆ ಮುಖೇನ ಕೃತಿಯ ಸೋಲು-ಗೆಲುವುಗಳನ್ನು ಹುಡುಕಿರುವುದನ್ನು ಕಾಣಬಹುದು.

ಈ ಪುಸ್ತಕ ವಿಮರ್ಶೆಯಲ್ಲಿ ಕೆಲವು ಮುಖ್ಯ ಅಂಶಗಳನ್ನು ಹೀಗೆ ಗುರುತಿಸಬಹುದು. ಕೃತಿಯ ವಿವರಗಳನ್ನು ಹೇಳುವುದಕ್ಕಿಂತ ಮುಂಚೆ ಲೇಖಕರೇ ಸೂಚಿಸಿರುವಂಥ ಕೃತಿಯ ಬಂಧವನ್ನಿಟ್ಟುಕೊಂಡು ಚರ್ಚಿಸುತ್ತಾರೆ. ಲೇಖಕರು ಆರೋಪಿಸುವ ಆದರ್ಶ ಕೃತಿಯ ನೆಲೆ, ಅದು ಕೃತಿಯಲ್ಲಿ ಬಿಂಬಿತವಾಗದೇ ಇರುವ ಲೇಖಕರ ಗೊಂದಲವನ್ನು ಸ್ಪಷ್ಟಪಡಿಸುತ್ತಾರೆ. ಕೃತಿಯ ವಿವರಗಳನ್ನು ಸ್ಪಷ್ಟಮಾಡಿಕೊಂಡು ಅದು ಕೃತಿ ಪ್ರಕಾರದಲ್ಲೇ 'ಬಗೆಯುವ ಅವಮಾನ' ಎಂಬ ಪ್ರಕಾರದ ಚರ್ಚೆಗೆ ತೊಡಗುತ್ತಾರೆ. ಅಂದರೆ ಲೇಖಕರ ನಿರ್ಧಾರಿತ ನಿಲುವುಗಳು ಪ್ರಕಾರದ ನಿರೂಪಣೆಯಲ್ಲಿ ಪಕ್ಷವಾದಿಯಾಗುವುದನ್ನು ಗುರುತಿಸುತ್ತಾರೆ. ಇದರಲ್ಲಿಯೇ ಪುಸ್ತಕ ವಿಮರ್ಶೆಗೆ ಲಂಕೇಶ್ ಅವರು ಒಂದು ಚೌಕಟ್ಟನ್ನು ಹಾಕಿಕೊಂಡಿರುವುದನ್ನು ಗಮನಿಸಬಹುದು. ಕತೆಯ ಬಗೆಗೆ ನಾಲ್ಕು ಮಾತು ಹೇಳಿ ಒಂದೆರಡು ವಿವರಗಳಿಗೆ ಹೋಗಬಹುದು ಎಂಬ ಈ ನಿಲುವು ವಿವರಗಳ ಮುಖೇನ ಪುಸ್ತಕ ವಿಮರ್ಶಕರ ನಿಲುವನ್ನು ಸ್ಪಷ್ಟಪಡಿಸುವುದಾಗಿದೆ. ಕೃತಿಯ ಮೂಲಕ ಹಲವು ವಿವರಗಳಿಗೆ, ವಿಚಾರಗಳಿಗೆ ಚಾಲನೆ ನೀಡಿರುವುದನ್ನು ಗಮನಿಸಬಹುದು.

ಕೃತಿಯ ಒಟ್ಟು ವಿವರವಾಗಿ ಕೊಡುವ ಅರ್ಥವನ್ನು ಇಲ್ಲಿ ಗುರುತಿಸುತ್ತಾರೆ. ಲೇಖಕರ ಏಕಪಕ್ಷೀಯವಾದಂತಹ ತೀರ್ಮಾನಗಳು ಹೇಗೆ ಕೃತಿಯಲ್ಲಿ ಮನ್ನಣೆಪಡೆದಿವೆ ಎಂಬುದನ್ನು ಗುರುತಿಸುತ್ತಾರೆ. ಲೇಖಕರು ಕೃತಿಯ ವಸ್ತುವಿನ ಪರವಾಗಿ ನಿಲ್ಲದೆ ಒಂದು ಧರ್ಮದ ಪರವಾಗಿಯೆ ವಾದಿಸುವುದನ್ನು ಉದಾಹರಣೆ ಸಮೇತ ಎತ್ತಿ ತೋರಿಸುತ್ತಾರೆ. ಅವುಗಳಿಗೆ ಪ್ರತಿಕ್ರಿಯೆಯನ್ನು ಹೀಗೆ ಕೊಡುತ್ತಾರೆ. 'ವೈದಿಕ ತುತ್ತೂರಿ ಊದುತ್ತಾ', 'ಏಕಂ ಸತ್ ವಿಪ್ರಃ ಬಹುಧಾ ವದಂತಿ', 'ಪರಧರ್ಮದ ಪಂಡಿತರನ್ನು ವಾದಕ್ಕೆಳೆದು ಹಿಂದೂ ಧರ್ಮದ ಪರವಾಗಿ ವಾದಿಸಿ ಗೆಲ್ಲುವುದು, ಬೌದ್ಧ ಮುಸ್ಲಿಂ ಕೆಡುಕನ್ನು ಕಂಡು ವೈದಿಕ ಧರ್ಮದ ಶ್ರೇಷ್ಠತೆಯ ಬಗ್ಗೆ ತಡೆರಹಿತ ಬೊಗಳೆ ಬಿಡುವುದನ್ನು ಮಂಡಿಸುವ ಈ ಕಾದಂಬರಿ, 'ಈ ದೇಶದ ಜನರೊಂದಿಗೆ ಯಾವ ಮಟ್ಟದಲ್ಲೂ ಸಂಬಂಧವಿಲ್ಲದ ಜಡ ವೈದಿಕರು ತಮ್ಮ ಧರ್ಮದ ಶ್ರೇಷ್ಠತೆಯನ್ನು ತೋರಲು ಎದುರಾಳಿಯನ್ನು ಕುತರ್ಕದಲ್ಲಿ, ವಾದದಲ್ಲಿ ಸೋಲಿಸಲೆತ್ನಿಸುವುದು, 'ವೈದಿಕ ಕರ್ಮಕಾಂಡದ ಬಗ್ಗೆ ಹುಚ್ಚು ಹಿಡಿದ ಗೊಂಬೆಗಳಂತೆ ವರ್ಣಿಸುತ್ತಾ ಬದುಕಿನ ಕ್ರಿಯೆಯನ್ನು ಮರೆತಿರುವುದು,' 'ಅಳಿದುಳಿದ ಮೌಲ್ಯವೆಂದೋ, ಆದರ್ಶವೆಂದೋ ಯಾಂತ್ರಿಕಗೊಂಡರೂ ಬದುಕಿನ ಒತ್ತಡ ಮತ್ತು ಅಂತರಂಗದ ದ್ವಂದ್ವಗಳಿಂದ ಜೀವ ಪಡೆದ ಭ್ರಮೆ ಹುಟ್ಟಿಸುತ್ತವೆ', 'ವೈದಿಕರು ತಮ್ಮ ಭಕ್ಷಿಣೆಯ ಕಾರ್ಯಕ್ರಮದಲ್ಲಿ ನಾಲಂದ ವಿಶ್ವವಿದ್ಯಾಲಯವನ್ನು ಕೂಡ ಭಕ್ಷಿಸಿದ್ದು', 'ಜಾತಿ ಪದ್ಧತಿಯನ್ನು ರಕ್ಷಿಸುವ ಉಪಾಯವಾಗಿ ಮಂತ್ರಗಳನ್ನು ಪ್ರಯೋಗಿಸುವುದು,' 'ಆರೆಸಸ್ಸ್‌ಗಳ ನೀಚತನವನ್ನು ತೋರುವ ಕೃತಿ'

ಈ ಮೇಲಿನ ವಾಕ್ಯಗಳ ಗೊಂಚಲುಗಳನ್ನು ಗಮನಿಸಿದರೆ ಅವು ಹೆಚ್ಚಾಗಿ ವೈದಿಕ ಧರ್ಮವನ್ನು ಕುರಿತವುಗಳಾಗಿವೆ. ಅಲ್ಲದೆ ಇದೇ ಧರ್ಮದ ಇತರ ಇಬ್ಬರು ಲೇಖಕರನ್ನು ಅವರ ಕೃತಿಗಳನ್ನೆತ್ತಿಕೊಂಡು ಲೇಖಕರ ಮನೋಧರ್ಮಗಳು ಹೇಗೆ ಧರ್ಮದ ಪರವಾಗಿ ಕೆಲಸ ಮಾಡುತ್ತವೆ ಎಂಬುದನ್ನು ಹೇಳುತ್ತಾರೆ.

ಕೃತಿಯ ನಿರೂಪಣೆಯಲ್ಲಿ ಲೇಖಕರು ಅನುಸರಿಸಿರುವ ತಂತ್ರವನ್ನು ಕುರಿತು ಅವರು ಹೀಗೆ ಹೇಳುತ್ತಾರೆ. 'ಪಟ್ಟಿ ದೊರೆಯುತ್ತದೆ', 'ಯಾವ ಪಾತ್ರದಲ್ಲೂ ಜೀವ ಇಲ್ಲದಿರುವುದು, ಯಾವ ದೃಶ್ಯವೂ ಸ್ಪಷ್ಟವಾಗಿ ಮೂಡದಿರುವುದು, 'ನಿಜ ಅನ್ನಿಸುವುದಿಲ್ಲ', 'ರಿಲೀಸ್ ಆಗುವುದಿಲ್ಲ, 'ಇದನ್ನು ಓದಿದವರಿಗೆ obscence' ಮುಂತಾದ ಪದಪಂಕ್ತಿಗಳು ಕೃತಿ ನಿರೂಪಣೆಯನ್ನು ಪ್ರಶ್ನೆ ಮಾಡುತ್ತವೆ. ಅಲ್ಲದೆ, ಲೇಖಕರಲ್ಲಿನ ಅಚಾರಿತ್ರಿಕ ದೃಷ್ಟಿಯನ್ನು ಹೀಗೆ ಗುರುತಿಸುತ್ತಾರೆ. 'ಹದಿನೆಂಟನೆಯ ಶತಮಾನದಲ್ಲಿ ನಡೆದದ್ದು ಎಂದು ಭೈರಪ್ಪ ಹೇಳುವ ಈ ಕತೆಯಲ್ಲಿ ಶಂಕರಚಾರ್ಯ ಹೇಗೆ ಬರುತ್ತಾನೆಂದು ಗೊತ್ತಿಲ್ಲ,' ಎಂಬ ತರ್ಕವನ್ನಿಡುತ್ತಾರೆ. ಅದರ ಮೂಲಕ ಲೇಖಕರ ಚಾರಿತ್ರಿಕ ದೃಷ್ಟಿಯನ್ನು ಟೀಕಿಸುತ್ತಾರೆ.

ಇಲ್ಲಿ ಲಂಕೇಶ್ ಧಾರ್ಮಿಕತೆಯ ಕೃತಿಯನ್ನು ಆರಿಸಿಕೊಂಡಿದ್ದರೂ, ಈ ಕೃತಿಯ ಜೊತೆಗೆ ಸಮಕಾಲೀನ ಸಮಸ್ಯೆಯ ಬಗೆಗಿನ ಚರ್ಚೆಯನ್ನು ಮಾಡುವುದನ್ನು ಕಾಣಬಹುದು. ಅವರ ಈ ಪುಸ್ತಕ ವಿಮರ್ಶೆಯ ವಿಶಿಷ್ಟತೆಯೆಂದರೆ, ಅದು ಅಂತ್ಯದಲ್ಲಿ ಕೃತಿಯ ಕೆಲವು ಉಲ್ಲೇಖಗಳನ್ನು ಯಥಾವತ್ ಉಲ್ಲೇಖಿಸಿ ಅದನ್ನು ಓದುಗರೇ ವಿಶ್ಲೇಷಿಸಿ ಎಂಬ ಆಶಯದಲ್ಲಿ ಮುಕ್ತಾಯವಾಗುತ್ತದೆ. ಇದು ಓದುಗರನ್ನು ಪುಸ್ತಕ ವಿಮರ್ಶೆಗೆ ಒಳಗುಮಾಡಿಕೊಳ್ಳುವ ಕ್ರಮ.

(ಆ) ಗಂಗಾಧರ ಕುಷ್ಟಗಿ

'ಲಂಕೇಶ್ ಪತ್ರಿಕೆ'ಯಲ್ಲಿ ಪುಸ್ತಕ ವಿಮರ್ಶೆ ಬರೆಯುವ ಗಂಗಾಧರ ಕುಷ್ಟಗಿಯವರ ಬರಹ ಒಂದು ರೀತಿಯಲ್ಲಿ ಲಂಕೇಶ್ ಪತ್ರಿಕೆಯ ಧೋರಣೆಗೆ ಬದ್ಧವಾಗಿದೆ. ಇವರ ಪುಸ್ತಕ ವಿಮರ್ಶೆಯಲ್ಲಿ ಕೃತಿಯ ಒಳಹೊಕ್ಕೂ ವಿಶ್ಲೇಷಿಸುವುದು, ಕೃತಿಯ ಕೊರತೆಗಳನ್ನು ಎತ್ತಿ ತೋರಿಸುವುದು, ಕೃತಿಯ ಲೇಖಕರ ವಾದಕ್ಕೆ ಪ್ರತಿವಾದಗಳನ್ನು ನಿರ್ಮಿಸುವುದು, ಕೃತಿಯೊಳಗೆ ಲೇಖಕರು ಮಾಡಿರುವ ತಪ್ಪು ನಿರ್ಧಾರಗಳನ್ನು ಆಯ್ದು ಉಲ್ಲೇಖಿಸಿ ಅವುಗಳಿಗೆ ಸಮರ್ಥವಾದ ವಿಶ್ಲೇಷಣೆ ನೀಡಿ, ಲೇಖಕರ ತಪ್ಪು ಚಿಂತನೆಯನ್ನು ಅಲ್ಲಗಳೆಯವುದು, ಪುಸ್ತಕ ವಿಮರ್ಶೆಯನ್ನು ವಾದ, ತರ್ಕ, ವಿಶ್ಲೇಷಣೆಗೆ ಒಳಪಡಿಸುವುದು.

ಎಸ್. ಎಸ್. ಅಂಗಡಿಯವ ಸಂಶೋಧನ ಕೃತಿ 'ಶೋಧನ' ಕೃತಿಯಲ್ಲಿ ಲೇಖಕರ ತಪ್ಪು ಸಂಶೋಧನೆಯನ್ನು ಅಲ್ಲಗೆಳೆಯುತ್ತಾ ಹೀಗೆ ಸ್ಪಷ್ಟಪಡಿಸುತ್ತಾರೆ. *'ಗುರ್ಜ', ಶಬ್ದವನ್ನು 'ಕೊರವ' ಶಬ್ದದ ಮೂಲಕ ಶೋಧಿಸಬೇಕೆ ವಿನಃ 'ಗುರುಸಿದ್ಧಲಿಂಗ' ಎನ್ನುವ ಯತಿಯ ಹೆಸರಿನ ಮೂಲದಲ್ಲಿ ಅಲ್ಲ. ಕನ್ನಡದಲ್ಲಿ 'ಕ' ಕಾರ ಮಾತಿನ ಬಳಕೆಯಲ್ಲಿ 'ಗ' ಕಾರವಾಗಿ ಪರಿವರ್ತನೆ ಆಗುತ್ತದೆ. ಉದಾ: ಆಕಾಶ, ಆಗಸವಾಗುತ್ತದೆ. 'ಕೊರವ' ಗೊರಸವಾಗುತ್ತದೆ. ಗೊರಸನ ಹಾಡು 'ಗುರ್ಜ' ಹಾಡು ಎಂದಾಗಿರಬೇಕೆನ್ನುವ ತೀರ್ಮಾನಕ್ಕೆ ಬರುವುದರಲ್ಲಿ ಈ ಮೇಲಿನ ಐತಿಹಾಸಿಕ ಸಂಗತಿ ಮತ್ತು ಭಾಷಾ ಸಂಧಿ, ಸಮಾಸಗಳು ಹೆಚ್ಚಿನ ತಾರ್ಕಿಕ ನೆಲೆಗಟ್ಟನ್ನು ಒದಗಿಸುತ್ತವೆ.*

ಮಸೂಟ ಎಂದರೇನು? ಎನ್ನುವ ಲೇಖನದಲ್ಲಿ ಮಸೂಟದಲ್ಲಿಯ ಆಹಾರ ಪದಾರ್ಥಗಳಿಗೆ ದಕ್ಕೆ ಉಂಟಾಗಬಾರದೆಂದು ಬಿಳಿ ಅರಿವೆಯನ್ನು ಮುಚ್ಚಿರುತ್ತಾರೆ. ಈ ಕಾರಣದಿಂದ 'ಮುಸುಕಿನ ಊಟ' ಎಂದು ಕರೆದಿರಬೇಕು ಎಂದು ಊಹಿಸಲು ಆಸ್ಪದವಿದೆ (ಪುಟ. ೮೫) ಎಂದು ಹೇಳುತ್ತಾರೆ. ಮದುವೆ ಸಮಾರಂಭದಲ್ಲಿ ಹೆಣ್ಣಿನ ಕಡೆಯವರು ಬೀಗರಿಗೆ ವಿಧ ವಿಧವಾದ ಬಣ್ಣಗಳಲ್ಲಿ ಮತ್ತು ಅಸಹಜ ಗಾತ್ರಗಳ ತಿನಿಸುಗಳನ್ನು ನೀಡುವ ಸಂಪ್ರದಾಯಕ್ಕೆ 'ಮಸೂಟ' ಎನ್ನುತ್ತಾರೆ. ಇಲ್ಲಿ ಲೇಖಕರು 'ಮಸೂಟ' ವನ್ನು 'ಮುಸುಕಿನ ಊಟ' ಎಂದು ವಿಚಿತ್ರವಾಗಿ ಅರ್ಥೈಸಿ ಕೈತೊಳೆದುಕೊಂಡಿದ್ದಾರೆ.

[-ಶೋಧನ ಎಸ್. ಎಸ್. ಅಂಗಡಿ, ಮಾರ್ಚ್ - ೩೧. ೧೯೯೬]

ಮೇಲಿನ ಉಲ್ಲೇಖಗಳನ್ನು ಗಮನಿಸಿದರೆ ಲೇಖಕರ ವಾದಗಳನ್ನು, ತಪ್ಪು ನಿರ್ಧಾರಗಳನ್ನು ಅಲ್ಲಗೆಳೆಯುವಂತೆ ಕಂಡರೂ, ಸತ್ಯದ ಅಂಶವನ್ನು ಸ್ಪಷ್ಟಪಡಿಸುವುದನ್ನು ಕಾಣಬಹುದು. ಇಂಥವುಗಳು ಕೃತಿಯನ್ನು ವಿಶ್ಲೇಷಿಸುವುದಕ್ಕಾಗಿ ಪುಸ್ತಕ ವಿಮರ್ಶೆಗಳು ನಿರ್ಮಾಣವಾಗುತ್ತಿದ್ದವು. ಏಕೆಂದರೆ ಲೇಖಕರು ಮಾಡುವ ತಪ್ಪು ನಿರ್ಧಾಗಳಿಗೆ ಪ್ರತಿಕ್ರಿಯಿಸುತ್ತ ವಿಚಾರಗಳನ್ನು ಸ್ಪಷ್ಟಪಡಿಸುವುದರ ಕಡೆಗೆ ಈ ಪುಸ್ತಕ ವಿಮರ್ಶೆಗಳು ಜವಾಬ್ದಾರಿ ಉಳ್ಳವಾಗಿರುತ್ತವೆ. ಇವು ಒಂದು ರೀತಿಯ 'ವಿಚಾರ ಸ್ಪಷ್ಟತೆ'ಯ ನಿಲುವನ್ನು ಪ್ರಕಟಪಡಿಸುತ್ತವೆ.

(ಇ) ಜಿ. ರಾಜಶೇಖರ

ಜಿ. ರಾಜಶೇಖರರವರು ಲಂಕೇಶ್ ಪತ್ರಿಕೆಯಲ್ಲಿ ಪ್ರಾಸಂಗಿಕವಾಗಿ ಪುಸ್ತಕ ವಿಮರ್ಶೆ ಮಾಡುತ್ತಾರೆ. ಅವರ ಪುಸ್ತಕ ವಿಮರ್ಶೆಯ ಸ್ವರೂಪಗಳನ್ನು ಹೀಗೆ ಗುರುತಿಸಬಹುದು. ಇವರು ಪುಸ್ತಕ ವಿಮರ್ಶೆಗೆ ಆಯ್ದುಕೊಳ್ಳುವುದು ಹೆಚ್ಚಾಗಿ ವೈಚಾರಿಕ ಕೃತಿಯನ್ನು, ಕೋಮುವಾದಕ್ಕೆ ಸಂಬಂಧಪಟ್ಟ ಕೃತಿಗಳನ್ನು. ಈ ಸ್ವರೂಪದ ಕೃತಿಗಳನ್ನು ವಿಶ್ಲೇಷಿಸುತ್ತ ಚಾರಿತ್ರಿಕ ಪ್ರಜ್ಞೆಯನ್ನು ಅಲ್ಲಗೆಳೆಯುತ್ತಾ ವಾಸ್ತವಾಂಶಗಳನ್ನು ತಿಳಿಸಿ ಸ್ಪಷ್ಟಪಡಿಸುವುದನ್ನು ಕಾಣಬಹುದು. ಇವರ ಸಕ್ಯುಲರ್ ಮನೋಧರ್ಮವು ಎಲ್ಲ ಪುಸ್ತಕ ವಿಮರ್ಶೆಗಳಲ್ಲೂ ಎದ್ದು ಕಾಣುತ್ತದೆ.

(ಈ) ಎಸ್.ಎಫ್. ಯೋಗಪ್ಪನವರ್

ಇವರ ಪುಸ್ತಕ ವಿಮರ್ಶಾ ನಿಲುವುಗಳು ಈ ರೀತಿ ಇವೆ. ಕೃತಿಯ ವಿವರಗಳನ್ನು ಸ್ಪಷ್ಟಪಡಿಸಿ ಅನಂತರ ಅದಕ್ಕೆ ಆಕ್ಷೇಪಗಳನ್ನೆತ್ತಿ, ತಮ್ಮ ಪ್ರತಿಕ್ರಿಯೆಗಳ ಮೂಲಕ ಕೃತಿಯ ವಿವರಗಳಿಗೆ ಅರ್ಥವಂತಿಕೆಯನ್ನು ನೀಡುವುದು. ಕೃತಿಯ ವಿವರಗಳಿಗೆ ಪೂರಕವಾಗಿ ಚಿಂತನೆಗಳನ್ನು ಸೇರಿಸುವುದು.

"ಒಂದೊಂದು ಹೂವಿಗೂ ಒಂದೊಂದು ಬಣ್ಣ
ಒಂದೊಂದು ಜೀವಕೂ ಒಂದೊಂದು ಕಣ್ಣ
ಯಾವುದೋ ಬಗೆಯಲ್ಲಿ ಎಲ್ಲರಿಗೂ ಅನ್ನ
ಕೊಟ್ಟ ಕರುಣೆಯ ಮೂಲ ಮರೆಸಿಹುದು ತನ್ನ

"ಎಂದು ಪ್ರಾಸಗಳನ್ನು ಜೋಡಿಸಿದ್ದಾರೆ. ಶಿವಮೊಗ್ಗ ಸುಬ್ಬಣ್ಣ, ಸಿ.ಅಶ್ವಥ್ ಇವರಿಗೆ ಹಾಡು ಬರೆದು ಕೊಡುವ ಅವಸರದಲ್ಲಿ ಲಕ್ಷ್ಮೀನಾರಾಯಣಭಟ್ಟರು ಮನುಷ್ಯರಿಗೆ ವಂಚನೆ ಮಾಡಿದಂತೆನಿಸುತ್ತದೆ. ಭೂಮಿಯ ಮೇಲೆ ಹುಟ್ಟಿದ ಎಲ್ಲರಿಗೂ ಯಾವುದೋ ಬಗೆಯಲ್ಲಿ ಅನ್ನ ಸಿಕ್ಕುತ್ತದೆ ಎಂದು ತೀರ್ಮಾನಿಸಿದ್ದಾರೆ. ಹಸಿವಿನ ಮುಖ ನೋಡದ, ವರ್ತಮಾನದ ಸತ್ಯಗೊತ್ತಿರದ ಜನ ಮಾತ್ರ ಈ ರೀತಿ ತೀರ್ಮಾನಿಸಬಹುದಾಗಿದೆ."

[ಗೀತಭಾರತಿ - ಎನ್.ಎಸ್. ಲಕ್ಷ್ಮೀನಾರಾಯಣಭಟ್ಟ, ಸೆಪ್ಟೆಂಬರ್ ೨೨.೧೯೯೯]

ಕೃತಿಯ ವಿವರಗಳನ್ನು ವಿಭಾಗವಾಗಿ ಹೇಳುತ್ತ ಪೂರ್ಣ ವಿಚಾರವನ್ನು ಹೇಳಿದ ಮೇಲೆ ಅವುಗಳಿಗೆ ತಮ್ಮ ಪ್ರತಿಕ್ರಿಯೆಗಳನ್ನು ಸೇರಿಸುತ್ತಾರೆ. ಅವು ಲೇಖಕರ ನಿಲುವುಗಳನ್ನು ಪ್ರಶ್ನಿಸುವ ಸ್ವರೂಪದಲ್ಲಿರುತ್ತವೆ. ಅಲ್ಲದೆ ಲೇಖಕರು ತಪ್ಪಾಗಿ ತಿಳಿದುಕೊಂಡ ನಿಲುವನ್ನು ಸರಿಪಡಿಸಲು ಯತ್ನಿಸುತ್ತಾರೆ. ಕೆಲವೊಮ್ಮೆ ಕೃತಿ ಕುರಿತ ನೇರವಾದ ಟೀಕೆಗಳು, ಕೆಲವೊಮ್ಮೆ ವಸ್ತು ನಿಷ್ಠವಾದ ಪುಸ್ತಕ ವಿಮರ್ಶೆ ಎಂಬ ಭ್ರಮೆಯುಂಟು ಮಾಡಿದರು, ಪೂರ್ಣಪ್ರಮಾಣದಲಿಲ್ಲದಿದ್ದರೂ ವಸ್ತುನಿಷ್ಠವಾದ ಪುಸ್ತಕ ವಿಮರ್ಶಾ ಮಾದರಿಗಳಾಗಿವೆ. ಕೆಲವೊಮ್ಮೆ ಹೀಗೆ ಸಮರ್ಥನೆ ಮಾಡುವುದಕ್ಕೆ ಕ್ರಾಂತಿಕಾರಕವಾದ ಹೇಳಿಕೆಗಳೇ ಇಂಥವುಗಳ ಜೀವಾಳವಾಗಿವೆ.

V. ಕೃತಿಯನ್ನು ಪ್ರಶಂಸಿಸುವ ಮುನ್ನುಡಿ / ಬೆನ್ನುಡಿಗಳನ್ನು ಕುರಿತು

ಈ ಪತ್ರಿಕೆಯಲ್ಲಿ ಬರುವ ಪುಸ್ತಕ ವಿಮರ್ಶೆಗಳಲ್ಲಿ ಮುನ್ನುಡಿ / ಬೆನ್ನುಡಿಗಳನ್ನು ಗಮನಿಸುವುದಿಲ್ಲ. ಹಾಗೇ ಗಮನಿಸಿದರೆ ಮುನ್ನುಡಿ / ಬೆನ್ನುಡಿಯಲ್ಲಿರುವ ಪ್ರಶಂಸಾರ್ಹ ಹೇಳಿಕೆಗಳನ್ನು ಆಕ್ಷೇಪಿಸುತ್ತಾರೆ. ಇವರ ಪುಸ್ತಕ ವಿಮರ್ಶೆಗಳಲ್ಲಿ ಮುನ್ನುಡಿ / ಬೆನ್ನುಡಿಗಳ ಪ್ರಸ್ತಾಪ ಬಂದರೆ ಅವುಗಳನ್ನು ಲೇವಡಿ ಮಾಡುವುದಕ್ಕಾಗಿ ಬಳಸಿಕೊಳ್ಳುತ್ತಾರೆ. ಒಂದು ಉದಾಹರಣೆಯನ್ನು ಗಮನಿಸಬಹುದು.

"ಇವರ ಕತೆಗಳ ಮುಖ್ಯ ಧೋರಣೆಯನ್ನು ಈ ಸಂಕಲನದ ಮೊದಲ ಕತೆಯಾದ "ನಮ್ಮ ವಾಜೀನ್ನೂ ಆಟಕ್ಕೆ ಸೇರಿಸಿಕೊಳ್ರೋ" ಎಂಬುದರಲ್ಲೇ ನೋಡಬಹುದು. ಅದರ ಬಗ್ಗೆ ವಸುಮತಿ ಉಡಪ, ಜಯಂತ ಕಾಯ್ಕಿಣಿ ಇವರಿಬ್ಬರೂ ಅಸಂಬದ್ಧವಾಗಿ ಹೇಳಿದ್ದನ್ನು ಪುಸ್ತಕದ ಬೆನ್ನುಡಿಯಾಗಿ ಅಚ್ಚುಮಾಡಲಾಗಿದೆ. 'ಅಯ್ಯೋ ಅನ್ನಿಸಿಬಿಟ್ಟಿತು' ಎನ್ನುವುದು ಉಡಪರ ವಿಮರ್ಶೆಯಾದರೆ, ಎದುರಿಗೆ ಸಿಕ್ಕಿದ್ದನೆಲ್ಲ ತಾರೀಪ ಮಾಡಿ ರೋಮಾಂಚಿತರಾಗುವ, ಯಾವ ಸಾಹಿತ್ಯದ, ವಿಮರ್ಶೆಯ ಅರ್ಥಪೂರ್ಣತೆಯ ಬಗ್ಗೆಯೂ ಗಮನವಿಲ್ಲದ ಜಯಂತ 'ಅದ್ಭುತವಾಗಿದೆ, ಸೂಕ್ಷ್ಮವಾಗಿದೆ. ನಿಮ್ಮ ಕತೆ ತನ್ನ ಉತ್ತಮಿಕೆಯಲ್ಲಿ ಖಾಸನೀಸರ 'ತಬ್ಬಲಿಗಳು' ಮಟ್ಟವನ್ನು ಮುಟ್ಟಿದೆ.' ಎಂದು ಅವಿವೇಕದಿಂದ ಕೂಗಾಡಿ 'ನಾನು ಇತ್ತೀಚೆಗೆ ಓದಿದ ಅತ್ಯುತ್ತಮ ಕತೆ ಇದು' ಎಂದು ಹೇಳಿದ್ದಾರೆ. ಸಾಹಿತ್ಯ ಈ ತರಹದವರ ಕೈಯಲ್ಲಿ ಖಾಲಿ ಸೀಸ, ಹಳೇ ಪೇಪರ್ ಮಾರುವವರ ಕೂಗಾಟದ ಮಟ್ಟಕ್ಕೆ ಇಳಿಯುತ್ತದೆ. ಈ ಮಾತು ಕಟುವಾಯಿತೆಂದರೆ ಜಯಂತ ಕಾಯ್ಕಿಣಿ ಇಲ್ಲಿಯವರೆಗೆ ಎಂಥೆಂಥ ಬೆನ್ನುಡಿ ಬರೆದಿದ್ದಾರೆ ನೋಡಿ" [ಮನೀಷೆ - ಎಸ್. ವಸುದೇಂದ್ರ - ಎಪ್ರಿಲ್, ೭, ೧೯೯೯]

"ಸಂಕಲನದ ಮೊದಲನೆ ಕತೆಯಾದ 'ಒಂದು ಒಸಗೆ ಒಯ್ಯುವುದಿತ್ತು' ಎಂಬುದರ ಬಗ್ಗೆ ಬೆನ್ನುಡಿ ಬರೆದವರು "ತುಂಬ ಮನತಟ್ಟುವ ಕತೆ, ಕತೆ ಹೇಳುವಲ್ಲಿ ಲೇಖಕಿಯ ನಿಯಂತ್ರಣ ಅಸಾಧಾರಣ. ಕತೆಯಲ್ಲಿ ತುಂಬಿದ ಸೂಕ್ಷ್ಮ ವಿವರಗಳನ್ನು ಅರ್ಥಪೂರ್ಣ ಹಾಗೂ ಪರಿಣಾಮಕಾರಿ. ಬರಹ ಶಕ್ತಿಯುತವಾಗಿದ್ದು ಅನುಭವ ಸಾಮೀಪ್ಯವನ್ನು ಹೊಂದಿದೆ"

ಎಂಬ ಮಾತುಗಳಿಗೆ ಯಾವುದೋ ಖಾಸಗಿ ಸ್ಫೂರ್ತಿಯಿರಬಹುದು ಎಂದು ಸಂದೇಹಿಸುವುದು ಅನಿವಾರ್ಯವಾಗುತ್ತದೆ." [ಹಕ್ಕಿ ಮತ್ತು ಅವಳು - ಮಿತ್ರಾ ವೆಂಕಟ್ರಾಜ ಡಿಸೆಂಬರ ೧೭, ೧೯೯೭]"

ಈ ಮೇಲಿನ ವಿಶ್ಲೇಷಣೆಗಳು ಬೆನ್ನುಡಿ ವಿವರಗಳು ಅತಿ ಪ್ರಶಂಸಾತ್ಮಕತೆಯಿಂದ ಕೃತಿ ತೊಳಲಾಡಿದುದರ ಬಗೆಗೆ ತಮ್ಮ ನಿಲುವುಗಳನ್ನು ವ್ಯಕ್ತಪಡಿಸುತ್ತಾ, ಅದಕ್ಕೆ ಪೂರಕವಾಗಿ ಕತೆಯ ಮೂಲಕ ಬೆನ್ನುಡಿ ಬರೆಯಲು ಯೋಗ್ಯವಾದ ಸಂಕಲನವೇ ಎಂಬ ಪ್ರಶ್ನೆಯನ್ನು ಪುಸ್ತಕ ವಿಮರ್ಶಕರು ಮಾಡಿದ್ದಾರೆ. ಅದಕ್ಕಾಗಿ ಬೆನ್ನುಡಿಗಳು ಅತಿ ಪ್ರಶಂಸೆ ಪಡೆದುಕೊಳ್ಳುವ ಸ್ಥಿತಿಯನ್ನು ಇವರು ಟೀಕಿಸುತ್ತಾರೆ. ಈ ಪತ್ರಿಕೆಯಲ್ಲಿನ ಪುಸ್ತಕ ವಿಮರ್ಶೆಗಳಲ್ಲಿ ಮುನ್ನುಡಿ / ಬೆನ್ನುಡಿಗಳ ಪ್ರಸ್ತಾಪ ಬರುವುದು ಖಂಡಿಸುವುದಕ್ಕಾಗಿ, ಆಕ್ಷೇಪಿಸುವುದಕ್ಕಾಗಿ ಉಲ್ಲೇಖಿಸಲಾಗುತ್ತದೆ. ಆದರೆ ಬೇರೆ ಪತ್ರಿಕೆಗಳ ಪುಸ್ತಕ ವಿಮರ್ಶೆಗಳಲ್ಲಿ ಮುನ್ನುಡಿ ಬೆನ್ನುಡಿಗಳು ಪುಸ್ತಕ ವಿಮರ್ಶೆಯನ್ನು ಬೆಳಸಲು ಪೂರಕವಾದ ಕೆಲಸ ಮಾಡುವುದನ್ನು ಗಮನಿಸಬಹುದು.

vi. ಪುಸ್ತಕ ವಿಮರ್ಶೆಗೆ ಚೌಕಟ್ಟನ್ನು ನಿರ್ಮಿಸಿಕೊಳ್ಳುವ ಪರಿಕರಗಳು

ಈ ಪತ್ರಿಕೆಯಲ್ಲಿ ಬರುವ ಪುಸ್ತಕ ವಿಮರ್ಶೆಗಳ ಮುಖ್ಯ ಲಕ್ಷಣವೆಂದರೆ ಒಂದು ಪುಸ್ತಕ ವಿಮರ್ಶೆಯಲ್ಲಿ ಆಯಾ ಕೃತಿಗೆ ಆಯಾ ಪ್ರಕಾರದ ಸಾಹಿತ್ಯ ತತ್ವವನ್ನು ನೀಡುತ್ತಾರೆ.

೧) ಪ್ರತಿಯೊಂದು ಸಾಹಿತ್ಯ ಕ್ರಿಯೆ ಮನುಷ್ಯ ಸಂವೇದನೆಯ ಜೊತೆಗಿನ ಸಂಘರ್ಷ ಹಾಗೂ ಪಿಸುಮಾತಿನ ಸಂಭಾಷಣೆ ಎನ್ನುವುದು ತಿಳಿಯದೇ ಹೋದಲ್ಲಿ ಬರೆಯುವ ಕತೆಗಳೆಲ್ಲ ವಾರದ ರಂಜನೆಗೆಂದು ಬರೆದ ಬದುಕಿನ ನಕಲಿ ಚಿತ್ರಣಗಳಾಗುತ್ತವೆ. [ಅರ್ಥಮಂತ್ರಿ ಮತ್ತು ಹಂದಿಗಳು - ಶಾಂತರಾಮ ಸೋಮಯಾಜಿ -೨೪-೧೨-೧೯೯೭]

೨) ಸಂಕೀರ್ಣತೆ ಕೂಡ ಸಹಜ, ಅನಿವಾರ್ಯ ಆಗಿದ್ದಾಗ ಮಾತ್ರ ಕಾವ್ಯದ ಕೆಲಸ ಕೈಗೂಡುತ್ತದೆ. [ಪಾರಿಜಾತ - ವೈದೇಹಿ - ಜೂನ್, ೩೦, ೧೯೯೯]

೩) ಭಾವಗೀತೆಯಂಥ ಪ್ರಕಾರದಲ್ಲಿ ಧ್ವನಿ ಹಾಗೂ ರೂಪಕಗಳ ಮಧ್ಯೆ ಆಂತರಿಕ ಜೋಡಣೆ ಉಂಟಾಗುತ್ತದೆ. ನಾದ ಹಾಗೂ ಪ್ರತಿಮೆಗಳು ಬೆಸೆದುಕೊಳ್ಳುತ್ತವೆ. ಶಾಶ್ವತವಾದ ಲಯ ದಕ್ಕುತ್ತದೆ. (ಗೀತ ಭಾರತಿ - ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ - ೨೨-೧೦-೯೯)

ಈ ಮೇಲಿನ ಉಲ್ಲೇಖಗಳಲ್ಲಿ ಪುಸ್ತಕ ವಿಮರ್ಶೆಗೆ ಒಳಗಾದ ಕೃತಿ ಪ್ರಕಾರದ ವ್ಯಾಖ್ಯಾನಗಳು ಕಂಡುಬರುತ್ತವೆ. ಮೊದಲನೆಯದು ಕಥಾ ಸಂಕಲನಕ್ಕೆ ಸಂಬಂಧಿಸಿದ್ದರಿಂದ 'ಸಾಹಿತ್ಯ ಕ್ರಿಯೆ' ಮನುಷ್ಯ ಸಂವೇದನೆಯ ಜೊತೆಗಿನ ಸಂಘರ್ಷ ಹಾಗೂ ಪಿಸುಮಾತಿನ ಸಂಭಾಷಣೆ ಎಂದು ಅರ್ಥೈಸುತ್ತಾರೆ. ಅನಿವಾರ್ಯತೆ, ಅಗತ್ಯತೆಯನ್ನು ಸ್ಪಷ್ಟಪಡಿಸುತ್ತಾರೆ. ಹಾಗೆಯೇ ಭಾವಗೀತೆ ಪ್ರಕಾರಕ್ಕೆ ಮುಖ್ಯ ಮೂಲಭೂತ ಲಕ್ಷಣವನ್ನೂ, ಸಂಶೋಧನೆಯ ಶಿಸ್ತು ಕುರಿತಾದ ಬಹಳ ಮುಖ್ಯವಾದ ಸಂಶೋಧನ ಮನಸ್ಥಿತಿಯನ್ನು ಕುರಿತು ಹೇಳುತ್ತಾರೆ. ಇವುಗಳೆಲ್ಲವುಗಳ ಹಿನ್ನೆಲೆಯಲ್ಲಿ ಆಯಾ ಕೃತಿಯನ್ನು ವಿಶ್ಲೇಷಿಸುವಾಗ ಈ ಸಾಹಿತ್ಯಕ ವ್ಯಾಖ್ಯಾನಗಳ ಕೊರತೆ ಆ ಕೃತಿಯಲ್ಲಿ ಇರುವುದನ್ನು ಧ್ವನಿಪೂರ್ಣವಾಗಿ ತೋರಿಸುವುದು ಪುಸ್ತಕ ವಿಮರ್ಶೆಯ ಒಂದು ವಿಶಿಷ್ಟತೆಯಾಗಿದೆ. ಇದೊಂದು ರೀತಿಯ ಸಾಹಿತ್ಯದ ಬಗೆಗೆ ಖಚಿತವಾದ ವಿವರಗಳನ್ನು ಅಪೇಕ್ಷಿಸುವ ಮತ್ತು ವಿವರಗಳನ್ನು ನೀಡಿ ಅರ್ಥೈಸುವ ಕ್ರಿಯೆ.

ಈ ಮೇಲಿನ ಅಂಶಗಳ ಹಿನ್ನೆಲೆಯಲ್ಲಿ 'ಲಂಕೇಶ್ ಪತ್ರಿಕೆ'ಯ ಪುಸ್ತಕ ವಿಮರ್ಶಾ ನಿಲುವುಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

೧ ಲೇಖಕರ ಸೃಜನಶೀಲತೆ ಕುರಿತ ಆದರ (ಆದಷ್ಟು / ಗೈರುಹಾಜರಿಯ ಬಗೆಗೆ)

೨ ಕೃತಿಯ ಆರಂಭ ಮತ್ತು ಕೃತಿಯ ಬಂಧವನ್ನು ಕುರಿತ ವಿಶ್ಲೇಷಣೆ.

೩ ಕತೆ / ಕಾದಂಬರಿಗಳಾಗಿದ್ದರೆ, ಸ್ವಭಾವದೊಂದಿಗೆ ಪಾತ್ರಗಳನ್ನು ವಿಶ್ಲೇಷಿಸುವ ಕ್ರಮ

೪ ಕೃತಿ ಶೀರ್ಷಿಕೆಯ ವಿವರಗಳು.

೫ ಮತ್ತೊಂದು ಕೃತಿಯೊಡನೆ ಹೋಲಿಸಿ ಇಡೀ ಕೃತಿ ವಿಮರ್ಶೆ ಆರಂಭ.

೬ ಒಂದೇ ತಾತ್ವಿಕತೆಗಳನ್ನು ಒಳಗೊಂಡ ಇತರ ಕೃತಿಗಳ ಪ್ರಸ್ತಾಪ ಮತ್ತು ವಿಫಲವಾದ ಕೃತಿಯ ಬಗೆಗೆ ವಿಶ್ಲೇಷಣೆ.

೭ ಕೆಲವೊಮ್ಮೆ ನವ್ಯ ಸಂದರ್ಭದ ವಿಮರ್ಶಾ ಪರಿಭಾಷೆಗಳ ಹಿನ್ನೆಲೆಯಲ್ಲಿ ವಿಮರ್ಶಿಸುವುದು.

೮ ಮುನ್ನುಡಿ ಬೆನ್ನುಡಿಗಳನ್ನು ಉಲ್ಲೇಖಿಸಿ ಆ ಮೂಲಕ ಮುನ್ನುಡಿ / ಬೆನ್ನುಡಿಕಾರರ ಚಿಂತನೆಗಳನ್ನು ಆಕ್ಷೇಪಿಸುವುದು.

೯ ಪ್ರತಿ ಪುಸ್ತಕ ವಿಮರ್ಶಿಸುವಾಗ ಆ ಕೃತಿಯ ಪ್ರಕಾರದ ಸಾಹಿತ್ಯ ತತ್ವ, ವ್ಯಾಖ್ಯಾನಗಳನ್ನು ನೀಡುವುದು.

ಈ ಮೇಲಿನ ಕಂಡುಬರುವ ಅಂಶಗಳು 'ಲಂಕೇಶ್ ಪತ್ರಿಕೆ'ಯ ಪುಸ್ತಕ ವಿಮರ್ಶೆಯಲ್ಲಿ ಮುಖ್ಯವಾಗಿ ಕಂಡುಬರುವ ನಿಲುವುಗಳಾಗಿವೆ.

೫.೨ ಪುಸ್ತಕ ವಿಮರ್ಶೆಗಳನ್ನು ಒಳಗೊಂಡಿರುವ ಕೃತಿ ವಿಶ್ಲೇಷಣೆ –
ಸಾಹಿತ್ಯ ಸಂಸ್ಕೃತಿ : ನರಹಳ್ಳಿ ಬಾಲಸುಬ್ರಹ್ಮಣ್ಯ

ಹಲವಾರು ಪತ್ರಿಕೆ ಅಥವಾ ಒಂದೇ ಪತ್ರಿಕೆಯಲ್ಲಿ ಬಂದ ಪುಸ್ತಕ ವಿಮರ್ಶೆಗಳನ್ನು ಬೇರೆ ಬೇರೆಯವರು ಬರೆದಿದ್ದರೂ, ಒಂದೇ ಸ್ವರೂಪವಾಗಿ ಹೊರನೋಟಕ್ಕೆ ಕಾಣುತ್ತವೆ. ಆದರೆ ಅವುಗಳು ಅಂತರಂಗಿಕವಾಗಿ ಪರಸ್ಪರ ಭಿನ್ನ ಸ್ವರೂಪವನ್ನು ಪಡೆದಿರುತ್ತವೆ. ಈ ಭಿನ್ನ ಸ್ವರೂಪವು ಪುಸ್ತಕ ವಿಮರ್ಶೆಗಳನ್ನು ಪ್ರತೇಕವಾಗಿ ಅಧ್ಯಯನ ಮಾಡಿ, ವಿಶ್ಲೇಷಣೆಗೆ ತೊಡಗಿಸಿದಾಗ ಕಂಡುಬರುತ್ತದೆ. ಅವುಗಳು ಬೇರೆ ಬೇರೆಯಾದಂತೆ ಕಂಡರೂ ಕೆಲವೊಮ್ಮೆ ಎಲ್ಲ ಪುಸ್ತಕ ವಿಮರ್ಶೆಗಳ ಆರಂಭ ಬೆಳವಣಿಗೆಯ ಹಂತ ಇತ್ಯಾದಿಗಳು ಒಂದೇ ನೆಲೆಯಲ್ಲಿ ಕಂಡುಬರುತ್ತವೆ. ಉದಾಹರಣೆಗೆ ಇಲ್ಲಿ ನರಹಳ್ಳಿ ಬಾಲಸುಬ್ರಹ್ಮಣ್ಯ ಅವರ 'ಸಾಹಿತ್ಯ ಸಂಸ್ಕೃತಿ' ಎಂಬ ಕೃತಿಯನ್ನು ಒಟ್ಟಾಗಿ ವೀಕ್ಷಿಸಲಾಗಿದೆ. ಅವರ 'ಸಾಹಿತ್ಯ ಸಂಸ್ಕೃತಿ' ಮಯೂರ ಪತ್ರಿಕೆಯಲ್ಲಿ ತಿಂಗಳಿಗೊಂದರಂತೆ ಪ್ರಕಟವಾದ ಪುಸ್ತಕ ವಿಮರ್ಶೆಗಳನ್ನು ಒಳಗೊಂಡಿರುವ ಕೃತಿ.

ಇಲ್ಲಿ 'ಸಾಹಿತ್ಯ ಸಂಸ್ಕೃತಿ' ಕೃತಿಯನ್ನು ಅಭ್ಯಸಿಸುತ್ತಲೇ, ಪ್ರತ್ರಿಕೆಯ, ಪುಸ್ತಕ ವಿಮರ್ಶಕರ, ಪುಸ್ತಕ ವಿಮರ್ಶಾ ಧೋರಣೆಯನ್ನು, ಮನೋಧರ್ಮವನ್ನು ಜೊತೆಯಾಗಿ ಗುರುತಿಸಲು ಯತ್ನಿಸಬಹುದು.

ಈ ಕೃತಿಯಲ್ಲಿ ಒಟ್ಟು ೪೧ ಪುಸ್ತಕ ವಿಮರ್ಶೆಗಳಿವೆ. ಇವುಗಳು ಮುಖ್ಯವಾಗಿ ಖ್ಯಾತರಾದ ಪುಸ್ತಕಗಳಿಗೆ ಬರೆದ ಪುಸ್ತಕ ವಿಮರ್ಶೆಗಳಾಗಿವೆ. ಈ ಎಲ್ಲವುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿದಾಗ ಅಂತರಂಗಿಕವಾಗಿ ಒಂದೇ ನೆಲೆಯಲ್ಲಿರುವಂತೆ ಕಂಡಿವೆ. ಇಲ್ಲಿ ಎಲ್ಲ ಪುಸ್ತಕ ವಿಮರ್ಶೆಗಳನ್ನು ಉಲ್ಲೇಖಿಸದಿದ್ದರೂ ಒಟ್ಟಾರೆ ಆ ಕೃತಿಯ ಪುಸ್ತಕ ವಿಮರ್ಶಾ ನಿಲುವನ್ನು ಗುರುತಿಸಲು ಯತ್ನಿಸಲಾಗಿದೆ. ಈ ಕೃತಿಯ ಪುಸ್ತಕ ವಿಮರ್ಶೆಯಲ್ಲಿ ಬಹುಪಾಲು ಎಲ್ಲವುಗಳ ಅರಂಭವು ಒಂದು ಹೇಳಿಕೆ / ಪ್ಯಾರವನ್ನು ಉಲ್ಲೇಖಿಸುವುದರ ಮುಖೇನ ಕೃತಿ ವಿಮರ್ಶೆಗೆ ಚೌಕಟ್ಟು ನಿರ್ಮಾಣಗೊಂಡಿದೆ. ಈ ಕೆಳಗಿನದು ಒಂದು ಪ್ರಾತಿನಿಧಿಕ ಉದಾಹರಣೆ

ಕನ್ನಡ ಸಾಹಿತ್ಯ ನಮ್ಮೆಲ್ಲರಿಗಿಂತಲೂ ದೊಡ್ಡದು. ವಿಮರ್ಶೆಯಲ್ಲಿ ವ್ಯಕ್ತಿದ್ವೇಷಕ್ಕೆ ಮತ್ತು ಗುಂಪು ಗುಳಿತನಕ್ಕೆ ಜಾಗವಿಲ್ಲ. ಕೆಲವು ಜನರ ಅಭಿಪ್ರಾಯಗಳಲ್ಲಿ ಹೋಲಿಕೆಗಳಿದ್ದ ಮಾತ್ರಕ್ಕೆ ಅವರೆಲ್ಲ ಒಂದು ಗುಂಪು, ಬೇರೆಯವರನ್ನು ದ್ವೇಷಿಸುತ್ತಾರೆ ಎಂದು ಹೇಳುವುದು ಸಾಹಿತ್ಯ ವಿಮರ್ಶೆಯ ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಲ್ಲ. ಒಬ್ಬ ವಿಮರ್ಶಕನ ಅಭಿಪ್ರಾಯ ತಪ್ಪಿದ್ದರೆ ಅದು ತಪ್ಪೆಂದು ಸಿದ್ಧ ಮಾಡಿ ತೋರಿಸುವುದು, ಆ ಅಭಿಪ್ರಾಯಗಳಿಗೆ ಆಧಾರವೇನು ಎಂದು ಕೇಳುವುದು ಮತ್ತೊಬ್ಬ ವಿಮರ್ಶಕನ ಕೆಲಸ. ಆ ಕೆಲಸ ಮಾಡಿದ ವಿಮರ್ಶಕ ವಿಮರ್ಶೆಮಾಡದೆ ಇರುವುದೇ ಒಳ್ಳೆಯದು. ಈ ಹೊಣೆಗಾರಿಕೆಯನ್ನು ನಾವು ಒಪ್ಪಿಕೊಳ್ಳದಿದ್ದರೆ ಸಾಹಿತ್ಯ ವಿಮರ್ಶೆ ಬೀದಿ ಜಗಳವಾಗುತ್ತದೆ. ಅತಿ ಮುಖ್ಯವಾಗಿ ಬೌದ್ಧಿಕ ಕೆಲಸವೊಂದು ನಿಂತು ಹೋಗದಿದ್ದರೂ ಆ ಕೆಲಸಕ್ಕೆ ಅನವಶ್ಯಕ ಅಡಚಣೆಯುಂಟಾಗುತ್ತದೆ. (ಪು.೧)

ಈ ಮೇಲಿನ ಉಲ್ಲೇಖವನ್ನು ಗಮನಿಸಿದರೆ ಇದರಲ್ಲಿ ಕೃತಿಯ ಬಗೆಗೆ ಯಾವುದೇ ವಿವರಗಳಿಲ್ಲ. ಆದರೆ ಕೃತಿ ಸೇರಿರುವ ಪ್ರಕಾರವನ್ನು ಕುರಿತ ವಿಶ್ಲೇಷಣೆ ಮಾಡುವುದನ್ನು ಸಮರ್ಥಿಸಿಕೊಳ್ಳುವ ದಾಟಿಯಲ್ಲಿ ಈ ಉಲ್ಲೇಖವನ್ನು ಮಾಡಿದ್ದಾರೆ. ಇದರ ಮುಖೇನ ಕೃತಿ- ಸಂಸ್ಕೃತಿ, ಕೃತಿಯೊಳಗಿನ ವಿಶ್ಲೇಷಣೆಯನ್ನು ಒಪ್ಪಿಕೊಳ್ಳುತ್ತಾ ಪುಸ್ತಕ ವಿಮರ್ಶೆ ಆರಂಭವಾಗಿದೆ. ಇದರ ಜೊತೆಯಲ್ಲಿ ಸ್ವ ವಿಶ್ಲೇಷಣೆಯನ್ನು ಸೇರಿಸುವ ಯತ್ನವಿದೆ.

ಇವರ ಪುಸ್ತಕ ವಿಮರ್ಶಾ ಮಾದರಿಯಲ್ಲಿ ಒಂದು ಚಿಂತನೆಯನ್ನು ಉಲ್ಲೇಖಿಸಿ ಅದರ ಹಿನ್ನೆಲೆಯಲ್ಲಿ ಲೇಖಕರನ್ನು ಅವರ ಕೃತಿಯನ್ನು ವಿಶ್ಲೇಷಿಸುವುದು ಒಂದು ಮುಖ. ಈ ರೀತಿಯ ಮಾದರಿಯಲ್ಲಿ ಲೇಖಕರ ಹಿಂದಿನ ತಾತ್ವಿಕತೆಯನ್ನು ಅವರ ಇತ್ತೀಚಿನ ಗತಿಯ ಸ್ವರೂಪವನ್ನು ಪರಸ್ಪರ ಚರ್ಚಿಸುವುದು ಅಲ್ಲದೆ, ಅವರ ಬದಲಾವಣೆಯ ಗತಿಯನ್ನು ವಿಶ್ಲೇಷಿಸುವುದು ಇಂಥ ಮಾದರಿಗಳಿಂದ ಒದಗಿಬರುತ್ತದೆ. ಆದರೆ ಈಗಾಗಲೇ ನಿರ್ಮಾಣಗೊಂಡ ಸಿದ್ಧಚಿಂತನೆಯನ್ನಿಟ್ಟುಕೊಂಡು ವಿಮರ್ಶಿಸುವುದರಿಂದ ಪ್ರಸ್ತುತ ಕೃತಿಯ ಚಿಂತನೆಯನ್ನು ಅಲ್ಲಗಳೆದಂತಾಗುತ್ತದೆ.

ಇನ್ನು ಕೆಲವೊಮ್ಮೆ ಈ ಪುಸ್ತಕ ವಿಮರ್ಶಕರು ತಮ್ಮ ಪುಸ್ತಕ ವಿಮರ್ಶೆಯ ಪ್ರಾರಂಭದಲ್ಲಿ ಕೃತಿಯ ಸಂಬಂಧವುಳ್ಳ ಇತರ ವಿಷಯವನ್ನು ಉಲ್ಲೇಖಿಸಿ ಅದರ ಹಿನ್ನೆಲೆಯ ಮೂಲಕ ಪುಸ್ತಕ

ವಿಮರ್ಶೆಗೆ ತೊಡಗಿಕೊಳ್ಳುವುದು ಉಂಟು. ತೇಜಸ್ವಿ ನಿರಂಜನ, ಸೀಮಂತಿನಿ ನಿರಂಜನರು ಸಂಪಾದಿಸಿರುವ 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ' ಕೃತಿಯನ್ನು ಪುಸ್ತಕ ವಿಮರ್ಶೆಗೆ ತೊಡಗಿಸಿಕೊಳ್ಳುವ ಮುನ್ನ ಅವರು ನಿರ್ಮಿಸಿಕೊಂಡಿರುವ ಹಿನ್ನೆಲೆ ಚೌಕಟ್ಟು ಹೀಗಿದೆ.

ಮಹಿಳೆಗೆ ಬೇಕಾಗಿರುವುದು ಸ್ವೇಚ್ಛೆಯಲ್ಲ, ಆಳುವ ಅಧಿಕಾರವಲ್ಲ,ಆಕೆಗೆ ಅವಶ್ಯವಿರುವ ಸಹಜವಾಗಿ ಬೆಳೆಯುವ ಅವಕಾಶ, ಸ್ವತ್ರಂತದ ಬುದ್ಧಿಯನ್ನು ಹೊಂದುವ ಅವಕಾಶ (ಪು.೨೨) ಎಂದು ಅಮೇರಿಕಾದ ಮಹಿಳಾ ವಿಮೋಚನಾವಾದಿ ಮಾರ್ಗರೇಟ್ ಫುಲರ್‌ರವರ ವ್ಯಾಖ್ಯಾನವನ್ನು ಉಲ್ಲೇಖಿಸುತ್ತಾರೆ. ಇದನ್ನು ನೋಡಿದರೆ 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ' ಕೃತಿಯ ಪುಸ್ತಕ ವಿಮರ್ಶೆಗೆ ಪ್ರವೇಶಿಸುವ ಮುನ್ನ ಇಡೀ ಕೃತಿಯ ಒಳಗಿನ ಅಂಶಗಳಿಗೆ ಪೂರ್ವೋತ್ತರವಾಗಿ ಹಿನ್ನೆಲೆಯೊದಗಿಸುತ್ತದೆ. ಇಂಥವುಗಳು ಪುಸ್ತಕ ವಿಮರ್ಶೆಯನ್ನು ಓದಲು ಮತ್ತು ಕೃತಿಯನ್ನು ಓದಿಕೊಳ್ಳಲು ಅರ್ಥವತ್ತಾದ ಸಿದ್ಧತೆಯನ್ನು ನಿರ್ಮಾಣ ಮಾಡಿಕೊಡುತ್ತವೆ. ಇವು ಕೃತಿಯ ಸಮಗ್ರ ಮುಖ್ಯಾಂಶಗಳ ಹಿನ್ನೆಲೆಯಲ್ಲಿ ಪುಸ್ತಕ ವಿಮರ್ಶೆ ಬೆಳಯುತ್ತದೆ.

ಈ 'ಸ್ತ್ರೀವಾದಿ ಸಾಹಿತ್ಯ ವಿಮರ್ಶೆ' ಕೃತಿಗೆ ಮಾಡಿರುವ ಪುಸ್ತಕ ವಿಮರ್ಶೆಯೂ ಒಂದು ರೀತಿಯಲ್ಲಿ ಪರಿಪೂರ್ಣ ಸ್ವರೂಪದ ಪುಸ್ತಕ ವಿಮರ್ಶೆಯ ರೂಪದಲ್ಲಿರುವ ವಿಮರ್ಶಾ ಲೇಖನವೆಂದು ಹೇಳಬಹುದು. ಅದರಲ್ಲಿ ಪ್ರಸ್ತುತ ಕೃತಿಯನ್ನು ಇತರ ವಿಚಾರಗಳ ಜೊತೆಯಲ್ಲಿಟ್ಟು ಚರ್ಚಿಸಿರುವುದು, ಇತರ ವಿವರ ಪ್ರಮುಖ ಚರ್ಚೆ ವಾಗ್ವಾದಗಳ ಮೂಲಕ ಪುಸ್ತಕ ವಿಮರ್ಶೆಗೆ ಪ್ರವೇಶ ಮಾಡಿರುವುದು ಕಂಡುಬರುತ್ತದೆ. ಪ್ರಪಂಚದ ಹಿನ್ನೆಲೆಯಲ್ಲಿ, ಭಾರತದ ಹಿನ್ನೆಲೆಯಲ್ಲಿ ಕನ್ನಡದ ಸಂದರ್ಭದಲ್ಲಿ ಸ್ತ್ರೀವಾದಿ ಚಿಂತನೆಯ ಚರ್ಚೆಯಿದೆ. ಅಲ್ಲದೆ ಚರ್ಚಿಸುವುದು, ಇಡೀ ಪುಸ್ತಕ ವಿಮರ್ಶೆ ಕೃತಿಯ ವಿಚಾರಕ್ಕೆ ಸಂಬಂಧಪಟ್ಟ ಇತರ ಅಂಶಗಳು ಹೊರಗಿನವುಗಳೇ ಆದರೂ ಅವುಗಳ ಚರ್ಚೆ ವಿಶಾಲವಾಗಿದೆ. ಈ ಪುಸ್ತಕ ವಿಮರ್ಶೆಯಲ್ಲಿ ಕೃತಿ ಒಂದು ನೆಪವಾಗಿದೆ. ಕೃತಿಯ ವಿಚಾರಗಳನ್ನು ಪೂರಕವಾಗಿ ಬೆಳಸುವ ಇತರ ವಿವರಗಳ ಚರ್ಚೆ ಹೆಚ್ಚಿದೆ. ಆ ಮೂಲಕ ಚರ್ಚೆಯಲ್ಲಿ ಹೊಸ ಹೊಳಹುಗಳನ್ನು ಹುಡುಕಲೆತ್ನಿಸಿದ್ದಾರೆ. ಅದರ ಜೊತೆಗೆ ಕೃತಿಯ ವಿವರಗಳನ್ನು ಪೂರಕವಾಗಿ ಬಳಸಿಕೊಂಡಿದ್ದಾರೆ. ನೇರವಾಗಿ ಕೃತಿಯ ಒಳಕ್ಕೆ ಇಳಿದಿಲ್ಲ. ಹಾಗೆಯೇ ಕೃತಿಯ ಒಳಗಿನಿಂದ ಚರ್ಚೆ ಆರಂಭಿಸಿಲ್ಲ. ಕೃತಿಯ ಹೊರಗಿನಿಂದ ಚರ್ಚೆ ಆರಂಭವಾಗಿ, ಹೊರಗಿನಿಂದಲೇ ಪುಸ್ತಕ ವಿಮರ್ಶೆ ಅಂತ್ಯವಾಗಿದೆ.

ಇನ್ನೊಂದು ಸಂದರ್ಭದಲ್ಲಿ ಈ ಪುಸ್ತಕ ವಿಮರ್ಶಕರು ಪುಸ್ತಕ ವಿಮರ್ಶೆಯ ಆರಂಭದಲ್ಲಿ ಪ್ರಸ್ತುತ ಕೃತಿಯ ಲೇಖಕರು ಬೇರೆ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಉಲ್ಲೇಖಿಸುತ್ತಾರೆ. ಇದರ ಮೂಲಕ ಪ್ರಸ್ತುತ ಕೃತಿಯನ್ನು ವಿಮರ್ಶೆಗೆ ತೊಡಗಿಸಿಕೊಳ್ಳುವುದನ್ನು ಕಾಣಬಹುದು. ತೇಜಸ್ವಿಯವರ 'ಜುಗಾರಿಕ್ರಾಸ್' ಕಾದಂಬರಿಯನ್ನು ವಿಮರ್ಶಿಸುವಾಗ ಆರಂಭದಲ್ಲಿ ತೇಜಸ್ವಿಯವರು ಯಾವುದೋ ಸಂದರ್ಭದಲ್ಲಿ ಹೇಳಿದ ಮಾತುಗಳನ್ನು ಹೀಗೆ ಉಲ್ಲೇಖಿಸುತ್ತಾರೆ *"ನಮ್ಮ ರಾಷ್ಟ್ರೀಯ ಉತ್ಪಾದನೆಯ ಬಹುಪಾಲನ್ನು ....ಹೇಳಬಹುದು (ಪು.೩೬)"* ಎಂದು ಮೂಲಭೂತವಾದಂತಹ ಪ್ರಶ್ನೆಯನ್ನು ಎತ್ತುತ್ತಾರೆ. ಲೇಖಕರು

ಎತ್ತಿದ ಈ ಪ್ರಶ್ನೆಯನ್ನಿಟ್ಟುಕೊಂಡೆ ಪುಸ್ತಕ ವಿಮರ್ಶಕರು ಅದಕ್ಕೆ ಮೂಲಭೂತ ಕಾರಣವನ್ನು ಹುಡುಕಿಕೊಳ್ಳುವ ಯತ್ನದಲ್ಲಿ ಪುಸ್ತಕ ವಿಮರ್ಶೆಯಿದೆ. ಆದರೂ ಈ ಪುಸ್ತಕ ವಿಮರ್ಶೆಯೂ ಕೃತಿಯ ವಸ್ತು ಹೋದಂತೆ ನಿರೂಪಿಸಲಾಗಿದೆ. ತಮ್ಮ ಚರ್ಚೆಗೆ ಬೇಕಾದ ಸಾಲುಗಳನ್ನು, ಚಿಂತನೆಗಳನ್ನು ಮಾತ್ರ ಆರಿಸಿಕೊಳ್ಳಲಾಗಿದೆ. ಹಾಗಾಗಿ ಇದು ಪುಸ್ತಕ ವಿಮರ್ಶೆಯಂತೆ ಕಂಡರೂ 'ವೈಯಕ್ತಿಕ ವಿಮರ್ಶೆ'ಯೂ ಆಗಿದೆ. ಕೆಲವೊಮ್ಮೆ ಮುಖ್ಯ ವಿಚಾರಧಾರೆಗಳನ್ನು ತಿಳಿಸುವ ವಾಹಿನಿಯಾಗಿ ಕೆಲಸ ಮಾಡುತ್ತದೆ. ಈ ಪುಸ್ತಕ ವಿಮರ್ಶೆಯ ಕೊನೆಯಲ್ಲಿ ಕೃತಿಯೊಳಗಿನ ಉಲ್ಲೇಖದಿಂದ ಲೇಖಕರ ಆಶಯವನ್ನು ಗುರುತಿಸಿರುವುದನ್ನು ಕಾಣಬಹುದು.

ಇನ್ನು ಕೆಲವು ಸಂದರ್ಭಗಳಲ್ಲಿ ಪುಸ್ತಕ ವಿಮರ್ಶೆಗೆ ಆರಂಭದ ಮುನ್ನ ಪುಸ್ತಕ ವಿಮರ್ಶಕರ ಇನ್ನೊಂದು ರೀತಿಯ ಹಿನ್ನೆಲೆ ಹಾಕಿಕೊಳ್ಳುವುದನ್ನು ಕಾಣಬಹುದು. ಗಿರೀಶ್ ಕಾರ್ನಾಡರ 'ಅಗ್ನಿ ಮತ್ತು ಮಳೆ' ನಾಟಕವನ್ನು ಪುಸ್ತಕ ವಿಮರ್ಶೆಗೆ ಬಳಸಿಕೊಳ್ಳುವ ಮೊದಲು ಹಾಕಿಕೊಂಡಿರುವ ವಿಶ್ಲೇಷಣೆ ಈ ಈ ರೀತಿ ಇದೆ.

ನಮ್ಮ ಪುರಾಣ ಇತಿಹಾಸ ಮತ್ತು ಜಾನಪದ ಜಗತ್ತುಗಳ ಜೊತೆ ಮುಖಾಮುಖಿಯಾಗುವುದರ ಮೂಲಕ ತಮ್ಮ ಕೃತಿಗಳ ವಿನ್ಯಾಸವನ್ನು ಗಿರೀಶ್ ಕಾರ್ನಾಡರು ರೂಪಿಸಿಕೊಳ್ಳುತ್ತಾರೆ. ಇದರಿಂದಾಗಿ ಕಾರ್ನಾಡರು ಪ್ರಮುಖವಾಗಿ ಎರಡು ಬಗೆಯ ಅನುಕೂಲಗಳನ್ನು ಸಾಧಿಸುತ್ತಾರೆ. ಮೊದಲನೆಯದಾಗಿ ಗಟ್ಟಿಯಾದ ಕಥಾವಸ್ತುವೊಂದು ಅವರ ಕೃತಿಗೆ ದೊರಕುತ್ತದೆ. ಜೊತೆಗೆ ಅದು ಒಳಗೊಳ್ಳುವ ಅರ್ಥ ಪರಂಪರೆ ಕೃತಿಗೆ ಒಂದು ಸೂಕ್ತ ಹಿನ್ನೆಲೆಯನ್ನು ಒದಗಿಸಿ ಕೊಡುತ್ತದೆ. ಎರಡನೆಯದಾಗಿ ಕಾರ್ನಾಡರು ಈ ವಸ್ತುವನ್ನು ಮುರಿದು ಕಟ್ಟುವುದರ ಮೂಲಕ ತಮ್ಮ ಆಧುನಿಕ ಸಂವೇದನೆಯ ಅರ್ಥ ಸಾಧ್ಯತೆಗಳನ್ನು ಅಭಿವ್ಯಕ್ತಿಸುವುದು ಸಾಧ್ಯವಾಗುತ್ತದೆ. ಸ್ಮೃತಿ ಮತ್ತು ಸ್ಥಿತಿಗತಿಗಳ ಈ ಮುಖಾಮುಖಿಯ ಮೂಲಕ ಕಾರ್ನಾಡರು ಕಟ್ಟಿಕೊಡುವ ಜಗತ್ತು ಸಹಜವಾಗಿಯೇ ದಟ್ಟ ಅನುಭವವೊಂದನ್ನು ನೀಡುವಲ್ಲಿ ಪರಿಣಾಮಕಾರಿಯಾಗಿಬಿಡುತ್ತದೆ. ತುಘಲಕ್, ಹಯವದನ, ಯಯಾತಿ, ತಲೆದಂಡ, ನಾಗಮಂಡಲ ಈ ಎಲ್ಲ ನಾಟಕಗಳಲ್ಲೂ ಇದೇ ವಿನ್ಯಾಸವಿರುವುದನ್ನು ನಾವು ಗಮನಿಸಬೇಕು. ಅವರ ಇತ್ತೀಚಿನ ನಾಟಕ 'ಅಗ್ನಿ ಮತ್ತು ಮಳೆ' ಸಹ ಇದೇ ಪರಂಪರೆಗೆ ಸೇರುತ್ತದೆ.(ಪು. ೫೫)

ಈ ಮೇಲಿನ ಉಲ್ಲೇಖವನ್ನು ಗಮನಿಸಿದರೆ ಲೇಖಕರ ಎಲ್ಲ ಕೃತಿಗಳ ಸೃಜನಶೀಲತೆಯ ಪ್ರೇರಣೆಯನ್ನು ಹುಡುಕುವುದರ ಮೂಲಕ ಪುಸ್ತಕ ವಿಮರ್ಶೆಗೆ ತೊಡಗಿರುವುದನ್ನು ಗುರುತಿಸಬಹುದು. ಹಾಗೆ ಲೇಖಕರ ಕೃತಿಗಳ ಪ್ರೇರಣೆಯಲ್ಲಿಯ ಯಶಸ್ಸನ್ನು ದಾಖಲಿಸಿರುವುದನ್ನು ಕಾಣಬಹುದು. ಕೆಲವೊಮ್ಮೆ ಇನ್ನೊಬ್ಬರ ಪ್ರಮುಖರ ಮಾತುಗಳನ್ನು ಉಲ್ಲೇಖಿಸುವುದರ ಮೂಲಕ ಪುಸ್ತಕ ವಿಮರ್ಶೆಗೆ ತೊಡಗಿಕೊಳ್ಳುತ್ತಾರೆ. 'ಉಚಲ್ಯಾ'ವನ್ನು ವಿಮರ್ಶಿಸುತ್ತಾ, ಡಾ. ರಾಮಮನೋಹರ ಲೋಹಿಯಾ ರವರು ಹೇಳುವ *"ಸೃಷ್ಟಿಯೆಂದರೆ ಸ್ವತಂತ್ರವಾದ ಬದುಕು, ವೀರ್ಯವತ್ತಾದ ಬದುಕು"* ಮಾತನ್ನು ಉಲ್ಲೇಖಿಸಿ ಪುಸ್ತಕ ವಿಮರ್ಶೆಗೆ ತೊಡಗಿಕೊಂಡಿದ್ದಾರೆ. ಈ ಮುಖೇನ ಇವರು ಉಲ್ಲೇಖಿಸಿದ ವಿಚಾರಕ್ಕೆ ಪೂರಕವಾದ ಇತರ ವಿಚಾರಗಳನ್ನು ಜೋಡಿಸುತ್ತ ವಿಚಾರ ಸ್ಪಂದನ ಮಾಡುವುದು ಇವರ ಪುಸ್ತಕ ವಿಮರ್ಶೆಯ ಇನ್ನೊಂದು ವೈಖರಿ.

ಈ ಮೇಲಿನ ಉಲ್ಲೇಖವನ್ನು ಆರಂಭಿಸುವ ಮೊದಲ ಪ್ಯಾರ ಅಥವಾ ಸಾಲುಗಳೇ ಉಲ್ಲೇಖಗಳೂ ಆಗಿರುತ್ತವೆ. ಈ ರೀತಿಯ ಹಿನ್ನೆಲೆಯನ್ನು ಪುಸ್ತಕ ವಿಮರ್ಶಕರು ಯಾಕೆ ನಿರ್ಮಿಸಿಕೊಳ್ಳುತ್ತಾರೆ? ಈ ಪ್ರಶ್ನೆಯನ್ನು ಹಾಕಿಕೊಂಡಾಗ ಅದಕ್ಕೆ ಉತ್ತರಗಳು ಹಲವು ರೀತಿಯಲ್ಲಿ ಕಂಡುಬರುತ್ತವೆ. ಕೃತಿಯನ್ನು ವಿಮರ್ಶಿಸುವ ನೆಪದಲ್ಲಿ ಪುಸ್ತಕ ವಿಮರ್ಶೆಯನ್ನು ಸಮಷ್ಟಿಗೆಳೆಯುವ ಪ್ರಯತ್ನ ಇರಬಹುದು. ಒಂದು ಗಟ್ಟಿಯಾದ ಸೈದ್ಧಾಂತಿಕ ಚೌಕಟ್ಟನ್ನು ನಿರ್ಮಿಸಿಕೊಂಡು ಅದರ ಮುಖೇನ ಪ್ರಸ್ತುತ ಕೃತಿಯನ್ನು ಅರ್ಥೈವಿಸುವ ಯತ್ನದಲ್ಲಿ ತೊಡಗುವ, ಹಲವು ವಿಚಾರ ಸರಣಿಗಳ ಮೂಲಕ ಕೃತಿಯ ಮೌಲ್ಯ ವಿವೇಚನೆಗೆ ತೊಡಗುವುದು ಇದರಿಂದ ಸಾಧ್ಯವಾಗುತ್ತದೆ. ಹಾಗಾಗಿ ಪುಸ್ತಕ ವಿಮರ್ಶೆ ಕೇವಲ ಕೃತಿಯ ಒಳಗಡೆ ಸುತ್ತುವುದಿಲ್ಲ ಎಂಬ ಅಂಶ ಇದರಿಂದ ಹೊಳೆಯುತ್ತದೆ.

ನರಹಳ್ಳಿಯವರ ಪುಸ್ತಕ ವಿಮರ್ಶೆಯಲ್ಲಿ ಎದ್ದು ಕಾಣುವ ಇನ್ನು ಕೆಲವು ಅಂಶಗಳೆಂದರೆ ಕೆಲವೊಮ್ಮೆ ಅನಗತ್ಯ ವಿವರಗಳ ಚರ್ಚೆ ಅಥವಾ ಲೇಖಕರ ವಿವರಗಳ ಪ್ರಸ್ತಾಪ. ಲೇಖಕರು ಆ ಕ್ಷೇತ್ರಕ್ಕೆ ಪ್ರವೇಶಿಸಿದ ಹಿನ್ನೆಲೆ ಇತರ ಬಾಹ್ಯ ವಿವರಗಳ ನಿರೂಪಣೆ. ಇವುಗಳು ಪುಸ್ತಕ ವಿಮರ್ಶೆಯಲ್ಲಿ ಅಗತ್ಯವೇ? ಪ್ರಸ್ತುತ ಲೇಖಕರು ಆ ಕ್ಷೇತ್ರಕ್ಕೆ ಪ್ರವೇಶಿಸಿದ ಹಿನ್ನೆಲೆಯನ್ನು ಸ್ಪಷ್ಟಪಡಿಸುವುದಕ್ಕಾಗಿ ಇದ್ದಕ್ಕಿದ್ದ ಹಾಗೆ ಲೇಖಕರ ಬಗೆಗೆ ಇತರರು ಹೇಳಿದ ಮಾತುಗಳನ್ನು ಆರಿಸಿಕೊಂಡು ಉಲ್ಲೇಖಿಸುವುದು, ಇದೇ ಲೇಖಕರ ಬಗೆಗೆ ಇತರ ಪ್ರಸಿದ್ಧ ಲೇಖಕರು ಹೇಳಿದ ಮಾತುಗಳನ್ನು ಉಲ್ಲೇಖಿಸುವುದನ್ನು ಕಾಣಬಹುದು. ಇಂಥ ಒಂದು ಮಾದರಿ 'ಸಾಹಿತ್ಯ ಸಂಸ್ಕೃತಿ' ಕೃತಿಯ ಎಲ್ಲ ಪುಸ್ತಕ ವಿಮರ್ಶೆಗಳಲ್ಲೂ ಪ್ರಾರಂಭಿಕ ಎರಡು ಪುಟದವರೆಗೂ ಕೃತಿ ಪ್ರವೇಶಿಸಿರುವುದನ್ನು ಕಾಣಬರುವುದಿಲ್ಲ. ಬದಲಾಗಿ ಮೇಲಿನ ವಿವರಗಳೇ ಹಾಸು ಹೊಕ್ಕಿವೆ. ಸಾಹಿತ್ಯ ಸಂಸ್ಕೃತಿಯ ಪುಸ್ತಕ ವಿಮರ್ಶೆಗಳಲ್ಲಿ ಪುಸ್ತಕ ವಿಮರ್ಶಕರ ವಿಮರ್ಶಾ ಶೈಲಿಯು ಲೇಖಕರು ಹೇಳಿದ ಮಾತುಗಳನ್ನು ಆಯ್ದುಕೊಂಡು ಅದಕ್ಕೆ ಪೂರಕವಾದ ಇತರರ ಮಾತುಗಳಿಗೆ ತಮ್ಮ ಅಂಶವನ್ನು ಸೇರಿಸುವ ತುರ್ತು ಏನಿರುತ್ತದೆ? ಪ್ರತ್ಯೇಕವಾದ ಚರ್ಚೆಯಲ್ಲಿ ಏಕೆ ಗ್ರಹಿಸುವುದಿಲ್ಲ? ಎಂಬ ಪ್ರಶ್ನೆ ಎದುರಾಗುತ್ತದೆ. ಆದರೆ ಲೇಖಕರ ಮಾತುಗಳ ಮೂಲಕವೇ ಅವರ ಕೃತಿಯ ಧೋರಣೆಯನ್ನು ಗುರುತಿಸುವುದು ಪುಸ್ತಕ ವಿಮರ್ಶಕರ ಒಂದು ನಿಲುವಾಗಿದೆ.

ಆದರೆ ಪುಸ್ತಕ ವಿಮರ್ಶೆಗಳಲ್ಲಿ ಈ ಪುಸ್ತಕ ವಿಮರ್ಶಕರ ಉಲ್ಲೇಖಗಳಿಗೆ ಆಯ್ದುಕೊಳ್ಳುವುದು, ದೀರ್ಘವಾದ ಹೇಳಿಕೆಗಳನ್ನು ಅಥವಾ ಕೆಲವೊಮ್ಮೆ ಪುಟಗಳನ್ನು. ಆದರೆ ಅದಕ್ಕೆ ಪ್ರತಿಕ್ರಿಯಿಸುವ ಕಡೆ ಗಮನ ವಹಿಸದೆ ಅದಕ್ಕೆ ಪೂರಕವಾದ ಇನ್ನೊಬ್ಬರ ಹೇಳಿಕೆಯನ್ನು ತಂದು ಜೋಡಿಸುತ್ತಾರೆ. ಈ ಎರಡು ಹೇಳಿಕೆ ನೀಡುತ್ತಾರೆಯೇ ಹೊರತು ವಾಗ್ವಾದ ಬೆಳಸಲು ಬೇಕಾದ ಯಾವುದೇ ಸಿದ್ಧತೆಗಳನ್ನು ಹೇಳುವುದಿಲ್ಲ, ತಾವು ಭಾಗವಹಿಸುವುದಿಲ್ಲ, ಇದರ ಪುಸ್ತಕ ವಿಮರ್ಶೆಯಲ್ಲಿ ಪ್ರಶ್ನೆಗಳು ಪ್ರಶ್ನೆಗಳಾಗಿಯೇ ಉಳಿಯುತ್ತವೆ.

ಕೃತಿಯ ವಸ್ತುವನ್ನು ಸರಳವಾಗಿ, ಸಂಕ್ಷಿಪ್ತವಾಗಿ ಹೇಳುವುದು ಇವರ ಪುಸ್ತಕ ವಿಮರ್ಶೆಯ

ಇನ್ನೊಂದು ವಿಧಾನ. ಇಂತಹ ವಿಧಾನ, ಕೃತಿ ಒಳಗೊಂಡ ವಿವರಗಳು ಇವರ ಪುಸ್ತಕ ವಿಮರ್ಶೆಯ ೪ ಅಥವಾ ೫ ನೇ ಹಂತದಲ್ಲಿ ಬರುತ್ತದೆ. ಕೃತಿಯ ಸಾರವನ್ನು ಹೇಳುವುದರ ಜೊತೆಗೆ ಕುತೂಹಲಕರ ನಿಲುವನ್ನು ಓದುಗರಲ್ಲಿ ಉಂಟಾಗುವಂತೆ ಮಾಡುತ್ತಾರೆ. ಉದಾಹರಣೆಯಾಗಿ 'ಅಗ್ನಿ ಮತ್ತು ಮಳೆ' ಪುಸ್ತಕ ವಿಮರ್ಶೆಯಲ್ಲಿ ಸರಹಳ್ಳಿ ಸಾರಾಂಶವನ್ನು ಹೀಗೆ ಕ್ರೋಢಿಕರಿಸುತ್ತಾರೆ.

ಜ್ಞಾನಿಯಾದ ರೈಭ್ಯ ಮಹಿರ್ಷಿಗೆ ಇಬ್ಬರು ಮಕ್ಕಳು. ಪರಾವಸು ಹಾಗೂ ಅರವಸು. ಪರಾವಸು ತನ್ನ ತಂದೆಯಂತೆಯೇ ಜ್ಞಾನಿ. ಈಗ ಮಳೆಗಾಗಿ ನಡೆಯುತ್ತಿರುವ ಯಜ್ಞದ ಅಧ್ವರ್ಯು, ರೈಭ್ಯನ ತಮ್ಮ ತಪಸ್ವಿ ಭಾರದ್ವಜ. ಈತನ ಒಬ್ಬನೇ ಮಗ ಯವಕ್ರೀತ. ರೈಭ್ಯ ಹಾಗೂ ಆತನ ಮಗ ಬ್ರಾಹ್ಮಣದಿಂದ ಗೌರವಿಸಲ್ಪಡುವುದನ್ನು ತನ್ನ ತಂದೆ ನಿರ್ಲಕ್ಷಿತನಾದುದನ್ನು ಕಂಡ ಯುವಕ್ರೀತ ಇಂದ್ರನನ್ನು ಕುರಿತು ತಪಸ್ಸು ಮಾಡಿ 'ಬ್ರಹ್ಮಜ್ಞಾನ' ಪಡೆದು ಬಂದನು. ಈತ ಪ್ರೀತಿಸುತ್ತಿದ್ದ ವಿಶಾಖಳನ್ನು ಈಗ ಪರಾವಸು ಮದುವೆಯಾಗಿದ್ದಾನೆ. ಅರವಸು ರೈಭ್ಯನ ಮಗನಾದರೂ ಈ ಎಲ್ಲರಿಗಿಂತ ಭಿನ್ನ. ಆತ ಅಪ್ಪನ ಹಾಗೆ ಜ್ಞಾನಿಯಲ್ಲ, ಅಣ್ಣ ಪರಾವಸುವಿನಂತೆ ಮಹಾಯಜ್ಞದ ಅಧ್ವರ್ಯ ಆಗುವುದು ಸಾಧ್ಯವಿಲ್ಲ. ಯವಕ್ರೀತನ ಹಾಗೆ ತಪಸ್ವಿಯೂ ಅಲ್ಲ. ಈತನಿಗೆ ಹಾಡು ಬೇಕು, ಕುಣಿತ ಬೇಕು, ದಿನ ಬೆಳಗಾದರೆ ನಿಷಾದ ಕನ್ಯೆ ನಿತ್ತಿಲೆಯ ಒಡನಾಟ ಬೇಕು ಬ್ರಾಹ್ಮಣನಾಗಿಯೂ ಈತನ ಜಗತ್ತು ಬೇರೆ.

ಅರವಸು ಹಾಗೂ ನಿತ್ತಲೆ ಮದುವೆಯಾಗಲು ನಿರ್ಧರಿಸಿ ಹೊಸ ಜೀವನದ ಕನಸಿನಲ್ಲಿರುವಾಗ ನಿಜವಾದ ನಾಟಕ ಆರಂಭವಾಗುತ್ತದೆ. ನಿತ್ತಲೆಯನ್ನು ಮದುವೆಯಾಗಲು ಅರವಸು ಆಕೆಯ ಜನಗಳೆದುರು ಪ್ರಮಾಣ ಮಾಡಬೇಕು. ಆಕೆಗಾಗಿ ತನ್ನ ಜಾತಿ ಸಂಸ್ಕಾರವನ್ನು, ಜನ, ಆಚಾರ ಎಲ್ಲ ತೊರೆದು ಹೊರಟು ನಿಂತಿರುವ ಅರವಸು ಆ ಸಂಭ್ರಮದಲ್ಲಿದ್ದಾನೆ. ಆದರೆ ಹೋಗುವ ಮುನ್ನ ತನ್ನ ಚಿಕ್ಕಪ್ಪನ ಮಗ ಯವಕ್ರೀತ ಬ್ರಹ್ಮಜ್ಞಾನ ಪಡೆದು ಬಂದವನು ತನ್ನನ್ನು ನೋಡಿ ಹೋಗಬೇಕೆಂದು ಸೂಚಿಸಿದ್ದಾನೆ. ಅದಕ್ಕಾಗಿ ನಿತ್ತಿಲೆ ಅರವಸು ಆತನನ್ನು ನೋಡಲು ಹೋಗುತ್ತಾರೆ. ಯವಕ್ರೀತನ 'ದರ್ಶನ' ಅವರ ಬದುಕಿನ ದಿಕ್ಕನ್ನೆ ಬದಲಿಸಿಬಿಡುತ್ತದೆ. ಯವಕ್ರೀತನ ಜ್ಞಾನದ ಅಹಂಕಾರ ಆತನನ್ನು ಬಲಿ ತೆಗೆದುಕೊಳ್ಳುವುದು ಮಾತ್ರವಲ್ಲ, ಆ ಸೂತಕ ಅರವಸು ನಿತ್ತಿಲೆಯರ ಬದುಕಿನ ಮೇಲೆಯೂ ಕವಿದು ಅವರ ಬದುಕು ಅನೇಕ ತಿರುವುಗಳನ್ನು ಪಡೆದುಕೊಂಡು ಕಡೆಗೆ ದುರಂತದಲ್ಲಿ ಅಂತ್ಯವಾಗುತ್ತದೆ.

ಈ ಮೇಲಿನ ಉಲ್ಲೇಖದಲ್ಲಿ ಕೃತಿಯ ಒಟ್ಟಾರೆ ಆಂತರಂಗಿಕ ಕಥಾ ಸ್ವರೂಪವನ್ನು ಸರಳವಾಗಿ ಹೇಳಿರುವುದನ್ನು ಗಮನಿಸಬಹುದು. ಹೀಗೆ ಕಥೆಯನ್ನು ಸಂಕ್ಷಿಪ್ತವಾಗಿ ಹೇಳಿ ಅನಂತರ ಅದನ್ನು ವಿಶ್ಲೇಷಣೆಗೆ ಒಳಪಡಿಸುವುದು ಇವರ ಪುಸ್ತಕ ವಿಮರ್ಶೆಯ ಒಂದು ಕ್ರಮ.

ಕೆಲವೊಮ್ಮೆ ಮುನ್ನುಡಿ ಬೆನ್ನುಡಿಯ ವಿವರಗಳನ್ನು ದಾಖಲಿಸುತ್ತ ತಮ್ಮ ಪುಸ್ತಕ ವಿಮರ್ಶಾ ದೃಷ್ಟಿಯನ್ನು ಸಮರ್ಥಿಸುತ್ತಾರೆ. 'ಉಚಲ್ಯಾ' ಪುಸ್ತಕ ವಿಮರ್ಶೆಯಲ್ಲಿ (ಪು. ೬೫) 'ಬಿಸಿಲ ಹನಿಗಳು' ಪುಸ್ತಕ ವಿಮರ್ಶೆಯಲ್ಲಿ (ಪು. ೬೯), ಈ ಅಂಶವನ್ನು ಗಮನಿಸಬಹುದು. ಈ ಪುಸ್ತಕ ವಿಮರ್ಶೆಗಳಲ್ಲಿ ಮುನ್ನುಡಿ ಬೆನ್ನುಡಿಗಳನ್ನು ಆರಂಭ ಮತ್ತು ಅಂತ್ಯದಲ್ಲಿ ಬಳಸಿಕೊಂಡಿಲ್ಲ. ಆದರೆ ಚರ್ಚೆ ಮಾಡುತ್ತಿರುವ ಸಂದರ್ಭದಲ್ಲಿ ತಮ್ಮ ಚಿಂತನೆಗಳಿಗೆ ಪೂರಕವಾಗಿ ಬಳಸಿಕೊಂಡಿದ್ದಾರೆ.

ಇವರು ತಮ್ಮ ಪುಸ್ತಕ ವಿಮರ್ಶೆ ಪ್ರಸ್ತುತ ಕೃತಿಯನ್ನು ಚರ್ಚಿಸುವಾಗ ಬೇರೆ ಖ್ಯಾತ ಲೇಖಕರ ಜೊತೆ ಹೋಲಿಸುವುದು, ಅವರ ಕೃತಿಗಳ ವೈಶಿಷ್ಟವನ್ನು ಕುರಿತು ಹೇಳುವುದು. ಬೇರೆ ಬೇರೆ ಲೇಖಕರ ಕೃತಿಗಳ ಪ್ರಮುಖ ಅಂಶ ಗುರುತಿಸಿ ಅದರ ಮುಖೇನ ಪ್ರಸ್ತುತ ಕೃತಿಯನ್ನು ವಿಶ್ಲೇಷಿಸುವುದು ಮಾಡುತ್ತಾರೆ. ಉದಾ:- ಅನಂತಮೂರ್ತಿಯವರ 'ಭವ' ಕೃತಿಯನ್ನು ವಿಮರ್ಶಿಸುವಾಗ ಶಿವರಾಮ ಕಾರಂತರ 'ಮರಳಿ ಮಣ್ಣಿಗೆ' ಕೃತಿಯ ಬಂಧದ ಬಗ್ಗೆ, ತೇಜಸ್ವಿಯವರ 'ಜುಗಾರಿಕ್ರಾಸ್' ವಿಮರ್ಶಿಸುವಾಗ ಯಶವಂತ ಚಿತ್ತಾಲರ 'ಪುರುಷೋತ್ತಮ' ಕೃತಿಯ ಬಗ್ಗೆ ಕೆಲವೊಮ್ಮೆ ಅದೇ ಲೇಖಕರ ಹಿಂದಿನ ಕೃತಿಗಳಲ್ಲಿನ ವಸ್ತುವನ್ನು ಕುರಿತು ಚರ್ಚಿಸುತ್ತಾರೆ, 'ಅಗ್ನಿ ಮತ್ತು ಮಳೆ' ವಿಮರ್ಶಿಸುವಾಗ ಅದರ ಮೂಲಕೃತಿ ಯವಕ್ರೀತ ಆಖ್ಯಾನದ ವಸ್ತು ಬಂಧವನ್ನು, ವಿಶಾಖಳ ಪಾತ್ರವನ್ನು ಹೇಳುವಾಗ ಸಂಸ್ಕಾರದ ಚಂದ್ರಿಯನ್ನು ನೆನೆಪಿಸಿಕೊಳ್ಳುವುದು ಅದರೊಂದಿಗೆ ಹೋಲಿಸುವುದು ಕಾಣಬಹುದು - ಇದು ಇವರ ಪುಸ್ತಕ ವಿಮರ್ಶೆ ಇನ್ನೊಂದು ಮಾದರಿ.

ಇವರು ತಮ್ಮ ಪುಸ್ತಕ ವಿಮರ್ಶೆಗಳಲ್ಲಿ ಕೆಲವೊಮ್ಮೆ ಕೃತಿ ಪ್ರಕಾರದ ಬಗೆಗೂ ಚರ್ಚೆ ಮಾಡುತ್ತಾರೆ. ಇಲ್ಲಿ ಪ್ರಕಾರದ ಮಹತ್ವ ಕುರಿತ ಚರ್ಚೆ ಮತ್ತು ಪ್ರಾಮುಖ್ಯತೆಗೆ ಕಾರಣಗಳನ್ನು ಹುಡುಕುವ ಯತ್ನವಿದೆ. ಇಷ್ಟೇ ಅಲ್ಲದೆ ಇವರ ಇನ್ನೊಂದು ವಿಮರ್ಶಾ ವಿಧಾನವೆಂದರೆ ಪ್ರಕಾಶಕರನ್ನು , ಮುದ್ರಕರನ್ನು, ಲೇಖಕರನ್ನು ಕೆಲವೊಮ್ಮೆ ಕೃತಿಯ ರಂಗಸಾಧ್ಯತೆ ಕುರಿತು ಸ್ಮರಿಸುವುದು.

ಈ ಮೇಲಿನ ಕೆಲವು ಮುಖ್ಯ ನಿಲುವುಗಳನ್ನಿಟ್ಟುಕೊಂಡು ಕೆಲವು ಮುಖ್ಯ ಅಂಶಗಳನ್ನು ಹೀಗೆ ಗುರುತಿಸಬಹುದು.

i ಆರಂಭದಲ್ಲಿ ಕೃತಿಯಿಂದ ಉಲ್ಲೇಖಿಸುವುದು / ಲೇಖಕರು ಹೇಳಿದ್ದನ್ನು ಉಲ್ಲೇಖಿಸುವುದು.

ii ಕೃತಿ ಬಗೆಗೆ ಇತರರು ಹೇಳಿದ್ದನ್ನು ಉಲ್ಲೇಖಿಸುವುದು.

iii ಪ್ರಮುಖ ವಾಗ್ವಾದಗಳನ್ನು ಚರ್ಚಿಸುವುದು.

iv ಪ್ರಮುಖ ಲೇಖಕರ / ಇತರ ಲೇಖಕರ ಎರಡು ಚಿಂತನೆಯನ್ನು ಜೋಡಿಸಿ ಚರ್ಚಿಸಲು ಯತ್ನಿಸುವುದು.

v ಕೃತಿಯ ವಸ್ತುವನ್ನು ಸರಳವಾಗಿ, ಸಂಕ್ಷಿಪ್ತವಾಗಿ ಹೇಳುವುದು.

vi ಕೃತಿಯಲ್ಲಿನ ಕೆಲವು ಪ್ಯಾರಗಳನು / ಹೇಳಿಕೆಗಳನ್ನು ಯಥಾವತ್ತಾಗಿ ಉಲ್ಲೇಖಿಸುವುದು.

vii ಸಾರಾಂಶದ ರೀತಿಯಲ್ಲಿ ವಿಶ್ಲೇಷಣೆ ಮಾಡುವುದು.

viii ಇನ್ನೊಬ್ಬ ಲೇಖಕರ ಕೃತಿ / ಅವರ ಇತರ ಕೃತಿಯ ಪಾತ್ರಗಳ ಜೊತೆ ತುಲನಾತ್ಮಕವಾಗಿ ಚರ್ಚೆ ಮಾಡುವುದು.

ಈ ಪ್ರಮುಖ ಅಂಕಗಳು 'ಸಾಹಿತ್ಯ ಸಂಸ್ಕೃತಿ' ಕೃತಿಯಲ್ಲಿನ ಪುಸ್ತಕ ವಿಮರ್ಶೆಗಳಲ್ಲಿ ಕಂಡು ಬರುತ್ತವೆ. ಅದರೊಂದಿಗೆ ನರಹಳ್ಳಿ ಬಾಲಸುಬ್ರಹ್ಮಣ್ಯನವರು ಪುಸ್ತಕ ವಿಮರ್ಶಾ ನಿಲುವನ್ನು ನಿಚ್ಚಳವಾಗಿ ಗುರುತಿಸಬಹುದು.

೫.೩ ಒಂದು ಸಂವೇದನೆ ಬಗೆಗಿನ ಪುಸ್ತಕ ವಿಮರ್ಶೆ

ಮಹಿಳಾ ಸಂವೇದನೆ

ಮಹಿಳೆಯು ಸಾಹಿತ್ಯದಲ್ಲಿ ಕಾಣಿಸಿಕೊಂಡಿದ್ದು ಬಹಳ ಹಿಂದೆಯೆ ಆದರೂ ಅವರ ಬಗೆಗೆ ಖಚಿತವಾದ ಅಧ್ಯಯನ ಮತ್ತು ವ್ಯಾಪಕತೆ ದೊರಕಿದ್ದು ತೀರ ಇತ್ತೀಚೆಗೆ. ಇದು ಪುಸ್ತಕ ವಿಮರ್ಶೆಯಲ್ಲೂ ಕೃತಿಗಳನ್ನು ಕುರಿತು ಪುಸ್ತಕ ವಿಮರ್ಶಾ ಸ್ವರೂಪಕ್ಕೂ ಅನ್ವಯಿಸಿ ಹೇಳಬಹುದು. ಈ ಹಿಂದೆ ಚರ್ಚಿಸಲಾದಂತೆ ತಿರುಮಲಾಂಬರ ಗ್ರಂಥದ ಬಗೆಗೆ ಮಾಸ್ತಿ ಚರ್ಚಿಸಿದ್ದೆ ಮೊದಲ ಸ್ತ್ರೀ ಕುರಿತ ಪುಸ್ತಕ ವಿಮರ್ಶೆ ಎಂದು ಗುರುತಿಸಬಹುದು.

ದಿನಪತ್ರಿಕೆ, ವಾರಪತ್ರಿಕೆ, ಇತರ ಪತ್ರಿಕೆಗಳಲ್ಲಿ ಬರುತ್ತಿರುವ ಮಹಿಳಾ ಕೃತಿಗಳ ಬಗೆಗೆ ಬರುತ್ತಿರುವ ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೆ ಅವು ಅನುಕಂಪದ ನೆಲೆಯಲ್ಲಿ, ಕೆಲವೊಮ್ಮೆ ತೀರ ಅಲಕ್ಷ್ಯಕ್ಕೆ ಗುರಿಯಾದುದರ ಅಭಿವ್ಯಕ್ತಿಯೆಂದು ಅತಿ ಪ್ರಶಂಸೆ ಕೊಡುವ ಸ್ವರೂಪದಲ್ಲಿವೆ. ಅವುಗಳೆಲ್ಲ ಬಹುಪಾಲು ಸ್ತ್ರೀಯರ ಕೃತಿಗಳನ್ನು ಪುರುಷ ವಿಮರ್ಶಕರು ವಿಮರ್ಶಿಸುವುದರಿಂದ ಕೆಲವೊಮ್ಮೆ ಅಪಾಯಕಾರಿ ನಿಲುವುಗಳು ವ್ಯಕ್ತವಾಗುವುದನ್ನು ನಿಚ್ಚಳವಾಗಿ ಗುರುತಿಸಬಹುದು. ಆದರೆ ಕೆಲವೊಮ್ಮೆ ಇಂತಹ ಅತಿರೇಕದ ನಿಲುವುಗಳು ವ್ಯಕ್ತವಾಗದಿದ್ದರೂ ಸ್ತ್ರೀ ಸಂವೇದನೆಯ ಕೃತಿಗಳನ್ನು ಸ್ತ್ರೀಯರೇ ವಿಮರ್ಶಿಸಿದರೆ ಪುರುಷರು ವಿಮರ್ಶಿಸುವುದಕ್ಕಿಂತ ಭಿನ್ನ ನೆಲೆಯು ಕಂಡುಬರುವುದು ಸಹಜ. ಹಾಗಾಗಿ ಇಲ್ಲಿ ಸ್ತ್ರೀ ಅಭಿವ್ಯಕ್ತಿಯ ಪತ್ರಿಕೆಯಾದ 'ಮಹಿಳಾ ಜಾಗೃತಿ' ಪತ್ರಿಕೆಯ ಪುಸ್ತಕ ವಿಮರ್ಶೆಗಳನ್ನು ಇಟ್ಟುಕೊಂಡು ಮಹಿಳಾ ಸಂವೇದನೆಯ ಕೃತಿಗಳಿಗೆ ಯಾವ ಸ್ವರೂಪದ ಪುಸ್ತಕ ವಿಮರ್ಶೆ ಬರುತ್ತಿದೆ ಎಂಬುದನ್ನು ಗುರುತಿಸಲು ಯತ್ನಿಸಲಾಗಿದೆ. ಅದರೊಂದಿಗೆ ಮಹಿಳಾ ಸಂವೇದನೆಯ ಕೃತಿಗಳ ಬಗೆಗೆ ಪುಸ್ತಕ ವಿಮರ್ಶೆಯು ಯಾವ ಧೋರಣೆಯನ್ನು ಒಳಗೊಂಡಿದೆ ಎಂಬುದನ್ನು ಇಲ್ಲಿ ಶೋಧಿಸಲು ಯತ್ನಿಸಲಾಗಿದೆ.

'ಮಹಿಳಾ ಜಾಗೃತಿ' ಮುಖ್ಯವಾಗಿ ಮಹಿಳಾ ಪರವಾದ ಹೋರಾಟದ ಪತ್ರಿಕೆ. ಹೋರಾಟದ ಮೂಲಕ ಅಭಿವ್ಯಕ್ತಿಯನ್ನು ಪಡೆದುಕೊಂಡ ಪತ್ರಿಕೆ. ಈ ಪತ್ರಿಕೆಯ ಆಶಯವೇ ಮಹಿಳೆಯರ ಮೇಲಿನ ದೌರ್ಜನ್ಯಕ್ಕೆ ಪ್ರತಿಭಟನಾತ್ಮಕವಾಗಿ ಹೊರ ಹೊಮ್ಮುವ, ತನ್ಮೂಲಕ ದಮನಿತ ಬಹುಸಂಖ್ಯಾತ ಮಹಿಳೆಯರಿಗೆ ಧ್ವನಿಯಾಗುವುದಾಗಿದೆ. ಈ ಪತ್ರಿಕೆಯು ಮಹಿಳೆಯರ ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಪರಿಸ್ಥಿತಿಗಳ ಬಗ್ಗೆ ತನ್ನ ವಿಶ್ಲೇಷಣೆಯನ್ನು, ಗ್ರಹಿಕೆಯನ್ನು ವ್ಯಕ್ತಪಡಿಸುತ್ತದೆ. ಈ ಪತ್ರಿಕೆ ಸಾಮಾಜಿಕ ಹೋರಾಟದ ಮುಖವಾಣಿಯಾಗಿ ನಿರ್ವಹಿಸಲು ನಿರ್ಧರಿಸಿದಾದ್ದರಿಂದ ಪುಸ್ತಕ ವಿಮರ್ಶೆಗಳು ಚರ್ಚೆ ಮಹತ್ವದವೇ ಆಗಿವೆ.

ಮಹಿಳಾ ಜಾಗೃತಿಯು ತಮ್ಮ ಪತ್ರಿಕೆಯಲ್ಲಿನ ಪುಸ್ತಕ ವಿಮರ್ಶೆಗಳ ಧೋರಣೆಯನ್ನು ಹೀಗೆ ಘೋಷಿಸಿಕೊಂಡಿದೆ. *ಜಾಗೃತಿಯಲ್ಲಿ ನಾವು ಪ್ರಕಟಿಸುವ ಕೃತಿ ವಿಮರ್ಶೆ ಅಂಕಣದ ಮೂಲಕ ಮಹಿಳೆಯರ ಕುರಿತಾದ ಪುಸ್ತಕಗಳನ್ನು ಓದಲು ಹಾಗೂ ಅವುಗಳಲ್ಲಿರುವ ವಿಷಯಗಳ ಬಗ್ಗೆ ಗಂಭೀರವಾಗಿ ಆಲೋಚಿಸಲು ಮಹಿಳೆಯರನ್ನು ಪ್ರೇರೆಪಿಸುವುದು ನಮ್ಮ ಉದ್ದೇಶ.* ಹೀಗಾಗಿ ಈ ಪತ್ರಿಕೆಯ ಪುಸ್ತಕ ವಿಮರ್ಶೆಗಳ ನಿಲುವು ಮಹಿಳಾ ಕೃತಿಗಳ ಓದಿಗೆ ತೊಡಗುವಂತೆ ಮಾಡುವುದು ಮತ್ತು ಗಂಭೀರ ಚರ್ಚೆಗೆ ಪೂರಕವಾದಂತಹ ವಾತಾವರಣ ಸೃಷ್ಟಿಸುವುದು. ಈ ಹಿನ್ನೆಲೆಯಲ್ಲಿ ಈ ಪತ್ರಿಕೆಯಲ್ಲಿ ಇಲ್ಲಿಯವರೆಗೆ ಪ್ರಕಟವಾದ ಎಲ್ಲ ಪುಸ್ತಕ ವಿಮರ್ಶೆಗಳನ್ನು ಗಮನಿಸಿದಾಗ ಅವುಗಳೆಲ್ಲ ಮಹಿಳಾ ಪರವಾದ ದೃಷ್ಟಿಕೋನ ಹೊಂದಿರುವುದು ಒಂದಾದರೆ, ಬಹುಪಾಲು ಸ್ತ್ರೀವಾದಿ ನಿಲುವುಗಳನ್ನು ಒಳಗೊಂಡ, ಸೈದ್ಧಾಂತಿಕ ನಿಲುವುಗಳನ್ನು ಒಳಗೊಂಡ ಸೈದ್ಧಾಂತಿಕ ಕೃತಿಗಳಾಗಿರುವುದು ಮತ್ತು ಮಹಿಳೆಯರೇ ಬರೆದಿರುವ ಕೃತಿಗಳಾಗಿರುವುದು ಇನ್ನೊಂದಾಗಿದೆ.

ಈ ಪುಸ್ತಕ ವಿಮರ್ಶೆಗಳ ವಿಶಿಷ್ಟತೆಯೆಂದರೆ ಪ್ರಸ್ತುತ ಕೃತಿಗಳನ್ನು ಮಹಿಳಾ ವಿಮರ್ಶಕರೇ ವಿಮರ್ಶಿಸುವುದಾಗಿದೆ. ಹಾಗಾಗಿ ಪುರುಷರು ಮಹಿಳಾ ಕೃತಿಗಳ ಬಗೆಗೆ ತೋರಿದ ಪ್ರತಿಕ್ರಿಯೆಗಿಂತ ಇಲ್ಲಿನ ಪುಸ್ತಕ ವಿಮರ್ಶೆಗಳು ಭಿನ್ನವಾಗಿವೆ. ಈ ಪತ್ರಿಕೆಯಲ್ಲಿ ಬರುವ ಪುಸ್ತಕ ವಿಮರ್ಶೆಗಳು ನೇರವಾಗಿ ಸ್ತ್ರೀವಾದದ ಚರ್ಚೆಯನ್ನು ಮಾಡುತ್ತಿದ್ದರೂ ಎಲ್ಲ ಪುಸ್ತಕ ವಿಮರ್ಶೆಗಳು ಒಂದೇ ತೆರನಾಗಿಲ್ಲ, ಒಂದು ಮತ್ತೊಂದಕ್ಕಿಂತ ಭಿನ್ನವಾಗಿದೆ.

ಮಹಿಳಾ ಜಾಗೃತಿಯ ಮೊದಲ ಸಂಚಿಕೆಯಲ್ಲಿನ ಪುಸ್ತಕ ವಿಮರ್ಶೆಯಲ್ಲಿಯೇ ಈ ತರಹದ ನಿಲುವುಗಳು ಕಂಡು ಬರುತ್ತವೆ. ಅಲ್ಲಿ 'ದೇವಿ ಪ್ರಸಾದ್ ಚಟ್ಟೋಪಧ್ಯಾಯ'ರ 'ಮಾತೆಯರು ಮಾನ್ಯರಾಗಿದ್ದಾಗ' ಕೃತಿಯನ್ನು ಹರಣಿಯವರು ವಿಮರ್ಶಿಸುತ್ತಾ, ಮಹಿಳಾ ಮೌಲ್ಯಗಳು ಬೆಳಕಿಗೆ ಬರಲು ತಡೆಯೊಡ್ಡಿದ ಪಾರಂಪರಿಕ ಕಾರಣಗಳನ್ನು ಹುಡುಕುತ್ತಾರೆ.[೧] ಹಾಗೆಯೇ ಮಹಿಳೆ ಇತ್ತೀಚಿನ ದಶಕದಲ್ಲಿ ಇಟ್ಟ ದಿಟ್ಟ ಹೆಜ್ಜೆಯನ್ನು ಪ್ರಶಂಸಿಸುವ ಮುಖೇನ ಪುಸ್ತಕ ವಿಮರ್ಶೆಯ ಆರಂಭಕ್ಕೆ ತೊಡಗುತ್ತಾರೆ. ಒಂದು ಸಾಂಸ್ಕೃತಿಕ ಹಿನ್ನೆಲೆಯಲ್ಲಿ ಮಹಿಳೆಯ ಸಮಸ್ಯೆಗಳ ಚರ್ಚೆಯೊಂದಿಗೆ ಕೃತಿಯ ಬಗೆಗೆ ಮೆಚ್ಚುಗೆ ಸೂಚಿಸುತ್ತಾರೆ. ಮಹಿಳಾ ಕೃತಿಗಳ ಅಭಾವದ ಕೊರತೆಯನ್ನು ನೀಗಿಸುವ ಯತ್ನದಲ್ಲಿ ಕೃತಿ ಪ್ರಕಟಗೊಂಡಿರುವುದನ್ನು ಶ್ಲಾಘಿಸುತ್ತಾರೆ.

ಹಾಗೆಯೇ ಹೆಚ್. ಎಸ್. ಪಾರ್ವತಿಯವರ 'ನೋವ ನುಂಗಿ ನಕ್ಕವರು' [೨] ಕೃತಿ ವಿಮರ್ಶೆಯಲ್ಲಿಯೂ ಸಹ ಕೃತಿ ವಿಮರ್ಶೆಯ ಆರಂಭದಲ್ಲಿ ಹಲವು ಸ್ತ್ರೀಪರ ವಿಚಾರಗಳ ಚರ್ಚೆ ಮಾಡುತ್ತಾರೆ. ರಾಮಾಯಣ, ಮಹಾಭಾರತದಂಥ ಕೃತಿಗಳನ್ನು ಸ್ತ್ರೀಕೇಂದ್ರಿತ ನೆಲೆಗಳಿಂದ ಚರ್ಚಿಸುವ ಅಗತ್ಯ ಮತ್ತು ಇಂಥ ಪ್ರಯತ್ನಗಳು ನಡೆದಿರುವ ಬಗ್ಗೆ ಪ್ರಸ್ತಾಪಿಸುತ್ತಾರೆ. ಹಾಗಾಗಿ ಎಚ್. ವಿ. ಸಾವಿತ್ರಮ್ಮನವರ ಸೀತೆ, ರಾಮ, ರಾವಣ, ಕನ್ನಡ ಕಾದಂಬರಿಯನ್ನು, ರಂಗನಾಯಕಮ್ಮನವರ 'ರಾಮಾಯಣ ವಿಷವೃಕ್ಷಂ' ಗಳನ್ನು ಪ್ರಸ್ತಾಪಿಸಿ ಚರ್ಚಿಸುತ್ತಾರೆ. ಹಾಗೆಯೇ ಜಾನಪದ ಪುರಾಣಗಳು ಸ್ತ್ರೀ ಪರವಾಗಿರುವುದರ ಬಗೆಗಿನ ಚರ್ಚೆಮಾಡಿ ಪ್ರಸ್ತುತ ಕೃತಿಯ ಚರ್ಚೆಗೆ ತೊಡಗುತ್ತಾರೆ.

ವಿಜಯಾದಬ್ಬೆಯವರ 'ನಾರಿ : ದಾರಿ ದಿಗಂತ' ಪುಸ್ತಕ ವಿಮರ್ಶೆಯ ಆರಂಭದಲ್ಲಿ "ಹುಟ್ಟಿನಿಂದ ಗಂಡರಾದವರೆಲ್ಲ ಪುರುಷವಾದಿಗಳೂ ಅಲ್ಲ. ಹುಟ್ಟಿನಿಂದ ಸ್ತ್ರೀವಾದಿಗಳೂ ಅಲ್ಲ. ಸ್ತ್ರೀವಾದ ಎಂಬುದು ಒಂದು ಚಿಂತನಾ ಕ್ರಮವಾದ್ದರಿಂದ ಅಂಥ ಚಿಂತನಾ ಕ್ರಮವನ್ನು ಒಪ್ಪುವ ಸ್ತ್ರೀ ಪುರುಷರೆಲ್ಲರೂ ಸ್ತ್ರೀವಾದಿಗಳು" [೩] ಎಂದು ಪೂರ್ವ ಹಿನ್ನೆಲೆಯಾಗಿ ಸ್ತ್ರೀಪರ ಚಿಂತನೆಗಳನ್ನು ಚರ್ಚಿಸುತ್ತಾರೆ. ಆ ಮುಖೇನ ಕೃತಿ ಪ್ರವೇಶ ಮಾಡಿ ಪ್ರಸ್ತುತ ಕೃತಿ ಸ್ತ್ರೀಪರ ಚಿಂತನೆಗಳನ್ನು ಒಳಗೊಂಡಿದೆಯೇ ಎಂಬುದನ್ನು ಮೌಲ್ಯಮಾಪನ ದೃಷ್ಟಿಯಿಂದ ಚರ್ಚಿಸುತ್ತಾರೆ.

ಕೆಲವೊಮ್ಮೆ ಮಹಿಳೆಯ ಸಾಧನೆಗಳನ್ನು ಕುರಿತ ವಿವರ ಪುಸ್ತಕ ವಿಮರ್ಶೆಯಲ್ಲಿ ಬಂದಿರುತ್ತದೆ. ಅದನ್ನು ಎದ್ದು ಕಾಣುವಂತೆ ಕಪ್ಪು ಅಕ್ಷರದಲ್ಲಿ ಪ್ರಕಟಿಸುವುದರ ಮುಖೇನ ಪತ್ರಿಕೆ ಮತ್ತು ಪುಸ್ತಕ ವಿಮರ್ಶೆ ಮಹಿಳಾ ಪರವಾದ ದೃಷ್ಟಿಕೋನವನ್ನು ಒಳಗೊಂಡಿರುವುದನ್ನು ಸಾಬೀತುಪಡಿಸುತ್ತದೆ.

ಲೇಖಕರ ಸ್ವನಿಲುವುಗಳ ಬಗೆಗೆ ಆಕ್ಷೇಪಗಳನ್ನೆತ್ತಿ ಅವು ಪುರುಷ ಪ್ರಧಾನ ಮೌಲ್ಯಗಳಿಂದ ಕೂಡಿದ್ದರೆ ಅವುಗಳನ್ನು ಖಂಡಿಸುತ್ತಾರೆ. ಲೇಖಕರ ತಪ್ಪು ನಿಲುವಿನ ಬಗೆಗೆ ಪ್ರತಿಕ್ರಿಯಿಸಿ ಅದರೊಂದಿಗೆ ತಮ್ಮ ವಿವರಗಳ ಮೂಲಕ ವಿಶ್ಲೇಷಣೆ ಮಾಡಿ ಮೌಲ್ಯಮಾಪನದಲ್ಲಿ ತೊಡಗುತ್ತಾರೆ.

ಮಾತೃ ಪ್ರಧಾನ ಸಮಾಜವನ್ನು ವಿವರಿಸುವಾಗ ಅದು ಇಂದಿನ ಪುರುಷ ಪ್ರಧಾನ ಸಮಾಜಕ್ಕೆ ತದ್ವಿರುದ್ಧವಾದ ಸಮಾಜವಾಗಿತ್ತು ಎಂಬ ಅರ್ಥ ಬರುವಂತೆ ಬರೆದು ಕೊಂಚ ಎಡವಿದ್ದಾರೇನೋ ಅನಿಸುತ್ತದೆ. ಈ ಬಗ್ಗೆ ಇತಿಹಾಸಕಾರರ ನಡುವೆಯೂ ತೀವ್ರ ಚರ್ಚೆಗಳು ನಡೆದಿವೆ. ಅದೇನೇ ಇದ್ದರೂ ಮಹಿಳೆಗೆ ಪ್ರಧಾನ ಸ್ಥಾನವಿತ್ತು ಎಂಬುದು ನಿಜವಾದರೂ ಇಂದಿನ ಸಮಾಜದ ತದ್ವಿರುದ್ಧ ಸ್ವರೂಪವನ್ನು ಅಂದಿನ ಸಮಾಜ ಹೊಂದಿತ್ತು ಎಂಬುವುದು ಸರಳೀಕರಣವಾಗುತ್ತದೆ. ಅದು ಸರಿಯಲ್ಲ [೪]

ಸೀತೆಯ ಪಾತ್ರ ವಿಮರ್ಶೆಯಲ್ಲಿ ಕಂಡು ಬರುವ ತೀಕ್ಷ್ಣತೆ ಉಳಿದ ಬಹಳಷ್ಟು ಪಾತ್ರಗಳ ವಿಮರ್ಶೆಯಲ್ಲಿ ಕಂಡು ಬರದೆ, ಸ್ವಲ್ಪ ನಿರಾಶೆಯಾಗುತ್ತದೆ. ಕೆಲವೊಮ್ಮೆ ಪಾತ್ರ ವಿಮರ್ಶೆಯಲ್ಲಿ ಸ್ತ್ರೀವಾದಿ ದೃಷ್ಟಿಯೇ ಮಂದವಾದಂತೆ ಅನ್ನಿಸುತ್ತದೆ. .... ಪಾರ್ವತಿಯವರು ರಾಮಾಯಣದ ಬಗ್ಗೆ ವಿವರವಾಗಿ ಅಧ್ಯಯನ ನಡೆಸಿರುವುದು ಪುಸ್ತಕ ಓದುವಾಗ ಸ್ಪಷ್ಟವಾಗುತ್ತದೆ. ಆದರೆ ಸುಮಾರು ಒಂದು ದಶಕದ ಹಿಂದೆ ತೀವ್ರ ವಿವಾದಕ್ಕೆ, ಸಂಪ್ರದಾಯವಾದಿಗಳ ಖಂಡನೆಗೆ ಒಳಗಾದ ಪೋಲಂಕಿ ರಾಮಮೂರ್ತಿಯವರ 'ಸೀತಾಯಣ' ಕೃತಿಯ ಬಗ್ಗೆ ಪಾರ್ವತಿಯವರು ಏಕೆ ಮೌನ ವಹಿಸಿದ್ದಾರೆ ಎನ್ನುವ ಪ್ರಶ್ನೆ ಮನಸ್ಸಿನಲ್ಲಿ ಏಳುತ್ತದೆ. [೫]

"ಮಹತ್ವಾಕಾಂಕ್ಷೆಯ ಕಥಾ ಸಂಕಲನ ಆಯ್ಕೆಯ ಮಾನದಂಡಗಳ ಬಗ್ಗೆ ನಿಖರವಾದ ಚರ್ಚೆ, ವಿವರಗಳು ಇಲ್ಲದಿರುವುದು ಈ ಸಂಕಲನದ ದೊಡ್ಡ ನ್ಯೂನತೆ" [೬]

"ಆಧುನಿಕತೆ ಮತ್ತು ಸ್ತ್ರೀವಾದಿ ಚಿಂತನೆಯ ನಡುವಿನ ಸಂಕೀರ್ಣ ಸಂಬಂಧದ ಬಗ್ಗೆ ಇನ್ನಷ್ಟು ಚರ್ಚೆಯ ಅಗತ್ಯ ಇದೆ ಎನ್ನಿಸುತ್ತದೆ." [೭]

ಈ ಮೇಲಿನವುಗಳು ಕೃತಿಯ ಕೊರತೆಯನ್ನು ಎತ್ತಿ ತೋರಿಸುವ ಒಂದೆರಡು ಉದಾಹರಣೆಗಳಷ್ಟೆ. ಒಂದರಲ್ಲಿ ಮಾತೃ ಪ್ರಧಾನ ಮತ್ತು ಪುರುಷ ಪ್ರಧಾನ ಸಮಾಜಗಳ ಚರ್ಚೆಯಲ್ಲಿ ಮಾತೃ ಪ್ರಧಾನ

ಸಮಾಜದ ಬಗೆಗೆ ಲೇಖಕರು ತಪ್ಪಾಗಿ ತಿಳಿದುಕೊಂಡ ವಿವರಗಳ ಬಗ್ಗೆ ಆಕ್ಷೇಪವೆತ್ತಿ ಅದನ್ನು ವಿಶ್ಲೇಷಿಸುವುದನ್ನು ಕಾಣಬಹುದು. ಮತ್ತೊಂದರಲ್ಲಿ ಪಾತ್ರಗಳ ಬಗೆಗೆ ಚರ್ಚೆ ಮಾಡುತ್ತಾ ನಾಯಕಿ ಕೇಂದ್ರಿತವಾಗುವ ಅಪಾಯವನ್ನು ಹೇಳುತ್ತಾರೆ. ಪುರುಷ ಬರೆದ ಕೃತಿಯನ್ನು ಗಮನಿಸಿಲ್ಲದಿರುವುದನ್ನು ಪ್ರಶ್ನಿಸುತ್ತಾರೆ. ಅಂದರೆ ಸ್ತ್ರೀಗೆ ಸಂಬಂಧಿಸಿದ ವಿಚಾರಗಳು ಸ್ತ್ರೀ ಬರದವುಗಳು ಮಾತ್ರ ಖಚಿತವಲ್ಲ ಎಂಬ ಮೂಲಭೂತವಾದಂಥ ಉತ್ತರವನ್ನು ಇದರ ಮುಖೇನ ಸ್ಪಷ್ಟಪಡಿಸುತ್ತಿದ್ದಾರೆ. ಮತ್ತೊಂದರಲ್ಲಿ ಒಬ್ಬ ಪುರುಷ ಸಂಪಾದಕನು ಸಂಕಲನಕ್ಕೆ ಆಯ್ಕೆ ಮಾಡಿಕೊಂಡ ಕತೆಗಳನ್ನು ಕುರಿತು ಆಯ್ಕೆ ಮಾನದಂಡಗಳ ನಿಲುವುಗಳನ್ನು ಪ್ರಶ್ನಿಸಿ ಅದು ಕೃತಿಯ ಅಪಯಶಸ್ಸಿಗೆ ಕಾರಣವಾಗುವುದನ್ನು ಗುರುತಿಸುತ್ತಾರೆ. ಕೊನೆಯಲ್ಲಿ ಲೇಖಕರು ಕೃತಿ ಒಳಗಿನ ವಿವರಗಳ ಇನ್ನಷ್ಟು ಆಳಕ್ಕೆ ಇಳಿಯಬೇಕಾದ ಅಗತ್ಯವನ್ನು ಕುರಿತು ಹೇಳುತ್ತಾರೆ. ಇವುಗಳೆಲ್ಲ ಕೃತಿಯ ಕೊರತೆಯನ್ನು ತಿಳಿಸುತ್ತಿದ್ದರೂ, ಅದರ ಹಿಂದೆಯೇ ಕೃತಿ ಇನ್ನು ಒಳಗೊಳ್ಳಬೇಕಾದ ವಿವರಗಳನ್ನು ಸ್ಪಷ್ಟಪಡಿಸುತ್ತಾರೆ. ಇಲ್ಲಿನ ವಿಮರ್ಶಕರಿಗೆ ಕೃತಿಯ ವಿವರಗಳನ್ನು ಹೇಳುವುದು ಮತ್ತು ಚರ್ಚಿಸುವುದು ಮುಖ್ಯವಾಗುತ್ತದೆಯೇ ಹೊರತು ಕೊರತೆಯನ್ನು ಹುಡುಕುವುದಲ್ಲ. ಆದರೆ ಲೇಖಕರ ತಪ್ಪು ತಿಳಿವಳಿಕೆಗಳು ಕೃತಿಯಲ್ಲಿದ್ದರೆ, ಅವುಗಳನ್ನು ಅನಿವಾರ್ಯವಾಗಿ ತೋರಿಸಿ ಲೇಖಕರ ನಿಲುವುಗಳನ್ನು ಸರಿಯಾದ ನಿಲುವಿನ ಕಡೆಗೆ ಸೆಳೆಯುತ್ತಾರೆ.

ಕೆಲವೊಮ್ಮೆ ಅತಿ ಸರಳವಾಗಿ ಕೃತಿಯ ವಿವರಗಳೆಲ್ಲವನ್ನು ಹೇಳುವುದನ್ನು ಕಾಣಬಹುದು. ಅದರೊಂದಿಗೆ ಕೆಲವೊಮ್ಮೆ ಕೃತಿಯ ಸಮಗ್ರ ಪರಿಮಾಣದ ಅಂಶವು ಇರುತ್ತದೆ. *ಈ ಕಿರು ಪುಸ್ತಕ ರಾಮಾಯಣದ ವಿವಿಧ ಅವತರಣಿಗಳಲ್ಲಿರುವ ಅನೇಕ ಕುತೂಹಲಕರ ಸಂಗತಿಗಳ ಮೇಲೆ ಬೆಳಕು ಚೆಲ್ಲುವುದಷ್ಟೇ ಅಲ್ಲದೆ ಈ ಎಲ್ಲ ಅಂಶಗಳನ್ನು ಜೊತೆಗಿಟ್ಟು ತುಲನಾತ್ಮಕವಾಗಿ ನೋಡುವ ಮೂಲಕ ವಾಲ್ಮೀಕಿ ರಾಮಾಯಣವನ್ನು ಸ್ತ್ರೀವಾದಿ ವಿಮರ್ಶೆಗೆ ಒಳಪಡಿಸುತ್ತದೆ.* [೮]

'ಚಹರೆ' ಕೃತಿಯ ಹರಹು ವಿಶಾಲವಾದದ್ದು. ಶ್ರಮ ವಿಭಜನೆಯ ಸ್ವರೂಪ ಹಾಗೂ ಅದರಿಂದ ಉಂಟಾಗುವ ಆರ್ಥಿಕ ಅಧೀನತೆ, ಭಾಷೆಯಲ್ಲಿಯೇ ಅಡಕವಾಗಿರುವ ಸ್ತ್ರೀ ವಿರೋಧಿ ಧೋರಣೆಗಳು, ಹೆಣ್ತನದ ಬಗೆಗೆ ನಡೆದಿರುವ ವೈಜ್ಞಾನಿಕ ಅಧ್ಯಯನಗಳ ಹಿಂದಿರುವ ಪುರುಷ ಚಿಂತನೆ, ಕನ್ನಡ ಸಾಹಿತ್ಯ ಸ್ತ್ರೀ ಪಾತ್ರಗಳು ಹೀಗೆ ಸ್ತ್ರೀವಾದದ ಹಲವು ಮುಖಗಳನ್ನು ಶ್ರೀಮತಿಯವರು ಹನ್ನೊಂದು ಅಧ್ಯಾಯಗಳಲ್ಲಿ ಚರ್ಚಿಸುತ್ತಾರೆ. [೯]

ಈ ಮೇಲಿನ ಉಲ್ಲೇಖಗಳಲ್ಲಿ ಆ ಕೃತಿಯ ಒಟ್ಟು ವಿವರಗಳನ್ನು ಒಳಗೊಳ್ಳುವ ಸಮಗ್ರ ನೋಟವನ್ನು ಕ್ರೋಢೀಕರಿಸಿದ್ದಾರೆ.

ಒಟ್ಟಾರೆಯಾಗಿ 'ಮಹಿಳಾ ಜಾಗೃತಿ' ಪತ್ರಿಕೆಯಲ್ಲಿ ಇಲ್ಲಿಯವರೆಗೆ ಬಂದಿರುವ ಪುಸ್ತಕ ವಿಮರ್ಶೆಗಳ ಮುಖ್ಯ ನಿಲುವುಗಳನ್ನು ಹೀಗೆ ಗುರುತಿಸಬಹುದು.

೧. ಪುಸ್ತಕ ವಿಮರ್ಶೆಗೆ ಮಹಿಳೆ ಬರೆದ ಕೃತಿಗಳನ್ನು ಹೆಚ್ಚಾಗಿ ಆರಿಸಿಕೊಳ್ಳುವುದು.

೨. ಕೃತಿಯ ಚರ್ಚೆಗೆ ಹಿನ್ನೆಲೆ ಸ್ಪಷ್ಟಪಡಿಸಿಕೊಳ್ಳುವುದು.

೩. ಲೇಖಕರ ಮಾಹಿತಿಗಳು / ಹಿಂದಿನ ವಿವರಗಳ ಮೂಲಕ ಪುಸ್ತಕ ವಿಮರ್ಶೆಯ ಚರ್ಚೆ.

೪. ಕೃತಿ ರೂಪುಗೊಂಡಿರುವ ಹಿನ್ನೆಲೆಯ ಚರ್ಚೆ.

೫. ಕಥೆ / ಕಾದಂಬರಿಗಳಾದರೆ ಕತೆಯ ನಿರೂಪಣೆಯೊಂದಿಗೆ ವಿಶ್ಲೇಷಣೆ, ವಿಮರ್ಶೆಯೂ ನಡೆಯುತ್ತದೆ.

೬. ಪ್ರಸ್ತುತ ಕೃತಿಯ ವಸ್ತುವನ್ನು ಒಳಗೊಂಡ ಬೇರೆ ಕೃತಿಗಳ ಚರ್ಚೆ.

೭. ಕೃತಿಯ ವಸ್ತು ನಿರೂಪಣೆ ನಂತರ ಕೃತಿಯೊಳಗಿನ ಸಿದ್ಧಾಂತದ ಚರ್ಚೆ.

೮. ಲೇಖಕರ ನಿಲುವಿನ ಬಗೆಗೆ ಆಕ್ಷೇಪಣೆ ಮತ್ತು ಅದರೊಂದಿಗೆ ತಮ್ಮ ವಿವರಗಳ ಮೂಲಕ ವಿಶ್ಲೇಷಿಸುವುದು.

೯. ಕೃತಿ ಸಂಬಂಧಪಟ್ಟ ಸಿದ್ಧಾಂತಕ್ಕೆ ಹೇಳಿಕೆಯನ್ನು ಉಲ್ಲೇಖಿಸುವುದು.

೧೦. ಕೃತಿ ಅರ್ಥ ಮಾಡಿಕೊಳ್ಳಲು ಪೂರಕವಾದ ಸಿದ್ಧಾಂತಪರ ನಿಲುವುಗಳ ಚರ್ಚೆ.

೧೧. ಕೆಲವೊಮ್ಮೆ ಮೌಲ್ಯಮಾಪನ ದೃಷ್ಟಿಯಿರುತ್ತದೆ.

೧೨. ಸ್ತ್ರೀವಾದಿ ದೃಷ್ಟಿಕೋನದಿಂದ ಕೃತಿಯ ವಿವರಗಳ ಚರ್ಚೆ.

೧೩. ಕೃತಿಯ ಯಶಸ್ಸಿನ ನಿಲುವುಗಳ ಬಗೆಗೆ ಪ್ರಶಂಸೆ.

೧೪. ಪರಿಸ್ಥಿತಿಯ ಕೊರತೆ ನೀಗಿಸುವ ದಿಕ್ಕಿನಲ್ಲಿ ಕೃತಿ ಸಾಧನೆಯ ಪ್ರಶಂಸೆ.

೧೫. ಕೃತಿಯಲ್ಲಿ ಉಲ್ಲೇಖಗಳು ಕಡಿಮೆ.

೧೬. ಸಮಕಾಲೀನ ಚರ್ಚೆಗಳ ಹಿನ್ನೆಲೆಯಲ್ಲಿ ಪುಸ್ತಕ ವಿಮರ್ಶೆ.

೧೭. ಮಹಿಳೆಯರ ಸಾಧನೆಗಳನ್ನು ಕುರಿತ ವಿವರ ಬಂದರೆ ಎದ್ದು ಕಾಣುವಂತೆ ದಪ್ಪ ಅಕ್ಷರದಲ್ಲಿ ಪ್ರಕಟಿಸುವುದು.

೧೮. ಪುರುಷರು ಸ್ತ್ರೀ ಕುರಿತು ಬರೆದ ಕೃತಿಯ ಪರಿಣಾಮ. ಮಹಿಳೆಯೇ ಬರೆದ ಕೃತಿಯ ಪರಿಣಾಮ ಬಗೆಗೆ ತೌಲನಿಕ ವಿವೇಚನೆ.

೧೯. ಅತಿ ಮುಖ್ಯ ವಿವರಗಳ ಸ್ಪಷ್ಟತೆಗೆ ಕೃತಿಯಲ್ಲಿನ ಹೇಳಿಕೆಗಳ ಉಲ್ಲೇಖ.

೨೦. ಕೃತಿಯ ವಿವರಗಳು ಪುರುಷ ಲಿಂಗಗಳನ್ನು ಬಳಸಿದ್ದರೆ ಆಕ್ಷೇಪಿಸುವುದು. ಅದರೊಂದಿಗೆ ಲೇಖಕರ ಮನೋಧರ್ಮವನ್ನು ಗುರುತಿಸುವುದು.

೨೧. ಕೃತಿಯ / ಲೇಖಕರ ದೌರ್ಬಲ್ಯ ಗುರುತಿಸುವುದು.

೨೨. ಕೃತಿಯ ಮೂಲಕ ಮಹತ್ವದ ಪ್ರಶ್ನೆ ಮತ್ತು ಉತ್ತರ ಹುಡುಕುವುದು.

೨೩. ಕೃತಿಯ ಪರಿಣಾಮ ಚರ್ಚೆ.

'ಮಹಿಳಾ ಜಾಗೃತಿ' ಪತ್ರಿಕೆಯಲ್ಲಿನ ಪುಸ್ತಕ ವಿಮರ್ಶೆಯನ್ನು ಅಭ್ಯಸಿಸಿದಾಗ ಗಮನಕ್ಕೆ ಬಂದ ಸಾಮಾನ್ಯ ಲಕ್ಷಣಗಳು ಇವು. ಈ ಪತ್ರಿಕೆಯಲ್ಲಿ ಯಾರೆ, ಪುಸ್ತಕ ವಿಮರ್ಶೆ (ಸ್ತ್ರೀಯರೇ) ಮಾಡಿದರೂ ಅವರು ಈ ಅಂಶಗಳ ಕಡೆ ಹೆಚ್ಚು ಗಮನ ವಹಿಸುತ್ತಾರೆ. ಈ ಪತ್ರಿಕೆಯ ಪುಸ್ತಕ ವಿಮರ್ಶೆಯ ಇನ್ನೊಂದು ವಿಶಿಷ್ಟತೆಯೆಂದರೆ ಅವರು ಕಥೆ ಕಾದಂಬರಿ ಇತರ ಪ್ರಕಾರಗಳ ಕೃತಿಗಳನ್ನು ಆಯ್ದುಕೊಳ್ಳುವುದಕ್ಕಿಂತ ಹೆಚ್ಚಾಗಿ ಸ್ತ್ರೀವಾದಿ ಚಿಂತನೆಯನ್ನು ಕಟ್ಟುವ, ಸ್ತ್ರೀವಾದಿ ವಿಚಾರಗಳನ್ನು ಒಳಗೊಂಡ ವಿಚಾರಾತ್ಮಕ ಕೃತಿಗಳನ್ನು ಹೆಚ್ಚಾಗಿ ಆರಿಸಿಕೊಳ್ಳುತ್ತಾರೆ. ಪತ್ರಿಕೆಯನ್ನು ಮಹಿಳಾಪರ ಸೈದ್ಧಾಂತಿಕ ಮುಖವಾಣಿಯಾಗಿಸುವುದು ಇಂಥ ಪ್ರಗತಿಪರ ಸ್ತ್ರೀ ಚಿಂತನೆಗಳಿಂದ ಸಾಧ್ಯವಾಗಿದೆ.

೫.೪ ಒಬ್ಬ ಪ್ರಾತಿನಿಧಿಕ ಪುಸ್ತಕ ವಿಮರ್ಶಕರನ್ನು ಕುರಿತ ವಿಶ್ಲೇಷಣೆ

ಟಿ.ಪಿ. ಅಶೋಕ

ಟಿ.ಪಿ. ಅಶೋಕರವರು ಪುಸ್ತಕ ವಿಮರ್ಶೆ ಬಗೆಗೆ ಹೆಚ್ಚು ಕೆಲಸ ಮಾಡಿದವರು. ಬಹುಪಾಲು ಅವರ ವಿಮರ್ಶೆಗಳೆಲ್ಲವು ಪುಸ್ತಕ ವಿಮರ್ಶೆಗಳೇ. ಅವರ ಯಾವುದೇ ಕೃತಿ ತೆರೆದರೂ ಪುಸ್ತಕ ವಿಮರ್ಶೆಗಳಿರುತ್ತವೆ. ಇವರು ಪುಸ್ತಕ ವಿಮರ್ಶೆಯನ್ನು ಸರಳವಾಗಿ ಪರಿಗಣಿಸಿದವರಲ್ಲ. ತೀರ ಗಂಭೀರವಾಗಿಯೇ ಪರಿಗಣಿಸಿದವರು. ಪುಸ್ತಕ ವಿಮರ್ಶೆಯಲ್ಲಿ ಸೈದ್ಧಾಂತಿಕವಾಗಿಯೇ ಗುರುತಿಸಿಕೊಂಡವರು. ಮಯೂರದಲ್ಲಿ ಮಾಸ್ತಿಯವರ 'ಚಿಕ್ಕವೀರ ರಾಜೇಂದ್ರ' (ಜುಲೈ ೧೯೮೪)ದ ಪುಸ್ತಕ ವಿಮರ್ಶೆಯಿಂದ ಇತ್ತೀಚಿನವರೆವಿಗೂ ಪುಸ್ತಕ ವಿಮರ್ಶೆಯನ್ನು ಬೆಳಸಿದವರು. ಅವರ ಪುಸ್ತಕ ವಿಮರ್ಶೆಗಳನ್ನು ಪರಿಶೀಲಿಸುತ್ತ ಅವರ ವಿಮರ್ಶಾ ಸ್ವರೂಪವನ್ನು ಗಮನಿಸಲು ಇಲ್ಲಿ ಯತ್ನಿಸಲಾಗಿದೆ.

ಇವರ ಪುಸ್ತಕ ವಿಮರ್ಶೆಯು ಒಂದು ರೀತಿಯಲ್ಲಿ ಸಾರಾಂಶಕ ಸ್ವರೂಪದಲ್ಲಿರುತ್ತದೆ. ಇದು ಇವರ ಪುಸ್ತಕ ವಿಮರ್ಶೆಗೆ ಬಂದೊದಗಿರುವ ಮಿತಿ. ಇವರ ಪ್ರಾರಂಭದ ಪುಸ್ತಕ ವಿಮರ್ಶೆಗಳಲ್ಲಿ ಈ ರೀತಿಯ ತೊಂದರೆಗಳಿರಲಿಲ್ಲ. ಅವರು ಪ್ರಾರಂಭದಲ್ಲಿ ಚಿಕ್ಕವೀರ ರಾಜೇಂದ್ರ 'ಕಥೆಯಾದಳು ಹುಡುಗಿ' ಇಲ್ಲವೆ ಚಿದಂಬರ ರಹಸ್ಯ ಕೃತಿಗಳಿಗೆ ಮಾಡಿದ ಪುಸ್ತಕ ವಿಮರ್ಶೆಗಳನ್ನು ಗಮನಿಸಬಹುದು.

ಇವರು ಇಲ್ಲಿಯವರೆಗೆ ಮಾಡಿರುವ ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೆ, ವಿಮರ್ಶೆಗೆ ಆರಿಸಿಕೊಂಡಿರುವ ಕೃತಿಗಳು ಹೆಚ್ಚಾಗಿ ಸಾಹಿತ್ಯದಲ್ಲಿ ಹೆಸರು ಮಾಡಿದವರ ಕೃತಿಗಳು. ಇನ್ನೊಂದು ನವ್ಯಸಾಹಿತ್ಯ ಸಂದರ್ಭದ ಕೃತಿಗಳಲ್ಲಿನ ಪ್ರಶಂಸೆ. ಇವರ ಪುಸ್ತಕ ವಿಮರ್ಶೆ [ಇಂಥ ಸಂದರ್ಭಗಳಲ್ಲಿ] ಪ್ರಶಂಸನಾತ್ಮಕ ಸ್ವರೂಪದಾಗಿರುತ್ತದೆ. ಇವರ ಯಾವುದೇ ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೆ (ಪ್ರಜಾವಾಣಿಗೆ ಬರೆದ ಪುಸ್ತಕ ವಿಮರ್ಶೆಗಳನ್ನು ಹೊರತುಪಡಿಸಿ) ಪುಟ ಮಿತಿಯನ್ನು ಮೀರಿರುವುದನ್ನು ಕಾಣಬಹುದು ಇವರ ಹಾಗೂ ನರಹಳ್ಳಿ ಬಾಲಸುಬ್ರಹ್ಮಣ್ಯರವರ ಪುಸ್ತಕ ವಿಮರ್ಶೆಗಳು ಎರಡೂ

ಸ್ವರೂಪದಲ್ಲಿ ಒಂದೇ ರೀತಿ ಕಾಣುತ್ತವೆ. ಟಿ.ಪಿ. ಅಶೋಕರ ಪುಸ್ತಕ ವಿಮರ್ಶೆಯಲ್ಲಿ ಕೃತಿಯ ಕೊರತೆಯನ್ನು ಹೇಳುವಲ್ಲಿ ನಿಷ್ಠುರತೆ ಇರುವುದಿಲ್ಲ. ಅದು ಆತ್ಮೀಯ ಸಲಹೆಯ ನಿಲುವನ್ನು ಪಡೆದಿರುತ್ತದೆ. ಆದರೆ ನರಹಳ್ಳಿ ಬಾಲಸುಬ್ರಹ್ಮಣ್ಯರವರ ಪುಸ್ತಕ ವಿಮರ್ಶೆಗಳಲ್ಲಿ ಅತಿ ನಿಷ್ಠುರತೆ ಇರದಿದ್ದರೂ ಕೊರತೆಯನ್ನು ಸ್ಪಷ್ಟವಾಗಿ ಗುರುತಿಸುವುದನ್ನು ಕಾಣಬಹುದು. ನರಹಳ್ಳಿಯವರು ಪುಸ್ತಕ ವಿಮರ್ಶೆಯಲ್ಲಿ ಭಾರತೀಯ ಕಾವ್ಯ ಮೀಮಾಂಸೆಯ ಪರಿಭಾಷೆ, ಪರಿಕಲ್ಪನೆಗಳನ್ನು ಆಗಾಗ್ಗೆ ಬಳಸುತ್ತಿರುತ್ತಾರೆ. ಆದರೆ ಟಿ.ಪಿ. ಅಶೋಕರವರು ನವ್ಯ ವಿಮರ್ಶಾ ಮಾನದಂಡಗಳು, ನವ್ಯ ಪರಿಕಲ್ಪನೆಗಳ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ. ನರಹಳ್ಳಿಯವರು ಪುಸ್ತಕ ವಿಮರ್ಶೆಯ ಆರಂಭದಲ್ಲಿಯೇ ಉಲ್ಲೇಖವನ್ನಿಟ್ಟುಕೊಂಡು ಚರ್ಚೆಗೆ ಆರಂಭಿಸಿ ಕೃತಿಯನ್ನು ಆ ಉದ್ದೇಶಿತ ಚರ್ಚೆಗೆ ವೇದಿಕೆಯನ್ನಾಗಿ ಮಾಡಿಕೊಳ್ಳುತ್ತಾರೆ. ಆದರೆ ಟಿ.ಪಿ. ಅಶೋಕರ ಪುಸ್ತಕ ವಿಮರ್ಶೆಗಳ ಆರಂಭದಲ್ಲಿ ಲೇಖಕರ ಅಥವಾ ಅವರ ಈಗಾಗಲೇ ಹೆಸರು ಪಡೆದ ಕೃತಿಗಳ ಹಿನ್ನೆಲೆಯಲ್ಲಿ ಪ್ರಸ್ತುತ ಕೃತಿಯ ಚರ್ಚೆ ಇರುತ್ತದೆ. ಅಲ್ಲದೆ ಇವರು ಕೃತಿಯೊಳಗಿನ ವಿವರಗಳನ್ನು ಯಥಾವತ್ ಉಲ್ಲೇಖಿಸುತ್ತಾರೆ.

ಟಿ.ಪಿ. ಅಶೋಕರ ಪುಸ್ತಕ ವಿಮರ್ಶೆಗಳಲ್ಲಿ 'ಪುಸ್ತಕ ವಿಮರ್ಶೆ'ಯ ನೆಪದಲ್ಲಿ ಒಂದು ಮುಖ್ಯ ಸಮಸ್ಯೆಯನ್ನು ಚರ್ಚಿಸುತ್ತಾರೆ. ಅದು ಲೇಖಕರು ಎದುರಿಸುವ ಸಮಸ್ಯೆ ಮತ್ತು ಗೊಂದಲಗಳನ್ನು ಅರಿಯುವ ಯತ್ನ. ಹೀಗಾಗಿ ಇಡೀ ಪುಸ್ತಕ ವಿಮರ್ಶೆ ಒಂದು ರೀತಿಯ ತಾತ್ವಿಕತೆಯ ಚೌಕಟ್ಟಿನಲ್ಲಿ ಚರ್ಚೆಯಾಗುವಂತೆ ಇಂಥ ಪುಸ್ತಕ ವಿಮರ್ಶೆಗಳು ಕಾರಣವಾಗುತ್ತವೆ. ಇಂಥ ಸ್ವರೂಪದ ಪುಸ್ತಕ ವಿಮರ್ಶೆಯಿಂದ, ಯಶವಂತ ಚಿತ್ತಾಲರ ಛೇದ', ಶಾಂತಿನಾಥ ದೇಸಾಯಿಯವರ 'ಬೀಜ' ಮಾಸ್ತಿಯವರ 'ಚಿಕ್ಕವೀರ ರಾಜೇಂದ್ರ', ತಕಳಿ ಶಿವಶಂಕರ ಪಿಳ್ಳೆ ಅವರ 'ಏಣಿಯ ಮೆಟ್ಟಿಲುಗಳು' ತೇಜಸ್ವಿಯವರ 'ಚಿದಂಬರ ರಹಸ್ಯ', ಖಾಸನೀಸರ ಕತೆಗಳಿಗೆ ಮಾಡಿದ ಪುಸ್ತಕ ವಿಮರ್ಶೆ, ಅಂಕಣದಲ್ಲಿ ಬರೆದ ದೇವನೂರ ಮಹಾದೇವರ 'ಕುಸುಮಬಾಲೆ'ಯ ಪುಸ್ತಕ ವಿಮರ್ಶೆ ಇವುಗಳಿಗೆ ಒಂದು ರೀತಿಯ ತಾತ್ವಿಕ ಗಟ್ಟಿತನ ದೊರೆತಿದೆ.

ಇವರ ಇನ್ನೊಂದು ಪುಸ್ತಕ ವಿಮರ್ಶೆಯ ಸ್ವರೂಪವೆಂದರೆ ನವ್ಯೇತರ ಕೃತಿಗಳನ್ನು ಪುಸ್ತಕ ವಿಮರ್ಶೆಗಳಿಗೆ ಅರಿಸಿಕೊಂಡರೆ ಅವುಗಳಲ್ಲಿ ಪ್ರಶಂಸಾತ್ಮಕ ನಿಲುವಿಗಿಂತ ನಿಷ್ಠುರತೆ ಅಗಾಧವಾಗಿರುತ್ತದೆ. ಹಾಗೆ ನೋಡಿದರೆ ಇವರು ದಲಿತ-ಬಂಡಾಯದ ಕೃತಿಗಳನ್ನು ತೀರ ಅಲಕ್ಷ್ಯದಿಂದ ಗಮನಿಸುವುದನ್ನೇ, ಅವು ಸಾಹಿತ್ಯ ಕೃತಿಗಳಲ್ಲವೆಂಬ ನಿಲುವನ್ನೇ ಹೊಂದಿರುವುದನ್ನು ಗುರುತಿಸಬಹುದು. ಕೆಲವೊಮ್ಮೆ ದಲಿತ-ಬಂಡಾಯ ಘಟ್ಟವನ್ನೇ ಟೀಕೆಗೆ ಒಳಪಡಿಸಲು ಆ ಕಾಲಘಟ್ಟದ ಕೃತಿಗಳನ್ನು ಪುಸ್ತಕ ವಿಮರ್ಶೆಗೆ ಆಯ್ದುಕೊಳ್ಳುತ್ತಿದ್ದಾರೇನೊ ಎಂಬ ಗುಮಾನಿಯು ಬರುತ್ತದೆ. ಕುಂ. ವೀರಭದ್ರಪ್ಪನವರ 'ಡೋಮ ಮತ್ತಿತರ ಕಥೆಗಳು' ಸಂಕಲನಕ್ಕೆ ಅವರು ಬರೆದ ಪುಸ್ತಕ ವಿಮರ್ಶೆಯನ್ನು ನೋಡಬಹುದು (ಅವಲೋಕನ, ಮಯೂರ ಪತ್ರಿಕೆ ಫೆಬ್ರವರಿ ೧೯೮೬). ಇದರಲ್ಲಿ ಕುಂ. ವೀರಭದ್ರಪ್ಪನವರ ಪರಿಚಯ ಹೇಳುವಾಗ 'ಜನಪ್ರಿಯ ಪತ್ರಿಕೆಗಳ ಮೂಲಕ ಕನ್ನಡ ವಾಚಕರಿಗೆ ಪರಿಚಿತರಾದವರು' ಎಂದು ಕೊಂಕುನುಡಿಯುವುದು, ಅಲ್ಲದೆ "ಇವರ ಹಳೆಯ ಕೃತಿಗಳನ್ನು ಓದಿದವರಿಗೆ ಈ ಕೃತಿಗಳಲ್ಲಿ ಹೇಳಿದುದಕ್ಕಿಂತ ಹೆಚ್ಚಿನದೇನನ್ನು

'ಡೋಮ ಮತ್ತಿತರ ಕಥೆಗಳು' ಹೇಳುವುದಿಲ್ಲ" ಎಂಬುದು "ಬಂಡಾಯ ಕುಂ. ವೀರಭದ್ರಪ್ಪನವರ ಸಾಹಿತ್ಯ ರಚನೆಯ ಒಂದು ಮುಖ್ಯವಾದ ಪ್ರೇರಣೆ, ಅಪೇಕ್ಷೆ ಎಂದು ಮೇಲು ನೋಟಕ್ಕೆ ಅನ್ನಿಸಿದರೂ ಆ ಬಂಡಾಯಕ್ಕೆ ಒಂದು ಖಚಿತವಾದ, ವೈಚಾರಿಕವಾದ ರಾಜಕೀಯ ಸ್ವರೂಪ ಇದೆ ಎಂದು ಅನ್ನಿಸುವುದಿಲ್ಲ" ಎಂಬ ಹೇಳಿಕೆಗಳನ್ನು ಗಮನಿಸಿದರೆ ಪ್ರಸ್ತುತ ಕೃತಿಯ ಗಾಂಭೀರ್ಯವನ್ನು ಅಲ್ಲಗಳೆಯುವುದರ ಜೊತೆಗೆ ಲೇಖಕರ ಪ್ರಭಾವ ವಲಯವನ್ನು ಲೇವಡಿ ಮಾಡುತ್ತಿರುವಂತೆ ಕಂಡುಬರುತ್ತದೆ.

ಆದರೆ ಅವರ ಪ್ರಾರಂಭದ ಪುಸ್ತಕ ವಿಮರ್ಶೆಗಳು ಈ ಧೋರಣೆಯನ್ನು ಒಳಗೊಂಡಿರಲಿಲ್ಲ. ಅವರು 'ಚಿದಂಬರ ರಹಸ್ಯ' ಕೃತಿಗೆ ಮಾಡಿದ ಪುಸ್ತಕ ವಿಮರ್ಶೆಯ ಮುಖ್ಯ ಲಕ್ಷಣಗಳನ್ನು ಹೀಗೆ ಗುರುತಿಸಬಹುದು.

ಈ ಕೃತಿ ವಿಮರ್ಶೆಯಲ್ಲಿ ನೇರವಾಗಿ ಕೃತಿಕೊಡುವ ಒಳನೋಟಗಳ ಮುಖೇನ ಚರ್ಚೆಯನ್ನು ಆರಂಭಿಸಿ ಆ ಮುಖೇನ ಪುಸ್ತಕ ವಿಮರ್ಶೆಗೆ ತೊಡಗಿದ್ದಾರೆ. ಚಿದಂಬರ ರಹಸ್ಯದ ಅಂತ್ಯದ ಸ್ಥಿತಿಯನ್ನು ಮತ್ತು ಅದಕ್ಕೆ ಸಮೀಪವಾದ ವಸ್ತುವನ್ನು ಒಳಗೊಂಡ ಬೇರೆಯವರ ಕೃತಿಗಳ ಚರ್ಚೆಯನ್ನು ಇದರಲ್ಲಿ ಮಾಡಿದ್ದಾರೆ. ಹಾಗೆ ಚರ್ಚೆ ಮಾಡುತ್ತಾ ಪ್ರಸ್ತುತ ಕೃತಿ ಬೇರೆಯವರ ಕೃತಿಗಿಂತ ಹೇಗೆ ಭಿನ್ನ ಎಂಬುದನ್ನು ಹುಡುಕಲು ಯತ್ನಿಸಿದ್ದಾರೆ. ಆದರ ಜೊತೆಯಲ್ಲಿ ಪ್ರಸ್ತುತ ಲೇಖಕರ 'ಕರ್ವಾಲೋ' ಕೃತಿಯ ಯಶಸ್ಸನ್ನು ಗಮನದಲ್ಲಿಟ್ಟುಕೊಂಡು ಅದರ ಯಶಸ್ಸಿನ ಸ್ವರೂಪದಲ್ಲಿಯೇ 'ಚಿದಂಬರ ರಹಸ್ಯ' ಕೃತಿಯಿದೆ ಎಂದು ಹೇಳುತ್ತಾರೆ. ಆದರೆ "ಚಿದಂಬರ ರಹಸ್ಯ ತನ್ನಷ್ಟಕ್ಕೆ ಒಂದು ಅದ್ವಿತೀಯ ಕಾದಂಬರಿ ಎಂದೇನೂ ನಾನು ಹೇಳುತ್ತಿಲ್ಲ" ಎಂದು ಹೇಳುವುದರ ಮೂಲಕ ವಿನಯ ಪ್ರದರ್ಶಿಸುತ್ತ ಒಪ್ಪಿಕೊಳ್ಳುವ ಕ್ರಮವನ್ನು ಕಾಣಬಹುದು.

ಅಲ್ಲದೆ ಪ್ರಸ್ತುತ 'ಚಿದಂಬರ ರಹಸ್ಯ' ಕೃತಿಯ ಮೂಲಕ ಮುಂದಿನ ಕೃತಿಗಳ ಯಶಸ್ಸನ್ನು ನಿರೀಕ್ಷಿಸಬಹುದು ಎಂಬ ನಿಲುವನ್ನು ವ್ಯಕ್ತಪಡಿಸುತ್ತಾರೆ. "ಇಲ್ಲಿ ಕಂಡು ಬರುವ ಹಲವಾರು ಘಟನೆಗಳನ್ನು, ಪಾತ್ರಗಳನ್ನು ಬಿಡಿ ಬಿಡಿಯಾಗಿಯೂ, ಒಟ್ಟಾಗಿಯೂ ಏಕಕಾಲದಲ್ಲಿ ನೋಡಬಹುದಾಗಿದೆ. ಈ ಬೆಳವಣಿಗೆ ತೇಜಸ್ವಿಯವರ ಮುಂದಿನ ಕಾದಂಬರಿಯನ್ನು ಇನ್ನಷ್ಟು ಕುತೂಹಲದಿಂದ ಕಾಯುವ ಹಾಗೆ ಮಾಡಿದೆ" ಎಂದು ಲೇಖಕರ ಸೃಜನಶೀಲತೆ ಬಗೆಗೆ ಷರಾವನ್ನು ಬರೆಯುವ ಅತಿರೇಕಕ್ಕೂ ಹೋಗುತ್ತಾರೆ.

ನಂತರ ಕೃತಿಯನ್ನು ವಿಮರ್ಶೆಗೆ ಒಳಪಡಿಸಲು ಯತ್ನಿಸಲಾಗಿದೆ. ಹೀಗೆ ವಿಮರ್ಶೆ ಮಾಡುತ್ತ ಲೇಖಕರ ಕೃತಿಯಲ್ಲಿನ ಸರಳ ಕ್ರಿಯೆಯನ್ನು ವಿಶ್ಲೇಷಿಸುವುದರ ಜೊತೆಗೆ ಅವರ ಹಾಸ್ಯ ನಿರೂಪಣೆಯನ್ನು ಸಾಮಾನ್ಯೀಕರಣಗೊಳಿಸಲು ಯತ್ನಿಸಲಾಗಿದೆ. ಈ ವಿಶ್ಲೇಷಣೆಯನ್ನು ಮಾಡುತ್ತಲೇ ಲೇಖಕರ ಮನೋಧರ್ಮವನ್ನು ಹುಡುಕುವ ಕಡೆ ಗಮನವಹಿಸುತ್ತ, ಒಟ್ಟಾರೆ ಕೃತಿ ಕೊಡುವ ನಿಲುವಿನ ಕಡೆ ಹೆಚ್ಚು ಬೆಳಕು ಚೆಲ್ಲಲು ಯತ್ನಿಸುತ್ತದೆ. ಆದರೆ ಕೊನೆಕೊನೆಗೆ ಅವರ ಎಲ್ಲ ಪುಸ್ತಕ ವಿಮರ್ಶೆಗಳಲ್ಲಿ ಕಂಡುಬರುವಂತೆ 'ಸಾರಾಂಶಕ ವಿಮರ್ಶಾ ಪ್ರವೃತ್ತಿ' ತನ್ನ ವ್ಯಾಪ್ತಿಯನ್ನು ಬೀರಿರುವುದನ್ನು ಕಾಣಬಹುದು.

ಶಾಂತಿನಾಥ ದೇಸಾಯಿಯವರ 'ಬೀಜ' ಕೃತಿಯ ಪುಸ್ತಕ ವಿಮರ್ಶೆಯಲ್ಲಿ 'ಲೇಖಕರ ಯಶಸ್ಸಿನ ಚರ್ಚೆ, ಇತರ ಕೃತಿಗಳ ಹಿನ್ನೆಲೆಯಲ್ಲಿ ಸಾರಾಂಶದಿಂದ ಕೂಡಿದ ಕೃತಿಯ ವಿವರಗಳು, ಅದೇ ಘಟ್ಟದ ಕೆಲವು ಕೃತಿಗಳೊಡನೆ ತೌಲನಿಕ ಚರ್ಚೆ, ಅಂತಿಮವಾಗಿ ಸದಾಶಯದಿಂದ ಮುಕ್ತಾಯ ಮುಂತಾದ ಪ್ರಮುಖ ಅಂಶಗಳನ್ನು ಕಾಣಬಹುದು.

ಒಟ್ಟಾರೆಯಾಗಿ ಟಿ.ಪಿ. ಅಶೋಕರ ಪುಸ್ತಕ ವಿಮರ್ಶೆಯ ನಿಲುವುಗಳನ್ನು ಈ ಕೆಳಗಿನಂತೆ ಗುರುತಿಸಬಹುದು.

i ಪುಸ್ತಕ ವಿಮರ್ಶೆಗೆ ಒಂದು ಪೂರಕ ವಾತಾವರಣ ನಿರ್ಮಿಸಿಕೊಳ್ಳುವುದು.

ii ಕೆಲವೊಮ್ಮೆ ಒಂದು ಸಿದ್ಧ ತೀರ್ಮಾನದಲ್ಲಿ ಪುಸ್ತಕ ವಿಮರ್ಶೆಗೆ ಪ್ರವೇಶ.

iii ಪ್ರಸ್ತುತ ಕೃತಿಯ ಲೇಖಕರ ಹಿಂದಿನ ಕೃತಿಗಳ ವಿವರಗಳು / ಸೃಜನಶೀಲತೆ ಬೆಳವಣಿಗೆ ಕುರಿತ ಚರ್ಚೆ.

iv ಲೇಖಕರನ್ನು ಕಾಡಿದ ಪ್ರಶ್ನೆಗಳನ್ನಿಟ್ಟುಕೊಂಡು ಚರ್ಚೆಗೆ ತೊಡಗುವುದು / ಲೇಖಕರಲ್ಲಿನ ತಾತ್ವಿಕ ಗೊಂದಲಗಳ ಉಲ್ಲೇಖ. ಹಾಗೆ ಕಥಾ ರಚನೆಯ ಬಗೆಗಿನ ಚರ್ಚೆ.

v ಲೇಖಕರ ನಿಲುವಿನ ಬಗೆಗೆ ವಿಶ್ಲೇಷಣೆ.

vi ಲೇಖಕರ ಮಾತಿನ ಮೂಲಕವೇ ತಮ್ಮ ಚಿಂತನೆಗೆ ಸಮರ್ಥನೆಯನ್ನು ಹುಡುಕುವುದು.

vii ಇಡೀ ಕೃತಿಯ ಬಂಧ, ಆಶಯವನ್ನು ಹಿಡಿಯುವ ಯತ್ನ.

viii ವಿಮರ್ಶಾತ್ಮಕ ಟಿಪ್ಪಣಿಯ ದಾಟಿಯಲ್ಲಿ.

ix ಸಾರ್ವಜನಿಕಾಭಿಪ್ರಾಯವನ್ನು ರೂಪಿಸುವ ಹೇಳಿಕೆಗಳು.

x ಬೇರೊಬ್ಬ ಲೇಖಕರ / ಕತೆಯ ಹಿನ್ನೆಲೆಯಲ್ಲಿ ಪುಸ್ತಕ ವಿಮರ್ಶೆ ಇರುತ್ತದೆ.

xi ಕೃತಿಯಿಂದ ನೇರವಾಗಿ ಉಲ್ಲೇಖಿಸುವ ಕ್ರಮ.

xii ಪ್ರಸ್ತುತ ಕೃತಿಯ ಮೂಲಕ ಲೇಖಕರ ಸಮಗ್ರ ಸಾಹಿತ್ಯದ ಬಗೆಗೆ ವಿಮರ್ಶೆ.

xiii ಒಂದೇ ಕೃತಿಯೊಳಗಿನ ಒಂದು ಅಂಶಕ್ಕೆ ಇನ್ನೊಂದು ಅಂಶದೊಂದಿಗೆ ತೌಲನಿಕ ವಿವೇಚನೆ ಮಾಡುವುದು.

xiv ಕೃತಿಯ ಚಿಂತನೆಗೆ ತಮ್ಮ ವೈಯಕ್ತಿಕ ನಿಲುವನ್ನು ಸೇರಿಸುವುದು.

xv ಕೆಲವೊಮ್ಮೆ ಕೃತಿಗಿಂತ ಅದರ ಲೇಖಕರ ವಿಮರ್ಶೆಯಿರುತ್ತದೆ. ಅದು ಹೆಚ್ಚಾಗಿ ಪ್ರಶಂಸೆಯ ಧಾಟಿಯಲ್ಲಿರುತ್ತದೆ.

xvi ನವ್ಯ ಸಂದರ್ಭದ ಕೃತಿಗಳನ್ನು / ನವ್ಯ ವಿಮರ್ಶಾ ಪರಿಭಾಷೆಗಳ ಬಳಕೆ / ತೌಲನಿಕ ಚರ್ಚೆಗೆ ನವ್ಯ ಕೃತಿಗಳನ್ನೇ ಬಳಸುವುದು.

xvii ಇವರದು ಸಾರಾಂಶಕವಾಗಿರುವ ಪುಸ್ತಕ ವಿಮರ್ಶೆ.

ಇವು ಟಿ.ಪಿ. ಅಶೋಕರ ಪುಸ್ತಕ ವಿಮರ್ಶಾ ನಿಲುವುಗಳು.

ಹೀಗೆ ವಿಭಿನ್ನ ನೆಲೆಗಳ ಮೂಲಕ ಪುಸ್ತಕ ವಿಮರ್ಶೆಯನ್ನು ಅಭ್ಯಸಿಸಿದಾಗ ಕಂಡುಬರುವ ನಿಲುವುಗಳು ಒಂದು ಸಂದರ್ಭದಲ್ಲಿ ಏಕರೂಪಕವಾಗಿ ಇನ್ನೊಂದು ಸಂದರ್ಭದಲ್ಲಿ ಭಿನ್ನವಾಗಿಯೂ ಇರುತ್ತದೆ. ಒಂದು ಪತ್ರಿಕೆ ಪುಸ್ತಕ ವಿಮರ್ಶೆ ಮಾಡುವುದಕ್ಕೂ, ಒಂದು ಸಂವೇದನೆಯ ಹಿನ್ನೆಲೆಯಲ್ಲಿ ಪುಸ್ತಕ ವಿಮರ್ಶೆ ಇರುವುದಕ್ಕೂ, ಒಬ್ಬರೇ ಪುಸ್ತಕ ವಿಮರ್ಶಕರು ಹಲವು ಕೃತಿಗಳಿಗೆ ಬರೆದ ಪುಸ್ತಕ ವಿಮರ್ಶೆಗಳಿಗೂ ವಿಭಿನ್ನ ಆಯಾಮಗಳಿರುತ್ತವೆ. ಇಂತಹ ಭಿನ್ನ ಪುಸ್ತಕ ವಿಮರ್ಶೆಗಳಿಗೆ ಕಾರಣ ಕಾಲ, ಸ್ಥಳ, ಸಂದರ್ಭ, ಹಿಂದಿನ ಧೋರಣೆ (ವ್ಯಕ್ತಿ ಮತ್ತು ಪತ್ರಿಕೆಗಳು), ಮುಂತಾದವುಗಳು ಮುಖ್ಯವಾಗಿರುತ್ತವೆ. ಹೀಗಾಗಿ ಪುಸ್ತಕ ವಿಮರ್ಶೆಗೆ ಏಕರೂಪಾತ್ಮಕವಾದ ಸೂತ್ರ ಇಲ್ಲ, ಅದು ಬೆಳೆದಂತೆ ಒಬ್ಬರೇ ಪುಸ್ತಕ ವಿಮರ್ಶಕರಲ್ಲಿ ಪುಸ್ತಕ ವಿಮರ್ಶಾ ಸ್ವರೂಪ ಭಿನ್ನವಾಗುವುದನ್ನು ಇದರಿಂದ ಗುರುತಿಸಬಹುದು.

ಕೊನೆ ಟಿಪ್ಪಣಿಗಳು

೧. ಜನವರಿ - ಮಾರ್ಚ್ ೧೯೯೮, ಸಂಚಿಕೆ ೧.

೨. ಎಪ್ರಿಲ್ - ಜೂನ್ ೧೯೯೯, ವಿಮರ್ಶಕರು, ಶ್ರೀ.

೩. ಜುಲೈ - ಸೆಪ್ಟಂಬರ್ ೧೯೯೯, ವಿಮರ್ಶಕರು, ಎಸ್.ಎನ್. ನಾಗವೇಣಿ.

೪. ಜನವರಿ - ಮಾರ್ಚ್, ೧೯೯೮.

೫. ಎಪ್ರಿಲ್ - ಜೂನ್, ೧೯೯೯, ವಿಮರ್ಶಕರು, ಶ್ರೀ.

೬. ಅಕ್ಟೋಬರ್ - ಡಿಸೆಂಬರ್, ೧೯೯೯, ವಿಮರ್ಶಕರು, ಶ್ರೀ.

೭. ಅಕ್ಟೋಬರ್ - ಡಿಸೆಂಬರ್, ೨೦೦೦, ವಿಮರ್ಶಕರು, ಶ್ರೀ

೮. ಎಪ್ರಿಲ್ - ಜೂನ್ ೧೯೯೯, ವಿಮರ್ಶಕರು, ಶ್ರೀ.

೯. ಅಕ್ಟೋಬರ್ - ಡಿಸೆಂಬರ್ ೨೦೦೦, ವಿಮರ್ಶಕರು, ಶ್ರೀ.

ಅಧ್ಯಾಯ - ೬

ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಪುಸ್ತಕ ವಿಮರ್ಶೆಯ ಸ್ಥಾನ

ಕನ್ನಡ ಸಾಹಿತ್ಯ ವಿಮರ್ಶೆಯಲ್ಲಿ ಪುಸ್ತಕ ವಿಮರ್ಶೆಯ ಸ್ಥಾನ

ಕನ್ನಡ ವಿಮರ್ಶೆಯಲ್ಲಿ ಪುಸ್ತಕ ವಿಮರ್ಶೆಯ ಸ್ಥಾನವನ್ನು ಗುರುತಿಸುವಾಗ ಇವೆರಡರ ಹುಟ್ಟಿನ ಮೂಲವನ್ನು ಮೊದಲು ಶೋಧಿಸಬೇಕಾಗುತ್ತದೆ. ಕನ್ನಡ ವಿಮರ್ಶೆ ಏಕಾಏಕಿ ವಿಮರ್ಶೆಯ ಹೆಸರಿನಲ್ಲೇ ಹುಟ್ಟುವದಂತದಲ್ಲ, ಅದಕ್ಕೆ ಹಲವಾರು ಮೂಲಗಳಿಂದ ಸ್ಪಷ್ಟತೆ ದೊರಕಿದೆ. ಈಗಾಗಿ ಸಾಹಿತ್ಯ ವಿಮರ್ಶೆಯಲ್ಲಿ ವೈಯಕ್ತಿಕ ಮತ್ತು ಸಾಂಸ್ಥಿಕ ಪ್ರಯತ್ನಗಳು ವಿವಿಧ ಹಂತಗಳಲ್ಲಿ ರೂಪುಗೊಂಡು ವಿಮರ್ಶೆಯನ್ನು ಬೆಳೆಸಿವೆ. ಸಾಹಿತ್ಯ ವಿಮರ್ಶೆ ಸಾಧನೆಗಳು, ಸಿದ್ಧತೆಗಳು ಪಡೆದುಕೊಂಡಿರುವ ಸಾಂಸ್ಕೃತಿಕ ಆಯಾಮ, ಅದು ಎದುರಿಸಿದ ಬಿಕ್ಕಟ್ಟು ಇತ್ಯಾದಿಗಳ ಪರಿಶೀಲನೆಯಲ್ಲಿ ವೈಯಕ್ತಿಕವಾದ ಬಿಡಿಲೇಖನಗಳು ಮುಖ್ಯವಾಗಿರುವುದನ್ನು ಗುರುತಿಸಬಹುದು.

೬.೧ ಕನ್ನಡ ಸಾಹಿತ್ಯ ವಿಮರ್ಶೆಯ ಹುಟ್ಟಿನ ಸಂದರ್ಭಗಳು

೬.೧.೧ ಅಭಿನಂದನ ಗ್ರಂಥಗಳು

ಕನ್ನಡ ವಿಮರ್ಶೆ ಹಲವಾರು ಮೂಲಗಳಿಂದ ಒಡಮೂಡಿರುವಂತಹದ್ದು. ವಿಮರ್ಶೆಯು ಬೆಳೆದು ಬಂದಿರುವ ದಾರಿಗಳನ್ನು, ಮೂಲಚೂಲಗಳನ್ನು ಗಮನಿಸಿದರೆ, ಬೆಳವಣಿಗೆಗೆ ಅಭಿನಂದನ ಗ್ರಂಥಗಳು ಮಹತ್ವದ ಪಾತ್ರವನ್ನು ವಹಿಸಿವೆ. ಪ್ರಸಿದ್ಧ ವ್ಯಕ್ತಿಗಳ ನೆನಪಿಗಾಗಿ ಅಥವಾ ಅವರ ನಿರ್ದಿಷ್ಟ ಆಯಸ್ಸಿನ ನೆನಪಿಗೆ, ಅಭಿನಂದನ ಗ್ರಂಥಗಳು ಸಿದ್ಧವಾಗುತ್ತವೆ. ಅಭಿನಂದನ ಗ್ರಂಥಗಳು ಸ್ವರೂಪದಲ್ಲಿ ಒಬ್ಬ ವ್ಯಕ್ತಿಯ ವ್ಯಕ್ತಿತ್ವವನ್ನಷ್ಟೇ ಅನಾವರಣಗೊಳಿಸುವಷ್ಟು ಸೀಮಿತವಾಗಿ ಕಂಡರೂ ಅವು ವಿಮರ್ಶೆಯಲ್ಲಿನ ಮೌಲಿಕತೆಯನ್ನು ಎತ್ತಿ ಹಿಡಿಯುವಷ್ಟು ಸಫಲತೆಯನ್ನು ಪಡೆದಿರುತ್ತವೆ. ಅಭಿನಂದನ ಗ್ರಂಥಗಳು ಅಭಿನಂದನೆ ಅರ್ಪಿಸುತ್ತಿರುವ ಲೇಖಕನ ಕೃತಿಗಳನ್ನು ಕುರಿತು ವಿಮರ್ಶಾ ಲೇಖನಗಳನ್ನು ಒಳಗೊಂಡಿದ್ದರೆ, ಅವು ಆ ಲೇಖನದ ರೂಪಗಳಲ್ಲಿಯೇ ಒಟ್ಟು ಅವರ ಕೃತಿಗಳ ಬಗ್ಗೆಯೇ ವಿಮರ್ಶೆ ರೂಪಿಸುತ್ತವೆ. ಆ ಮೂಲಕ ವಿಮರ್ಶಾ ಪರಂಪರೆಯನ್ನು ಚರ್ಚಿಸಲಾಗುತ್ತವೆ.

ಬಿ. ಎಂ. ಶ್ರೀಯವರ 'ಸಂಭಾವನ' ಗ್ರಂಥಕ್ಕೆ ಬರೆದ ಲೇಖನದಲ್ಲಿ 'ಇಂಗ್ಲಿಷ್ ಗೀತಗಳು' ಕೃತಿಯ ವಿಮರ್ಶೆಯನ್ನು ಬೇಂದ್ರೆ ಮಾಡಿದ್ದಾರೆ. ಇದರಲ್ಲಿ ಬಿ.ಎಂ. ಶ್ರೀಯವರ ಸಾಂಸ್ಕೃತಿಕ ಸಂದರ್ಭದಿಂದ

ಹಿಡಿದು, ಅಲ್ಲಿನ ಕವಿತೆಗಳ ಶೈಲಿ, ಛಂದಸ್ಸುಗಳಂತಹ ವಿಷಯಗಳವರೆಗೆ ಇಲ್ಲಿನ ಚರ್ಚೆಯ ಹರಹಿದೆ. ಕೃತಿಯ ಒಳಮುಖಿ ಮತ್ತು ಹೊರಮುಖಿ ಅಧ್ಯಾಯಗಳೆರಡಲ್ಲೂ ಬೇಂದ್ರೆ ಆಸಕ್ತಿಯಿಂದ ವಿಶ್ಲೇಷಿಸಿದ್ದಾರೆ.

ಅಭಿನಂದನ ಗ್ರಂಥಗಳಲ್ಲಿ ಸಾಮಾನ್ಯವಾಗಿ ಎರಡು ಭಾಗಗಳಿರುತ್ತವೆ. ಮೊದಲನೆ ಭಾಗದಲ್ಲಿ ಅಭಿನಂದನೆಯಾಗುತ್ತಿರುವ ವ್ಯಕ್ತಿಗೆ ಸಂಬಂಧಪಟ್ಟ ಲೇಖನಗಳು ಇದ್ದರೆ, ಎರಡನೇ ಭಾಗವು ಕೃತಿಗಳ ಕುರಿತ ಚರ್ಚೆ ಇಲ್ಲವೆ ಸಾಹಿತ್ಯ ಪರಂಪರೆಗಳನ್ನು ಕುರಿತ ಚರ್ಚೆ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಮೊದಲನೇ ಭಾಗವು ಅಭಿನಂದಿತರ ವ್ಯಕ್ತಿತ್ವವನ್ನು ಅನಾವರಣಗೊಳಿಸಿದರೆ ಎರಡನೇ ಭಾಗವು ಸಾಹಿತ್ಯ ಪರಂಪರೆಯನ್ನು ಕುರಿತ ಚರ್ಚೆಯಿರುತ್ತದೆ.

ಇತ್ತೀಚೆಗೆ ಅಭಿನಂದಿತರು ಸಾಹಿತ್ಯ ಕ್ಷೇತ್ರಕ್ಕೆ ಸೇರದಿದ್ದರೂ ಅವರ ಅಭಿನಂದನ ಕೃತಿಯಲ್ಲಿ ಸಾಮಾನ್ಯವಾಗಿ ಸಾಹಿತ್ಯ ಚರ್ಚೆಗಳು ಕಾಣಸಿಗುತ್ತವೆ. ಅಲ್ಲದೆ ಅವುಗಳನ್ನು ಹೆಚ್ಚಾಗಿ ಸಾಹಿತ್ಯದಲ್ಲಿ ಪ್ರತಿಷ್ಠಿತರೆನ್ನಿಸಿಕೊಂಡ ಲೇಖಕರಿಂದ ಬರೆಸಿರುತ್ತಾರೆ. ಹೀಗೆ ಹಲವಾರು ಲೇಖಕರ ಚಿಂತನೆಗಳು ಒಂದೇ ಕಡೆ ಮಡುಗಟ್ಟಿ ಒಂದು ಕೃತಿಯಾಗಿ ನಿಲ್ಲುತ್ತವೆ. ಇಲ್ಲಿನ ವಿಮರ್ಶಾಲೇಖನಗಳಿಗೆ ಒಂದು ಕೇಂದ್ರ ಇರುತ್ತದೆ. ಅದು ಅಭಿನಂದಿತರ ಕೃತಿಗಳ ಬಗೆಗಿನ ವಿಮರ್ಶೆ ಇರುತ್ತದೆ. ಕೆಲವೊಮ್ಮೆ ಗ್ರಂಥದ ಸಂಪಾದಕರೆ ವಿಷಯಗಳನ್ನು ಆಯ್ಕೆಮಾಡಿ ಆ ವಿಷಯಗಳಿಗೆ ಪರಿಣಿತರಾದ ಲೇಖಕರಿಂದ ಲೇಖನಗಳನ್ನು ಬರೆಸುತ್ತಾರೆ. ಹೀಗೆ ಆಯ್ಕೆ ಮಾಡಿದ ವಿಷಯಕ್ಕೆ ಲೇಖನ ಬರೆಯುವ ಲೇಖಕರಿಗೆ ಒಂದು ಕೇಂದ್ರ ತಾನಾಗಿಯೇ ಲಭಿಸಿರುವುದರಿಂದ ಅದರ ಒಳಗೆ ವಿಶ್ಲೇಷಣೆ ನಡೆಸುತ್ತಾರೆ, ಚರ್ಚಿಸುತ್ತಾರೆ. ಹೀಗೆ ಕೇಂದ್ರವೊಂದರ ಒಳಗೆ ಒಳಗೊಳ್ಳುವ ವಿಚಾರಗಳು ವಿಮರ್ಶೆಯ ಪರವಾಗಿ ನಿಲ್ಲುತ್ತಾ ಹೋಗುತ್ತವೆ. ಆದರೆ ಅಭಿನಂದನ ಗ್ರಂಥದ ಮಿತಿಯೆಂದರೆ ಲೇಖಕರು ಅಭಿನಂದಿತರ ಕೃತಿಯನ್ನಷ್ಟೇ ವಿಮರ್ಶಿಸಬೇಕಾದಾಗ ಅವರು ಅನಿವಾರ್ಯವಾಗಿ ಒಳ್ಳೆಯ ಅಂಶಗಳನ್ನಷ್ಟೇ ಹೇಳಬೇಕಾದ ಒತ್ತಡದ ಅನಿವಾರ್ಯತೆ ತನ್ನಿಂದ ತಾನೇ ನಿರ್ಮಾಣಗೊಳ್ಳುತ್ತದೆ. ಅತಿ ವಸ್ತುನಿಷ್ಠ ವಿಮರ್ಶೆ ಲೇಖಕರಿಂದ ರಚಿತವಾದರೆ ಸಂಪಾದಕರು ಅದನ್ನು ತಿರಸ್ಕರಿಸುವ ಸಾಧ್ಯತೆಯಿರುವುದರಿಂದ ಆದಷ್ಟು ಒಳ್ಳೆಯ ವಿಮರ್ಶೆಯನ್ನು ಸಂಪಾದಕರು ನಿರೀಕ್ಷಿಸುವುದು, ಅದಕ್ಕೆ ಅನುಗುಣವಾಗಿಯೇ ಲೇಖಕರು ಬರೆದು ಕೊಡುವುದು ಹೀಗೆ ನಡೆಯುತ್ತದೆ.

ಆದರೆ ಇತ್ತೀಚಿನ ಕೆಲವು ಅಭಿನಂದನ ಗ್ರಂಥಗಳಲ್ಲಿ ಲೇಖಕರಿಂದ ಬರೆಸಿದ ಲೇಖನಗಳಿಗಿಂತ ಆ ವ್ಯಕ್ತಿಯನ್ನು ಕುರಿತು, ಅವರ ಕೃತಿಗಳನ್ನು ಕುರಿತು ಪತ್ರಿಕೆಗಳಲ್ಲಿ ಬಂದಿರುವ ಲೇಖನಗಳೆಲ್ಲವನ್ನು ಆಯ್ದುಕೊಂಡು ಒಟ್ಟಿಗೆ ಸೇರಿಸುವ ಕಾರ್ಯ ನಡೆಯುತ್ತಿದೆ. ಸಿದ್ದಲಿಂಗಯ್ಯನವರ ವ್ಯಕ್ತಿತ್ವ ಸಾಹಿತ್ಯ ಕುರಿತು 'ಬಡವರ ನಗುವಿನ ಶಕ್ತಿ' ದೇವನೂರರ ವ್ಯಕ್ತಿತ್ವ ಸಾಹಿತ್ಯ ಕುರಿತ 'ಯಾರ ಜಪ್ತಿಗೂ ಸಿಗದ ನವಿಲುಗಳು' ಗ್ರಂಥಗಳನ್ನು ಇಲ್ಲಿ ಹೆಸರಿಸಬಹುದು.

ಇಂತಹ ಕೃತಿಗಳ ಲೇಖನಗಳಲ್ಲಿ ಒಟ್ಟು ಕೃತಿಯ ಮೌಲ್ಯ ವಿವೇಚನೆಗೆ ತೊಡಗಿಕೊಂಡು ಲೇಖನಗಳು

ಪ್ರಕಟವಾಗಿರುತ್ತವೆ. ಇದರಿಂದ ಆ ಲೇಖನಗಳು ಕೃತಿ ಲೇಖಕರ ಪರವಾಗಿದ್ದರೂ, ವಿರುದ್ದವಾಗಿದ್ದರೂ ಒಟ್ಟಿಗೆ ಸೇರಿಸುವ ಈ ಕಾರ್ಯ ಕೃತಿಯ ಅಭಿನಂದಿತನ ಮೌಲಿಕತೆಯನ್ನು ಗುರುತಿಸಲಾಗಿರುತ್ತವೆ. ಒಟ್ಟಾರೆ ಕೃತಿಯ ಬಗೆಗೆ ಮೌಲಿಕತೆಯ ವಿಮರ್ಶಾವಲಯವನ್ನು ಸೃಷ್ಟಿಸುತ್ತದೆ ಎನ್ನಬಹುದು. ಈ ಗ್ರಂಥಗಳಲ್ಲಿ ಅಭಿನಂದಿತರ ಪುಸ್ತಕಗಳ ವಿಮರ್ಶೆಯು ಇರುತ್ತದೆ.

೬.೧.೨ ವಿಚಾರ ಸಂಕಿರಣಗಳು

ವಿಮರ್ಶಕರು ತಾವಾಗಿಯೇ ಸ್ವತಃ ಆಲೋಚಕರಾಗಿ ವಿಮರ್ಶೆ ಮಾಡುವ ರೀತಿ ಒಂದು ಯಾವುದೋ ಒತ್ತಡದಿಂದ ವಿಮರ್ಶೆಯನ್ನು ಬೆಳಸುವ ಮಾದರಿ ಇನ್ನೊಂದು ಸ್ವತಃ ಕೃತಿಯ ಬಗೆಗೆ ವಿಮರ್ಶಿಸುವುದು ತುಂಬಾ ವಿರಳ. ಇದಕ್ಕೆ ಅಪವಾದವಿರಬಹುದು. ಆದರೆ ಬಂದಿರುವ ಬಹುಪಾಲು ವಿಮರ್ಶಾಸಂಕಲನಗಳನ್ನು ಗಮನಿಸಿದಾಗ ಅವುಗಳೆಲ್ಲ ಸ್ವತಃ ವಿಮರ್ಶಕರೇ ಸ್ವಪ್ರೇರಣೆಯಿಂದ ಬರೆದ ವಿಮರ್ಶಾ ಲೇಖನಗಳಾಗಿರುವುದಿಲ್ಲ ಬದಲಿಗೆ ಅವು ಯಾವುದೋ ವಿಚಾರ ಸಂಕಿರಣಕ್ಕೆ, ಪತ್ರಿಕೆಗೆ ಮುಂತಾದವುಗಳಿಗೆ ಬರೆದವುಗಳಾಗಿರುತ್ತವೆ. ಇವುಗಳನ್ನು ವಿಮರ್ಶಕರು ಲೇಖನದ ಅಡಿಯಲ್ಲಿ ಇಲ್ಲ ಅನುಬಂಧದಲ್ಲಿ ಸೂಚಿಸಿರುತ್ತಾರೆ. ಒಂದು ನಿರ್ದಿಷ್ಟವಾದ ವಿಷಯದ ಆಯ್ಕೆ ಇಲ್ಲಿ ವಿಮರ್ಶಕರಿಗಿರುವುದಿಲ್ಲ. ಯಾಕೆಂದರೆ ವಿಚಾರ ಸಂಕಿರಣವನ್ನು ಆಯೋಜಿಸಿರುವವರು ಮಂಡಿಸಬೇಕಾದ ಪ್ರಬಂಧದ ವಿಷಯವನ್ನು, ಮಾತಾಡುವ ವಿಷಯವನ್ನು ಮೊದಲೇ ಆಯ್ಕೆ ಮಾಡಿ ವಿಮರ್ಶಕರಿಗೆ ಕಳುಹಿಸುತ್ತಾರೆ. ಇಲ್ಲಿ ವಿಮರ್ಶಕರು ಪುನಃ ತನ್ನ ವಿಮರ್ಶನ ನಿಲುವನ್ನು ಅವರು ಕಳುಹಿಸಿದ ವಿಷಯಕ್ಕೆ ಅನುಗುಣವಾಗಿ ಬದಲಾಯಿಸಬೇಕಾಗುತ್ತದೆ. ಇಲ್ಲಿ ಒತ್ತಡದ ಅನಿವಾರ್ಯತೆಯಿರುವುದರಿಂದ ಈ ಲೇಖನಗಳಿಗೆ ಹಲವಾರು ಮಿತಿಗಳು ಬಂದೊದಗಬಹುದು. ಆದರೂ ಅವುಗಳನ್ನು ನಿವಾರಿಸಿಕೊಂಡು ವಿಮರ್ಶಕರು ಬರೆಯಲು ಯತ್ನಿಸಿದಾಗ ಅವು ಅತ್ಯಂತ ಮೌಲಿಕ ವಿಮರ್ಶಾ ಲೇಖನಗಳಾಗಿರುವುದನ್ನು ಕಾಣಬಹುದು. ಇವುಗಳು ವಿಮರ್ಶಾ ಬೆಳವಣಿಗೆಯನ್ನು ನಿರ್ಧರಿಸುತ್ತವೆ. ಇನ್ನು ಕೆಲವು ಸಂದರ್ಭದಲ್ಲಿ ವಿಮರ್ಶಾ ಬೆಳವಣಿಗೆಗೆ ಗೋಷ್ಠಿಗಳು, ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಭಾಷಣಗಳು, ಪೂರಕ ಕೆಲಸ ಮಾಡಿವೆ. ಇಂದಿನ ವಿಚಾರ ಸಂಕಿರಣಗಳು ಪಡೆದಿರುವ ಸ್ವರೂಪವನ್ನು ಹೆಚ್. ಎಸ್ ರಾಘವೇಂದ್ರ ರಾವ್ ಅವರು ಹೀಗೆ ಗುರುತಿಸುತ್ತಾರೆ.

ವಿಚಾರ ಸಂಕಿರಣಗಳು ತಮ್ಮ ಹುಟ್ಟು ಏರುವೆ ಮತ್ತು ಇಳಿದಿನಗಳನ್ನು ಕಂಡಿವೆ. ಹಿಂದೆ ಹಬ್ಬದಂತೆ ನಡೆಯುತ್ತಿದ್ದ ಸಾಹಿತ್ಯ ಸಮ್ಮೇಳನಗಳು, ಅಧ್ಯಕ್ಷ ಭಾಷಣಗಳನ್ನು ಹೊರತುಪಡಿಸಿದರೆ ಉಳಿದಂತೆ ಸಾಹಿತ್ಯೋಪನ್ಯಾಸಗಳು ಭಾಷಣಗಳೇ ವಿನಹ ಬರಹಗಳಲ್ಲ. ಆ ಮೇಲೆ ಆಕಸ್ಮಾತ್ತಾಗಿ ಅವು ಬರಹದ ರೂಪ ತಳೆದರೂ ಅಲ್ಲಿ ವಿವರಣಾತ್ಮಕವಾದ ಭಾಷಣಗಳ ಛಾಯೆ ಇದ್ದೇ ಇರುತ್ತಿತ್ತು. ಆದರೆ ವಿಚಾರ ಸಂಕಿರಣಗಳ ಮಾತು ಹಾಗಲ್ಲ. ಅವು ಪಾಶ್ಚಾತ್ಯರ ಸಿಂಪೊಸಿಯಂ ಮತ್ತು ನಮ್ಮ ಸಾರ್ವಜನಿಕ ಭಾಷಣಗಳ ಸಂಕರತಳಿಗಳು. ಒಂದು ಕ್ಷೇತ್ರಕ್ಕೆ ಸೇರಿದ, ಸಮಾನ ಆಸಕ್ತಿಗಳ ವಿದ್ವಾಂಸರು ಒಟ್ಟುಗೂಡಿ ಸಾಕಷ್ಟು ಪ್ರೌಢವಾದ ರೀತಿಯಲ್ಲಿ ವಿಚಾರ ವಿನಿಮಯ ಮಾಡಿಕೊಳ್ಳುವ ಬಗೆಯ ಸಂಕಿರಣಗಳು ಕನ್ನಡದ ಸಂದರ್ಭದಲ್ಲಿ ನಡೆದಿಲ್ಲವೆಂದೇ ಹೇಳಬೇಕು. ಬದಲಾಗಿ ವಿದ್ಯಾರ್ಥಿಗಳು, ಅಧ್ಯಾಪಕರು ಮತ್ತು ಸಾಹಿತ್ಯಾಸಕ್ತ ಸಮುದಾಯದ ನಡುವೆ

ನಡೆಯುವ ಇಂಥ ಸಂಕಿರಣಗಳಲ್ಲಿ ಮಾತುಗಾರಿಕೆ, ಓದುಗಾರಿಕೆ, ಮನರಂಜನೆ, ವಿಟ್ ಹಾಗೂ ಜಾಣತನಗಳು ತಮ್ಮದೇ ಆದ ಪಾತ್ರವಹಿಸಿವೆ. ಆದರೆ ಬೇರೆ ಬೇರೆ ಪೀಳಿಗೆಗಳಿಗೆ ಸೇರಿದ ವಿಭಿನ್ನ ಸಾಹಿತ್ಯಕ ಚಳುವಳಿಗಳನ್ನು ಪ್ರತಿನಿಧಿಸುವ, ವಿಮರ್ಶೆಯ ಹಲವು ಬಗೆಗಳ ಪ್ರಾಕ್ಟೀಶನರ್ಸ ಆದ ಸೃಜನಶೀಲ ಸಾಹಿತಿಗಳು ಮತ್ತು ವಿಮರ್ಶಕರು ಒಟ್ಟಿಗೆ ಸೇರಿ ನಡೆಸುವ ಈ ಅನುಸಂಧಾನಗಳು ಕನ್ನಡ ವಿಮರ್ಶೆಯ ಮಹತ್ವದ ವೇದಿಕೆಗಳಾಗಿ ರೂಪುಗೊಂಡವು. ಸಂಘಟಕರು ಪಟ್ಟುಹಿಡಿದು, ಸಂಕಿರಣದಲ್ಲಿ ಮಂಡಿತವಾದ ಪ್ರಬಂಧಗಳನ್ನು ಪುಸ್ತಕ ರೂಪದಲ್ಲಿ ಹೊರ ತಂದಾಗಲಂತೂ ಅವು ಮಹತ್ವದ ದಾಖಲೆಗಳಾಗಿ ಉಳಿದುಕೊಂಡಿವೆ. ಇದರ ಜೊತೆಗೆ ಅವು ವಿಮರ್ಶಕರು ಒಟ್ಟಾಗಿ ಸೇರುವ, ಅನೌಪಚಾರಿಕವಾದ ಸಂವಾದದಲ್ಲಿ ತೊಡಗುವ ಅವಕಾಶಗಳನ್ನು ದೊರಕಿಸಿಕೊಡುತ್ತಿದ್ದವು.

ಈ ಗರಡಿಗಳಲ್ಲಿ ಪ್ರೇಕ್ಷಕರಾಗಿ ಭಾಗವಹಿಸಿದ ಎಷ್ಟೋ ವಿದ್ಯಾರ್ಥಿಗಳು ಆಗ ತಮ್ಮ ಹತಾರಗಳನ್ನು ರೂಪಿಸಿಕೊಂಡು ಇಂದು ಒಳ್ಳೆಯ ವಿಮರ್ಶಕರಾಗಿದ್ದಾರೆ. ವಿಮರ್ಶೆಯ ಲೇಖನಗಳ ಆ ಕೃತಿಗಳ ಮೇಲೆಯೂ ಇಂಥ ಸಂಕಿರಣಗಳು ತಮ್ಮ ಪ್ರಭಾವ ಬೀರಿದವು. ಸುಮಾರು ಅರ್ಧ ಗಂಟೆಯ ಅವಧಿಯಲ್ಲಿ ಮಂಡಿಸಬಹುದಾದ ಎಂಟು ಹತ್ತು ಪುಟಗಳ ಬರವಣಿಗೆಯ ಲೇಖನದ ಗಾತ್ರವನ್ನು ನಿರ್ಧರಿಸಿತು. ಯಾವುದೇ ವಿಷಯವನ್ನು ಕುರಿತು ಆದುವರೆಗೆ ನಡೆದ ಚರ್ಚೆಯನ್ನು ಗೃಹಿತ ಹಿಡಿಯುವುದೇ ವಾಡಿಕೆಯಾಯಿತು. ಒಳನೋಟಗಳನ್ನು ನೀಡುವುದು ಒಂದು ವಿಷಯವನ್ನು ತರ್ಕಶುದ್ಧವಾಗಿ ವಿವರಿಸುವುದಕ್ಕಿಂತ ಮುಖ್ಯವಾಯಿತು. ಬರವಣಿಗೆಯ ಶೈಲಿಯ ರೂಪಗಳಿಂದ ಮಿಂಚತೊಡಗಿತು. ರೂಪಕದ ಭಾಷೆಯಲ್ಲಿಯೇ ಹೇಳುವುದಾದರೆ ಅನೇಕರ ವಿಮರ್ಶೆಗೆ 'ಒಂದು ದಿನದ ಕ್ರಿಕೆಟ್ ಪಂದ್ಯಾವಳಿ' ಲಕ್ಷಣಗಳು ಕೂಡಿಕೊಂಡವು. ಇದೆಲ್ಲವನ್ನು ನಾನು ದೋಷವೆಂದು ಹೇಳುತ್ತಿಲ್ಲ. ಬದಲಾಗಿ ವಿಮರ್ಶೆಯ ಗತಿಶೀಲತೆಯನ್ನು ಗುರುತಿಸಲು ಪ್ರಯತ್ನಿಸುತ್ತಿದ್ದೇನೆ. ಕಳೆದ ಕಾಲು ಶತಮಾನದಲ್ಲಿ ಅಕ್ಷರಶಃ ಸಾವಿರಾರು ಸಂಕಿರಣಗಳು ನಡೆದಿವೆ. ವಿಶ್ವವಿದ್ಯಾಲಯಗಳು, ಅಕಾಡೆಮಿಗಳು, ಸಾಹಿತ್ಯ ಪರಿಷತ್ತು. ಎಲ್ಲವು ಧಾರ್ಮಿಕ ಶ್ರದ್ಧೆಯಿಂದ ಇವುಗಳನ್ನು ನಡೆಸಿವೆ. [೧]

ಈ ಮೇಲಿನ ಉಲ್ಲೇಖವನ್ನು ಗಮನಿಸಿದಾಗ ಇದರಲ್ಲಿ ವಿಚಾರ ಸಂಕಿರಣದ ಹುಟ್ಟು ಮತ್ತು ಇಂದು ಆಧುನಿಕ ವೇಗ ಜಗತ್ತಿನಲ್ಲಿ ಅದು ಪಡೆದುಕೊಂಡ ತುರ್ತಿನ ಆಯಾಮವನ್ನು ವಿಶ್ಲೇಷಿಸಲಾಗಿದೆ. ವಿಚಾರ ಸಂಕಿರಣವನ್ನು ಭಾಷಣಗಳ ಸ್ವರೂಪದಲ್ಲಿ ಗುರುತಿಸಿ, ಭಾಷಣಕ್ಕಿಂತ ಭಿನ್ನವಾದ ಬಗೆಯನ್ನು ಕುರಿತು ಚರ್ಚಿಸಲಾಗಿದೆ. ಸಮಾನ ಮನಸ್ಕರು, ಸಮಾನ ಆಸಕ್ತರು ಕೂಡಿ ನಡೆಸುವ ಚರ್ಚೆ ಸಂವಾದಗಳು, ವಿಮರ್ಶಾ ಅನುಸಂಧಾನಗಳು, ಗಂಭೀರವಾದ ಪ್ರತಿಕ್ರಿಯೆಗಳು 'ಸಾಂಸ್ಕೃತಿಕ ದಾಖಲೆ'ಗಳೆಂದು ಗುರುತಿಸಿದ್ದಾರೆ. ಅದರೊಂದಿಗೆ ವಿಚಾರ ಸಂಕಿರಣದಲ್ಲಿ ಭಾಗವಹಿಸಿ ಅದರಿಂದ ಜ್ಞಾನ ಪಡೆದು ಪ್ರಮುಖ ವಿಮರ್ಶಕರಾಗಿ ಬೆಳೆದಿರುವುದನ್ನು ಗುರುತಿಸಿದ್ದಾರೆ. ಚರ್ಚೆ ಸಂವಾದಗಳು ಸಾಹಿತ್ಯವನ್ನು ಸಾಂಸ್ಕೃತಿಕವಾಗಿ ಬೆಳಸುವ, ಸಾಂಸ್ಕೃತಿಕ ಜವಾಬ್ದಾರಿಯನ್ನು ಚಿಂತಕರಿಗೆ ಹೊರಿಸುವ ಕೆಲಸವನ್ನು ವಿಚಾರ ಸಂಕಿರಣಗಳು ಮಾಡುವುದನ್ನು ಹೆಚ್. ಎಸ್. ರಾಘವೇಂದ್ರ ರಾವ್‌ರವರು ಗುರುತಿಸಿದ್ದಾರೆ.

ಆದರೆ ಈ ಎಲ್ಲಾ ಪ್ರಮುಖ ಅಂಶಗಳನ್ನು ಹೇಳುತ್ತಲೇ ವಿಚಾರ ಸಂಕಿರಣಗಳು ವಿಮರ್ಶೆಯ ವಿಸ್ತೃತ ವ್ಯಾಪ್ತಿಗೆ ಕಾರಣವಾಗಿರುವಂತೆ ಕಿರಿದುಗೊಳಿಸಿರುವುದನ್ನು ಗಮನಿಸಿದ್ದಾರೆ. ಹೆಚ್. ಎಸ್. ರಾಘವೇಂದ್ರರಾವ್ ಅವರು ವಿಚಾರ ಸಂಕಿರಣದ ಬರವಣಿಗೆಯೂ ಲೇಖನದ ಗಾತ್ರವನ್ನು ನಿರ್ಧರಿಸುವ ಮುಖ್ಯ ಅಂಶದ ಕಡೆಗೆ ಗಮನ ಸೆಳೆಯುತ್ತಾರೆ. ಆ ಲೇಖನದಲ್ಲಿ ವ್ಯಾಪಕ ಚರ್ಚೆಯನ್ನು ಮಾಡಲು ಪಡಬೇಕಾದ ತೊಂದರೆಯನ್ನು ಕುರಿತು ಸೂಕ್ಷ್ಮವಾಗಿ ಸೂಚಿಸುತ್ತಾರೆ. ಈ ಅತಿರೇಕದಿಂದ ವಿಚಾರ ಸಂಕಿರಣಗಳು ಯಾಂತ್ರಿಕವಾಗುವ ಬಗೆಯನ್ನು ಹೇಳುತ್ತಾರೆ.

ಈ ವಿಶ್ಲೇಷಣೆಯನ್ನು ಗಮನಿಸಿದರೆ ವಿಚಾರ ಸಂಕಿರಣಗಳು ವಿಮರ್ಶೆಗೆ ವ್ಯಾಪಕತೆಯನ್ನು ತಂದು ಕೊಡುವುದರ ಜೊತೆಗೆ ಸಂಕುಚಿತಗೊಳಿಸಿರುವ ಸಂದರ್ಭಗಳನ್ನು ಕಾಣಬಹುದು. ಆದರೂ ವಿಚಾರ ಸಂಕಿರಣಗಳು ವಿಮರ್ಶೆಯ ಬೆಳವಣಿಗೆಗೆ ಪೂರಕ ಕೆಲಸ ಮಾಡಿರುವುದನ್ನು ಅಲ್ಲಗಳೆಯಲಾಗದು. ವಿಚಾರ ಸಂಕಿರಣಗಳಿಂದ ಪುಸ್ತಕ ವಿಮರ್ಶೆಗೆ ಪರೋಕ್ಷವಾಗಿ ಅನುಕೂಲವಾಗಿದೆ. ನೇರವಾಗಿ ಆಗಿರುವ ಅನುಕೂಲಗಳು ಕಡಿಮೆ. ಆದರೆ ವಿಚಾರ ಸಂಕಿರಣದಲ್ಲಿ ನಡೆಯುವ ಚರ್ಚೆ ಅನುಸಂಧಾನಗಳು ಪುಸ್ತಕಗಳ ಬಗೆಗೆ ಮೌಲ್ಯವನ್ನು ತಂದು ಕೊಡುತ್ತವೆ. ಇವು ಮೊದಲ ನೋಟಗಳಾಗಿರುವುದಿಲ್ಲ, ಮೊದಲ ಪ್ರತಿಕ್ರಿಯೆಗಳಾಗಿರುವುದಿಲ್ಲ. ಪುಸ್ತಕ ವಿಮರ್ಶೆಯು ಈ ಮೇಲಿನ ಅಂಶಗಳಿಗೆ ವಿರುದ್ಧವಾಗಿರುತ್ತದೆ. ಆದರೆ ಕೆಲವೊಮ್ಮೆ ವಿಚಾರ ಸಂಕಿರಣಕ್ಕಿಂತ 'ಪುಸ್ತಕ ಬಿಡುಗಡೆ' ಸಂದರ್ಭದಲ್ಲಿ ಮಾತನಾಡುವ ಅಂಶಗಳು ಪುಸ್ತಕ ವಿಮರ್ಶೆ ಅನಿಸಿದರೂ ಅವುಗಳು 'ಮೌಖಿಕ ಪುಸ್ತಕ ವಿಮರ್ಶೆ'ಗಳಾಗಿರುತ್ತವೆ. ಪುಸ್ತಕ ವಿಮರ್ಶೆ ಮುಖ್ಯವಾಗಿ ಪುಸ್ತಕ ಕುರಿತ ಮೊದಲ ದಾಖಲೆಗಳು ಆಗಿರುತ್ತವೆ. ಆದರೆ 'ಮೌಖಿಕ ಪುಸ್ತಕ ವಿಮರ್ಶೆಗಳು ಒಂದು ರೀತಿಯಲ್ಲಿ ಪುಸ್ತಕ ವಿಮರ್ಶೆಗಳಾದರೂ ಪೂರ್ಣ ಪ್ರಮಾಣದ ಪುಸ್ತಕ ವಿಮರ್ಶೆಗಳಲ್ಲ.

ಪ್ರೌಢ ವಿಮರ್ಶಾ ಲೇಖನಗಳನ್ನು ಗಮನಿಸಿದರೆ ಅವುಗಳು ವಿಚಾರ ಸಂಕಿರಣಗಳಲ್ಲಿ ಮಂಡಿಸಿದ ಮತ್ತು ಅಲ್ಲಿ ನಡೆದಿರುವ ಚರ್ಚೆ, ಸಂವಾದದಿಂದ ರೂಪುಗೊಂಡಿರುತ್ತವೆ. ಅದಕ್ಕೆ ಪೂರಕವಾಗಿ ಆ ಲೇಖನಕ್ಕೆ ಬಂದಂತಹ ಪ್ರಶ್ನೆಗಳು ಲೇಖನದ ಜೊತೆ ಸೇರಿಸಿರುತ್ತಾರೆ. ಇದು ವಿಮರ್ಶೆಯ ನಿಲುವನ್ನು ಒಟ್ಟಾರೆಯಾಗಿ ಪ್ರತಿಬಿಂಬಿಸುತ್ತವೆ.

೬.೧.೩ ಓದುಗರ ವಿಮರ್ಶೆ

ಒಂದು ಕೃತಿ ಕುರಿತು ಬಂದಂಥ ಲೇಖನಗಳನ್ನು ಓದಿ, ಗ್ರಹಿಸಿದ ಓದುಗರು ತಮ್ಮ ಪ್ರತಿಕ್ರಿಯೆಗಳನ್ನು ನೀಡಿ ವಿಮರ್ಶೆಯನ್ನು ಪತ್ರಿಕೆಗಳ ಮೂಲಕ ಬೆಳಸುತ್ತ ಹೋಗುತ್ತಾರೆ. ಆದರೆ ಈ ಸಾಧ್ಯತೆ ಸ್ವಲ್ಪ ಕಡಿಮೆಯೇ ಏಕೆಂದರೆ ಸಹಜವಾಗಿ ಓದುಗರ ವಲಯವನ್ನು ಸಾಹಿತ್ಯ ವಿಮರ್ಶೆ ವಿಸ್ತರಿಸುತ್ತದೆ ಎಂದು ಭಾವಿಸಿದರೂ, ಕೆಲವೊಮ್ಮೆ ಓದುಗರಾದವರು ಸರಿಯಾಗಿ ಕೃತಿ ಅರ್ಥಮಾಡಿಕೊಳ್ಳದೆ, ಪುಸ್ತಕ ವಿಮರ್ಶೆಯ ಅಥವಾ ವಿಮರ್ಶೆಯ ನಿಲುವುಗಳಿಗೆ ಅಂಟಿ ಕೂತಿರುತ್ತಾರೆ. ವಿಮರ್ಶೆಯ ಬಹುದೊಡ್ಡ ಮಿತಿಯೆಂದರೆ ಅವುಗಳು ವೈಯಕ್ತಿಕ ಅಭಿಪ್ರಾಯದಿಂದ ಕೂಡಿದ್ದು ತಾತ್ವಿಕ ಸಮರ್ಥನೆ ಇರುವುದು. ಕೆಲವೊಮ್ಮೆ ಈ ಮಿತಿ ಮೀರಿದಾಗ ಅತ್ಯುತ್ತಮ ವಿಮರ್ಶೆಯಾಗಿ ನಿಲ್ಲುವುದುಂಟು. ಆದರೆ ಓದುಗರು ಹೀಗೆ ಆಲೋಚಿಸದೆ ಒಂದು ವಿಮರ್ಶಾ ಲೇಖನವನ್ನು ನೆಚ್ಚಿಕೊಂಡು ಬಿಡುತ್ತಾರೆ. ಆ ಲೇಖನದ ವಿಚಾರಗಳೇ ಅಂತಿಮ ಎಂಬ ಸರಳ ತೀರ್ಮಾನಕ್ಕೆ ಬರುತ್ತಾರೆ. ಒಂದು ಕೃತಿಯನ್ನು ಓದುವ ಗೋಜಿಗೆ ಹೋಗಬೇಕೋ, ಬೇಡವೋ ಎಂಬುದು ಅವರು ಆ ಲೇಖನದ ಓದಿನ ಭಾಗವಾಗಿಯೇ ನಿಲ್ಲುತ್ತದೆ. ಇಂತಹ ಸಂದರ್ಭದಲ್ಲಿ ವಿಮರ್ಶೆ ಓದುಗರನ್ನು ಎಡವಿಸುವ ಸಂಭವವಿರುತ್ತದೆ.

ಆದರೆ ವಿಮರ್ಶೆಯನ್ನು ಬಳಸುವವರು ಕೇವಲ ತಾತ್ವಿಕ ಸಿದ್ಧಾಂತಕಾರರು, ಸಾಹಿತ್ಯವನ್ನು ಗಂಭೀರವಾಗಿ ಬಲ್ಲ ಓದುಗರು (ಇತ್ತೀಚೆಗೆ ಕೇವಲ ಅಧ್ಯಾಪಕರು) ಎಂಬ ನಿಲುವು ಸಡಿಲಗೊಳ್ಳುತ್ತಿದೆ. ಏಕೆಂದರೆ ಹಲವಾರು ಪತ್ರಿಕೆಗಳಲ್ಲಿ ಕೃತಿಗಳನ್ನು ಸಾಮಾನ್ಯ ಓದುಗರು ವಿಮರ್ಶಿಸುವ ಮಟ್ಟಕ್ಕೆ ಇಂದು ತಲುಪಿಬಿಟ್ಟಿದ್ದಾರೆ. 'ಮಯೂರ' ದಂಥ ಮಾಸ ಪತ್ರಿಕೆ ಇಂಥ ಕೆಲಸ ಮಾಡುತ್ತಿದೆ. ಉದಾಹರಣೆಗಾಗಿ ಒಂದನ್ನು ಉಲ್ಲೇಖಿಸಬಹುದು.

ಅಕ್ಟೋಬರ್ 'ಮಯೂರ'ದಲ್ಲಿ ಪ್ರಕಟವಾಗಿದ್ದ ಎ.ಪಿ. ಮಾಲತಿ ಅವರ 'ಅರ್ಹತೆ' ಕಥೆಯ ವಿಮರ್ಶೆಯನ್ನು ಓದುಗರಿಂದ ಆಹ್ವಾನಿಸಿದ್ದರು. ಆ ಕಥೆಯ ಓದುಗರ ವಿಮರ್ಶೆಗಳನ್ನು ನೋಡಬಹುದು.[೨]

೧. ಮಾತೃತ್ವದ ಮುಂದೆ ಅರ್ಹತೆ ಶೂನ್ಯ.

ಇಂದಿನ ಕಂಪ್ಯೂಟರ್ ಯುಗದಲ್ಲಿ ಇದೊಂದು 'ಮನೆ- ಮನೆಯ ಕಥೆ' ಎಂದು ಹೇಳಿದರೆ ಅತಿಶಯೋಕ್ತಿ ಆಗಲಾರದು ಒಂದು ಅವಿಭಾಜ್ಯ ಕುಟುಂಬದಲ್ಲಿ ಅತ್ತೆ, ಸೊಸೆ, ಮಾತಾಪಿತೃ, ಮಗ ಇವರ ಸಂಬಂಧಗಳಲ್ಲಿ ಉದ್ಧರಿಸಬಹುದಾದ ಧರ್ಮ ಸಂಕಟದ ಪರಮಾವಧಿಯೇ ಈ ಕಥೆಯ ಮೂಲಸೂತ್ರ. ಈ ಸಂಬಂಧಗಳಲ್ಲಿ ಉಂಟಾಗುವ ಅನೇಕ ಭಾವನೆಗಳನ್ನು ವಿವಿಧ ತಳಮಳಗಳನ್ನು ಬಹಳ ಸೂಕ್ಷ್ಮ ರೀತಿಯಲ್ಲಿ ಕನ್ನಡಿಯಲ್ಲಿನ ಪ್ರತಿಬಿಂಬದಂತೆ ಲೇಖಕಿ ಎ.ಪಿ. ಮಾಲತಿಯವರು ಪ್ರತಿಪಾದಿಸಿದ್ದಾರೆ.

ಮನೆಯ ಸೊಸೆ ಅಲಕಾಳ ವಿದ್ಯಾರ್ಹತೆಯು ಕುಟುಂಬದ ಇತರರಿಗಿಂತ ಹೆಚ್ಚಿನದಾಗಿದ್ದು ಆಕೆಯ ಅಹಂಕಾರ ಆಡಂಬರಗಳು ಸುಖಸಂಸಾರಕ್ಕೆ ದಕ್ಕೆಯನ್ನುಂಟು ಮಾಡಿದೆ. ಈ ಕಥೆಯಲ್ಲಿ ಇದು ಬಹಳ ಗಮನಾರ್ಹ. ಆಗಾಗ್ಗೆ ಹೊಂದಾಣಿಕೆಗಳು ಕಂಡುಬಂದರೂ ಈ ರೀತಿಯ ನಡವಳಿಕೆ ಸುಗಮವಾಗಿ ನಡೆಸುವುದು ದುಸ್ಸಾಧ್ಯಮವಾಗಿ ಬಿನ್ನಾಭಿಪ್ರಾಯಗಳು ಮುಂದೆ ತಲೆದೋರಿ ಸಂಸಾರದಲ್ಲಿ ಬಿರುಕುಗಳು ಅಧಿಕವಾಗಿ ತೋರುತ್ತದೆ. ನಿಜವಾಗಿಯೂ ಇದೊಂದು ವಿಪರ್ಯಾಸವೇ ಸರಿ .

ಗಂಡು ಮಕ್ಕಳು ಬೆಳೆದು, ದೊಡ್ಡವರಾಗಿ ವಿವಾಹವಾದ ಮೇಲೆ ಅವರವರ ಸಂಸಾರದ ಜವಾಬ್ದಾರಿ ಅವರವರಿಗೇ ಸೇರಬೇಕೇ ವಿನಃ ಆ ಭಾರವನ್ನು ವಯಸ್ಸಾದ ತಂದೆ ತಾಯಿಗಳ ಹೆಗಲ ಮೇಲೆ ಹೇರುವುದು ಅಸಭ್ಯತೆ ಮತ್ತು ಅಧರ್ಮತನವೆಂಬುದು ಈ ಕಥೆಯಲ್ಲಿ ಅರ್ಥಗರ್ಭಿತವಾಗಿದೆ.

ಸುಮತಿಯವರ 'ವಿದ್ಯಾದಾನವು ಅತಿ ಶ್ರೇಷ್ಠದಾನ' ಎಂಬ ಅರಿವು ಸರಿಯಾದುದೇ ಆಗಿದೆ. ಆದರೆ ಭಾಸ್ಕರನ ದುರಾಲೋಚನೆ, ದುರಾಶೆ, ಸ್ವಾರ್ಥ ಮತ್ತು ದೊಡ್ಡಸ್ತಿಕೆಯ ಮಾತುಗಳು ಆತನ ತಾಯಿಯ ಸ್ವಾಭಿಮಾನ ಮತ್ತು ಸ್ವಾವಲಂಬನೆಗಳ ತಳಪಾಯವನ್ನೇ ಉರುಳಿಸುವಂತಾಯಿತು. ಸುಮತಿಗೆ ಒಂದು ಕಡೆ ಮೊಮ್ಮಗುವಿನ ಮೇಲೆ ಮಮತೆಯ ಜೊತೆಗೆ ತನ್ನದೆ ಕರುಳ ಕುಡಿಯ ಮೇಲೆ ಪ್ರೀತಿ, ವಾತ್ಸಲ್ಯಗಳು ಇಂತಹ ಸಂದರ್ಭದ ಸ್ಥಿತಿಯಲ್ಲಿ ತನ್ನ ಪತಿಯ ಅನುಕಂಪದ ಲೇಪನವು ಆಕೆಯನ್ನು ಸಮಾಧಾನಗೊಳಿಸುವಂತೆ ಮಾಡಿದೆ.

ಸಾಲದೆಂಬಂತೆ ಬೀಗಿತ್ತಿಯ ಸ್ವಾರ್ಥದ ಬಿರಿಸು ನುಡಿಗಳು ಆಕೆಯ ಮನಃ ಶಾಂತಿ ಕೆಡಿಸಿತು. ಈ ಎಲ್ಲಾ ಗೂಡಾರ್ಥದ ಮನಸ್ಸಿನ ತಳಮಳಗಳನ್ನು ಲೇಖಕಿ ಹೃದಯಂಗಮವಾಗಿ ರೂಪಿಸಿದ್ದಾರೆ. ಅಂತ್ಯದಲ್ಲಿ ಸುಮತಿ ಮತ್ತು ಶ್ಯಾಮರಾಯರು - ತಾವುಗಳು ಬೇರೆ ಬಾಡಿಗೆ ಮನೆ ಮಾಡಿಕೊಂಡು ವಾಸಿಸಲು ನಿರ್ಧರಿಸಿದ್ದೇ ಸಮಯೋಚಿತ ಮತ್ತು ನ್ಯಾಯಬದ್ಧವಾದ ನಿರ್ಣಯವಾಗಿದೆ. ಇದರಿಂದಾಗಿ ಮೂರು ಮುಖ್ಯ ಪರಿಣಾಮಗಳು ಉಂಟಾಗಲು ಅವಕಾಶ ಕಲ್ಪಿಸಿತು.

ಒಂದು. ಅಲಕಾಳಿಗೆ ತಾಯಿ - ಮಗುವಿನ ಸಂಬಂಧ ಸತ್ಯ ಅರಿವಾದಂತಾಯಿತು. ಮತ್ತು ಮಗಳನ್ನು ತಾಯಿಯು ಪರಿಪಾಲಿಸುವುದು ಆದ್ಯ ಕರ್ತವ್ಯ ಮತ್ತು ಜವಾಬ್ದಾರಿ ಎಂಬುದು ತಿಳುವಳಿಕೆಗೆ ಬಂದಂತಾಯಿತು. ಮಾತಾ ಪುತ್ರರ ಸಂಬಂಧ ಜನ್ಮ- ಜನ್ಮಾಂತರದ ಅನುಬಂಧವೇ ಅಲ್ಲವೇ?

ಎರಡು. ಭಾಸ್ಕರನ ತಂದೆ ತಾಯಿಗಳು ಬೇರೆ ಮನೆಯಲ್ಲಿ ವಾಸಿಸುತ್ತಾ ತಮ್ಮ ಅರ್ಹತೆ, ಘನತೆಗಳಿಗೆ ಯಾವ ತರಹದ ದಕ್ಕೆಯೂ ಇಲ್ಲದಂತೆ ನೆಮ್ಮದಿಯ ಜೀವನ ಕಳೆಯುವಂತಹದ್ದು. ಮೂರನೆಯದಾಗಿ ಮಗ ಸೊಸೆಯರಿಗೆ ತಮ್ಮ ಮೇಲೆ ಪ್ರೀತಿ ವಿಶ್ವಾಸ ಗೌರವಗಳು ಅಧಿಕವಾಗುವಂತೆಯೂ ಆಯಿತು.

ಲೇಖಕಿಯ ಕಥೆಯ ಅಂತ್ಯವನ್ನು ಎಲ್ಲರೂ ಮೆಚ್ಚುವಂತೆ ಸಮರ್ಥವಾಗಿ ಸುಖಾಂತಗೊಳಿಸಿದ್ದಾರೆ.

ಎಂ. ಎನ್. ಸೋಮಶೇಖರ್, ಮೈಸೂರು.

೨. ಕರ್ತವ್ಯದಿಂದ ಪಲಾಯನ

ಪ್ರತಿಯೊಬ್ಬ ವ್ಯಕ್ತಿಗೆ ಅವರದ್ದೇ ಆದ ವ್ಯಕ್ತಿತ್ವ ಇದೆ, ಭಾವನೆಗಳಿವೆ. ಪ್ರತಿಯೊಬ್ಬರಲ್ಲಿಯೂ ಇರುವ ಪ್ರತಿಭೆಯನ್ನು 'ಮೇಲು ಕೀಳು' ಎಂದು ವಿಂಗಡಿಸದೇ ಸಮಾನವಾಗಿ ಗೌರವಿಸುವುದನ್ನು ಕಲಿಯಬೇಕು ಎಂಬುದನ್ನು ಲೇಖಕಿಯವರು 'ಅರ್ಹತೆ' ಕಥೆಯಲ್ಲಿ ಚೆನ್ನಾಗಿ ವಿವರಿಸಿದ್ದಾರೆ. ಆದರೆ ಇವತ್ತಿನ ಸಮಾಜದಲ್ಲಿ ಭಾವನೆ, ಗುಣಗಳಿಗಿಂತ ಹಣಕ್ಕೆ ಹೆಚ್ಚಿನ ಪ್ರಾಮುಖ್ಯತೆ. ವ್ಯಕ್ತಿಗಳನ್ನು ಗೌರವಿಸುವುದನ್ನು ಕೂಡ ಅವರ ಹಣದಿಂದಲೇ. ಹಾಗಾಗಿ ಮನೆ, ಗಂಡ, ಮಕ್ಕಳು, ಎಂಬ ಭಾವನೆಗಳಿಗೆ ಹೆಚ್ಚಿನ ಪ್ರಾಶಸ್ತ್ಯವಿಲ್ಲ. ಉದ್ಯೋಗಸ್ಥ ಮಹಿಳೆಯರು ಔದ್ಯೋಗಿಕ ಜೀವನದ ಅಭಿವೃದ್ಧಿಗೂ ಹೆಚ್ಚಿನ ಪ್ರಾಶಸ್ತ್ಯ ಕೊಡಬೇಕಾಗುತ್ತದೆ. ಆ ಜಂಜಾಟದಲ್ಲಿ ಸಂಸಾರಿಕ ನೋವು ನಲಿವುಗಳಿಗೆ ಸ್ಪಂದಿಸಲು ಸಂಯಮ, ಸಮಯ ಇರುವುದಿಲ್ಲ. ಹಾಗಾಗಿ ಅಲಕಾಳ ವರ್ತನೆ ತೀರ ವಾಸ್ತವಿಕವಾಗಿ ತೋರುತ್ತದೆ. ಆದರೆ ಲೇಖಕಿಯವರು ಅದನ್ನು ತಪ್ಪು ಎಂಬಂತೆ ಚಿತ್ರಿಸಿದ್ದಾರೆ.

ಹಾಗೆಯೇ ಹಿರಿಯರಾದವರು ಕೂಡ ಸ್ವಲ್ಪ ಹೊಂದಾಣಿಕೆ ಮಾಡಿಕೊಳ್ಳಬೇಕು. ಕೆಲಸದಲ್ಲಿ ಇರುವ ಸೊಸೆ ಅಪೇಕ್ಷಿಸುವ ಅತ್ತೆ ಮಾವಂದಿರು ಅವಳ ಕಷ್ಟ ಸುಖಗಳಿಗೂ ಭಾಗಿಯಾಗಿರಬೇಕು. ಅವಳು ಕಛೇರಿಯಲ್ಲೂ ಕೆಲಸ ಮಾಡಿ, ಮನೆಯಲ್ಲೂ ಕೂಡ ಸತತವಾಗಿ ದುಡಿಯಬೇಕು. ಅಚ್ಚುಕಟ್ಟಾಗಿ ಸಂಸಾರ ಮನೆ ತೂಗಿಸಿಕೊಂಡು ಹೋಗಬೇಕು ಎಂದು ಬಯಸುವುದು ಎಷ್ಟು ಸರಿ? ಆ ಹಿನ್ನೆಲೆಯಲ್ಲಿ ನೋಡಿದಾಗ ಅಲಕಾಳ ವರ್ತನೆ ತಪ್ಪಾಗಿ ತೋರುವುದಿಲ್ಲ. ಹಿರಿಯರಾದವರು ಕಿರಿಯರಿಗೆ ತಿಳುವಳಿಕೆ ಕೊಡಬೇಕು. ಅವರು ತಪ್ಪಿದಲ್ಲಿ ಸಮಾಧಾನವಾಗಿ, ನಯವಾಗಿ ತಿದ್ದಿ ಹೇಳಬೇಕು. ತಮ್ಮ ಆತ್ಮ ಗೌರವವನ್ನು ಒತ್ತೆ ಇಡಬೇಕೆಂದು ಇದರರ್ಥವಲ್ಲ. ಕಿರಿಯರ ಅಭಿವೃದ್ಧಿಗೆ ಹೆಚ್ಚಿನ ಪ್ರೋತ್ಸಾಹ ಕೊಡಬೇಕಾದ್ದು ಅವರ ಕರ್ತವ್ಯ.

ಈ ಕಥೆಯಲ್ಲಿ ಸುಮತಿ ಮತ್ತು ಶ್ರೀನಿವಾಸರಾಯರು ಹಿರಿಯರು ಎಂಬ ಕಾರಣಕ್ಕೆ ಅನುಕಂಪ ತೋರಲಾಗಿದೆ. ಆದರೆ ತಮ್ಮ ಗೌರವಕ್ಕೆ ಕುಂದು ಬರುತ್ತಿದೆ. ಹೆಚ್ಚಿನ ಜವಾಬ್ದಾರಿ ತಾವೇ ಹೊರಬೇಕಾಗುತ್ತದೆ ಎಂಬ ಕ್ಷುಲ್ಲಕ ನೆಪ ಒಡ್ಡಿ ಬೇರೆ ಮನೆ ಮಾಡಲು ಹೊರಟಿದ್ದು ಕರ್ತವ್ಯ ಇರುವ ತಂದೆ ತಾಯಿಗಳು ಪ್ರತಿಷ್ಠೆ ಬೆಳಸಿಕೊಳ್ಳಬಾರದು. ಮಕ್ಕಳಿಗೆ ಮದುವೆ ಮಾಡಿದ ಕೂಡಲೇ ತಮ್ಮ ಆರ್ಥಿಕ ಜವಾಬ್ದಾರಿ ಮುಗಿದಂತಾದರೂ ಸಾಮಾಜಿಕ ಹೊಣೆಗಾರಿಕೆಯನ್ನು ಮರೆಯಬಾರದಿತ್ತು. ಒಟ್ಟಿನಲ್ಲಿ ಸುಮತಿ ಶ್ರೀನಿವಾಸರಾಯರು ಬೇರೆ ಮನೆ ಮಾಡಿದ್ದು 'ಪಲಾಯನವಾದವೇ' ಸರಿ ಅನ್ನಿಸಿತು.

- ಸುವರ್ಣ ಎಸ್. ಪಿ ಹಾಸನ.

'ಮಯೂರ' ಪತ್ರಿಕೆಯು ತನ್ನ ಪ್ರತಿ ಸಂಚಿಕೆಯಲ್ಲೂ ಒಂದು ಕಥೆಗೆ ಓದುಗರಿಂದ ವಿಮರ್ಶೆಯನ್ನು ಆಹ್ವಾನಿಸುತ್ತದೆ. ಆ ಮೂಲಕ ಓದುಗರಲ್ಲಿ ವಿಮರ್ಶನ ಶಕ್ತಿ ಬೆಳೆಯಲು ಸಹಾಯವಾಗುವಂತೆ ಮಾಡುವುದರ ಜೊತೆಗೆ ವಿಮರ್ಶೆಯನ್ನು ಸಾಹಿತ್ಯ ಓದುಗರನ್ನು ವಿಮರ್ಶಕರಾಗಿ ಬೆಳಸುತ್ತಿರುವುದು ಸತ್ಯದ ವಿಷಯ ಇದು ಸರಳವಾದ ಉದಾಹರಣೆ ಆದರೂ ಸಹ ಓದುಗರ ಪ್ರತಿಕ್ರಿಯೆಗಳು ವಿಚಾರ ಸಂಕಿರಣಗಳಲ್ಲಿ ಎತ್ತುವ ಮಹತ್ತರ ಪ್ರಶ್ನೆಗಳು ಇವೆಲ್ಲ ವಿಮರ್ಶೆಯನ್ನು ಬೆಳೆಸುತ್ತಿರುವುದು ನಿಜ.

ಈ ಮೇಲಿನ ಉದಾಹರಣೆಗಳು ಪುಸ್ತಕ ವಿಮರ್ಶೆಗಳಲ್ಲ. ಆದರೆ ವಿಮರ್ಶೆಗಳು, ವಿಮರ್ಶಾ ಲೇಖನಗಳು. ಓದುಗರು ಸಣ್ಣಕಥೆಗೆ ಪ್ರತಿಕ್ರಿಯೆ ಕೊಡುತ್ತ ಹೇಗೆ ವಿಮರ್ಶೆ ಬೆಳೆಸುತ್ತ ಹೋಗುತ್ತಾರೆ ಎಂಬುದನ್ನು ಇಲ್ಲಿ ಗಮನಿಸಬಹುದು. ಓದುಗರು ಪುಸ್ತಕ ವಿಮರ್ಶೆಯನ್ನು ರೂಪಿಸುವ ಸಂದರ್ಭಗಳು ನಮ್ಮಲ್ಲಿ ಬಹಳ ಕಡಿಮೆ. ಪುಸ್ತಕ ವಿಮರ್ಶೆ ಪ್ರಕಟಿಸುವ ಪತ್ರಿಕೆಗಳ ಮೇಲೆ ಈ ಅಂಶಗಳು ನಿಂತಿರುತ್ತವೆ. ಒಂದು ಪುಸ್ತಕವನ್ನು ಓದಿ ಓದುಗರು ಅದಕ್ಕೆ ತಾವು ಹಿತಾಸಕ್ತಿಯಿಂದ ಸ್ಪಂದಿಸುವ ನೆಲೆಯಲ್ಲಿ ಪುಸ್ತಕ ವಿಮರ್ಶೆಯನ್ನು ಬರೆದು ಪತ್ರಿಕೆಗೆ ಕಳಿಸಿದರೂ, ಪತ್ರಿಕೆಯವರು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸುವುದು ಬಹಳ ಕಡಿಮೆ. ಹಾಗೆ ಪ್ರಕಟಿಸುವುದಾದರೆ ಆ ಪುಸ್ತಕ ವಿಮರ್ಶೆಯನ್ನು ಬರೆದ ಪುಸ್ತಕ ವಿಮರ್ಶಕರು ಬಹಳ ಮುಖ್ಯರಾಗಿರಬೇಕು ಇಲ್ಲವೇ ಬರೆಸಿಕೊಂಡ ಪುಸ್ತಕ ಮುಖ್ಯ ಲೇಖಕರದಾಗಿರಬೇಕು. ಕೆಲವು ಪತ್ರಿಕೆಗಳು ಇವುಗಳನ್ನು ಮೀರಿ ಪ್ರಕಟಿಸಬಹುದು. ಆದರೆ ಅಂತಹ ಸಾಧ್ಯತೆಗಳ ಬಹಳ ಕಡಿಮೆ.

'ಓದುಗರ ವಿಮರ್ಶೆ'ಯಲ್ಲಿ ಪುಸ್ತಕ ವಿಮರ್ಶೆಯನ್ನು ಎರಡು ರೀತಿಯಲ್ಲಿ ಗುರುತಿಸಬಹುದು. ಪುಸ್ತಕ ವಿಮರ್ಶೆಗಿಂತ ಮುಂಚೆ ಕೃತಿಯನ್ನು ಓದಿ ಸ್ಪಂದಿಸಿ ಪ್ರತಿಕ್ರಿಯಿಸುವುದು ಒಂದು ನೆಲೆಯದಾದರೆ, ಇನ್ನೊಂದು ನೆಲೆಯಲ್ಲಿ ಪುಸ್ತಕ ವಿಮರ್ಶೆಯನ್ನು ಓದಿ ಅದಕ್ಕೆ ಓದುಗರು ಸ್ಪಂದಿಸುವುದು. ಇವೆರಡು ಸ್ವರೂಪದಲ್ಲಿ ಓದುಗರ ವಿಮರ್ಶೆ ರೂಪುಗೊಳ್ಳುತ್ತದೆ. ಮೊದಲನೇ ಸ್ವರೂಪದ ಪುಸ್ತಕ ವಿಮರ್ಶೆಯ ಸಾಧ್ಯತೆಗಳು ಬಹಳ ಕಡಿಮೆ. ಆದರೆ ಎರಡನೇ ಸ್ವರೂಪದ ಪುಸ್ತಕ ವಿಮರ್ಶೆಗಳ ಬಗೆಗಿನ ಪ್ರತಿಕ್ರಿಯೆಗಳು ಪುಸ್ತಕ ವಿಮರ್ಶೆ ಮತ್ತು ಸಾಹಿತ್ಯ ವಿಮರ್ಶೆಯನ್ನು ಓದುಗರ ಮೂಲಕ ಬೆಳೆಸುತ್ತವೆ.

೬.೧.೪. ಶತಮಾನದ ಸಮೀಕ್ಷೆಗಳು

ಹೊಸಗನ್ನಡ ಸಾಹಿತ್ಯ ಆಧುನಿಕ ಪ್ರಭಾವಗಳಿಂದ ಹುಟ್ಟಿ ಹಲವಾರು ಪ್ರಕಾರಗಳಿಗೆ ನಾಂದಿಯಾಯಿತು. ವಿಮರ್ಶೆಯೆಂಬ ಪ್ರಕಾಶ ಬೆಳೆಯಲು ಹೊಸಗನ್ನಡ ಸಾಹಿತ್ಯ ಸನ್ನಿವೇಶ ನಿರ್ಮಾಣ ಮಾಡಿಕೊಟ್ಟಿತು. ಕೇವಲ ಸಂಸ್ಕೃತಮೀಮಾಂಸೆಗೆ ಅಂಟಿಕೊಂಡು ಕೂತಿದ್ದ ಕನ್ನಡ ಸಾಹಿತ್ಯವನ್ನು, ವಿಮರ್ಶೆಯನ್ನು ಆದಷ್ಟು ಸ್ವತಂತ್ರವಾಗಿ ಆಲೋಚಿಸಲು ಅನುವುಮಾಡಿಕೊಟ್ಟಿತು. ಹೀಗೆ ಹೊಸದಾಗಿ ರೂಪುಗೊಂಡ ಕನ್ನಡ ವಿಮರ್ಶೆಯು ಒಂದು ಸಿದ್ಧಾಂತವಾಗಿ ಬೆಳೆಯಲಾರಂಭಿಸಿತು.

ವಿಮರ್ಶೆಯ ಬೆಳವಣಿಗೆಗೆ ಹಲವು ಪೂರಕವಾದ ಕೆಲಸ ಮಾಡುತ್ತದೆ. ಅವುಗಳಲ್ಲಿ ಶತಮಾನ ಸಮೀಕ್ಷೆಗಳ ಅಧ್ಯಯನದಲ್ಲಿ ಒಂದು ಗುಣಗ್ರಾಹಿಯಾದ ವಿಮರ್ಶಾ ಬರಹಗಳನ್ನು ಗುರುತಿಸಿ ವಿಮರ್ಶಾ ಬರಹಗಳನ್ನು ಪ್ರಕಟಿಸುವ ಯೋಜನೆಗಳು ಹಲವಿವೆ. ಅವುಗಳಲ್ಲಿ ಸಾಹಿತ್ಯ ಅಕಾಡೆಮಿ ಪ್ರಕಟಿತ ಕೃತಿಗಳು ಸಾಕ್ಷಿಯಾಗಿವೆ. ವಿವಿಧ ಪ್ರಕಾರಗಳಲ್ಲಿ ಪ್ರತಿ ವರ್ಷ ಪ್ರಕಟವಾದ ಬರಹಗಳ ಆಯ್ದ ಸಂಕಲನಗಳು ಪ್ರಕಟವಾಗುತ್ತಿವೆ. ಇಷ್ಟೇ ಅಲ್ಲದೇ ಕೆಲವಾರು ಸಾಹಿತ್ಯಕ ಪತ್ರಿಕೆಗಳು ಈ ನಿಟ್ಟಿನಲ್ಲೇ ಹಲವಾರು ಕೃತಿಗಳನ್ನು ಪ್ರಕಟಿಸಿದೆ. ಸಂಕ್ರಮಣ ಸಾಹಿತ್ಯ ಸಂಪುಟಗಳು, 'ಅನ್ವೇಷಣೆ ಪತ್ರಿಕೆಯ' ಬಂಡಾಯ ಹತ್ತು ವರ್ಷ ಪ್ರಶ್ನೋತ್ತರ ಮತ್ತು ವಿಶ್ವವಿದ್ಯಾಲಯಗಳು ವಿಚಾರ ಸಂಕಿರಣಗಳನ್ನು ನೆಡಸಿ ಅದರ ಪ್ರಕಟಣೆ,

ಸಾಹಿತ್ಯ ಸಮೀಕ್ಷೆಗಳು ಶತಮಾನದ ಸಂಕಲನಗಳು ಅಲ್ಲದೆ ಹಲವಾರು ಪತ್ರಿಕೆಗಳು ಒಬ್ಬ ಲೇಖಕರನ್ನು ಕುರಿತು ವಿವಿಧ ಲೇಖಕರಿಂದ ಬರೆಸಿ, ಕೃತಿ ರೂಪದಲ್ಲಿ ಪ್ರಕಟಿಸಿ ವಿಮರ್ಶೆಯನ್ನು ಬೆಳಸಿವೆ. ಉದಾಹರಣೆಗೆ. 'ಸಂವಾದ ಪತ್ರಿಕೆ' 'ಕಾಡಿನ ಹುಡುಗ ಕೃಷ್ಣ', 'ಬೋದಿಲೇರನ ಸಖ' ಮುಂತಾದ ಗ್ರಂಥಗಳನ್ನು ಪ್ರಕಟಿಸದೆ. ಅಕ್ಷರ ಪ್ರಕಾಶನದ ಪ್ರಕಟಣೆಗಳು, ಬೆಂಗಳೂರು ವಿಶ್ವವಿದ್ಯಾಲಯದ 'ಸಾಹಿತ್ಯ ವಾರ್ಷಿಕ' ಸಂಚಿಕೆಗಳು ಮುಂತಾದವುಗಳು ಈ ನಿಟ್ಟಿನಲ್ಲಿ ಕೆಲಸ ಮಾಡಿರುವುದು ಇಲ್ಲಿ ಮನನೀಯ. ಈ ಎಲ್ಲಾ ಸಂಕಲನಗಳು ಬಿಡಿಬಿಡಿಯಾಗಿ ಇಲ್ಲವೆ ಲೇಖಕರ ಕೃತಿ ಕುರಿತು ಸಮೀಕ್ಷೆಗಳಾಗಿ ಹೊರ ರೂಪದಲ್ಲಿ ಕಂಡರೂ ಅವುಗಳು ವಿಮರ್ಶೆಯನ್ನು ಅಥವಾ ಪರಂಪರೆಯನ್ನು ಗಮನಿಸಿದಾಗ ಸಂಪೂರ್ಣ ವಿಮರ್ಶೆಯ ತಾತ್ವಿಕ ಚೌಕಟ್ಟಿನಲ್ಲಿ ಬೆಳೆದ ಕೃತಿಗಳು ತುಂಬಾ ಕಡಿಮೆ. ಅಂದರೆ ವಿಮರ್ಶೆ ಒಂದು ಕೃತಿಯ ರೂಪದಲ್ಲಿ ಬೆಳೆದು ಬಂದಿಲ್ಲ ಬದಲಾಗಿ ಸಣ್ಣ ಲೇಖನಗಳ ಮೂಲಕ ಲೇಖಕರು ಕೃತಿಯನ್ನು ವಿಶ್ಲೇಷಿಸುವ ಮೂಲಕ ಕನ್ನಡ ವಿಮರ್ಶೆ ರೂಪುಗೊಂಡಿರುವುದನ್ನು ಕಾಣಬಹುದಾಗಿದೆ.

೬.೧.೫. ಪ್ರಸ್ತಾವನೆ / ಮುನ್ನುಡಿಗಳು / ಬೆನ್ನುಡಿಗಳು

ಮುನ್ನುಡಿಗಳು ಕೇವಲ ಆ ಕೃತಿಯನ್ನು ಕುರಿತವು ಎಂಬ ಮಿತಿಯೂ ಅಡಗಿದ್ದರೂ, ಕೆಲವು ಮುನ್ನುಡಿಗಳು ವಿಮರ್ಶೆಯನ್ನು ಕಟ್ಟುವಲ್ಲಿ ಮಹತ್ತರ ಕೆಲಸವನ್ನು ಮಾಡಿವೆ. ಮುಖ್ಯವಾಗಿ ಮುನ್ನುಡಿಗಳಲ್ಲಿ ಎರಡು ರೀತಿಯ ಬಗೆಗಳನ್ನು ಗುರುತಿಸಬಹುದು.

೧. ಲೇಖಕರೇ ಬರೆದುಕೊಳ್ಳುವ ಮುನ್ನುಡಿ / ಪ್ರಸ್ತಾವನೆಗಳು

೨. ಅನ್ಯ ಲೇಖಕರು / ಚಿಂತಕರು ಬರೆದ ಮುನ್ನುಡಿಗಳು

ಮೊದಲನೆ ರೀತಿಯ ಮುನ್ನುಡಿಗಳಲ್ಲಿ ಪ್ರಸ್ತುತ ಕೃತಿಯ ಒಳನೋಟಗಳಿಗಿಂತ ಅದು ಹುಟ್ಟಿ ಬಂದ ಸಾಂಸ್ಕೃತಿಕ ಹಿನ್ನೆಲೆಯ ವಿವರವಿರುತ್ತದೆ. ಇಂಥವುಗಳಲ್ಲಿ ಸಾಮಾನ್ಯವಾಗಿ ಕೃತಿಯ ವಿವರಗಳು ಹೊರ ಜಗತ್ತಿಗೆ ಸ್ಪಂದಿಸುವ ಆಯಾಮವನ್ನಿಟ್ಟುಕೊಂಡಿರುತ್ತವೆ. ಇವುಗಳಲ್ಲಿ ಲೇಖಕರೇ ಪ್ರಧಾನವೆಂಬಂತೆ ಕಂಡರೂ ಕೃತಿಯ ಒಳಗಿನ ವಿವರಗಳಿಗೆ ಹೊಸ ಚೌಕಟ್ಟನ್ನು ನಿರ್ಮಿಸಿಕೊಡುತ್ತಾರೆ. ತಮ್ಮ ಚಿಂತನೆಗಳಾಗಿ ತಾವೇ ಪ್ರತಿಕ್ರಿಯಿಸುವ ಸಂದರ್ಭ ಮತ್ತು ಅದನ್ನು ಕೃತಿಯನ್ನು ಎದುರಿಸಿಕೊಳ್ಳಬೇಕಾದ ಸನ್ನಿವೇಶಗಳನ್ನು ನಿರ್ಮಿಸಿಕೊಡುತ್ತಾರೆ. ಆ ಮೂಲಕ ತಮ್ಮ ಕೃತಿಯ ಅನುಭವಗಳನ್ನು ತಾವೇ ವಿಮರ್ಶಿಸಿಕೊಳ್ಳುವ ವಿಮರ್ಶನಾ ಸ್ವಾತಂತ್ರ್ಯ ಅವರ ಹಿನ್ನೆಲೆಯಲ್ಲಿರುತ್ತದೆ. 'ಅಬಚೂರಿನ ಪೋಸ್ಟಾಫೀಸು' ಕೃತಿಯಲ್ಲಿನ 'ಹೊಸ ದಿಗಂತದ ಕಡೆಗೆ' ಎಂಬ ಮುನ್ನುಡಿ, 'ಅಕ್ಷರ ಹೊಸ ಕಾವ್ಯ'ದ ಮುನ್ನುಡಿಗಳು ಸ್ವತಃ ಲೇಖಕರು ಮತ್ತು ಸಂಪಾದಕರು ಬರೆದುಕೊಂಡಿರುವ ಮುನ್ನುಡಿ ಅಥವಾ ಪ್ರಕಟಣೆಗಳು. ಇವುಗಳೆರಡೂ ಚಾರಿತ್ರಿಕವಾಗಿ ಮಹತ್ವವಾದವುಗಳು.

'ಹೊಸ ದಿಗಂತದ ಕಡೆಗೆ' ಎಂಬ ಶೀರ್ಷಿಕೆಯಡಿ ಲೇಖಕರು ಆ ಕೃತಿ ಪ್ರಕಟಿಸುವ ಕಾಲದ ಒತ್ತಡ, ಅನಿವಾರ್ಯತೆ ಮತ್ತು ಹೊಸ ಸಂವೇದನೆಗೆ, ವಿಚಾರಧಾರೆಗೆ ಹೊರಳಿಕೊಳ್ಳಬೇಕಾದ

ಅನಿವಾರ್ಯತೆಯನ್ನು ಸ್ಪಷ್ಟಪಡಿಸುತ್ತಾರೆ. ಇದು ಕನ್ನಡ ಸಾಹಿತ್ಯ ಮುಂದಿನ ಹಾದಿಗೆ ದಿಕ್ಸೂಚಿಯಾಗಿದೆ. ಇಲ್ಲಿ ಇವರ ಮೇಲೆ ಬೀರಿದ ಪ್ರಭಾವದ ಜೊತೆಗೆ ತಾವು ನವ್ಯದಿಂದ ಬೇರೆಯಾಗಿ ಹೊರಳಿಕೊಂಡ ಕಾರಣಗಳನ್ನು ಕುರಿತು ಚರ್ಚಿಸುತ್ತಾರೆ. ನವ್ಯ ಸಂದರ್ಭದಲ್ಲಿ ಪ್ರಮುಖವಾಗಿ ಎದುರಾದ ಸೈದ್ಧಾಂತಿಕ ತರ್ಕಗಳನ್ನು ಕುರಿತು ವಿಶ್ಲೇಷಿಸುತ್ತಾರೆ. ನವ್ಯ ಸಂದರ್ಭ ಬೌದ್ಧಿಕ ಆಡಂಬರದಿಂದ ತೊಳಲಾಡಿದುದರ ಪರಿಣಾಮವಾಗಿ ತಾವು ಹೊರಳಿಕೊಂಡ ಬಗೆಯನ್ನು ವಿವರಿಸುತ್ತಾರೆ. ಆ ಕಾಲದ ಸಾಂಸ್ಕೃತಿಕ ಹಿನ್ನೆಲೆ ಮತ್ತು ಪರಿಣಾಮದಿಂದ ಸಾಹಿತ್ಯ ಬದಲಾದುದರ ಚಾರಿತ್ರಿಕ ವಿಶ್ಲೇಷಣೆಯನ್ನು ಈ ಮುನ್ನುಡಿಯಲ್ಲಿ ಗುರುತಿಸಬಹುದು. ಮೊದಲ ಹೊತ್ತಿನ ಸಂದರ್ಭದಲ್ಲಿ ಬಂದಂಥ ಮುನ್ನುಡಿಗಳು ಹೆಚ್ಚಾಗಿ ಕೃತಿ ಅಥವಾ ಲೇಖಕರ ಸುತ್ತಲೇ ಸುತ್ತಿದ್ದವು. ಆದರೆ ಆನಂತರದ ದಶಕದಲ್ಲಿ ವಿಮರ್ಶೆಯನ್ನು ಪರಂಪರೆಯ ಸಂದರ್ಭದಲ್ಲಿಟ್ಟು ಚರ್ಚಿಸುವ ಕೃತಿಯ ಮುನ್ನುಡಿಗಳಲ್ಲಿ ಕೃತಿಯನ್ನು ಪರಂಪರೆಯ ಜೊತೆಯಲ್ಲಿಟ್ಟು ಕೃತಿಯ ಲೇಖಕರನ್ನು ನೋಡುವ ದೃಷ್ಟಿ ಬೆಳೆಯುತ್ತಾ ಹೋಯಿತು. ಅನೇಕ ಮುನ್ನುಡಿಗಳು ನಿರ್ದಿಷ್ಟ ಕೃತಿಗೆ ಸೀಮಿತವಾಗಿದೆ. ಒಟ್ಟು ಸನ್ನಿವೇಶವನ್ನು ಕುರಿತು ಮಹತ್ವದ ಮಾತುಗಳನ್ನು ಹೇಳಿವೆ, ಉದಾಹರಣೆಗೆ 'ಗರಿ', 'ನಾದಲೀಲೆ', 'ಮಾಂದಳಿರು', 'ಇಂಗ್ಲಿಷ್ ಗೀತಗಳು', 'ಭಾವತರಂಗ', 'ಚಂಡ ಮದ್ದಳೆ', 'ಭೂಮಿಗೀತ', 'ಅಡಿಗರ ಸಮಗ್ರ ಕಾವ್ಯ', 'ಆಧುನಿಕ ಕನ್ನಡ ಕಾವ್ಯ', 'ನಡೆದು ಬಂದ ದಾರಿ' ಮುಂತಾದ ಸಂಕಲನಗಳಿಗೆ ಬರೆದಿರುವ ಮುನ್ನುಡಿಗಳನ್ನು ಗಮನಿಸಿಸಬೇಕು. ಇಲ್ಲಿ ಕೃತಿಯಷ್ಟೇ ಮುಖ್ಯವಲ್ಲ. ಅದರ ಜೊತೆಗೆ ಕೃತಿಯ ಹಿನ್ನೆಲೆ, ಅದಕ್ಕೆ ಸಂಬಂಧಪಟ್ಟ ಇತರ ಕೃತಿಗಳ ಅಡಿಯಲ್ಲಿ ಅದು ತುಳಿಯಬೇಕಾದ, ಅದರ ಮಿತಿ, ಅದು ಇನ್ನು ತಿಳಿಸಬೇಕಾಗಿದ್ದ ವಿಚಾರ ಇವುಗಳನ್ನೆಲ್ಲ ಒಳಗೊಂಡ ಚರ್ಚೆಗಳು ನಡೆಯುತ್ತವೆ. ಮುನ್ನುಡಿಗಳಿಗೆ ಪ್ರಶಂಸಾತ್ಮಕ ಧೋರಣೆಯೆ ಮಿತಿ ಇರುತ್ತದೆ. ಪರಿಣಾಮವಾಗಿ ಸಾಹಿತ್ಯವಿಮರ್ಶೆಯ ಚರ್ಚೆ ನಡೆಯುವುದು ತೀರ ವಿರಳವೆಂದು ಗುರುತಿಸಬಹುದು. ಆದರೂ ಸಾಹಿತ್ಯ ತಿಳಿಯಬೇಕಾದ ಹಾದಿ ಯಾವುದು ಈ ಕೃತಿ ಅದರಲ್ಲಿ ಎಲ್ಲಿ ನಿಲ್ಲುತ್ತದೆ ಎಂಬುದನ್ನು ಸೂಕ್ಷ್ಮವಾಗಿ ಮುನ್ನುಡಿಕಾರರು ತಿಳಿಸುತ್ತಾರೆ. ಅಂತಹವುಗಳಲ್ಲಿ 'ನಾದಲೀಲೆ'ಗೆ ಬರೆದ ಮಾಸ್ತಿಯವರ ಮುನ್ನುಡಿ, 'ಗರತಿಯ ಹಾಡು' ಕೃತಿಗೆ ಬೇಂದ್ರೆಯವರ ಮುನ್ನುಡಿ, ಚಂದ್ರಶೇಖರ ಕಂಬಾರರ 'ಸಾವಿರದ ನೆರಳು' ಕೃತಿಗೆ ಬರೆದ ಮುನ್ನುಡಿಗಳು ಮುಖ್ಯವಾದವು. ಆ ಮೂಲಕ ವಿಮರ್ಶೆಗೆ ಹೊಸ ಹಾದಿ ಮಾಡಲೆಂದು ಮುನ್ನುಡಿ ಆಶಿಸಿರುವುದನ್ನು ಕಾಣಬಹುದು.

ಮುನ್ನುಡಿ ಸ್ವರೂಪ ಹಲವಾರು ಅರ್ಥಗಳನ್ನು ಒಳಗೊಂಡಿದೆ. ಕೆಲವರ ದೃಷ್ಟಿಯಲ್ಲಿ ಅದು ಕೃತಿ ವಿಮರ್ಶೆ. ವಿಮರ್ಶೆಯೆಂದರೆ ಮೋಹ ಮತ್ಸರಗಳನ್ನು ತ್ಯಜಿಸಿ ನಿರ್ದಾಕ್ಷಿಣ್ಯವಾಗಿ ಬೆಲೆಕಟ್ಟುವ, ಹೊಣೆಯುಳ್ಳ ಕೆಲಸವೆಂದೂ ಅದರಲ್ಲಿ ಗುಣದೋಷಗಳ ವಿವೇಚನೆ , ತೀರ್ಪು ಆಗಬೇಕು ಎಂಬುದು ಕೆಲವರ ಗ್ರಹಿಕೆ. ಆದರೆ ಇಂಥ ಮುನ್ನುಡಿ ಯಾವ ಕೃತಿಕಾರರಿಗೂ ನೆಮ್ಮದಿ ತರುವುದಿಲ್ಲ. ಆ ಕಾರಣದಿಂದ ಮುನ್ನುಡಿ ಕೃತಿಕಾರರ ಪರವಾಗಿರಬೇಕು. ಇನ್ನೊಂದು ಅರ್ಥದಲ್ಲಿ ಮುನ್ನುಡಿಯೆಂಬುದು ಲೇಖಕರ ಪರಿಚಯ ಮಾಡಿಕೊಡಲು ಸುಲಭವಾದ ಉಪಾಯ. ಅದನ್ನು ಮಾಡಿಕೊಡುವಾಗ

ಹೊಗಳಿಕೆ ಅನವಶ್ಯಕವಾಗಿ, ಔಪಚಾರಿಕವಾಗಿ, ಮಿತಿಯನ್ನು ಮೀರಿದರೂ ಮೀರಿ ನಡೆದು ಹೋಗುತ್ತದೆ. ಮುನ್ನುಡಿ ಲೇಖಕರನ್ನು ಕುರಿತ ಕೆಲವು ಒಳ್ಳೆಯ ಮಾತಾಗಿ ಪರಿಣಮಿಸುತ್ತದೆ. ಆದ್ದರಿಂದ ಅನೇಕರು ಮುನ್ನುಡಿಗಳನ್ನು ಓದುವುದೂ ಇಲ್ಲ, ಓದಿದರೂ ಲಕ್ಷವಿಟ್ಟು ಓದುವುದಿಲ್ಲ , ಹೇಳಿಕೆಗಳನ್ನು ನಂಬಲರ್ಹವಾದ ಸತ್ಯವೆಂದು ಸ್ವೀಕರಿಸುವುದಿಲ್ಲ.

ಮುನ್ನುಡಿ ಗ್ರಂಥದಲ್ಲಿ ಪ್ರತಿಪಾದಿತವಾದ ವಿಷಯವನ್ನು ಪರಿಶೀಲಿಸಿ ಒಂದೆರಡು ವಿಚಾರಗಳು ತೂರಿ ಬಂದಿದ್ದರೆ ಉಳಿದ ಎಲ್ಲ ವಿಚಾರಗಳನ್ನು ಎತ್ತಿ ತೋರಿಸಿ ಬಿಟ್ಟುಹೋದ ಅನೇಕ ವಿಚಾರಗಳನ್ನು ಅಂಶಗಳನ್ನು ಸೇರಿಸಿ ಪೂರ್ತಿಗೊಳಿಸುವ ಅನುಬಂಧವಾಗಿದೆ. ಮುನ್ನುಡಿಗಳಲ್ಲಿ ಎರಡು ಭಾಗ ಒಂದು ಲೇಖಕರ ವೈಯಕ್ತಿಕ ಪ್ರಶಂಸೆ, ಇನ್ನೊಂದು ಕೃತಿ ವಿಷಯದ ಮೇಲೆ ವಿಮರ್ಶೆ, ವ್ಯಾಖ್ಯಾನ. ಮೊದಲನೆಯದರಿಂದ ಒಬ್ಬ ವ್ಯಕ್ತಿಗೆ ತಾತ್ಕಾಲಿಕ ಪ್ರಯೋಜನ ದೊರೆತರೆ ಎರಡನೆಯದು ವಿಮರ್ಶಾ ಪರಂಪರೆಗೆ, ವಿಸ್ತಾರ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ್ದು ಶಾಶ್ವತವಾದದ್ದು. ಈ ಸ್ವರೂಪವನ್ನು 'ಶ್ರೀಯವರು', 'ಇಬ್ಸನ್', 'ಕನ್ನಡತೇರು', 'ಜೀವಕನ್ನಡ' ಕೃತಿಗಳಿಗೆ ಬರೆದ ಮುನ್ನುಡಿಗಳಲ್ಲಿ ಗುರುತಿಸಬಹುದು. ಕೆಲವು ಮುನ್ನುಡಿಗಳಲ್ಲಿ ಉದಾಹರಣೆಗಾಗಿ ವಿಶ್ಲೇಷಿಸಬಹುದು. 'ನಿರಂತರವಾದ ಅತೃಪ್ತಿ' ಎಂದು ಹೇಳುತ್ತಲೇ ಕೆ.ವಿ. ತಿರುಮಲೇಶ್‌ರವರು ಮುನ್ನುಡಿಯ ನೆಪದಲ್ಲಿ ಸಾಹಿತ್ಯ ಹುಟ್ಟಿನ ಮೂಲದ ಬಗೆಗೆ ಚರ್ಚೆ ನಡೆಸುತ್ತಲೇ ಅದರ ಹೊರಗಿನ ಪರಿಸರದಿಂದ ನಿರ್ಮಾಣವಾಗುವಂತಹದಲ್ಲ. ಅದು ಹುಟ್ಟಿನಿಂದ ಬರುವಂತಹದ್ದು ಎಂಬ ನಿಲುವಿಗೆ ಬಂದು ನಿಲ್ಲುತ್ತಾರೆ. ಇಲ್ಲಿ ಸಾಹಿತ್ಯ ಹುಟ್ಟುವಿಕೆಯ ನಿರ್ಧಾರಿಕೆಯಲ್ಲಿ ಅವರು ಸಾಹಿತ್ಯದ ಹುಟ್ಟಿನ ಚರ್ಚೆಗೆ ದಾರಿ ಮಾಡಿಕೊಟ್ಟಿದ್ದಾರೆ.

ಹೀಗೆ ಮುನ್ನುಡಿಗಳು ಚಾರಿತ್ರಿಕ ಮಹತ್ವದವುಗಳಾಗಿವೆ. ಬೆನ್ನುಡಿಗಳು ಸಹ ಈ ರೀತಿಯ ಕೆಲಸವನ್ನು ನಿರ್ವಹಿಸುತ್ತವೆ. ನವ್ಯ ಘಟ್ಟದಲ್ಲಿ-ಬಂದಿದ್ದ *ಹೊಸ ಸಾಹಿತ್ಯ ಪ್ರಕಾರಗಳ ಬಗ್ಗೆ ವಿವರಣೆ ಬದಲಾಗಿದ್ದ ಸೌಂದರ್ಯದೃಷ್ಟಿ, ವಾಸ್ತವಿಕತೆಯ ಸಮರ್ಥನೆ, ಚರ್ಚೆ ವಿಚಾರಗಳು ಈ ಕಾಲದ ಯಾವ ಲೇಖಕರ ಮುನ್ನುಡಿಯನ್ನು ಓದಿದರೂ ಸಿಗುತ್ತದೆ*[೩] ಈ ವಿಶ್ಲೇಷಣೆ ಮುನ್ನುಡಿ ನೆಪದಲ್ಲಿ ಸಾಹಿತ್ಯ ಕೃತಿಯ ಬಗೆಗಿನ ಚರ್ಚೆ ಮಾಡುವುದು ಸಾಹಿತ್ಯ ವಿಮರ್ಶೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸಿಕೊಡುತ್ತಿವೆ.

ಒಟ್ಟಾರೆ ಮುನ್ನುಡಿಗಳು ಪ್ರಶಂಸಾತ್ಮಕ ಮಿತಿಯಲ್ಲಿಯೇ ರೂಪುಗೊಂಡಿರೂ ಸಹ ಅವು ಕೃತಿಯ ಹೂರಣದ ಜೊತೆಗೆ ಕಾವ್ಯದ ಚರ್ಚೆ, ಕೃತಿ ಬಂದ ಸಾಂಸ್ಕೃತಿಕ ಹಿನ್ನೆಲೆಗಳನ್ನು ಅನಾವರಣ ಮಾಡುವ ರೀತಿಯನ್ನು ಗಮನಿಸಬಹುದು. ಮುನ್ನುಡಿ ಬರೆಸುವುದು ಕೃತಿಯ ಬಗೆಗೆ ಒಳ್ಳೆಯ ಅಭಿಪ್ರಾಯ ಬರಲೆಂದು. ಅಲ್ಲಿ ಅದೇ ಕೃತಿ ಕುರಿತು ಮೊದಲ ಮೌಲ್ಯ ಮಾಪನವೆಂದೇ ಹೇಳಬೇಕು. ಹೀಗಾಗಿ ಮುನ್ನುಡಿಕಾರರಿಗೆ ಈ ಜವಾಬ್ದಾರಿಯು ಅರಿವಿರುತ್ತದೆ. ಈ ಪರಿಣಾಮವಾಗಿ ಕೃತಿಯ ಬಗೆಗಿನ ಚರ್ಚೆ ಮಾಡುತ್ತಾರೆ.

೬.೧.೬ ಹಳೆಯ ಕೃತಿಗಳ ಮರು ಓದು

ವಿಮರ್ಶೆಯೆಂಬುದು ಒಂದೇ ಕಾಲಕ್ಕೆ ಸೃಷ್ಟಿಯಾಗುವಂತಹದಲ್ಲ. ಅದು ಸರಳ ಲೇಖನಗಳಿಂದ

ಆರಂಭವಾಗಿ ಹಲವು ಲೇಖನಗಳ ಮೂಲಕ ಗಟ್ಟಿಗೊಳ್ಳುವಂತಹದ್ದು. *ಕೃತಿಯ ವಿಮರ್ಶೆ ಎನ್ನುವುದು, ಆ ಕೃತಿ ರಚಿತವಾದ ಕಾಲದ ವಿಮರ್ಶಕರಿಂದಲೇ ಆಗಿ ಮುಗಿಯುವ ಕಾರ್ಯವಲ್ಲ, ನಿಜವಾದ ಕೃತಿ ಎಲ್ಲ ಕಾಲದ ವಿಮರ್ಶಕರ ವಿಚಾರಕ್ಕೆ ಒಳಗಾಗುವುದು. ಆ ಕೃತಿ ನಿಜವಾಗಿಯೂ ಮಹತ್ವದ್ದು ಎಂಬುದರ ಸಂಕೇತ. ಕೃತಿ ವಿಮರ್ಶೆ ಎನ್ನುವುದೋ ಯಾವಾಗಲೋ ಒಮ್ಮೆಗೆ ಅಭಿಪ್ರಾಯಗಳ ಮೌಲ್ಯ ವಿವೇಚನೆಯ ಸುರುಳಿಯಲ್ಲಿ ಸುತ್ತಿ ಭದ್ರವಾಗಿರಿಸುವ ಪ್ರಯತ್ನವಲ್ಲ ಆದೊಂದು ನಿರಂತರ ಕ್ರಿಯೆ*[೪] ಹೀಗಾಗಿ ಕೃತಿಯೆಂಬುದರ ಮೌಲ್ಯ ವಿಶ್ಲೇಷಣೆಯೆಂಬುದು ಒಂದೇ ಓದಿನ ಮೂಲಕ ರೂಪುಗೊಳ್ಳುವಂತಹದಲ್ಲ. ಅದರ ಸಾಂಸ್ಕೃತಿಕ ಹಿನ್ನೆಲೆಯ ಮೂಲಕ ಅನೇಕ ಹಂತಗಳನ್ನು ದಾಟಿ ಸ್ಪಷ್ಟರೂಪವನ್ನು ವಿಮರ್ಶೆ ಪಡೆದುಕೊಳ್ಳುತ್ತದೆ. ಹೀಗಾಗಿ ಒಂದೇ ಕೃತಿ ಕುರಿತು ಹಲವು ವಿಮರ್ಶೆಗಳು ಬಂದಿರುವುದನ್ನು ಗಮನಿಸಬಹುದು. 'ಮಲೆಗಳಲ್ಲಿ ಮದುಮಗಳು' ಕೃತಿಗೆ ಎಚ್. ಎಮ್. ಚನ್ನಯ್ಯ, ಎಂ.ಜಿ. ಕೃಷ್ಣಮೂರ್ತಿ, ಬಿ.ಕೃಷ್ಣಪ್ಪ ಇನ್ನೂ ಹಲವಾರು ಚಿಂತಕರು ಬರೆದಿರುವಂತಹದ್ದು, 'ಸಂಸ್ಕಾರ'ಕ್ಕೆ ಈ ಹೊತ್ತಿನಲ್ಲೂ ಆಗುತ್ತಿರುವ ಚರ್ಚೆ, 'ಒಡಲಾಳ'ದ ಬಗ್ಗೆ ಅನಂತಮೂರ್ತಿ, ಮನಜರ ವಿಶ್ಲೇಷಣೆ, 'ಸಂಕ್ರಾಂತಿ' ಕುರಿತು ಆದಂಥ ಚರ್ಚೆ ಮುಂತಾದ ಕೃತಿಗಳನ್ನು ನೋಡಬಹುದು. ಹಳೆಯ ಕೃತಿಗಳ ಓದು ಇತ್ತೀಚೆಗೆ ಹೊಸ ಆಲೋಚನೆಯನ್ನು ಬೆಳೆಸುತ್ತಿದೆ. ಹಳೆಯ ಕೃತಿಗಳ 'ಹೊಸ ಓದು', 'ಮರು ಓದು', 'ಮರು ಚಿಂತನೆ' ಈ ಸಂದರ್ಭದ ಓದು, ಜಾಗತೀಕರಣ ಸಂದರ್ಭದ ಓದು 'ಈ ಹೊತ್ತಿನ ಓದು' ಎಂಬ ಹೆಸರುಗಳಿಂದಲೇ ವಿಶ್ಲೇಷಣೆ, ವಿಮರ್ಶೆ ಆರಂಭವಾಗುತ್ತದೆ. ಒಂದು ಹಿಂದಿನ ಕೃತಿಯನ್ನು ಈ ಹೊತ್ತಿನ ಸಂದರ್ಭದಲ್ಲಿಟ್ಟು ಓದಲು ತೊಡಗಿಸಿಕೊಂಡಾಗ ಕೃತಿ ಕೊಡುವ ಒಳನೋಟಗಳು ತೀರ ಭಿನ್ನವೆನಿಸುತ್ತವೆ. ಈ ದಿಸೆಯಲ್ಲಿ ಹಳೆ ಕೃತಿಗಳ ಮರು ಓದನ್ನು ಕನ್ನಡ ವಿಶ್ವವಿದ್ಯಾಲಯದ 'ಕನ್ನಡ ಅಧ್ಯಯನ' ಪತ್ರಿಕೆಯ 'ಮರು ಓದು' ಅಂಕಣದಲ್ಲಿ ಹಳೆ ಕೃತಿಗಳು ಮರು ವಿಶ್ಲೇಷಣೆಗೆ ತೊಡಗಿರುವುದು, ಹೊಸ ಚಿಂತನೆಗಳನ್ನು, ಹೊಸ ಮೌಲ್ಯಗಳನ್ನು ಕೃತಿಯ ಮೂಲಕ ಸಮಕಾಲೀನತೆಗೆ ಸ್ಪಂದಿಸುವ ಒಳನೋಟಗಳನ್ನು ಶೋಧಿಸುತ್ತದೆ. ಕನ್ನಡ ವಿಶ್ವವಿದ್ಯಾಲಯದ ಮತ್ತೊಂದು ಪತ್ರಿಕೆ 'ಪುಸ್ತಕ ಮಾಹಿತಿ'ಯು ಈ ನಿಟ್ಟಿನಲ್ಲಿ ಕೆಲಸ ಮಾಡುತ್ತಿದೆ. ಹಳೆಯ ಕೃತಿಗಳ 'ಹಿಂದಿನ ಕೃತಿ' ಎಂದು ವಿಶ್ಲೇಷಣೆಗೆ ತೊಡಗಿಕೊಳ್ಳುತ್ತದೆ. ಈಗ 'ತುಷಾರ' ಮಾಸ ಪತ್ರಿಕೆಯಲ್ಲಿಯೂ 'ಹಳತು ಹೊನ್ನು', ಎಂಬ ಅಂಕಣದಲ್ಲಿ ಹಿಂದಿನ ಕೃತಿಗಳ ವಿಶ್ಲೇಷಣೆಯನ್ನು ಓದುಗರಿಂದಲೇ ಮಾಡಿಸುತ್ತಿದೆ. ಇದರಿಂದ ಓದುಗರನ್ನು ವಿಮರ್ಶಾತ್ಮಕವಾಗಿ ಬೆಳೆಸುವ ಕಾರ್ಯವನ್ನು ಮಾಡುತ್ತಿದೆ. ಇನ್ನು ಕೆಲವು ಪತ್ರಿಕೆಗಳಲ್ಲಿ 'ಮರೆಯಲಾಗದ ಪುಸ್ತಕ' ಎಂಬ ವಿಶೇಷಣಗಳೊಂದಿಗೆ ಚರ್ಚೆ ನಡೆಸಲಾಗುತ್ತದೆ.

ಹೀಗೆ ಹಿಂದಿನ ಕೃತಿಗಳ ಬಗೆಗೆ ಚರ್ಚೆ ಹೊಸ ಹೊಸ ರೀತಿಯಲ್ಲಿ ಮರುರೂಪಗೊಂಡಾಗ ಹಿಂದಿನದು ಕಳಪೆಯಾಗಿ ಕಾಣುವುದಿಲ್ಲ. ಅದು ಕೃತಿಯಲ್ಲಿ ಇನ್ನೊಂದು ಮುಖದ ಅರ್ಥಾಂತರಗಳನ್ನು ಅನಾವರಣ ಮಾಡುತ್ತ ಹೋಗುತ್ತದೆ. ಆಗಾಗ್ಗೆ ಸಮಕಾಲೀನಕ್ಕೆ ಕೃತಿ ಸ್ಪಂದಿಸುವುದೇ ಎಂಬುದರ ಚರ್ಚೆ ನಡೆದಾಗ ಕೃತಿಯ ಜೊತೆಗೆ ಸಮಕಾಲೀನ ಸಾಂಸ್ಕೃತಿಕ ಸಂದರ್ಭ ಮತ್ತು ವಿಮರ್ಶಾ

ಪರಂಪರೆ ಈ ಎರಡರ ಬಗೆಗಿನ ನಿಲುವು, ವಿಮರ್ಶಕನ ನೆಲೆಗಳು ಕೃತಿಯ ಹೊಸ ಓದಿನ ಮೂಲಕ ಸಾಬೀತಾಗುತ್ತ ಹೋಗುತ್ತದೆ. ಕೃತಿಯ ಆದರ್ಶದ ಮುಖೇನ ಹೊರಡುವ ವಿಶ್ಲೇಷಣೆಗೆ ಅದು ಪರಂಪರೆಯೊಂದಿಗೆ ಸ್ಪಂದಿಸಿ ಹೊಸ ಹೊಳಹುಗಳನ್ನು ಇಂಥ ಓದುಗಳು, ವಿಶ್ಲೇಷಣೆಗಳು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಇಂಥ ಓದುಗಳು ವರ್ತಮಾನದ ಪುಸ್ತಕ ವಿಮರ್ಶಾ ಸ್ವರೂಪವನ್ನು ರೂಪಿಸುತ್ತವೆ.

೬.೧.೭. ಪುಸ್ತಕ ವಿಮರ್ಶೆ ಸ್ವರೂಪ

ಈ ಅಧ್ಯಯನ ನೇರ ಈ ವಿಷಯಕ್ಕೆ ಸಂಬಂಧಿಸಿರುವುದರಿಂದ ಪುಸ್ತಕ ವಿಮರ್ಶೆಯ ವಸ್ತುನಿಷ್ಠ ಧೋರಣೆಯನ್ನು, ಬೆಳವಣಿಗೆಯ ಹಂತಗಳನ್ನು ಸೂಕ್ಷ್ಮವಾಗಿ ಆಲೋಚಿಸುವ ಕ್ರಮವು ಇದಾಗಿದೆ. ಪುಸ್ತಕ ವಿಮರ್ಶೆಯೆಂಬುದು ಆರಂಭವಾಗುವುದು ಕೃತಿ ಕುರಿತ ಮಾಹಿತಿ ಎಂಬ ಪ್ರಾಥಮಿಕ ವಿವರಗಳಿಂದ. ಹಾಗೆಯೇ ವಿಮರ್ಶೆಯು ಬೆಳೆಯಲು, ತೊಡಗಲು ಬೇಕಾದ ಮೂಲ ಆಕಾರ ಕೃತಿ. ಆದರೂ ಬಹುಪಾಲು ವಿಮರ್ಶೆಗಳು ಪುಸ್ತಕ ವಿಮರ್ಶೆಗಳನ್ನು ನೆಚ್ಚಿಕೊಂಡಿರುತ್ತವೆ. ಆ ಮೂಲಕ ವಿಮರ್ಶೆಗೆ ಮೂಲ ಆಕರವಾಗಿ 'ಪುಸ್ತಕ ವಿಮರ್ಶೆ' ಚರ್ಚೆಗೆ ಆಹ್ವಾನಿಸುತ್ತದೆ. ಪುಸ್ತಕ ವಿಮರ್ಶೆಯ ಚರ್ಚೆಯ ವಿವರಗಳು ಅತಿಸರಳ ಅಕಾಲಿಕವಾದಂತಹವು ಎನಿಸಿದರೂ ಸಹ ಅವುಗಳನ್ನು ಪ್ರತಿಸ್ಪಂದಿಸುವ ನೆಪದಲ್ಲಿ ಪ್ರತಿಕ್ರಿಯೆ ಹೇಳುವ ಸ್ವರೂಪದಲ್ಲಿ ಆ ಕೃತಿ ಬಗೆಗೆ ವಿಮರ್ಶೆ ರೂಪುಗೊಳ್ಳುತ್ತ ಹೋಗಬಹುದು.

ಇದರ ಈ ಕ್ರಿಯೆ ನಿರಂತರವಾಗಿ ನಡೆಯುತ್ತ ಹೋಗುವುದರಿಂದ ಪುಸ್ತಕ ವಿಮರ್ಶೆಗೆ ಒಂದು ಸ್ಪಷ್ಟ ನಿಲುವು ಇರುವುದರ ಅರಿವು ವಿಮರ್ಶಕರಿಗೆ ಗೋಚರವಾಗುತ್ತದೆ. 'ಪುಸ್ತಕ ವಿಮರ್ಶೆ'ಯ ನಿಲುವು ವಿಮರ್ಶಕರದೂ ಆಗಿದ್ದರೂ ಅದು ಪತ್ರಿಕೆಯ ಒಲವು ನಿಲುವಿಗೆ ಬದ್ಧವಾಗಿರಬಹುದು. ಹೀಗೆ ಒಂದು ಪತ್ರಿಕೆಯ ತಾತ್ವಿಕತೆ ಪುಸ್ತಕ ವಿಮರ್ಶೆಯ ನಿಲುವನ್ನು ನಿಯಂತ್ರಿಸುತ್ತದೆ. ಹೀಗೆ ನಿಯಂತ್ರಿಸುವ ಹೊತ್ತಿನಲ್ಲಿ ತಾನಿಟ್ಟುಕೊಂಡ ನಿಲುವುಗಳಿಗೆ ಅನುಗುಣವಾಗಿ ರಚಿತಗೊಂಡ ಕೃತಿಗಳನ್ನು ವಿಮರ್ಶೆಗೆ ಆಯ್ಕೆ ಮಾಡಿಕೊಳ್ಳುವುದು ಸಹಜ ವಿಚಾರ. ಇದರ ಪರಿಣಾಮವಾಗಿ ಬಿಡುಗಡೆಯಾದ ಎಲ್ಲ ಕೃತಿಗಳು ವಿಮರ್ಶೆಗೆ ಒಳಗಾಗುವುದಿಲ್ಲ, ಪುಸ್ತಕ ವಿಮರ್ಶೆಯಾಗುವುದಿಲ್ಲ. ಪ್ರಾತಿನಿಧಿಕವಾಗಿ ಕೆಲವು ಪತ್ರಿಕೆಗಳನ್ನು ಗಮನಿಸಿದರೆ ಅಲ್ಲಿ ಒಂದು ವಾರಕ್ಕೆ ಐವತ್ತು ಕೃತಿಗಳು 'ಪುಸ್ತಕ ವಿಮರ್ಶೆ'ಗಾಗಿ ಬಂದರೆ ಅವುಗಳಲ್ಲಿ ಪತ್ರಿಕೆಯವರು ಎರಡಕ್ಕೋ ಮೂರಕ್ಕೋ 'ಪುಸ್ತಕ ವಿಮರ್ಶೆ' ಮಾಡಿಸುತ್ತಾರೆ.

ಸಾದರ ಸ್ವೀಕಾರಕ್ಕೆ ಕೆಲವುಗಳನ್ನು ಆಯ್ದುಕೊಂಡು ಪ್ರಕಟಿಸುತ್ತಾರೆ. ಅಂದರೆ ಬಂದಂಥ ಐವತ್ತು ಕೃತಿಗಳಲ್ಲಿ ವಿಮರ್ಶೆಯಾಗುವುದು ಕೇವಲ ಎರಡೋ ಮೂರೋ, ಸಾದರ ಸ್ವೀಕಾರದಲ್ಲಿ ಸ್ಥಾನ ಸಿಗುವುದು ಹತ್ತನ್ನೆರಡು ಅಷ್ಟೇ. ಹೀಗೆ ಬಿಡುಗಡೆಗೊಂಡ ಎಲ್ಲಾ ಕೃತಿಗಳ ಕುರಿತ ಪುಸ್ತಕ ವಿಮರ್ಶೆ ಪ್ರಕಟವಾಗುವುದಿಲ್ಲ. ಇಂತಹ ಸಂದಿಗ್ದದಲ್ಲಿ ಹಲವು ಒಳ್ಳೆಯ ಕೃತಿಗಳು ಈ ಜಾಲದಿಂದ ತಪ್ಪಿಸಿಕೊಳ್ಳಬಹುದು.

'ಪುಸ್ತಕ ವಿಮರ್ಶೆ'ಯ ಮೂಲ ಮಾಧ್ಯಮವಾಗಿ ಸೃಷ್ಟಿಸುವ ಕಾರ್ಯದಲ್ಲಿ ಪತ್ರಿಕೆಗಳು ತೊಡಗಿವೆ.

ಸಾಹಿತ್ಯಕ ಪತ್ರಿಕೆಗಳಿಂದ ದಿನ ಪತ್ರಿಕೆಗಳವರೆಗೆ ಪುಸ್ತಕ ವಿಮರ್ಶೆಯ ವ್ಯಾಪ್ತಿ ವಿಸ್ತರಿಸಿದೆ. ಕನ್ನಡ ದಿನ ಪತ್ರಿಕೆಗಳು, ಇತರ ನಿಯತಕಾಲಿಕಗಳು ಹಾಗೂ ಅವುಗಳದೇ ವಿವಿಧ ವಿಶೇಷ ಸಂಚಿಕೆಗಳಲ್ಲಿ ಪುಸ್ತಕ ವಿಮರ್ಶೆಗಳಿವೆ. ಹಾಗೆಯೇ 'ಶ್ರೀ ಕೃಷ್ಣ ಸೂಕ್ತಿ', 'ಸುವಾಸಿನಿ'ಗಳಿಂದ ಹಿಡಿದು 'ಸಂಕ್ರಮಣ', 'ಅನ್ವೇಷಣೆ', 'ಸಂವಾದ' ಮುಂತಾದವುಗಳಿಂದ ಮೊದಲಾದ ಸಾಹಿತ್ಯಕ- ಸಾಂಸ್ಕೃತಿಕ ಪತ್ರಿಕೆಗಳ ಪುಸ್ತಕ ವಿಮರ್ಶೆಯ ಅಂಕಣಗಳು ವಿಮರ್ಶೆಯ ಬೆಳವಣಿಗೆಗೆ ಸಹಾಯ ಲೇಖನಗಳಾಗಿ ಮೂಡಿ ಬಂದಿವೆ. ಪುಸ್ತಕ ವಿಮರ್ಶೆಗಳಿಗೆ ಹಾಗೂ ಸಾಹಿತ್ಯಕ ಅಂಕಣಗಳಿಗೆ ಓದುಗರೊಂದಿಗೆ ನೇರ ಸಂವಹನದ ಅವಕಾಶವನ್ನು ಪತ್ರಿಕೆಗಳು ಮಾಡಿಕೊಡುತ್ತವೆ. ಕೆಲವು ಪತ್ರಿಕೆಗಳಲ್ಲಿಯೇ ತಮ್ಮ ಬದುಕಿನ ನಿರ್ದಿಷ್ಟ ಹಂತಗಳಲ್ಲಿ ಸಾಹಿತ್ಯಕ ಚಳುವಳಿಯೊಂದಿಗೆ ತಮ್ಮನ್ನು ಗುರುತಿಸಿಕೊಂಡಿವೆ. ನವ್ಯದಲ್ಲಿ 'ಸಾಕ್ಷಿ', 'ಶೂದ್ರ'ಗಳು ಬಂಡಾಯಕ್ಕಾಗಿ 'ಸಂಕ್ರಮಣ', 'ಅನ್ವೇಷಣೆ'ಗಳು ಪಡೆದುಕೊಂಡ ಪ್ರೇರಣೆ, ಮಾಡಿದ ಪ್ರಚಾರ ಇಲ್ಲಿ ಗಮನೀಯ. ಈ ಸಾಹಿತ್ಯಕ ಚಳುವಳಿಗಳ ಪ್ರಚಾರಕ್ಕಾಗಿ ಈ ಪತ್ರಿಕೆಗಳು ದುಡಿದಿವೆ.

ಪುಸ್ತಕ ವಿಮರ್ಶೆಗಾಗಿಯೇ ಮಿಸಲಾಗಿರುವ ಕೆಲವೇ ಕೆಲವು ಪತ್ರಿಕೆಗಳಲ್ಲಿ ವಿಮರ್ಶೆಯ ಬಗೆಗೆ ಕೃತಿಯನ್ನಷ್ಟೇ ಚರ್ಚೆ ಮಾಡುವ ಮಾದರಿಯನ್ನು ಬಳಸಿಕೊಂಡಿವೆ. 'ಪುಸ್ತಕ ಮಾಹಿತಿ', 'ಪುಸ್ತಕ ಲೋಕ' 'ಗ್ರಂಥ ಲೋಕ', ಇವುಗಳೆಲ್ಲ ಪುಸ್ತಕಗಳನ್ನು ಪರಿಚಯ ಮಾಡಿಕೊಡುವುದರ ಜೊತೆಗೆ, ವಿಮರ್ಶೆಯ ನಿಲುವಿನಿಂದಲೇ ಚರ್ಚೆಗೆ ತೊಡಗುತ್ತವೆ.

ಕೆಲವೊಮ್ಮೆ ಪುಸ್ತಕ ವಿಮರ್ಶೆಗಳು ಓದುಗರ ದಾರಿ ತಪ್ಪಿಸುವ ಅತಿರೇಕಕ್ಕೂ ಹೋಗಿವೆ. ಪುಸ್ತಕ ವಿಮರ್ಶೆಯನ್ನು ಓದಿ ಕೃತಿ ಅರ್ಥವಾಗಿದೆ ಎಂಬ ನಿರ್ಲಿಪ್ತ ಭಾವಕ್ಕೂ ಕಾರಣವಾಗುವ ಸಾಧ್ಯತೆಯಿದೆ. ಪುಸ್ತಕ ವಿಮರ್ಶೆಯ ಪ್ರಾಥಮಿಕ ಉದ್ದೇಶ ಪರಿಚಯವಷ್ಟೇ ಎಂದು ಒಪ್ಪಿಕೊಂಡರೂ, ಅದು ಚರ್ಚೆಯ ವಿವಿಧ ಸಾಧ್ಯತೆಗಳನ್ನು ಒಳಗೊಂಡಿರರುತ್ತದೆ. ಇದು ಪುಸ್ತಕ ವಿಮರ್ಶೆಯ ಮೌಲ್ಯದ ತಾತ್ವಿಕವಾದ ಮಹತ್ತರ ವಿಷಯ. ಆದರೆ ಇಂತಹ ಸಾಧ್ಯತೆಗಳು ವಿರಳವೆಂದೇ ಹೇಳಬೇಕು. ಆದರೂ ಅಪರೂಪಕ್ಕೊಮ್ಮೆ ಇಂತಹ ಪುಸ್ತಕ ವಿಮರ್ಶೆಗಳು ಬಂದಿವೆ. ಪುಸ್ತಕ ವಿಮರ್ಶೆಗಳು ಪರಿಚಯದ ಹಾದಿಯಲ್ಲೇ ನಡೆದರೆ ಅದು ಎಲ್ಲ ಓದುಗರಿಗೂ ಸಹಜವಾಗಿ ಸಂವಹನಗೊಳ್ಳುತ್ತವೆ. ಆದರೆ ಅದು ತಾತ್ವಿಕತೆ ಸೈದ್ಧಾಂತಿಕ ನಿಲುವು ಮುಂತಾದವುಗಳ ಸ್ವರೂಪ ಪಡೆದುಕೊಳ್ಳಲು ಯತ್ನಿಸಿದಾಗ ಓದುಗರಲ್ಲಿ ಸಾಮಾನ್ಯ ಮತ್ತು ಗಂಭೀರ ಎಂಬ ವಿಭಾಗವಾಗಿ ಒಡೆದು ಹೋಗಲು ಕಾರಣವಾಗುತ್ತದೆ. ಇಂತಹ ಸಂದರ್ಭದಲ್ಲಿ ಪುಸ್ತಕ ವಿಮರ್ಶಕರು ಯಾವ ಸ್ವರೂಪದ ವಿಮರ್ಶೆ ನಿಡಬೇಕೆಂದು ಪರಿತಪಿಸುತ್ತಾರೆ.

ಅವರ ಸ್ಥಿತಿ ಅಲುಗಿನ ಮೇಲಿನ ನಡುಗೆಯಂತೆ. ಸಾಮಾನ್ಯವಾಗಿ ಕೃತಿಯ ವಿವರಗಳನ್ನು ಕ್ವಚಿತ್ತಾಗಿ ಅಪೇಕ್ಷಿಸುವರು ಸಾಮಾನ್ಯ ಓದುಗರು, ಆದರೆ ಒಂದು ಕೃತಿಯ ಬಗೆಗಿನ ತುಂಬಾ ದೀರ್ಘ ಮತ್ತು ಸೈದ್ಧಾಂತಿಕ ಒಳನೋಟಗಳನ್ನು ಬಯಸುವ ಓದುಗರು ಗಂಭೀರ ಓದುಗರೆನ್ನಬಹುದು. ಇವರು ಸಾಹಿತ್ಯದ ಬಗೆಗೆ ಆಳವಾದ ವಿಚಾರಗಳನ್ನು ಉಳ್ಳವರು ಮತ್ತು ಆಲೋಚಿಸಬಲ್ಲವರು ಆಗಿರುತ್ತಾರೆ.

ಹೀಗಾಗಿ ಇವರು ಸೈದ್ಧಾಂತಿಕ ಮಾದರಿಯ ಪುಸ್ತಕ ವಿಮರ್ಶೆಯನ್ನು ಬಯಸುತ್ತಾರೆ. ಅದಕ್ಕಾಗಿ ಸಾಹಿತ್ಯ ಪತ್ರಿಕೆಗಳಲ್ಲಿನ 'ಪುಸ್ತಕ ವಿಮರ್ಶೆ'ಗಳಿಗೆ ಮೊರೆಹೋಗುತ್ತಾರೆ. ಅಲ್ಲಿನ 'ಪುಸ್ತಕ ವಿಮರ್ಶೆ' ಗೆ ವಸ್ತುನಿಷ್ಠವಾಗಿ ತಾವು ಸ್ಪಂದಿಸುತ್ತಾರೆ, ಪ್ರತಿಕ್ರಿಯಿಸುತ್ತಾರೆ. ಹಾಗೆಯೇ ಪುಸ್ತಕ ವಿಮರ್ಶಕರ ಹೊಣೆಗೇಡಿತನವನ್ನು ಪ್ರಶ್ನಿಸುವ ತಾಕತ್ತನ್ನು ವಿಚಾರಾತ್ಮಕ ಶಕ್ತಿಯನ್ನು ಪಡೆದಿರುತ್ತಾರೆ.

ಒಂದು 'ಪುಸ್ತಕ ವಿಮರ್ಶೆ' ಓದುಗರಿಗೆ ಸಂವಹನಗೊಂಡಂತೆ, ತೃಪ್ತಿ ಮತ್ತು ಒಂದು ಅನುಭವ ನೀಡಿದಂತೆ ಮೂಲ ಲೇಖಕರಿಗೆ ನೀಡಿರುವುದು ತುಂಬಾ ವಿರಳವೇ. ಏಕೆಂದರೆ ಲೇಖಕರು ಒಂದು ಕೃತಿಯನ್ನು ಬರೆದು ಪ್ರಕಟಿಸಿದಾಗ ಅದರ ಬಗೆಗಿನ ವಿಮರ್ಶೆಗೆ ಹೆಚ್ಚು ಕುತೂಹಲಿಯಾಗಿರುತ್ತಾರೆ. ಆ ಕೃತಿಯ ಮೇಲಿನ ಮೋಹ ಬಿಡುವುದಿಲ್ಲ ಹಲವು ಜನರ ಗಮನ ಸೆಳೆಯಲಿ ಎಂದು ಬಯಸುತ್ತಾರೆ. ಒಳ್ಳೆಯ ವಿಮರ್ಶೆ ಪ್ರಕಟವಾಗುವಂತೆ ಪ್ರಯತ್ನಿಸುತ್ತಾರೆ. ಸಾಧ್ಯವಾದರೆ ಬೇರೆ ಭಾಷೆಗೂ ಭಾಷಾಂತರಿಸುತ್ತಾರೆ. ಇವೆಲ್ಲ ಕೃತಿ ಬಗೆಗಿನ ಅತಿ ವ್ಯಾಕುಲದ ಸಹಜ ಕ್ರಿಯೆಗಳು. ಆದರೆ ವಿಮರ್ಶೆಗೆಂದು ಕೃತಿ ಕಳಿಸಿದಾಗ, ಅಥವಾ ತಾನಾಗಿ ವಿಮರ್ಶೆ ಬಂದಾಗ ವಿಮರ್ಶಕರ ಅಭಿಪ್ರಾಯಗಳನ್ನು ಗೌರವದಿಂದ ಸ್ವೀಕರಿಸುವುದು ತುಂಬಾ ವಿರಳ. ಅಂದರೆ ವಿಮರ್ಶಕರು ಬರೆದಂಥ ಆ ಎಲ್ಲ ಅಭಿಪ್ರಾಯಗಳನ್ನು ಲೇಖಕರು ಒಪ್ಪಬೇಕೆಂದಲ್ಲ ಲೇಖಕರಾದವರು ಆ ಅಭಿಪ್ರಾಯಗಳನ್ನು ಒಪ್ಪದೆಯೂ ಸೌಜನ್ಯದಿಂದ ಸ್ವೀಕರಿಸುವುದು ಸಾಧ್ಯ. ಟೀಕಿಸಿದಾಗಲೆಲ್ಲ ಯಾವದೋ ಉದ್ದೇಶಗಳನ್ನು ಹುಡುಕಿ ಆರೋಪದ ಪ್ರತಿಯಾಗಿ ಟೀಕಿಸತೊಡಗಿದರೆ, ವಿಮರ್ಶಕರು ಮೌನವಾಗಬೇಕಾಗುತ್ತದೆ. ಲೇಖಕರು ಹೀಗೆ ವಿಮರ್ಶಕರ ಮೇಲೆ ಹರಿಹಾಯುತ್ತ ತಮ್ಮ ಕೃತಿಗಳನ್ನು ಸಮರ್ಥಿಸಿಕೊಳ್ಳತೊಡಗಿದರೆ, ಆ ಸಂದರ್ಭದಲ್ಲಿ ವಿಮರ್ಶಕರನ್ನು ಅವಹೇಳನ ಮಾಡತೊಡಗಿದರೆ ಪರಸ್ಪರ ವೈಯಕ್ತಿಕ ಸಂಬಂಧಗಳು ಹದಗೆಡುತ್ತವೆ.

ಆಧುನಿಕ ಸಾಹಿತ್ಯವನ್ನು ಅಧ್ಯಯನ ಮಾಡುವಾಗ ಪ್ರಮುಖ ಘಟ್ಟಗಳು ನಮ್ಮ ಕಣ್ಣ ಮುಂದೆ ಬರುತ್ತವೆ. ಪುಸ್ತಕ ವಿಮರ್ಶೆಯ ಸ್ಥೂಲ ವಿಶ್ಲೇಷಣೆಗೆ ತೊಡಗಿದಾಗ ಪುಸ್ತಕ ವಿಮರ್ಶೆಗಳ ನಿಲುವುಗಳು ಆಯಾ ಕಾಲಘಟ್ಟಕ್ಕೆ ಅನುಗುಣವಾಗಿರುವುದು ಕಂಡು ಬರುತ್ತದೆ. ನವೋದಯ ಕಾಲದಲ್ಲಿ ಬರುತ್ತಿದ್ದ ಪುಸ್ತಕ ವಿಮರ್ಶೆಗಳು ಆತ್ಮೀಯವಾಗಿ ದರ್ಶಿಸುವ ಕಡೆಗಿದ್ದವು. ಅದು ಅವರ ವಿಮರ್ಶೆಯ ದೃಷ್ಟಿಯೂ ಹೌದು, ಹಾಗೆ ಪುಸ್ತಕವನ್ನು ಪರಾಮರ್ಶಿಸುವ ದೃಷ್ಟಿ ಹೌದು. ಉದಾಹರಣೆ ಇಂಗ್ಲಿಷ್ ಗೀತಗಗಳಿಗೆ ಬಂದಂಥ ವಿಮರ್ಶೆ, 'ಪ್ರಬುದ್ಧ ಕರ್ನಾಟಕ'ದಲ್ಲಿ ಬರುತ್ತಿದ್ದ ಪುಸ್ತಕ ವಿಮರ್ಶೆಗಳು. 'ಜೀವನ', 'ಜಯಂತಿ', ಮುಂತಾದ ಪತ್ರಿಕೆಗಳ ಪುಸ್ತಕ ವಿಮರ್ಶೆಗಳನ್ನು ಇಲ್ಲಿ ಹೆಸರಿಸಬಹುದಾದವುಗಳಾಗಿವೆ. ಹಾಗೇ ನವ್ಯ ಸಂದರ್ಭದಲ್ಲಿ ಬರುತ್ತಿದ್ದ ವಿಮರ್ಶೆಗಳು ಕೃತಿಗಳನ್ನು ಉನ್ನತ ಮಟ್ಟಕ್ಕೆ ಏರಿಸಿದ್ದು, ವಿವಿಧ ವಿಮರ್ಶಾ ಪರಿಕರಗಳಿಂದ ಕೃತಿಯನ್ನು ಬಿಡಿ ಬಿಡಿಯಾಗಿ ವಿಶ್ಲೇಷಿಸಿದ್ದನ್ನು ಕಾಣಬಹುದು. ಇತ್ತೀಚಿನ ಬಂಡಾಯ ಮತ್ತು ನಂತರದ ಪುಸ್ತಕ ವಿಮರ್ಶೆ ಬೇರೆ ಗತಿಯನ್ನು ಪಡೆದುಕೊಂಡಿದೆ. ಪುಸ್ತಕ ವಿಮರ್ಶಕರು ನವ್ಯದಲ್ಲಿ ಕೃತಿ ಮೌಲ್ಯ ನಿರ್ಣಯ ಮಾಡುವಾಗ ಬೌದ್ಧಿಕ ಸೈದ್ಧಾಂತಿಕ ಮತ್ತು ಕಲಾತ್ಮಕ ಅಂಶಗಳನ್ನು ಒಟ್ಟುಗೂಡಿಸಿ ಹೇಳಲಾರಂಭಿಸಿದರು. ಅದರ ನಂತರ ಸಾಂಸ್ಕೃತಿಕ ಅವರಣದಲ್ಲಿ ಕೃತಿಯನ್ನು ಹೊಸ

ದೃಷ್ಟಿಕೋನ, ಕೃತಿಯ ಬಗ್ಗೆ ಇನ್ನೂ ಹೆಚ್ಚಿನ ಒಳನೋಟಗಳನ್ನು ಹುಡುಕಲು ಯತ್ನಿಸಿದರು. ಹಿಂದಿನಂತೆ ಬಾಹ್ಯ ಶರೀರಕ್ಕೆ ಮನ್ನಣೆ ಕೊಡದೆ ಆಂತರಿಕ ವಿಷಯಗಳಿಗೆ ಹೆಚ್ಚು ಒತ್ತು ನೀಡಿದರು

ಪುಸ್ತಕ ವಿಮರ್ಶೆ ಮತ್ತು ವಿಮರ್ಶೆಗಳು ಬೇರೆ ಬೇರೆ ಎಂಬಂತೆ ಹೊರನೋಟಕ್ಕೆ ಕಂಡರೂ ಒಂದಕ್ಕೊಂದು ಬೆಸದುಕೊಂಡವುಗಳಾಗಿವೆ. ವಿಮರ್ಶೆಯ ಹುಟ್ಟಿಗೆ ಹಲವು ಕಾರಣಗಳಿದ್ದರೆ, ಪುಸ್ತಕ ವಿಮರ್ಶೆಯ ಹುಟ್ಟಿಗೆ ಕೃತಿಯ ಪರಿಚಯವೇ ಕಾರಣವಾಗಿರುತ್ತದೆ. ಆದರೆ ಅದು ಪರಿಚಯಕಷ್ಟೇ ನಿಲ್ಲದೆ ವಿವಿಧ ವಿನ್ಯಾಸಗಳನ್ನು ಪಡೆಯುತ್ತಾ ವಿಮರ್ಶೆಗೆ ವ್ಯಾಪ್ತಿಯನ್ನು ನೀಡುತ್ತದೆ. ವಿಮರ್ಶೆಯ ಬೆಳವಣಿಗೆಗೆ ಪೂರಕವಾದ ಚರ್ಚೆಯ ವಾತಾವರಣವನ್ನು ಪುಸ್ತಕ ವಿಮರ್ಶೆ ಬೆಳೆಸುತ್ತದೆ. ಓದುಗರನ್ನು ಪರಸ್ಪರ ಒಳಗು ಮಾಡಿಕೊಳ್ಳುವ ಯತ್ನವನ್ನು ಮಾಡುತ್ತದೆ.

ಪುಸ್ತಕ ವಿಮರ್ಶೆಯನ್ನು ಹಲವು ಮಿತಿಗಳು ನಿಯಂತ್ರಿಸುತ್ತಿದ್ದರೂ ಪುಸ್ತಕ ವಿಮರ್ಶೆ ಇದನ್ನು ಮೀರಿ ವ್ಯಾಪಕ ಗಂಭೀರ ಆಲೋಚನೆಗೆ ಪೂರಕವಾದ ಸಂವಾದವನ್ನು ಬೆಳಸುತ್ತದೆಂದು ಹೇಳಬಹುದು. ಹೀಗೆ ವಿವಿಧ ಆಯಾಮಗಳನ್ನು ಒಳಗೊಂಡಿರುವ ಪುಸ್ತಕ ವಿಮರ್ಶೆ ಪ್ರಸ್ತುತ ಸಂದರ್ಭದಲ್ಲಿ ಹಲವು ನಿಬಂಧನೆ, ಮನೋಧರ್ಮಗಳಿಂದ ಬಿಡುಗಡೆ ಪಡೆಯುತ್ತಿದೆ. ಇದರಿಂದ ಇದಕ್ಕೆಲ್ಲ ಪರಸ್ಪರ ಯೋಜಿತವಾಗಿ ಅರ್ಥಮಾಡಿಕೊಳ್ಳುವ ಓದುಗ ಸಂಪ್ರದಾಯವೊಂದು ನಿರ್ಮಾಣವಾಗತೊಡಗಿದೆ.

೬.೨ ಕನ್ನಡ ಸಾಹಿತ್ಯ ವಿಮರ್ಶೆ ಬೆಳೆಸುತ್ತಿರುವವರು

ಸಾಹಿತ್ಯವೆಂಬುದು ಏಕಸೃಷ್ಟಿಯಿಂದ ಆರಂಭವಾಗಿ ಸಮೂಹ ಸೃಷ್ಟಿ ಕಡೆಗೆ ಹೊರಳುತ್ತದೆ. ಸಾಹಿತ್ಯವೆಂಬುದು ಜನಜೀವನದ ಪ್ರತಿಬಿಂಬ ಎಂಬಂತೆ ಸಾಹಿತ್ಯ ಜನಗಳ ಮದ್ಯದಿಂದ ಹುಟ್ಟುತ್ತದೆ. ಸಮಾಜ - ಜನಗಳ ಅನುಭವಗಳು ಸಾಹಿತ್ಯದ ಒಲವಾಗಿ ಅಭಿವ್ಯಕ್ತವಾಗುತ್ತವೆ. ಈ ಕಾರಣದಿಂದ ಕಾವ್ಯ ವಿಮರ್ಶೆಯ ಕೆಲಸ ಅಂತಿಮವಾಗಿ ಲೋಕ ವಿಮರ್ಶೆಯೂ ಹೌದು. ಅಥವಾ ನನ್ನ ಮಟ್ಟಿಗೆ ಲೋಕ ವಿಮರ್ಶೆಯ ಒಂದು ರೂಪವೇ ಕಾವ್ಯ ವಿಮರ್ಶೆ " ಸಾಹಿತ್ಯ ಸಮೂಹ ಸೃಷ್ಟಿಯಾದಾಗ ಅದರ ವಿಮರ್ಶೆಯು ಸಮೂಹದ ಅಭಿವ್ಯಕ್ತಿಯಾಗಿಯೇ ರೂಪುಗೊಳ್ಳಬೇಕು. ಹಾಗೇ ರೂಪುಗೊಳ್ಳುವುದು ಸಾಹಿತ್ಯದ ಸೃಷ್ಟಿಯಂತೆ ಏಕವ್ಯಕ್ತಿಯಿಂದ ರೂಪುಗೊಳ್ಳುವುದಿಲ್ಲ. ಅದು ಅನೇಕ ಚಿಂತಕರ ಚಿಂತನೆಯಿಂದ ಬೆಳೆಯುತ್ತದೆ. ಒಂದು ಕೃತಿ ಪ್ರಕಟವಾದಾಗ ಅದಕ್ಕೆ ಬಂದಂಥ ಪ್ರತಿಕ್ರಿಯೆಗಳು, ಲೇಖನಗಳು, ವಿಮರ್ಶೆಯಾಗಿ ಬೆಳೆಯುತ್ತವೆ. ಹೀಗೆ ಅವುಗಳು ಕೃತಿಯ ಬಗೆಗೆ ಅಭಿಪ್ರಾಯ ರೂಪಿಸುತ್ತವೆ. ವಿಮರ್ಶೆಯು ತಾತ್ವಿಕವಾಗಿ ಬೆಳೆಯಲು ಕಾರಣವಾಗಿರುತ್ತವೆ.

೬.೨.೧. ಲೇಖಕರು

ಸಾಹಿತ್ಯದ ಮೂಲ ಬಿಂದು ಸಮಾಜ. ಸಮಾಜದ ಆಶಯಗಳು ಅಭಿವ್ಯಕ್ತವಾಗುವುದು ಲೇಖಕರ ಮೂಲಕ. ಕೃತಿಯೆಂಬುದು ಲೇಖಕರ ವೈಯಕ್ತಿಕ ಉತ್ಪಾದನೆಯೆಂಬಂತೆ ಮೇಲು ನೋಟಕ್ಕೆ ಕಂಡರೂ ಅದು ಸಮಾಜದ ಅಭಿವ್ಯಕ್ತಿಯಾಗಿದೆ. ಕೃತಿ ಸಮಾಜದ ರೂಪ ಪಡೆಯುತ್ತ ಹೋಗುತ್ತದೆ. ಲೇಖಕರಿಗೆ

ಬರೆಯಲು ಸಿಗುವ ಮೂಲವಸ್ತು ಸಮಾಜವಾಗಿರುವುದರಿಂದ ಅದರ ಅನುಭವಗಳನ್ನು ತಮ್ಮ ಅನುಭವಗಳನ್ನಾಗಿ ಮಾಡಿಕೊಂಡು ಕೃತಿ ರಚಿಸುತ್ತಾರೆ. ಲೇಖಕರು ಹೀಗೆ ಕೃತಿ ರಚಿಸುವ ಸಂದರ್ಭದಲ್ಲಿ ತಾವು ಸಮಾಜದಿಂದ ಪಡೆದುಕೊಂಡ ಅನುಭವಗಳನ್ನು ವಿಚಕ್ಷಣತೆಯಿಂದ ಕೃತಿಯಲ್ಲಿಡುತ್ತಾ ಹೋಗುತ್ತಾರೆ. ಸಾಹಿತ್ಯ ಕೃತಿ ಎಂದರೆ ಒಂದು ವಸ್ತುವಲ್ಲ, ಅದೊಂದು ಸಮಾಜದಿಂದ ಪ್ರತಿಬಿಂಬವಾದ ಪ್ರಕ್ರಿಯೆಯಾಗುತ್ತದೆ. ಸಾಹಿತ್ಯ ಕೃತಿಗಳಲ್ಲಿ ಇರುವ ಅಂಶಗಳೆಲ್ಲ ಸಮಾಜದಲ್ಲಿ ಜೀವಂತವಾಗಿ ಇರುವಂತಹವು. ಅಂದರೆ ಸಮಾಜ ಕೃತಿಯ ಮೂಲಕವು ಇತರರಿಗೆ ತನ್ನ ದರ್ಶನ ಮಾಡಿಸುತ್ತದೆ. ವಿವಿಧ ನೆಲೆಗಳ ಮೂಲ ಸ್ವರೂಪವನ್ನು ಬಿಚ್ಚಿಡುವುದು ಸಹಜವೇ ಆಗಿದೆ. ತನ್ನ ಸಮಾಜದ ಆಂತರಿಕತೆಯ ಅನುಭವಗಳು ಸಹಜವಾಗಿಯೇ ಮೂಡಿಬರುತ್ತವೆ. ಸಾಹಿತ್ಯ ಕೃತಿಯಲ್ಲಿ ವಸ್ತುನಿಷ್ಠ ಅಂಶಗಳ ಜೊತೆಗೆ ಅವುಗಳಿಂದಲೇ ರೂಪಿತಗೊಂಡ ವೈಯಕ್ತಿಕ ಅನುಭವಗಳ, ಸಂವೇದನೆಗಳ ವ್ಯಾಪಾರವಿರುವುದರಿಂದ, ಅಲ್ಲಿನ ಮೌಲ್ಯಗಳ ಪ್ರತಿಪಾದನೆಗಾಗಿ ಕೃತಿಸೃಷ್ಟಿಯಾದಂತೆ ಗೋಚರವಾಗುತ್ತದೆ. ಇದರ ಚರ್ಚೆ ಲೇಖಕರಿಂದ ಮುಂದೆ ಹೋಗಿ ವಿಮರ್ಶಕರ ಕಾರ್ಯವಾಗುತ್ತದೆ.

ಸಾಹಿತ್ಯ ಕೃತಿಯೊಂದು ವಿಮರ್ಶೆಯ ಮೂಲ ಆಕರವಾಗಿ, ವಿಮರ್ಶೆಯನ್ನು ಬೆಳೆಸುತ್ತ ಹೋಗುತ್ತದೆ ಎಂಬುದನ್ನು ಕೆ.ವಿ. ನಾರಾಯಣರವರು ಹೀಗೆ ಗುರುತಿಸುತ್ತಾರೆ.

ಸಾಹಿತ್ಯ ಸೃಷ್ಟಿಯ ಹಿಂದಿನ ಸಾಮಾಜಿಕ ಪ್ರೇರಣೆಗಳನ್ನು ಕುರಿತ ಚಿಂತನೆಗಳು ಕೃತಕಾರನನ್ನು ವ್ಯಕ್ತಿಯಾಗಿ ನೋಡುವ ಬದಲು, ಅವನನ್ನು ಒಂದು ವಿಶಿಷ್ಟ ಆಶಯವನ್ನುಳ್ಳ ಸಮೂಹದ ಭಾಗವನ್ನಾಗಿ ನೋಡುತ್ತದೆ. ಹೀಗೆ ಸಮೂಹದ ಭಾಗವನ್ನಾಗಿ ನೋಡುವಾಗ ವರ್ಗ ಮತ್ತು ವರ್ಗಗಳ ಪರಿಕಲ್ಪನೆಯನ್ನು ಬಳಸಲಾಗುತ್ತದೆ. ಕೃತಿಕಾರನಿಗೂ ಹೀಗೆ ಗುರುತಿಸಲಾದ ಸಾಮಾಜಿಕ ಸ್ತರಗಳಿಗೂ ಇರುವ ಸಂಬಂಧ ಹಾಗೂ ಆ ಸಂಬಂಧವು ಅವನ ಕೃತಿಯ ಆಶಯ ಮತ್ತು ಬಂಧಗಳನ್ನು ನಿಯಂತ್ರಿಸುವ ಕ್ರಮ ಇವುಗಳನ್ನು ಕುರಿತ ವಿಮರ್ಶೆಯಲ್ಲಿ ಅಭಿಪ್ರಾಯ ರೂಪದ ವಿಚಾರಗಳು ಮಂಡಿತವಾಗುತ್ತವೆ.[೬]

ಲೇಖಕರನ್ನು ಸಮೂಹದ ಭಾಗವನ್ನಾಗಿ, ಅವರ ಕೃತಿ ಸಮೂಹದ ಉತ್ಪನ್ನವಾಗಿ ಗುರುತಿಸುವ ಕಡೆಗೆ ಈ ಮಾತುಗಳಿವೆ. ಹಾಗೆಯೇ ಆ ಕೃತಿಯನ್ನು ನಿಯಂತ್ರಿಸುವ ಒಂದು ಸಮೂಹವೇ ಆಗಿದೆ. ಹಾಗಾಗಿ ಇವುಗಳನ್ನು ಕುರಿತು ಬಂದ ವಿಮರ್ಶೆಗಳು ಸ್ವರೂಪದಲ್ಲಿ ವಿಮರ್ಶೆಗಳಲ್ಲ ಅವು 'ಅಭಿಪ್ರಾಯ ರೂಪದ ವಿಚಾರಗಳು' ಎಂದು ಕರೆದಿದ್ದಾರೆ. ಆದರೆ ಆ ವಿಮರ್ಶೆಗೆ ಮೂಲ ಅಸ್ತಿತ್ವವಿರುವುದೇ ಅಭಿಪ್ರಾಯ ರೂಪದ ವಿಚಾರಗಳಲ್ಲಿ. ಹಾಗಾಗಿ ಅಭಿಪ್ರಾಯಗಳು ವಿಮರ್ಶೆಯ ಹುಟ್ಟು ಮತ್ತು ಅಭಿವ್ಯಕ್ತಿಗೆ ಕಾರಕ ಶಕ್ತಿಗಳಾಗಿ ನಿಲ್ಲುತ್ತವೆ. 'ಈ ಅಭಿಪ್ರಾಯ ರೂಪದ ವಿಚಾರಗಳು' ಹೊರಗಿನವೇ ಆದರೂ ಅವು ಕೃತಿ ಕೊಟ್ಟ ಒಳನೋಟಗಳಿಂದ ಚಿಂತಿತವಾದಂತಹವು.

ಅಂದರೆ ವಿಮರ್ಶೆ ಏಕಾಏಕಿ ಹುಟ್ಟುವುದಿಲ್ಲ. ಅದಕ್ಕೆ ಒಂದು ಸಾಮಗ್ರಿ ಬೇಕು. ಅದನ್ನು ಕೇಂದ್ರದಲ್ಲಿಟ್ಟು ಚಿಂತನ- ಮಂಥನ ನಡೆಸಿದಾಗ ವಿಮರ್ಶೆ ಬೆಳೆಯುತ್ತದೆ. ಅಂದರೆ ಕೃತಿಯಿಲ್ಲದೆ ಹೋದರೆ ಲೇಖಕರಿಲ್ಲದೆ ಹೋದರೆ ವಿಮರ್ಶೆಯೆಂಬುದು ಜನ್ಮ ತಾಳುವುದಿಲ್ಲ.

ವಿಮರ್ಶೆಯೆಂಬುದು ಇಂತಹ ಕೃತಿಗಳ ಮೇಲೆ ನಿಂತಿರುತ್ತದೆ. ನಮ್ಮ ಪ್ರಾರಂಭದ ಸಾಹಿತ್ಯಕ್ಕೆ ಈ ರೀತಿಯ ಅನುಕೂಲಗಳಿರಲಿಲ್ಲ. ಲೇಖಕರು ಬರೆದುದೆಲ್ಲ ಒಪ್ಪುವ ಸ್ವರೂಪ ಆ ಕಾಲದಲ್ಲಿತ್ತು. ವಿಮರ್ಶೆಯ ಪ್ರಯೋಜನ ಎಷ್ಟು ಮುಖ್ಯ ಎಂಬ ಚರ್ಚೆಯೇ, ಲೇಖಕರು ಅಂಥ ಕೃತಿಯನ್ನು ಸಮಾಜಕ್ಕೆ ಕೊಡಬೇಕು ಎಂಬುದರ ತೀರ್ಮಾನವು ಆಗುತ್ತದೆ. ವಿಮರ್ಶೆಯ ಮೂಲವನ್ನು ಗಮನಿಸಿದಾಗ ಕೃತಿಯೊಂದರ ಮರುಸೃಷ್ಟಿ, ಪ್ರತಿಸೃಷ್ಟಿ ಸಾಹಿತ್ಯ ಕೃತಿಯಲ್ಲಿಯ ಅಂಶಗಳನ್ನು ಹೆಕ್ಕಿ ಹೊರ ತೆಗೆದು ಪರಿಶೋಧಿಸುವ ಕೆಲಸವೆಂದು ಭಾವಿಸಲಾಗಿತ್ತು. ಸಾಹಿತ್ಯ ಕೃತಿ ಹುಟ್ಟದೇ ಹೋಗಿದ್ದರೆ, ವಿಮರ್ಶೆಯೆಂಬುದು ಹುಟ್ಟುತ್ತಿರಲಿಲ್ಲ. ವಿಮರ್ಶೆ ಹುಟ್ಟಿದ ಸಂದರ್ಭದಲ್ಲಿ ವಿಮರ್ಶೆಯೆಂಬುದು ಸಾಹಿತ್ಯ ಕೃತಿಯ ಬಂದಳಿಕೆಯಾಗಿತ್ತು. ವಿಮರ್ಶೆ ಯಾವಾಗಲೂ ಸ್ವತಂತ್ರವಲ್ಲ ಅದು ಪರಾವಲಂಬಿಯಾದುದು ಎಂಬ ಭಾವವಿತ್ತು. ಆದರೆ ಈಗ ಸ್ವತಂತ್ರ ಆಲೋಚನಾ ಕ್ರಮವಾಗಿದೆ. ಈ ನೆಲೆಯಲ್ಲಿ ಸಾಹಿತ್ಯ ಸೃಷ್ಟಿಸುವ ಲೇಖಕರು ವಿಮರ್ಶೆಯ ಹುಟ್ಟಿಗೆ ಕಾರಣವಾಗಿರುತ್ತಾರೆ. ಲೇಖಕರಿಲ್ಲದೆ ಹೋದರೆ ವಿಮರ್ಶೆಗೆ ಕ್ರಿಯೆಯಿಲ್ಲ. ಅವರು ರಚಿಸುವ ಕೃತಿ ಯಾವ ರೀತಿಯದೆಂದು ಹೇಳುವ ಕಾರ್ಯ ವಿಮರ್ಶೆಯಾಗಿರುತ್ತದೆ. ಈ ಕಾರಣದಿಂದ ವಿಮರ್ಶೆಯ ಸಾಂಸ್ಕೃತಿಕ ಅನಾವರಣಕ್ಕೆ ಕೃತಿ, ಕೃತಿಯ ಲೇಖಕರು ಮುಖ್ಯರಾಗಿರುತ್ತಾರೆ.

೬.೨.೨. ವೃತ್ತಿಪರ ವಿಮರ್ಶಕರು

ಸಾಹಿತ್ಯ ಕ್ಷೇತ್ರದಲ್ಲಿ ವಿಮರ್ಶೆಯೆಂಬುದು ಕೃತಿಯ ಮೇಲೆ ನಿಂತಿರುವುದರಿಂದ ಕೃತಿ ಬಗ್ಗೆ ಬರೆದ ಲೇಖಕರೆಲ್ಲ ವಿಮರ್ಶಕರಾಗಿ ಬೆಳೆಯಬಹುದು. ಆದರೆ ಒಂದು ವಿಮರ್ಶಾ ಪಂಥವನ್ನು ಕಟ್ಟಬೇಕಾದರೆ, ವಿಮರ್ಶೆಯನ್ನು ಗಂಭೀರವಾಗಿ ಆಲೋಚಿಸುವರು, ಕೃತಿಯೊಂದಿಗೆ, ಸಂವಾದಕ್ಕೆ, ವಾಗ್ವಾದಕ್ಕೆ ಇಳಿಯುವರು ಆಗಿರುತ್ತಾರೆ. ಇವರನ್ನು ವೃತ್ತಿಪರ ವಿಮರ್ಶಕರೆಂದು ಕರೆಯಬಹುದು. ಇವರು ಕೃತಿಯನ್ನು ತಮ್ಮ ವಿಮರ್ಶನಕ್ಕೆ ಒರೆಹಚ್ಚಿ ನೋಡುವ ಜೊತೆಗೆ ಒಂದು ವಿಮರ್ಶಾ ಪಂಥವನ್ನು ಕಟ್ಟ ತೊಡಗುತ್ತಾರೆ. ಇವರಿಗೆ ವಿಮರ್ಶೆ, ಕೃತಿ ಓದಿ ನೀಡುವ ತೀರ್ಮಾನವಾಗಿಯಷ್ಟೇ ಉಳಿಯದೇ, ಆ ಕೃತಿಯ ಇತರ ಅಂಶಗಳ ಕಡೆಗೆ ಗಮನಹರಿಸಿ, ಕೃತಿಯ ಯಶಸ್ಸು, ಅಪಯಶಸ್ಸುಗಳನ್ನು ಕುರಿತು ಯೋಚಿಸುವವರೂ ಆಗಿರುತ್ತಾರೆ ಹೀಗೆ ತಮ್ಮ ಯೋಚನೆಯ ನಿರ್ಧಾರಿಕೆಯಲ್ಲಿ ಕೇವಲ ಕೃತಿಯಾಗಿಯಷ್ಟೆ ಉಳಿಯದೇ ಅದು ಪರಂಪರೆ ಇನ್ನಿತರ ಸವಾಲುಗಳನ್ನು ಎದುರಿಸುತ್ತಾ ಹೋಗುತ್ತಾರೆ.

ವಿಮರ್ಶೆ ಒಂದು ಹಂತದಲ್ಲಿ ಕೃತಿಯ ಸಮೀಕ್ಷೆಯಾದರೆ, ಇನ್ನೊಂದು ಹಂತದಲ್ಲಿ ಅದು ಬೆಲೆಕಟ್ಟುವ ಜವಾಬ್ದಾರಿಯನ್ನು ವಹಿಸಿಕೊಳ್ಳುತ್ತದೆ. ಒಂದು ಕೃತಿಯನ್ನು ಚೆನ್ನಾಗಿ ನೋಡದೆಯೇ ಅದರ ಮೌಲ್ಯವನ್ನು ನಿರ್ಧರಿಸುವುದು ಸಾಧ್ಯವಿಲ್ಲ. ಈ ದೃಷ್ಟಿಯಿಂದ ವಿಮರ್ಶೆಯ ಮುಖ್ಯ ಕೆಲಸವಾದ ಕೃತಿಯನ್ನು ಅರ್ಥೈಸುವುದು ಪ್ರಯೋಗಶೀಲವಾದ ಇಂದಿನ ಸಾಹಿತ್ಯಕ ಸಂದರ್ಭದಲ್ಲಿ ಸಾಕಷ್ಟು ಜಟಿಲವಾದ ಕ್ರಿಯೆಯೂ ಆಗಿದೆ. ಇಂದು ವಿಮರ್ಶೆಯೇ ವಿಧಿ ವಿಧಾನಗಳು ಪ್ರೌಢವಾಗಿ ವಿಪುಲವಾಗಿ ಬೆಳೆದುದರಿಂದ ಒಮ್ಮೊಮ್ಮೆ ಕೃತಿಗಿಂತ ವಿಮರ್ಶೆಯ ಮಹತ್ವದ್ದಾಗಿ ಕಂಡುಬರುವುದುಂಟು. ವಿಮರ್ಶೆಯ

ಭಾಷೆಯಾಗಲಿ, ತಂತ್ರವಾಗಲಿ ತಮ್ಮ ಓದುಗರ ಲಕ್ಷ್ಯವನ್ನು ಸೆಳೆಯಲು ಪ್ರಯತ್ನಿಸದೆ ಕೃತಿಯ ಮೇಲೆ ಹೆಚ್ಚು ಬೆಳಕು ಚೆಲ್ಲಲು ವಿಮರ್ಶಕರಾದವರು ಮೊದಲು ಯೋಚಿಸುತ್ತಾರೆ. ಅನಂತರದಲ್ಲಿ ಅವರ ಆಲೋಚನೆ ಚಿಂತನೆಗಳು ಕೃತಿಯನ್ನು ದರ್ಶಿಸುವ ಕಡೆಗಷ್ಟೇ ನಿಲ್ಲದೆ, ಅದರಿಂದ ಹೊರಬಂದು ವಿಮರ್ಶೆಯನ್ನು ಕಟ್ಟುವ ಹೊಣೆಯನ್ನು ಹೊರುತ್ತವೆ. ಈ ಕಾರಣದಿಂದ ಈ ರೀತಿಯ ವಿಮರ್ಶಕರು ಬರೆಯುವ ಲೇಖನ ಕೃತಿಗೆ ಸಾಹಿತ್ಯ ಕೃತಿಯನ್ನಿಟ್ಟುಕೊಂಡು ಚರ್ಚಿಸಿದರೂ ಕೃತಿಯ ವಿಚಾರಗಳಲ್ಲದೆ ಇನ್ನಿತರ ವಿಚಾರಗಳು ಅದರಲ್ಲಿ ಸುಳಿದಾಡುತ್ತವೆ. ಇದಕ್ಕೆ ಕಾರಣ ಪ್ರೇರಕವಾದ ಸಾಂಸ್ಕೃತಿಕ ಸಂಗತಿಗಳ ಚಲನಶೀಲವು, ಮುಕ್ತವು ಆದ ಬಗೆಯಲ್ಲಿ ಇವರು ಸಂವಾದಕ್ಕಿಳಿಯುತ್ತಾರೆ. ಸಾಹಿತ್ಯತತ್ವ, ವಿವೇಚನೆ, ವಿಶ್ಲೇಷಣೆಗಳ ಜೊತೆ ಅಪಾರ ಜ್ಞಾನ ಶಾಖೆಗಳಿಂದ ಪಡೆದ ತಿಳಿವಳಿಕೆಗಳನ್ನು ಕೃತಿಗೆ ಒರೆಹಚ್ಚಿ ನೋಡುವ ದಿಟ್ಟತನವನ್ನು ಇವರು ತೋರುವ ಮೂಲಕ ವಿಮರ್ಶೆಗೆ ಒಂದು ನೆಲೆಯನ್ನು ತಂದು ಕೊಡುತ್ತಾರೆ. ವಿಮರ್ಶೆ ಒಬ್ಬರಿಂದ ನಿರ್ಮಾಣವಾಗುವುದಿಲ್ಲ ಎಂದು ಈಗಾಗಲೇ ತಿಳಿದುಕೊಳ್ಳಲಾಗಿದೆ. ಅದು ಹಲವಾರು ವಿಮರ್ಶಕರ ಈ ರೀತಿಯ ಚಿಂತನೆ, ಜ್ಞಾನಗಳಿಂದ ಪರಸ್ಪರ ವಾಗ್ವಾದ ಚರ್ಚೆಗಳಿಂದಲೇ ಬೆಳೆಯುತ್ತ ಹೋಗುತ್ತದೆ. ಇದಕ್ಕೆ ಸಾಹಿತ್ಯ ವಿಮರ್ಶೆಯನ್ನು ತೀಕ್ಷ್ಣವಾಗಿ ಅಭ್ಯಾಸ ಮಾಡಬಲ್ಲವರು ಹೆಚ್ಚು ಕೆಲಸ ಮಾಡುತ್ತಿದ್ದಾರೆ.

ವಿಮರ್ಶೆಯೆಂಬುದು ಕಾಲದಿಂದ ಕಾಲಕ್ಕೆ ಹೊಸ ದೃಷ್ಟಿಕೋನದಿಂದ ಬೆಳೆಯುತ್ತ ಹೊಸ ಸವಾಲುಗಳನ್ನು ಕಾಲಾಂತರದಲ್ಲಿ ಪ್ರತಿಕ್ರಿಯಿಸುತ್ತ ಹೋಗುತ್ತದೆ. ಅದು ಸಮಕಾಲೀನ ಸವಾಲುಗಳನ್ನು ಎದುರಿಸುತ್ತದೆ. ಇದನ್ನು ಎಸ್. ಶಿವಾನಂದ ಹೀಗೇ ಗುರುತಿಸುತ್ತಾರೆ. *ವಿಮರ್ಶೆಯ ಸವಾಲುಗಳು ಕೇವಲ ಸಾಹಿತ್ಯಕ ಪರಿಕಲ್ಪನೆಗಳ ಪರಿಷ್ಕಾರದಲ್ಲಿ ತಲ್ಲೀನಗೊಳ್ಳದೆ, ಈ ಸಾಹಿತ್ಯಕ ಪರಿಕಲ್ಪನೆಗಳಿಗೆ ಜೀವಧಾತುಗಳನ್ನೊದಗಿಸುವ ಬಂಡದ ಬೇರುಗಳತ್ತ ಚಾಚಿಸುತ್ತವೆ. ಸಾಮಾಜಿಕ, ಸಾಂಸ್ಕತಿಕ ತಾಂತ್ರಿಕ ನೆಲೆಗಳಲ್ಲಿ ಒಳಸುಳಿಯಾಗಿ ಪ್ರವಹಿಸುವ ತಾತ್ವಿಕ ದೃಷ್ಟಿಕೋನಕ್ಕೂ ಮತ್ತು ಸಾಹಿತ್ಯ ಪರಿಕಲ್ಪನೆಗಳಿಗೂ ಇರುವ ಅಂತರ ಸಂಬಂಧದ ಪರಿಜ್ಞಾನವನ್ನು ಈ ಸವಾಲುಗಳು ಬೇಡುತ್ತವೆ. ಈ ನಿಟ್ಟಿನಲ್ಲಿಯೇ 'ಸಾಹಿತ್ಯಕ' ಮತ್ತು ಸಾಹಿತ್ಯಕರ ಮೌಲ್ಯಗಳನ್ನು -ಮಾನದಂಡಗಳನ್ನು ಡಯಲೆಕ್ಟಿಕಲ್ ನೆಲೆಯಲ್ಲಿ ಕಂಡುಕೊಳ್ಳುವ ಸವಾಲನ್ನು ಕನ್ನಡ ವಿಮರ್ಶೆ ಈಗ ಎದುರಿಸುತ್ತಿದೆ.*[2]

ಇದು ವಿಮರ್ಶೆಯ ಸವಾಲುಗಳನ್ನು ಹೇಳುತ್ತಲೇ ವಿಮರ್ಶೆಯನ್ನು ಗಂಭೀರವಾಗಿ ತೆಗೆದುಕೊಂಡ ವಿಮರ್ಶಕರ ನಿಲುವು ಯಾವ ಕಡೆಗೆ ಹೊರಳುತ್ತದೆ ಎಂಬುದನ್ನು ವಿಶ್ಲೇಷಿಸುತ್ತದೆ. ಒಂದು ರೀತಿಯಲ್ಲಿ ಕೃತಿಯ ಬಗೆಗಿನ ವೈಯಕ್ತಿಕ ಅಭಿಪ್ರಾಯಗಳು, ಕೊಟ್ಟರೂಪಗಳು ವಿಮರ್ಶೆಯ ಹಾದಿಯನ್ನು ಸುಗಮಗೊಳಿಸುವಲ್ಲಿ ಇಲ್ಲವೆ ಹೊಸ ಹಾದಿಯನ್ನು ತೋರಿಸುವಲ್ಲಿ ಕೆಲಸ ಮಾಡುವುದನ್ನು ಕಾಣಬಹುದು.

೬.೨.೩. ಸಾಹಿತ್ಯ ಚರಿತ್ರೆಗಾರರು

ಸಾಹಿತ್ಯ ಚರಿತ್ರೆಯಲ್ಲಿ ಪ್ರತಿಯೊಂದು ಸಾಹಿತ್ಯ ಕೃತಿಯ ಸ್ಥಾನ ನಿರ್ಣಯ ಅತ್ಯಂತ ಪ್ರಮುಖಘಟ್ಟ. ಈ ಸ್ಥಾನ ನಿರ್ಣಯದಲ್ಲಿ ಸ್ಥೂಲವಾಗಿ ಮೂರು ಹಂತಗಳನ್ನು ಗುರುತಿಸಬಹುದು. ಒಂದು ಚಾರಿತ್ರಿಕವಾಗಿ ಎಂದರೆ ಕಾಲದ ದೃಷ್ಟಿಯಿಂದ ಕೃತಿಯೊಂದು ಯಾವ ಬಿಂದುವಿನಲ್ಲಿ ನಿಲ್ಲುತ್ತದೆ ಎಂಬುದರ ನಿರ್ಣಯ.

ಇದು ಮುಖ್ಯವಾಗಿ ಸಾಹಿತ್ಯಕ ಸಂಶೋಧನೆಯ ಕೆಲಸ. ಎರಡು - ಹೀಗೆ ನಿರ್ದಿಷ್ಟ ಕಾಲಘಟ್ಟವೊಂದರಲ್ಲಿ ನಿರ್ಮಾಣಗೊಂಡಿರುವ ಸಾಹಿತ್ಯ ಕೃತಿಗೊಂದು ತನ್ನ ಸಮಗ್ರ ಸಮಕಾಲೀನ ಸಾಹಿತ್ಯಕ ಪರಿಸರದ ಹಿನ್ನೆಲೆಯಲ್ಲಿ ಯಾವ ಸ್ಥಾನದಲ್ಲಿ ನಿಲ್ಲುತ್ತದೆ ಎಂಬುದರ ನಿರ್ಣಯ. ಮೂರು- ಇಂತಹ ಸಾಹಿತ್ಯ ಕೃತಿಯೊಂದು ಸ್ವರೂಪತಃ ತನ್ನ ಹಿಂದಿನ ಮತ್ತು ಮುಂದಿನ ಸಾಹಿತ್ಯ ನಿರ್ಮಿತಿಯ ಹಿನ್ನೆಲೆಯಲ್ಲಿ ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಯಾವ ಸ್ಥಾನದಲ್ಲಿ ನಿಲ್ಲುತ್ತದೆ ಎಂಬುದರ ನಿರ್ಣಯ. ಈ ಸ್ಥಾನ ನಿರ್ಣಯಗಳಿಂದ ಸಾಹಿತ್ಯ ಬೆಳೆದು ಬಂದ ಬಗೆಯನ್ನು ಸ್ಥೂಲವಾದರೂ ಒಂದು ಸ್ಪಷ್ಟ ರೂಪುರೇಷೆಯಲ್ಲಿಡುವುದಕ್ಕೆ ಸಾಧ್ಯವಾಗುತ್ತದೆ. ಇದು ಒಂದು ವಿಧದಲ್ಲಿ ಸಾಹಿತ್ಯ ಚರಿತ್ರಕಾರರಾದವರು ತಮಗೆ ದೊರೆತಿರುವ ಮೂಲ ಸಾಮಗ್ರಿಯನ್ನು ಹೆಚ್ಚಿನ ವಿಶ್ಲೇಷಣೆಗೆ ಒಳಪಡಿಸಿದಂತೆಯೇ ಆಗುತ್ತದೆ. ಈ ಕೊನೆಯ ಎರಡು ಸ್ಥಾನ ನಿರ್ಣಯ ಮುಖ್ಯವಾಗಿ ಸಾಹಿತ್ಯ ವಿಮರ್ಶೆಯ ಕೆಲಸವೇ ಆಗಿದೆ.

ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಸಾಹಿತ್ಯ ಚರಿತ್ರೆ ತನ್ನ ವಿಸ್ತರಣೆಯನ್ನು ಮೀರಿ ಸಾಹಿತ್ಯ ವಿಮರ್ಶೆಯ ಕೆಲಸ ಮಾಡುತ್ತದೆ. ಕೃತಿಗಳ ಕಾಲ ನಿರ್ಣಯ ಪರಿಶೀಲನೆ ಅಷ್ಟಕ್ಕೆ ನಿಲ್ಲದೆ ಹೊಸದೊಂದು ಆಯಾಮದ ಸ್ವರೂಪವನ್ನು ಪಡೆದುಕೊಳ್ಳುತ್ತದೆ. ಒಂದು ಸಾಹಿತ್ಯ ಕೃತಿ ಕಾಲ-ದೇಶ-ವ್ಯಕ್ತಿಗಳೊಂದಿಗೆ ಸಂಬಂಧವುಳ್ಳದ್ದು ಆಗಿರುವುದರಿಂದ ಚರಿತ್ರೆಯ ಸಂದರ್ಭದಲ್ಲಿ ಒಂದು ಕೃತಿ ತನ್ನ ಕಾಲದಲ್ಲಿ ನಿರ್ಮಾಣಗೊಂಡ ಬಗೆಯನ್ನಷ್ಟೇ ಅಲ್ಲದೇ ಅದು ತನ್ನ ಹಿಂದಿನ ಸಾಹಿತ್ಯಕ ಪರಂಪರೆಯೊಂದಿಗೆ ಪಡೆದುಕೊಂಡಿರುವ ಸಂಬಂಧದ ಸ್ವರೂಪ ಮತ್ತು ಅದಕ್ಕೆ ಪ್ರತಿಕ್ರಿಯಿಸಿರುವ ಬಗೆ ಎಂತಹುದೆಂಬುದನ್ನು ತಿಳಿಸುತ್ತದೆ. ಜೊತೆಗೆ ತನ್ನ ಮುಂದಿನ ಕಾಲ ಘಟ್ಟಗಳಲ್ಲಿ ಹೇಗೆ ಸ್ವೀಕೃತವಾಯಿತು. ಯಾವ ಯಾವ ರೀತಿಯ ಪ್ರಭಾವಗಳನ್ನು ಬೀರಿತು ಎಂಬುದನ್ನು ಗಮನಿಸಬೇಕಾಗುತ್ತದೆ. ಇದರಿಂದ ಪ್ರತಿಯೊಂದು ನಿರ್ದಿಷ್ಟ ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡ ಕೃತಿಗಳಲ್ಲೆಲ್ಲ ತಮ್ಮ ಮುಂದಿನ ಕಾಲಘಟ್ಟಗಳಿಗೂ ಇಳಿದು ವಿಶ್ಲೇಷಿಸುತ್ತ ಹೋದಂತೆ ಚರಿತ್ರೆಯನ್ನು ಹೆಚ್ಚು ಹೆಚ್ಚು ಸಂಕೀರ್ಣವಾಗಿಸುತ್ತ ಹೋಗುತ್ತದೆ. ಈ ಸಂಕೀರ್ಣತೆಯ ವಿವಿಧ ಪದರಗಳನ್ನು ವಿಶ್ಲೇಷಿಸುವ ಕೆಲಸ ಸಾಹಿತ್ಯ ವಿಮರ್ಶೆಯದು.

ಸಾಹಿತ್ಯ ಚರಿತ್ರೆಯ ಸಂದರ್ಭದಲ್ಲಿ ಸಾಹಿತ್ಯ ವಿಮರ್ಶೆಯ, ಕೆಲಸವೂ ಕೊಂಚ ನಡೆಯುತ್ತಿದೆ. ಈ ಬಗೆಯ ಸಾಹಿತ್ಯ ಚರಿತ್ರೆಯ ಕೆಲಸ ಆಧುನಿಕ ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕ್ರೈಸ್ತ ಮಿಷನರಿಗಳಿಂದ ಆರಂಭವಾಯಿತು. ಈ ಹಿನ್ನೆಲೆಯಲ್ಲಿ ಕಿಟಲ್‌ರು ೧೮೭೫ರಲ್ಲಿ (ನಾಗವರ್ಮನ 'ಛಂದೋಂಬುಧಿ') 'ಕನ್ನಡ ಛಂದಸ್ಸು' ಕೃತಿಗೆ ಬರೆದ 'An essay on kanarese literature' ಮುಖ್ಯ ಮತ್ತು ಮೊಟ್ಟಮೊದಲ ಲೇಖನ. ಆರ್. ನರಸಿಂಹಚಾರ್ ಅವರ 'ಕವಿ ಚರಿತೆ'ಸಂಪುಟ ೧(೧೯೦೭), ೨(೧೯೧೯), ೩(೧೯೨೯) ಗಳಲ್ಲಿ ಒಂದು ರೂಪವನ್ನು ಪಡೆದಿದೆ. ೧೯೮೯ರಲ್ಲಿ, ಇ. ಪಿ. ರೈಸರು ೧೯೧೫ರಲ್ಲಿ ಬರೆದ 'A History of canarese literature'ನ್ನು 'ಕನ್ನಡ ಸಾಹಿತ್ಯ ಚರಿತ್ರೆ' ಎಂಬ ಹೆಸರಿನಲ್ಲಿ ಸಂಗಮನಾಥ.ಜಿ. ಹೆಂಡಿ ಮತ್ತು ಕುಮಾರಿ ಪೌಲಿನ ನಂದಗಾಂವ ಅವರು ಕನ್ನಡಕ್ಕೆ ಅನುವಾದಿಸಿದ್ದಾರೆ. ೧೯೪೭ರಲ್ಲಿ ಶ್ರೀಯವರ ನೇತೃತ್ವದಲ್ಲಿ ಪ್ರಕಟವಾದ 'ಕನ್ನಡ ಕೈಪಿಡಿ'ಯ ಎರಡನೆಯ

ಸಂಪುಟ, ಜಿ. ವೆಂಕಟಸುಬ್ಬಯ್ಯನವರ 'ಕೆಲವು ಕನ್ನಡ ಕವಿಗಳ ಜೀವನ ವಿಚಾರ,' ರಂ.ಶ್ರೀ. ಮುಗಳಿಯವರ 'ಕನ್ನಡ ಸಾಹಿತ್ಯ ಚರಿತ್ರೆ' (೧೯೫೩) ಇದು ಆರಂಭದಿಂದ ೧೯ನೆಯ ಶತಮಾನದವರೆಗೆ ಬರೆದ, ಕನ್ನಡ ಸಾಹಿತ್ಯದ ಬಗ್ಗೆ ಹೆಚ್ಚು ನಿಖರ ವಿಚಾರಗಳನ್ನೊಳಗೊಂಡ ಕೃತಿ. ಎಂ. ಮರಿಯಪ್ಪಭಟ್ಟರು ಬರೆದ 'ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ(೧೯೬೦), ತ.ಸು. ಶಾಮರಾಯ ಮತ್ತು ನಂಜೇಗೌಡ ಅವರು ಬರೆದಿರುವ ಜನಪ್ರಿಯ 'ಕನ್ನಡ ಸಾಹಿತ್ಯ ಚರಿತ್ರೆ,' ಸಿ. ವೀರಣ್ಣನವರು ಬರೆದ 'ಕನ್ನಡ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ' : ರಾಜಸತ್ತೆಯ ಕಾಲ, ಬೆಂಗಳೂರು ವಿ.ವಿ.ಪ್ರಕಟಿಸಿದ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ'ಯ ೧೦ ಸಂಪುಟಗಳು (೧೯೮೫) ಮತ್ತು 'ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ'ಯ ಸಂಪುಟಗಳು, ಕೀರ್ತಿನಾಥ ಕುರ್ತುಕೋಟಿ ಅವರ 'ಕನ್ನಡ ಸಾಹಿತ್ಯ ಸಂಗಾತಿ' ಮತ್ತು ಅಸಂಖ್ಯಾತ ಲೇಖನಗಳು ಸಾಹಿತ್ಯ ಚರಿತ್ರೆಯ ಬಗ್ಗೆ ಸಾಕಷ್ಟು ಮಾಹಿತಿಯನ್ನು ನೀಡುತ್ತವೆ. ಮೇಲಿನ ಕೃತಿಗಳಲ್ಲಿ ಕನ್ನಡ ಸಾಹಿತ್ಯ ಚರಿತ್ರೆಯನ್ನು ಕುರಿತ ವಿವಿಧ ಮಗ್ಗುಲುಗಳ ಪರಿಚಯವನ್ನು ನಾವು ಕಾಣುತ್ತೇವೆ. ಇದೇ ನೆಲೆಯಲ್ಲಿಯೇ 'ಚಾರಿತ್ರಿಕ' ವಿಮರ್ಶೆ ರೂಪುಗೊಂಡಿರುವುದನ್ನು ಕಾಣಬಹುದು.

'ಸಾಹಿತ್ಯ ಚರಿತ್ರೆ' ಎಂಬ ವರ್ಗ (category) ಪರಂಪರೆ ಎಂಬ ವರ್ಗದಂತೆಯೇ ಒಂದು ಸಮುದಾಯ ತನ್ನ ತತ್ಕಾಲೀನ ಆವಶ್ಯಕತೆಗಳಿಗನುಸಾರವಾಗಿ ಕಟ್ಟಕೊಳ್ಳುವ 'ಅಮೂರ್ತ ರಚನೆ,' ಇಂತಹ ರಚನೆಗಳು ಅನಿವಾರ್ಯವಾಗಿ ಸಾಪೇಕ್ಷವಾಗಿರುತ್ತವೆ. ಮತ್ತು ಇವುಗಳಿಗೆ ಖಚಿತ ಚೌಕಟ್ಟುಗಳಿರುವುದರಿಂದ ಆ ಚೌಕಟ್ಟಿನಿಂದ ಹೊರಗುಳಿಯುವ/ಚೌಕಟ್ಟಗೆ ಸೇರದ ಎಲ್ಲಾ ಲೇಖಕರೂ/ ಕೃತಿಗಳೂ ಆ ಸಾಹಿತ್ಯ ಚರಿತ್ರೆಯಲ್ಲಿ ಅಲಕ್ಷ್ಯಕ್ಕೆ ಒಳಗಾಗತ್ತಾರೆ/ಒಳಗಾಗುತ್ತವೆ. [೮]

ಈ ವಿಶ್ಲೇಷಣೆ ಸಾಹಿತ್ಯ ಚರಿತ್ರೆಯ ಪ್ರಾಮುಖ್ಯತೆಯನ್ನು ಕಟ್ಟಿಕೊಡುವ ಮಾತುಗಳು. ಸಾಹಿತ್ಯ ಚರಿತ್ರೆಯನ್ನು ಬೇರೆಯ ರೀತಿಯಲ್ಲಿ ಅರ್ಥೈಸಲಾಗಿದೆ. 'ಸಾಹಿತ್ಯ ಚರಿತ್ರೆ'ಯನ್ನು ನಿರ್ಬಂಧಿತ ಚೌಕಟ್ಟು ಎಂದು ಅದಕ್ಕೆ ಸೇರಿಕೊಳ್ಳುವವು ಪ್ರಾಮುಖ್ಯತೆ ಗಳಿಸುತ್ತವೆ. ಹೊರಗುಳಿದರೆ ಅಲಕ್ಷ್ಯಕ್ಕೆ ಗುರಿಯಾಗುತ್ತವೆ ಎಂದು ಸ್ಪಷ್ಟಪಡಿಸುತ್ತಾರೆ. ಇವರ ಮೂಲಕವೇ 'ಸಾಹಿತ್ಯ ಚರಿತ್ರೆ'ಯ 'ಸಮುದಾಯದ ನಿರ್ಮಾಣ ಕ್ರಿಯೆ' ಎಂದು ಗುರುತಿಸುತ್ತಾರೆ. ಹಾಗೆ ಸಾಹಿತ್ಯ ಚರಿತ್ರೆಗಾರರ ಜವಾಬುದಾರಿಯು ಹೆಚ್ಚಿನದಾಗಿರುತ್ತದೆ.

ವಿಮರ್ಶೆಯೆಂಬುದು ಪ್ರಾಚೀನ ಕಾಲದಲ್ಲಿ ಭಾಷ್ಯ, ಟೀಕೆ ಬರೆಯುವ ಸ್ವರೂಪದಲ್ಲಿದ್ದುದು ಈಗ ವಿಮರ್ಶಿಸುವ ಕಾರ್ಯವಾಗಿ ರೂಪುಗೊಂಡಿದೆ. ವಿಮರ್ಶೆಯನ್ನು ತಮ್ಮ ಪ್ರತಿಕ್ರಿಯೆಯನ್ನು ಕೊಡುವುದರಿಂದ ಆರಂಭವಾಗಿ, ಕೆಲವೊಮ್ಮ ಓದುಗರ ಪ್ರತಿಕ್ರಿಯೆಗಳು ಇದಕ್ಕೆ ಪೂರಕವಾದ ಕೆಲಸವನ್ನು ಮಾಡುತ್ತವೆ. ಲೇಖಕರು ಕೇವಲ ಕೃತಿಯನ್ನು ಬರೆದು ಸುಮ್ಮನಾಗುವುದಿಲ್ಲ, ಅದಕ್ಕೆ ಬಂದಂಥ ವಿರೋಧ, ಅಪವಾದ, ಒಳ್ಳೆಯ ಇಂಥ ನಿಲುವುಗಳಿಗೆ ಪ್ರತಿಕ್ರಿಯಾತ್ಮಕವಾಗಿ ಸ್ಪಂದಿಸುತ್ತಾರೆ. *ಒಂದು ವಿಮರ್ಶೆ ಮೂಲಭೂತವಾಗಿ ಶ್ರೇಷ್ಠವಾಗುವುದು ಅದರ ತತ್ವ ವಿಮರ್ಶೆಯಿಂದಲೂ ಅಲ್ಲ ಅಥವಾ ಕೃತಿನಿಷ್ಠ ವಿಮರ್ಶೆಯಿಂದಲೂ ಅಲ್ಲ. ತನ್ನ ಭಾಷೆ ಮತ್ತು ಜನಾಂಗದ ಬಗ್ಗೆ ತನಗಿರಬೇಕಾದ ನೈತಿಕ ಹೊಣೆಗಾರಿಕೆಯನ್ನು ತಾನು ತಿಳಿದಾಗ ಮಾತ್ರ ಇದು ಸಾಧ್ಯ. ಇದಿಲ್ಲದ ಹುಳ್ಳ ಮನಸ್ಸು ಕೃತಿನಿಷ್ಠ ವಿಮರ್ಶೆ ಮಾಡಿದರೂ ತತ್ವವಿಮರ್ಶೆ ಮಾಡಿದರೂ ತನ್ನ ಮೌಲ್ಯ ಮಾಪನದ ಅಳತೆಗೋಲಿನ ಉದ್ದಗಲಗಳನ್ನು ನಿರಂತರ, ಬದಲಾಯಿಸುತ್ತ ಇರುತ್ತದೆ.* [೯] ಆದುದರಿಂದ ವಿಮರ್ಶೆಗ ಒಂದು

ನಿರ್ದಿಷ್ಟ ಅಳತೆಗೋಲು ಎಂಬುದು ಇಲ್ಲ ಎಂಬುದನ್ನು ಈ ಮೇಲಿನ ಮಾತುಗಳು ತಿಳಿಸುತ್ತವೆ. ಆದುದರಿಂದ ವಿಮರ್ಶೆ *ಯಾವಾಗಲೂ ಸಾಹಿತ್ಯ ಕೃತಿಗಳ ವಿಶ್ಲೇಷಣೆ - ವಿಮರ್ಶೆಗಳಿಗೆ ಮೀಸಲಾದ ಪರಾವಲಂಬೀ ಚಟುವಟಿಕೆಯಾಗಿಲ್ಲ* [೧೦] ಎಂಬ ಮಾತು ಅರ್ಥಪೂರ್ಣವಾದುದು. ಈ ನೆಲೆಯಲ್ಲಿ ವಿಮರ್ಶೆಯ ವ್ಯಾಪ್ತಿಯ ದಿಕ್ಕು ವಿಸ್ತೃತಗೊಳ್ಳುತ್ತಿದೆ.

ಒಂದು ಕೃತಿಯು ಅರ್ಥವಿವರಗಳನ್ನು ವಿಶ್ಲೇಷಿಸುವ, ಕೆಲವೊಮ್ಮೆ ಬೆಲೆಗಟ್ಟುವ, ಸಾರ್ವಜನಿಕಾಭಿಪ್ರಾಯವನ್ನು ರೂಪಿಸುವ ಸ್ವರೂಪವನ್ನು ಪುಸ್ತಕ ವಿಮರ್ಶೆ ಪಡೆದುಕೊಂಡಿದೆ. ಒಂದು ಕೃತಿಯು ಸಾರ್ವಜನಿಕಾಭಿಪ್ರಾಯವಾಗುವುದೆಂದರೆ ಅದು ಸಾಂಸ್ಕೃತಿಕ ವಲಯದಲ್ಲಿ ಚರ್ಚಿತವಾಗಬೇಕು. ಸಾರ್ವಜನಿಕ ಅಭಿಪ್ರಾಯದ ಪ್ರತಿನಿಧಿಯಾಗಿ ಪುಸ್ತಕ ವಿಮರ್ಶಕರು ನಿಂತರೆ ಓದುವ ಓದುಗರು ಅದರ ಮುಂದುವರಿಕೆಗೆ ಪೂರಕವಾದ ವಾತಾವರಣವನ್ನು ನಿರ್ಮಿಸುತ್ತಾರೆ. ಇದಕ್ಕೆ ಪತ್ರಿಕೆ ಒಂದು ಮಾಧ್ಯಮವಾಗಿ ಕೆಲಸ ಮಾಡುತ್ತದೆ.

ಉದ್ದೇಶಿತ ವಿವರಗಳನ್ನು ತಿಳಿಸುವಲ್ಲಿ ಲೇಖಕರು ಹೇಗೆ ಕಾತರಿಸುತ್ತಾರೋ, ಹಾಗೆಯೇ ಪುಸ್ತಕ ವಿಮರ್ಶಕರು ಕೂಡ ತಮ್ಮ ಉದ್ದೇಶಿತ ಕೃತಿ ವಿಮರ್ಶೆಯಲ್ಲಿ ಪೂರ್ಣ ಪ್ರಮಾಣದ ವಿವರಗಳನ್ನು, ವಿಶ್ಲೇಷಣೆಗಳನ್ನು ಮಾಡಲಾಗುವುದಿಲ್ಲ. ಹೀಗೆ ವಿಮರ್ಶೆ ಎಂಬುದರ ಒಂದು ಮಾದರಿಯೇ ಇಲ್ಲ. ಅಂದರೆ ವಿಮರ್ಶೆಯೆಂಬುದರ ಸ್ವರೂಪವನ್ನು ಗಮನಿಸಿದಾಗ ಹೆಚ್ಚಾಗಿ ವಿಶ್ವವಿದ್ಯಾಲಯಗಳ ಪಠ್ಯ ಪುಸ್ತಕಗಳನ್ನು ಆಧರಿಸಿದ ವಿಶ್ಲೇಷಣೆಯಾಗಿರುತ್ತದೆ. ವಿಮರ್ಶಕರ ನಿರ್ದಿಷ್ಟ ಓದುಗರು ವಿದ್ಯಾರ್ಥಿಗಳೇ ಆಗಿರುತ್ತಾರೆ. ಆ ಕಾರಣದಿಂದ ವಿಮರ್ಶೆಯು ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳ ಪಠ್ಯಗಳನ್ನು ಕುರಿತು ರಚಿತವಾಗಿರುವವು ಆಗಿರುತ್ತವೆ. ಒಂದು ಕೃತಿಯನ್ನು ಕುರಿತು ಒಬ್ಬನೇ ವ್ಯಕ್ತಿ ಕೃತಿ ಸ್ವರೂಪದ ವಿಮರ್ಶೆಯನ್ನೇಕೆ ನೀಡಿಲ್ಲ ಎಂಬುದಕ್ಕೆ ಉತ್ತರ ಕಂಡುಕೊಂಡರೆ ಇದರ ಅರ್ಥ ಸ್ಪಷ್ಟವಾಗುತ್ತದೆ. ಅಲ್ಲದೆ ನಮ್ಮ ಪ್ರಾರಂಭದ ವಿಮರ್ಶಾತ್ಮಕ ಟಿಪ್ಪಣಿಗಳೆಂದು ಗುರುತಿಸುವ ಭರತನ 'ನಾಟ್ಯಶಾಸ್ತ್ರ'ವಾಗಲಿ, ಅರಿಸ್ಟಾಟಲ್‌ನ Poeticsನ ವಿಮರ್ಶಾ ಟಿಪ್ಪಣಿಗಳಾಗಲಿ ಈ ಸ್ವರೂಪದವು. ಅಂದರೆ ಇವು ಕೃತಿಯಾಗಬೇಕೆಂದು ಬಯಸಿ ರಚಿತವಾದವುಗಳಲ್ಲ, ವಿದ್ಯಾರ್ಥಿಗಳಿಗೆ ಪಾಠ ಮಾಡಲು ಮಾಡಿಕೊಂಡ ಟಿಪ್ಪಣಿಗಳಾಗಿವೆ. ಈ ಟಿಪ್ಪಣಿಗಳೇ ವಿಮರ್ಶೆಯು ನೆಲೆಯಲ್ಲಿರುವುದು ಸತ್ಯಸಂಗತಿ. ಹೀಗೆ ವಿಮರ್ಶೆಯೆಂಬುದು ಉದ್ದೇಶಿತ ನಿರ್ದಿಷ್ಟ ಓದುಗರನ್ನು ಗಮನದಲ್ಲಿಟ್ಟುಕೊಂಡು ರಚಿತವಾಗಿರುವುದು ಆಗಿರುತ್ತದೆ. ಆದರೆ ಪುಸ್ತಕ ವಿಮರ್ಶೆ ಈ ಸ್ವರೂಪದಲ್ಲಿಲ್ಲ. ಇದು ಉದ್ದೇಶಿತ ಓದುಗರನ್ನು ಗಮನದಲ್ಲಿಟ್ಟುಕೊಂಡು ರಚಿತವಾದರೂ ಅದು ಎಲ್ಲರಿಗೂ ತಲುಪಬೇಕೆಂಬ ಉದ್ದೇಶದಿಂದ, ಪ್ರಚಾರದ ಉದ್ದೇಶದಿಂದ ರೂಪುಗೊಂಡಿದೆ. ಈ ಕಾರಣದಿಂದ ಪುಸ್ತಕ ವಿಮರ್ಶೆ ವಿಮರ್ಶೆಗಿಂತ ಭಿನ್ನವಾಗಿ ನಿಲ್ಲುತ್ತದೆ. ಆದರೆ ಪುಸ್ತಕ ವಿಮರ್ಶೆಯೆಂಬುದು ಅನಾವರಣಗೊಳ್ಳಲು ಒಂದು ಮಾಧ್ಯಮ ತುಂಬಾ ಅವಶ್ಯಕವಾಗಿರುತ್ತದೆ. ಪತ್ರಿಕೆಗಳು ಪುಸ್ತಕ ವಿಮರ್ಶೆಯಲ್ಲಿ ತುಂಬಾ ಮಹತ್ವದ ಕೆಲಸವನ್ನು ನಿರ್ವಹಿಸುತ್ತವೆ. ಬಂದಂಥ ಹಲವಾರು ಕೃತಿಗಳು ತಮ್ಮ ವಿವರಗಳಿಂದ ಅನಾವರಣಗೊಳ್ಳಲು ಪತ್ರಿಕೆಯು ಮುಖ್ಯವಾಗಿರುತ್ತದೆ.

ಇಂದಿನ ವಿಮರ್ಶೆಯು ಹಲವು ಕ್ಷೇತ್ರಗಳಲ್ಲಿ, ಹಲವು ಮಟ್ಟಗಳಲ್ಲಿ, ವಿಭಿನ್ನ ಮಾಧ್ಯಮಗಳ ಮೂಲಕ ನಡೆಯುತ್ತಿದೆ. ಇವುಗಳಲ್ಲಿ ಪರಸ್ಪರ ಪೂರಕತೆಯಿದೆ. ಈ ಕೆಲಸದ ಅರ್ಥಪೂರ್ಣತೆಯನ್ನು ಕಂಡುಕೊಳ್ಳುವ ಗಂಭೀರ ಪ್ರಯತ್ನದಿಂದ ಹಿಡಿದು ಪುಸ್ತಕ ವಿಮರ್ಶೆ ಸಾಹಿತ್ಯ ಪರಿಚಯಗಳಂತಹ ಅಭಿರುಚಿ ನಿರ್ಮಾಣದವರೆಗೆ ಹಬ್ಬಿದೆ. ವಿಮರ್ಶೆಯ ಈ ಬೇರೆ ಬೇರೆ ಕಾರ್ಯಗಳು ವಿಮರ್ಶಕರ ಪ್ರತಿಭೆಯನ್ನವಲಂಬಿಸಿ ಒಂದೇ ಬರಹದ ಚೌಕಟ್ಟಿನಲ್ಲಿ ಬರಬಾರದೆಂದೇನಲ್ಲ. ಆದರೆ ಇವು ವಾಸ್ತವದಲ್ಲಿ ಬೇರೆ ಬೇರೆ ಓದುಗರನ್ನು ಗಮನದಲ್ಲಿಟ್ಟುಕೊಂಡು ರಚಿತವಾಗುತ್ತವೆ. ವಿಭಿನ್ನ ಪೂರ್ವಸಿದ್ಧತೆಗಳನ್ನು ಬಯಸುತ್ತವೆ. ಸಾಂಸ್ಕೃತಿಕ ಅನನ್ಯತೆಯನ್ನು ಪಡೆದುಕೊಳ್ಳುತ್ತಿರುವ ಈ ಸಂದರ್ಭದಲ್ಲಿ ಈ ರೀತಿಯ ಪ್ರತ್ಯೇಕ ನೆಲೆಗಳು ವಿಮರ್ಶೆಯಲ್ಲಿ ಅನಿವಾರ್ಯವಾಗಿದೆ.

ಯಾವುದೇ ವರ್ಷದ ವಿಮರ್ಶಾ ಕೃತಿಗಳ ಸಿಂಹಪಾಲನ್ನು, ವಿಮರ್ಶಾತ್ಮಕ ಲೇಖನಗಳ ಸಂಕಲನಗಳನ್ನು ತೆಗೆದುಕೊಳ್ಳುವುದು ನಮ್ಮ ವಿಮರ್ಶೆಯ ಸಾಮೂಹಿಕತೆಗೆ ಸಾಕ್ಷಿಯಾಗಿದೆ. ಏಕೆಂದರೆ ಇಂಥ ಲೇಖನಗಳು ವಿಚಾರ ಸಂಕಿರಣಗಳು, ಅಭಿನಂದನ ಗ್ರಂಥಗಳು, ವಿಶೇಷ ಸಂಚಿಕೆಗಳು ಮುಂತಾದ ಬಹಿರಂಗದ ಒತ್ತಡಗಳಿಂದಾಗಿ ಮೂಡಿಬರುತ್ತವೆ. ತಮ್ಮ ಆಯ್ಕೆಯ ವಿಷಯವೊಂದರ ಮೇಲೆ ಸುಧೀರ್ಘವಾಗಿ, ಸಾವದಾನವಾಗಿ ಆಲೋಚನೆಮಾಡಿ ಬರೆಯುವ ಕೃತಿಗಳು ಅಪರೂಪ. ಆದರೂ ಬೇರೆ ಬೇರೆ ಸಂದರ್ಭಗಳಲ್ಲಿ ವಿವಿಧ ಸ್ವರೂಪಗಳಲ್ಲಿ ರಚಿತವಾಗಿರುವ ಇಂತಹ ಲೇಖನಗಳನ್ನು ಒಟ್ಟಿಗೆ ಹಾಕಿದಾಗ ಆಯಾ ವಿಮರ್ಶಕರ ತಾತ್ವಿಕತೆ, ವಿಧಾನ ಮತ್ತು ಪರಿಮಿತಿಗಳನ್ನು ಕುರಿತಂತೆ ತಿಳಿವಳಿಕೆ ಬರಲು ಸಾಧ್ಯ. ಹೀಗೆ ವಿಮರ್ಶೆಯನ್ನು ಕುರಿತ ವಿಮರ್ಶೆಯು ಕನ್ನಡದಲ್ಲಿ ಬಂದಿರುವುರುವುದು ಕಡಿಮೆ ಸಂಕ್ರಮಣ ಪತ್ರಿಕೆಯ ಈಚಿನ ಸಂಚಿಕೆಗಳಲ್ಲಿ. ಸಿ.ಎನ್. ರಾಮಚಂದ್ರನ್, ಜಿ.ಎಸ್, ಆಮೂರ, ಜಿ.ಹೆಚ್. ನಾಯಕ, ಟಿ. ಪಿ. ಅಶೋಕ 'ಸಾಹಿತ್ಯ ಸಂದರ್ಭ', ಆಮೂರರ 'ವ್ಯವಸಾಯ', ಎಸ್. ಶಿವಾನಂದರ 'ವಿಮರ್ಶೆಯ ಸವಾಲುಗಳು' ಮುಂತಾದವರ ಕೃತಿಗೂ ಹೀಗೆ ವಿಮರ್ಶಿಸುವ ಸ್ತುತ್ಯ ಪ್ರಯತ್ನ ನಡೆದಿದೆ. ಕನ್ನಡ ವಿಮರ್ಶೆಯ ಇತಿಹಾಸವನ್ನು ನಿರ್ಮಿಸುವ ಕೆಲಸದಲ್ಲಿ ಈ ಪ್ರಯತ್ನಗಳು ನೆರವಾಗುತ್ತವೆ.

೬.೩. ಪುಸ್ತಕ ವಿಮರ್ಶೆಯ ಪ್ರಧಾನ ಸ್ವರೂಪ

ಯಾವುದೇ ಪಂಥ, ಚಳವಳಿ ತನ್ನ ಹಿಂದಿನ ಪರಂಪರೆಯಲ್ಲಿನ ಕೊರತೆಯನ್ನು ಎತ್ತಿ ತೋರಿಸುತ್ತಲೇ ತಮ್ಮಲ್ಲಿ ಆ ಕೊರತೆಯನ್ನು ನೀಗಿಸಿಕೊಳ್ಳುವತ್ತ ಗಮನ ಹರಿಸಿ ಹಿಂದಿನದಕ್ಕಿಂತ ಭಿನ್ನವಾಗಿ ಬೆಳೆಯಲು ಪ್ರಯತ್ನಿಸುತ್ತದೆ. ಹಿಂದಿನ ಪರಂಪರೆಗೆ ಪ್ರತಿರೋಧ ಒಡ್ಡುತ್ತದೆ. ಆದರೂ ಅದು ಸಂಪೂರ್ಣವೆನಿಸದು. ಅದು ಇನ್ನೊಂದು ಕಡೆ ಕೊರತೆಯನ್ನು ಹೊಂದಿಯೇ ಇರುತ್ತದೆ. ಕೊನೆಗೆ ಮುಂದಿನ ಇನ್ನೊಂದು ಪಂಥಕ್ಕೆ ದಾರಿ ಮಾಡಿಕೊಡುವುದು ಸಾಗುತ್ತಲೇ ಇರುತ್ತದೆ. ಚಾರಿತ್ರಿಕ ಕೊರತೆಗಳನ್ನು ತುಂಬಲೂ ಯತ್ನಿಸುತ್ತಲೇ ಹೊಸದಾರಿಗಳನ್ನು ಕಂಡುಕೊಳ್ಳುತ್ತಾ ಸಾಗುತ್ತಿರುತ್ತದೆ.

ಯಾವುದೇ ವಿಚಾರವಾಗಲಿ ಶುಷ್ಕ ಅಲ್ಲ. ಹಾಗೆಯೇ ಅದು 'ಧುತ್ತೆ'ಂದು ಹುಟ್ಟುವುದಿಲ್ಲ.

ಅದಕ್ಕೊಂದು ಚಾರಿತ್ರಿಕ ಹಿನ್ನೆಲೆಯ ಅಗತ್ಯತೆಯಿರುತ್ತದೆ. ಈ ಹಿನ್ನೆಲೆಯ ಆಳದಲ್ಲಿ ತಮ್ಮ ಪರಂಪರೆಯ ಬೇರಿನೊಳಗೆ ಸಿಲುಕಿಕೊಂಡ ಅನುಭವ ವಿಚಾರಕ್ಕಾಗಿ ಅದರಿಂದ ಬಿಡಿಸಿಕೊಳ್ಳಲು ಯತ್ನಿಸುತ್ತಾ ಹೊಸದನ್ನು ಅನ್ವೇಷಿಸಲು ತೊಡಗುತ್ತದೆ. ಹೀಗೆ ಅನ್ವೇಷಣೆಯ ಒಂದು ವಿಧಾನ ಸಾಹಿತ್ಯ ವಿಮರ್ಶೆಯಲ್ಲಿ ಇದೆ. ಸಮಾಜದ ಚಲನಶೀಲತೆಗೆ ಮತ್ತು ಬದುಕಿನ ವಿಕಾಸಕ್ಕೆ ಪೂರಕವಾಗುವ ಹಾಗೂ ಪ್ರೇರಕವಾಗುವ ಕ್ರಿಯೆಯಲ್ಲಿ ಸಾಹಿತ್ಯಕ್ಕಿರುವಷ್ಟೆ ಹೊಣೆ ವಿಮರ್ಶೆಗೂ, ಪುಸ್ತಕ ವಿಮರ್ಶೆಗೂ ಉಂಟು. ಹೀಗಾಗಿ ಈ ಮೂರು ಒಂದನ್ನೊಂದು ಬಿಟ್ಟು ಅಗಲಲಾರವು. ಸಾಹಿತ್ಯ ಮತ್ತು ವಿಮರ್ಶೆ ನಡುವಿನ ಸಂಬಂಧ ಕುರಿತು ಶಿವಾನಂದರವರು ಹೀಗೆ ಹೇಳುತ್ತಾರೆ.

ಸಾಹಿತಿಗಳು ತಾವು ರಚಿಸಿದ ಸಾಹಿತ್ಯವನ್ನು ಪ್ರಕಟಿಸದೇ ಇದ್ದಿದ್ದರೆ ವಿಮರ್ಶೆ ಎಂಬ ಪ್ರಕಾರವೇ ಹುಟ್ಟುತ್ತಿರಲಿಲ್ಲವೇನೊ ಸಾಹಿತ್ಯ ಕೃತಿ ಸಾಹಿತಿಯ ಕೈಯಿಂದ ನಾಲ್ಕು ಜನರ ಕೈಗಳಿಗೆ ಬಂದಾಗ-ಅಂದರೆ ಸಮಾಜದ ನಡುವೆ ಬಂದಾಗ- ಅದು ಚೆನ್ನಾಗಿದೆ ಅಥವಾ ಚೆನ್ನಾಗಿಲ್ಲ ಎಂಬ ಪ್ರತಿಕ್ರಿಯೆ ಒಡಮೂಡುತ್ತದೆ. ಸಾಹಿತ್ಯ ಮತ್ತು ವಿಮರ್ಶೆಯ ನಡುವಣ ಸಂಬಂಧವು ಸಾಹಿತ್ಯ ಮತ್ತು ಸಮಾಜದ ನಡುವಣ ಸಂಬಂಧವೇ ಆಗಿರುತ್ತದೆ. ಅಂದರೆ ಒಂದು ಸಾಹಿತ್ಯ ಕೃತಿ ಸಮಾಜದ ನಡುವೆ ಬಂದಾಗ, ಸಮಾಜ ಅದಕ್ಕೆ ಒಂದಲ್ಲಾ ಒಂದು ರೀತಿಯ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತ ಪಡಿಸುತ್ತದೆ ಎಂಬ ಸಂಗತಿಯಲ್ಲಿಯೇ ವಿಮರ್ಶೆಯ ಮೂಲಸೆಲೆಯನ್ನು ಕಾಣಬಹುದು. ಇಲ್ಲಿ 'ಸಮಾಜ'ಎಂದರೆ ಒಂದು ಅಮೂರ್ತ ಪರಿಕಲ್ಪನೆ ಎಂದು ನೋಡಬೇಕಾಗಿಲ್ಲ. ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಯಾವ ಯಾವ ಶಕ್ತಿಗಳು ಅಸ್ತಿತ್ವದಲ್ಲಿವೆ, ಯಾವ ಶಕ್ತಿಗಳು ಆ ವ್ಯವಸ್ಥೆಯನ್ನು ತನ್ನ ಹಿಡಿತದಲ್ಲಿಟ್ಟುಕೊಂಡು ಆಳುತ್ತವೆ ಹಾಗೂ ತನ್ನ ಯಜಮಾನಿಕೆಯನ್ನು ಪ್ರತಿಷ್ಠಾಪಿಸಲು, ತನ್ನ ಹಿತಾಸಕ್ತಿಗಳನ್ನು ಸಲಹಿಕೊಂಡು ಬರಲು ತನ್ನದೇ ಆದ ಮೌಲ್ಯಗಳನ್ನು, ಆದರ್ಶಗಳನ್ನು ಒಟ್ಟಾರೆಯಾಗಿ ಸಂಸ್ಕೃತಿಯನ್ನು- ತಮ್ಮ ಅಧೀನಕ್ಕೊಳಗಾದ ಜನತೆಯಲ್ಲಿ ನೆಡುತ್ತಾ ಹೋಗುತ್ತದೆ ಎಂಬ ಅಂಶಗಳು ಮುಖ್ಯ ಈ ಕಾರಣಕ್ಕಾಗಿ ರಾಜಕಾರಣ ಮತ್ತು ಸಂಸ್ಕೃತಿಯ ನಡುವೆ ಅಂತರ ಸಂಬಂಧ ಬೆಸೆದುಕೊಂಡಿರುತ್ತದೆ ಎಂಬ ಸಂಗತಿಯನ್ನು ಮರೆಯುವಂತಿಲ್ಲ. ”

ಈ ಮೇಲಿನ ವಿಶ್ಲೇಷಣೆಯನ್ನು ಗಮನಿಸಿದರೆ ಸಾಹಿತ್ಯ ಮತ್ತು ಸಮಾಜದ ನಡುವಿನ ಅಂತರವನ್ನು ಒಡೆಯಲಾಗಿದೆ ಎಂದು ಗೊತ್ತಾಗುತ್ತದೆ. ಸಾಹಿತ್ಯ ಸಮಾಜದ ಉತ್ಪನ್ನ. ವಿಮರ್ಶೆ ಸಾಹಿತ್ಯದ ಉಪಉತ್ಪನ್ನ. ಹೀಗಾಗಿ ಸಮಾಜ, ಸಾಹಿತ್ಯ, ವಿಮರ್ಶೆ ಇವುಗಳ ನಡುವೆ ಅಂತರ ಸಂಬಂಧವುಂಟು. ಸಮಾಜದಲ್ಲಿ ನಡೆಯುವ ಚರ್ಚೆ, ವಾಗ್ವಾದಗಳು ಸಾಹಿತ್ಯದಲ್ಲೂ, ಸಾಹಿತ್ಯದಲ್ಲಿ ನಡೆಯುವ ಚರ್ಚೆಗಳು ವಿಮರ್ಶೆಯಲ್ಲಿ ಪ್ರತಿಕ್ರಿಯೆಗೆ ಒಳಗಾಗುತ್ತವೆ. ಈ ಹಿನ್ನೆಲೆ ಮತ್ತೆ ಜಿ. ಎಸ್. ಶಿವರುದ್ರಪ್ಪನವರ 'ಸಾಹಿತ್ಯ ಜನಜೀವನದ ಪ್ರತಿಬಿಂಬ, ಗತಿಬಿಂಬ' ಎಂಬ ವಾಕ್ಯವನ್ನು ಸಮರ್ಥಿಸುತ್ತದೆ. ಹಾಗೆಯೇ ಕುವೆಂಪುರವರು ಹೇಳುವ ಹಾಗೆ 'ಸಾಹಿತ್ಯ ಜನಜೀವನದ ಪ್ರೇರಣೆ ಮತ್ತು ಜನಜೀವನಕ್ಕೆ ಪ್ರೇರಣೆ' ಎಂಬ ಈ ಸಾಲುಗಳು ಸಾಹಿತ್ಯವನ್ನು ಮೊದಲಿನಿಂದಲೂ ಸಮಾಜದಿಂದ ಹೊರತಾಗಿ ಗುರುತಿಸಲಾಗದ ಆಶಯವನ್ನು ತಿಳಿಸುತ್ತವೆ. ಪರಸ್ಪರ ಕೊಡುಕೊಳ್ಳುವಿಕೆಯ ಮೂಲಕ ಸಮಾಜ ಸಾಹಿತ್ಯ- ವಿಮರ್ಶೆಗಳು ಅಂತರ ಸಂಬಂಧ ಬೆಸೆದು ಕೊಂಡಿವೆ.

ಹೀಗಾಗಿ ಪರಸ್ಪರ ಅಂತರ ಸಂಬಂಧದಿಂದ ಕೂಡಿರುವ ಪುಸ್ತಕ ವಿಮರ್ಶೆಯು ಸಹ ಸಾಹಿತ್ಯದ ಕವಲಾಗಿದೆ. ಹಾಗೆಯೇ ಪುನರ್‌ಸೃಷ್ಟಿಯೂ ಆಗಿದೆ. ಸಾಹಿತ್ಯದ ಮರು ವ್ಯಾಖ್ಯಾನ ಮಾಡುವ ಪುಸ್ತಕ

ವಿಮರ್ಶೆಯು ಕೆಲವು ಬದ್ಧಧೋರಣೆಗಳಿಂದ ಸಾಹಿತ್ಯ ಕೃತಿಯನ್ನು ಅರ್ಥೈಸಿದೆ. ಹೀಗೆ ಅರ್ಥೈಸುವಾಗ ಹಲವಾರು ವ್ಯಾಪಕವಾದ ಅಂಶಗಳನ್ನು ಸಾಹಿತ್ಯಕ್ಕೆ ಮತ್ತು ಸಾಹಿತ್ಯ ವಿಮರ್ಶೆಗೆ ಕೊಡುಗೆಗಳಾಗಿ ನೀಡುತ್ತದೆ.

೬.೩.೧. ಪುಸ್ತಕ ವಿಮರ್ಶೆ ದೀರ್ಘ ಗಂಭೀರ ಚರ್ಚೆಗೆ ನಾಂದಿ ಮಾಡಬಲ್ಲದು.

ಪುಸ್ತಕ ವಿಮರ್ಶೆ ಆ ಕೃತಿಗೆ ಬಂದ ಮೊದಲ ವಿಮರ್ಶೆ. ಇದು ಸಾರ್ವಜನಿಕಾಭಿಪ್ರಾಯವನ್ನು ರೂಪಿಸುವಂತದ್ದಾಗಿರುತ್ತದೆ. ಪುಸ್ತಕ ವಿಮರ್ಶಕನ ಮೂಲಕ ಸಮಾಜ ಆ ಕೃತಿಯ ಬಗ್ಗೆ ತಾತ್ಕಾಲಿಕ ಅಭಿಪ್ರಾಯವನ್ನು ನೀಡುತ್ತದೆ. ವಿವಿಧ ರೀತಿಯ ಆಲೋಚನೆಗಳು ಅದರಲ್ಲಿ ಅಡಕವಾಗಿಲ್ಲದಿದ್ದರೂ ಕೃತಿ ಬಗೆಗೆ ಬಂದಂಥ ಮೊದಲ ಪ್ರತಿಕ್ರಿಯೆ ಎಂಬ ಹೆಗ್ಗಳಿಕೆಗೆ ಕಾರಣವಾಗುತ್ತದೆ. ಯಾವುದೇ ಪ್ರಮುಖ ಸಾಹಿತ್ಯ ಕೃತಿ ಬಂದಾಗ, ಪುಸ್ತಕ ವಿಮರ್ಶಕರು ಒಂದಲ್ಲ ಒಂದು ಅಂಕಣದಲ್ಲಿ ವಿಮರ್ಶಾತ್ಮಕವಾದ ಪ್ರತಿಕ್ರಿಯೆಯನ್ನು ತೋರಿಸುತ್ತಾರೆ. ಇಂಥ ಕೆಲಸಕ್ಕೆ ತನ್ನದೇ ಆದ ಸೌಲಭ್ಯ ಮತ್ತು ಜವಾಬ್ದಾರಿಗಳಿರುತ್ತವೆ. ಅದರಲ್ಲೂ ನಿಯತಕಾಲಿಕಗಳ ಸಾಹಿತ್ಯಕ ಅಂಕಣಗಳಲ್ಲಿ ಬರೆಯುವಾಗ ನೇರ ಸಂವಹನಕ್ಕೆ ನೆರವಾಗುವ ಶೈಲಿಯೊಂದನ್ನು ರೂಢಿಸಿಕೊಳ್ಳಬೇಕಾಗುತ್ತದೆ. ಹಾಗೆ ಪುಸ್ತಕ ವಿಮರ್ಶೆಯ ಮಿತಿ ಸಾಹಿತ್ಯದಾಚೆಗಿನ ಬದುಕಿನ ಬಗ್ಗೆ ಅವರ ಖಚಿತ ನೆಲೆಗಳೇನು ಎಂಬುದನ್ನು ಗುರುತಿಸಲು ಸಾಧ್ಯವಾಗದಿದ್ದರೂ ಕೃತಿಯ ಬಗೆಗಿನ ಖಚಿತ ನಿಲುವನ್ನು ಗುರುತಿಸಬಹುದು.

ಪುಸ್ತಕ ವಿಮರ್ಶೆಗೆ ಏನೇ ಮಿತಿಗಳು ಬಂದರೂ ಮುಂದಿನ ವಿಮರ್ಶೆಯ ಹಾದಿಯನ್ನು ನಿರ್ದೇಶಿಸುತ್ತದೆ. ಪುರುಷೋತ್ತಮ ಬಿಳಿಮಲೆಯವರ 'ದಲಿತ ಜಗತ್ತು' ಕೃತಿಯನ್ನು ಕೇಶವಶರ್ಮರು ಸಂಕ್ರಮಣದಲ್ಲಿ (೨೦೫-೨೦೬ನೇ ಸಂಚಿಕೆ) ವಿಮರ್ಶಿಸಿದ್ದರು. ಅದರ ಮುಂದಿನ ಸಂಚಿಕೆಯಲ್ಲಿ ಅದಕ್ಕೆ ಪ್ರತಿಕ್ರಿಯೆ ನಂತರ ಪುಸ್ತಕ ವಿಮರ್ಶಕರ ಸಮರ್ಥನೆ ಹೀಗೆ ವಿಮರ್ಶಾ ಸರಣಿಯೇ ಬೆಳೆಯಿತು.

ದಲಿತ ಜಗತ್ತು

ಪುರುಷೋತ್ತಮ ಬಿಳಿಮಲೆಯವರ ಈ ಪುಸ್ತಕ ಪ್ರೌಢರಿಗಾಗಿ ಇರುವಂಥದ್ದಲ್ಲ ಎಂದು ಮುನ್ನುಡಿಯಲ್ಲಿ ಅವರೇ ಹೇಳಿಕೊಂಡಿದ್ದಾರೆ. ಹಳ್ಳಿಗಳಲ್ಲಿನ ದುಡಿವ 'ಸಾಮಾನ್ಯ ಜನ'ರಿಗಾಗಿ ಬರೆದ ಈ ಲೇಖನಗಳ ಒಟ್ಟು ಉದ್ದೇಶವಿರುವುದು ಇದುವರೆಗೆ ಬಂದ ವಿಚಾರಗಳನ್ನು ವಿವರಿಸುವುದು ಅಷ್ಟೇ.

ಈ ಗ್ರಂಥದ ಮೊದಲು ಲೇಖನ 'ಪ್ರಾಚೀನ ಭಾರತದ ದಲಿತರ ಮತ್ತು ಹೆಂಗಸರ ಮಾರಾಟ' ಸಾಹಿತ್ಯ ಕೃತಿಗಳನ್ನು, ಶಾಸನಗಳನ್ನು ಆಧರಿಸಿ ಬರೆಯಲಾದ ಲೇಖನ. ಅತ್ಯಂತ ಸರಳ ತೀರ್ಮಾನದಿಂದಲೇ ಹೊರಡುವ ಬಿಳಿಮಲೆಯವರು 'ಸಾಹಿತ್ಯ ಬೇಕಾಗಿಲ್ಲ (ಪು. ೧)' ಎಂದು ಹೇಳುತ್ತಾರೆ. ಅನಂತರ ಸಾಹಿತ್ಯ ಕೃತಿಯೊಳಗಿಂದಲೇ ದಾಖಲೆಗಳನ್ನು ಕೊಡುತ್ತಾರೆ. (ಪು.೨.೩.೫) ಮತ್ತು ಬಿಳಿಮಲೆಯವರು ಶಾಸನ, ಕಡತ, ಕೈಫಿಯತ್ತುಗಳಲ್ಲಿ ಚಾರಿತ್ರಿಕ ದಾಖಲೆಯಿದೆಯೆಂದು ಭಾವಿಸುತ್ತಾರೆ. ಬಿಳಿಮಲೆಯವರ ವಾದವನ್ನೇ ತಿರುಗಿಸಿಕೊಟ್ಟರೆ, ಶಾಸನವನ್ನು ಕೈಫಿಯತ್ತುಗಳನ್ನು ಸತ್ಯವೆಂದು ನಂಬುವುದು ಹೇಗೆ? ಬಿಳಿಮಲೆಯವರು ಅನುಸರಿಸುವ ಮಾದರಿ ಹಿರಿಯ ವಿದ್ವಾಂಸರಾದ ಚಿ. ಮೂರವರ ಸಂಶೋಧನೆಯ ರೀತಿಯದು ಈ ರೀತಿಯ ಸಂಶೋಧನೆ ಪೂರ್ತಿಯಾಗಿ ಸರಳ ತೀರ್ಮಾನದ ಕಡೆಗೆ ವಾಲುತ್ತಿರುತ್ತದೆ. ಸರಳ ತೀರ್ಮಾನಗಳು ಸಹಜವಾಗಿಯೇ ಎಲ್ಲಾ ವಿಷಯಗಳನ್ನು ಕಪ್ಪು-ಬಿಳುಪು ಮಾಡುತ್ತಿರುತ್ತದೆ.

ಈ ಸಂಕಲನದ ಎರಡನೆಯ ಪ್ರಬಂಧವೂ ವಿವಾದ ಉಂಟು ಮಾಡವಂಥದ್ದು ಲೇಖಕರು ಹೇಳುತ್ತಾರೆ.'ಜಾತಿ ಸಮಾಜದಲ್ಲಿ ಮಾತ್ರ ಹೆಣ್ಣಿನ ಲೈಂಗಿಕತೆಗೆ ಪಾವಿತ್ರ್ಯದ ಕವಚ ಇರುತ್ತದೆ' (ಪ್ರ. ೧೨) ಈ ಹೇಳಿಕೆಯು ಉತ್ಪ್ರೇಕ್ಷೆಯಿಂದ ಕೂಡಿದೆ. ಜಾತಿ ಕೇಂದ್ರಿತ ಸಮಾಜದಲ್ಲಿ ಮಾತ್ರವೇ ಲೈಂಗಿಕತೆಗೆ ಪಾವಿತ್ರ್ಯದ ಕವಚವಿರುತ್ತದೆ ಎನ್ನುವ ನಂಬಿಕೆಯು ಜಾತಿಯನ್ನು ಪರಮ ಸತ್ಯ ಎಂದು ಹೇಳುತ್ತಾ ಚರ್ಚೆಯ ಹಾದಿಯನ್ನು ತಪ್ಪಿಸುತ್ತದೆ. ರಸೆಲ್‌ನ ಸಿಟ್ಟು, ಫೆಮಿನಿಸ್ಟರ ವಾಗ್ವಾದವನ್ನು ಅರ್ಥಮಾಡಿಕೊಂಡರೆ ಬಿಳಮಲೆಯವರ ತಪ್ಪಾದ ಹೆಜ್ಜೆ ತಿಳಿಯುತ್ತದೆ. ಇದಕ್ಕಿಂತ ವಿವರ ಇಲ್ಲಿ ಬೇಕಿಲ್ಲವೆಂದು ಕಾಣಿಸುತ್ತದೆ.

ಎಂ. ಚಿದಾನಂದ ಮೂರ್ತಿಯವರು ಮಧ್ಯಕಾಲಿನ ಕನ್ನಡ ಸಾಹಿತ್ಯದಲ್ಲಿ ಬಂದಿರುವ ಅಸ್ಪೃಶ್ಯತೆ ಕಲ್ಪನೆಯ ಕುರಿತಂತೆ, ಗ್ರಂಥವೊಂದನ್ನು ಬರೆದಿದ್ದಾರೆ. ಅದರದೇ ಜಾಡಿನಲ್ಲಿ 'ಹಳಗನ್ನಡ ಸಾಹಿತ್ಯದಲ್ಲಿ ದಲಿತರು' ಲೇಖನವನ್ನು ಬರೆದು ಇಲ್ಲಿ ಪ್ರಸ್ತುತಪಡಿಸಿದ್ದಾರೆ. ಈ ಲೇಖನದ ಮುಖ್ಯ ಕೊರತೆಯೆಂದರೆ ಸಂದರ್ಭವನ್ನು, ಕೃತಿಯ ಸ್ವರೂಪವನ್ನು ಬರಹಗಾರನಿಗೂ ಕೃತಿಗೂ ಇರುವ ಸಂಬಂಧವನ್ನು ಗ್ರಹಿಸದೆ ಇರುವುದು. ಇದೇ ಲೇಖನದಲ್ಲಿ 'ಬ್ರಾಹ್ಮಣ ಮದುವಯ್ಯನಿಗೂ ಅಸ್ಪೃಶ್ಯ ಹರಳಯ್ಯನಿಗೂ ವಿವಾಹ ಸಂಬಂಧ ನಡೆದುದನ್ನು ಬಸವ ಪುರಾಣದಲ್ಲಿ ಹೇಳಿದೆ (ಪ್ರ ೨೭)' ಎಂದು ಬರುತ್ತದೆ. ಈ ಮಾತನ್ನು ಪುನರ್‌ಪರಿಶೀಲಿಸುವುದು ಅಗತ್ಯವಿತ್ತು.

'ದಲಿತ ಸಾಹಿತ್ಯ ಹಿನ್ನೆಲೆ' ಅನೇಕ ವಿವರಗಳನ್ನು ಒಳಗೊಂಡ ಲೇಖನ. ದಲಿತ ಸಾಹಿತ್ಯ ಪ್ರೇರಣೆಯನ್ನು ಹೆಚ್ಚು ಅಭ್ಯಸಿಸದ ಈ ವಿವರಣಾತ್ಮಕ ಲೇಖನದಲ್ಲಿ ಕೊನೆಯ ಹೊತ್ತಿಗೆ ತಳೆಯುವ ನಿಲುವು ಮಾತ್ರ ಮೊದಲ ಲೇಖನಗಳಲ್ಲಿರುವಂತೆಯೇ ಇದೆ. 'ದಲಿತರು ಮತ್ತು ಶಿಕ್ಷಣ', 'ದಲಿತರು ಮತ್ತು ವೈಜ್ಞಾನಿಕ ಮನೋಧರ್ಮ' ಪ್ರತ್ಯೇಕತಾವಾದಿ ನಿಲುವಿನಿಂದಲೇ ಸಂಜನಿತವಾಗಿದೆ.

'ದಲಿತರ ಒಂದು ಪ್ರಬೇಧ: ಮ್ಯಾಲರು' ಲೇಖನದಲ್ಲಿ ಒಂದು ಜಾತಿಯ ಬಗೆಗಿನ ಅಧ್ಯಯನವಿದೆ.

ಇಡಿಯ ಪುಸ್ತಕದಲ್ಲಿರುವ ಒಟ್ಟು ತಾತ್ವಿಕತೆಯನ್ನು ವಾದಕ್ಕೆ ಅಣಿಮಾಡಿಕೊಂಡ ಮಂದಿಯು ಈ ಗ್ರಂಥವನ್ನು ತಿರಸ್ಕರಿಸುವ ಸಾಧ್ಯತೆಯಿದೆ. ಯಾಕೆಂದರೆ 'ದಲಿತ' ಪರಿಕಲ್ಪನೆಯನ್ನು ಒಪ್ಪಿಕೊಳ್ಳುವವರು 'ದಲಿತ ಸಂಸ್ಕೃತಿಯ ಸ್ಥಿರತೆಯನ್ನು ನಂಬುವುದಿಲ್ಲ. ಆದರೆ ಅದನ್ನು 'ಬಿಳಿಮಲೆ'ಸ್ಥಿರ ಸಂಸ್ಕೃತಿ ಅನ್ನುವ ಅರ್ಥದಲ್ಲಿ ಯಥಾಸ್ಥಿತಿಯನ್ನು ಪ್ರತಿಪಾದಿಸುತ್ತಾರೆ. ಕೊನೆಯದಾಗಿ ಒಂದಂಶ: ಈ ಗ್ರಂಥ ಅಂತಿಮವಾಗಿ ಜಾತಿ 'ಕ್ರಿಯೆಟಿವ್' ಎಂಬ ಹಳೆಯ ಸವಕಲು ನಿಲುವಿನಲ್ಲಿ ವಿರಮಿಸಿದೆ. [೧೨]

ಈ ಪುಸ್ತಕ ವಿಮರ್ಶೆಗೆ ಕೃತಿಕಾರರಾದ ಬಿಳಿಮಲೆಯವರ ಪ್ರತಿಕ್ರಿಯೆ ಹೀಗಿತ್ತು.

ಸಂಕ್ರಮಣ ೨೦೫-೨೦೬ರಲ್ಲಿ ಕೇಶವ ಶರ್ಮರು 'ದಲಿತ ಜಗತ್ತು' ಕೃತಿಯನ್ನು ವಿಮರ್ಶೆ ಮಾಡಿದ್ದಾರೆ. ಅದರಲ್ಲಿ ಅವರು ದಲಿತ ಸಂಸ್ಕೃತಿಗೆ ಸಂಬಂಧಿಸಿದ ಕೆಲವು ಮುಖ್ಯ ಪ್ರಶ್ನೆಗಳನ್ನು ಎತ್ತಿ, ಉತ್ತರಿಸದೆ ಜಾರಿಕೊಂಡಿದ್ದಾರೆ. ನಮ್ಮ ಕಾಲದ ಚಳವಳಿಗೆ ಅವು ಬಹಳ ಅಮೂಲ್ಯವಾಗಿರುವುದರಿಂದ ಅವರಿಂದ ಇನ್ನಷ್ಟು ವಿವರಣೆಗಳನ್ನು ನಿರೀಕ್ಷಿಸಿ ಈ ಪತ್ರ.

ಕೃತಿಯ ಮೊದಲ ಲೇಖನದಲ್ಲಿ ನಾನು ಚಾರಿತ್ರಿಕ ದಾಖಲೆಗಳನ್ನು ಎರಡು ರೀತಿಯಿಂದ ವಿಭಜಿಸಿಕೊಂಡಿದ್ದಾನೆ. ಮೊದಲ ಬಾಗದಲ್ಲಿ ಬಂದವುಗಳು 'ಕಾವ್ಯ ಸತ್ಯ' (ಪ್ರ ೪) ಎಂದು ಹೇಳಿ, ಎಂಡನೇ ಬಾಗದಲ್ಲಿ ಕಡತ - ಕೈಫಿಯತ್ತುಗಳ ದಾಖಲೆಗಳನ್ನು ಕೊಟ್ಟು ಅವು ಚಾರಿತ್ರಿಕ ಸತ್ಯ (ಪ್ರ ೭) ಎಂದು ಹೇಳಿದ್ದೇನೆ. ಶರ್ಮರು ಅವುಗಳನ್ನು ಸತ್ಯವೆಂದು ನಂಬುವುದು ಹೇಗೆ? ಎಂದು ಪ್ರಶ್ನಿಸಿದ್ದಾರೆ. ಅವರ ತರ್ಕ ನನಗೆ ಅರ್ಥವಾಗಿಲ್ಲ. ಏಕೆಂದರೆ ಶೃಂಗೇರಿಯಲ್ಲಿ ಹೆಂಗಸರನ್ನು ಮಾರುತ್ತಿದ್ದುದಕ್ಕೆ ಅಲ್ಲಿಂದಲೇ ದಾಖಲೆಗಳನ್ನು ತರಲಾಗಿದೆ. ಅಲ್ಲಿನ ಕಡತಗಳಲ್ಲಿ ಅವು ದಾಖಲಾಗಿರುವುದನ್ನು ನಾನೇ ನೋಡಿದ್ದೇನೆ. ಶೃಂಗೇರಿಯ ಕಡತಗಳಲ್ಲಿ ಹೆಂಗಸರ ಮಾರಾಟದ ಸುಳ್ಳು ಉಲ್ಲೇಖಗಳು ಯಾಕೆ ಬರುತ್ತವೆ? ಅಥವಾ ಅವುಗಳನ್ನು ಸುಳ್ಳು ಎಂದು ಹೇಳಿ ಶೃಂಗೇರಿಯ ಬ್ರಾಹ್ಮಣ್ಯವನ್ನು ಶರ್ಮರು ರಕ್ಷಿಸಿಕೊಂಡು ಬರುವುದಾದರು ಯಾಕೆ?

ಇಂಥ ಸತ್ಯಗಳು ಕಪ್ಪು-ಬಿಳುಪಿನಷ್ಟೇ ನಿಖರವಾಗಿದೆ. ಮೇಲಾಗಿ ಇದನ್ನು 'ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿದ ದಲಿತರಿಗಾಗಿ' ಹೇಳಬೇಕಾಗಿ ಬಂದಾಗ ಶರ್ಮರು ಯಾವ ತಂತ್ರವನ್ನು ಅನುಸರಿಸುತ್ತಾರೆ? ಎಂ. ಎ. ಹಂತದಲ್ಲೂ ವಿಷಯವನ್ನು ವಿವರಿಸಲಾಗದೆ ಒದ್ದಾಡುವ ನಮ್ಮ ಬುದ್ಧಿಜೀವಿಗಳು ಈ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಬೇಕು? ದಲಿತರ ಬಗ್ಗೆ ಗಂಟೆಗಟ್ಟಲೇ ಕೊರೆಯುವ ಮಂದಿ ದಲಿತರೊಡನೆ ಸಂವಾದ ನಡೆಸುವ ಬಗ್ಗೆ ಏನಾದರೂ ಬರೆದಿದ್ದಾರೆಯೇ? ಎಂದು ಶರ್ಮರು ತಿಳಿಸಿಕೊಡಬೇಕು.

೨. ಎರಡನೇ ಲೇಖನದಲ್ಲಿ ನಾನು ಹೇಳಿರುವ ಮಾತು 'ಜಾತಿ ಸಮಾಜದಲ್ಲಿ ಮಾತ್ರ ಹೆಣ್ಣಿನ ಲೈಂಗಿಕತೆಗೆ ಪಾವಿತ್ರ್ಯದ ಕವಚ ಇರುತ್ತದೆ.' ಎಂಬ ಮಾತು ಹೇಗೆ ಉತ್ಪ್ರೇಕ್ಷೆಯಿಂದ ಕೂಡಿದೆ? ದಯವಿಟ್ಟು ವಿವರಿಸಬೇಕು. 'ಇದಕ್ಕಿಂತ ವಿವರ ಇಲ್ಲಿ ಬೇಕಿಲ್ಲ' ಎಂಬ ಅವರ ಪಲಾಯನವಾದ ಬೇಡ. ಇಂಡಿಯಾದಲ್ಲಿ ಇಂದು ಜಾತಿ ಮುಂದುವರೆಯುತ್ತಿರುವುದು ಮದುವೆಯ ಮೂಲಕ, ಮದುವೆಯ ಆಸ್ತಿ ಅಧಿಕಾರವನ್ನು ಲೈಂಗಿಕ ಚಟುವಟಿಕೆಗಳಿಗೆ ಒಪ್ಪಿಗೆಯನ್ನು ನೀಡುತ್ತದೆ. ಇಲ್ಲಿ ಹೆಂಗಸರು ಜಾತಿಗಾಗಿ ಜನರನ್ನು 'ಉತ್ಪಾದಿಸಬೇಕಾಗಿದೆ' ಮತ್ತು ಜಾತಿಯ ಪಾವಿತ್ರ್ಯ ಮತ್ತು ಅನನ್ಯತೆಯನ್ನು ಉಳಿಸಿಕೊಂಡು ಬೆಳಸಿಕೊಂಡು ಹೋಗಬೇಕಾಗುತ್ತದೆ. ಈ ಕಾರಣಕ್ಕೆನೆ ಜಾತಿಯ ಪರಿಶುದ್ಧತೆಯನ್ನು ಉಳಿಸಿಕೊಳ್ಳಲು ಆಕೆಯ ಮೇಲೆ ಇನ್ನಷ್ಟು ನಿಯಂತ್ರಣ ಹೇರಲಾಯಿತು. ಈ ಸ್ಥಿತಿ ಬಂಧು ಸಮಾಜ (Kinship Sociaty) ದಲ್ಲಿ ಇಲ್ಲ. ದಲಿತರಲ್ಲಿ ಮೂಲತಃ ಉಳಿದಿರುವುದು ಬಂಧು ಸಮಾಜ. ಹಾಗಾಗಿಯೇ ಅವರಲ್ಲಿ ಲೈಂಗಿಕತೆಯ ಬಗೆಗೆ ಮುಕ್ತವಾದ ಮತ್ತು ಆರೋಗ್ಯಕರವಾದ ಚಿಂತನೆಯಿದೆ. ದಲಿತರಲ್ಲಿ ಗಂಡನನ್ನು ಹೆಂಡತಿ ಏಕವಚನದಲ್ಲಿ ಕರೆಯುವಂಥ ವ್ಯವಸ್ಥೆ ಇದೆ. ಗಂಡ ಸತ್ತರೆ ಬೇರೊಬ್ಬನನ್ನು 'ಕೂಡಿಕೊಳ್ಳಬಹುದಾದ' ವ್ಯವಸ್ಥೆಯೇ 'ಲೈಂಗಿಕ ಪಾವಿತ್ರ್ಯ'ದ ಪೊಳ್ಳುತನವನ್ನು ನಿರಾಕರಿಸಿ ಮಾನವನ ಘನತೆಯನ್ನು ಎತ್ತಿ ಹಿಡಿಯುತ್ತದೆ. ಲೈಂಗಿಕ ಪಾವಿತ್ರ್ಯದ ಬಗೆಗೆ ಬಹಳವಾಗಿ ಮಾತಾಡುವ ಮಂದಿಯೂ ಹೆಣ್ಣಿನ ತಲೆ ಬೋಳಿಸಿ, ಮುಂಡೆಯನ್ನಾಗಿಸುತ್ತಾರೆ. ರಸೆಲ್‌ರ ಸಿಟ್ಟು, ಫೆಮಿನಿಸ್ಟರ ವಾಗ್ವಾದವನ್ನು ಅರ್ಥಮಾಡಿಕೊಂಡಿರುವ ಶರ್ಮರಿಗೆ, ದಲಿತ ಮಹಿಳೆಯ ಬಗೆಗಣ ಚಿಕ್ಕ ಟಿಪ್ಪಣಿ ಅರ್ಥವಾಗದೇ ಹೋಗುತ್ತಿರುವುದೇ ನಮ್ಮ ಬುದ್ಧಿಜೀವಿಗಳು ಎಲ್ಲಿ ಸೋಲುತ್ತಿದ್ದಾರೆಂಬುದಕ್ಕೆ ದಿಕ್ಸೂಚಿ ಆಗಬಹುದೇ?.

೩. 'ಹಳಗನ್ನಡ ಸಾಹಿತ್ಯದಲ್ಲಿ ದಲಿತರು' ಎಂಬ ಲೇಖನದಲ್ಲಿ 'ಕೃತಿ ಸ್ವರೂಪಕ್ಕೂ ಬರಹಗಾರನಿಗೂ ಕೃತಿಗೂ ಇರುವ ಸಂಬಂಧವನ್ನು ಪರಿಶೀಲಿಸಬೇಕಿತ್ತು'. ಎಂದಿದ್ದಾರೆ. ಆ ಕೆಲಸ ನನ್ನದಲ್ಲ ಎಂಬುದನ್ನು ಅದೇ ಲೇಖನದ ಅಡಿಯಲ್ಲಿ ಹೇಳಿದ್ದೇನೆ. ನನ್ನ ಮಾತುಗಳು, ಪ್ರಬಂಧ ವಿಶ್ಲೇಷಾಣಾತ್ಮಕ ಅಲ್ಲ. ಕೇವಲ ಪರಿಚಯಾತ್ಮಕ. ಹಳಗನ್ನಡ ಸಾಹಿತ್ಯವನ್ನು ಓದದೇ ಇರುವ ನನ್ನ ದಲಿತ ಸ್ನೇಹಿತರಿಗೆ ಸುಲಭವಾಗಿ ಅರ್ಥವಾಗುವ ಉದ್ದೇಶದಿಂದ ಉಲ್ಲೇಖಗಳನ್ನು ಸಂಗ್ರಹಿಸಲಾಗಿದೆ. ವಿಷಯದ ಅರಿವುಂಟಾದ ಅನಂತರ ವಿಶ್ಲೇಷಣೆ ಸಾಧ್ಯವಾದೀತು. ಅದು ಮುಂದಿನ ಹಂತ (ಪ್ರ ೧೪). ಇಷ್ಟಲ್ಲದೆ ಲೇಖಕರ ಮಾತಿನಲ್ಲಿ 'ಕರ್ನಾಟಕದ ದಲಿತ ಸ್ನೇಹಿತರು ಇದನ್ನು ಓದಿ ಮುಂದಿನ ಗಂಭೀರ ಅಧ್ಯಯನಕ್ಕೆ ಸಿದ್ಧರಾದರೆ ಈ ಶ್ರಮ ಸಾರ್ಥಕವಾಗುತ್ತದೆ.' ಎಂದಿದ್ದೇನೆ. ಇಷ್ಟಿದ್ದರೂ ಶರ್ಮರೂ ಸಂದರ್ಭ ಸ್ವರೂಪ ಕೃತಿ ಮುಂತಾದ ಪದಗಳನ್ನು ಬಳಸಿ ಅವೆಲ್ಲವನ್ನು ಒಳಗೊಳ್ಳಬೇಕಿತ್ತು ಎಂಬ ಒತ್ತಡವನ್ನು ಹೇರುವ ಅಗತ್ಯವೇನಿತ್ತು. ನಿಜವಾಗಿ ದಲಿತರಿಗೆ ಆರಂಭಿಕ ಹಂತದಲ್ಲಿ ಅದು ಅಗತ್ಯವೇ? ಲೇಖನದ ಉದ್ದೇಶವನ್ನು ಸ್ಪಷ್ಟಪಡಿಸಿದ ಮೇಲೆಯೂ ಅದರಿಂದಾಚೆ ಬಾಚಿಕೊಳ್ಳುವ ಮನೋಭಾವದ ಹಿನ್ನೆಲೆ ಏನು?

೪. 'ಪ್ರತ್ಯೇಕತಾವಾದಿ ನಿಲುವಿನ' ಬಗ್ಗೆ ಶರ್ಮರಿಗೆ ಅಸಹನೆ ಇರುವುದು ಹೌದಾದರೆ ಅವರ ಕಲ್ಪನೆಯ 'ದಲಿತ' ಯಾರು ಎಂಬುದನ್ನು ತಿಳಿಸಬೇಕು ಮತ್ತು ಪ್ರತ್ಯೇಕತಾವಾದಿ ನಿಲುವಿನಿಂದಲೇ ಹೊರಡುವ ಮೀಸಲಾತಿಯ ಬಗ್ಗೆ ಅವರ ಸ್ಪಷ್ಟ ಅಭಿಪ್ರಾಯವೇನು? ಎಂಬುದನ್ನು ಸ್ಪಷ್ಟಪಡಿಸಬೇಕು; ಚಾರಿತ್ರಿಕ ಕಾರಣಗಳಿಗಾಗಿ ನಾನು ಸದ್ಯಕ್ಕೆ 'ದಲಿತರ ಪ್ರತ್ಯೇಕ ಅಸ್ತಿತ್ವ'ವನ್ನು ಒಪ್ಪಿಕೊಳ್ಳುತ್ತೇನೆ, 'ದಲಿತ ಸಂಘರ್ಷ ಸಮಿತಿ' ಯ ಕೆಲಸಗಳನ್ನು ಗೌರವಿಸುತ್ತೇನೆ. ಶರ್ಮರು ಕೊಡುವ

'ಯುನಿವರ್ಸಲ್ ದಲಿತರ' ಬಗ್ಗೆ ವಿವರಣೆ ಬೇಕು. 'ದಲಿತ ಸಂಸ್ಕತಿ'ಯ ಸ್ಥಿರತೆಯನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಆದರೆ ಶರ್ಮರ ಹಾಗೆ 'ದಲಿತ ಸಂಸ್ಕತಿ'ಯ ಅಸ್ತಿತ್ವವನ್ನು ಇಡಿಯಾಗಿ ತಿರಸ್ಕರಿಸುವುದೂ ಇಲ್ಲದ ಇದು ಯಥಾಸ್ಥಿತಿವಾದ. ಮುಂದುವರಿಕೆ ಅಲ್ಲ. ಬದಲಾಗಿ ತನ್ನ ಸಾಂಸ್ಕತಿಕ ಸೃಜನಶೀಲತೆಯನ್ನು ಒಪ್ಪಿಕೊಳ್ಳುವ, ಮುಂದುವರೆಸಿಕೊಂಡು ಬರುವ ಹಠ. ಬ್ರಾಹ್ಮಣರು ತಮ್ಮ ಬ್ರಾಹ್ಮಣ್ಯವನ್ನು ಕ್ರಿಯೆಟಿವ್ ಆಗಿ ಯಾಕೆ ಉಪಯೋಗಿಸಿಕೊಳ್ಳಬಾರದು? ಮೇಲಾಗಿ ಕ್ರಿಯೆಟಿವ್ ಆಗಿ ಉಪಯೋಗಿಸಿಕೊಳ್ಳುವುದಾದರೆ 'ಅವನ್ನು ಉಳಿಸಿ ಬೆಳಸುವುದೆಂದೇ ಅರ್ಥ ಅಲ್ಲ. ವಿರೋಧಿಸುವುದು ಆಗಬಹುದಲ್ಲ? ಮೇಲಾಗಿ ಈ ದೇಶದಲ್ಲಿ ಜಾತಿಯ ಬಗ್ಗೆ ಮಾತಾಡದೆ ಇರುವುದು ಕೂಡಾ ಜಾತಿಯನ್ನು ಉಳಿಸುವ ಗುಪ್ತ ತಂತ್ರ ಯಾಕೆ ಆಗಿರಬಾರದು? ನಮ್ಮ ಬಹುತೇಕ ಮಾರ್ಕ್ಸವಾದಿಗಳು ಮದುವೆಗೆ ಹೆಣ್ಣು ಹುಡುಕುವಾಗ ಜಾತಿಯನ್ನು ಆಶ್ರಯಿಸುವುದರ ಗುಟ್ಟೇನು?

ಶರ್ಮರು ಇದಕ್ಕೆ ಸಮಂಜಸವಾಗಿ ಉತ್ತರಿಸಿದರೆ, ದಲಿತರೊಂದಿಗೆ ಕೆಲಸ ಮಾಡುವ ನನ್ನಂಥವರಿಗೆ ತುಂಬಾ ಉಪಕಾರವಾಗುತ್ತದೆ. ಯಾಕೆಂದರೆ ಇದು ಕೇವಲ 'ಕೃತಿ ವಿಮರ್ಶೆ' ಅಲ್ಲ. ಅಂತಿಮವಾಗಿ ಸಂಸ್ಕತಿ ವಿಮರ್ಶೆಯೂ ಹೌದು.

ಆರ್. ವಿ. ಭಂಡಾರಿಯವರು ಪ್ರತಿಕ್ರಿಯಿಸಿದ ರೀತಿ 'ದಲಿತ ಜಗತ್ತು' ಮತ್ತು ಅದರ ಬಗ್ಗೆ ಪ್ರತಿಕ್ರಿಯಿಸಿದ ರೀತಿ ಹೀಗಿತ್ತು.

ಡಾ. ಪುರುಷೋತ್ತಮ ಬಿಳಿಮಲೆಯವರ 'ದಲಿತ ಜಗತ್ತೆನ್ನು ವಿಮರ್ಶಿಸುತ್ತಾ ಡಾ. ಕೇಶವಶರ್ಮ 'ಗ್ರಂಥ ಅಂತಿಮವಾಗಿ ಜಾತಿ ಕ್ರಿಯೆಟಿವ್' ಎಂಬ ಸವಕಲು ನಿಲುವಿನಲ್ಲಿ 'ವಿರಮಿಸಿದೆ' ಎಂಬ ನಿರ್ಣಯಕ್ಕೆ ಬರುತ್ತಾರೆ. ಈ ವಿಷಯದಲ್ಲಿ ಡಾ. ಶರ್ಮರಿಂದ ನನಗೆ ಕೆಲ ವಿವರ ಪಡೆಯುವ ಕುತೂಹಲವಿದೆ. ನನ್ನ ಈ ನಿಲುವಿಗೆ ಕಾರಣವೆಂದರೆ ಇದು ಅವಸರದ ಓದಿನ ಪರಿಣಾಮ ಎಂದು ನಾನು ಗ್ರಹಿಸದೇ ಇರುವುದೇ ಆಗಿದೆ. ಒಂದನೆಯದಾಗಿ ನಾನು ತಿಳಿದಂತೆ, ಶರ್ಮಾ ಒಬ್ಬ ಪ್ರಾಮಾಣಿಕ ಮತ್ತು ಮಾರ್ಕ್ಸವಾದಿ ದೃಷ್ಟಿಕೋನ ಹೊಂದಿದ ಸಾಹಿತ್ಯಾಭ್ಯಾಸಿ. ಎರಡನೆಯದಾಗಿ ಹಿಂದೊಮ್ಮೆ ಶರ್ಮಾ, ಡಾ. ಆರ್ಕೆ ಮತ್ತು ನಾನು ಹೊನ್ನಾವರದ ಒಂದು ಸಾಹಿತ್ಯ ಶಿಬಿರದಲ್ಲಿ ಬೇಟಿಯಾದಾಗ ಶರ್ಮಾ ಆರ್ಕೆಯವರೊಡನೆ ಈಗಿತ್ತಲಾಗಿನ ಆರ್ಕೆ, ಜಿ. ರಾಜಶೇಖರ, ಡಿ. ಆರ್. ನಾಗರಾಜ್‌ರವರನ್ನೊಳಗೊಂಡ ವಿಮರ್ಶೆ ಕೊನೆ ಕೊನೆಗೆ ಜಾತಿ ಕೇಂದ್ರವಾಗಿ ಬಿಡಬಹುದಲ್ಲವೆ? ಎಂದು ಕೇಳಿದ್ದರು. ಆಗ ಆರ್ಕೆ ಹೌದೇನು? ಹಾಗಾದರೆ ತುಸು ವಿವರ ಹೇಳು ಎಂದಿದ್ದರು. ಆಗ ಸಮಯವಿದ್ದಿರಲಿಲ್ಲ. ಈಗ ಡಾ. ಶರ್ಮರ ವಿಮರ್ಶೆ ಓದಿದಾಗ ಮತ್ತೆ ಆ ದಿನದ ಮಾತು ನೆನಪಿಗೆ ಬಂತು. ಆದ್ದರಿಂದಲೇ ಶರ್ಮರ ನಿಲುವನ್ನು ತುಸು ವಿಸ್ತಾರವಾಗಿ ತಿಳಿಯುವ ಹಂಬಲದಿಂದ ಈ ಪ್ರತಿಕ್ರಿಯೆ ಬರೆಯುತ್ತಿದ್ದೇನೆ.

ಶರ್ಮಾರ ವಿಮರ್ಶಾ ಪ್ರತಿಕ್ರಿಯೆಯ ಮುಖ್ಯ ಅಂಶಗಳು ಇವು.

೧. ಸಾಹಿತ್ಯದೊಳಗಿನ ಸಂಗತಿಗಳು ಚಾರಿತ್ರಿಕ ದಾಖಲೆ ಎನಿಸಿದ್ದು ಎಂದು ಹೇಳುವ ಬಿಳಿಮಲೆ ಸಾಹಿತ್ಯದಿಂದಲೇ ಆಧಾರ ಕೊಡುತ್ತಾರೆ.

೨. ಶಾಸನ, ಕಡತ, ಕೈಫಿಯತ್ತುಗಳನ್ನು ಸತ್ಯವೆಂದು ನಂಬುವುದು ಹೇಗೆ?

೩. ಜಾತಿ ಕೇಂದ್ರಿತ ಸಮಾಜದಲ್ಲಿ ಮಾತ್ರವೇ ಲೈಂಗಿಕ ಪಾವಿತ್ರ್ಯದ ಕವಚವಿರುತ್ತದೆ ಎನ್ನುವರ ನಂಬಿಕೆಯು ಜಾತಿಯನ್ನೇ ಪರಮಸತ್ಯ ಎಂದಂತಾಗುತ್ತದೆ.

೪. ದಲಿತ ಸಂಸ್ಕೃತಿಯ ಒಳ್ಳೆಯ ಅಂಶಗಳನ್ನು ಉಳಿಸಿಕೊಳ್ಳಬೇಕೆಂಬ ಬಿಳಿಮಲೆಯವರು ಇನ್ನೊಂದು ಅರ್ಥದಲ್ಲಿ ಯಥಾಸ್ಥಿತಿಯನ್ನು ಪ್ರತಿಪಾದಿಸುತ್ತಾರೆ.

ಇವಿಷ್ಟು ಮುಖ್ಯವಾಗಿ ಅವರು ತಲ್ಪಿದ ನಿರ್ಣಯ.

ಬಿಳಿಮಲೆಯವರ ಗ್ರಂಥದ ಓದಿನಿಂದ ನನಗೆ ಅನ್ನಿಸಿದ ಅಂಶಗಳಿವು.

೧. ಬಿಳಿಮಲೆಯವರು ಏನೇ ಅಂದಿರಲಿ, ಸಾಹಿತ್ಯದೊಳಗಿನ ದಾಖಲೆ ಚರಿತ್ರೆ ಅಲ್ಲದಿರಬಹುದು. ಆದರೆ ಅದರ ಸುಳಿವನ್ನು ಆ ಕಾಲದ ಸಾಹಿತ್ಯ ಬಿಟ್ಟು ಕೊಡುವುದಿಲ್ಲವೇ? ಸಾಹಿತ್ಯದ ಸಾಕ್ಷಿ ತೆಗೆದುಕೊಳ್ಳುವುದು ತಪ್ಪೇ?.

೨. ಶಾಸನ ,ಕಡತ, ಕೈಫಿಯತ್ತಿನ ಅಂಶಗಳನ್ನು ಇತರ ಆಕರಗಳೊಡನೆ ಇಟ್ಟು ಪರೀಕ್ಷಿಸಬೇಕಾದುದು ಅವಶ್ಯವೆ. ಆದರೆ ಅವು ಚಾರಿತ್ರಿಕ ಸತ್ಯವನ್ನೊಳಗೊಳ್ಳುವುದಿಲ್ಲವೆ? ಅಂದರೆ ಚರಿತ್ರೆಗೆ ಶಾಸನ, ಕಡತಗಳು ಸಹಾಯಕವಲ್ಲವೇ? ಅದು ಆಧಾರ ನಿರಾಧಾರವೇ?.

೩.'ಯಾಕೆಂದರೆ ಜಾತಿ ಸಮಾಜದಲ್ಲಿ ಮಾತ್ರ ಹೆಣ್ಣಿನ ಲೈಂಗಿಕತೆಗೆ ಪಾವಿತ್ರ್ಯವಿರುತ್ತದೆ. (ಪ್ರ. ೧೨)ಎಂಬ ಮಾತು 'ಮಾತ್ರ' ಎಂದಿರುವುದು. ಶರ್ಮಾ ಹೇಳಿದ ಹಾಗೆ ಉತ್ಪ್ರೇಕ್ಷೆಯಿಂದ ಕೂಡಿದ್ದು ಹೌದು. ಆದರೆ ಅದು ನಿರಾಧಾರವೇನೂ ಅಲ್ಲ. ಲೈಂಗಿಕ ಪಾವಿತ್ರ್ಯತೆ ಪುರುಷ ಪ್ರಧಾನ ವ್ಯವಸ್ಥೆ ಜಾರಿಗೆ ಬಂದುದರಿಂದಲೇ ಶುರುವಾದದ್ದು. ಅದಕ್ಕೂ ಖಾಸಗಿ ಆಸ್ತಿಗೂ ಸಂಬಂಧ ಉಂಟು. ಭಾರತೀಯ ವ್ಯವಸ್ಥೆ ಜಾತಿನಿಷ್ಠವಾದುದರಿಂದ ತನ್ನ ಜಾತಿಯ ಪಾವಿತ್ರ್ಯತೆ ಕಾಯ್ದುಕೊಳ್ಳುವಲ್ಲಿ ಹೆಣ್ಣಿನ ಮೇಲೆ ಈ ಪಾವಿತ್ರ್ಯತೆ ಹೇರಲ್ಪಟ್ಟವೆ. ಆದರೆ ಬಿಳಿಮಲೆಯವರ ಬರಹದಲ್ಲಿ ಆ ಪಾವಿತ್ರ್ಯತೆಯ ಆರಾಧನೆ ಇಲ್ಲದ್ದನ್ನು ಗಮನಿಸಬೇಕು. ಇಲ್ಲಿ ಪಾವಿತ್ರ್ಯತೆ ಎಂಬುದು ಇಂದಿನ ನಮ್ಮ ನಡಾವಳಿಕೆಯ ಜೊತೆ ಸಾಪೇಕ್ಷಿತ ಸಂಬಂಧ ಉಳ್ಳದ್ದು ಅಷ್ಟೇ ಹೊರತು ಅದು ಪವಿತ್ರ ಎಂದು ಬಿಳಿಮಲೆಯವರ ಅಭಿಪ್ರಾಯ ಅಲ್ಲ ಅಲ್ಲವೆ?

೪. ದಲಿತ ಸಂಸ್ಕೃತಿಯಲ್ಲಿಯ ಒಳ್ಳೆಯದನ್ನು ಉಳಿಸಿಕೊಂಡು ಹೇಳುವ ಬಿಳಿಮಲೆಯವರ ಹೇಳಿಕೆ ಯಥಾಸ್ಥಿತಿವಾದ ಹೇಗಾಗುತ್ತದೆ? ಇಂದು ಚಾರಿತ್ರಿಕ ಮುನ್ನಡೆಯಲ್ಲಿ ಯಾವ ಸಂಸ್ಕೃತಿಯಾಗಿ ದ್ವೀಪವಾಗಿ ನಿಲ್ಲಬೇಕಾದುದಿಲ್ಲ. ಮತ್ತು ನಿಲ್ಲುವುದೂ ಇಲ್ಲ. ಆದರೆ ಹಾಗೆ ಸಮಾಜದ ಪುನರ್ಘಟನೆ ಆಗುವಾಗ ಯಾವುದು ಸಾಯಬೇಕು, (What is living and is dying) ಎಂಬ ವಿಮೋಚನೆ ತಪ್ಪೇ? ಉದಾಹರಣೆಗಾಗಿ ನಮ್ಮ ಜಿಲ್ಲೆಯಲ್ಲಿ ಬ್ರಾಹ್ಮಣೇತರ ಮುಖ್ಯವಾಗಿ ಹಾಲಕ್ಕಿ ಸಮಾಜದಲ್ಲಿ ತರುಣ ವಿಧವೆಯನ್ನು 'ಸೀರುಡಿಕೆ' ಮಾಡಿಕೊಳ್ಳುವುದು ಎಂದುಂಟು. ಆದರೆ ಅದಕ್ಕೆ ಅಷ್ಟೇನೂ ಗೌರವವಿಲ್ಲ. ಗೌರವ ಇಲ್ಲದಿರುವುದಕ್ಕೆ ಮೇಲು ಜಾತಿಯವರ ಆದರ್ಶವೇ ಕಾರಣ, ಆದರೆ ಈ 'ಸೀರುಡಿ' ಪದ್ಧತಿ ಆರೋಗ್ಯಕರವಾದುದು ಇದನ್ನು ಯಾವುದೇ ಒಂದು ರೀತಿಯಲ್ಲಿ ಎಲ್ಲ ಜಾತಿಯವರೂ ಅನುಸರಿಸುವುದೇ ಯೋಗ್ಯವಲ್ಲವೇ? ಇದರಿಂದ ಯಥಾಸ್ಥಿತಿಯ ಪ್ರತಿಷ್ಠಾಪನೆ ಹೇಗೆ ಆಗುತ್ತದೆ.

ಇಂದು ಯಾವೊಂದು ಜಾತಿ ಸಂಸ್ಕೃತಿಯ ಆರಾಧನೆ ನಮಗೆ ಅಗತ್ಯವಿಲ್ಲ. ಬದಲಾಗಿ ಜಾತ್ಯತೀತವಾದ, ಸಮಾಜವಾದಿ ಸ್ವರೂಪದ ಸಂಸ್ಕೃತಿಯೇ ಬೇಕಾದುದು. ಹಾಗೆಂದಾಗ ಭಾರತದ ಯಜಮಾನ ಸಂಸ್ಕೃತಿಯ ಆರಾಧನೆಯ ಭಾರತದ ಅಡಿಯಲ್ಲಿ ಜಜ್ಜಿ ಹೋದ ಇತರ ಸಂಸ್ಕೃತಿಯ ವಿಶ್ಲೇಷಣೆ ಜಾತಿ ಕ್ರಿಯೆಟಿವ್ ಎಂದಂತೆ ಯಾಕೆ ಆಗಬೇಕು? ಅದು ಆಗುವುದು ಮುಖ್ಯವಾಗಿ ವಿಶ್ಲೇಷಕ ಅಂತಿಮವಾಗಿ ತೆಗೆದುಕೊಳ್ಳುವ ನಿರ್ಣಯ ಮತ್ತು ಪ್ರತಿಪಾದನೆಯ ರೀತಿಯಿಂದ ಆಗಬೇಕು. ಇಲ್ಲಿ ಬಿಳಿಮಲೆ ದಲಿತ ಸಂಸ್ಕೃತಿಯನ್ನು ವಿಶ್ಲೇಷಿಸುತ್ತಲೇ ಅಸ್ಪೃಶ್ಯತೆಯನ್ನು ಮಾನದಂಡವಾಗಿಟ್ಟುಕೊಂಡ ಕಾರಣ ದಲಿತರಿಗೆ ಕಮ್ಯೂನಿಷ್ಟರು ಅಸ್ಪೃಶ್ಯರಾಗಿದ್ದರೆ......... ವರ್ಗ ಹೋರಾಟವನ್ನು ಪ್ರತಿಪಾದಿಸುವ ರೈತ ಕಾರ್ಮಿಕ ಸಂಘಟನೆಗಳಿಗಿಂತ ದೂರ ಹೋಗಿ ಬಿಟ್ಟಿದ್ದಾರೆ. ಇವರಿಂದ ದಲಿತ ಸಂಘಟನೆಗಳ ಶಕ್ತಿ ಕಡಿಮೆಯಾಗಿದೆ ಎಂದೆನ್ನುವ ಮಾತು ಜಾತಿ-ನಿಷ್ಠತೆಗಿಂತ ವರ್ಗ ಹೋರಾಟವೇ ಮುಖ್ಯ. ತಲುಪಬೇಕಾದ ಗುರಿ ಅದು ಎಂದಂತಾಗುವುದಿಲ್ಲವೇ? ಹಾಗಿದ್ದಾಗ ಜಾತಿ ಕ್ರಿಯೆಟಿವ್ ಎಂದಂತೆ ಹೇಗೆ ಆಗುತ್ತದೆ.

ಹಾಗಂತ ಬಿಳಿಮಲೆಯವರ ಲೇಖನದಲ್ಲಿ ಒಪ್ಪದೇ ಇರುವ ಅಂಶವೇ ಇಲ್ಲ ಎಂದಲ್ಲ. ನಾನು ಒಪ್ಪದೇ ಇರುವುದರಿಂದ ಉದಾಹರಣೆಗಾಗಿ ಇವು.

೧. ಪುಟ ೫೫ ರಲ್ಲಿ 'ನಮಗೆ ಸ್ವಾತಂತ್ರ್ಯ ಬಂದ ತಕ್ಷಣ ವಿದ್ಯಾಭ್ಯಾಸ ಕ್ಷೇತ್ರವನ್ನು ದೇಶಿಯ ಅವಶ್ಯಕತೆಗಳಿಗೆ ಅನುಗುಣವಾಗಿ ಬದಲಾಯಿಸಿದ್ದು,' ಎಂದಿದೆ ಇದು ಬದಲಾಯಿಸಿದ್ದು ಅಲ್ಲ ಬದಲಾಯಿಸದು' ಎಂದಾಗಬೇಕು.

೨. 'ನಮ್ಮ ಮಧ್ಯಮ ವರ್ಗದ ಬ್ರಾಹ್ಮಣ ಆಡಳಿತಗಾರರು ಮತ್ತೆ ಮೂಲಭೂತ ಬದಲಾವಣೆಗಿಳಿಯಲಾರರು' ಎಂಬುದು ಆಂಶಿಕ ಕಾರಣ. ಆದರೆ ನಮ್ಮ ಬೊರ್ಜ್ವಾ ಪ್ರಜಾಪ್ರಭುತ್ವವೇ ಮೂಲಭೂತ ಬದಲಾವಣೆಗೊಪ್ಪದು. ಇದು ನಮ್ಮ ಬಂಡವಾಳಶಾಹಿ ಹಿತಾಸಕ್ತಿಗೆ ಅನುಗುಣವಾಗಿಯೇ ಇದೆ.

೩. ದಲಿತರಿಗೇ ಪ್ರತ್ಯೇಕ ಪಠ್ಯ ಪುಸ್ತಕವೇ ಇರಬೇಕೆಂಬುದು ಸ್ವಾಗತಾರ್ಹವಲ್ಲ. ಪಠ್ಯಕ್ರಮ ಆಮೂಲಾಗ್ರವಾಗೇ ಬದಲಾವಣೆಯಾಗಬೇಕು. ಅಖಿಲ ಬ್ರಾಹ್ಮಣ ದಲಿತರನ್ನೊಳಗೊಂಡೇ ಸಮಾಜವಾದೀ ನಿಲುವನ್ನು ಪ್ರತಿಪಾದಿಸಬೇಕು. ಅಸ್ಪೃಶ್ಯತೆ, ಜಾತಿಬೇಧ, ಭಾಷಾ ಕೀಳಿರಿಮೆ ಮೂಢನಂಬಿಕೆ, ಲಿಂಗಬೇಧಗಳ ಗಡಿಯನ್ನು ನುಚ್ಚು ನೂರು ಮಾಡಿ ಒಟ್ಟಾರೆಯಾಗಿ ಮಾನವೀಯತೆಯನ್ನು, ಎಲ್ಲ ಮಾನವ ಸಂಪನ್ಮೂಲಗಳನ್ನು ಶಕ್ತಿಯುತ ಬಳಕೆಗೆ ಅನುಗುಣವಾಗುವಂತೆ ನಿರೂಪಿತವಾಗಬೇಕು. ಅದು ದಲಿತ ಸಂಸ್ಕೃತಿಯ ಕುರಿತಾದ ಕೀಳಿರಿಮೆಯನ್ನು ಹೋಗಲಾಡಿಸುವಂತಿರಬೇಕು. ಅದು ಮಾಸ ಎನ್ನುವುದಕ್ಕಿಂತ ಅಶೋಕ, ಚೆನ್ನ ಎನ್ನುವುದಕ್ಕಿಂತ ಮಾಲತಿ, ಚೆನ್ನ, ತಿಮ್ಮ ಎನ್ನುವ ಭಾವನೆಯನ್ನು ಬೆಳಸುವಂತಿರದೆ ಭಾರತೀಯ ಸಂಸ್ಕೃತಿಯ ನೆಲೆ, ಜಾನಪದ ಕಲೆ, ಪೌರೋಹಿತ ರಾಹಿತ್ಯ, ಭೌತವಾದಿ ಪ್ರೀತಿ, ಭ್ರಾತೃ ಭಾವನೆಯ ಉದ್ದೀಪನೆ, ಶ್ರಮಾಭಿಮಾನ ಮತ್ತು ಚಾರಿತ್ರಿಕ ಪ್ರಭಾವದ ದಾಖಲೆಗಳನ್ನು ಸಾರುವಂತಹದಿರಬೇಕು.

ಈ ಎಲ್ಲ ಹಿನ್ನೆಲೆಯಲ್ಲಿ ಶರ್ಮಾ ರಿಂದ ನಾನು 'ದಲಿತ ಜಗತ್ತಿ'ನ ವಿಶ್ಲೇಷಣೆಯಲ್ಲಿ ಅವರು ತೆಗೆದುಕೊಂಡ, ನಿರ್ಣಯದ ಕುರಿತು ವಿವರವನ್ನು ಬಯಸುತ್ತೇನೆ.[೧೪]

ಈ ಪ್ರತಿಕ್ರಿಯೆಗಳಿಗೆ ಪುಸ್ತಕ ವಿಮರ್ಶಕರಾದ ಕೇಶವಶರ್ಮ ಅವರು ಮುಂದಿನ ಸಂಚಿಕೆಯಲ್ಲಿ ಈ ರೀತಿ ಸಮರ್ಥಿಸಿಕೊಂಡರು.

ಸಂಕ್ರಮಣ (೨೦೫-೨೦೬) ರಲ್ಲಿ ಪ್ರಕಟವಾದ ನನ್ನ ರಿವ್ಯೂ ಕುರಿತಂತೆ ಸಂಕ್ರಮಣ (೨೦೮) ರಲ್ಲಿ ಎರಡು ಪ್ರತಿಕ್ರಿಯೆಗಳು ಬಂದಿವೆ. ಅದರಲ್ಲಿ ಈ ಆರ್. ವಿ. ಭಂಡಾರಿಯವರು ಪ್ರಾಮಾಣಿಕ ದಾಟಿಯಲ್ಲಿ ವಿವರಣೆ ಕೇಳಿದ್ದಾರೆ. ಡಾ. ಬಿಳಿಮಲೆಯವರು ಸ್ವಸಮರ್ಥನೆಯ ದಾಟಿ ಅನುಸರಿಸುತ್ತಾ ಕುತರ್ಕದ ವಾದ ಮಂಡಿಸಿದ್ದಾರೆ. ಇದರಿಂದಾಗಿ ನಾನು ವಿವರಣೆ ನೀಡಬೇಕಾಗಿದೆ.

'ದಲಿತ ಜಗತ್ತು' ಪ್ರತಿಕ್ರಿಯೆಗಳಿಗೆ ಉತ್ತರ.

ಆರ್.ವಿ. ಭಂಡಾರಿಯವರಿಗೆ ಉತ್ತರ

ನಾನು ಹೊನ್ನಾವರದಲ್ಲಿ ಗೆಳೆಯರೊಂದಿಗೆ ಮಾತಾಡುವಾಗ ಉಲ್ಲೇಖಿಸಿದ ವಿಷಯಕ್ಕೂ 'ದಲಿತ ಜಗತ್ತು' ಕೃತಿಯ ವಿಮರ್ಶೆಗೂ ಯಾವುದೇ ಸಂಬಂಧವಿಲ್ಲ. ಯಾಕೆಂದರೆ ಕನ್ನಡದ ಗಂಭೀರ ವಿಮರ್ಶಕರಾದ ರಾಜಶೇಖರ. ಜಿ, ಆರ್ಕೆ, ಡಿ. ಆರ್. ನಾಗರಾಜ್ ಆವರ ವಿಮರ್ಶೆಗಳ ಕುರಿತ ಚರ್ಚೆ ಕನ್ನಡದಲ್ಲಿ ಹೊಸ ಚರ್ಚೆಗೆ, ಅವಕಾಶ ಕಲ್ಪಿಸಬಹುದು ಎಂದು ನನ್ನ ತಿಳಿವಳಿಕೆ. ಆದರ ವಿಮರ್ಶೆಗಳನ್ನು 'ದಲಿತ ಜಗತ್ತು'. ಕೃತಿಯ ವಾಗ್ವಾದದ ಸಂದರ್ಭದಲ್ಲಿ ಯಾಕೆ ತರಬೇಕು?

೧. ಸಂಕ್ರಮಣ (೨೦೫ - ೨೦೬) ರಲ್ಲಿ ಸ್ಪಷ್ಟವಾಗಿ ಬರೆದಿದ್ದೇನೆ.'ಸಾಹಿತ್ಯ ಕೃತಿಯೊಳಗಣ ದಾಖಲೆಗಳನ್ನು ನಾವು ಚಾರಿತ್ರಿಕ ದಾಖಲೆಗಳೆಂದೇ ಪರಿಗಣಿಸಬೇಕಾಗಿಲ್ಲ (ದಲಿತ ಜಗತ್ತು ಪು ೧)' ಎಂದ ಬಿಳಿಮಲೆಯವರು ಸಾಹಿತ್ಯ ಕೃತಿಯೊಳಗಿನಿಂದಲೇ ಯಾಕೆ ದಾಖಲೆಗಳನ್ನು ಕೊಡಬೇಕು ಎಂದು ನನ್ನ ವಾದ. ಇದು ಬಿಳಿಮಲೆಯವರ ದ್ವಂದ್ವವನ್ನು ಸೂಚಿಸುವುದಿಲ್ಲವೆ?

೨. ಕಡತಗಳು, ಶಾಸನಗಳು, ಕೈಫಿಯತ್ತುಗಳನ್ನು ಸತ್ಯವೆಂದು ನಂಬುವುದು ಹೇಗೆ?ಇವೆಲ್ಲಾ ಒಂದು ವ್ಯವಸ್ಥೆಯ

ಪ್ರತಿಪಾದಿಸಿದ ದಾಖಲೆಗಳು ಮಾತ್ರ. ಈಚೆಗೆ ಇತಿಹಾಸವನ್ನು ಗ್ರಹಿಸುವಾಗ ಈ ರೀತಿಯ ಶಾಸನಗಳನ್ನು, ಕಡತಗಳನ್ನು, ಕೈಫಿಯತ್ತುಗಳನ್ನು ಒಂದು ಮಾಧ್ಯಮ (ಆಯುಧ) ವಾಗಿ ಮಾತ್ರವೇ ಇಡುತ್ತಾರೆ. 'ಸಬ್‌ಆಲ್ಟರ್ನ್ ಸ್ಟಡಿ' ಎಂಬ ಶಿಸ್ತು ಇತಿಹಾಸದ ಗ್ರಹಿಕೆಗೆ ಮಹತ್ವದ ಹೆಜ್ಜೆಯನ್ನು ಇಟ್ಟಿದೆ. ಈ ಶಿಸ್ತು ಶಾಸನಗಳನ್ನು, ಕೈಪಿಯತ್ತುಗಳನ್ನು ಕಡತಗಳನ್ನು ಒಂದು ಆಯುಧವಾಗಿ ಮಾತ್ರವೇ ಪರಿಗಣಿಸುತ್ತದೆ. ಶಾಸನಗಳನ್ನಾಗಲೀ, ಕಡತಗಳನ್ನಾಗಲೀ ನೋಡಿಕೊಂಡು ಇದು ಆ ಕಾಲದ ಸಮಾಜ ಎಂದು ವಾದಿಸುವುದು ಖಂಡಿತಾ ಸಮರ್ಥನೀಯವಲ್ಲ. ಕಡತಗಳನ್ನು ಓದಿ ಈ ನಿರ್ಣಯಕ್ಕೆ ಬರುವುದು ತೀರಾ ಸರಳವಾದುದು ಎಂದು ನನ್ನ ಗ್ರಹಿಕೆ. ಯಾಕೆಂದರೆ ಕಡತ ಇತ್ಯಾದಿಗಳಿಗೆ ಬರುವ ಮುಖಬೆಲೆ (Face value) ಒಂದು ಸಮಾಜವನ್ನು ನಿರ್ಣಯಿಸಿ ಬಿಡುತ್ತದೆಯೇ? ಈ ಕಾರಣದಿಂದ ಕಡತ ಇತ್ಯಾದಿಗಳು ಚರಿತ್ರೆಯ ಗ್ರಹಿಕೆಯ ಒಂದು ಆಯುಧ ಅಷ್ಟೇ (ವಿವರಗಳಿಗೆ ನೋಡಿ ಆರ್ಕೆಯವರ 'ಸಾಹಿತ್ಯ ಸಿದ್ಧಾಂತ ಮತ್ತು ಹೋರಾಟ' ಪು ೭೧ರಿಂದ ಪು ೯೨)

೩. ಜಾತಿ ಸಮಾಜದಲ್ಲಿ ಮಾತ್ರ ಲೈಂಗಿಕತೆಗೆ ಪಾವಿತ್ರ್ಯದ ಕವಚ ಇರುತ್ತದೆ. (ದಲಿತ ಜಗತ್ತು ಪು ೧೨) ಬಿಳಿಮಲೆಯವರ ಈ ವಾದ ತೀರಾ ಅಸಂಬದ್ಧವಾಗಿದೆ. ಲೈಂಗಿಕ ಪಾವಿತ್ರ್ಯದ ಕುರಿತ ನಂಬಿಕೆಗೂ ಉತ್ಪಾದನಾ ಸಂಬಂಧಕ್ಕೂ ಇರುವ ಸ್ಪಷ್ಟ ಸಂಬಂಧ ಬಿಳಿಮಲೆಯವರು ತಿರುಚಿದ್ದಾರೆ. ಬಿಳಿಮಲೆಯವರು ಈ ರೀತಿಯ ವಾದವನ್ನು ಯಾಕೆ ಮಂಡಿಸುತ್ತಾರೆ?

ವಿವರಗಳಿಗೆ ನೋಡಿ:

೧. ಎಂಗೆಲ್ಸ್ - ಕುಟುಂಬ, ಖಾಸಗಿ ಆಸ್ತಿ ಇವುಗಳ ಉಗಮ.

೨. ವಿಮಲ ರಣದಿವೆ - ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಮಹಿಳೆಯ ಸ್ಥಿತಿ-ಗತಿ.

೩. ಲೆನಿನ್ - ಮಹಿಳಾ ವಿಮೋಚನೆಯನ್ನು ಕುರಿತು ಇಲ್ಲಿಂದಲೇ ಮುಂದುವರಿಯಬೇಕಲ್ಲವೆ.

೪. ಒಳ್ಳೆಯದನ್ನು ಉಳಿಸಬೇಕೆಂದು ವಾದಿಸುವವರು ಬರಿಯ ಪರಿಷ್ಕಾರಣವಾದಿಗಳು. ಇವರಿಗೆ ಚಾರಿತ್ರಿಕ ಬದಲಾವಣೆಯು ಅಷ್ಟೊಂದು ಮುಖ್ಯವೆನಿಸುವುದಿಲ್ಲ. ಯಥಾಸ್ಥಿತಿವಾದಿಗಳ ಇನ್ನೊಂದು ಮುಖವಿದು. ಯಾವುದು ಉಳಿಯಬೇಕು. ಯಾವುದು ಸಾಯಬೇಕು ಎಂದು ಹೇಳುವ ನಾವು ಎಲ್ಲಿದ್ದೇವೆ.

'ಸೀರುಡಿಕೆ'ಯನ್ನು ಅನುಸರಿಸಬೇಕೆಂದು ನನಗಂತೂ ಕಾಣುತ್ತಿಲ್ಲ. ಯಾಕೆಂದರೆ ಹಾಲಕ್ಕಿ ಸಮಾಜದಲ್ಲಿ ಅದಿದೆ ಎನ್ನುವ ಕಾರಣಕ್ಕಾಗಿ ನಾವೇಕೆ ಅದನ್ನು ಅನುಸರಿಸಬೇಕು? ಚರಿತ್ರೆಯ ಅಗತ್ಯ ಬಂದಾಗ ಹೊಸಹಾದಿಗಳು ಹುಟ್ಟಿಕೊಳ್ಳುತ್ತವೆ. ಇದಕ್ಕೆ ಜಾತಿಯ ಐಡೆಂಟಿಟಿ ಯಾಕೆ ಬೇಕು? ಸಮಾಜವಾದಿ ಸ್ವರೂಪದ ಸಂಸ್ಕೃತಿಯ ಚರ್ಚೆಯ ನಮೂನೆಗಳನ್ನು ದೇವಿಪ್ರಸಾದ ಚಟ್ಟೋಪಾಧ್ಯಾಯರಂತವರಲ್ಲಿಯೂ ಕಾಣಬಹುದು. ಬಿಳಿಮಲೆಯ ವಾದದಲ್ಲಿ 'ದಲಿತ' ಜಗತ್ತು ಪ್ರತ್ಯೇಕವೆಂಬ ವಾದವಿದೆ. ಈ ರೀತಿಯ ವಾದ ಜಾತಿ ಸಂಘರ್ಷದ ವಿಷ ಬೀಜ ಬಿತ್ತುತ್ತದೆ. ಈ ಹೊತ್ತಿಗೆ ಸಾರ್ವತ್ರಿಕವಾಗಿಯೇ ಈ ಧ್ವನಿಯಿದೆ. ಆದರೆ ಇದರ ಪರಿಣಾಮ ಕೆಟ್ಟದು, ಯಜಮಾನ ಸಂಸ್ಕೃತಿಯ ಅಡಿಯಲ್ಲಿ ಜಜ್ಜಿ ಹೋದ (?) ಸಂಸ್ಕೃತಿಯ ವಿಶ್ಲೇಷಣೆಯು ಯಾವ ಕಡೆಗೆ ತಿರುಗುತ್ತದೆ ಎಂಬುದನ್ನು ಯೋಚಿಸುವುದು ಒಳ್ಳೆಯದು. ಭಾರತೀಯ ಸನ್ನಿವೇಶದಲ್ಲಿ ಪ್ರತಿಯೊಂದು ಜಾತಿಗೂ ಬೇರೆ ಬೇರೆ ಎಂದು ಅಧ್ಯಯನ ಮಾಡುವ ರೀತಿ ವಿಭಾಜಕ ಶಕ್ತಿಯ ಪ್ರೇರಣೆಯಲ್ಲವೇ? ಭಾರತೀಯ ಸನ್ನಿವೇಶದ ಪ್ರತಿಯೊಂದು ಜಾತಿಗೂ ಒಂದು ನಿರ್ದಿಷ್ಟ ಸಂದರ್ಭದ ಸಂವಾದದಲ್ಲಿ ಇಲ್ಲವೇ? ಬ್ರಿಟಿಷರು ಬಿತ್ತಿ ಹೋದ ಕೋಮ ಸಂಘರ್ಷದ ಜಾತಿ ಸಂಘರ್ಷದ ಪರಿಕಲ್ಪನೆಗಳು ನಮ್ಮನ್ನು ಯಾವಾಗ ಬಿಟ್ಟು ಹೋಗಲು ಸಾಧ್ಯ? ಕಮ್ಯೂನಿಷ್ಟರ ಪರವಾಗಿ ನಾನು ಉತ್ತರಿಸುವಂತಿಲ್ಲ. ಇದನ್ನು ಕಮ್ಯೂನಿಷ್ಟ ನಾಯಕರು ಉತ್ತರಿಸಬೇಕು."

ಡಾ. ಬಿಳಿಮಲೆಯವರಿಗೆ ಉತ್ತರ

೧. ಉತ್ತರಿಸದೆ ಜಾರಿಕೊಳ್ಳಬೇಕೆಂಬ ಆಸಕ್ತಿ ನನಗಿಲ್ಲ. ಅಮೂಲ್ಯ ಎಂದುದಕ್ಕೆ ಕೃತಜ್ಞತೆಗಳು. ಬಿಳಿಮಲೆಯವರು

ನನ್ನ ವಾದವನ್ನು ತಿರುಚಿದ್ದಾರೆ. ಕಾವ್ಯ ಸತ್ಯ ಎಂದರೇನು? ಚಾರಿತ್ರಿಕ ಸತ್ಯ ಎಂದರೇನು? ಇವಕ್ಕಿರುವ ಸಂಬಂಧ ಯಾವ ಬಗೆಯದು ? ಯಾವುದೇ ಕಡತದಲ್ಲಿ ಬರುವ ವಿಷಯಗಳಿಗೂ ಅದನ್ನು ಸೃಷ್ಟಿಸಿದ ವ್ಯವಸ್ಥೆಗೂ ಯಾವ ಬಗೆಯ ಸಂಬಂಧವಿದೆ? ವೈಯಕ್ತಿಕ ಆಕ್ರಮಣ ಯಾವುದನ್ನು ಸೂಚಿಸುತ್ತದೆ. ಸಾಹಿತ್ಯ ಸಂವಾದದ ಸಂದರ್ಭದಲ್ಲಿ ಬಿಳಿಮಲೆಯವರು ಅನವಶ್ಯಕ ಎಳೆದು ತಂದಿರುವ ಚರ್ಚೆಗೆ ಉತ್ತರಿಸಲು ನನಗಿಷ್ಟವಿಲ್ಲ. ಈ ರೀತಿಯ ಕುಹಕಗಳನ್ನು ಬರೆಯಲು ನನಗೂ ಸಾಧ್ಯ. ಆದರಿಂದ ಆರೋಗ್ಯಕರ ಚರ್ಚೆ ಅಸಾಧ್ಯವೆಂದು ಸಾಹಿತ್ಯ ವಿದ್ಯಾರ್ಥಿಯಾಗಿ ನನ್ನ ಅನಿಸಿಕೆ.

೨. ಈ ಪ್ರಶ್ನೆಗೆ ಉತ್ತರ ಆರ್. ವಿ. ಭಂಡಾರಿಯವರಿಗೆ ನೀಡಿದ ವಿವರಣೆಯಲ್ಲಿದೆ.

೩. ಆರಂಭಿಕ ಹಂತದಲ್ಲಿಯೇ ಕೃತಿ ಸ್ವರೂಪಕ್ಕೂ ಕೃತಿಕಾರನಿಗೂ ಇರುವ ಸಂಬಂಧದ ಪರಿಶೀಲನೆ ಅಗತ್ಯ. ಒತ್ತಡ ಹೇರಿದ ಹಾಗೆ ಕಂಡರೆ ಅದಕ್ಕೆ ನಾನು ಜವಾಬ್ದಾರನಲ್ಲ. ಸಂದರ್ಭ ಸ್ವರೂಪ ಕೃತಿ ಇತ್ಯಾದಿಗಳನ್ನು ಬಿಟ್ಟು ಮಾತಾಡುವ ಬಿಳಿಮಲೆಯವರ ಉದ್ದೇಶವೇ ಕೃತಿಗಳನ್ನು ತನಗೆ ಬೇಕಾದಂತೆ ತಿರುಚುವ ಮಾದರಿಯದು. ಯಾವುದೇ ಕೃತಿಯಲ್ಲಿ ಬರುವ ಪಾತ್ರಗಳಿಗೂ ಕೃತಿಯೊಳಗೆ ಸಾಂದರ್ಭಿಕ ಹಿನ್ನೆಲೆಯಿರುತ್ತದೆ. ದಲಿತರಿಗೆ ಈ ತಿಳುವಳಿಕೆ ಬರಬಾರದೆಂದು ಬಿಳಿಮಲೆ ಹೀಗೆ ಮಾಡಿದ್ದಾರೆಯೇ? ಈ ರೀತಿಯ ಕುತಂತ್ರವೆಲ್ಲ ಯಾಕೆ? ಸಂದರ್ಭ 'ಕೃತಿ' ಸ್ವರೂಪ ಎಂಬುದನ್ನು ಅನಕ್ಷರಸ್ಥರೂ ಬಳಸುತ್ತಾರೆ ಎಂಬುದನ್ನು ಗಮನಿಸುವುದು ಸೂಕ್ತ.

೪. ಪ್ರತ್ಯೇಕವಾದಿ ನಿಲುವಿನ ಬಗ್ಗೆ ಖಂಡಿತಾ ಅಸಹನೆಯಿದೆ. ನನಗೆ ಕಳಕಳಿಯಿರುವುದು ಎಲ್ಲಾ ವರ್ಗದ ಜನತೆಯ ಬಗೆಗೆ ಅವರೆನ್ನೆಲ್ಲಾ ಒಡೆದು ಚೂರು ಚೂರು ಮಾಡಿ ಪ್ರತ್ಯೇಕ ಅಧ್ಯಯನ ನಡೆಸುವುದರ ಬಗ್ಗೆ ನನಗೆ ಗೌರವವಿಲ್ಲ. ಇದು ಕೇವಲ ಕೆಳವರ್ಗದ ಜನತೆಯು ಒಂದೆಡೆ ಸೇರದಂತೆ ಮಾಡುವ ಕುತಂತ್ರದ ನೆಲೆಗಳು. ಜಾತಿಯನ್ನು ಕುರಿತು ಮಾತಾಡಬೇಕೆಂದೇ ಅನಿಸುವುದಿಲ್ಲ. ಅದರ ಅಗತ್ಯವಂತೂ ಇರುವುದಿಲ್ಲ. ತಮ್ಮ ಜಾತಿಯ ಬೇಳೆ ಬೇಯಿಸಿಕೊಳ್ಳಲು ಇಷ್ಟಪಡುವವರಿಗೆ ಮಾತ್ರ ಈ ಎಲ್ಲಾ ಅಂಶಗಳು ಬೇಕಾಗುತ್ತವೆ. ಮತ್ತೊಂದು ಮಾತು; ಬ್ರಾಹ್ಮಣಿಕೆ ಮತ್ತು ಕ್ರಿಯೆಟಿವಿಟಿ, ಶೂದ್ರ ಮತ್ತು ಕ್ರಿಯೆಟಿವಿಟಿ, ಗೌಡ ಮತ್ತು ಕ್ರಿಯೆಟಿವಿಟಿ, ಇತ್ಯಾದಿ ಜಾಲಗಳು ಸಾಹಿತ್ಯ ಅಧ್ಯಯನಕ್ಕೆ, ಮಾನವೀಯ ಕಳಕಳಿಯ ಹೋರಾಟಕ್ಕೆ ಅಗತ್ಯವೇ? ಮಾರ್ಕ್ಸ್‌ವಾದಿಗಳು ನನ್ನಲ್ಲಿ ಯಾವ ಗುಟ್ಟನ್ನು ಹೇಳಿಲ್ಲ, ಮತ್ತು ನನ್ನ 'ರಿವ್ಯೂ' ನಲ್ಲಿ ಅದರ ಉಲ್ಲೇಖವಿಲ್ಲ. ಆದ್ದರಿಂದ ಉತ್ತರಿಸಬೇಕಾದ ಪ್ರಮೇಯವೇ ಇಲ್ಲ.

ಕೊನೆಗೊಂದು ಮಾತು : ಬಿಳಿಮಲೆಯವರು ಅನಗತ್ಯವಾಗಿ ಕೆಲವು ವಾದಗಳನ್ನು ಎತ್ತಿದ್ದಾರೆ. ಇದಕ್ಕೆ ಉತ್ತರ ಕೊಡಬೇಕೆಂದು ಅನಿಸಿಲ್ಲ. ನಾನಂತೂ 'ದಲಿತ ಜಗತ್ತು' ಕೃತಿಯನ್ನು ಕೃತಿಯಾಗಿ, ಅದರ ತಾತ್ವಿಕ ಹಿನ್ನೆಲೆಯಲ್ಲಿ ಗ್ರಹಿಸಿ ಚರ್ಚಿಸಿದ್ದೇನೆ. [೧೪]

ಈ ಮೇಲಿನ ಪುಸ್ತಕ ವಿಮರ್ಶೆ ಮತ್ತು ಅದಕ್ಕೆ ಬಂದಿರುವ ಪ್ರತಿಕ್ರಿಯೆಗಳ ವಿಚಾರ ಸರಣಿಯನ್ನು ಗಮನಿಸಿದರೆ, ಇಲ್ಲಿನ 'ಪುಸ್ತಕ ವಿಮರ್ಶೆ' ಕೃತಿಯನ್ನು ಆದಷ್ಟು ಪ್ರಶ್ನಿಸುವ ದಾಟಿಯಲ್ಲಿ ಇದೆ. ಕೃತಿಯಲ್ಲಿನ ಎಲ್ಲ ವಿವರಗಳನ್ನು ವಿಮರ್ಶೆಗೆ ಒಳಪಡಿಸಿರುವುದರಿಂದ ತೀರ ತೀಕ್ಷ್ಣವಾದ ವಿಮರ್ಶೆಯಾಗಿ 'ಪುಸ್ತಕ ವಿಮರ್ಶೆ' ಅಂತಿಮವಾಗಿ ವೇದಿಕೆ ನಿರ್ಮಿಸಿಕೊಂಡಿದೆ. ಪುಸ್ತಕ ವಿಮರ್ಶಕರು ಈ ಕೃತಿಯನ್ನು, ಕೃತಿಯ ವಿವರವನ್ನು ಎಲ್ಲಿಯೂ ಒಪ್ಪಿಕೊಂಡಿಲ್ಲ. ಈ ತೀಕ್ಷ್ಣ 'ಪುಸ್ತಕ ವಿಮರ್ಶೆ'ಯಿಂದ ಸ್ವತಃ ಕೃತಿ ಲೇಖಕರಿಂದ, ಮತ್ತು ಮತ್ತೊಬ್ಬ ವಿಮರ್ಶಕರಿಂದ ತೀವ್ರವಾದ ಪ್ರತಿಕ್ರಿಯೆಗಳಿಗೆ ಕಾರಣವಾಗಿದೆ. ಇದು ನಕಾರಾತ್ಮಕವಾದ ವಿಮರ್ಶೆಯಾದರೂ ಸಕಾರಣಗಳನ್ನು ಕೊಟ್ಟು ಪುಸ್ತಕ ವಿಮರ್ಶಕರು ಸಮರ್ಥಿಸಿಕೊಂಡಿರುವ ನಿಲುವನ್ನು ತೋರಿಸುತ್ತಾರೆ. ಹೀಗೆ ಸಮರ್ಥಿಸಿಕೊಳ್ಳಬೇಕಾದ ಸಂದರ್ಭದಲ್ಲಿ ಕೃತಿಯೊಂದಿಗಿನ ಬಾಹ್ಯ ವಿವರಗಳು

ಇದರೊಂದಿಗೆ ಚರ್ಚಿತವಾಗುವುದನ್ನು ಕಾಣಬಹುದು. ಹೀಗೆ ಪರಸ್ಪರ ವಾಗ್ವಾದಗಳಿಂದ ಕೃತಿಯನ್ನು ಅರ್ಥೈಸಲಾಗಿದೆ. ವಾಗ್ವಾದ ಸೃಷ್ಟಿಯಾಗಿರುವ ಸಂದರ್ಭದಲ್ಲಿ ಕೃತಿಯ ಬಗೆಗೆ ಕೃತಿಯ ಲೇಖಕರು ಇಟ್ಟುಕೊಂಡ ನಿಲುವುಗಳು, ಪುಸ್ತಕ ವಿಮರ್ಶಕರಲ್ಲಿ ಕೃತಿ ಅರ್ಥೈಸುವಾಗ ಭಿನ್ನವಾಗಿವೆ. ಅಲ್ಲದೆ ಮತ್ತೊಬ್ಬ ವಿಮರ್ಶಕರಿಗೂ 'ಪುಸ್ತಕ ವಿಮರ್ಶಕ'ನ ಮನೋಭಾವ ಕಾಡಿದೆ. ಈ ಕಾರಣದಿಂದಾಗಿ ಇವರು ಹಿಂದಿನ ಯಾವುದೋ ಘಟನೆಯನ್ನು ಉಲ್ಲೇಖಿಸಿ ಅದಕ್ಕೆ ಸಮರ್ಥನೀಯವಾಗಿ ಕೃತಿಯ ವಿವರಗಳನ್ನು ಕೇಳುತ್ತಾರೆ. 'ಪುಸ್ತಕ ವಿಮರ್ಶಕರು' ಕೊನೆಗೆ ತಮ್ಮ ನಿಲುವೇನೆಂದು ಸಮರ್ಥಿಸಿಕೊಳ್ಳುತ್ತಾರೆ.

ಈ ಪುಸ್ತಕ ಮಾದರಿಯಲ್ಲಿ ಮೂರು ವ್ಯಕ್ತಿಗಳ ನಡುವಿನ ಪರಸ್ಪರ ವಾಗ್ವಾದವಿದೆ. ಈ ವಾಗ್ವಾದಕ್ಕೆ ಒಂದು ಸಣ್ಣ ಪುಸ್ತಕ ವಿಮರ್ಶೆ ಕಾರಣವಾಗಿದೆ. ಇವರು 'ಪುಸ್ತಕ ವಿಮರ್ಶೆ'ಯನ್ನು ನೆಪವಾಗಿಟ್ಟುಕೊಂಡು ಹಲವಾರು ವಿಚಾರಗಳನ್ನು ಚರ್ಚಿಸುತ್ತಿದ್ದಾರೆ. ಇವರ ಈ ಚರ್ಚೆಯ ಹಿನ್ನೆಲೆಯಲ್ಲಿ ಕಂಡುಬರುವ ಅಂಶಗಳನ್ನು ಹೀಗೆ ಗುರುತಿಸಬಹುದೆನಿಸುತ್ತದೆ. ಇವರು ಪುಸ್ತಕ ವಿಮರ್ಶೆಯ ಮುಖೇನ ಕೆಲವು ಗಂಭೀರ ಪ್ರಶ್ನೆಗಳನ್ನು, ತಾತ್ವಿಕ ಚರ್ಚೆಗಳನ್ನು ಎತ್ತಿದ್ದಾರೆ.

(೧) ಕೃತಿ ಪ್ರವೇಶಿಸುವ ವಿದಾನದ ಬಗೆಗಿನ ಚರ್ಚೆ.

(೨) ಸೈದ್ಧಾಂತಿಕ ಪ್ರಶ್ನೆಗಳು.

(೩) ಮಾರ್ಕ್ಸವಾದೀ ದೃಷ್ಟಿಕೋನ.

(೪) ಕೆಲವೊಮ್ಮೆ ಅವರ ವೈಯಕ್ತಿಕ ವಿರಸ.

(೫) ಈ ಚರ್ಚೆಗೆ ವೇದಿಕೆ ನಿರ್ಮಿಸಿರುವ ಪತ್ರಿಕೆ,

(೬) ಈ ಚರ್ಚೆಯ ಹಿಂದಿರುವ ಲೇಖಕರು ಬಂದಿರುವ ಹಿನ್ನೆಲೆ.

ಈ ಮುಖ್ಯ ಅಂಶಗಳನ್ನಿಟ್ಟಕೊಂಡು ಇವರ ವಾಗ್ವಾದವನ್ನು ಅದರೊಂದಿಗೆ 'ಪುಸ್ತಕ ವಿಮರ್ಶೆ' ಯನ್ನು ವಿಶ್ಲೇಷಿಸಬಹುದು.

ಮೊದಲನೆಯದಾಗಿ ಇಲ್ಲಿ ಕೃತಿ ವಿಮರ್ಶೆಗೆ ಪ್ರವೇಶಿಕೆಯ ಬಗೆಗೆ ಕೃತಿಕಾರರು ಪ್ರಶ್ನೆ ಎತ್ತುತ್ತಾರೆ. ಪುಸ್ತಕ ವಿಮರ್ಶಕರು ತಮ್ಮ ಸೈದ್ಧಾಂತಿಕ ನಿಲುವುಗಳನ್ನು ಕೃತಿಯಲ್ಲಿ ಹುಡುಕುವ ಯತ್ನದಲ್ಲಿ ತೊಡಗಿದ್ದಾರೆಂಬುದು ಕೃತಿಕಾರರ ನಿಲುವು. ಕೃತಿಕಾರರು ಕೊಡುವ ಉಲ್ಲೇಖಗಳು ಹೀಗಿವೆ : ೧. ಕೆಲವು ಮುಖ್ಯ ಪ್ರಶ್ನೆಗಳನ್ನು ಎತ್ತಿ ಜಾರಿಕೊಂಡಿದ್ದಾರೆ, ೨. ತರ್ಕ ನನಗೆ ಅರ್ಥವಾಗಿಲ್ಲ, ೩. ಸಂದರ್ಭ, ಸ್ವರೂಪ ಕೃತಿ ಮುಂತಾದ ಪದಗಳನ್ನು ಬಳಸಿ ಅವೆಲ್ಲವನ್ನು ಒಳಗೊಳ್ಳಬೇಕಿತ್ತು ಎಂಬ ಒತ್ತಡವನ್ನು ಹೇಳುವ ಅಗತ್ಯವೇನಿತ್ತು, ೪. ಬಾಚಿಕೊಳ್ಳುವ ಮನೋಭಾವದ ಹಿನ್ನೆಲೆ ಏನು? ಎಂದು ಹಲವು ಪ್ರಶ್ನೆಗಳನ್ನು ಎತ್ತಿದ್ದಾರೆ, ೫. ಮುಖ್ಯವಾಗಿ ಇದು ಕೇವಲ ಕೃತಿ ವಿಮರ್ಶೆ ಅಲ್ಲ ಅಂತಿಮವಾಗಿ ಸಂಸ್ಕೃತಿ ವಿಮರ್ಶೆಯೂ ಹೌದು. ಎಂಬ ಮುಖ್ಯ ನಿಲುವಿಗೆ ಬರುತ್ತಾರೆ.

ಈ ಮೇಲಿನ ಕೃತಿಕಾರರ ನಿಲುವುಗಳನ್ನು ಗಮನದಲ್ಲಿಟ್ಟುಕೊಂಡು ನೋಡುವುದಾದರೆ 'ನುಣಚಿಕೊಳ್ಳುವ', 'ಒತ್ತಡ', 'ಬಾಚಿಕೊಳ್ಳುವ' ಮುಂತಾದ ಲಕ್ಷಣಗಳು ಪುಸ್ತಕ ವಿಮರ್ಶಕರಿಗೆ ಅಗತ್ಯವೇ? ಎಂದು ಕೇಳಿಕೊಳ್ಳಬೇಕಾಗುತ್ತದೆ. ಹೀಗಾಗಲು ಕಾರಣಗಳನ್ನು ಕೃತಿ ವಿಮರ್ಶೆ ಮತ್ತು ಪ್ರತಿಕ್ರಿಯೆಗಳಲ್ಲಿ ಹುಡುಕಿಕೊಂಡಾಗ ಇವರಿಬ್ಬರ ನಡುವೆ ಕೇವಲ ಕೃತಿ ವಿಮರ್ಶೆ ನಡೆಯುತ್ತಿಲ್ಲ. ಒಂದು ಸೈದ್ಧಾಂತಿಕವಾದ ಚರ್ಚೆಗೆ ವೇದಿಕೆ ನಿರ್ಮಿಸಿಕೊಳ್ಳುತ್ತಿದ್ದಾರೆ ಎನಿಸುತ್ತದೆ. ಕೆಲವೊಮ್ಮೆ ವೈಯಕ್ತಿಕ ವಿವರಗಳಿಗೆ ಹೋಗುವ ಅತಿ ಕಂಡು ಬಂದರೂ ವೈಯಕ್ತಿಕ ಅಂಶವು ಪುಸ್ತಕ ವಿಮರ್ಶೆಯಲ್ಲಿ ಒಂದು ಲಕ್ಷಣವಾಗಿರುವುದರಿಂದ ವೈಯಕ್ತಿಕ ಸಿದ್ಧಾಂತಗಳ ಮುಖಾಮುಖಿ ಇಲ್ಲಿ ನಡೆಯುತ್ತದೆ.

ಇಲ್ಲಿನ ಪುಸ್ತಕ ವಿಮರ್ಶಕರಾದ ಶರ್ಮ ಮತ್ತು ಭಂಡಾರಿಯವರು ಮುಖ್ಯವಾಗಿ ಮಾರ್ಕ್ಸವಾದೀ ವಿಮರ್ಶಕರು. ಅವರು ಈ ಕೃತಿಯನ್ನು ಮಾರ್ಕ್ಸವಾದಿ ದೃಷ್ಟಿಕೋನದಿಂದ ವಿಶ್ಲೇಷಿಸಿದ್ದಾರೆ. ಅವರು ಗುರುತಿಸಿರುವ ಅಂಶಗಳ ಬಗೆಗೆ ಅವರು ಎತ್ತುವ ಪ್ರಶ್ನೆಗಳು ಮಾರ್ಕ್ಸ ದೃಷ್ಟಿಕೋನದಿಂದಲೇ ಹುಟ್ಟಿದಂತಹವುಗಳು. ಈ ಮಾತಿಗೆ ಅವರ ಪುಸ್ತಕ ವಿಮರ್ಶೆಯಲ್ಲಿನ ಈ ಕೆಳಗಿನ ಸಾಲುಗಳು ಸಾಕ್ಷಿ ಒದಗಿಸುತ್ತವೆ. 'ಸರಳ ತೀರ್ಮಾನಗಳು ಸಹಜವಾಗಿಯೇ ಎಲ್ಲ ವಿಷಯಗಳನ್ನು ಕಪ್ಪು-ಬಿಳುಪು ಮಾಡುತ್ತವೆ. 'ರಸೆಲ್‌ನ ಸಿಟ್ಟು', 'ಫೆಮಿನಿಸ್ಟ್‌ರ ವಾಗ್ವಾದ', 'ಪ್ರತ್ಯೇಕತಾವಾದಿನಿಲುವು', 'ಯಥಾಸ್ಥಿತಿಯನ್ನು ಪ್ರತಿಪಾದಿಸುತ್ತಾರೆ', 'ಜಾತಿ ಕ್ರಿಯೆಟಿವ್' ಈ ಎಲ್ಲ ಪದ ಪಂಕ್ತಿಗಳನ್ನು ಗಮನಿಸಿದಾಗ ಪುಸ್ತಕ ವಿಮರ್ಶೆಯ ಸಂದರ್ಭದಲ್ಲಿ ಪುಸ್ತಕ ಕೃತಿ ಕೇವಲ ಕೃತಿಯಾಗಿ ಕಂಡಿಲ್ಲ ಅದು ಸಮಾಜದ ಕನ್ನಡಿಯಾಗಿ ಕಂಡಿದೆ, ಹೀಗಾಗಿ ಸಮಾಜದಲ್ಲಿನ ತಾರತಮ್ಯವನ್ನು 'ಲೇಖಕರು' ಇರುವ ಸ್ಥಿತಿಯನ್ನು ಒಪ್ಪಿಕೊಳ್ಳುವುದನ್ನು 'ಪುಸ್ತಕ ವಿಮರ್ಶಕ'ರು ವಿರೋಧಿಸುತ್ತಾರೆ. ಹಾಗಾಗಿ ಕೃತಿಯನ್ನು ಬದಲಾವಣೆ ಬಯಸುವ ಮನಸ್ಸಿನಲ್ಲಿ ಮಾರ್ಕ್ಸವಾದಿ ನೆಲೆಯಲ್ಲಿಟ್ಟು ತಿರಸ್ಕರಿಸುತ್ತಾರೆ.

ಆದರೆ ಕೃತಿಯ ಲೇಖಕರು ಪ್ರಗತಿಪರ ನಿಲುವುಳ್ಳವರು, ಅವರು ಮಾರ್ಕ್ಸವಾದಿ ಚಿಂತನೆಗಳ ತತ್ವಗಳಿಗಿಂತ ಜೀವನಾದರ್ಶ, ಜೀವನ ಕಾಳಜಿ ಮುಖ್ಯ ಎಂದು ತಿಳಿದವರು, ತತ್ವಗಳಿಗಿಂತ ಸಮಾಜದ ಕೆಳವರ್ಗದಲ್ಲಿರುವ 'ಸೀರುಡಿಕೆ' ಯಂಥ ಜೀವಂತ ಆದರ್ಶಗಳನ್ನು ಮೇಲ್ವರ್ಗಕ್ಕೆ ಪ್ರೇರಣೆಯಾಗ ಬೇಕು ಎಂದು ಲೇಖಕರು ಬಯಸುವವರಾಗಿದ್ದಾರೆ. ಹಾಗಾಗಿ ಅವರು ಮಾರ್ಕ್ಸವಾದಿ ಚಿಂತನೆಯನ್ನು ತಮ್ಮ ಪ್ರತಿಕ್ರಿಯೆಯಲ್ಲಿ ಪ್ರಶ್ನಿಸುತ್ತಾ ಹೋಗುತ್ತಾರೆ. 'ನಮ್ಮ ಬಹುತೇಕ ಮಾರ್ಕ್ಸವಾದಿಗಳು ಮದುವೆಗೆ ಹೆಣ್ಣು ಹುಡುಕುವಾಗ ಜಾತಿಯನ್ನು ಆಶ್ರಯಿಸುವುದರ ಗುಟ್ಟೇನು' ತಮ್ಮ ಸಾಂಸ್ಕೃತಿಕ ಸೃಜನಶೀಲತೆಯನ್ನು ಒಪ್ಪಿಕೊಳ್ಳುವ, ಮುಂದುವರಿಸಿಕೊಂಡು ಬರುವ ಹಠ ಯಾಥಾಸ್ಥಿತಿವಾದವೇ? ಬ್ರಾಹ್ಮಣರು ತಮ್ಮ 'ಬ್ರಾಹ್ಮಣ್ಯವನ್ನು ಕ್ರಿಯೆಟಿವ್ ಆಗಿ ಯಾಕೆ ಉಪಯೋಗಿಸಿಕೊಳ್ಳಬಾರದು,' 'ಜಾತಿಯ ಬಗ್ಗೆ ಮಾತಾಡದೆ ಇರುವುದು ಕೂಡಾ ಜಾತಿಯನ್ನು ಉಳಿಸುವ ಗುಪ್ತತಂತ್ರ ಯಾಕೆ ಆಗಿರಬಾರದು', 'ಲೈಂಗಿಕ ಪಾವಿತ್ರ್ಯದ ಬಗೆಗೆ ಬಹಳವಾಗಿ ಮಾತಾಡುವ ಮಂದಿಯೂ ಹೆಣ್ಣಿನ ತಲೆ ಬೋಳಿಸಿ ಮುಂಡೆಯನ್ನಾಗಿಸುತ್ತಾರೆ. ಎಂದು ಹೇಳುವ ಮೂಲಕ ಭಾರತೀಯ ಸಮಾಜದಲ್ಲಿ ಮಾರ್ಕ್ಸವಾದೀ ಚಿಂತನೆ ಮೂಡಿಸುವ

ಅಪಾಯವನ್ನು, ಆದರ್ಶ ಮತ್ತು ವಾಸ್ತವ ಸ್ಥಿತಿಯನ್ನು ಹೇಳುತ್ತಾರೆ. ಬುದ್ಧಿವಂತರು ಎಂದು ತೋರಿಸಿಕೊಳ್ಳುವ ಜನರು ಆದರ್ಶದ ನೆಪದಲ್ಲಿ ವಾಸ್ತವತೆಯನ್ನು ಮರೆಯುತ್ತಿದ್ದಾರೆ, ಜೀವನಪರ ಕಾಳಜಿಗಳನ್ನು ಅಲ್ಲಗಳೆಯುತ್ತಿದ್ದರೆ ಎಂಬ ನಿಲುವಿಗೆ ಲೇಖಕರು ಬಂದಂತಾಗಿದೆ. ಅವರು ಬುದ್ಧಿಜೀವಿ ವರ್ಗವನ್ನು ಹೀಗೆ ವಿಶ್ಲೇಷಿಸುತ್ತಾರೆ. ಎಂ.ಎ. ಹಂತದಲ್ಲೂ ವಿಷಯವನ್ನು ವಿವರಿಸಲಾಗದೆ ಒದ್ದಾಡುವ ನಮ್ಮ ಬುದ್ಧಿಜೀವಿಗಳು, 'ರಸಲ್ ಸಿಟ್ಟು', 'ಫೆಮಿನಿಸ್ಟ್ ವಾಗ್ವಾದ'ವನ್ನು ಅರ್ಥಮಾಡಿಕೊಂಡಿರುವ ಶರ್ಮರಿಗೆ ದಲಿತ ಮಹಿಳೆಯ ಬಗೆಗಣ ಚಿಕ್ಕ ಟಿಪ್ಪಣಿ ಅರ್ಥವಾಗದೇ ಹೋಗುತ್ತಿರುವ ನಮ್ಮ ಬುದ್ಧಿ ಜೀವಿಗಳು ಎಲ್ಲಿ ಸೋಲುತ್ತಿದ್ದಾರೆಂಬುದಕ್ಕೆ ದಿಕ್ಸೂಚಿ ಆಗಬಹುದೇ? ಇಂಥ ನಿಲುವುಗಳಿಗೆ ಅವರು ಕಂಡುಕೊಳ್ಳುವ ಕಾರಣಗಳು ಕೃತಿ ವಿಮರ್ಶೆಯಲ್ಲಿ ಪುಸ್ತಕ ವಿಮರ್ಶಕರು ತೆಗೆದುಕೊಂಡ ತೀರ್ಮಾನಗಳ ಚರ್ಚೆಯಿಂದ.

ಈ ಚರ್ಚೆಗೆ ಮತ್ತೊಬ್ಬರು ಮಾರ್ಕ್ಸವಾದೀ ಚಿಂತಕರೇ ಭಾಗವಹಿಸಿರುವುದು ಈ ಕೃತಿ ವಿಮರ್ಶೆಗೆ ಹೊಸ ಆಯಾಮ ದೊರೆತಂತಾಗಿದೆ. ಕೃತಿಕಾರ ಕೃತಿ ವಿಮರ್ಶಕರ ನಡುವಿದ್ದ ಕೃತಿಯ ಚರ್ಚೆಯು ಮತ್ತೋರ್ವ ಚಿಂತಕರಿಂದ ಸೈದ್ಧಾಂತಿಕ ರೂಪ ಪಡೆಯುತ್ತಿದೆ. ಈ ಪ್ರತಿಕ್ರಿಯೆಕಾರರಾದ ಆರ್.ವಿ. ಭಂಡಾರಿಯವರು, ಈ ಚರ್ಚೆಯನ್ನು ಕೇವಲ ಅವಸರದ ಓದಿನ ಪರಿಣಾಮ ಎಂದು ನಾನು ಗ್ರಹಿಸದೇ ಇರುವುದು' ಎಂದು ಪುಸ್ತಕ ವಿಮರ್ಶೆಯ ತಾತ್ವಿಕತೆಯ ನಿಲುವಿನಲ್ಲಿ ಪ್ರಶ್ನೆಗಳನ್ನೆತ್ತುತ್ತಾರೆ. ಹಿಂದೊಮ್ಮೆ ನಡೆದ ಘಟನೆಯನ್ನು ಎತ್ತಿಕೊಂಡು ಕೇಶವಶರ್ಮರು ಈ ಪ್ರಶ್ನೆಯ ಹಿನ್ನೆಲೆಯಲ್ಲಿ ಕೃತಿಯುನ್ನು ವಿಮರ್ಶಿಸಿದ್ದಾರೆ ಎಂಬ ನಿಲುವಿಗೆ ಬರುತ್ತಾರೆ. ಇವರು ಮಾರ್ಕ್ಸವಾದೀ ಹಿನ್ನೆಲೆಯುಳ್ಳವರಾದ್ದರಿಂದ ಲೇಖಕರ ಮತ್ತು ಪುಸ್ತಕ ವಿಮರ್ಶಕರ ಇವರೀರ್ವರ ಚಿಂತನೆಗಳನ್ನು ಏಕಕಾಲಕ್ಕೆ ಒಪ್ಪಿಕೊಳ್ಳಲು ಯತ್ನಿಸುತ್ತಾರೆ. 'ಇಂದು ಯಾವೊಂದು ಜಾತಿ ಸಂಸ್ಕೃತಿಯ ಆರಾಧನೆ ನಮಗೆ ಅಗತ್ಯವಿಲ್ಲ' ಎಂದು ಮಾರ್ಕ್ಸವಾದೀ ದೃಷ್ಟಿಕೋನದಿಂದ ಜಾತೀಯತೆಯನ್ನು ಒಡೆಯುತ್ತಲೇ, 'ಜಾತ್ಯಾತೀತವಾದ ಸಮಾಜವಾದೀ ಸ್ವರೂಪದ ಸಂಸ್ಕೃತಿಯೇ ಬೇಕಾದುದು' ಎಂದು ಸಿದ್ಧಾಂತೀಕರಿಸಿಕೊಳ್ಳುತ್ತಾರೆ. ಇವರೂ ಮಾರ್ಕ್ಸವಾದದಿಂದ ಆಗಿರುವ ಅಪಾಯಗಳನ್ನು ಮನಗಂಡವರು ಅಸ್ಪೃಶ್ಯತೆಯನ್ನು ಮಾನದಂಡವಾಗಿಟ್ಟುಕೊಂಡ ಕಾರಣ ದಲಿತರೆಗೆ 'ಅಸ್ಪೃಶ್ಯರಾಗಿದ್ದಾರೆ.... ಜಾತಿನಿಷ್ಠತೆಗಿಂತ ವರ್ಗ ಹೋರಾಟ ಮುಖ್ಯ ಎಂಬ ನಿಲುವುಗಳು, ಮಾರ್ಕ್ಸವಾದೀ ದೃಷ್ಟಿಕೋನದಿಂದ ಆಗಿರುವ ಚಿಂತನಾ ಅಪಾಯಗಳನ್ನು ಹೇಳಿದವುಗಳಾಗಿವೆ. 'ಸೀರುಡಿಕೆ'ಯ ಪ್ರಶ್ನೆ, ಲೇಖಕರು 'ಗಂಡ ಸತ್ತರೆ ಬೇರೊಬ್ಬನನ್ನು ಕೂಡಿಕೊಳ್ಳಬಹುದಾದ ಜೀವಪರ' ಕಾಳಜಿಯಾಗಿ ವಿಶ್ಲೇಷಿಸಿದ್ದಾರೆ. ಇದೇ ಕಾರಣವನ್ನು ಭಂಡಾರಿಯವರು ಇಟ್ಟು ಅದು ಮತ್ತೊಂದು ಶೋಷಿತ ವರ್ಗ ಕೆಳವರ್ಗವಾಗಿ ನಿರ್ಮಾಣವಾಗುತ್ತದೆ ಎಂದು ಉದಾಹರಣೆ ಸಮೇತ ವಿವರಿಸುತ್ತಾರೆ.

ಆದರೆ ಪುಸ್ತಕ ವಿಮರ್ಶಕರು 'ಹಾಲಕ್ಕಿ ಸಮಾಜದಲ್ಲಿ ಅದಿದೆ ಎನ್ನುವ ಕಾರಣಕ್ಕಾಗಿ ನಾವೇಕೆ ಅದನ್ನು ಅನುಸರಿಸಬೇಕು? ಚರಿತ್ರೆಯ ಅಗತ್ಯ ಬಂದಾಗ ಹೊಸ ಹಾದಿಗಳು ಹುಟ್ಟಿಕೊಳ್ಳುತ್ತವೆ', ಎಂಬ ನಿಲುವಿಗೆ ಬರುತ್ತಾರೆ.

ಈ ಪುಸ್ತಕ ವಿಮರ್ಶೆ ಮತ್ತು ಪ್ರತಿಕ್ರಿಯೆಗಳನ್ನು ನೋಡಿದರೆ ಕೃತಿಕಾರ ಮತ್ತು ಪುಸ್ತಕ ವಿಮರ್ಶಕರ ನಡುವೆ ಯಾವುದೋ ವೈಯಕ್ತಿಕ ವಿರಸಗಳ ಪರಿಣಾಮದಿಂದ ಮೂಡಿವೆಯೆನಿಸುತ್ತದೆ. ಅದಕ್ಕೆ ಅಲ್ಲಲ್ಲಿ ಕೆಲವು ಕುಹಕದ ನುಡಿಗಳಿವೆ. 'ಕುತರ್ಕವಾದ', 'ವೈಯಕ್ತಿಕ ಆಕ್ರಮಣ ಯಾವುದನ್ನು ಸೂಚಿಸುತ್ತದೆ.' 'ಗಟ್ಟಿಯಾದ ಸೈದ್ಧಾಂತಿಕ ಹಿನ್ನೆಲೆಯಲ್ಲಿರುವವರಿಗೆ ಜಾತಿಯನ್ನು ಕುರಿತು ಮಾತನಾಡಬೇಕೆಂದು ಅನಿಸುವುದಿಲ್ಲ', 'ಉತ್ತರಿಸಬೇಕಾದ ಪ್ರಮೇಯವಿಲ್ಲ', 'ಅನಗತ್ಯವಾದ ಕೆಲವು ವಾದಗಳನ್ನು ಎತ್ತಿದ್ದಾರೆ ಎಂದು ದೂರುವ ಪುಸ್ತಕ ವಿಮರ್ಶಕರು ಕೃತಿಕಾರರು ಕೇಳಿರುವ ಪ್ರಶ್ನೆಗಳಿಂದ ಪ್ರಚೋದಿತಗೊಂಡಿದ್ದಾರೆನಿಸುತ್ತದೆ. ಪರಸ್ಪರ ವೈಯಕ್ತಿಕ ಕಾರಣಗಳು ಸಹ ಕೃತಿ ವಿಮರ್ಶೆಯ ಸಂದರ್ಭದಲ್ಲಿ ಒಳ್ಳೆ ಪುಸ್ತಕ ವಿಮರ್ಶೆ, ಕೆಟ್ಟ ಪುಸ್ತಕ ವಿಮರ್ಶೆ ಈ ಎರಡು ರೀತಿಯ ವಿಮರ್ಶೆ ರೂಪುಗೊಳ್ಳಲು ಕಾರಣವಾಗುತ್ತದೆ.

ಇಂಥ ಪುಸ್ತಕ ವಿಮರ್ಶೆಗೆ ಚರ್ಚೆಯ ವೇದಿಕೆಯನ್ನೊದಗಿಸಿರುವ ಪತ್ರಿಕೆಯು ಬಹಳ ಮುಖ್ಯವಾಗುತ್ತದೆ. ಇಂತಹ ಚರ್ಚೆ ಸಾಮಾನ್ಯವಾದ ನಿಯತಕಾಲಿಕೆಗಳಲ್ಲಿ ಬರುವಂಹದ್ದಲ್ಲ. ಆದರೆ ಸಾಹಿತ್ಯ ಪತ್ರಿಕೆಗಳಲ್ಲಿ ಇಂಥ ಚರ್ಚೆಗಳು ಬರುತ್ತವೆ. ಸಂಕ್ರಮಣದಲ್ಲಿ ಬಂದ ಈ ಚರ್ಚೆ ಸಂಚಿಕೆಯಿಂದ ಸಂಚಿಕೆಗೆ ಬೆಳೆದು ಓದುಗರನ್ನು ಚಿಂತನೆಗೆ ಗುರಿಮಾಡಿ ಮುಂದಿನ ಸಂಚಿಕೆಗೆ ಕಾಯುವಂತೆ ಮಾಡುತ್ತದೆ. ಚರ್ಚೆಯ ವೇದಿಕೆಗಳಾಗಿರುವ ಸಾಹಿತ್ಯ ಪತ್ರಿಕೆಗಳಿಂದ ಮಾತ್ರ ಇಂತಹ ವಿಚಾರ ಸರಣಿ ಹರಿಯಲು ಸಾಧ್ಯ. ಈ ಪತ್ರಿಕೆಗಳು ಇಟ್ಟುಕೊಂಡಿರುವ ತಾತ್ವಿಕ ಅಂಶಗಳು ಇಂಥ ವಾಗ್ವಾದಕ್ಕೆ ಸಿದ್ಧತೆ ಮಾಡುತ್ತವೆ. ಅದು ಮುಕ್ತ ಚರ್ಚೆಯಾಗುವಂತೆ ಬೆಳೆಸುತ್ತವೆ.

ಈ ಮೇಲಿನ ದೀರ್ಘ ಪುಸ್ತಕ ವಿಮರ್ಶೆಯ ಚರ್ಚೆ ಆರಂಭದ ಸಾಂಸ್ಕೃತಿಕ ಹಿನ್ನೆಲೆ ಗಮನಿಸಿದರೆ ಇಲ್ಲಿ ಆಗಿರುವ ಚರ್ಚೆಯು ಸಮಕಾಲೀನ ಚಿಂತನೆಗಳನ್ನು ಒಳಗೊಂಡಿದೆ. ಈ ಮೂರು ಜನರು ಬಂಡಾಯ ಸಂಘಟನೆಯಿಂದ ಬೆಳೆದು ಬಂದವರು. ಜೊತೆಗೆ ಸಮಾನ ಆಸಕ್ತಿ, ಸಮಾನ ಸಿದ್ಧಾಂತ ತಾತ್ವಿಕತೆಗಳನ್ನು ಬೆಳಸಿಕೊಂಡಿರುವುದರಿಂದ ಇವರ ಚರ್ಚೆ ಆರೋಗ್ಯಪೂರ್ಣವಾಗಿ ಬೆಳೆದು ಬಂದಿದೆ.

ಒಟ್ಟಾರೆ 'ಪುಸ್ತಕ ವಿಮರ್ಶೆ' ಹಲವು ಜನರಿಗೆ ಹಲವು ಜನರ ಓದಿಗೆ ಭಿನ್ನ ರೀತಿಯ ಅರ್ಥಗಳನ್ನು ನೀಡಿದೆ. 'ಪುಸ್ತಕ ವಿಮರ್ಶೆ' ಯೆಂಬುದು ಅಂತಿಮವಾಗಿ ಸಂಸ್ಕೃತಿ ವಿಮರ್ಶೆಯೂ ಹೌದು ಎಂಬ ಗಂಭೀರ ನಿಲುವಿಗೆ ಕೃತಿ ಲೇಖಕರೇ ಬಂದು ನಿಲ್ಲುತ್ತಾರೆ. ಈ ಕಾರಣದಿಂದ ಪುಸ್ತಕ ವಿಮರ್ಶಕರಿಂದ ಹೊಣೆಗಾರಿಕೆಯ ಉತ್ತರವನ್ನು ನಿರೀಕ್ಷಿಸುತ್ತಾರೆ. ಆದರೆ ಪುಸ್ತಕ ವಿಮರ್ಶಕರು ಕೃತಿಯ ಲೇಖಕರನ್ನಾಗಲಿ ಕೃತಿಯನ್ನಾಗಲಿ ಗಮನಕ್ಕೆ ತೆಗೆದುಕೊಳ್ಳದೆ 'ಕೃತಿಯನ್ನು ಕೃತಿಯಾಗಿ ಅದರ ತಾತ್ವಿಕ ಹಿನ್ನೆಲೆಯಲ್ಲಿ ಗ್ರಹಿಸಿ ಚರ್ಚಿಸಿದ್ದೇನೆ' ಎಂಬ ಸಮರ್ಥನೆ ನೀಡುತ್ತಾರೆ. ಈ ಅಂತಿಮ ಸಮರ್ಥನೆ ಒಟ್ಟಾರೆ 'ಪುಸ್ತಕ ವಿಮರ್ಶಕ'ರ ಹೊಣೆಗಾರಿಕೆಯನ್ನು ತಿಳಿಸುತ್ತದೆ. ಇಲ್ಲಿ ಪುಸ್ತಕ ವಿಮರ್ಶೆ ಈ ರೀತಿಯ ವಾಗ್ವಾದಗಳನ್ನು ಹುಟ್ಟುಹಾಕಿ ಆ ಮೂಲಕ ಪರಸ್ಪರ ವಾಗ್ವಾದಗಳಿಂದ ಕೃತಿಯ ಅರ್ಥವಿವರಗಳೂ ಸ್ಪಷ್ಟವಾಗುತ್ತವೆ.

ಆರಂಭದಲ್ಲಿ ಚರ್ಚೆಯಾದ ಇನ್ನೊಂದು ಮಾದರಿಯನ್ನು ಗಮನಿಸಬಹುದು
"ಶೂದ್ರ ತಪಸ್ವಿ" : ಒಂದು ಸಣ್ಣ ದೃಶ್ಯ

ರಾಮಾಯಣದ ಉತ್ತರಕಾಂಡದಲ್ಲಿ ಬರುವ ಶಂಬೂಕಪ್ರಸಂಗ ಈ ಸಣ್ಣ ದೃಶ್ಯಕಾವ್ಯದ ಮೂಲವಸ್ತು. ಉತ್ತರಕಾಂಡದ ಕತೆಯನ್ನು ಕವಿ ಹಲವು ವಿವರದಲ್ಲಿ ಮಾರ್ಪಡಿಸಿಕೊಂಡಿದ್ದಾರೆ. ಶಂಬೂಕನ ಆಶ್ರಮವನ್ನು ಕಾಯುವ ದೊಡ್ಡದೊಂದು ಆಲದಮರ, ಭೈರವ, ಆಶ್ರಮದಲ್ಲಿ ಅವಿನಯ ನಡೆಯುತ್ತದೆಂದು ಅರಿತು ಅದಕ್ಕೆ ತಕ್ಕ ಶಿಕ್ಷೆಯನ್ನು ಮಾಡುವುದಕ್ಕಾಗಿ ಅಲ್ಲಿಗೆ ಬರುವ ಮೃತ್ಯು, ಆಶ್ರಮದ ಸನ್ನಿವೇಶದಲ್ಲಿ ಸಂದರ್ಭಕ್ಕೆ ತಕ್ಕಂತೆ ಒದಗುವ ಬಿರುಗಾಳಿ, ಧೂಳು, ಕತ್ತಲು, ಮುಂತಾದ ಕ್ಷೋಭೆಯ ಭಾಗ, ಇವು ಕವಿ ಊಹೆಯಿಂದ ಸೇರಿಸಿರತಕ್ಕವು. ಮಾರ್ಪಾಡು ಕಾವ್ಯ ದೃಷ್ಟಿಯಿಂದ ಸಾಧುವಾಗಿದೆ. ಭೈರವ ಮೃತ್ಯುಗಳ ಸಂಭಾಷಣೆ ಶಂಬೂಕನು ಎಷ್ಟು ಮಹಿಮಾವಂತನೆಂಬುದನ್ನು ತೋರಿಸುತ್ತದೆ. ಆದರೆ ಮಾತು ಅಲ್ಲಲ್ಲಿ ಇಂತಹ ದಿವ್ಯ ತತ್ವಗಳ ಹಿರಿತನಕ್ಕೆ ಅವಶ್ಯಕವಾದ ಗಾಂಭೀರ್ಯದಿಂದ ತಪ್ಪುತ್ತದೆ.

ರಾಮಚಂದ್ರನು ಹುಣ್ಣಿಮೆಯ ಸಂಜೆ ಅರಮನೆಯಲ್ಲಿ ಇರಬೇಕಾದರೆ ಬ್ರಾಹ್ಮಣನೊಬ್ಬನು ಬಂದು ತನ್ನ ಮಗನು ಸತ್ತ ಬಗೆಗೆ ಪ್ರಲಾಪಮಾಡುತ್ತ ಇದು ದೊರೆಯ ದೋಷ ಎಂದು ಅರಮನೆಯ ಮುಂದೆ ಕೂಗಾಡುತ್ತಾನೆ. ರಾಮನು ಹೊರಗೆ ಬಂದು ಸಂಗತಿಯನ್ನು ವಿಚಾರಿಸಿ ಆ ಮಗನು ಸತ್ತು ಬಿದ್ದಿದ್ದ ಶಂಬೂಕಾಶ್ರಮಕ್ಕೆ ಬ್ರಾಹ್ಮಣನೊಂದಿಗೆ ಹೋಗುತ್ತಾನೆ. ಬ್ರಾಹ್ಮಣನೊಂದಿಗೆ ಮಾತನಾಡುವುದರಲ್ಲಿ, ಆ ಹುಡುಗನು ಶಂಬೂಕನಿಗೆ ನಮಸ್ಕಾರ ಮಾಡುವುದರಲ್ಲಿದ್ದನೆಂದೂ, ಬ್ರಾಹ್ಮಣನು ಶೂದ್ರನಿಗೆ ನಮಸ್ಕಾರ ಮಾಡಬೇಡವೆಂದು ಮಗನನ್ನು ತಡೆದನೆಂದೂ ರಾಮನಿಗೆ ತಿಳಿಯುತ್ತದೆ. ತಪಸ್ವಿಯಾದ ಶಂಬೂಕನಿಗೆ ಅವಿನಯ ಮಾಡಿದ್ದರಿಂದಲೇ ಹುಡುಗನು ಸತ್ತನೆಂದು ರಾಮಚಂದ್ರನು ಗ್ರಹಿಸುತ್ತಾನೆ. ಶೂದ್ರನು ತಪಸ್ಸು ಮಾಡುವುದು ಅಧರ್ಮ, ಅದರಿಂದ ತನ್ನ ಮಗನು ಸತ್ತನು, ಎಂದು ಬ್ರಾಹ್ಮಣನ ಕಲ್ಪನೆ. ತಪಸ್ಸನ್ನು ಬ್ರಾಹ್ಮಣನ ಸ್ವತ್ತು ಎನ್ನುವುದು ಜಾತಿಗರ್ವಾಂಧ ಬ್ರಾಹ್ಮಣರ ಭ್ರಮೆ, ಶೂದ್ರನಾದರೂ ತಪಸ್ವಿಯಾದುದರಿಂದ ಶಂಬೂಕನು ಪೂಜ್ಯ, ಎಂದು ರಾಮನ ಅಭಿಪ್ರಾಯ. ಅಧರ್ಮಿಗೆ ಶಿಕ್ಷೆಮಾಡೆಂದು ರಾಮನು ಬ್ರಹ್ಮಾಸ್ತ್ರವನ್ನು ಬಿಡುವನು. ಅದು ಶಂಬೂಕನನ್ನು ಕೊಲ್ಲುವುದೆಂದು ಬ್ರಾಹ್ಮಣನ ನಿರೀಕ್ಷೆ. ಬ್ರಹ್ಮಾಸ್ತ್ರ ಇದನ್ನು ಮಾಡುವುದಿಲ್ಲ. ಶಂಭೂಕನಿಗೆ ನಮಿಸಿ ಬ್ರಾಹ್ಮಣನನ್ನು ಮುಗಿಸಲು ಹಿಂದಿರುಗಿ ಬರುತ್ತದೆ. ತಾನೇ ಅಧರ್ಮಿ ಎನ್ನುವುದು ರಾಮನ ನಾಲ್ಕು ಮಾತಿನಿಂದ ಬ್ರಾಹ್ಮಣನಿಗೆ ಮಂದಟ್ಟಾಗುತ್ತದೆ. ಅವನು ರಾಮನಿಗೆ ಶರಣು ಹೋಗುತ್ತಾನೆ. ರಾಮನು, ಶರಣುಹೋಗಬೇಕಾದುದು ತನ್ನನ್ನಲ್ಲ, ಮಹಾತ್ಮನಾದ ಶಂಬೂಕನನ್ನು, ಎಂದು ಅವನಿಗೆ ಮನವರಿಸುತ್ತಾನೆ. ಬ್ರಾಹ್ಮಣನು ಶೂದ್ರ ತಪಸ್ವಿಗೆ ಸಾಷ್ಟಾಂಗ ಪ್ರಣಾಮ ಮಾಡುತ್ತಾನೆ. ಸತ್ತಿದ್ದ ಬಾಲಕನು ಏಳುತ್ತಾನೆ; ರಾಮನೂ ಬ್ರಾಹ್ಮಣನೂ ಖುಷಿಯಿಂದ ಆಶೀರ್ವಾದ ಪಡೆದು ಬಾಲಕನೊಡನೆ ಹಿಂದಿರುಗುತ್ತಾರೆ.

ಉತ್ತರಕಾಂಡದ ಕಥೆಯಲ್ಲಿ ತಪಸ್ಸುಮಾಡುವ ಶೂದ್ರ ಅಪರಾಧಿ. ವರ್ಣಧರ್ಮಕ್ಕೆ ಇಂತಹ ವ್ಯಾಘಾತ ನಡೆಯುವಂತೆ ಬಿಟ್ಟದ್ದಕ್ಕಾಗಿ ರಾಜನಿಗೆ ಪಾತಕ ಅಡಸುತ್ತದೆ. ಅದರ ಫಲವಾಗಿ ವೃದ್ಧನೊಬ್ಬನು ಬಾಲನ ಪ್ರೇತಕಾರ್ಯ ಮಾಡುವ ಪ್ರಸಂಗವೊದಗುತ್ತದೆ. ರಾಜನ ಗುರುಜನ ಈ ಸಂದರ್ಭವನ್ನು ಅವನಿಗೆ ವಿವರಿಸಿದ್ದರ ಮೇಲೆ ಅವನು ಹೋಗಿ ಶಂಬೂಕನನ್ನು 'ನಿನ್ನ ಜಾತಿ ಯಾವುದು' ಎಂದು ವಿಚಾರಿಸಿ ಅವನು ಶೂದ್ರ ಎಂದೊಡನೆ ಅವನ ತಲೆಯನ್ನು ಕಡಿದು ಬಿಡುತ್ತಾನೆ. ಅಪರಾಧಿಯ ಶಿರಶ್ಛೇದ ಆದೊಡನೆ ಬ್ರಾಹ್ಮಣ ಬಾಲಕನು ಪುನರ್ಜೀವಿಯಾಗಿ ಏಳುತ್ತಾನೆ.

ಅಪರಾಧ ಯಾವುದು ಎಂಬ ವಿಷಯದಲ್ಲಿ ಉತ್ತರಕಾಂಡದ ಭಾವನೆಗೂ ಈ ದೃಶ್ಯದ ಭಾವನೆಗೂ ಬಹಳ ಅಂತರವಿದೆ ಎನ್ನುವುದನ್ನು ಹೇಳಬೇಕಾಗಿಲ್ಲ. ಉತ್ತರಕಾಂಡದ ಕತೆಯಲ್ಲಿ ಪ್ರಕಟವಾಗುವ ಮನೋಧರ್ಮ ವರ್ಣವ್ಯವಸ್ಥೆಯನ್ನು ಕುರಿತು ಒಂದು ತೀವ್ರಶವಾದ ಶ್ರದ್ಧೆ. ಈ ಕಾವ್ಯದಲ್ಲಿ ಅದನ್ನು ಜಾತಿಗರ್ವಾಂಧತೆ ಎಂದು ವರ್ಣಿಸಿರುವುದು ಕಾಣುತ್ತದೆ. ಉತ್ತರಕಾಂಡದ ಗ್ರಂಥವನ್ನು ರಚಿಸುವ ಕಾಲಕ್ಕೆ ಇದು ಜಾತಿಗರ್ವಾಂಧತೆ ಆಗಿತ್ತೋ ಇಲ್ಲವೋ, ಪ್ರಾಯಶಃ ಈಗ ಹೇಳುವುದು ಸಾಧ್ಯವಲ್ಲ. ಇಂತಹ ಸಂದರ್ಭದಲ್ಲೆಲ್ಲಾ ಮೂಲದ ಭಾವಕ್ಕೆ ಒಂದೇ ಮುಖ ಇರುವುದಿಲ್ಲ; ಏನಿಲ್ಲವೆಂದರೂ ಎರಡು ಮುಖ ಇರುತ್ತದೆ. ಒಂದು ಮುಖ ಒಳ್ಳೆಯ ಅರ್ಥದ್ದು; ಇನ್ನೊಂದು ಕೆಟ್ಟ ಅರ್ಥದ್ದು ಸುವ್ಯವಸ್ಥಿತವಾದ ಸಮಾಜದಲ್ಲಿ ಒಂದೊಂದು ವಿಭಾಗಕ್ಕೆ ಒಂದೊಂದು ಕೆಲಸ ಇರುತ್ತದೆ. ಆಯಾ ವಿಭಾಗದವರು ಆಯಾ ಕೆಲಸವನ್ನು ಮಾಡತಕ್ಕದ್ದು ಎಂದು ಅಂತಹ ಸಮಾಜ ನಿರ್ಣಯಿಸಿಕೊಳ್ಳಬಹುದು. ಆ ಸಮಾಜದ ಒಬ್ಬ ವ್ಯಕ್ತಿ ಆ ನಿರ್ಣಯವನ್ನು ಮೀರಿದರೆ ವ್ಯವಸ್ಥೆಯ ದೃಷ್ಟಿಯಿಂದ ಅಪರಾಧಿಯಾಗುತ್ತಾನೆ. ಆ ತಳಹದಿಯ ಮೇಲೆ ಆ ನಿಷ್ಕರ್ಷೆ ಸರಿಯಾದದ್ದು. ಯಾವುದಕ್ಕೂ ಅಧಿಕಾರಬೇಕು ಎನ್ನುವುದು ಇಂತಹ ವ್ಯವಸ್ಥೆಯ ಪಾಯದ ಸೂತ್ರ. ಇದು ವ್ಯವಸ್ಥೆ ಒಳ್ಳೆಯವಾಗಿದ್ದು ಸಮಾಜದ ಒಟ್ಟು ಕ್ಷೇಮದ ದೃಷ್ಟಿಯಿಂದ ನಡೆಯುವಾಗ, ಇಂತಹ ಸಂದರ್ಭದಲ್ಲಿ 'ಶೂದ್ರನಿಗೆ ಏಕೆ ತಪಸ್ಸು?' ಎಂದು ಬ್ರಾಹ್ಮಣ ಮಾತ್ರ ಹೇಳುವುದಿಲ್ಲ; ನನಗೇಕೆ ತಪಸ್ಸು ಎಂದು

ಶೂದ್ರನೂ ಹೇಳುತ್ತಾನೆ. ಅಥವಾ ತನಗೊಂದು ತಪಸ್ಸು ಇದ್ದರೆ ಅದು ತನ್ನ ಸೇವಾವೃತ್ತಿಯಲ್ಲಿದೆ ಎಂದು ಮನಗಂಡು ಅವನು ತಲೆಯೆತ್ತಿಕೊಂಡು ನಡೆಯುತ್ತಾನೆ. ಧ್ಯಾನದಲ್ಲಿ ಕುಳಿತು ಬ್ರಾಹ್ಮಣ ಹೆಚ್ಚಿನವನಾಗುವುದಿಲ್ಲ; ಸೇವೆಯಲ್ಲಿ ದುಡಿದು ಶೂದ್ರ ಕಡಮೆಯಾಗುವುದಿಲ್ಲ. ಅವರವರ ಕರ್ಮದಲ್ಲಿ ನಿರತರಾಗಿ ಇಬ್ಬರೂ ಸಮಾನವಾಗಿ ಧನ್ಯರಾಗುತ್ತಾರೆ.

ಉತ್ತರಕಾಂಡದ ಮನೋಧರ್ಮ ನಿಜವಾಗಿಯೂ ಉದಾತ್ತವಾಗಿದ್ದಿದ್ದರೆ ಈ ನೆಲೆಯದಾಗಿರಬೇಕು. ಅದನ್ನು ಓದುವವರಿಗೆ ಇಂತಹ ಉದಾತ್ತಭಾವ ಕಾಣುವುದಿಲ್ಲ. ಬ್ರಾಹ್ಮಣ ಜಾತಿಯನ್ನು ಶ್ರೇಷ್ಠವೆಂದು, ಶೂದ್ರ ಜಾತಿಯನ್ನು ಕಡೆಮೆಯೆಂದು ಕಾಣುವ ಮನೋಧರ್ಮ ಅದರಲ್ಲಿ ಪ್ರಕಟವಾಗುತ್ತದೆ. ಆ ಮನೋಧರ್ಮ ಸಮಾಜದ ಆರೋಗ್ಯಸ್ಥಿತಿಯನ್ನು ಸೂಚಿಸತಕ್ಕದ್ದಲ್ಲ. ರಾಮಾಯಣವನ್ನು ಕುರಿತು ಯೋಚಿಸಿರುವವರಿಗೆಲ್ಲ ಉತ್ತರಕಾಂಡ ವಾಲ್ಮೀಕಿಯ ಅನಂತರ ರಚಿತವಾಗಿ ವಾಲ್ಮೀಕಿಯ ಕಾವ್ಯಕ್ಕೆ ಅಂಟಿಸಿದ ಒಂದು ಕೃತಕಭಾಗವೆಂದು ಸ್ಪಷ್ಟವಾಗಿ ಕಾಣುತ್ತದೆ. ಉತ್ತರಕಾಂಡದ ರಾಮ ವಾಲ್ಮೀಕಿಯ ರಾಮನಲ್ಲ. ಆ ಕಾಂಡದ ಧರ್ಮದೃಷ್ಟಿ ರಾಮಚಂದ್ರನ ಧರ್ಮದೃಷ್ಟಿಯಲ್ಲ, ಇತ್ತೀಚಿನ ಕಾಲದ ಯಾರೋ ಬುದ್ಧಿವಂತರು ಸಮಾಜವನ್ನು ಕುರಿತ ತಮ್ಮ ಭಾವನಗೆ ಹಿರಿಯ ಹೆಸರಿನ ಒಂದು ಪ್ರತಿಷ್ಠೆಯನ್ನು ಒದಗಿಸುವ ಉದ್ದೇಶದಿಂದ ಸೀತಾ ವಿಸರ್ಜನೆ, ಶಂಬೂಕ ವಧೆ, ಇತ್ಯಾದಿ ಪ್ರಸಂಗಗಳನ್ನು ರಾಮನಿಗೆ ಆರೋಪಿಸಿ ಈ ಗ್ರಂಥವನ್ನು ಮಾಡಿದರು. ಅವರ ಕಾಲಕ್ಕೇ ಆ ಕಲ್ಪನೆ ಸಮೀಚೀನವಾಗಿತ್ತೋ ಇಲ್ಲವೋ; ಈಚೆಗಂತೂ ಅದರ ವಿಷಯದಲ್ಲಿ ಅತೃಪ್ತಿ ಬೆಳೆಯುತ್ತ ಬಂದಿದೆ. ಈ ಸಣ್ಣ ದೃಶ್ಯದ ಮುನ್ನುಡಿಯಲ್ಲಿ ಶ್ರೀಮಾನ್ ಪುಟ್ಟಪ್ಪನವರು ಹೇಳಿರುವಂತೆ ಉತ್ತರಕಾಂಡದ ಜಾತಿಕಲ್ಪನೆ ಭವಭೂತಿಗೆ ಒಪ್ಪಿಗೆಯಾಗಲಿಲ್ಲ. ಜಾತಿ ಮಾತ್ರದಿಂದ ಬ್ರಾಹ್ಮಣ್ಯ ಲಭಿಸಲಾರದೆಂದು ಧರ್ಮಗ್ರಂಥಗಳು ಹೇಳುತ್ತ ಬಂದಿವೆ. ಸಮಾಜ ದಿನದಿನವೂ ಕಾಣುತ್ತ ಬಂದಿದೆ. ಶೂದ್ರನಾಗಿ ಹುಟ್ಟಿದ ಮಾತ್ರದಿಂದ ಶಂಬೂಕನು ತಪಸ್ಸು ಮಾಡಬಾರದಾಗಿತ್ತು ಎನ್ನುವ ಮಾತು ಈಗ ನಮಗೆ ಯಾರಿಗೂ ಒಪ್ಪಿಗೆ ಇಲ್ಲ. ಅವನು ತಪ್ಪಸ್ಸು ಮಾಡಿದ್ದರಿಂದ ಒಬ್ಬ ಬ್ರಾಹ್ಮಣ ಬಾಲಕನು ತೀರಿಕೊಂಡನೆನ್ನುವುದು ತೀರ ಅಪೋಹದ ಮಾತು. ಅದಕ್ಕಾಗಿ ರಾಜನು ತನ್ನ ಕೈಯಿಂದಲೇ ತಪಸ್ವಿಯ ತಲೆಯನ್ನು ಕಡೆದದ್ದೆನ್ನುವುದು ವಿಕಾರವಾದ ಬುದ್ಧಿಯ ಕಲ್ಪನೆ. ಆ ತಲೆ ಕಡೆದು ಬಿದ್ದೊಡನೆ ಸತ್ತಿದ ಹುಡುಗ ಜೀವಂತನಾಗಿ ಎದ್ದನೆನ್ನುವುದು ಇದಕ್ಕಿಂತ ಹೆಚ್ಚೇನು ಅಲ್ಲ.

ಉತ್ತರಕಾಂಡದ ಈ ಪ್ರಸಂಗದ ಮನೋಧರ್ಮ ಅಸಾಧು ಎಂದು ಕಂಡ ನಾವು ಏನು ಮಾಡಬೇಕು? ಕೆಲವರಿಗೆ 'ಆ ಪೊಳ್ಳು ಪ್ರಸಂಗವನ್ನು ಬಿಟ್ಟುಬಿಡೋಣ' ಎಂದು ತೋರಬಹುದು. ಪೊಳ್ಳು ಪ್ರಸಂಗವನ್ನು ಬಿಟ್ಟರು ಅದರ ಬುಡದ ಮನೋಧರ್ಮ ಜನತೆಯಲ್ಲಿ ಇರಬಹುದು. ಅದನ್ನು ತಿದ್ದುವುದು ಈಗಲು ಅವಶ್ಯಕ, ಆದುದ್ದರಿಂದ ಅದರ ಸಂಗತಿಗಳನ್ನು ಪರಿಷ್ಕರಿಸಿ ಇಂದೂ ನಾವು ಧರ್ಮವೆಂದು ಗ್ರಹಿಸಿರುವುದನ್ನು ರೂಪಿಸಬೇಕು ಎಂದು ಇನ್ನೂ ಕೆಲವರಿಗೆ ತೋರಬಹುದು. ಇಂತಹ ಅಭಿಪ್ರಾಯದ ಕವಿ ಈ ಉದ್ದೇಶದಿಂದ ಈ ಕೃತಿಯನ್ನು ರಚಿಸಿದ್ದಾರೆ. ಶಂಬೂಕನು ಮಹಿಮಾವಂತ ತಪಸ್ವಿ ಅಹುದಾದರೆ ಅವನಿಗೆ ಬ್ರಾಹ್ಮಣನೂ ನಮಿಸಬೇಕು; ರಾಜನೂ ನಮಿಸಬೇಕು. ತಪಸ್ವಿ ತನ್ನ ತಪಸಿನ ಪ್ರಭಾವದಿಂದ ಇವರಿಗೆ ಆಶೀರ್ವಾದ ಮಾಡಲು ಶಕ್ತಿ ಉಳ್ಳವನು ಎಂಬ ಮಾತೂ ಇಂದು ಬಲ್ಲವರ ಮಾತಾಗಿದೆ. ಈ ಭಾವ ಸಮಾಜದ ಹಿತೈಷಿಗಳಿಗೆಲ್ಲ ಸಮ್ಮತವಾಗಬೇಕು. ಆದರೆ ಪೂಜ್ಯನಿಗೆ ನಮಸ್ಕಾರ ಮಾಡದೆ ಇದ್ದವನಿಗೆ ಸಾವು ಶಿಕ್ಷೆ ಎನ್ನುವುದು ಹಿಂದಣ ಕ್ರೌರ್ಯಕ್ಕೆ ಪ್ರತಿಯಾದ ಇನ್ನೊಂದು ಕ್ರೌರ್ಯವಾಗುತ್ತದೆ. ಜೊತೆಗೆ ತಂದೆಯ ಮಾತಿನಂತೆ ನಡೆದ ಎಳೆಯನು ಹೀಗೆ ಸಾಯುವುದು ಅಪ್ಪ ದೋರೆಗಾಯಿ ತಿಂದರೆ ಮಗನಿಗೆ ಹೊಟ್ಟೆನೋವು ಎಂಬ ನೀತಿಯಾಗುತ್ತದೆ. ಈಗ ನಮಗೆ ಬೇಕಾಗಿರುವುದು ಅಂದು ಒಂದು ಜಾತಿಯ ಹೆಸರಿನಲ್ಲಾದ ತಪ್ಪಿಗೆ ಇಂದು ಇನ್ನೊಂದು ಜಾತಿಯ ಹೆಸರಿನಲ್ಲಿ ಆಗುವ ಬದಲ ತಪ್ಪಲ್ಲ. ಆ ತಪ್ಪನ್ನು ತಿದ್ದಿ ಔದಾರ್ಯ, ಅಲ್ಲದೆ, ಹೊಸ ತಪ್ಪು ಶಿಕ್ಷೆಯನ್ನು ಪ್ರತಿಪಾದಿಸುವುದರಲ್ಲಿ ಕವಿ ಬ್ರಾಹ್ಮಣನನ್ನು ಅನವಶ್ಯಕವಾಗಿ ಅವಿವೇಕಿಯನ್ನಾಗಿ ಮಾಡಿದ್ದಾರೆ. ಹಾಗೆಯೇ ರಾಮಚಂದ್ರನನ್ನು ಈ ಬ್ರಾಹ್ಮಣನೊಂದಿಗೆ ವ್ಯಂಗಮಾಡುವ, ಶೂದ್ರ ತಪಸ್ವಿಗೆ ಯಾವುದೋ ವ್ಯಾಜ್ಯದಿಂದ ಕೈ ಮುಗಿಯವ, ಮಿತ್ರನಂತೆ ನಟಿಸುತ್ತ ಬ್ರಾಹ್ಮಣನ ಕುತ್ತಿಗೆಗೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವ, ಒಬ್ಬ ಅಧೀರ ಅನುದಾತ್ತ ನಾಯಕನಾಗಿ ಮಾಡಿದ್ದಾರೆ. ಇದರ ಹೊಣೆಯಲ್ಲ ಕವಿಯದಲ್ಲ. ಇದರ ಬಹುಭಾಗ ಮೂಲದ ಕಥೆಯಲ್ಲಿ ಅನಿವಾರ್ಯವಾದದ್ದು. ತನ್ನ ಮಗ ಹೋದ ತಪ್ಪನ್ನು ರಾಜನಲ್ಲಿ ಆರೋಪಿಸುವ ಬ್ರಾಹ್ಮಣ ಎಷ್ಟು ತೊಳೆದರೂ ಕಪ್ಪಾಗಿಯೇ ನಿಲ್ಲಬೇಕು. ಇಂತಹ ತಪ್ಪು ತಿಳುವಳಿಕೆ ರಾಜ್ಯದಲ್ಲಿ ವ್ಯರಹಾರದಲ್ಲಿರಬೇಕಾದರೆ ಅದನ್ನು ತಿದ್ದುವ ಯತ್ನ ಮಾಡದೆ ತಾನು ಕಂಡ ಸತ್ಯವನ್ನು ತನ್ನ ನಡತೆಯಲ್ಲಿ ಮಾತ್ರ ಬಳಸುತ್ತಿರುವ ರಾಜ ಅಧಿರನೂ ಅನುದಾತ್ತನೂ ಆಗದೆ ವಿಧಿಯಿಲ್ಲ. ಈ ಕಾರಣದಿಂದ ಈ ದೃಶ್ಯದಲ್ಲಿಯ ಕಲ್ಪನೆ ಒಟ್ಟಿನಲ್ಲಿ ಓದುವವರ ಮನಸ್ಸಿನಲ್ಲಿ ಅತೃಪ್ತಿಯನ್ನು ಉಂಟುಮಾಡುತ್ತದೆ. ವಕ್ರದೃಷ್ಟಿಯ ಹಿಂದಿನ ಕಥೆಯನ್ನು ತಿದ್ದುವೆಂದು ಹೋಗುವುದು ಬೇರೆಯವರು ಹಾಕಿದ ನೆಲಗಟ್ಟಿನ ಮೇಲೆ ನಮ್ಮ ಮನಸ್ಸಿಗೆ ಒಪ್ಪುವ ಭವನವನ್ನು ಕಟ್ಟುವೆವೆನ್ನುವ ಪ್ರಯತ್ನದಂತೆ ಇಂದು ನಾವು ಏನು ಮಾಡಿದರೂ ಹಿಂದಿನ ಗೀರು ಇದ್ದೇ ಇರುತ್ತದೆ. ಹೊಸಕಾಲದ ಧರ್ಮವನ್ನು ಹೇಳುವುದಕ್ಕೆ ಹೊಸ ಕಥೆಯನ್ನೇ ಹೇಳುವುದು ಕ್ಷೇಮ ಎಂದು ನಾನು ಶ್ರೀ ಪುಟ್ಟಪ್ಪನವರಿಗೆ ಸೂಚಿಸುತ್ತೇನೆ.

ದೃಶ್ಯದ ಗತಿ ಒಟ್ಟಿನಲ್ಲಿ ಚೆನ್ನಾಗಿದೆ. ಭಾಷೆಯಲ್ಲಿ ಅಲ್ಲಲ್ಲಿ ಅನವಶ್ಯಕವಾಗಿ ಎಂಬಂತೆ ಸಂಸ್ಕೃತ ಶಬ್ದಗಳು ಕಾಣುತ್ತವೆ. ಪಕ್ಕದಲ್ಲಿಯೇ ಇರುವ ಅಂಥದೇ ಸಂದರ್ಭದಲ್ಲಿ ಬಳಸಿರುವ ತಿಳಿಗನ್ನಡ ಇಂತಹ ಸಂಸ್ಕೃತವನ್ನು ಎತ್ತಿ ತೋರಿಸುವಂತಿದೆ. ದೃಶ್ಯಗಳ ಆರಂಭದ ನಿರೂಪಣವಾಕ್ಯಗಳಲ್ಲಿ ಪದ ಪ್ರಯೋಗ ಸ್ವಲ್ಪ ಹಳೆಯದೆ ಸ್ವಲ್ಪ ಹೊಸದಾಗಿ ಕಾಣುತ್ತದೆ. ಪದ್ಯ ಆರಂಭದಲ್ಲಿ ಇಪ್ಪತ್ತು ಮಾತ್ರೆಯ ಬಿಡಿವೃತ್ತದಂತೆ ಹೊರಟು ಬರಬರುತ್ತ ಬೇರೆ ಬೇರೆ ಉದ್ದದ ಸಣ್ಣ ದೊಡ್ಡ ಪಂಕ್ತಿಯಾಗಿದೆ. ಎರಡು ಮೂರು ಕಡೆ ಪಂಕ್ತಿಯಲ್ಲಿ ಛಂದೋನಿಯಮ ಇರುವಂತೆ ಕಾಣುವುದಿಲ್ಲ. ಪಂಚವಟಿಯೋಳ್ ನಿಂದವನ್, ಗೋದಾವರಿಯ ಮಿಂದವನ್, ತಪಂ ಪೂಜ್ಯ ಕರ್ಮವರ್ತ್ತಿ ದ್ವಿಜೇಂದ್ರ, ತಪಕ್ಕಣೆಯುಂಟೆ ರಾಘವೇಂದ್ರ, ದಳ್ಳುರಿಗೆ ದಾಕ್ಷಿಣ್ಯವೆ ಎಂಬ ಕಡೆಗಳಲ್ಲಿ ಶಬ್ದ ಅಥವಾ ರಸ ಅಸುಷ್ಮು ಆಗುತ್ತದೆ.

ಈ ದೃಶ್ಯ ಇರುವುದೆಲ್ಲ ಒಟ್ಟು ಇಪ್ಪತ್ತನಾಲ್ಕು ಪುಟ, ಇಷ್ಟು ಸಣ್ಣ ದೃಶ್ಯಕ್ಕೆ ಈ ಅವಲೋಕನ ಸ್ವಲ್ಪ ಉದ್ದವಾಯಿತೆಂದು ಕಾಣಬಹುದು. ನಿಜವಾಗಿ ಇದು ಬರಿಯ ಅವಲೋಕನ ಮಾತ್ರ ಅಲ್ಲ. ಇಂದು ನಮ್ಮ ಸಮಾಜದಲ್ಲಿ ಅನೇಕ ಜಟಿಲ ಪ್ರಶ್ನೆಗಳು ಎದ್ದು ನಿಂತಿವೆ. ಜಾತಿ ಜಾತಿಗಳ ಅಹಂಭಾವದ ಪ್ರಶ್ನೆಗಳು ಇವುಗಳಲ್ಲಿ ಒಂದು ತಮ್ಮ ಅನೇಕ ಕೃತಿಗಳಿಂದ ದೇಶಕ್ಕೂ ಭಾಷೆಗೂ ಸೇವೆ ಮಾಡಿರುವ ಶ್ರೀಮಾನ್ ಪುಟ್ಟಪ್ಪನವರು ಈ ಪ್ರಶ್ನೆಯನ್ನು ಹರಿಸುವುದರಲ್ಲಿ ತಮ್ಮ ಸಹಾಯವನ್ನು ಈ ಸಣ್ಣ ಕೃತಿಯ ಮೂಲಕ ನಮ್ಮ ಸಮಾಜದ ಮುಂದೆ ಇರಿಸಿದ್ದಾರೆ. ಕೃತಿ ಕಿರಿದಾದರೂ ವಿಷಯ ಹಿರಿದು, ಅದನ್ನು ಎತ್ತಿರುವವರು ಗಣ್ಯರು, ದಕ್ಷರು ಇಂತಹ ಸಂದರ್ಭದಲ್ಲಿ ಅಭಿಪ್ರಾಯದ ಚರ್ಚೆ ಎಷ್ಟೇ ಸಂಗ್ರಹವಾಗಿ ಆದರೂ ಇಷ್ಟು ಉದ್ದ ಆಗದೆ ವಿಧಿಯಲ್ಲ. ಇದಕ್ಕಿಂತ ಸಂಕ್ಷೇಪವಾಗಿ ಹೇಳಿದರೆ ವಿಮರ್ಶೆಯ ಉದ್ದೇಶ ಓದುಗರಿಗೆ ಸ್ಪಷ್ಟವಾಗದೆ ನಿಲ್ಲುವ ಸಂಭವವಿದೆ. ತಮ್ಮ ಕೃತಿಯನ್ನು ಸಮಾಧಾನಚಿತ್ತದಿಂದ ಓದಬೇಕೆಂದು ಕವಿ ಮುನ್ನುಡಿಯಲ್ಲಿ ಬೇಡಿದ್ದಾರೆ. ಇಂತಹ ವಿಷಯವನ್ನು ಚರ್ಚೆ ಮಾಡುವ ವಿಮರ್ಶೆಗೂ ಓದುವವರು ಇದೇ ಸಮಾಧಾನವನ್ನು ತರಬೇಕು. ಜಾತಿ ಕುಲದ ಮಾತು ಬಂದಾಗ ಮನಸ್ಸನ್ನು ಉದ್ರೇಕಕ್ಕೆ ಬಿಡದೆ ಸಮಾಧಾನದಿಂದ ಚರ್ಚಿಸುವ ಬಲುಮೆ ಸಮಾಜದ ಶ್ರೆಯಸ್ಸಿನ ಮುಖ್ಯ ಸಾಧನೆಗಳಲ್ಲಿ ಒಂದು. (ಮಾಸ್ತಿ - ಜೀವನ ಜುಲೈ ೧೯೪೪)

ಇದಕ್ಕೆ ಕೃತಿಕಾರರಾದ ಶ್ರೀ ಕುವೆಂಪುರವರ ಪ್ರತಿಕ್ರಿಯೆ.

ಶೂದ್ರ ತಪಸ್ವಿ - ಮಾರ್ನುಡಿ

ಮೂರು ವರ್ಷಗಳ ಹಿಂದೆ ಈ ದೃಶ್ಯಕೃತಿ ಪ್ರಕಟವಾದಾಗ ವಾಚಕವರ್ಗದ ಹೃದಯಾಕಾಶದಲ್ಲಿ ಗಾಳಿಯೆದ್ದು ಮೋಡ ಕವಿದು ಗುಡುಗು ಮಿಂಚಾಡಿದಾ ಕ್ಷೋಭೆ ಅಂದಿನ ಪತ್ರಿಕಾ ಸರೋವರಗಳಲ್ಲಿ ಪ್ರತಿಫಲಿತವಾಗಿತ್ತು. ಗಣ್ಯರು ಗಣ್ಯರಲ್ಲದವರು ಅಲ್ಪಗಣ್ಯರು ಎಲ್ಲರೂ ತಮತಮಗೆ ತೋಚಿದುದನ್ನು ತೋಚಿದಂತೆ ಅವಸರವಸರವಾಗಿ ಉದ್ರೇಕಪೂರ್ಣವಾಗಿ ಬರೆದರು. ಕೆಲವರ ಬರವಣಿಗೆ ಅಸೂಯಾಸದನನ್ ಸುಖದೂರನ್. ಅವನ ಮಾತೇಕಿದರೊಳ್? ಎಂಬ ಹರಿಹರನ ಕಾವ್ಯೋಕ್ತಿಯನ್ನು ಮನಸ್ಸಿಗೆ ತರುವಂತಿದ್ದರೆ, ಮತ್ತೆ ಕೆಲವರದು

ಕ್ಷುದ್ರಂಗೆ ಸಕಲ ಸುಜನೋ
ಪದ್ರವರೂಪಂಗೆ ಪರರ ಕಾವ್ಯಾರ್ಥಮುಮಂ
ಛಿದ್ರಿಸುವಂಗತಿ ಶಬ್ದದ
ರಿದ್ರಂಗಕ್ಕುಮ ನವೀನ ಕಾವ್ಯಾರಂಭಂ
ಒಳಗರೆಯದೆ ಸತ್ಕಾವ್ಯದ
ಕಳೆಯರೆಯದೆ ಲಘುತರತ್ವದಿಂ ನಾಲ್ಕೆರಡಾ
ಯ್ಯುಳಿ ಮಾತನಾಡಿ ನೆರೆ ಹೆ
ಕ್ಕಳ ಮಿಕ್ಕಿದೊಡೊಲ್ವರೇ ಕವೀಂದ್ರಾಭರಣರ್.

ಎಂಬ ಹಳಸಲನ್ನೂ ಹೊಸತು ಮಾಡಿಸುವಂತಿತ್ತು.

ಆ ಉದ್ರೇಕಕ್ಕೆ ಮೂಲಕಾರಣ ಈ ಕೃತಿ ಜಾತಿಮಾತ್ಸರ್ಯದಿಂದ ಪ್ರೇರಿತವಾದ ಮೂದಲಿಕೆ ಎಂಬ ಅಜ್ಞಭಾವನೆ. ಆ ಭಾವನೆ ತೆಗಳಿಕೆಗೆ ಮಾತ್ರವಲ್ಲದೆ ಹೊಗಳಿಕೆಗೂ ಕಾರಣವಾಯಿತೆಂಬುದನ್ನು ನೆನೆದರೆ ವಿಷಾದವಾಗುತ್ತದೆ. ಅಂತಹ ಪೂರ್ವಗ್ರಹ ಮತ್ತು ಪಕ್ಷಪಾತಗಳ ದೆಸೆಯಿಂದ ಕೃತಿಕಾರನ ಮುಖ್ಯಾಶಯ, ರಸಪ್ರಯೋಜನ ಶೀಲವಾದ ಸತ್ಯಬೋಧನ, ತತ್ಕಾಲಕ್ಕಾದರೂ ವ್ಯರ್ಥವಾಯಿತೆಂದು ತೋರುತ್ತದೆ. ಆ ಅಪಭಾವನೆ ತಾತ್ಕಾಲಿಕ ಎಂಬ ನಂಬುಗೆಯಿಲ್ಲದಿದ್ದರೆ ಈ ಮಾರ್ನುಡಿ ಹೊರಹೊಮ್ಮುತ್ತಿರಲಿಲ್ಲ.

ಎಲ್ಲರ ವಿಮರ್ಶೆಗಳನ್ನಾಗಲಿ ವಿಮರ್ಶೆಯ ಎಲ್ಲ ಮುಖಗಳನ್ನಾಗಲಿ ಗಮನಿಸಿ ಸಮಾಧಾನ ಹೇಳುವುದು ಪ್ರಕೃತ

ಲೇಖನದ ಉದ್ದೇಶವಲ್ಲ. ಒಂದು ವಿಮರ್ಶೆಯನ್ನು ಮಾತ್ರ ಮಾದರಿಯಾಗಿಟ್ಟುಕೊಂಡು ಅಲ್ಲಿ ಬರುವ ಪ್ರಾತಿನಿಧಿಕವಾದ ಟೀಕೆಗಳಿಗೆ ಉಚಿತವೆಂದು ತೋರಬಹುದಾದ ಉತ್ತರಗಳನ್ನು ಸಂಗ್ರಹವಾಗಿ ಸೂಚಿಸಿದರೆ ಸಾಕೆಂದು ತೋರುತ್ತದೆ.

೧೯೪೪ರ ಜುಲೈ ತಿಂಗಳ ಜೀವನ ಮಾಸಪತ್ರಿಕೆಯಲ್ಲಿ ಕಾವ್ಯಾಲೋಕನ ಎಂಬ ಹೆಸರಿನಲ್ಲಿ ಮಾ.ವೆಂ.ಅ. ರವರು ತಮ್ಮ ಅಭಿಪ್ರಾಯ ಸಮೂಹ ಮಾತ್ರ ಎನ್ನಬಹುದಾದ ವಿಮರ್ಶನ ಲೇಖನವನ್ನು ಬರೆದಿದ್ದಾರೆ. ಏತಕ್ಕೆ ಅಭಿಪ್ರಾಯ ಸಮೂಹ ಎನ್ನುವುದು ಎಂದರೆ ಅಲ್ಲಿಯ ಟೀಕೆಗಳಿಗೆ ಸಾಧಾರವಾದ ಕಾರಣಗಳನ್ನು ಹೇಳಿ ನಿದರ್ಶನಗಳನ್ನು ಕೊಡಲು, ಸ್ಥಳಾಭಾವದಿಂದ ಇರಬಹುದು, ಸಾಧ್ಯವಾಗಿಲ್ಲ. ಉದಾಹರಣೆಗಾಗಿ ಈ ಮಾತುಗಳನ್ನು ತೆಗೆದುಕೊಳ್ಳಬಹುದು.

"ಭೈರವ" ಮೃತ್ಯುಗಳ ಸಂಭಾಷಣೆ ಶಂಭೂಕನು ಎಷ್ಟು ಮಹಿಮಾವಂತನೆಂಬುದನ್ನು ತೋರಿಸುತ್ತದೆ. ಆದರೆ ಮಾತು ಅಲ್ಲಲ್ಲಿ ಇಂತಹ ದಿವ್ಯತತ್ವಗಳ ಹಿರಿತನಕ್ಕೆ ಅವಶ್ಯಕವಾದ ಗಾಂಭೀರ್ಯದಿಂದ ತಪ್ಪುತ್ತದೆ."

ಈ ಉಕ್ತಿ ಚರ್ಚಾಸ್ಪದವಾಗುತ್ತದೆ. ಸಾವಿನಂತಹ ದಿವ್ಯತತ್ವವನ್ನು "ಯಮ" ಎಂದು ಕರೆದಾಗ ಸಂವಾದದ ಮಟ್ಟ ಎಂತಿರಬೇಕು? "ಮತ್ಯು" ಎಂದು ಕರೆದಾಗ ಹೇಗಿರಬೇಕು? ಅದರಲ್ಲಿಯೂ ದುರ್ಮೃತ್ಯುವಾಗಿರುವಾಗ! ಅಲ್ಲಿ ಪುಲ್ಲಿಂಗದ ಔಚಿತ್ಯವೇನು? ಇಲ್ಲಿ ಸ್ತ್ರೀಲಿಂಗದ ಔಚಿತ್ಯವೇನು? "ಯಮನಸೋಲು" ನಾಟಕದಲ್ಲಿ ಯಮನ ಪಾತ್ರವನ್ನು ಜಗದ ಧರ್ಮಾಧಿಕಾರಿಯೆಂದೂ ಋತದ ಕಿಂಕರನೆಂದೂ ಚಿತ್ರಿಸಿ, ಅದಕ್ಕುಚಿತವಾದ ನಡೆನುಡಿಗಳನ್ನು ಅಳವಡಿಸಿದ ಕವಿಪ್ರತಿಭೆಗೆ "ದುರ್ಮೃತ್ಯು"ವನ್ನು ಯಾವ ಪ್ರತಿಮೆಯಿಂದ ಚಿತ್ರಿಸಬೇಕೆಂಬ ವಿಚಾರದಲ್ಲಿ ವಾಗ್ದೇವಿ ಕೃಪಣೆಯಾಗಿಲ್ಲವೆಂದು ನನಗೆ ತೋರುತ್ತದೆ. ಆದ ಕಾರಣ ವಾಚಕರ ಸ್ವೀಯ ಆಲಸ್ಯದಿಂದಲೋ ಪ್ರಜ್ಞಾ ಪರಿಮಿತಿಯಿದಲೋ ಸಂಭವಿಸುವ ಅನಿವಾರ್ಯಕ್ಕೆ "ಅಭಿಪ್ರಾಯ ಮಾತ್ರ" ವೆಂದು ಹೆಸರಿಡುವುದೂ ಅನಿವಾರ್ಯವಾಗುತ್ತದೆ.

ಹಾಗೆಯೆ ಇನ್ನೊಂದು ಕಡೆ ಹೀಗಿದೆ ಅಭಿಪ್ರಾಯ : "ಅಪರಾಧ ಯಾವುದು ಎಂಬ ವಿಷಯದಲ್ಲಿ ಉತ್ತರಕಾಂಡದ ಭಾವನೆಗೂ ಈ ದೃಶ್ಯದ ಭಾವನೆಗೂ ಬಹಳ ಅಂತರವಿದೆ ಎಂಬುದನ್ನು ಹೇಳಬೇಕಾಗಿಲ್ಲ. ಉತ್ತರಕಾಂಡದ ಕಥೆಯಲ್ಲಿ ಪ್ರಕಟವಾಗುವ ಮನೋಧರ್ಮ ವರ್ಣವ್ಯವಸ್ಥೆಯನ್ನು ಕುರಿತ ಒಂದು ತೀವ್ರವಾದ ಶ್ರದ್ಧೆ. ಈ ಕಾವ್ಯದಲ್ಲಿ ಅದನ್ನು ಜಾತಿಗರ್ವಾಂಧತೆ ಎಂದು ವರ್ಣಿಸಿರುವುದು ಕಾಣುತ್ತದೆ."

ಈ ಅಭಿಪ್ರಾಯಕ್ಕೆ ಪ್ರತ್ಯಭಿಪ್ರಾಯ ಇನ್ನೂ ಹೆಚ್ಚು ಸಕಾರಣವಾಗಿ ಹೀಗೆನ್ನಬಹುದು : "ಅವಿವೇಕ 'ತೀವ್ರವಾದ ಶ್ರದ್ಧೆ' ಯಾದರೂ ಅವಿವೇಕವಾಗಿಯೆ ನಿಲ್ಲುತ್ತದೆ. ಆದ್ದರಿಂದ ತನ್ನ ಶ್ರದ್ಧಾಂಶದಲ್ಲಿ ಅಲ್ಲದಿದ್ದರೂ ಅವಿವೇಕದಲ್ಲಿ ತಿದ್ದು ಪಡೆಯಬೇಕಾದುದೇ ಅತ್ಯಂತ ಅಗತ್ಯ." ಈ ದೃಶ್ಯದಲ್ಲಿ ನಡೆದಿರುವ ಕೆಲಸವೂ ಅದೇ ಶ್ರದ್ಧೆಯ ಖಂಡನೆಯಲ್ಲ, ಅವಿವೇಕದ ತಿದ್ದುಪಡಿ.

ಮುಂದೆ ವಿಮರ್ಶಕರು ಈ ದೃಶ್ಯದ ಕೃತಿಕಾರನ ದೃಷ್ಟಿಯನ್ನೆ ಸಂಪೂರ್ಣವಾಗಿ ಒಪ್ಪಿ ಪ್ರತಿಪಾದಿಸುತ್ತಾ ಹೋಗಿ ಕೊನೆಯಲ್ಲಿ. "ಆದರೆ ಪೂಜ್ಯನಿಗೆ ನಮಸ್ಕಾರ ಮಾಡದಿದ್ದವನಿಗೆ ಸಾವು ಶಿಕ್ಷೆ ಎನ್ನುವುದು ಹಿಂದಣ ಕ್ರೌರ್ಯಕ್ಕೆ ಪ್ರತಿಯಾದ ಇನ್ನೊಂದು ಕ್ರೌರ್ಯವಾಗುತ್ತದೆ. ಜೊತೆಗೆ ತಂದೆಯ ಮಾತಿನಂತೆ ನಡೆದು ಎಳೆಯನು ಹೀಗೆ ಸಾಯುವುದು ಅಪ್ಪ ಸೋರೆಗಾಯಿ ತಿಂದರೆ ಮಗನಿಗೆ ಹೊಟ್ಟೆನೋವು ಎಂಬ ನೀತಿಯಾಗುತ್ತದೆ."

ಈ ಟೀಕೆ ತನಗೆ ತಾನೆ ಸತ್ಯವಾದರೂ ಪ್ರಕೃತ ದೃಶ್ಯಕಾವ್ಯಕ್ಕೆ ಸ್ವಲ್ಪವೂ ಅನ್ವಯವಾಗುವುದಿಲ್ಲ. ಏಕೆಂದರೆ ಇಲ್ಲಿ ಬ್ರಾಹ್ಮಣ ಕುಮಾರ ಸಾಯುವುದಿಲ್ಲ, ಅಲ್ಲಿ ಶಂಬೂಕನು ತೀರಿಕೊಂಡಂತೆ ; ಕೊನೆಯಲ್ಲಿ ಬದುಕುತ್ತಾನೆ. ಶ್ರೀರಾಮಚಂದ್ರನೆ ಆಶ್ವಾಸನೆ ಕೊಟ್ಟಿದ್ದಾನೆ. "ಅಮೃತನಕ್ಕುಂ ನಿನ್ನೀ ಚಿರಂಜೀವಿ" ಎಂದು. ಅವನು ನಿಜವಾಗಿಯೂ ಸತ್ತಿದ್ದರೆ 'ಅಪ್ಪ ಸೋರೆಗಾಯಿ ತಿಂದರೆ ಮಗನಿಗೆ ಹೊಟ್ಟೆನೋವು ಎಂಬ ನೀತಿ' ಒಪ್ಪಾಗುತ್ತಿತ್ತು. ಅಲ್ಲದೆ ಸಾಯುವುದು ಸತ್ತವನಿಗೆ ಶಿಕ್ಷೆಯಾಗುವುದಕ್ಕಿಂತ ಸಮಧಿಕತರವಾಗಿ ಬದುಕಿ ದುಃಖಿಸುವವರಿಗೆ ಶಿಕ್ಷೆಯಾಗುತ್ತದಲ್ಲವೆ ? ಆ ದೃಷ್ಟಿಯಿಂದ ಶಿಕ್ಷೆ ಬ್ರಾಹ್ಮಣನಿಗಲ್ಲದೆ ಅವನ ಮಗನಿಗೆ ಅನ್ವಿತವಾಗುವುದಿಲ್ಲ. ಅವನ ಜೀವನವನ್ನು ಸೆಳೆದ ಮೃತ್ಯು, ಧರ್ಮ ಸ್ಥಾಪನೆಯ ಸಲುವಾಗಿ, ಅಮೃತಕ್ಷೇತ್ರವಾದ ತಪೋವನದಿಂದ ಬಾಲಕನ ಜೀವವನ್ನು ಕೊಂಡೊಯ್ಯುವುದೂ ಇಲ್ಲ. ಇಲ್ಲಿ ವಾಚಕರು ಅಧರ್ಮ ಪರಿಹಾರದೊಡನೆ ಮಲಗಿದ್ದವನು ಏಳುವಂತೆ ಎದ್ದು ಕಣ್ಣುಜ್ಜಿಕೊಂಡು, ಸುತ್ತಲೂ ನೋಡಿ ತನ್ನ ತಂದೆಯನ್ನು ಕರೆಯುವ ಕುಮಾರನ ಮಾತನ್ನು ಗಮನಿಸಬೇಕು: "ಹೂ ಕುಯ್ಯುತಿದ್ದವನ್ ಇಲ್ಲಿಯೆ ಮಲಗಿದನೆ ?-" ಹುಡುಗನಿಗೆ ಆ ಅನುಭವಕ್ಕಿಂತ ಹೆಚ್ಚಿನ ಯಾವ ಶಿಕ್ಷೆಯೂ ವೇದ್ಯವಾಗುವುದಿಲ್ಲ. ಈ ಎಲ್ಲ ಕಾರಣಗಳಿಗಾಗಿ ಪೂರ್ವೋಕ್ತ ವಿಮರ್ಶನೋಕ್ತಿ ಅಪ್ರಕೃತವಾಗುತ್ತದೆ. ಈ ದೃಶ್ಯದ ಉದ್ದೇಶ ಒಟ್ಟಿನಲ್ಲಿ ಶಿಕ್ಷೆಯೂ ಅಲ್ಲ, ಕ್ರೌರ್ಯವೂ ಅಲ್ಲ. "ಈ ಶಾಠ್ಯ ಮೂರ್ಖಂಗೆಂತೊ ಬುದ್ದಿ ಗಲಿಪೆನ್?" ಎಂಬುದೂ ಶ್ರೀರಾಮನ ಆಶಯ.

ಮುಂದಿನ ವಿಮರ್ಶೆಯಂತೂ ಸಂಪೂರ್ಣವಾದ ದೃಷ್ಟಿವೈಪರೀತ್ಯದಿಂದ ಕಲುಷಿತವಾಗಿ ಅನೌದಾರ್ಯಸ್ಪೃಶವಾಗುವಂತಿದೆ: "ಈಗ ನಮಗೆ ಬೇಕಾಗಿರುವುದು, ಅಂದು ಒಂದು ಜಾತಿಯ ಹೆಸರಿನಲ್ಲಾದ ತಪ್ಪಿಗೆ ಇಂದು ಇನ್ನೊಂದು ಜಾತಿಯ

ಹೆಸರಿನಲ್ಲಿ ಬದಲ ತಪ್ಪಲ್ಲ; ಆ ತಪ್ಪನ್ನು ತಿದ್ದಿ ಔದಾರ್ಯ ಅಲ್ಲದೆ, ಹೊಸ ತಪ್ಪು ಶಿಕ್ಷೆಯನ್ನು ಪ್ರತಿಪಾದಿಸುವದರಲ್ಲಿ (ಇಲ್ಲಿ ಅರ್ಥ ಅಸುಷ್ಪುವಾಗಿರುವುದರಿಂದ ಏನಾದರೂ ಅಚ್ಚಿನ ತಪ್ಪಿದ್ದರೂ ಇರಬಹುದು) ಕವಿ ಬ್ರಾಹ್ಮಣನನ್ನು ಅನಾವಶ್ಯಕವಾಗಿ ಅವಿವೇಕಿಯನ್ನಾಗಿ ಮಾಡಿದ್ದಾರೆ. ಹಾಗೆಯೇ ರಾಮಚಂದ್ರನನ್ನು ಈ ಬ್ರಾಹ್ಮಣನೊಂದಿಗೆ ವ್ಯಂಗ್ಯವಾಡುವ, ಶೂದ್ರ ತಪಸ್ವಿಗೆ ಯಾವುದೋ ವ್ಯಾಜದಿಂದ ಕೈಮುಗಿಯುವ, ಮಿತ್ರನಂತೆ ನಟಿಸುತ್ತ ಬ್ರಾಹ್ಮಣನ ಕುತ್ತಿಗೆಗೆ ಬ್ರಹ್ಮಾಸ್ತ್ರವನ್ನು ಪ್ರಯೋಗಿಸುವ ಒಬ್ಬ ಅಧೀರ ಅನುದಾತ್ತ ನಾಯಕನಾಗಿ ಮಾಡಿದ್ದಾರೆ."

ಈ ವಿಮರ್ಶೆ ಪ್ರತ್ಯುತ್ತರಕ್ಕೂ ಯೋಗ್ಯವಲ್ಲದಷ್ಟು ಅಪ್ರಾಜ್ಞವಾಗಿದೆ. ಇದು ಎಚ್ಚರಿಕೆಯಿಂದ ಓದಿಕೊಳ್ಳದ ಪ್ರಮಾದದಿಂದ ಉಂಟಾದುದೆಂದು ಭಾವಿಸುತ್ತೇನೆ. ಕಾವ್ಯದ ಧ್ವನಿಶಕ್ತಿಯ ವಿಧಾನದ ಅಪಾರ್ಥಪ್ರತಿಪಾದನೆಯೆ ಇಲ್ಲಿ ಮೂರ್ತಿಮತ್ತಾದಂತಿದೆ. ಓದಬೇಕಾದ ಧ್ವನಿಯಲ್ಲಿ ಓದಿಸಿ ಕೇಳಿದರೆ ಇಂತಹ ದೃಷ್ಟಿಯ ವಕ್ರತೆ ಋಜುವಾಗುತ್ತದೆಂದು ಭರವಸೆ ಕೊಡುತ್ತೇನೆ. ಏಕೆಂದರೆ ವಾಸ್ತವವಾಗಿ ಇಲ್ಲಿ ಬ್ರಾಹ್ಮಣ ಕೊನೆಗೆ ವಿವೇಕಿಯಾಗಿ ಬೆಳಕು ಕಂಡು ಬೆಳಗುತ್ತಾನೆ. ಶ್ರೀರಾಮನೂ ಇಂಗಿತವಾದ ವಾಕ್ ಮತ್ತು ಕ್ರಿಯಾರೀತಿಗಳಿಂದ ಬ್ರಾಹ್ಮಣನ ಆತ್ಮಪ್ರಜ್ಞೆಯ ಬೋಧವನ್ನು ಎಚ್ಚರಗೊಳಿಸಿ ತಿದ್ದುವ ಅತ್ಯಂತ ಮಹೋದಾತ್ತ ವ್ಯಕ್ತಿಯಾಗಿ ಅಂತರ್ಯಾಮಿ ಶಕ್ತಿಯಾಗಿ ನಿಲ್ಲುತ್ತಾನೆ.

ಟೀಕೆ ಕೊಂಚ ಕಾಲುಜಾರಿತೆಂಬ ಭಾವನೆಯಿಂದಲೋ ಏನೋ ವಿಮರ್ಶಕರು ಕವಿಯ ಬೆನ್ನು ಸವರಿ ಅವನಿಗೆ ಧೈರ್ಯ ಹೇಳುವಂತೆ "ಇದರ ಹೊಣೆಯೆಲ್ಲ ಕವಿಯದಲ್ಲ. ಇದರ ಬಹುಭಾಗ ಮೂಲಭಾಗದಲ್ಲಿ ಅನಿವಾರ್ಯವಾದುದು" ದೆಂದು ಉಪಚಾರ ನುಡಿದಿದ್ದಾರೆ. ಆದರೆ ಅದೂ ಹುಸಿ ಮತ್ತು ಅನಾವಶ್ಯಕ. ಏಕೆಂದರೆ ಈ ಕೃತಿಯ ಸಂಪೂರ್ಣವಾದ ಹೊಣೆ ಕೃತಿಕಾರನಿಗೆ ಸೇರಿದ್ದೆ. ಹೇಗೆಂದರೆ, ಮೂಲದ ಕಥೆ ನಿಮಿತ್ತ ಮಾತ್ರವಾದುದು. ಕವಿಗದು "ಸೇರ"ದಿದ್ದರೆ ಅದರ ಗೋಜಿಗೆ ಹೋಗುತ್ತಲೆ ಇರಲಿಲ್ಲ. ಯಾವುದಾದರೂ ಅಂಶ ಸೇರದಿದ್ದರೆ ಅದನ್ನು ತನ್ನ ಇಚ್ಛೆಗೆ ಅಧೀನವಾಗುವಂತೆ ಬದಲಾಯಿಸುವ ನಿಯತಿಕೃತ ನಿಯಮರಹಿತವಾದ ಸ್ವಾತಂತ್ರ್ಯ ಕವಿಯ ನಿರಂಕುಶಮತಿಯ ಹುಟ್ಟುಹಕ್ಕಾಗಿದೆ. ಆದ್ದರಿಂದ ವಿಮರ್ಶಕನ ಕರ್ತವ್ಯ ಕಥಾಪ್ರತಿಮೆಯಲ್ಲಿ ಧ್ವನಿತವಾಗುವ ಕವಿಯ 'ದರ್ಶನ'ವನ್ನು ತಿಳಿಯುವುದಾಗಿರಬೇಕೇ ಹೊರತು ತನ್ನ ಅಪ್ರಕೃತಾಶಯದ ಮಾನದಂಡದಿಂದ ಅದನ್ನು ಅಳೆಯ ಹೋಗುವುದಲ್ಲ ಎಂಬುದನ್ನು ಸೂಚಿಬಯಸುತ್ತೇನೆ.

"ತನ್ನ ಮಗ ಹೋದ ತಪ್ಪನ್ನು ರಾಜನಲ್ಲಿ ಆರೋಪಿಸುವ ಬ್ರಾಹ್ಮಣ ಎಷ್ಟು ತೊಳೆದರೂ ಕಪ್ಪಾಗಿಯೇ ನಿಲ್ಲಬೇಕು." ಎನ್ನುತ್ತಾರೆ ವಿಮರ್ಶಕರು. ಅದು ಹೇಗೆ ? ಅವನೇನು ತೆನ್ನಾಲಿ ರಾಮಕೃಷ್ಣನ ಕರಿನಾಯಿಯೆ ? ಆ ಟೀಕೆಯ ಮಿಥ್ಯೆ ಈ ಕೃತಿಯನ್ನು ಗಮನವಿಟ್ಟು ಓದುವವರಿಗೆಲ್ಲ ಸ್ವಸುವೇದ್ಯವಾಗುತ್ತದೆ. ಏಕೆಂದರೆ ಬ್ರಾಹ್ಮಣನು ತುದಿಯಲ್ಲಿ ಕಾಳಿಕೆ ಕಳೆದ ಹೊನ್ನಿನಂತೆ ಹೊಸ ತೇಜಸ್ಸಿನಿಂದ ಹೊಳೆಯುತ್ತಾನೆ. ನಿಜವಾಗಿಯೂ ಬ್ರಾಹ್ಮಣನಾಗುತ್ತಾನೆ. "ಬ್ರಾಹ್ಮಣೇತರ" ಕವಿ ತನ್ನ ಕಲಾಕೃತಿಯಲ್ಲಿ "ಬ್ರಾಹ್ಮಣ ದ್ವೇಷ"ದಿಂದ ಪ್ರೇರಿತನಾಗಿದ್ದರೆ ಅವನನ್ನು ವಿಮರ್ಶಕರ ಅಭಿಪ್ರಾಯಕ್ಕಿಂತಲೂ ಘನತರವಾದ ಕಪ್ಪು ಬಣ್ಣದಿಂದ ಚಿತ್ರಸಬೇಕಾಗಿತ್ತಲ್ಲವೆ ? ಆದರೆ ಈ ಕೃತಿಯ ಉದ್ದೇಶ ತಾತ್ಕಾಲಿಕವಾದ ಹೊಟ್ಟೆಪಾಡಿನ ಕಚ್ಚಾಟದಲ್ಲಿ ಭಾಗವಹಿಸುವುದಿಲ್ಲ; ಚಿರಕಾಲದ ನಿತ್ಯಸತ್ಯಗಳನ್ನೂ ಶಾಶ್ವತವಾದ ರಸಾನುಭೂತಿಯನ್ನು ಸಹೃದಯರಿಗೆ ದಾನಮಾಡಿ, ಅವರನ್ನು ಜಾತಿ ಕುಲ ಧನ ಕ್ರಿಯಾದಿ ಭೇದವಿಲ್ಲದೆ ರಸಸುಖಿಗಳನ್ನಾಗಿ ಮಾಡುವುದು.

ಇನ್ನು "ಇಂತಹ ತಪ್ಪು ತಿಳಿವಳಿಕೆ ರಾಜ್ಯದಲ್ಲಿ ವ್ಯವಹಾರದಲ್ಲಿರಬೇಕಾದರೆ ಅದನ್ನು ತಿದ್ದುವ ಯತ್ನ ಮಾಡದೆ ಈ ದೃಶ್ಯದಲ್ಲಿ ಶ್ರೀರಾಮನು ಮಾಡಿರುವುದು ಮತ್ತಾವ ಯತ್ನವೊ?) ತಾನು ಕಂಡ ಸತ್ಯವನ್ನು ತನ್ನ ನಡತೆಯಲ್ಲಿ ಮಾತ್ರ ಬಳಸುತ್ತಿರುವ ರಾಜ ಅಧೀರನೂ ಅನುದಾತ್ತನೂ ಆಗದೆ ವಿಧಿಯಿಲ್ಲ" ಎಂಬ ಮಾತೂ, "ಈ ದೃಶ್ಯದಲ್ಲಿಯ ಕಲ್ಪನೆ ಒಟ್ಟಿನಲ್ಲಿ ಓದುವವರ ಮನಸ್ಸಿನಲ್ಲಿ ಅತೃಪ್ತಿಯನ್ನು (ಜಾತಿಮಾತ್ಸರ್ಯ ಕಾರಣವಾಗಿಯೇ ಎಂಬ ಪ್ರಶ್ನೆ ಮೂಡುತ್ತದೆ) ಉಂಟು ಮಾಡುತ್ತದೆ." ಎಂಬುದೂ ವಿಮರ್ಶಕರ ಸ್ವಂತ ಕಾರಣಕ್ಕಾಗಿ ನೊಂದ ಮನಸ್ಸಿನ ಉದ್ರೇಕದ ಅಭಿಪ್ರಾಯಗಳೆಂದು ಭಾವಿಸಬೇಕಾಗುತ್ತದೆ. ಏಕೆಂದರೆ ಈ ಲೇಖಕನ ಕಣ್ಣಿಗೂ ಕಿವಿಗೂ ಬೇರೆಯ ತರಹದ ತೀರ ಭಿನ್ನವಾದ ಅಭಿಪ್ರಾಯಗಳೂ ಬಿದ್ದಿವೆ.

ವಿಮರ್ಶಕರ ಇನ್ನೊಂದು ಟೀಕೆ ಸಾಹಿತ್ಯ ರಚನಾಮೀಮಾಂಸೆಗೆ ಸಂಬಂಧಪಟ್ಟದ್ದು : "ವಕ್ರ ದೃಷ್ಟಿಯ ಹಿಂದಿನ ಕಥೆಯನ್ನು ತಿದ್ದುವೆವೆಂದು ಹೋಗುವುದು ಬೇರೆಯವರು ಹಾಕಿದ ನೆಲಗಟ್ಟಿನ ಮೇಲೆ ನಮ್ಮ ಮನಸ್ಸಿಗೆ ಒಪ್ಪುವ ಭವನವನ್ನು ಕಟ್ಟುವೆವೆನ್ನುವ ಪ್ರಯತ್ನದಂತೆ. ಇಂದು ನಾವು ಏನು ಮಾಡಿದರೂ ಹಿಂದಿನ ಗೀರು ಇದ್ದೇ ಇರುತ್ತದೆ. ಹೊಸಕಾಲದ ಧರ್ಮವನ್ನು ಹೇಳುವುದಕ್ಕೆ ಹೊಸ ಕಥೆಯನ್ನೇ ಹೇಳುವುದು ಕ್ಷೇಮ ಎಂದು ನಾನು ಶ್ರೀ ಪುಟ್ಟಪ್ಪನವರಿಗೆ ಸೂಚಿಸುತ್ತೇವೆ."[2]

ಈ ಟೀಕೆ ಮತ್ತು ಸೂಚನೆ ಅತ್ಯಂತ ಆಶ್ಚರ್ಯಕರವೂ ಹಾಸ್ಯಾಸ್ಪದವೂ ಆಗಿ ತೋರುತ್ತದೆ. 'ಅತ್ತ ಪುಲಿ ಇತ್ತ ದರಿ!' ಹೊಸ ಕಾಲದ ಹೊಸ ಧರ್ಮವನ್ನು ಹೇಳಲು ಹೊಸ ಕಥೆಯನ್ನು ಕಟ್ಟಿದರೆ ಸಜೀವವಾದ ಜಾತಿ ದ್ವೇಷದ ಉದ್ರೇಕ ಭೂತಗಳನ್ನು

ಎಬ್ಬಿಸುತ್ತದೆ. ಆ ಸ್ಥಳದವರೂ ಈ ಮತದವರೂ ಆ ಜಾತಿಯವರೂ ಈ ಕೋಮಿನವರೂ ಕೋರ್ಟಿಗೆ ಹೋಗುತ್ತೇವೆ ಎನ್ನುತ್ತಾರೆ. ಆ ರಗಳೆಯೆ ಬೇಡವೆಂದು ಹಳೆಯ ಕಥೆಗಳನ್ನು ಅಳವಡಿಸಿಕೊಂಡರೆ ವಿಮರ್ಶಕರು ನಮ್ಮ "ಕ್ಷೇಮ"ದ ವಿಚಾರವಾಗಿ ಕಾತರರಾಗಿ ಸೂಚನೆ ಕೊಡಹೋಗುತ್ತಾರೆ. ಎಂತಹ ವಿಚಿತ್ರ ಸನ್ನಿವೇಶ-ಸಾಹಿತ್ಯದ ಸಮಾಧಿಗೆ! ಅದಿರಲಿ. ಈ ದೃಶ್ಯಲ್ಲಿರುವುದೇನೂ ಹೊಸದಾದ ತತ್ವವಲ್ಲ. ಅತ್ಯಂತ ಪ್ರಾಚೀನವಾದುದು, ನಿತ್ಯವಾದುದು, ಅನಾದಿಯಾದುದು, ತಪಸ್ಸು ಶಕ್ತಿಯುಕ್ತವಾದುದು, "ತಪಂ ಪೂಜ್ಯಕರ್ಮಂ" "ತಪಕ್ಕೆಣೆಯುಂಟೆ?" "ತಪಂ ತಾನಿರ್ಪೆಡೆಯೊಳೆ ದೂರ ಕರ್ಮಿ" ಮೊದಲಾದ ತತ್ವಗಳು ನಿತ್ಯ ಸತ್ಯಗಳು. ಆದ್ದರಿಂದ ಹೊಸ ತತ್ವದ ಮಾತೆತ್ತುವುದು ಭ್ರಾಂತಿ.

ಅಲ್ಲದೆ ಹಳೆಯ ಕಥೆಯನ್ನು ಹೊಸಸಾಹಿತಿ ತನ್ನ ಕೃತಿಗೆ ತನ್ನಿಷ್ಟದಂತೆ ಉಪಯೋಗಿಸಿಕೊಳ್ಳುವ ಪದ್ಧತಿಯೂ ಮಹಾಕವಿ ಸಂಪ್ರದಾಯ ಸಿದ್ಧವಾದುದು. ನಾನು ತಪ್ಪಿದರೂ ಕಾಳಿದಾಸ, ಭಾಸ, ಪಂಪ, ಕುಮಾರವ್ಯಾಸಾದಿಗಳೊಡನೆ ತಪ್ಪಿದ್ದೇನೆ. ಮಹಿಮರೊಡನೆ ತಪ್ಪಿದರೆ ಆ ತಪ್ಪು ನನಗೊಪ್ಪು. "ಸತ್ಸಂಗಜಾನಿ ನಿಧನಾನ್ಯಪಿ ತಾರಯಂತಿ" ಎಂದಿಲ್ಲವೆ ಭವಭೂತಿ.

ಇಲ್ಲ, ಅದೆಂದಿಗೂ ತಪ್ಪಲ್ಲ. ಉತ್ತಮ ವಿಮರ್ಶೆ ಅದನ್ನಾವಗಲೂ ಶ್ಲಾಘಿಸಿದೆ. ಹಿಂದೊಮ್ಮೆ ಈ ವಿಮರ್ಶೆಯ ಲೇಖಕರೇ ಗಯಟೆಯ ಮಾತುಗಳಲ್ಲಿ ಅದನ್ನು ಸಮರ್ಥಿಸಿದ್ದಾರೆಂದು ನನ್ನ ನೆನಪು. ಹೇಗೂ ಆಗಲಿ. ನನ್ನ ಕ್ಷೇಮದ ವಿಚಾರವಾಗಿ ಕಾತರರಾಗಿರುವ ಹಿರಿಯರಿಗೆ ಕೃತಜ್ಞನಾದರೂ ಅವರ ಈ ಸೂಚನೆಯನ್ನು ಸ್ವೀಕರಿಸುವ ಸ್ಥಿತಿಯಿಂದ ನಾನು ಬಹುದೂರ ಮುಂದುವರಿದಾಗಿದೆ ಎಂದು ವಿನಯದಿಂದ ಸೂಚಿಸುತ್ತೇನೆ. ಕಾರಣ, ಹತ್ತು ಹನ್ನೆರಡು ವರ್ಷಗಳ ಹಿಂದೆಯೆ ಹಳೆಯ ಕಥೆಯಾದ ರಾಮಾಯಣವನ್ನು ನನ್ನ ಮಹಾಕಾವ್ಯದ ಭಗವದ್ ವಿಷಯವನ್ನಾಗಿ ಆರಿಸಿಕೊಂಡು, ನಿತ್ಯ ಸತ್ಯಗಳ ದೃಷ್ಟಿಯಿಂದ ಸರಿಯೆಂದು ಸರಸ್ವತಿ ನನಗೆ ತೋರಿಸಿದ ಮಾರ್ಗದಲ್ಲಿ ಬದಲಾವಣೆ ಮಾಡಿಕೊಂಡು, ಗುರುಕೃಪೆಯಿಂದ ಹಾಡಿ ಮುಗಿಸಿಬಿಟ್ಟಿದ್ದೇನೆ. ಅಲ್ಲದೆ ವಿಮರ್ಶಕರ ಸೂಚನೆಯಂತೆ ನಡೆದುಕೊಂಡಿದ್ದರೆ "ಬೆರಳ್‌ಗೆ ಕೊರಳ್" ಹುಟ್ಟುತ್ತಿರಲಿಲ್ಲ; "ಯಮನ ಸೋಲು" "ಶ್ಮಶಾನ ಕುರುಕ್ಷೇತ್ರಂ" "ವಾಲ್ಮೀಕಿಯ ಭಾಗ್ಯ" ಎಲ್ಲವನ್ನೂ ಇಲ್ಲಗೈಯಬೇಕಾಗುತಿತ್ತು.

ಪುರಾಣಗಳನ್ನು ಪ್ರತಿಮಾ ದೃಷ್ಟಿಯಿಂದ ನೋಡದೆ ಪ್ರತಿಕೃತಿಯ ದೃಷ್ಟಿಯಿಂದ ನೋಡಿದರೆ ಈ ತರಹದ ಅನರ್ಥ ವಿಮರ್ಶೆ ಸಿದ್ಧವಾಗುತ್ತದೆ. ಪುರಾಣಗಳೆಂದರೆ ಸೂಕ್ಷ್ಮತರವಾದ ನಿತ್ಯಸತ್ಯಗಳಿಗೆ ಭಂಗಬಾರದಂತೆ ಆ ಕಥಾಪ್ರತಿಮೆಗಳನ್ನು ಆಯಾ ಕಾಲದ ಮನೋಧರ್ಮಕ್ಕನುಗುಣವಾಗಿ ತಮ್ಮ ತಮ್ಮ ಶಕ್ತಿಯ ಸಂಸ್ಕಾರ ಧೈರ್ಯ ದರ್ಶನಗಳ ಅಭಿವ್ಯಕ್ತಿಗೆ ಅನುಕೂಲವಾಗುವಂತೆ ಕವಿಗಳು ಮಾರ್ಪಡಿಸಿಕೊಂಡು ಸಾಹಿತ್ಯ ಸೃಷ್ಟಿ ಮಾಡುವುದು ಅತ್ಯಂತ ಅವಶ್ಯಕ ಎಂದು ಒತ್ತಿ ಹೇಳಬಯಸುತ್ತೇನೆ.

ಕೊನೆಯಲ್ಲಿ ಕೃತಿಯ ಛಂದಸ್ಸು ಭಾಷೆ ಇವುಗಳ ವಿಚಾರದಲ್ಲಿ ಒಂದೆರಡು ಟೀಕೆ ಮಾಡಿದ್ದಾರೆ. ಆ ಟೀಕೆಯಲ್ಲಿ ಅವರಿಗೆ ಅದಾವುದೂ ನನ್ನ ರೀತಿಯಲ್ಲಿ ಗ್ರಹಿಕೆಯಾಗಿಲ್ಲ ಎಂಬುದು ಮಾತ್ರ ಎದ್ದು ಕಾಣುತ್ತದೆ. ತಮ್ಮ ರೀತಿಯನ್ನೆ ನನ್ನಲ್ಲಿ ಕಾಣ ಬಯಸಿ ಆ ರೀತಿಯಿಂದ ಈ ರೀತಿಯನ್ನು ಅಳೆಯಹೋಗಿ ತಪ್ಪಿದ್ದಾರೆ. ನಮ್ಮಿಬ್ಬರ ರೀತಿಗಳು ಮೂಲತಃ ಬೇರೆ ಬೇರೆ. ಪರಿಹಾಸ್ಯ ಉದ್ದೇಶವೂ ಇಲ್ಲದೆ ನನ್ನ ಅಭಿಪ್ರಾಯ ಸ್ಪಷ್ಟೀಕರಣ ಮಾತ್ರಕ್ಕಾಗಿ ಹೇಳುವುದಾದರೆ, ಹಾರುವ ಹಕ್ಕಿ ಕುಪ್ಪಳಿಸುವ ಹಕ್ಕಿಯನ್ನಾಗಲಿ, ಕಾಂಗರು ಹರಿಣಚರಣ ವಿನ್ಯಾಸವನ್ನಾಗಲಿ ತಮ್ಮ ತಮ್ಮ ಗಮನ ಮಾನದಿಂದ ಪರಿಶೀಲಿಸಿದರೆ ಛಂದೋನಿಯಮವೇನೂ ಇಲ್ಲದಂತೆಯೋ ಅಥವಾ ತಪ್ಪಿದಂತೆಯೋ ಕಾಣಬಹುದು. ಆದರೂ ಜಿಂಕೆ ಓಡಿದಾಗ, ಹಕ್ಕಿ ಹಾರಿದಾಗ ಅದರ ನೆಲಛಂದಸ್ಸು ಇದರ ಬಾನ್ ಛಂದಸ್ಸು ಪ್ರತ್ಯಕ್ಷವಾಗಿ, ಮನಸ್ಸಿಗೆ ತೃಪ್ತಿಯಾಗುವುದರಲ್ಲಿ ಸಂದೇಹವಿಲ್ಲ.

ಕೊನೆಯದಾಗಿ ವಿಮರ್ಶಕರೇ ಹೇಳಿರುವ ಲೋಕೋತ್ತರವಾದ ಮಾತುಗಳನ್ನು ಮತ್ತೊಮ್ಮೆ ಇಲ್ಲಿ ಒತ್ತಿ ಹೇಳುತ್ತೇನೆ: "ಜಾತಿ ಕುಲದ ಮಾತು ಬಂದಾಗ ಮನಸ್ಸನ್ನು ಉದ್ರೇಕಕ್ಕೆ ಬಿಡದೆ ಸಮಾಧಾನದಿಂದ ಚರ್ಚಿಸುವ ಬಲುಮೆ ಸಮಾಜದ ಶ್ರೇಯಸ್ಸಿನ ಮುಖ್ಯ ಸಾಧನಗಳಲ್ಲಿ ಒಂದು" ಸಾಹಿತ್ಯದಲ್ಲಂತೂ ಅಂತಹ ಪಕ್ಷೋದ್ರೇಕ ನಿಜವಾಗಿ ಅನರ್ಥಕರ, ಹಾನಿಕರ, ರಸಭಂಗಕರ: ಕೃತಿಕಾರನ ಮೇಲೆ ಉಕ್ಕುವ ದ್ವೇಷಾಸೂಯೆಗಳಿಂದ ಕೃತಿಸಮಸ್ತವೂ ದ್ವೇಷಪೂರ್ಣ, ವಿಷಮಯ, ನೀರಸ, ಅಧಮ ಎಂಬಂತೆ ತೋರಿ, ಕಲೆಯ ಉದ್ದೇಶವೆ ಕೊಲೆಹೋಗುತ್ತದೆ. ಕನ್ನಡಕ್ಕೆ ಅಂತಹ ದುರ್ಗತಿ ಒದಗದಿರಲಿ.

ಈ ಮೇಲಿನ ಎರಡು ಮಾದರಿಗಳನ್ನು ಗಮನಿಸಿದರೆ ಇವು ಚಾರಿತ್ರಿಕ ಮಹತ್ವ ಪಡೆದಂಥ ಶೂದ್ರ ತಪಸ್ವಿ ನಾಟಕ ಕುರಿತ ಚರ್ಚೆಗಳು. ಮೊದಲನೆಯದು ಪುಸ್ತಕ ವಿಮರ್ಶೆ, ಎರಡನೆಯದು ಈ ಪುಸ್ತಕ ವಿಮರ್ಶೆಗೆ ಮೂಲ ಲೇಖಕರ ಪ್ರತಿಕ್ರಿಯೆ ರೂಪದು. ಇವೆರಡು ಒಂದು ಸಂದರ್ಭದಲ್ಲಿ ಲೇಖಕರು ಮತ್ತು ಪುಸ್ತಕ ವಿಮರ್ಶಕರು, ಪುಸ್ತಕ ವಿಮರ್ಶಕರು ಮತ್ತು ಲೇಖಕರ ನಡುವಿನ ವಾಗ್ವಾದವಾಗಿ ಬೆಳೆದಿದೆ. ಈ ಚರ್ಚೆ ಕೃತಿ ಕುರಿತು ಗಂಭೀರ ಚರ್ಚೆಗೆ ನಾಂದಿ ಹಾಕಿದೆ.

೧೯೪೯ರ ಜನವರಿಯಲ್ಲಿ ಕುವೆಂಪುರ 'ಶೂದ್ರ ತಪಸ್ವಿ' ನಾಟಕ ಪ್ರಕಟವಾಯಿತು. ಇದೇ ವರ್ಷ ಜುಲೈ ತಿಂಗಳಿನ 'ಜೀವನ' ಪತ್ರಿಕೆಯಲ್ಲಿ ಮಾಸ್ತಿಯವರು 'ಶೂದ್ರ ತಪಸ್ವಿ'ಯನ್ನು ತೀವ್ರವಾಗಿ ಪ್ರತಿಕ್ರಿಯಿಸಿದರು. ಇಲ್ಲಿ ಪುಸ್ತಕ ವಿಮರ್ಶೆಯ ನೆಪದಲ್ಲಿ ಹಲವು ಚರ್ಚೆಗಳು ಮುನ್ನೆಲೆಗೆ ಬಂದಿವೆ. ಹಿಂದೆ ಈ ಅಧ್ಯಯನದಲ್ಲಿ ವಿವರಿಸಿದಂತೆ ನವೋದಯ ಸಂದರ್ಭದಲ್ಲಿ ಪುಸ್ತಕ ವಿಮರ್ಶೆಗಳನ್ನು 'ರಸ ಪ್ರಧಾನ' ವಿಮರ್ಶೆ ಎಂದು ಚರ್ಚಿಸಲಾಗಿತ್ತು. ಆದರೆ ಶೂದ್ರ ತಪಸ್ವಿ ಕುರಿತ ಚರ್ಚೆ ಈ ಸ್ವರೂಪದಲ್ಲ. ಈ ಶೂದ್ರ ತಪಸ್ವಿಯ ಚರ್ಚೆಯಲ್ಲಿ ರಸ ಪ್ರಧಾನತೆಯಲ್ಲ ಬದಲಾಗಿ ಸಾಮಾಜಿಕ, ತಾತ್ವಿಕ, ಸಾಹಿತ್ಯ ಪರಿಶೀಲನೆಯಿದೆ.

ಮೂಲ ರೂಪವನ್ನು ಬದಲಾಯಿಸಿ ಆಧುನಿಕ ಚಿಂತನೆಗಳನ್ನಿಟ್ಟುಕೊಂಡು ಹೊಸದಾಗಿ ಕುವೆಂಪು ಸೃಜಿಸಿದ 'ಶೂದ್ರ ತಪಸ್ವಿ' ನಾಟಕವನ್ನು ಚರ್ಚೆಯ ವಸ್ತುವಾಗಿ ಎತ್ತಿಕೊಂಡ ಮಾಸ್ತಿಯವರು ತಮ್ಮ ವಿಮರ್ಶೆಯನ್ನು 'ಶೂದ್ರ ತಪಸ್ವಿ ಒಂದು ಸಣ್ಣದೃಶ್ಯ' ಎಂಬ ಹೆಸರಿನಲ್ಲಿ ಆರಂಭಿಸಿ ಒಂದು ವ್ಯಂಗ್ಯವಾದ ಧ್ವನಿಯಲ್ಲಿ ವಿಡಂಬಿಸಿದ್ದಾರೆ. ಇದು ಪುಸ್ತಕ ವಿಮರ್ಶೆಯ ರೂಪದಲ್ಲಿ ಇರುವ ಒಂದು ತೀಕ್ಷ್ಣ ಪ್ರತಿಕ್ರಿಯೆ. ಇದರ ಆರಂಭದಲ್ಲಿ ಪ್ರಸ್ತುತ ಕೃತಿಯ ಸಾರಾಂಶವನ್ನು ವಿವರಿಸಿ, ನಂತರ ಮೂಲ ವಸ್ತುವಿನ ವಿವರಗಳನ್ನು ಸ್ಪಷ್ಟಪಡಿಸಿ, ಕುವೆಂಪು ಮಾಡಿಕೊಂಡ ಬದಲಾವಣೆಯ ಚರ್ಚೆಗಳನ್ನು ಮಾಡಿದ್ದಾರೆ. ಮುಂದೆ ಚರ್ಚೆ ಬೆಳೆಯುತ್ತಾ ಸಾಮಾಜಿಕವಾದ, ತಾತ್ವಿಕವಾದ ಮತ್ತು ಸಾಹಿತ್ಯಕವಾದ ಗಂಭೀರ ಚರ್ಚೆಗೆ ತೊಡಗುತ್ತಾರೆ. ಇಲ್ಲಿನ ವಿಮರ್ಶೆಯಲ್ಲಿ ಎದ್ದು ಕಾಣುವ ಪ್ರಮುಖ ಅಂಶವೆಂದರೆ ಹಳೆ ಮೌಲ್ಯಗಳನ್ನು ಸಮರ್ಥಿಸಿಕೊಳ್ಳುವ ಮತ್ತು ಬದಲಾಗಬೇಕಾಗದ ಸ್ಥಿತಿ ಇವೆರಡನ್ನು ಏಕಕಾಲದಲ್ಲಿ ನಿಭಾಯಿಸಿಕೊಳ್ಳುವ ಜವಾಬ್ದಾರಿಯನ್ನು ಮಾಸ್ತಿಯವರು ಎದುರಿಸಿದ್ದಾರೆ. ಮೂಲಸ್ಥಿತಿ ಬದಲಾಗಿದ್ದನ್ನು ಒಪ್ಪಿಕೊಳ್ಳಲಾಗದ ಸಂಪ್ರದಾಯ ಮೌಲ್ಯಗಳನ್ನು ತಿರಸ್ಕರಿಸಲಾಗದ ಸ್ಥಿತಿ ಇವೆರಡು ಈ ವಿಮರ್ಶೆಯಲ್ಲ ಮುಖಾಮುಖಿಗೊಂಡಿವೆ.

ಮಾಸ್ತಿಯವರ ಈ ವಿಮರ್ಶೆ ತಕ್ಷಣ ಮತೀಯವಾದಿ ನೆಲೆಯಲ್ಲಿ ನಿರೂಪಿತವಾದಂತೆ ಗೋಚರಿಸುತ್ತದೆ. ಆದರೆ ಇಲ್ಲಿ ಒಂದು ರೀತಿಯ ಸಂಯಮ ಕಳೆದುಕೊಳ್ಳದ ಸಾತ್ವಿಕಸಿಟ್ಟಿದೆ. ಒಂದು ಕೃತಿ ಬಂದಂಥ ಸಂದರ್ಭದಲ್ಲಿ ಬಂದಂಥ ಈ ತರದ ಪ್ರತಿಕ್ರಿಯೆ ಮೊಟ್ಟಮೊದಲನೆಯದು. ಹಾಗಾಗಿ ಇಲ್ಲಿನ ವಿಮರ್ಶಕರು ಮತ್ತು ಲೇಖಕರಲ್ಲಿ ಆರಂಭಘಟ್ಟದ ಸಿಟ್ಟು ಸಜ್ಜನಿಕೆ, ಮೀರಲಾಗದ ಸಂಯಮ ಎದ್ದು ಕಾಣುತ್ತದೆ. ಹೇಳಲಾಗದ ವಿಷಯವನ್ನು ಹೇಳಬೇಕಾದ ತುರ್ತಿನ ಅನಿವಾರ್ಯತೆಯಲ್ಲಿ ಮಾಸ್ತಿಯವರ ಮನೋಧರ್ಮವಿದೆ. ಹೀಗಾಗಿ ಕುವೆಂಪು ಮತ್ತು ಮಾಸ್ತಿಯವರ ಈ ಚರ್ಚೆ ಒಂದೇ ಕಾಲದ ಇಬ್ಬರು ಸೃಜನಶೀಲ ವ್ಯಕ್ತಿಗಳು ತಮ್ಮ ತಮ್ಮ ಸೃಜನಶೀಲತೆಯ ವಿಶಿಷ್ಟ ಅಂಶಗಳನ್ನು ಅಭಿವ್ಯಕ್ತಿಸುವ ಕ್ರಮಗಳ ನಡುವೆ ವೈದೃಶ್ಯ ಮತ್ತು ವೈರುದ್ಯಗಳ ರೂಪದಲ್ಲಿ ಇವರಿಬ್ಬರ ವಾಗ್ವಾದ ಬೆಳೆದಿದೆ.

ಇಲ್ಲಿನ ಪುಸ್ತಕ ವಿಮರ್ಶೆ ಮತ್ತು ಅದಕ್ಕೆ ಲೇಖಕರಿಂದ ಬಂದಿರುವ ಪ್ರತಿಕ್ರಿಯೆ ಇವುಗಳನ್ನು ಗಮನಿಸಿದರೆ ಈ 'ಪುಸ್ತಕ ವಿಮರ್ಶೆ' ಕೃತಿಯನ್ನು ಪ್ರಶ್ನಿಸುವ ಸ್ವರೂಪದಲ್ಲಿ ಬೆಳೆದಿದೆ. ಕೃತಿಯನ್ನು ಎಲ್ಲ ಮುಖಗಳಿಂದಲ್ಲ ವಿಶ್ಲೇಷಿಸಿ ಸೈದ್ಧಾಂತಿಕ ಚರ್ಚೆಗೆ ಇಲ್ಲಿ ನಾಂದಿಹಾಕಿದ್ದಾರೆ. ಇಲ್ಲಿ ಕೇವಲ ಕೃತಿಯನ್ನಷ್ಟೇ ಚರ್ಚೆ ಮಾಡುತ್ತಿಲ್ಲ. ಕೃತಿಯ ನೆಪದಲ್ಲಿ ಸಾಮಾಜಿಕ, ಧಾರ್ಮಿಕ, ತಾತ್ವಿಕ ಸಾಹಿತ್ಯಕ ಹೀಗೆ ಹಲವು ಆಯಾಮಗಳು ಚರ್ಚೆಗೆ ಒಳಗಾಗಿವೆ. ಒಂದೇ ಸಿದ್ಧಾಂತವುಳ್ಳ ಒಂದೇ ಕಾಲಘಟ್ಟದ ಇವರಿಬ್ಬರು ಪರಸ್ಪರ ಭಿನ್ನವಾದ ಚರ್ಚೆಗೆ ತೊಡಗಿರುವುದು ಚಾರಿತ್ರಿಕವಾಗಿ ಮಹತ್ವವೆನ್ನಿಸುತ್ತದೆ. ಮಾಸ್ತಿಯವರು ಮಾಡುವ ಟೀಕೆ ಒಂದು ರೀತಿಯ ಸಂಯಮ ಕಳೆದುಕೊಳ್ಳಲಾಗದ ಟೀಕೆಯಾದರೂ ಅಂತರ್ಯದಲ್ಲಿ ಸಂಯಮ ಮೀರಿದ ಟೀಕೆಯಾಗಿಯೇ ಗೋಚರಿಸುತ್ತದೆ. ಕೃತಿಯ ವಸ್ತುವಿನ ಬದಲಾವಣೆಯ ಬಗೆಗೆ, ಲೇಖಕರು ಶೂದ್ರರ ಪರವಾಗಿರುವುದು, ಬ್ರಾಹ್ಮಣನನ್ನು ಲೇವಡಿ ಮಾಡಿರುವುದು ಇಂಥವುಗಳು ಚರ್ಚೆಯಲ್ಲಿ ಪ್ರಧಾನತೆಯನ್ನು ಸ್ಥಾಪಿಸಿವೆ. ಇದಕ್ಕೆ ಪ್ರತ್ಯುತ್ತರ ವೆಂಬತೆ 'ಶೂದ್ರತಪಸ್ವಿ ಮಾರ್ನುಡಿ' ಎಂದು ಬರೆದಿರುವ ಕುವೆಂಪುರವರು ಪುಸ್ತಕ ವಿಮರ್ಶಕರು ಎತ್ತಿದ ಪ್ರಶ್ನೆಗಳಿಗೆ ತಕ್ಕ ಉತ್ತರವನ್ನು ನೀಡಿದ್ದಾರೆ. ಯಾವ ಯಾವ ಕಾರಣಗಳಿಗಾಗಿ ಪುಸ್ತಕ ವಿರ್ಮಶಕರು ಪ್ರಸ್ತುತ ಕೃತಿಯನ್ನು ಟೀಕಿಸುತ್ತಿದ್ದಾರೆ ಎಂಬುದನ್ನು ಪತ್ತೆಹಚ್ಚಿ ಅದಕ್ಕೆ ಸಕಾರಣಗಳ ಮೂಲಕ ಕೃತಿಯನ್ನು ಸಮರ್ಥಿಸಿಕೊಂಡಿದ್ದಾರೆ. ಶೂದ್ರ ನೆಲೆಯ ಪರವಾಗಿ ಲೇಖಕರು ನಿಲ್ಲುತ್ತಾರೆ (ಇದೇ ನೆಲೆಯಲ್ಲಿ ಪ್ರೊ. ಕೆ.ಎಸ್.ಭಗವಾನ್ ಸಂಸ್ಕಾರವನ್ನು ವಿವೇಚಿಸುತ್ತಾರೆ). ಆ ಮೂಲಕ ಕೃತಿಯ ವಾಗ್ವಾದದ ಗಂಭೀರ ಚರ್ಚೆಗೆ ಮುಕ್ತವಾಗಿ ಸ್ಪಂಧಿಸಿದ್ದಾರೆ. ಇಲ್ಲಿನ ಲೇಖಕರು ಮತ್ತು ವಿಮರ್ಶಕರ ನಡುವೆ ಯಾವುದೇ ವೈಯಕ್ತಿಕ ವಿರಸ ಇಲ್ಲದಿದ್ದರೂ (ನಕ್ಷೆ - ನಕ್ಷತ್ರ - ಬಸವರಾಜ ಕಲ್ಗುಡಿ) ಇಲ್ಲಿನ ಚರ್ಚೆಯನ್ನು ತುಂಬಾ ಗಂಭೀರವಾಗಿ ವಿಶ್ಲೇಷಿಸಿ ಸಾಹಿತ್ಯಕ ವಾಗ್ವಾದಕ್ಕೆ ಕಾರಣವಾಗಿದ್ದಾರೆ.

ಇಂಥ ಸರಳ 'ಪುಸ್ತಕ ವಿಮರ್ಶಾ' ಅಂಕಣ ಗಂಭೀರವಾದ ವಿಮರ್ಶಾತ್ಮಕ ಚರ್ಚೆಗೆ ವೇದಿಕೆಯಾಗಿ ನಿರ್ಮಾಣಗೊಳ್ಳುತ್ತದೆ. ಆದರೆ ಈ ಸಾಧ್ಯತೆಗಳು ಪ್ರಮುಖ ಕೃತಿಗಾರನ ಕೃತಿಯನ್ನು ಈ ರೀತಿಯ ನಿಲುವಿನಿಂದ ಚರ್ಚಿಸಿರುವುದರಿಂದ ಈ ಗಂಭೀರ ಚರ್ಚೆ ಆಗಿದೆ. ಆದರೆ ಹೊಸ ಲೇಖಕರ ಕೃತಿಗಳ ವಿಮರ್ಶೆ ಈ ರೀತಿಯ ಗಂಭೀರ ಚರ್ಚೆಗೆ ಆಸ್ಪದ ಮಾಡಿಕೊಂಡಿರುವುದು ತುಂಬಾ ಕಡಿಮೆ.

೬.೩.೨. ಪುಸ್ತಕ ವಿಮರ್ಶಕರನ್ನು ಅನಾವರಣ ಮಾಡುತ್ತದೆ

ವಿವಿಧ ಕಾಲಘಟ್ಟಗಳಿಂದ ಬೆಳೆದು ಬಂದಿರುವ ವಿಮರ್ಶೆ ಪ್ರಾರಂಭದ ಸ್ವರೂಪದಲ್ಲೇ ಉಳಿದು ಬಂದಿಲ್ಲ. ಅದು ಪ್ರಾರಂಭದಲ್ಲಿ ಪಾಶ್ಚಾತ್ಯರ ಪ್ರೇರಣೆಯಿಂದ ಬೆಳೆದು ಬಂದ ಸ್ವರೂಪದಲ್ಲೇ ನೆಲೆ ನಿಂತಿದ್ದರೆ ಇಂದು ವಿಮರ್ಶೆಗೆ ಇಷ್ಟೊಂದು ಮನ್ನಣೆ ದೊರೆಯುತ್ತಿರಲಿಲ್ಲ. ಆದರೆ ಇಂದು ವಿಮರ್ಶೆ ಅದು ಕರ್ತೃನಿಷ್ಠವಾಗಿ ಹುಟ್ಟಿದ್ದು, ಕೃತಿ ಸಮಾಜಮುಖಿಯಾಗಿ, ಕೊನೆಗೆ ಸಾಂಸ್ಕೃತಿಕ ಸ್ವರೂಪವನ್ನು ಪಡೆದುಕೊಂಡು ಬಂದಿದೆ. ನವೋದಯ ಸಂದರ್ಭದಲ್ಲಿ ತಮಗೆ ಆತ್ಮೀಯರಾದವರ ಕೃತಿಗಳಿಗೆ ವಿಮರ್ಶೆ ಮಾಡುತ್ತಲೇ ವಿಮರ್ಶೆ ಬೆಳಸಿದರು ಅವರು ಕೃತಿಗಳಿಗೆ ವಿಮರ್ಶೆ ಬರೆಯುತ್ತಿದುದು 'ಪುಸ್ತಕ ವಿಮರ್ಶೆ'ಯ ಸ್ವರೂಪದ್ದೇ ಆಗಿತ್ತು. ಆಗ ಕರ್ತೃನಿಷ್ಠವಾದುದು ಇಂದು ಸಾಂಸ್ಕೃತಿಕ ರೂಪಣಗಳನ್ನು ಪಡೆದಿರುವುದು ಸಾಹಿತ್ಯದಲ್ಲಿ ವಿಮರ್ಶೆ ಗಂಭೀರ ಸ್ವರೂಪವನ್ನು ಪಡೆದು ಬೆಳೆದಿರುವ ರೀತಿಯನ್ನು ತಿಳಿಸುತ್ತದೆ.

ಪುಸ್ತಕ ವಿಮರ್ಶೆಯಲ್ಲಿ ಪುಸ್ತಕ ವಿಮರ್ಶಕರು ತಾವು ಕೊಡುವ ವಿವಿಧ ತೀರ್ಮಾನಗಳು ತಾವು ಕೃತಿಯಿಂದ ಕಂಡುಕೊಂಡ ದರ್ಶನ ಇವೆಲ್ಲವುಗಳಿಂದ ಆವರು ಆ ಕೃತಿಯ ಬಗೆಗೆ ತೆಗೆದುಕೊಂಡ ತೀರ್ಮಾನಗಳೆಲ್ಲ ಒಟ್ಟಾರೆಯಾಗಿ ಅವರ ಮನೋಭಾವವನ್ನು ಪ್ರತಿಬಿಂಬಿಸುತ್ತವೆ. ಇಲ್ಲಿ ವಿಮರ್ಶಕ ಲೇಖಕರ ಪರವಾಗಿದ್ದಾರೋ ಅಥವಾ ಒಳ್ಳೆಯ ವಿಮರ್ಶಕರೋ ಎಂಬುದನ್ನು ತಿಳಿಸುವುದಷ್ಟೇ ಅಲ್ಲದೆ ಅವರು 'ಪುಸ್ತಕ ವಿಮರ್ಶೆ' ಯಿಂದಲೇ ತಿಳಿಯುತ್ತದೆ. ಇದರಿಂದ ಅವರು ಯಾವ ಸ್ವರೂಪದ ವಿಮರ್ಶಕರೆಂದು ಗುರುತಿಸಬಹುದು. ಟಿ.ಪಿ. ಅಶೋಕ ವಿಮರ್ಶೆಗಳನ್ನು ಗಮನಿಸಿದರೆ ಅವರು ಶೂದ್ರ, ದಲಿತ ನೆಲೆಯಲ್ಲಿ ಕೃತಿಗಳನ್ನು ಎತ್ತಿಕೊಂಡು ಲೇಖಕರನ್ನು ಸೇರಿಸಿಕೊಂಡು ಕಟು ವಿಮರ್ಶೆ ಮಾಡುವುದನ್ನು ಇಲ್ಲಿ ಹೆಸರಿಸಬಹುದು, ಲಂಕೇಶ್ ಪತ್ರಿಕೆಯಲ್ಲಿ ಬರುತ್ತಿರುವ ಪುಸ್ತಕ ವಿಮರ್ಶೆಗಳು ಸಂಪೂರ್ಣ ಲಂಕೇಶ ಮನೋಭಾವದ ಪರವಾಗಿದ್ದರೆ ಅವಕ್ಕೆ ಮನ್ನಣೆ, ಇಲ್ಲದಿದ್ದರೆ ಕಟು ನಿಷ್ಠುರಕ್ಕೆ ಒಳಗಾಗಿರುವ ಕೃತಿಗಳು ಹಲವು ಉದಾಹರಣೆಗೆ ಸಿಗುತ್ತವೆ. ಅಲ್ಲದೆ ಇತ್ತೀಚೆಗೆ ಇನ್ನು ಕೆಲವು ಮಾದರಿಗಳು ನಿರ್ಮಾಣವಾಗುತ್ತಿವೆ. ಅವುಗಳೆಂದರೆ ಕೆಳಜಾತಿಯವರೂ ಬರೆದವರೆಂದು, ಅಥವಾ ಅಲ್ಪಸಂಖ್ಯಾತರು ಬರೆದರೆಂಬ ಕಾರಣಕ್ಕೆ ಅವುಗಳನ್ನು ಅತಿ ಆತ್ಮೀಯತೆಯಿಂದ ವಿಮರ್ಶಿಸುವ ಇಲ್ಲವೆ ತಮ್ಮ ವಿರೋಧಿ ಜಾತಿಯ ಕೃತಿಯೆಂದು ಕಟು ಟೀಕಿಸುವುದನ್ನು ಕಾಣಬಹುದು. ದೇವನೂರರ ಕೃತಿಗಳನ್ನು ಮನಜ ವಿಮರ್ಶಿಸುವುದಕ್ಕೂ ಅನಂತಮೂರ್ತಿ, ಅಶೋಕ, ಪೋಲಂಕಿ ವಿಶ್ಲೇಷಿಸುವುದಕ್ಕೂ ತುಂಬಾ

ವ್ಯತ್ಯಾಸವಿದೆ. ಈ ವ್ಯತ್ಯಾಸಗಳಿಗೆ ಅವರ ಸಾಹಿತ್ಯಕ ನಂಬಿಕೆಗಳ ಪುಸ್ತಕ ವಿಮರ್ಶಾ ಮಾದರಿಗಳನ್ನು ತಿಳಿಸುತ್ತದೆ. ಹೇಗೆಂದರೆ ಒಂದೇ ಕೃತಿ ಹಲವರಿಗೆ ಹಲವು ರೀತಿ ಕಂಡರೆ ಅವೆಲ್ಲ ಸತ್ಯವೆ, ಆದರೆ ಅವುಗಳಾವುವು ಅಂತಿಮ ಸತ್ಯಗಳಲ್ಲ ಅಂದರೆ ಅದರ ಸತ್ಯ ಮುಗಿದು ಹೋಗುವಂಥ ಸರಕಲ್ಲ.

ಡಿ. ಆರ್. ನಾಗರಾಜ್‌ರವರು ಬೆಂಗಳೂರು ವಿಶ್ವವಿದ್ಯಾಲಯ ಪ್ರಕಟಣೆಯ 'ಸಾಹಿತ್ಯ ವಾರ್ಷಿಕ'ದಲ್ಲಿ ಹಲವು ಕೃತಿಗಳ 'ಕೃತಿ ವಿಮರ್ಶೆ' ಯನ್ನು ಮಾಡಿದ್ದಾರೆ. ಅಲ್ಲಿನ ಪುಸ್ತಕ ವಿಮರ್ಶೆಗಳು ತುಂಬಾ ಭಿನ್ನವಾಗಿವೆ. ಅವರು ಅಲ್ಲಿ ಪುಸ್ತಕವನ್ನು ಕೇವಲ 'ಪರಿಚಯ' ಮಾಡಬೇಕು ಎಂದು ತಿಳಿಯದೆ. ವಿಮರ್ಶಿಸಬೇಕಾದ ಕರ್ತವ್ಯ ಎಂದು ಭಾವಿಸಿ ವಿಶ್ಲೇಷಣೆಗೆ ಅಳವಡಿಸಿದ್ದಾರೆ. ಇಲ್ಲಿನ ಕೃತಿ ವಿಮರ್ಶೆಗಳು ಅವರ ವಿಮರ್ಶಾಮನೋಭಾವವನ್ನು ತಿಳಿಸುವ ಸ್ವರೂಪವಾಗಿ ಕಂಡುಬರುತ್ತದೆ.

ಮೂಲಕ ಮಹಾಶಯರು (ಕವನ ಸಂಕಲನ) ಗೋಪಾಲಕೃಷ್ಣ ಅಡಿಗ

ತನ್ನೊಳಗೆ ತಾನು ಜಗಳವಾಡುವುದು ಕಾವ್ಯ ಎಂಬ ಯೇಟ್ಸನ ವ್ಯಾಖ್ಯಾನ ಇಲ್ಲಿ ಸಲ್ಲುವಂಥದ್ದಲ್ಲ. ಈ ಸಂಕಲನದ ಬಂಧದ ಮುಖ್ಯರೂಪ ಹೊರಮುಖಿಯಾದದ್ದು. ಹೊರಗೆ ಜಗಳಕ್ಕೆ, ತೀಕ್ಷ್ಣ ಟೀಕೆಗಳನ್ನು ಮಾಡುತ್ತಾ ನಿಲ್ಲುವಂಥದ್ದು. ಅಡಿಗರ ಕಾವ್ಯ ಚರಿತ್ರೆಯಲ್ಲಿ ಧ್ಯಾನರೂಪಿ ಮತ್ತು ವಾದರೂಪಿ ಬಂಧಗಳೆರಡೂ ಉದ್ದಕ್ಕೂ ಹರಿದು ಬಂದಿವೆ. ಆದರೆ ವಾದರೂಪಿಯಾದಾಗಲೆಲ್ಲಾ ಆಕ್ರಮಣಶೀಲವಾಗಿ, ವಸ್ತುಪ್ರತಿರೂಪ ನಿರ್ಮಾಣ ಇಲ್ಲವಾಗಿ, ವಾದವಾಗಿ ಬೆಳೆಯುತ್ತಾ ಹೋಗುತ್ತದೆ. ಈ ಕೃತಿ ಈ ಬಗೆಯದೇ ಆದ್ದರಿಂದ ಈ ಕೃತಿಯನ್ನು ಓದಿದ ಮೇಲೆ ಇದರ ಬಗ್ಗೆ ಅಂಥ ಉತ್ಸಾಹವೇನೂ ಉಳಿಯುವುದಿಲ್ಲ.

ಆಧುನಿಕ ಜೀವನದಲ್ಲಿ, ನಮ್ಮ ಸಮಕಾಲೀನ ಜೀವನದಲ್ಲಿಯ ಸರ್ವಾಧಿಕಾರೀ ರೂಪಗಳನ್ನು ಕುರಿತ ಉಗ್ರಟೀಕೆ ಇಲ್ಲಿಯ ಎಲ್ಲ ಕವನಗಳ ಆಶಯ. ಆದರೆ ಈ ವ್ಯಗ್ರತೆ ಬಹಳಷ್ಟು ಸಾರಿ ತನ್ನ ಹದ್ದನ್ನು ಮೀರುವ ಆತುರವನ್ನು ಪ್ರಕಟಿಸುತ್ತದೆ. ಸಮೂಹ ಸಮಾಜ ಮತ್ತು ಜನತೆಯ ನಡುವಣ ಸೂಕ್ಷ್ಮ ವ್ಯತ್ಯಾಸ ಮರೆಯಾಗಿ ಹೋಗುತ್ತದೆ. 'ಮೂಲಕ ಮಹಾಶಯರು' ಕವನ ಇಡೀ ಸಂಕಲನದಲ್ಲಿ ಅತ್ಯಂತ ವ್ಯಗ್ರವಾದ ರಚನೆ. ಉಗ್ರ ಟೀಕೆಯ ರೂಪದಲ್ಲೇನೆ ಇಡೀ ಕವನ ಸಾಗುತ್ತದೆ. ಇದರ ಇನ್ನೊಂದು ಮುಖವಾದ ಉಪದೇಶಾತ್ಮಕ ಸಾಲುಗಳೂ ಕೂಡಾ ಕವನದ ಕೊನೆಯ ಭಾಗದಲ್ಲಿ ಮೂಡಿ ಬರುತ್ತವೆ. ಆದರೆ, ಒಟ್ಟಾರೆಯಾಗಿ ಅಡಿಗರ ಶ್ರೇಷ್ಠಕಾವ್ಯದ ಮುಖ್ಯಗುಣವಾದ ಸಾವಯುವ ಶಿಲ್ಪದ ಗೈರುಹಾಜರಿ. ಇದೇ ಈ ಸಂಕಲನದ ಪ್ರಾತಿನಿಧಿಕ ಕವನ ಎಂದು ಹೇಳಬಹುದು.

ಇಲ್ಲೆಲ್ಲಾ ಕವನದ ಶಿಲ್ಪದೊಳಗೆ ರೂಪತಾಳದ ಅಡಿಗರ 'ವೈಚಾರಿಕತೆ'ಯೇ ವಿಜೃಂಭಿಸುತ್ತದೆ. ವ್ಯಕ್ತಿ ವಿಶಿಷ್ಟತೆ, ವ್ಯಕ್ತಿ ಸ್ವಾತಂತ್ರ್ಯ ಮುಂತಾದವುಗಳ ಬಗ್ಗೆ ಸರಳ ಭಾಷ್ಯದಂತೆ ಬಹಳಷ್ಟು ಕವನಗಳು ಕಾಣುತ್ತವೆ. ಕಾವ್ಯದ ಮಟ್ಟಿಗೆ ವಿಚಾರಗಳು ಎಷ್ಟೇ ಉನ್ನತವಾಗಿದ್ದರೂ ಅವು ಮೂರ್ತವೇ. ಓದುಗನಿಗೆ ದಟ್ಟವಾಗಿ ತಟ್ಟದ ಸಂಗತಿಗಳು ಅವು. ನಿರ್ದಿಷ್ಟ ಮೂರ್ತತೆಯಲ್ಲಿ ವಿಚಾರ, ಕಾವ್ಯದಲ್ಲಿ ಮೈ ತಾಳಬೇಕು. ತಮ್ಮ ಶ್ರೇಷ್ಠ ಕವನಗಳಲ್ಲಿ ಅಡಿಗರು ಕಾರ್ಯಕಾರಿ ರೀತಿಯಲ್ಲಿ ಸಾಧಿಸಿದ್ದು, ಆ ಘಟ್ಟಗಳಲ್ಲಿ ಹೇಳಿದ್ದು ಇದನ್ನೇ. ಆದರೆ ಇಲ್ಲಂತೂ ಆ ಆಕೃತಿ ಪ್ರಜ್ಞೆ ವಿಷಾದಮಯ ರೀತಿಯಲ್ಲಿ ಮಾಯವಾಗಿದೆ.

ವಾದದ ರೂಪವನ್ನು ಬಿಟ್ಟುಕೊಟ್ಟು ವ್ಯಾಕುಲತೆಯ ಕಡೆಗೆ ನಡೆವ ಒಂದೆರಡು ಕವನಗಳು ಈ ಕವನದಲ್ಲಿ ಮಾರ್ಮಿಕ ಯಶಸ್ಸನ್ನು ಗಳಿಸಿವೆ. 'ಕೆಸರು ತೆಗೆಯುವುದು,' 'ಮಗು' ಕವನಗಳು ಈ ರೀತಿಯವು. ಇಲ್ಲಿ ಕೂಡಾ ವಿಚಾರಗಳ ತಾರ್ತಿಕ ಮಂಥನ ನಡೆದಿದೆ. ಆದರೆ ಅಂಥ ಉಗ್ರವಾದ ಆವರಣವಿಲ್ಲ. ಸೂಕ್ಷ್ಮ ಅಂತರ್ಮುಖೀ ಶ್ರುತಿ ಈ ಕವನಗಳಿಗೊಂದು ವಿಶಿಷ್ಟ ಯಶಸ್ಸನ್ನು ನೀಡಿದೆ.

ಒಂದು ಹಂತದಿಂದಾಚೆಗೆ ವೃದ್ಧಾಪ್ಯದ ಕಡೆಗೆ ನಡೆಯುತ್ತಿದ್ದ ಹಾಗೆ ಯಾಕೆ ನಮ್ಮ ಕವಿಗಳು ಹೀಗಾಗುತ್ತಾರೆ? ಕೆಲವರಿಗೆ ಅನುಭವಗಳನ್ನು ಮೂರ್ತಗೊಳಿಸುವ, ನಿರ್ದಿಷ್ಟಗೊಳಿಸುವ ಹಠ ಹೋಗಿ ಅಮೂರ್ತ ವಿಚಾರಗಳ ಧರ್ಮದ ಬೆನ್ನು ಹತ್ತುತ್ತಾರೆ. ಅಡಿಗರು ಇದಕ್ಕಿಂತ ಭಿನ್ನ. ಆದರೆ, ಇಲ್ಲಿ ವಿಚಾರಗಳ ತಾರ್ಕಿಕ ಪೃಥಕರಣದ ಹಠ ಎರಡೂ ಕಡೆಗೆ ಅರ್ಥಪೂರ್ಣ ಕಾವ್ಯಬಂಧ ಮಾಯವಾಗುತ್ತದೆ. ಈ ಸಂಕಲನ ಅದಕ್ಕೆ ಸಾಕ್ಷಿ ಆ ಸಂಕಲನದಲ್ಲಿ ತರ್ಕ ಬಹಳ ಕಡೆಗೆ ಯಾಂತ್ರಿಕವಾಗಿ ಪ್ರಕಟವಾಗುತ್ತದೆ. ಅನ್ಯಪ್ರೀತಿ ಮತ್ತು ಸಹಾನುಭೂತಿ ನಾಪತ್ತೆಯಾಗುವುದರ ಜೊತೆಗೆ ತಮ್ಮ ಜೊತೆಗೆ ಪ್ರತಿಭೆಯನ್ನು ಕರೆದುಕೊಂಡು ಹೊರಟು ಹೋಗಿವೆ.[೧೬]

ಈ ಮೇಲಿನ ಒಂದು ಮಾದರಿಯು ಡಿ. ಆರ್. ನಾಗರಾಜ್ ಅವರ ಸಮಗ್ರ 'ಪುಸ್ತಕ ವಿಮರ್ಶಾ' ಮನೋಭಾವವನ್ನು ತಿಳಿಸದಿದ್ದರೂ ತಮ್ಮ ಕಲ್ಪನೆಯ ಸಾಹಿತ್ಯಕ ತತ್ವ ರೂಪಿಸುವ ಈ ಪುಸ್ತಕ ವಿಮರ್ಶೆಯನ್ನು ಪ್ರಭಾವಿಸಿವೆ. ಆ ಮೂಲಕ ಈ 'ಕೃತಿ ವಿಮರ್ಶೆ' ತಳೆದಿದೆ, ಅವರ ಎಲ್ಲ ವಿಮರ್ಶೆಗಳಂತೆ ಇಲ್ಲಿಯೂ ಪ್ರಾರಂಭದಲ್ಲಿ ಪಾಶ್ಚಿಮಾತ್ಯ ಚಿಂತನೆಯ ತುಣಕು ಇಣುಕುಹಾಕಿದೆ. ಈ ಕೃತಿ ವಿಮರ್ಶೆಯಲ್ಲಿ ಡಿ. ಆರ್. ನಾಗರಾಜ್ ಅವರ ಧೋರಣೆ ಮಾರ್ಕ್ಸ್‌ವಾದಿ ದೃಷ್ಟಿಕೋನದಿಂದ ಪ್ರಭಾವಿತವಾಗಿರುವುದನ್ನು ಕಾಣಬಹುದು.

ಟಿ.ಪಿ. ಅಶೋಕ ಅವರು ದೇವನೂರು ಮಹಾದೇವ ಅವರ 'ಕುಸುಮಬಾಲೆ'ಯನ್ನು ಸುಧಾದಲ್ಲಿ (೨೦.೧.೯೧) ವಿಮರ್ಶಿಸಿದರು. ಅದಕ್ಕೆ ಪ್ರತಿಕ್ರಿಯೆಯಯಾಗಿ ಅದೇ ಸುಧಾ (೨೭.೧.೯೧) ದಲ್ಲಿ 'ಹೆಬ್ಬಾಲೆ ಲಿಂಗರಾಜು' - ರಾಮನಗರ ಇವರು ಹೀಗೆ ಬರೆದರು *"ದಲಿತ ಸಾಹಿತ್ಯದ ಪರಿಕಲ್ಪನೆಯನ್ನು ಮೀರಿ ಬೆಳೆಯುತ್ತಿರುವ ಮಹಾದೇವ ಶಾಶ್ವತ ಸಾಹಿತ್ಯದಲ್ಲಿಯೇ ನಿಂತು ಜನತೆಯಿಂದ ದೂರವಾಗುತ್ತಾರೆ. ಸಾಹಿತ್ಯಾಸಕ್ತರ, ವಿಮರ್ಶಕರ ಬಾಯೊಂಬುಲವಾಗುತ್ತಿರುವ ಇವರು ದಲಿತರ ಸಂತನಾಗುತ್ತಾ ಹೋಗುತ್ತಾರೆ. ಅವರ ಕೊಡುಗೆ ಹಾಗೂ ಮಿತಿಯನ್ನು ಅಶೋಕರು ಗುರುತಿಸಿದ್ದಾರೆ. ಅದು ನಿಜವಾಗಿ ತೂಗಿ ನೋಡುವ ಮೌಲ್ಯವಾಗುತ್ತಿತ್ತು. ಬೆರಳೆಣಿಕೆ ಮಂದಿಗೆ ಸಂವಹನವಾಗುವ ಹಾಗೆ ಬರೆದರೆ ಅದು ಸಾರ್ಥಕತೆಯನ್ನು ಪಡೆದಿದ್ದರೂ, ಜನತೆಯ ದೃಷ್ಟಿಯಿಂದ ತಿರಸ್ಕಾರಕ್ಕೆ ಒಳಪಡಿಸುತ್ತದೆ."*[೧೭]

ಈ ಮೇಲಿನ ಮಾತುಗಳು ಸೂಚಿಸುವಂತೆ ಕೃತಿ ವಿಮರ್ಶೆಯನ್ನು ಮತ್ತೊಬ್ಬ ಪುಸ್ತಕ ವಿಮರ್ಶಕರು ಸಮರ್ಥಿಸುತ್ತಲೇ ಸಂವಹನ ಸಾಧ್ಯತೆಯನ್ನಿಟ್ಟು ಚರ್ಚಿಸುತ್ತಾರೆ. ಪ್ರಾರಂಭದ ಪುಸ್ತಕ ವಿಮರ್ಶಕರ ನಿಲುವನ್ನು ಆಕ್ಷೇಪಿಸುವ ಧಾಟಿಯಲ್ಲಿ ಎರಡನೇ ಪುಸ್ತಕ ವಿಮರ್ಶಕರು ಪ್ರಶ್ನಿಸದಿದ್ದರೂ, ಮೊದಲ ಪುಸ್ತಕ ವಿಮರ್ಶಕರ ನಿಲುವನ್ನು ಒಪ್ಪಿತ ನೆಲೆಯಲ್ಲಿ ಪ್ರಶ್ನಿಸುತ್ತಾರೆ. ಅಂದರೆ ಲೇಖಕರು ತಮಗೆ ತಾವೇ ತಂದೊಡ್ಡುಕೊಳ್ಳುವ 'ಸಂತ'ನ ಸ್ಥಿತಿ ಸ್ಥಾಪಕತ್ವ ಇಡೀ ಜನಾಂಗದ ಅಭಿವ್ಯಕ್ತಿಗೆ ಮಿತಿಯೊಡ್ಡುತ್ತದೆ ಎಂಬುದನ್ನು ಸಮರ್ಥಿಸುತ್ತಾರೆ. ಅದರ ಜೊತೆಯಲ್ಲಿಯೇ ಸಾರ್ಥಕತೆ ಮತ್ತು ಜನತೆಯ ದೃಷ್ಟಿಯ ಬಗೆಗೆ ಬಹಳ ಮಹತ್ವದ ಪ್ರಶ್ನೆ ಎತ್ತುತ್ತಾರೆ. ಕೃತಿ ಸಾರ್ಥಕತೆ ಪಡೆದುಕೊಂಡರೆ ಜನತೆಯ ದೃಷ್ಟಿಯಿಂದ ದೂರ ಸರಿಯುವ ಸಂಭವವಿರುತ್ತದೆ, ಎಂಬುದನ್ನು ಹೇಳುತ್ತಿದ್ದಾರೆ.

ಈ ಮಾತುಗಳು ಪುಸ್ತಕ ವಿಮರ್ಶಕರ ಮನೋಭಾವವನ್ನು ಅನಾವರಣ ಮಾಡುತ್ತದೆ. ಒಂದು ಕೃತಿ ಕುರಿತು ಒಬ್ಬೊಬ್ಬ ವಿಮರ್ಶಕರ ನಿಲುವುಗಳೇನು? ಆ ಕೃತಿ ಲೇಖಕನ ಬಗೆಗೆ ಪುಸ್ತಕದ ಅಭಿಪ್ರಾಯವೇನು ಎಂಬ ನಿಲುವುಗಳು ಪುಸ್ತಕ ವಿಮರ್ಶೆಯಲ್ಲಿ ವ್ಯಕ್ತವಾಗುತ್ತವೆ.

೬.೩.೩. ಓದುಗರಲ್ಲಿ ವಿಮರ್ಶಾ ಪ್ರಜ್ಞೆ ಬೆಳೆಸುತ್ತದೆ

ಒಂದು ಕೃತಿ ಪ್ರಕಟವಾದಾಗ ಓದುಗರು ಆ ಕೃತಿಯ ಬಗೆಗೆ ಆಸಕ್ತಿ ತಾಳುವುದು ಸಹಜ. ಆದರೆ ಬರುತ್ತಿರುವ ಆಗಾಧ ಕೃತಿಗಳೆಲ್ಲವನ್ನು ಕೊಂಡು ಓದಲು ಸಮಯ ಮತ್ತು ಹಣ ಇಲ್ಲ. ಅದಕ್ಕಾಗಿ ಅವರು 'ಆಯ್ಕೆ' ಮಾಡಿಕೊಳ್ಳುವಾಗ ಅವರು ಯಾವ ಮಾದರಿಯನ್ನು ತಾವೇ ಸೃಷ್ಟಿಸಿಕೊಳ್ಳಬೇಕು ಎಂದು ಯೋಚಿಸುತ್ತಾರೆ. ತಾವು ಖರ್ಚು ಮಾಡುವ ಹಣದಿಂದ ಸ್ವಲ್ಪವಾದರೂ ಲಾಭ ಪಡೆಯುವ ಆಸೆ ಅವರಿಗಿರುತ್ತದೆ. ಆ ಲಾಭ ತಾವು ಕೊಂಡು ಓದುವ ಕೃತಿಯಿಂದ ಪಡೆಯುವ ವಿಚಾರ, ಚಿಂತನೆಗಳ ರೂಪದಲ್ಲಿ ಇರುತ್ತದೆ. ಏಕೆಂದರೆ ಕೃತಿಯ ಬಗೆಗೆ ಯಾವುದೇ ಪೂರ್ವಾಪರ ಹಿನ್ನೆಲೆಗಳನ್ನು ತಿಳಿಯದೆ ಕೃತಿಯನ್ನು ಕುಳಿತು ಓದಿದಾಗ ಅವರು ನಿರೀಕ್ಷಿಸಿದಷ್ಟು ತೃಪ್ತಿ ಸಿಗದಿದ್ದಾಗ ತಾವು ಖರ್ಚು ಮಾಡಿದ ಸಮಯ ಹಣ ಎರಡೂ ನಿರರ್ಥಕವಾದವು ಎಂದು ಮುಂದೆ ಇತರ ಕೃತಿಗಳನ್ನು ಓದದೇ ದಾರಿ ತಪ್ಪಬಹುದು. ಆದರೆ 'ಪುಸ್ತಕ ವಿಮರ್ಶೆ' ಯೆಂಬ ಪ್ರಕಾರವಿದ್ದಾಗ ಬಂದಂಥ ಕೃತಿಗಳು ಪರಿಚಯ ಎಂಬ ಪ್ರಾಥಮಿಕ ಸುಳುಹು ದೊರೆಯುತ್ತದೆ. ಆಗ ಆಕೃತಿಯ ವಿವರಗಳು ದೊರೆಯುತ್ತವೆ. ಆಗ ಕೊನೆ ಘಟ್ಟದಲ್ಲಾದರೂ ಆ ಕೃತಿ ಓದಬಹುದು, ಓದಬಾರದು ಎಂಬುದನ್ನಾದರೂ ನಿರ್ಧರಿಸಬಹುದು. ಪುಸ್ತಕ ವಿಮರ್ಶಕರು ಕೃತಿ ಕುರಿತು ಎಂಥ ನಿಲುವನ್ನು ಹೊಂದಿದ್ದಾರೆ ಎನ್ನುವುದಕ್ಕಿಂತ ಈ ಕೃತಿ ಎಂಥ ವಿವರಗಳನ್ನು ಒಳಗೊಂಡಿದೆ ಎಂಬುದರ ವಿವೇಚನೆಯಿಂದ ಓದಲು ತೊಡಗಬಹುದು. ಈ ಪುಸ್ತಕ ವಿಮರ್ಶೆಯಿಂದ ಅವರಿಗೆ ಎರಡು ರೀತಿಯ ಅನುಕೂಲಗಳು ಲಭಿಸುತ್ತವೆ. ಒಂದು ಹೊಸ ಕೃತಿಯ ಬಗೆಗೆ ವಿವರ, ಜ್ಞಾನಗಳು ದೊರೆತರೆ, ಇನ್ನೊಂದು ಆ ಕೃತಿಯ ಬಗೆಗೆ ಆಗಲೇ ಇತರರು ಯಾವ ರೀತಿ ನೋಡಿ ಗ್ರಹಿಸುತ್ತಾರೆ. ಹಾಗಾದರೆ ನನ್ನ ಚಿಂತನೆ ಇನ್ನೊಂದು ರೀತಿ ಆಗಿರಬಹುದೇ ಎಂಬ ನಿಲುವಿನಲ್ಲಿ ಕೃತಿ ಓದಲು ಪುಸ್ತಕ ವಿಮರ್ಶೆ (ವಿಮರ್ಶೆ) ಈ ಸ್ವರೂಪದ್ದು. ಇದು ಸಾಮಾನ್ಯ ನೆಲೆಯ ಓದುಗರಿಗೂ ಅರ್ಥವಾಗುವಂತೆ ಕಂಡರೂ ಇದರೊಳಗೆ ಆ ಕೃತಿ ಕೊಡುವ ಒಳನೋಟಗಳಿಂದ ಅನಾವರಣ ಮಾಡುತ್ತ ಲೇಖನದ ಸ್ವರೂಪ ಪಡೆದಿದೆ. ಇಲ್ಲಿ ವಿಮರ್ಶಿಸಿ ಓದುಗರ ವಲಯವನ್ನು ವಿಸ್ತರಿಸುತ್ತ ಸಾಗುವ ಶಕ್ತಿಯನ್ನು ಈ ಲೇಖನ ಪಡೆದಿರುವುದನ್ನು ಗಮನಿಸಬಹುದು, ಇಂಥ ಪುಸ್ತಕ ವಿಮರ್ಶೆಗಳಿಂದ ಓದುಗರು ಓದುವ ಗೀಳನ್ನು, ಓದುವ ಹವ್ಯಾಸವನ್ನು ವಿಸ್ತರಿಸುವ ಶಕ್ತಿಯನ್ನು ಪಡೆಯುತ್ತದೆ.

೬.೩.೪. ಕೃತಿಯ ಪ್ರಕಾರದ ಲೇಖನ ಸಮಗ್ರ ಕೃತಿಗಳ ಚರ್ಚೆಗೆ ಎಡೆಮಾಡಿಕೊಡುತ್ತದೆ

ಪುಸ್ತಕ ವಿಮರ್ಶೆಯ ವೇಗ ಮತ್ತು ಮಿತಿ ಎರಡರ ಸಂಕೀರ್ಣ ಸ್ಥಿತಿಯಿಂದ ರೂಪುಗೊಳುವುದರಿಂದ ಅದಕ್ಕೆ ತತ್‌ಕ್ಷಣದಲ್ಲಿ ತನ್ನ ಅಭಿವ್ಯಕ್ತಿಯನ್ನು ರೂಪಿಸಬೇಕು. ಹಾಗೇ ಓದುಗರಿಗೆ ತಲುಪಿಸಬೇಕೆಂಬ ಮೂಲೋದ್ದೇಶದಿಂದ ಹುಟ್ಟುವುದರಿಂದ ಅದರಲ್ಲಿ ಚರ್ಚೆಯಾಗಬೇಕಾದ ವಿಷಯವನ್ನು ಗಮನಿಸದೆ ಕೇವಲ ಕೃತಿಯಷ್ಟೇ ಮುಖ್ಯವಾಗುತ್ತದೆ. 'ಪರಿಚಯ' ಮಾಡುವ ಜವಾಬ್ದಾರಿ ಪುಸ್ತಕ ವಿಮರ್ಶೆಗೆ ಇರುವುದರಿಂದ ಆ ಪರಿಚಯ ಮೊದಲ ಕರ್ತವ್ಯವಾಗಿರುತ್ತದೆ. ಅದರ ನಂತರ ಚರ್ಚೆ ವಿಶ್ಲೇಷಣೆ

ನಡೆಸಬೇಕಾಗುತ್ತದೆ. ಚರ್ಚೆ ಮತ್ತು ವಿಶ್ಲೇಷಣೆ ನಡೆಸುವುದು ಪುಸ್ತಕ ವಿಮರ್ಶೆಯಲ್ಲಿ ಎರಡನೇ ಹಂತದ ರೂಪವಾಗಿರುತ್ತದೆ. ಈ ಕಾರಣಗಳಿಂದ ವಿಮರ್ಶೆಯಲ್ಲಿ ಚರ್ಚೆ ತುಂಬಾ ಕಡಿಮೆಯಿರುತ್ತದೆ. ಹಾಗಾಗಿ ಕೃತಿ ಲೇಖಕರ ಇತರ ಕೃತಿಗಳ ಬಗೆಗೂ ಚರ್ಚೆ ಮಾಡುವುದು ಮುಖ್ಯವಲ್ಲವೆಂದು ಕಡೆಗಣಿಸುವ ಸಾಧ್ಯತೆಯು ಇದೆ. ಆದರೆ ಕೆಲವೊಮ್ಮೆ ಲೇಖಕರ ಸಮಗ್ರ ಕೃತಿಗಳ ಬಗ್ಗೆಯೂ ಸೂಕ್ಷ್ಮವಾಗಿ ವಿಶ್ಲೇಷಿಸುವ ಒಂದು ಪುಸ್ತಕ ಮಾದರಿಯು ಅಲ್ಲಲ್ಲಿ ರೂಪುಗೊಂಡಿವೆ. ಆದರೆ ಇಂಥವುಗಳು ಯಾರು ಬರೆಯುತ್ತಾರೆ? ಮತ್ತು ಯಾರ ಪುಸ್ತಕಗಳಿಗೆ ಬರೆಯುತ್ತಿದ್ದಾರೆ ಎಂಬುದರ ಮೇಲೆ ನಿಂತಿರುತ್ತದೆ. ಕೆಲವೊಮ್ಮೆ ಪತ್ರಿಕೆಗಳ ಸ್ಥಳಮಿತಿಯನ್ನು ಮೀರುವ ಕ್ರಿಯೆಯನ್ನು ಅವಲಂಬಿಸಿರುತ್ತದೆ. ಏಕೆಂದರೆ ಪ್ರತಿಯೊಂದು ಪತ್ರಿಕೆಗಳು ಪುಸ್ತಕ ವಿಮರ್ಶೆಗೆ ಇಂತಿಷ್ಟು ಎಂದು ನಿರ್ದಿಷ್ಟ ಸ್ಥಳ ಮಿತಿಯನ್ನು ನೀಡಿರುತ್ತಾರೆ. ಅಷ್ಟೇ ಸ್ಥಳದಲ್ಲಿ ಪುಸ್ತಕ ವಿಮರ್ಶಕರು ತಮಗನಿಸಿದ್ದ ವಿವರಗಳನ್ನು ಹೇಳ ಬೇಕಾಗಿರುತ್ತದೆ. ಆಗ ಸಹಜವಾಗಿ ಪುಸ್ತಕ ಕೃತಿಗಷ್ಟೇ ತಮ್ಮ ಗಮನವನ್ನು ಕೇಂದ್ರಿಕರಿಸುತ್ತಾರೆ. ಕೆಲವೊಮ್ಮೆ ವೈಯಕ್ತಿಕವಾದ ತೀರ್ಮಾನಗಳು ಈ ರೀತಿಯ ಕೃತಿ ಕೇಂದ್ರಕ್ಕೆ ಸೀಮಿತವಾಗುತ್ತವೆ.

(ಅ) ಸಾಮಾನ್ಯರು ಭಾಗವಹಿಸಬೇಕಾದ ಕ್ಷೇತ್ರ

ಹಿಂದಿನಿಂದಲೂ ಸಾಹಿತ್ಯವೆಂಬುದು ವಿಶಿಷ್ಟೀಕರಣಗೊಂಡು ಕೆಲವರಿಗಾಗಿ ಮೀಸಲಾಗಿದೆ. ಅಂದರೆ ಸಾಹಿತ್ಯ ಸೃಷ್ಟಿ ಕೆಲವರಷ್ಟೇ ಮಾಡಬೇಕು. ಉಳಿದವರು ಅದನ್ನು ಆರಾಧಿಸಬೇಕಷ್ಟೇ ಎಂಬ ಭಾವ ಬೆಳೆದು ಬಿಟ್ಟಿದೆ. ನಮ್ಮ ಸಾಹಿತ್ಯದ ಯಾವುದೇ ಪ್ರಕಾರಗಳನ್ನು ತೆಗೆದುಕೊಂಡರೂ ಅದನ್ನು ಯಾರೂ ಬೇಕಾದರೂ ಬರೆಯಬಹುದೆಂಬ ನಿಲುವು ಇಲ್ಲ. ಕತೆಗಾರ ಕತೆಯನ್ನು, ಮಕ್ಕಳ ಸಾಹಿತಿ, ಮಕ್ಕಳ ಸಾಹಿತ್ಯವನ್ನು, ವಿಮರ್ಶೆಯನ್ನು ಪರಿಣಿತ ವಿಮರ್ಶಕರೇ ಬರೆಯಬೇಕೆಂಬ ನಿರ್ಬಂಧ ಸೃಷ್ಟಿಯಾಗಿದೆ. ಈ ಕಾರಣದಿಂದ ಸಾಹಿತ್ಯದ ಯಾವ ಪ್ರಕಾರಗಳಿಗೂ ಇತರರೂ ಅತಿಕ್ರಮ ಪ್ರವೇಶ ಮಾಡುವಂತಿಲ್ಲ ಎಂಬ ಭಾವ ಬೆಳೆದಿತ್ತು . ಇದೊಂದು ರೀತಿಯ ಬ್ರಾಹ್ಮಣ್ಯ ಸ್ಥಿತಿಯೇ ಆಗಿದೆ. ಕೆಲವು ಕಾರ್ಯಗಳು ಕೆಲವರಿಗಷ್ಟೇ ಮೀಸಲು ಮಾಡಿಕೊಂಡು ಬಂದಿದೆ. ಆದರೆ 'ಪುಸ್ತಕ ವಿಮರ್ಶೆ' ಯನ್ನು ಯಾರೂ ಬೇಕಾದರೂ ಬರೆಯಬಹುದಾದ್ದರಿಂದ ಅದಕ್ಕೊಂದು ಪ್ರಜಾಪ್ರಭುತ್ವದ ಸ್ವರೂಪ ದೊರಕಿದೆ. ಈಗ ಬರುತ್ತಿರುವ ಪುಸ್ತಕ ವಿಮರ್ಶೆಯನ್ನು ಗಮನಿಸಿದರೆ ಅಲ್ಲಿ ಬರೆಯುತ್ತಿರುವರಲ್ಲಿ ಅನೇಕರು ಸಾಹಿತ್ಯದಲ್ಲಿ ಹೆಸರು ಮಾಡಿರುವವರಲ್ಲ ಹಾಗೆಯೇ ಅವರು ಮುಂದೆ ವಿಮರ್ಶಕರಾಗಿ ಬೆಳೆಯುವರೆಂಬ ಖಚಿತತೆಯಿಲ್ಲ. ಆದರೂ ವಿವಿಧ ಕ್ಷೇತ್ರದಿಂದ ಬಂದಿರುವುದು, ಪತ್ರಕರ್ತರು, ವರದಿಗಾರರು, ಕೆಲವೊಮ್ಮೆ ಪತ್ರಿಕಾ ಸಂಪಾದಕರು ಬರೆಯುತ್ತಾರೆ. ಕನ್ನಡ ವಿಶ್ವವಿದ್ಯಾಲಯದ 'ಪುಸ್ತಕ ಮಾಹಿತಿ' ಯಲ್ಲಿ ಬರೆಯುತ್ತಿರುವ ಪಿಹೆಚ್. ಡಿ., ವಿದ್ಯಾರ್ಥಿಗಳು ಹೀಗೆ ಮುಂತಾದವರು ಬರೆಯುತ್ತಿದ್ದಾರೆ. ಇಲ್ಲಿ ಪುಸ್ತಕ ವಿಮರ್ಶೆ ಬರೆಯಲಿಕ್ಕೆ 'ಅಪಾರ ಓದು' ಏನೂ ಅಗತ್ಯವಿಲ್ಲದ್ದರಿಂದ, ತಮ್ಮ ಕ್ಷೇತ್ರವಲ್ಲದೆ, ಅದಕ್ಕೆ ವಿರುದ್ಧವಾದ ಕ್ಷೇತ್ರ ಪುಸ್ತಕವನ್ನು 'ಪುಸ್ತಕ ವಿಮರ್ಶೆ' ಮಾಡಬಲ್ಲರು. ಅಂದರೆ ವಿಜ್ಞಾನ, ಆಯುರ್ವೇದ ಪುಸ್ತಕಗಳನ್ನು ಸಾಹಿತ್ಯ ಕ್ಷೇತ್ರದವರು ಮಾಡಬಹುದು. ಆ ಕ್ಷೇತ್ರದ ಬಗೆಗೆ ಅವರಿಗೆ ತಿಳಿವು, ಸಂಬಂಧ, 'ಪುಸ್ತಕ

ವಿಮರ್ಶೆ'ಗೆ ಬೇಕಾಗಿಲ್ಲ. ಅದು ಕೃತಿ ಒಳಗೊಂಡ ವಿವರಗಳನ್ನು ಹೇಳುವುದರಿಂದ ಯಾರೂ ಬೇಕಾದರೂ ಬರೆಯುವ 'ಮುಕ್ತ' ಅವಕಾಶವನ್ನು ಕಲ್ಪಿಸಿಕೊಟ್ಟಿದೆ.

ಕನ್ನಡದ ಇನ್ನಾವುದೇ ಸಾಹಿತ್ಯ ಪ್ರಕಾರದಲ್ಲಿ ಈ ರೀತಿಯ ಮುಕ್ತ ಅವಕಾಶವಿಲ್ಲ. ಆ ಪ್ರಕಾರಗಳಲ್ಲಿ ಬರೆಯುವಾಗ ಅವರಿಗೆ ವಿಶೇಷ ಪರಿಣಿತಿ, ಜ್ಞಾನ ಮುಂತಾದವುಗಳನ್ನು ಆ ಪ್ರಕಾರಗಳು ಅಪೇಕ್ಷಿಸುತ್ತವೆ. ಒಂದು ನಿರ್ಬಂಧಿತ ವಲಯಗಳಾಗಿ ಪ್ರಕಾರಗಳು ನಿರ್ಮಾಣ ಮಾಡಿಕೊಂಡಿವೆ. 'ಸಾಹಿತ್ಯವೆಂಬುದು ನಿರ್ಬಂಧಿತವಾದುದು ಅದು ವಿಶಿಷ್ಟೀಕರಣವಾದುದು ಕೆಲವರಿಗೆ ಮೀಸಲಾದುದು' ಎಂಬ ಗ್ರಹಿಕೆಯನ್ನು ಒಡೆಯುತ್ತಲೇ ಪುಸ್ತಕ ವಿಮರ್ಶೆ 'ಡೆಮಾಕ್ರೆಟಿಕ್' ಆದ ಹೊಣೆಯನ್ನು ಆಶಯವನ್ನು ಹೊತ್ತುಕೊಂಡಿದೆ. ಇದರಿಂದ ಸಾಹಿತ್ಯದ 'ವಿಶಿಷ್ಟೀಕರಣ' ಕಲ್ಪನೆಯನ್ನು ಛಿದ್ರಗೊಳಿಸಲಾಗಿದೆ. ಇದು ಸಾಹಿತ್ಯದಲ್ಲಿ ಮಹತ್ತರ ಬದಲಾವಣೆಯಾಗಿದೆ. ಯಾರೂ ಬೇಕಾದರೂ ಬರೆಯಬಹುದೆಂಬ ಮುಕ್ತ ಅವಕಾಶ ಬೇರೆ ಇನ್ನಾವುದೇ ಸಾಹಿತ್ಯ ಪ್ರಕಾರಕ್ಕೆ ಇಲ್ಲದೆ 'ಪುಸ್ತಕ ವಿಮರ್ಶೆ'ಗೆ ಇರುವುದು 'ಪುಸ್ತಕ ವಿಮರ್ಶೆ'ಯ 'ಡೆಮಾಕ್ರೆಟಿಕ್' ಸ್ವರೂಪದಿಂದಲೇ ಆಗಿದೆ.

ಸಾಹಿತ್ಯ ಅಕಾಡೆಮಿ ತನ್ನ ಪ್ರಶಸ್ತಿಗಾಗಿ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಅದು ನಿರ್ದಿಷ್ಟ ಪರಿಣಿತ ವಿಮರ್ಶಕರಲ್ಲಿಗೆ ಕಳುಹಿಸುವುದಿಲ್ಲ. ಅದು ವಿಮರ್ಶಕರಲ್ಲದವರಿಗೂ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಕೇಳುತ್ತದೆ. ಅಲ್ಲಿ ಆ ಕೃತಿಗಳಿಗೆ ಅಭಿಪ್ರಾಯಗಳನ್ನು ತಿಳಿಸುವವರು ವಿಮರ್ಶಕರೆಂದು ಪ್ರಸಿದ್ಧಿ ಪಡೆದವರಲ್ಲ. ಅವರು ಕತೆಗಾರರೋ ಕವಿಗಳೋ ಅಥವಾ ಬೇರಾವುದೋ ಕ್ಷೇತ್ರದಲ್ಲಿ ಕೆಲಸ ಮಾಡುವವರು ಆಗಿರುತ್ತಾರೆ. ಒಂದು ಉದಾಹರಣೆಯನ್ನು ಗಮನಿಸುವುದಾದರೆ ಸಾಹಿತ್ಯ ಅಕಾಡೆಮಿಯು ೨೦೦೦ದಲ್ಲಿ ವಿವಿಧ ಪುಸ್ತಕಗಳಿಗೆ ಕೊಡಮಾಡಿದ ಬಹುಮಾನಿತ ಕೃತಿಗಳನ್ನು 'ಜನಪರ ಕರ್ನಾಟಕ'ವು ಪರಿಚಯಿಸಿರುವ ಕೆಲವು ಮಾದರಿಗಳನ್ನು ನೋಡಬಹುದು.[೮]

ಜಂಗಮದ ಬದುಕು (ನಾಟಕ, ಪ್ರಸನ್ನ)

೧. ಶ್ರೀ ಪ್ರಸನ್ನರ 'ಜಂಗಮದ ಬದುಕು' ಮೂರು ಅಂಕಣಗಳ ನಾಟಕ. ಮೂರು ಪಾತ್ರಗಳ ನಾಟಕ. ಸಮಕಾಲೀನ ವಸ್ತುವುಳ್ಳ ನಾಟಕ, ಪ್ರಕರಣದಲ್ಲಿ ಇತಿಹಾಸದಲ್ಲಿ ಸಮಕಾಲೀನತೆಯನ್ನು ಹುಡುಕಿಕೊಂಡು ಅಲೆಯುವ ದಣಿವು ಇಲ್ಲಿ ಕಂಡುಬರುವುದಿಲ್ಲ, ನಗರ ಪ್ರಜ್ಞೆಯಲ್ಲಿ ; ಗ್ರಾಹಕ ಸಂಸ್ಕೃತಿಯಲ್ಲಿ, ಅಲೆಮಾರಿ ಬದುಕಿನಲ್ಲಿ ಸಂಕುಚಿತ ವಿಶ್ವದ ಇಕ್ಕಟಿನಲ್ಲಿ ವ್ಯಕ್ತಿತ್ವಕ್ಕೆ ಪರದಾಡುವ ಸ್ಥಿತಿ-ಗತಿಯ ಚಿತ್ರ ನಾಟಕದ ಉದ್ದಕ್ಕೂ ಸಮರ್ಥವಾಗಿ ಕಣ್ಣಿಗೆ ಕಟ್ಟುವಂತೆ ಕಾಡುವಂತೆ ಹರಡಿಕೊಂಡಿವೆ. ರಂಗಭೂಮಿಗೆ ಅನುಗುಣವಾಗಿ ನಾಟಕದ ಸಾಹಿತ್ಯ ಸಹಾಯಕವಾಗಿದೆ. ಇಡೀ ನಾಟಕವನ್ನು ಮನಃಪಟಲದ ಮೇಲೆ ತಂದು ಕೊಂಡಾಗ ಜಂಗಮ ಬದುಕಿನ ಒಂಟಿಧ್ವನಿ ಎದುರಾಗುತ್ತದೆ. ಅರ್ಥಪೂರ್ಣ ಸಮಕಾಲೀನ ನಾಟಕಗಳು ಅಪರೂಪವಾಗಿರುವ ಸಂದರ್ಭದಲ್ಲಿ 'ಜಂಗಮ ಬದುಕು' ಸ್ವಾಗತಾರ್ಹ ಸೇರ್ಪಡೆ. - ಬಿ. ಶ್ರೀನಿವಾಸರಾಜು.

೨. 'ಸೃಜನಶೀಲ ಲೇಖಕರೂ ರಂಗ ಕರ್ಮಿಯೂ ಆದ ಪ್ರಸನ್ನ ಅವರ ಆರನೆಯ ನಾಟಕ 'ಜಂಗಮದ ಬದುಕು' ತಮ್ಮ ಮೊದಲ ನಾಟಕಗಳಿಗಿಂತ ಭಿನ್ನವಾದ ಆಶಯ, ಉದ್ದೇಶಗಳನ್ನು ಲೇಖಕರು ಈ ನಾಟಕದಲ್ಲಿ ಪ್ರಕಟಿಸಿದ್ದಾರೆ. ಸಾಮುದಾಯಿಕ ಜೀವನ ಕ್ರಮ ಸಾಮಾಜಿಕ ಬದಲಾವಣೆ, ಮನುಷ್ಯ - ಸಮಾಜ ಸಂಬಂಧದ ಸ್ಥಿತ್ಯಂತರ ಮುಂತಾದ

ಸಂಗತಿಗಳ ಬಗ್ಗೆ ಗಾಢ ಒಲವನ್ನು ಪ್ರಕಾಶಪಡಿಸಿದ್ದ ಪ್ರಸನ್ನ ಈ ನಾಟಕದಲ್ಲಿ ಬಿಡಿ ಬಿಡಿ ವ್ಯಕ್ತಿಗಳ ಅಂತರಂಗವನ್ನು ಇಣುಕಿ ನೋಡಿದ್ದಾರೆ. ಮೂರೇ ಪಾತ್ರಗಳು ಇದರಲ್ಲಿರುವುದು ಆಕಸ್ಮಿಕವೇನಲ್ಲ. ಏಕೆಂದರೆ ಪ್ರಸನ್ನ ಅವರಿಗೆ ಗುಂಪು, ಸಮುದಾಯ, ಸಮಾಜಗಳಿಗಿಂತ ವ್ಯಕ್ತಿಯೇ ಪ್ರಮುಖ ಆಕರ್ಷಣೆ. ನಗರದ ಶ್ರೀಮಂತ ಹಿನ್ನೆಲೆಯ ಮೂವರ (ಇಬ್ಬರು ಗಂಡು ಒಬ್ಬಳು ಹೆಣ್ಣು - ಎಂದಿನ ತ್ರಿಕೋಣ) ಪರಸ್ಪರ ಸಂಬಂಧಗಳನ್ನು ಈ ನಾಟಕ ಪರಿಶೀಲಿಸುತ್ತದೆ. ಅವರ ತೆಳುವಾದ ಸಂಬಂಧಗಳು, ಲೈಂಗಿಕ ಆಕರ್ಷಣೆ ವಿಕರ್ಷಣೆ ಹಿನ್ನೆಲೆ, ಕನಸು, ನಿರಾಸೆ, ಹೊಂದಾಣಿಕೆ, ದಾಂಪತ್ಯ ಬಿರುಕು, ನೈತಿಕತೆ ಎಲ್ಲವೂ ಇಲ್ಲಿವೆ. ಒಟ್ಟಾರೆಯಾಗಿ ಇದೊಂದು ನವ್ಯ ಸಾಹಿತ್ಯ ಶೇಷವಾಗಿ ಕಾಣುತ್ತದೆ. ನವ್ಯ ಸಾಹಿತ್ಯ ಕಾಲದಲ್ಲಿ ಪ್ರಮುಖವಾಗಿ ಹೊರಬಿದ್ದ ಕಥೆಗಳ ನೆರಳಿನಂತೆ ಈ ನಾಟಕ ರಚಿತವಾಗಿದೆ. ವಿಪರೀತವಾದ ಆತ್ಮರತಿ ಮತ್ತು ಅತಿ ಎನಿಸುವ ಅಂತರ್ಮುಖತೆ ನಾಟಕವನ್ನು ದುರ್ಬಲಗೊಳಿಸಿವೆ. ಒಂಟಿತನ, ಅನಾಥ ಪ್ರಜ್ಞೆ,ಒಳತೋಟಿ ಇವೆಲ್ಲ ನಾಟಕದಲ್ಲಿ ಮತ್ತೆ ಮೂಡಿ ಬಂದಿರುವುದೇ ಅಚ್ಚರಿ ಹುಟ್ಟಿಸುತ್ತದೆ. ನಾಟಕದ ಸಮಸ್ಯೆ ಆದರ ನಿರ್ವಹಣೆ ಮುಕ್ತಾಯ ಎಲ್ಲವೂ ಅತೃಪ್ತಿಯನ್ನು ಹುಟ್ಟಿಸುತ್ತದೆ. ಆಳಕ್ಕಿಳಿಯದ ಅನುಭವ ಈ ಅತೃಪ್ತಿಯನ್ನು ಹುಟ್ಟಿಸುತ್ತದೆ. ಆಳಕ್ಕಿಳಿಯದ ಅನುಭವ ಈ ಅತೃಪ್ತಿಯನ್ನು ಇನ್ನಷ್ಟು ತೀವ್ರಗೊಳಿಸುತ್ತದೆ. - ಎ. ಆರ್. ನಾಗಭೂಷಣ.

೩. ನಗರ ಜೀವನದ ಮೇಲುವರ್ಗದ ಕೌಟುಂಬಿಕ ಜೀವನದ ವಾಸ್ತವ ದರ್ಶನ 'ಜಂಗಮದ ಬದುಕು' ನಾಟಕದಲ್ಲಿದೆ. ನಗರದ ಜನರು ಇರುವುದೇ ಬೇರೆ ತೋರಿಸುವುದೇ ಬೇರೆ, ನಗರ ಪರಿವಾರಗಳಲ್ಲಿ ಇದು ತೀರ ಸಾಮಾನ್ಯ.

ಆತ, ಆಕೆ ಮತ್ತು ಶಿವು ಎಂಬ ಮೂರು ಪಾತ್ರಗಳ ಸುತ್ತ ನಾಟಕ ಸಾಗುತ್ತದೆ. ಇಲ್ಲಿನ ಆತ, ಆಕೆ, ಶಿವು ಯಾರಾದರೂ ಆಗಬಹುದು. ಮಠದ ಪರಿಸರದಲ್ಲಿ ಬೆಳೆದ ಶಿವುನ ಸುಂದರ ಅಂತರಂಗದವರೆಗೆ ತಲುಪುವಷ್ಟು ಆಕೆ ಸಂಸ್ಕಾರವಂತಳಲ್ಲ. ಅಂತೆಯೇ, ಶಿವು ಹತಾಶ ಗಂಡು ಶೋಷಕನಾಗಿ ಚಿತ್ರಗೊಂಡಿದ್ದಾನೆ. ಇನ್ನು ಆತನಿಗೆ ಮುಂಬೈಯಂಥ ಕಿಷ್ಕಿಂದೆಯಲ್ಲಿನ ಏಕಾಂತ ಜೀವನ ಇಷ್ಟವೆನಿಸುತ್ತದೆ. ಆಕೆ ಆತನೊಂದಿಗೆ ಸ್ವಚ್ಛಂದವಾಗಿ ಓಡಾಡಿಕೊಂಡಿದ್ದರೂ ಅಂತಿಮವಾಗಿ ಕೈಹಿಡಿದ ಪತಿ ಶಿವಕುಮಾರನೊಂದಿಗೆ ಬದುಕಲು ಇಷ್ಟಪಡುತ್ತಾಳೆಂಬುದೇ ನಾಟಕದ ವೈಶಿಷ್ಟ್ಯ.

ಸಮಕಾಲೀನ ವಸ್ತುವನ್ನು ಬಳಸಿಕೊಂಡು ನಾಟಕ ರಚಿಸುವುದು ಕಷ್ಟವಾದರೂ ಪ್ರಸನ್ನ ಅವರು ಈ ಪ್ರಯತ್ನದಲ್ಲಿ ಸಫಲರಾಗಿದ್ದಾರೆ. ಸಮಕಾಲೀನ ವಸ್ತುವನ್ನುಳ್ಳ ನಾಟಕಗಳು ನಿರ್ಲಕ್ಷ್ಯಕ್ಕೆ ಒಳಗಾಗುತ್ತಿರುವ ಇಂದಿನ ಸಂದರ್ಭದಲ್ಲಿ ಪ್ರಸನ್ನ ನೀಡಿದ ನಾಟಕ ತನ್ನ ವಿಶೇಷತೆಗಳಿಂದ ಗಮನ ಸೆಳೆಯುತ್ತದೆ. ಅಂತೆಯೇ 'ಜಂಗಮದ ಬದುಕು' ಶ್ರೇಷ್ಠ ನಾಟಕವಾಗಬಲ್ಲ ಎಲ್ಲ ಅರ್ಹತೆಗಳನ್ನು ಹೊಂದಿದೆಯನ್ನಬೇಕು. - ಡಾ. ಬಸವರಾಜ ಜಗಜಂಪಿ

'ಪುಸ್ತಕ ಮಾಹಿತಿ'ಯಲ್ಲಿನ ಒಂದೆರಡು ಮಾದರಿಗಳು

೧. 'ಮರ್ಮರ' (ಕಿರುಗವನ) ಕಮಲಾ ಹೆಮ್ಮಿಗೆ,[೧೯]

ಯಾವ ಪ್ರಕಾರವೂ ಪ್ರಖರವಾಗಿಲ್ಲದ ಇವತ್ತಿನ ಕನ್ನಡ ಸಾಹಿತ್ಯದಲ್ಲಿ ಕಿರುಗವನಗಳು ತಮ್ಮ ಪ್ರಾಧಾನ್ಯತೆಯನ್ನು ಪಡೆದುಕೊಳ್ಳುತ್ತಿವೆ. ಪೂರಕವಾಗುವಂತೆ ಅವುಗಳದೇ ಸಮ್ಮೇಳನಗಳೂ ನಡೆಯುತ್ತಿವೆ. ಸಾಹಿತ್ಯದ ಇಂತಹ ತುರ್ತಿಗೆ ಹಲವು ಕಾರಣಗಳು ಇರಬಹುದು. ಈ ವಿಶಿಷ್ಟ ಬೆಳವಣಿಗೆಯ ಕಾರಣ ಹುಡುಕುವಲ್ಲಿ ಕಿರುಗವನಗಳ ಅಧ್ಯಯನವೂ ಆಗುತ್ತದೆಂಬುದು ನನ್ನ ನಂಬಿಕೆ.

ಈ ಪುಸ್ತಕದ ಮುನ್ನುಡಿಯಲ್ಲಿ ಕೆ. ವಿ. ತಿರುಮಲೇಶ ಗುರುತಿಸಿರುವಂತೆ ಕನ್ನಡ ಸಾಹಿತ್ಯದಲ್ಲೀಗ (ಆಧುನಿಕ ಸಾಹಿತ್ಯ) ಎರಡು ಗುಂಪುಗಳು ಕಾರ್ಯ ಪ್ರವೃತ್ತವಾಗಿವೆ. ದಲಿತ ಬಂಡಾಯದ ಒಂದು ಗುಂಪಾದರೆ, ಅದರೊಡನೆ ಸೇರದ ಮತ್ತೊಂದು ಗುಂಪು, ಇವೆರಡೂ ದೇಶಿಯತೆಯಲ್ಲಿ, ಜಾನಪದದಲ್ಲಿ ತಮ್ಮ ಪ್ರೇರಣೆಗಳನ್ನು ಹುಡುಕುತ್ತಿವೆ. ಇವುಗಳ ಮೊದಲ ಗುರಿ 'ವಿಶ್ವಗ್ರಾಮ' ದ (ಗ್ಲೋಬಲ್ ವಿಲೇಜ್) ಪರಿಕಲ್ಪನೆಯನ್ನು ಹುಸಿಗೊಳಿಸುವುದು. ಆದರೆ ಇದಕ್ಕೆ ಬೇಕಾದ ಶತ್ರುವಿನ

ಸ್ಪಷ್ಟತೆಯೂ,ಹತಾರಗಳ ಸ್ವರೂಪವೂ ದೊರೆತಿಲ್ಲ. ಎಲ್ಲ ಚರ್ಚೆಯನ್ನು ಅರ್ಥಹೀನ ಮಾಡುವ; ಎಲ್ಲರ ಸ್ವಂತಿಕೆಯನ್ನು ಹೀರಿಕೊಂಡ ಏಕರೂಪಗಳಿಸಬಲ್ಲ ಚಾಣಾಕ್ಷತೆ ನಮ್ಮ ದುರಿನ ಜಾಗತೀಕರಣಕ್ಕಿದೆ. ಆದ್ದರಿಂದಲೇ ಶತ್ರುವಿನ ಮುಖಚರ್ಯೆಯನ್ನು ಗುರುತಿಸಿಕೊಳ್ಳಬೇಕಾಗಿರುವುದು, 'ವಿಶ್ವಗ್ರಾಮ' ಪರಿಕಲ್ಪನೆಯ ಫಲಿತಾಂಶದಿಂದಲೇ, ಆ ಫಲಿತಾಂಶವನ್ನು ಹಿಡಿದಿಡುವಲ್ಲಿ 'ಮರ್ಮರ'ದಂತ ಕವನಗಳು ಸಹಾಯಕವಾಗುತ್ತವೆ.

ಕಮಲಾ ಹೆಮ್ಮಿಗೆಯವರ 'ಮರ್ಮರ' ಕೂಡ ಇಂತಹ ಸಂದಿಗ್ಧ ಸ್ಥಿತಿಯ ಕೂಸು. ಅವರು ತಮ್ಮ ಅದ್ಭುತ ರೂಪಕಶಕ್ತಿ ಮತ್ತು ಪ್ರತಿಮಾ ವಿಧಾನದಿಂದ ಬದುಕಿನ ವೈಪರೀತ್ಯಗಳನ್ನು ಮುಖಾಮುಖಿಯಾಗಿಸಿದ್ದಾರೆ. ಅತ್ಯಂತ ಸಣ್ಣ ವಸ್ತುಗಳಲ್ಲೂ ಮಾನವೀಯತೆಯ ಬಂಧ ತೋರಿಸುತ್ತಾ "ಮಾನವನೇಕೆ ಇದರ ವಿರುದ್ಧ"? ಎಂದು ಪ್ರಶ್ನಿಸುತ್ತಾರೆ. ಅತ್ಯಂತ ಸೂಕ್ಷ್ಮವಾಗಿ ಬದುಕಿನ ಎಲ್ಲಾ ಅನುಭವವನ್ನು ತೆರೆದಿಟ್ಟು ಅವುಗಳೊಳಗೆ ಜೀವಂತಿಕೆಯ ಜಾಲವನ್ನು ಶೋಧಿಸುತ್ತಾರೆ. ಆಧುನಿಕತೆಯ ಒಂಟಿತನವನ್ನು ಚಿತ್ರಿಸಿರುವ ಕವನಗಳು (ಉದಾ: ಪ್ರಶ್ನೆ, ವಿಚಿತ್ರ, ತದ್ವಿರುದ್ಧ ಇತ್ಯಾದಿ) ಪ್ರಕೃತಿಯಲ್ಲಿ ಒಗ್ಗಟಿನ ಪ್ರೇರಣೆಯನ್ನು ಪಡೆಯುತ್ತವೆ. ಆಧುನಿಕ ಬದುಕಿನ ಛಿದ್ರತೆಯನ್ನು ಹೇಳುವ 'ದ್ವಂದ್ವ' ,'ವಾಸ್ತವ' ದಂತ ಕವನಗಳು ನವ್ಯದ ಸಂದರ್ಭದಲ್ಲಿದ್ದ ಸಾಮಾಜಿಕ ಗೊಂದಲವನ್ನು ನೆನಪಿಸುತ್ತವೆ.

'ಮರ್ಮರ' ಸಂಕಲನದ 'ಅಂಕುರ' ಕವನದಂತೆ ಹಲವು ಮೊರತೆಗಳು ಒಂದು ಸ್ವರವಾಗುತ್ತೆ. ಈ ಸಂಕಲನದ ಆಶಯವಿದೆ. ಲೇಖಕಿಯೇ ಹೇಳುವಂತೆ ಎಲ್ಲ ಕವನಗಳನ್ನು ಸಂಕಲಿಸಿ ಧ್ಯಾನಿಸಬೇಕು. ಆಧುನಿಕತೆಗೆ ಹೊಸ ಹತಾರ ಸೃಷ್ಟಿಸಿಕೊಳ್ಳಬೇಕು. - ದಿನೇಶ್.ವಿ. ಎಸ್.

೨. ಅಭಿವೃದ್ಧಿಯೋ ಅವಸಾನವೋ: ಲೇ: ಕಾರ್ಗಲ್ ಬೋಗರಾಜ.[೨೦]

ಪ್ರಸ್ತುತ ಈ ಕೃತಿಯು ಪರಿಸರ ಕಾಳಜಿಯುಳ್ಳ ವ್ಯಕ್ತಿಯೊಬ್ಬ ಬರೆದ ಕೃತಿ. ಒಟ್ಟು ಹದಿಮೂರು ಭಾಗಗಳನ್ನು ಒಳಗೊಂಡಿರುವ ಈ ಕೃತಿಯು ಮಲೆನಾಡಿನ ಪಶ್ಚಿಮ ಘಟ್ಟಗಳನ್ನು ಆಧಾರವಾಗಿಟ್ಟುಕೊಂಡು ಇಡೀ ಕರ್ನಾಟಕದ ಸ್ಥಿತಿಗತಿಗಳನ್ನು ಅವಲೋಕನ ಮಾಡಿದೆ. ಮೂಲತಃ ಮಲೆನಾಡಿಗರಾಗಿರುವ ಬೋಗರಾಜು ಇಂತಹ ಕಾಳಜಿಗಳನ್ನು ತೋರಿಸುವುದು ಸಹಜ ಹಾಗೂ ಕರ್ತವ್ಯ ಕೂಡ.

ಕರ್ನಾಟಕದ ಬಗ್ಗೆ ಇಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಗಣಿಗಾರಿಕೆ , ಅಣೆಕಟ್ಟುಗಳ ಮೂಲಕ ನಡೆಯುವ ಬೃಹತ್ ನೀರಾವರಿ ಯೋಜನೆಗಳನ್ನು ಕಾದಿರದ ಬಯಲು ಸೀಮೆಗಳಲ್ಲಿ ಹಮ್ಮಿಕೊಂಡರೆ ಹೆಚ್ಚು ಉಪಯುಕ್ತ ಮತ್ತು ಪ್ರಸ್ತುತವಾಗಬಹುದು ಎಂಬ ಒಂದು ಕಿರು ಧ್ವನಿಯೂ ಈ ಕೃತಿಯಲ್ಲಿ ದೊರೆಯುತ್ತದೆ. ಆದರೆ ಯಾವುದೋ ಒಂದು ಪ್ರದೇಶ ತನ್ನದೇ ಆದ ಒಂದು ವೈಶಿಷ್ಟತೆ ವಿಶೇಷ ಪರಿಸರಗಳಿಂದ ಕೂಡಿರುತ್ತದೆಯೆಂಬುದನ್ನು ಅರಿಯಬೇಕಾದ ಆವಶ್ಯಕತೆ ಇದೆ. ಕರ್ನಾಟಕದ ಯಾವ ಭಾಗದಲ್ಲಿ ಆದರೂ ಇಂಥ ಯೋಜನೆಗಳು ಅಪ್ರಸ್ತುತ. ಇವುಗಳಿಂದ ಜನತೆಗೆ ಆಗುವ ಉಪಯೋಗಕ್ಕಿಂತ ಅವಾಂತರಗಳೇ ಹೆಚ್ಚು ಎಂಬುದನ್ನು ತಿಳಿಯಬೇಕು. ಇಷ್ಟೆಲ್ಲಾ ಮಿತಿಗಳ ಮಧ್ಯೆಯೂ ಕನ್ನಡ ಜನತೆಯನ್ನು ಎಚ್ಚರಿಸಬಲ್ಲ, ಒಂದು ಉತ್ತಮ ಕೃತಿ ಕನ್ನಡಕ್ಕೆ ದೊರೆತಿರುವುದು ಸಂತೋಷಕರ. ಈ ಕೃತಿ ಓದಿದ ನಂತರವಾದರೂ ಮೌನವಾಗಿ ಎಲ್ಲವೂ ಅನುಭವಿಸುವ ಕರ್ನಾಟಕದ ಪ್ರತಿಯೊಬ್ಬ ಪ್ರಜೆ ಪ್ರಾಮಾಣಿಕವಾಗಿ ಪ್ರತಿಭಟಿಸುವ ಶಕ್ತಿಯನ್ನು ಹೊಂದಿದಲ್ಲಿ ಈ ಕೃತಿ ಕನ್ನಡದಲ್ಲಿ ಬಂದುದು ಸಾರ್ಥಕವೆನಿಸುತ್ತದೆ. - ಯರಿಸ್ವಾಮಿ. ಎಂ.

ಈ ಮೇಲಿನ ಮಾದರಿಗಳನ್ನು ಗಮನಿಸಿದರೆ ಇಲ್ಲಿನ 'ಪುಸ್ತಕ ವಿಮರ್ಶೆ' ಗಳನ್ನು ಆ ಕ್ಷೇತ್ರದಲ್ಲಿ ಪರಿಣಿತ ವಿದ್ವಾಂಸರೇ ಬರೆದಿಲ್ಲ ಎಂಬುದು ತಿಳಿಯುತ್ತದೆ. ಅಕಾಡೆಮಿ ಪರಿಣಿತರ ಕೈಲಿ ಬರೆಸಿದೆ ಅಷ್ಟೆ. ಆದರೆ ಅವರು ಕೃತಿಯ 'ಕ್ಷೇತ್ರ'ದ ಬಗ್ಗೆ ಪರಿಣಿತರಾದವರನ್ನು ಗಮನಿಸಿಲ್ಲ. ಅಲ್ಲದೆ ಪುಸ್ತಕ

ಮಾಹಿತಿಗಳಲ್ಲಿ ಬರೆದಿರುವ 'ಪುಸ್ತಕ ವಿಮರ್ಶೆ' ಗಳನ್ನು ಗಮನಿಸಿದರೆ ಅವರು ವಿದ್ಯಾರ್ಥಿಗಳಾಗಿದ್ದಾರೆ. ಅವರು ಮುಂದೇ ಪರಿಣಿತ ವಿಮರ್ಶಕರಾಗಿ ಬೆಳೆಯುತ್ತಾರೆಂಬ ಯಾವುದೇ ಖಾತ್ರಿಯಿಲ್ಲ. ಆದರೆ ಅವರು ಪುಸ್ತಕ ವಿಮರ್ಶೆಗೆ ತೊಡಗಿದ್ದಾರೆ. ಅಂದರೆ 'ಪುಸ್ತಕ ವಿಮರ್ಶೆ' ಯನ್ನು ಯಾರು ಯಾವ ಕೃತಿಯನ್ನು ಯಾರು ಬೇಕಾದರೂ ವಿಮರ್ಶಿಸಬಹುದೆಂಬ ಮುಕ್ತ ಅವಕಾಶ ಈ ಪುಸ್ತಕ ವಿಮರ್ಶೆಗಿದೆ.

ಪುಸ್ತಕ ವಿಮರ್ಶೆಯ ಇನ್ನೊಂದು ಮುಖ್ಯವಾದ ವಿಶಿಷ್ಟತೆಯೆಂದರೆ 'ಪುಸ್ತಕ ವಿಮರ್ಶೆ' ಇತ್ತೀಚಿನ ಮಾಹಿತಿ ತಂತ್ರಜ್ಞಾನ ಮತ್ತು ಸಾಹಿತ್ಯ ಎರಡನ್ನು ಒಳಗೊಂಡ ಪ್ರಕಾರವಾಗಿರುವುದು. ಸಾಹಿತ್ಯದ ಬೇರೆ ಯಾವುದೇ ಪ್ರಕಾರಕ್ಕೂ ಈ ರೀತಿಯ ಅವಕಾಶಗಳಿಲ್ಲ. ಇತ್ತೀಚಿನ ಆಧುನಿಕ ಚಿಂತನೆ ಮಾಹಿತಿ ತಂತ್ರಜ್ಞಾನ ಮುಖ್ಯ ಉದ್ದೇಶ ತನ್ನ ಉದ್ದೇಶಿತ ಮಾರಾಟವನ್ನು ಹೆಚ್ಚು ಮಾಡಿಕೊಳ್ಳುವುದಕ್ಕಾಗಿ ವಿವಿಧ ರೀತಿಯ ಮಾಹಿತಿಗಳನ್ನು ಜಾಹೀರು ಮಾಡುತ್ತದೆ. ಆ ಮೂಲಕ ತನ್ನ ಮಾರಾಟದ ಸ್ವರೂಪವನ್ನು ವಿಸ್ತರಿಸಿಕೊಳ್ಳುತ್ತದೆ. ಹೀಗಾಗಿ ಪುಸ್ತಕ ವಿಮರ್ಶೆಯು ಕೃತಿಯ ಬಗ್ಗೆ ಯಾಂತ್ರಿಕವಾದ ಕೃತಿಯ ಹೆಸರು, ಕೃತಿಕಾರ, ಪ್ರಕಾಶನ, ಪ್ರಕಟಣ ವರ್ಷ, ಬೆಲೆ ಇತ್ಯಾದಿಗಳನ್ನು ಒಳಗೊಂಡಿರುತ್ತದೆ. ಇದು ಸಂಪೂರ್ಣ 'ಮಾಹಿತಿ ತಂತ್ರಜ್ಞಾನಕ್ಕೆ' ಸಂಬಂಧಪಟ್ಟ ವಿಚಾರವಾದರೆ, ಮತ್ತೊಂದು ಭಾವನಾ ವ್ಯಾಪಾರಕ್ಕೂ ಸಂಬಂಧಿಸಿದೆ. ಸಾಹಿತ್ಯದ ವಿಚಾರ ಚರ್ಚೆಯು ಇದರಲ್ಲಿ ಒಳಗೊಂಡಿರುತ್ತವೆ. ಈ ಸಂದರ್ಭದ ಎರಡರ ಒತ್ತಡದ ತುರ್ತುಗಳನ್ನು ಇದರಲ್ಲಿ ಗುರುತಿಸಬಹುದು. 'ಮಾಹಿತಿ ತಂತ್ರಜ್ಞಾನ' ಮತ್ತು ಸಾಹಿತ್ಯ ಇವೆರಡರ ಸಂಬಂಧವನ್ನು ಬೆಳಸದಿರುವುದು ಬೇರೆ ಯಾವ ಪ್ರಕಾರಗಳು ಸಾಂಸ್ಕೃತಿಕವಾದ ಸಂಬಂಧಗಳ ಕೊಂಡಿಯನ್ನು ಕಟ್ಟಿಕೊಂಡಿಲ್ಲ.

೬.೪. ಪುಸ್ತಕ ವಿಮರ್ಶೆಯಲ್ಲಿ ಎದುರಾಗುವ ಮಿತಿಗಳು

ಪುಸ್ತಕ ವಿಮರ್ಶೆ ಅಪಾರ ವ್ಯಾಪ್ತಿ ವೈವಿಧ್ಯತೆಗಳನ್ನು ಒಳಗೊಂಡಿದೆ. ಅದು ತನ್ನ ಶಕ್ತಿಯಿಂದ ವಿಮರ್ಶೆಯನ್ನು ಬೆಳಸುತ್ತಿದೆ. ವಿಮರ್ಶೆಯ ಬೆಳವಣಿಗೆ ಹೆದ್ದಾರಿಯನ್ನು ನಿರ್ಮಿಸಲಾಗದಿದ್ದರೂ ಕೊನೆಯ ಪಕ್ಷ ಕಿರುದಾರಿಯನ್ನಂತೂ ಸೃಷ್ಟಿಸಿದೆ. ಆದರೆ ಇದು ತನ್ನ ಮಿತಿ ಮತ್ತು ವ್ಯಾಪ್ತಿಯಿಂದ ಅವ್ಯಾಪ್ತಿ ದೋಷಗಳನ್ನು ಒಳಗೊಂಡಿದೆ. ಅದು ಪರಸ್ಪರ ವೈಯಕ್ತಿಕ ಅನಿಸಿಕೆಗಳಾಗಿಯೇ ಉಳಿಯುವ ಸಂಭವವು ಹೆಚ್ಚಾಗಿದೆ. ಅಲ್ಲದೆ, 'ಪುಸ್ತಕ ವಿಮರ್ಶೆ' ಅಂಕಣ ವೈಯಕ್ತಿಕ ಈರ್ಷ್ಯೆಗಳನ್ನು ತೀರಿಸಿಕೊಳ್ಳುವ, ಒಳಜಗಳಗಳಿಗೆ ದಾರಿ ಮಾಡಿಕೊಳ್ಳುವ ವೇದಿಕೆಯಾಗಿ ನಿರ್ಮಾಣಗೊಂಡಿದೆ. ಅತಿ ಎನಿಸುವ ಹೊಗಳಿಕೆ ಇಲ್ಲವೆ, ಸಂಪೂರ್ಣ ತಿರಸ್ಕಾರ ಇವೆರಡರ ಸಾಧ್ಯತೆಗಳಿಗೆ ಕಾರಣವಾಗಿ ಪುಸ್ತಕ ವಿಮರ್ಶೆ ಹದಗೆಡುತ್ತಿದೆ. ಪುಸ್ತಕ ವಿಮರ್ಶಕರು ತಾವು ಯಾವ ಕೃತಿಯ ಬಗ್ಗೆ ಮಾತಾಡುತ್ತಿದ್ದೇವೆ ಎಂಬುದನ್ನು ತಮ್ಮ ಅಭಿಪ್ರಾಯಗಳಿಗೆ ಕೃತಿಯಿಂದಲೇ ತಕ್ಕ ಉದಾಹರಣೆಗಳನ್ನು ಕೊಡದೆ ಅಪ್ರಾಸಂಗಿಕವಾದ ಮಾತುಗಳನ್ನು ಆಡುತ್ತಾರೆ. ಪುಸ್ತಕ ವಿಮರ್ಶೆಯ ಮೂಲೋದ್ದೇಶ ಸಾಹಿತ್ಯ ಕೃತಿಗಳ ಬಗ್ಗೆ ವಿಮರ್ಶಕರಲ್ಲಿ ಹುಟ್ಟಿದ ಚಿಂತನೆ ಎಲ್ಲೆಡೆ ಹರಡುವಂತೆ ಮಾಡುವುದು ಎಂದು ಸರಳವಾಗಿ ಹೇಳಬಹುದು. ಆದರೆ

ಉತ್ತಮಾಂಶಗಳನ್ನೊಳಗೊಂಡ ಅನೇಕ ಕೃತಿಗಳು ಪ್ರಕಟವಾಗುತ್ತಿದ್ದಾಗ ಅವುಗಳ ಕಡೆಗೆ ಕಣ್ಣೆತ್ತಿ ನೋಡದೇ ಇರುವವರ ಸಾಹಿತ್ಯ ದೃಷ್ಟಿ ತೀರ ಸಂಕುಚಿತ ರೀತಿಯದು.

ಪುಸ್ತಕ ವಿಮರ್ಶೆಯಲ್ಲಿ ಕಾಲಕಾಲಕ್ಕೆ ರಾಜಕಾರಣಗಳು ಬಂದು ಸೇರುತ್ತಿವೆ. ಎಂಥ ಮಹತ್ವದ ಕೃತಿ ಬಿಡುಗಡೆಯಾದರೂ ಅದನ್ನು ಬೇಕೆಂದೆ ಮರೆ ಮಾಚುವ, ಪುಸ್ತಕ ವಿಮರ್ಶೆಯಾಗದಂತೆ ತಡೆಯುವ ಕೆಲಸಗಳು ನಡೆಯುತ್ತವೆ. ಇದರಿಂದ ವೈಯಕ್ತಿಕ ವಿರಸಗಳಿಗೆ ಹೆಚ್ಚು ಕಾರಣವಾಗುತ್ತದೆ. ಅಲ್ಲದೆ ಕನ್ನಡದಲ್ಲಿ ವರ್ಷಕ್ಕೆ ೧೫೦೦ ಕೃತಿಗಳು ಬಿಡುಗಡೆಯಾದರೆ ಅವುಗಳಲ್ಲಿ 'ಪುಸ್ತಕ ವಿಮರ್ಶೆ'ಯಾಗುವುದು ೫೦ಕ್ಕೂ ಅಥವಾ ೧೦೦ಕ್ಕೂ ಅಷ್ಟೇ. ಅದಕ್ಕೆ ಬೇರೆ ಕಾರಣವಿರಬಹುದು. ಆದರೆ ಪುಸ್ತಕ ವಿಮರ್ಶೆಗೆ ಆಯ್ಕೆ ಮಾಡಿಕೊಳ್ಳುವಲ್ಲಿಯೂ ರಾಜಕಾರಣವು ಕಾರಣವಾಗಿರುತ್ತದೆ. ಪ್ರತಿಷ್ಠಿತರ ಪುಸ್ತಕಗಳು ಪ್ರಕಟವಾದರೆ ಅವರ ಕೃತಿಗಳು ಬಹುಪಾಲು ಎಲ್ಲ ಪತ್ರಿಕೆಗಳಲ್ಲೂ ಪುಸ್ತಕ ವಿಮರ್ಶೆಗೆ ಒಳಗಾಗುತ್ತದೆ. ಉದಾ : ಯು. ಆರ್. ಅನಂತ ಮೂರ್ತಿಯವರ 'ದಿವ್ಯ'ದ ಪುಸ್ತಕ ವಿಮಶೆಗಳನ್ನು ನೋಡಬಹುದು. ಈ ಕೃತಿಯಲ್ಲಿ ಒಳನೋಟಗಳು ಕಡಿಮೆ ಎಂಬ ಸತ್ಯದ ಅರಿವಿದ್ದರೂ ಮತ್ತೆ ಮತ್ತೆ ಪತ್ರಿಕೆಯಲ್ಲಿ ಪುಸ್ತಕ ವಿಮರ್ಶೆಯಾಗಿ, ಅದಕ್ಕೆ ಪ್ರತಿಕ್ರಿಯೆಗಳು ಬಂದಿರುವುದನ್ನು ಕಾಣಬಹುದು. ಇದು ಕೇವಲ ಒಂದು ಸಣ್ಣ ಉದಾಹರಣೆಯಷ್ಟೇ. ಇವುಗಳನ್ನೆಲ್ಲ ಗಮನಿಸಿದರೆ ಇದು ಸಾಹಿತ್ಯದಲ್ಲಿ ನಡೆಯುವ ರಾಜಕಾರಣವೆಂದೇ ಗುರುತಿಸಬೇಕೆನಿಸುತ್ತದೆ.

ಪ್ರಕಟವಾಗುತ್ತಿರುವ ಕೃತಿಗಳಲ್ಲಿ ಅನೇಕ ಕೃತಿಗಳು ಯೋಗ್ಯವಲ್ಲ ಎಂಬುದು ಸತ್ಯವಾದರೂ ಅವುಗಳಲ್ಲಿ ಕೆಲವಾದರೂ ಉತ್ತಮಾಂಶಗಳಿಂದ ಕೂಡಿ ಕೃತಿಗಳೆನಿಸಿಕೊಳ್ಳಬಲ್ಲ ಅಂತಃಚಿಂತನೆಗಳನ್ನು ಹೊಂದಿರುತ್ತವೆ. ಅವುಗಳನ್ನು ಗುರುತಿಸುವುದು 'ಪುಸ್ತಕ ವಿಮರ್ಶೆ'ಯ ಬೆಳವಣಿಗೆಯ ದೃಷ್ಟಿಯಿಂದ ಅಗತ್ಯವಾದುದಾಗಿದೆ. ಆದರೆ ವಾಸ್ತವವಾಗಿ ಇಂಥ ಧೋರಣೆಗಳಿಂದ ಪುಸ್ತಕ ವಿಮರ್ಶೆ ಮುಕ್ತವಾಗಿಲ್ಲ, ಇಂಥ ತೊಂದರೆಗಳು ತೊಡಕುಗಳಿಂದ ಪುಸ್ತಕ ವಿಮರ್ಶೆ ಬಳಲುತ್ತಿದೆ. ಇದಕ್ಕೆ ಏನೆಲ್ಲ ಒಳ್ಳೆಯ ಅಂಶಗಳನ್ನು ಅಂಟಿಸಿದರು, ಇಂತಹ ವೈಯಕ್ತಿಕ ಈರ್ಷ್ಯೆಗಳಿಂದ ಪುಸ್ತಕ ವಿಮರ್ಶೆ ಸೈದ್ಧಾಂತಿಕ ರೂಪದಿಂದ ದೂರ ಸರಿಯುತ್ತಿದೆ. ಇಂಥ ಸಾಂಸ್ಕೃತಿಕ ತೊಂದರೆಗಳಿಂದ ಪುಸ್ತಕ ವಿಮರ್ಶೆ ಹಲವು ತೊಡರುಗಳನ್ನು ಎದುರಿಸುತ್ತದೆ. ಇವೆಲ್ಲವುಗಳು ಪರಸ್ಪರ ಪುಸ್ತಕ ವಿಮರ್ಶೆಯನ್ನು ಬೆಳೆಸದೆ. 'ಸಂಕುಚಿತ' ಗೊಳಿಸುತ್ತಿವೆ. ಸಾಹಿತ್ಯ ವ್ಯಾಪ್ತಿಯಾಗಿ ಬೆಳೆದಂತೆ ಪುಸ್ತಕ ವಿಮರ್ಶೆಗೆ ಅವ್ಯಾಪ್ತಿ ಗುಣ ಇಂಥ ತೊಂದರೆಗಳಿಂದ ಬಂದು ತಲುಪುತ್ತಿದೆ.

೬.೪.೧. ಲೇಖಕರ ಕೃತಿ ಸಮೂಹದ ಭಾಗವಾಗಿ ಬೆಳೆಯುವುದಿಲ್ಲ

ವಿಮರ್ಶೆಯೆಂಬುದು ಪೂರ್ಣ ಪ್ರಮಾಣದ ವಿಶ್ಲೇಷಣೆಯಾಗಬೇಕು. ಕೃತಿಗಷ್ಟೆ ಸೀಮಿತವಾದರೆ ಅದು ಆ ಕೃತಿಯ ವಿವರಗಳಿಗಷ್ಟೇ ನಿಂತು ಬಿಡುತ್ತದೆ. ಅದೇ ಲೇಖಕರ ಇತರ ಕೃತಿಗಳ ಕಡೆ ಗಮನ ಹರಿಯದೇ ತಟಸ್ಥರೂಪದಲ್ಲಿ ಕೃತಿಯನ್ನು ಆವರಿಸುತ್ತದೆ. ಕೃತಿ ಕುರಿತ ಪೂರ್ಣ ಪ್ರಮಾಣದ

ವಿಮರ್ಶೆಯೆಂದರೆ ಕೆಲವೊಮ್ಮೆ ಕೃತಿಕಾರರ ಕೃತಿ ಸಮೂಹದ ವಿಶ್ಲೇಷಣೆಯು ಆಗಿರಬೇಕು. ಹಾಗಾದಾಗ ಲೇಖಕರ ಪ್ರಸ್ತುತ ಕೃತಿಯನ್ನು ಇತರ ಕೃತಿಗಳ ನಡುವೆ ಪರಿಶೀಲಿಸುವ ದೃಷ್ಟಿಯಲ್ಲಿ ಪರಸ್ಪರ ತೌಲನಿಕವಾದ ವಿಶ್ಲೇಷಣೆಯಲ್ಲಿ ಬೆಲೆಗಟ್ಟಬಹುದು. ಕೇವಲ ಪ್ರಸ್ತುತ ಕೃತಿಗೆ ವಿಮರ್ಶೆಯನ್ನು ಕೇಂದ್ರಿಕರಿಸಿದರೆ, ಇದೇ ಲೇಖಕರ ಇದಕ್ಕಿಂತ ಒಳ್ಳೆ ಕೃತಿಗಳು ಈಗಾಗಲೇ ಬಂದಿದ್ದರೂ ಅವುಗಳು ಗೌಣವಾಗಿದ್ದು, ಪ್ರಸ್ತುತ ಕೃತಿ ಮಿಂಚುತ್ತದೆ. ಅಥವಾ ಬಂದಿರುವ ಕೃತಿಗಳಿಗಿಂತ ಇದು ಹೆಚ್ಚು ಚರ್ಚೆ ಬಯಸುವಂತಹದು ಎಂಬುದನ್ನು ತಿಳಿಯಲು ಹಿಂದಿನ ಕೃತಿಗಳ ಬಗೆಗೆ ಎತ್ತುವ ಪ್ರಶ್ನೆಗಳ ಮುಖೇನ ಪ್ರಸ್ತುತ ಕೃತಿಯನ್ನು ವಿಶ್ಲೇಷಿಸಿದರೆ ಓದುಗರಿಗೆ ನಿಜವಾದ ಕೃತಿ ಯಾವುದೆಂದು ಸ್ವಓದಿನಿಂದಲೇ ಅರ್ಥಮಾಡಿಕೊಳ್ಳಲೆತ್ನಿಸುತ್ತಾರೆ.

ಉದಾಹರಣೆಯಾಗಿ ಒಂದು ಮಾದರಿಯನ್ನು ನೋಡುವುದಾದರೆ

ಐದು ಸಮಾಜವಾದಿ ನಾಟಕಗಳು - ಚನ್ನಣ್ಣ ವಾಲೀಕಾರ ವಿಮರ್ಶಕರು - ಎಸ್. ಆರ್.ವಿಜಯ ಶಂಕರ.[೨೧]

ಡಾ. ಚನ್ನಣ್ಣ ವಾಲೀಕಾರರು ಬರೆದ ಐದು ನಾಟಕಗಳು ಇಲ್ಲಿವೆ. ಲೇಖಕರೇ ಪ್ರಸ್ತಾವಿಕದಲ್ಲಿ ಸೂಚಿತದಂತೆ ಈ ಐದು ನಾಟಕಗಳನ್ನು ಸಂಕ್ಷಿಪ್ತವಾಗಿ ಹೀಗೆ ಹೇಳಬಹುದು. 'ನರಭಕ್ಷಕ ರಾಜನ ಕಥೆ' ಅಧಿಕಾರ, ಯೌವ್ವನ, ರೂಪು, ಹಣ ಸೇರಿದಾಗ ಎಂಥ ದರ್ಪ ದಬ್ಬಾಳಿಕೆ, ದೌರ್ಜನ್ಯ ನಡೆಯುವುದೆಂಬುದನ್ನು ಹೇಳುವ ನಾಟಕ, 'ಜನವೆಂಬ ಆಸ್ತಿ' ನಾಟಕಕ್ಕೆ ಪ್ರೇರಣೆ ರಾಯಚೂರಿನಲ್ಲಿ ದಲಿತ ಸಂಘರ್ಷ ಸಮಿತಿಯವರು ಸರಕಾರಿ ಗೈರಾನೆ ಕೆರೆ ಜಮೀನು ಆಂಧ್ರದ ಒಬ್ಬ ರೆಡ್ಡಿ ಹಿಡಿದಿದ್ದನ್ನು ಹೋರಾಟ ಮಾಡಿ ಬಡ ದಲಿತರಿಗೆ ಕೊಡಿಸಿದ್ದು, 'ಕೂಸನು ಕಂಡಿರಾ' ತಾಯಿ ಮಗುವಿನ ಕುರಿತಾದ ಕೌಟಂಬಿಕ ನಾಟಕ, 'ಅವಿವೇಕಿ ರಾಜನ ಕಥೆ' ಜನಪದ ಕೃತಿಯೊಂದರಿಂದ ಪ್ರೇರಣೆಗೊಂಡ ನಾಟಕ ಎಂದು ಚನ್ನಣ್ಣ ಹೇಳಿಕೊಂಡಿದ್ದಾರೆ. ಪ್ರಕೃತಿ ವಿರುದ್ದ ನಡೆಯುವ ಅರಸನಿಗೆ ಅವನ ಹೆಂಡತಿ ಮಕ್ಕಳ ವಿರುದ್ಧವಾಗಿ ಜನರೇ ದಂಗೆಯೆದ್ದು ಹೊಸ ಪ್ರಭುತ್ವ ಅಧಿಕಾರಕ್ಕೆ ಬರುವ ಕಥೆ ಇಲ್ಲಿದೆ. 'ಬಾಲಿ' ನಾಟಕದಲ್ಲಿ ಮಗಳನ್ನು ಮಾರುವ ತಂದೆಯ ಕಥೆ ಇದು.

ಒಟ್ಟಿನಲ್ಲಿ ಈ ಐದು ನಾಟಕಗಳಲ್ಲಿ ಶೋಷಣೆ; ದಬ್ಬಾಳಿಕೆ ವಿರುದ್ಧ ಆಕ್ರೋಶ, ಘೋಷಣೆ ಎಡಬಿಡದೆ ಹರಿದಿದೆ. ಇದರಲ್ಲಿ ಮೂರು ನಾಟಕಗಳನ್ನು ಗುಲ್ಬರ್ಗದ ಆಕಾಶವಾಣಿ ಪ್ರಸಾರ ಮಾಡಿದೆ. ಅಪಕ್ವ ಕಲ್ಪನೆಯ ಹಗಲುಗನಸಿನ ಆಧಾರ ರಹಿತ ಆಶಾವಾದದಂತೆ ಭೋರ್ಗರೆಯುವ ಇಲ್ಲಿನ ವಿಪರೀತ ಮಾತಿನ ಪ್ರವಾಹ, ರಂಗದಲ್ಲಿ ಹೇಗೆ ಮೂಡೀತು ಎಂಬ ಕಲ್ಪನೆ ಯಾವ ಓದುಗನಿಗಾದರೂ ಬಾರದೆ ಇರದು. ಬಹುಶಃ ಈ ಹಿನ್ನೆಲೆಯಲ್ಲೇ ಡಾ. ಚನ್ನಣ್ಣ ವಾಲೀಕಾರರು 'ರಂಗ ಪ್ರಯೋಗದ ತರಬೇತಿಯ ಕೊರತೆ ಅಪಾರ ಇದ್ದುದ್ದರಿಂದ ನನ್ನಲ್ಲಿ ಇನ್ನೂ ತನಕ ಗುಣಮಟ್ಟದ ಕೃತಿಗಳು ಹುಟ್ಟಿ ಬರದಿರಲು ಕಾರಣವಾಗಿದೆ ಎಂದು ಹೇಳಿಕೊಂಡಿದ್ದಾರೆ.

ಇನ್ನೊಂದು ಮುಖ್ಯ ಅಂಶವೆಂದರೆ, ಈ ನಾಟಕಗಳ ತುಂಬಾ ಅಲ್ಲಲ್ಲಿ ಶರಣರ ವಚನಗಳು ಮತ್ತು ಸರ್ವಜ್ಞನ ತ್ರಿಪದಿಗಳು ಹರಿದಾಡಿವೆ. ಬಹುಶಃ ಇಲ್ಲಿನ ನಾಟಕಗಳು ಜನಪರ ಹೋರಾಟದ ನಿಲುವಿಗೆ ಹೆಚ್ಚಿನ ಆಯಾಮ ಒದಗಿಸುವ ಉದ್ದೇಶ ಲೇಖಕರಿಗೆ ಇದ್ದಿರಬೇಕು. ಆದರೆ ಇಂಥ ಬಳಕೆ ಅನೇಕ ಸಲ ಅಲ್ಲಿನ ಭಾವ ಸಂದರ್ಭಕ್ಕೆ ಹೊಂದಿಕೆ ಇಲ್ಲದೆ ಬಳಕೆಯಾಗಿದೆ. ಇದು ಅನೇಕ ಸಂದರ್ಭಗಳಲ್ಲಿ ಆಭಾಸವನ್ನುಂಟು ಮಾಡುತ್ತಿವೆ ಎಂದರೂ ತಪ್ಪಾಗಲಾರದು.

ಇವೆಲ್ಲಾ ತನ್ನ ಮೊದಲ ಹಂತದ ಪ್ರಯೋಗದ 'ಹಸಿ ಹಸಿ ನಾಟಕಗಳು' ಎಂಬ ಆತ್ಮವಿಮರ್ಶೆಯ ಎಚ್ಚರ ಡಾ.

ವಾಲೀಕಾರರಿಗೆ ಇದೆ. ಅದನ್ನು ಬಿಚ್ಚು ಮನಸ್ಸಿನಿಂದ ಹೇಳಿಕೊಂಡಿದ್ದಾರೆ. 'ಈಗ ಆಗಬೇಕಾದ್ದು ದೊಡ್ಡ ವಸ್ತುವಿನ ಜೊತೆಗೆ ಗುದ್ದಾಟ' ಎಂಬ ತಮ್ಮ ಮುಂದಿನ ಬರವಣಿಗೆಯ ದಿಕ್ಕನ್ನು ಅವರು ಗುರುತಿಸಿಕೊಂಡಿದ್ದಾರೆ. 'ಇಂದಿನ ಜ್ವಲಂತ ಸಮಸ್ಯೆಗಳನ್ನು ಎತ್ತಿಕೊಂಡು ಕಲೆ ಮತ್ತು ಕಾಳಜಿ ಮೇಳೈಸಿ ಬ್ರೆಕ್ಟ್‌ನಂತೆ ನಾಟಕ ರಚಿಸಲು' ಪ್ರಯತ್ನಿಸಬೇಕೆಂಬ ಆಶಯ ಅವರು ಹೊಂದಿದ್ದಾರೆ. ಕನ್ನಡ ನಾಟಕ ರಂಗ ತನ್ನ ಹೊಸ ದಿಕ್ಕು ದೆಸೆಗಳನ್ನು ಅರಸುತ್ತಿರುವ ಇಂದಿನ ಕನ್ನಡ ಸಾಹಿತ್ಯ ಸಾಂಸ್ಕೃತಿಕ ಸಂದರ್ಭದಲ್ಲಿ ಅವರಿಂದ ಯಶಸ್ವಿ ಹೊಸ ಯತ್ನಗಳು ಸಾಧ್ಯವಾಗಲಿ ಎಂಬ ಸದಾಶಯ ಎಲ್ಲಾ ಕನ್ನಡ ಸಾಹಿತ್ಯ ನಾಟಕ ಪ್ರೇಮಿಗಳದ್ದೂ ಆಗಿದೆ.

ಈ ಮೇಲಿನ ಪುಸ್ತಕ ವಿಮರ್ಶೆಯೂ ಹೀಗೆ ಒಳ್ಳೆಯ ಸದಾಶಯ, ಹಾರೈಕೆಯಿಂದ ಮುಕ್ತಾಯವಾಗಿದೆ. ಆದರೆ ಅವರು ಇತರ ಕೃತಿಗಳಲ್ಲಿ ಮಾಡಿರುವ ಯಶಸ್ಸು ಸಾಧನೆಗಳನ್ನಾಗಲಿ ಇಲ್ಲಿ ಚರ್ಚಿಸಹೋಗಿಲ್ಲ. ಅದು ಅವರಿಗೆ ಪುಸ್ತಕ ವಿಮರ್ಶೆಗೆ ಹೊರತಾದ ವಿಷಯವೆಂದು ಭಾವಿಸಲಾಗಿದೆ. ಆದರೆ ಲೇಖಕರ ಇತರ ಕೃತಿಗಳೆಲ್ಲವನ್ನು ಪ್ರಸ್ತುತ ಅಂಕಣದಲ್ಲಿ ವಿಮರ್ಶಿಸುತ್ತಾ, ಅವುಗಳ ಒಳವಿವರಗಳನ್ನು ಹೇಳುತ್ತಲೇ ಪ್ರಸ್ತುತ ಕೃತಿಯು ಹಳೆ ಕೃತಿಗಳ ಜಾಲದಲ್ಲಿ ಕಳೆದು ಹೋಗುವ ಅಪಾಯವಿರುತ್ತದೆ. ಬಂದಿರುವ ಕೃತಿ ಹೊಸ ವಿವರಗಳನ್ನು ಹೊಸ ದೃಷ್ಟಿಕೋನಗಳನ್ನು ಒಳಗೊಂಡಿದ್ದಾಗ್ಯೂ ಅದನ್ನು ವಿಮರ್ಶಿಸುವ ಪುಸ್ತಕ ವಿಮರ್ಶಕರಿಗೆ ಅದರ ಅರಿವಿಲ್ಲದೆ ಹಳೆ ಕೃತಿಗಳನ್ನು ವಿಮರ್ಶಿಸುತ್ತಾ ಹಳೆಯ ಕೃತಿಗಳ ಬಗೆಗೆ ಭಾವನಾತ್ಮಕವಾಗಿ ಹೊಸ ಕೃತಿಯನ್ನು ಮರೆತು ಬಿಡುವ ಸಾಧ್ಯತೆಗಳಿರುತ್ತವೆ. ಇಂತಹ ಸಾಧ್ಯತೆಗಳನ್ನು ನಿವಾರಿಸಿಕೊಂಡು ಪುಸ್ತಕ ವಿಮರ್ಶೆ ಬಳಸುವುದು ಪುಸ್ತಕ ವಿಮರ್ಶಕರ ಮೇಲಿರುತ್ತದೆ.

೬.೪.೨. ಪ್ರಕಾರದ ಭಾಗವಾಗಿ ಚರ್ಚೆ ಅಸಾಧ್ಯ

ಪುಸ್ತಕ ವಿಮರ್ಶೆಯ 'ಕೃತಿ ಕೇಂದ್ರಿತ' ವಾಗಿರುವುದರಿಂದ ಅದು ಕೃತಿಯ ವಿವರಗಳತ್ತ ಹೊರಳುತ್ತದೆ. ಅಲ್ಲದೆ ಪುಸ್ತಕ ವಿಮರ್ಶೆಯ ಓದುವ ಓದುಗರು 'ಕೃತಿಯ ವಿವರವನ್ನಷ್ಟೇ ನಿರೀಕ್ಷಿಸುತ್ತಾರೆ. ಹಲವು ಪತ್ರಿಕೆಗಳಲ್ಲಿ ಬರುತ್ತಿರುವ ಪುಸ್ತಕ ವಿಮರ್ಶೆಗಳನ್ನು ನೋಡಿದಾಗ ಅವುಗಳು 'ಕೃತಿಯ ವಿವರಗಳಷ್ಟೇ' ಒಳಗೊಂಡಿವೆ. ಸಮಯ, ಸ್ಥಳ, ಪತ್ರಿಕೆಯ ಧೋರಣೆ ವಿಮರ್ಶಕರ ಮನೋಭಾವ ಇಲ್ಲಿ ಒಂದು ಪುಸ್ತಕ ವಿಮರ್ಶೆಯನ್ನು ನಿರ್ಧರಿಸುತ್ತವೆ. 'ತುರ್ತು ಮತ್ತು ಒತ್ತಡ'ಗಳು ಹೆಚ್ಚು ಪ್ರಭಾವಿತವಾದಾಗ ಪುಸ್ತಕ ವಿಮರ್ಶೆಗಳು ಹೆಚ್ಚು ವ್ಯಾಪಕತೆಯನ್ನು ಪಡೆಯುವುದಿಲ್ಲ. ವ್ಯಾಪಕ ಸ್ವರೂಪವನ್ನು ಪಡೆಯುವ ಅವಶ್ಯಕತೆ ಉಂಟಾಗುವುದು ಯಾವಾಗೆಂದರೆ ಕೃತಿಯ ಬಗೆಗೆ ಹಲವು ಒಳನೋಟಗಳನ್ನು ಹುಡುಕಲೆತ್ನಿಸಿದಾಗ. ಕೃತಿಯ ಒಳನೋಟಗಳನ್ನು ಶೋಧಿಸುವಾಗ ಪ್ರಕಾರದ ಮೂಲಕ ಅನ್ವೇಷಿಸಲು ವಿಮರ್ಶಕರು ತೊಡಗುತ್ತಾರೆ. ಪ್ರಕಾರದ ಮೂಲಕವಾಗಿ 'ಕೃತಿ ವಿಮರ್ಶೆ' ಯನ್ನು ಕಟ್ಟಲು ಪುಸ್ತಕ ವಿಮರ್ಶಕರ ಓದಿನ ವಿಸ್ತಾರಿಕೆಗೆ ಒಳಗಾಗಬೇಕು. ಹೀಗೆ ಹಲವು ಪ್ರಕ್ರಿಯೆಗಳಿಗೆ ಒಳಗಾಗಬೇಕಾದಾಗ ಪುಸ್ತಕ ವಿಮರ್ಶೆಯು ತುಂಬಾ ತಡವಾಗಿ ತುರ್ತನ್ನು ಮೀರಿ ನಿಧಾನದ ವಿಮರ್ಶೆಯಾಗಿ ಬೆಳೆಯುತ್ತದೆ. ಆದರೆ ಪುಸ್ತಕ ವಿಮರ್ಶೆಯ ಆಶಯ ವಿಮರ್ಶೆಯ ಬದಲಾಗಿ ಕೃತಿ ಬಗೆಗಿನ ಸರಳ ವಿವರವನ್ನು ತಿಳಿಸುವಂತಹದ್ದು. ಹೀಗೆ ಸಣ್ಣ ರೂಪವನ್ನು ಆಶಯವನ್ನೇ ಹೊಂದಿರುವ ಪುಸ್ತಕ ವಿಮರ್ಶೆ ಅತಿ

ದೀರ್ಘವಾದ ವಿಶ್ಲೇಷಣೆಗೆ ಹೊಂದುವುದಿಲ್ಲ. ಯಾಕೆಂದರೆ ಅದು ದೀರ್ಘವಾದ ವಿಶ್ಲೇಷಣೆಗೆ ತೊಡಗಿಕೊಂಡಾಗ ಅದು ಪುಸ್ತಕ ವಿಮರ್ಶೆಯಾಗಿರದೇ ಸಾಹಿತ್ಯ ವಿಮರ್ಶೆಯಾಗುವುದೇ ಅದಕ್ಕೆ ಕಾರಣ. ಇಷ್ಟೆಲ್ಲ ಕಾರಣಗಳಿಂದ ಪುಸ್ತಕ ವಿಮರ್ಶೆಗಳು ಕೃತಿ ಪ್ರಕಾರದ ಭಾಗವಾಗಿ ಬೆಳೆಯುವುದಿಲ್ಲ. ಕೆಲವು ಸಾಂದರ್ಭಿಕ ಪುಸ್ತಕ ವಿಮರ್ಶೆಗಳು ಇಂತಹ ಮಿತಿಗಳನ್ನು ಮೀರಿಯೂ ಕೆಲಸ ಮಾಡಿವೆ. ಆದರೆ ಪ್ರಕಾರದ ಬಗೆಗಿನ ಚರ್ಚೆಯ ಕೃತಿ ವಿಮರ್ಶೆಗಳು ವಿರಳವೆಂದೇ ಹೇಳಬಹುದು.

೬.೪.೩. ಭಿನ್ನಾಭಿಪ್ರಾಯ ರೂಪಿಸುವ ಸಾಧ್ಯತೆಯಿರುತ್ತದೆ

ಕೃತಿಯ ಬಗೆಗಿನ ಮೊದಲ ಅಭಿಪ್ರಾಯ ರೂಪಣೆ ಕೃತಿ ವಿಮರ್ಶೆಯೇ ಆಗಿರುವುದು ನಿರ್ವಿವಾದ ವಿಚಾರ. ಕೃತಿ ಬಂದ ಕಾಲಕ್ಕೆ ಸಾಮಾನ್ಯನಾದ ಓದುಗರು ಬಂದಂಥ ನೂರಾರು ಕೃತಿಗಳನ್ನು ಓದಲು ಅವರಿಗೆ ಸಾಕಷ್ಟು ಕಾಲವಕಾಶ ಮತ್ತು ತಾಳ್ಮೆ ಎರಡೂ ಈ ಆಧುನಿಕ ಯಾಂತ್ರಿಕ ಜಗತ್ತಿನಲ್ಲಿ ಇಲ್ಲ. ಆದರೂ ಅವರ ಓದಬೇಕೆಂಬ ಹವ್ಯಾಸ ಇಂತಹ ಕ್ಷಿಪ್ರಪ್ರಗತಿಯನ್ನು ಮೀರಿ ಪ್ರಯತ್ನಿಸುತ್ತದೆ. ಹಾಗಾಗಿ ಅವರ ಎಲ್ಲ ಕೃತಿಗಳ ಬದಲಾಗಿ ಹೊಸದಾಗಿ ಬಂದಂಥ ಕೃತಿಗಳನ್ನು ಪ್ರಾತಿನಿಧಿಕವಾಗಿಯಾದರೂ ಗಮನಿಸಬಹುದಾದ ಕೃತಿಗಳೆಂದು ಗುರುತಿಸಿಕೊಳ್ಳಬೇಕಾದ ಅನಿವಾರ್ಯತೆಯಿರುತ್ತದೆ. ಇಂತಹ ಸಾಂದರ್ಭಿಕ ಅನಿವಾರ್ಯತೆಯನ್ನು ಕೃತಿ ವಿಮರ್ಶೆಗಳು ನಿವಾರಿಸುತ್ತವೆ. ಅಂದರೆ 'ಪುಸ್ತಕ ವಿಮರ್ಶೆ' ಓದಿ ಕೃತಿಯ ಓದಿಗೆ ಇಳಿಯುವ ಕೆಟ್ಟ ಹವ್ಯಾಸವನ್ನು ಪುಸ್ತಕ ವಿಮರ್ಶೆಗಳು ಬೆಳೆಸುತ್ತವೆ. ಇನ್ನೊಂದು ಸಾಧ್ಯತೆಯೆಂದರೆ ಓದುಗರು ಬರುತ್ತಿರುವ ಪುಸ್ತಕ ಪ್ರವಾಹವನ್ನು ನೋಡಿ ಹೆದರಿ ಕೇವಲ ಕೃತಿ ವಿಮರ್ಶೆಯನ್ನು ಓದಿ ಕೃತಿಯ ವಿವರಗಳು ಹೀಗೀಗೆ ಇರಬಹುದೆಂದು ಕಲ್ಪಿಸಿಕೊಳ್ಳುತ್ತಾರೆ. ಹಾಗೇ ಕೃತಿ ತಿಳಿದಿದೆಯೆಂಬ ಅಹಂಮಿಕೆಯನ್ನು ಪ್ರದರ್ಶಿಸುತ್ತಾರೆ. ಪುಸ್ತಕ ವಿಮರ್ಶಕರು ಏನು ವಿಚಾರವನ್ನು ಹೇಳಿರುತ್ತಾರೆಯೋ ಅದನ್ನು ಒಪ್ಪಿಕೊಂಡು ತಮ್ಮ ವಿಚಾರಗಳಂತೆ ಪ್ರಚಾರ ಮಾಡುತ್ತಾರೆ. ಹಾಗಾಗಿ ಅಭಿಪ್ರಾಯವನ್ನು ಕೃತಿ ನೋಡದೆಯೇ 'ರೆಡಿಮೇಡ್' ಆಗಿ ಓದುಗರು ಪಡೆದುಬಿಡುತ್ತಾರೆ. ಇಂತಹ ಸಂದರ್ಭದಲ್ಲಿ ಕೃತಿಯ ನಿಜವಾದ ಅರ್ಥವೂ ಮರೆಮಾಚುವ ಸಂಭವವೂ ಹೆಚ್ಚು ಇನ್ನೊಂದು ಸಂದರ್ಭದಲ್ಲಿ ಪುಸ್ತಕ ವಿಮರ್ಶಕರಿಂದಲೂ ಇಂತಹ ಅನಾಹುತಗಳಾಗುತ್ತವೆ. ತಮ್ಮ ಓದಿನ ಹಿನ್ನೆಲೆಯಲ್ಲಿ ಕೃತಿ ವಿಮರ್ಶೆಗೆ ತೊಡಗದೆ ಏಕಾಏಕಿ ಏನೋ ಹೇಳಿ ಮುಗಿಸಿಬಿಡುವುದರಿಂದ ಕೆಲವೊಮ್ಮೆ 'ಕೃತಿ ವಿಮರ್ಶೆ'ಯ ಲೇಖನವನ್ನು ಓದದೇ ಇರುವ ಸಂಭವವೂ ಉಂಟು. ಒಂದು ರೀತಿಯ ಬೇಜವಾಬ್ದಾರಿತನವು ಆವರಿಸುವುದರಿಂದ, ಕೃತಿ ಲೇಖಕರ ಬಗೆಗಿನ ಅಗೌರವ ಮುಂತಾದವುಗಳಿಂದ ಇಂತಹ ಹಲವು ಅತಿರೇಕಗಳು ಪುಸ್ತಕ ವಿಮರ್ಶೆ ಜನಾಭಿಪ್ರಾಯ ರೂಪಿಸುವಲ್ಲಿ ಬಂದೆರಗುತ್ತವೆ.

ಇನ್ನು ಕೆಲವು ಸಂದರ್ಭಗಳಲ್ಲಿ ಪುಸ್ತಕ ವಿಮರ್ಶಕರು ತಮ್ಮ ಬೌದ್ಧಿಕ ಜಿಜ್ಞಾಸೆಯನ್ನು ಹೇರಲು 'ಪುಸ್ತಕ ವಿಮರ್ಶೆ'ಯನ್ನು ವೇದಿಕೆ ಮಾಡಿಕೊಂಡಿರುವುದರಿಂದ ಕೃತಿಗನುಗುಣವಾಗಿ ಅವರು ತಿಳಿದ ಎಲ್ಲ ವಿಚಾರಗಳೇ ಚರ್ಚೆಗಳಾಗುತ್ತವೆ. ಆಗ ಓದುಗರಿಗೆ 'ಪುಸ್ತಕ ವಿಮರ್ಶೆ' ಅರ್ಥಮಾಡಿಕೊಳ್ಳುವಲ್ಲಿ

ಕಸಿವಿಸಿಯಾಗುತ್ತದೆ. ಕೆಲವೊಮ್ಮೆ ಅತಿನಿಷ್ಠುರವಾದ ಹೇಳಿಕೆಗಳನ್ನು ನೀಡುವುದರಿಂದ ಕೃತಿಯ ಬಗೆಗೆ ವಿಭಿನ್ನ ಅಭಿಪ್ರಾಯಗಳು ರೂಪಿತವಾಗುವುದುಂಟು.

೬.೪.೪. ನಿರ್ದಿಷ್ಟ ಪುಸ್ತಕ ವಿಮರ್ಶಕರು ಇರುವುದಿಲ್ಲ.

'ಸಾಹಿತ್ಯ ವಿಮರ್ಶೆ'ಯನ್ನು ಬರೆಯಲು ನಿರ್ದಿಷ್ಟವಾದ ವಿಮರ್ಶಕರು ನಿರ್ಮಾಣವಾಗಿರುತ್ತಾರೆ. ಏಕೆಂದರೆ ಅದೊಂದು ಸಂಪೂರ್ಣ ಜವಾಬ್ದಾರಿಯುತ ಕೆಲಸವಾಗಿರುತ್ತದೆ. ಅಲ್ಲದೆ ವಿಮರ್ಶೆಯೆಂಬುದು ಹಲವು ಓದುಗಳ ಒಂದು ತಾತ್ವಿಕವಾದ ವೈಯಕ್ತಿಕತೆಗಳಿಂದ ಹುಟ್ಟಿ ಅದು ಸಾರ್ವತ್ರೀಕರಣಗೊಳ್ಳುತ್ತದೆ. ವಿಮರ್ಶಕರು ಕೃತಿ ಮೌಲ್ಯ ನಿರ್ಣಯ ಮಾಡುವಾಗ ಬೌದ್ಧಿಕ ಸೈದ್ದಾಂತಿಕ ಕಲಾತ್ಮಕ ಅಂಶಗಳನ್ನು ಒಗ್ಗೂಡಿಸಿ ವಿವೇಚಿಸುತ್ತಾರೆ. ಆದರೆ ಈ ಎಲ್ಲಾ ಜವಾಬ್ದಾರಿಗಳು 'ಪುಸ್ತಕ ವಿಮರ್ಶೆ' ಗಾಗಲೀ, ಪುಸ್ತಕ ವಿಮರ್ಶಕರಿಗಾಗಲೀ ಇಲ್ಲ. ಈ ಕಾರಣದಿಂದ ಪುಸ್ತಕ ವಿಮರ್ಶೆಯನ್ನು ಯಾರು ಬೇಕಾದರೂ ಬರೆಯಬಹುದೆಂಬ ವಿಚಾರ ಬಳಕೆಯಲ್ಲಿದೆ. ಕೃತಿಯ ಬಗೆಗೆ ಸಾಮಾನ್ಯ ವಿಚಾರಗಳನ್ನು ತಿಳಿದರೆ ಸಾಕು ಪುಸ್ತಕ ವಿಮರ್ಶೆ ಬರೆಯಬಹುದೆಂಬ ಅಭಿಪ್ರಾಯವಿರುವುದರಿಂದ ಅದಕ್ಕೆ ನಿರ್ದಿಷ್ಟ, ಪುಸ್ತಕ ವಿಮರ್ಶಕರು ಅಗತ್ಯವಿಲ್ಲ. ಈಗ ಪತ್ರಿಕೆಗಳಲ್ಲಿ ಬರುತ್ತಿರುವ ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೆ ಅವುಗಳನ್ನು ಬರೆಯಲು ನಿರ್ದಿಷ್ಟ ವಿಮರ್ಶಕರೇನೂ ಇಲ್ಲ. ಕೆಲವು ಗಂಭೀರವಾದ ಪತ್ರಿಕೆಗಳನ್ನು ಅದರಲ್ಲೂ ಸಾಹಿತ್ಯ ಪತ್ರಿಕೆಗಳನ್ನು ಬಿಟ್ಟರೆ ಉಳಿದೆಲ್ಲ ಪತ್ರಿಕೆಗಳಲ್ಲಿ ಯಾರ್ಯಾರೋ ಬರೆಯುತ್ತಿರುವುದನ್ನು ಕಾಣಬಹುದು. ವೈದ್ಯಕೀಯ ಕ್ಷೇತ್ರದ ಕೃತಿಯುನ್ನು ಯಾರೋ ಧಾರ್ಮಿಕ ವಿದ್ವಾಂಸರು ವಿಮರ್ಶಿಸುತ್ತಿರಬಹುದು. ಹೀಗೆ ಇದಕ್ಕೆ ಸಂಬಂಧಪಡದಿದ್ದರೂ ಆ ಕ್ಷೇತ್ರದ ಬಗ್ಗೆ ಆಳವಾದ ಜ್ಞಾನವಿಲ್ಲದಿರುವವರು ಬರೆಯುವ ಅಪಾಯವಿದೆ. ಈ ಕಾರಣದಿಂದ 'ಪುಸ್ತಕ ವಿಮರ್ಶೆ'ಯಲ್ಲಿ ವಿವರಗಳು ಕೃತಿಯ ಒಳಗೆ ಗಿರಕಿ ಹೊಡೆಯುತ್ತಿರುತ್ತವೆ. ಇದರಿಂದ ಕೃತಿಯ ಬಗೆಗೆ ನಿರ್ದಿಷ್ಟವಾದ ಅರ್ಥವನ್ನು ನೀಡುವಲ್ಲಿ ಪುಸ್ತಕ ವಿಮರ್ಶೆಗಳಿಂದ ಸಾಧ್ಯವಾಗುವುದು ವಿರಳ. ಕೃತಿಯನ್ನು ಕುರಿತು ಆಯಾ ಕ್ಷೇತ್ರದಲ್ಲಿ ಗಂಭೀರವಾಗಿ ಚಿಂತನೆ ನಡೆಸುವವರ ಕೈಯಲ್ಲಿ ಮಾಡಿಸಿದರೆ ಇಂತಹ ಸಂದಿಗ್ಧತೆಗಳಿಂದ ತಪ್ಪಿಸಿಕೊಳ್ಳಬಹುದು. ಇಂಥವುಗಳಿಂದ ಪುಸ್ತಕ ವಿಮರ್ಶೆ ಒಂದು ಸೈದ್ಧಾಂತಿಕ ರೂಪ ಪಡೆಯಲು ಕಷ್ಟವಾಗುತ್ತದೆ.

೬.೪.೫. ಸಕಾರಾತ್ಮಕ (positive) ಆದರೆ ಹೊಗಳಿಕೆಯುಳ್ಳದಾಗಿತ್ತದೆ. ನಕಾರಾತ್ಮಕ (negative) ಆದರೆ ಹೊಸ ಲೇಖಕರ ಉತ್ಸಾಹ ಕುಂದಿಸುತ್ತದೆ.

ಕೃತಿಯ ಮೊದಲ ಓದೇ ಅದರ ಮುಂದಿನ ಬೆಳವಣಿಗೆಯನ್ನು ನಿರ್ಧರಿಸುವುದು ಸಹಜ. ಹಾಗಾಗಿ ಮೊದಲ ಓದೆಂಬುದು ಪುಸ್ತಕ ವಿಮರ್ಶೆಯೇ ಆಗಿದೆ. ತುಂಬಾ ವಸ್ತುನಿಷ್ಠವಾಗಿ ಕೃತಿಯನ್ನು ವಿಮರ್ಶಿಸುವುದು ಹೊಸ ಲೇಖಕರ ದೃಷ್ಟಿಯಲ್ಲಿ ಅಪಾಯಕಾರಿಯಾದುದು. ಅದೀಗ ತಾನೇ ಸಾಹಿತ್ಯ ಪ್ರಪಂಚಕ್ಕೆ ಮುಜುಗರ, ಸಂಕೋಚದಿಂದಲೇ ಕಾಲಿರಿಸುತ್ತಿರುವ ಹೊಸ ಉದಯೋನ್ಮುಖರಿಗೆ ಅತಿ

ವಸ್ತುನಿಷ್ಠತೆ ಮತ್ತು ನಕಾರಾತ್ಮಕ ದೃಷ್ಟಿಯ 'ಪುಸ್ತಕ ವಿಮರ್ಶೆ' ಯಿಂದ ಉತ್ಸಾಹ ಕುಂದುವಂತೆ ಮಾಡುತ್ತದೆ, ಅಲ್ಲದೆ ಇಡೀ ಸಾಹಿತ್ಯ ಕ್ಷೇತ್ರದಿಂದ ವಿಮುಖರಾಗುವಂತೆ ಮಾಡುತ್ತದೆ. ಇಂಥ ತೀವ್ರ ಪ್ರತಿಗಾಮಿ ಮಾನದಂಡಗಳಿಂದ ಕಡೆಗಣಿಸಲ್ಪಟ್ಟ ಅವರು ಮತ್ತೆ ಸಾಹಿತ್ಯದಿಂದಲೇ ದೂರ ಸರಿಯಬಹುದು. ಸಂವಾದ ಪತ್ರಿಕೆ ಇಂಥ 'ಪುಸ್ತಕ ವಿಮರ್ಶಕ'ರಿಂದ ದೂಷಣೆಗೊಳಗಾದ ಕೃತಿಗಳು ಅಥವಾ 'ಪುಸ್ತಕ ವಿಮರ್ಶೆಗೆ' ಪರಿಗಣಿಸದ ಕೃತಿ ಲೇಖಕರನ್ನು 'ಕವಿಕಾವ್ಯ' ಎಂಬ ಅಂಕಣದಲ್ಲಿ ಪರಿಚಯಿಸುತ್ತದೆ. ಅದಕ್ಕೆ ಸಂಪಾದಕರು ಹೀಗೆ ಹೇಳುತ್ತಾರೆ.

ಕಾವ್ಯವನ್ನು ಆಸ್ವಾದಿಸುವ ನಮ್ಮ ಸಹೃದಯ ಎಷ್ಟು ವ್ಯಾಪಾರೀಕರಣಕ್ಕೆ ಒಳಗಾಗಿದೆಯೆಂದರೆ ನಾಡಿನಾದ್ಯಂತ ಈಗ ಹಲವು ಮುಖ್ಯ ಕೇಂದ್ರಗಳಲ್ಲಿ ಪರಸ್ಪರ ವಿಮರ್ಶೆಯ ಸಂಘಗಳು ಸಕ್ರಿಯವಾಗಿದ್ದು. ಈ ಸಂಘಗಳ ಕನಿಷ್ಠ ಸಹ ಸದಸ್ಯರೂ ಆಗಲಾಗದವರ ಕಾವ್ಯ ಪ್ರಕಟವಾಗಿಯೂ ಬೆಳಕಿಗೆ ಬಾರದಂತಾಗಿದೆ. ವ್ಯಾಪಾರೀ ಸಂಸ್ಥೆಗಳಿಂದ ವಿಮರ್ಶಾ ಸಂಸ್ಥೆಗಳು ಬೆಳೆದು ನಿಂತಿದ್ದು, ಕಾವ್ಯ ಜಾಹಿರಾತಿಗೆ ಸಿಕ್ಕುವ ಸರಕಾಗುತ್ತಿದೆ. ಈ ವಿಮರ್ಶೆಗಳೆಂಬ ಜಾಹಿರಾತು ಗಳಿಸಲಾಗದ ಕಾವ್ಯ ಈ ಸ್ಪರ್ಧಿ ಪ್ರಪಂಚದಲ್ಲಿ ಕಾವ್ಯ ರಸಿಕರ ಗಮನಕ್ಕೆ ಬಾರದೆ, ಮೌಲ್ಯಮಾಪನಕ್ಕೆ ಒಳಗಾಗದೆ ಹಾಗೂ ನಶಿಸಿ ಹೋಗುತ್ತದೆ. ಆದರೆ ಹೀಗೆ ನಶಿಸಿ ಹೋಗಬಾರದು ಇಬ್ಬರು ಕವಿಗಳನ್ನು ಇಲ್ಲಿ ಪರಿಚಯಿಸಲಾಗಿದೆ. -------[೨೨]

ಈ ಮಾತುಗಳು ವಿಮರ್ಶೆ/ಪುಸ್ತಕ ವಿಮರ್ಶೆಯ ಪರಿಸ್ಥಿತಿಯನ್ನು ಎತ್ತಿ ಹಿಡಿಯುತ್ತವೆ. ಹೊಸ ಲೇಖಕರು ಹೇಗೆ ಕಾಣೆಯಾಗುತ್ತಾರೆ ಎಂಬುದರ ವಿಶ್ಲೇಷಣೆಯೂ ಆಗಿದೆ . ಆದರೆ ಇಂಥ ಒಂದು ಅಂಕಣ ತೆಗೆದು ಕಳೆದು ಹೋದ ಕೃತಿ, ಲೇಖಕರನ್ನು ಪರಿಚಯಿಸುವ ಕೆಲಸ ಶ್ಲಾಘನೀಯ. ಈ ರೀತಿಯ ಅವಕಾಶಗಳಿಗೆ ಎಡೆಯಾಗದಂತೆ ಪುಸ್ತಕ ವಿಮರ್ಶಕರು ಎಚ್ಚರವನ್ನು ಕಾಯ್ದುಕೊಳ್ಳಬೇಕಾಗುತ್ತದೆ. ಇಂತಹ ಎಚ್ಚರವನ್ನು ಇಟ್ಟುಕೊಂಡಾಗ ಆ 'ಪುಸ್ತಕ ವಿಮರ್ಶೆ' ಇನ್ನೊಂದು ಸ್ವರೂಪದ ಲೇಖನವಾಗಬಹುದು. ಅಂದರೆ ಹೊಸ ಲೇಖಕರಿಗೊಂದು, ಹಳೆಯ ಲೇಖಕರಿಗೊಂದು ಎಂಬ ಎರಡು ಮಾನದಂಡಗಳನ್ನು ಪುಸ್ತಕ ವಿಮರ್ಶಕರ ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಇಂತಹ ಸಂದರ್ಭದಲ್ಲಿ 'ಪುಸ್ತಕ ವಿಮರ್ಶಕ'ರಿಗೆ ಯಾವ ರೀತಿಯ ತೀರ್ಮಾನಗಳಿಗೆ ಬದ್ಧನಾಗಬೇಕು ಎಂಬುದು ಬಿಡಿಸಲಾಗದ ಪ್ರಶ್ನೆಯಾಗುಳಿದುಬಿಡುತ್ತದೆ.

ಹೊಸಬ ಬರೆದವನೆಂದು ಅಸಡ್ಡೆಯಿಂದ, ಹಳಬರು, ಈಗಾಗಲೇ ಹೆಸರು ಮಾಡಿದವರು ಬರದವರೆಂದು ಅತಿ ಆದರದಿಂದ ವಿಮರ್ಶಿಸುವುದು ಪುಸ್ತಕ ವಿಮರ್ಶಕರ ಸೋಗಲಾಡಿತನವಾಗುತ್ತದೆ. ಮೊದಲ ಓದು ಸಕಾರಾತ್ಮಕವಾದರೆ ಹೊಗಳಿಕೆಯುಳ್ಳದ್ದಾಗಿರುತ್ತದೆ ಎಂಬುದನ್ನು ಎಲ್ಲ ಪುಸ್ತಕ ವಿಮರ್ಶೆಗಳಿಗೂ ಅನ್ವಯಿಸಿ ಹೇಳಲಾಗುವುದಿಲ್ಲ. ಈ ರೀತಿಯ ಸಕಾರಾತ್ಮಕ ಚಿಂತನೆ ಎಲ್ಲ ಕೃತಿಗಳಿಗೂ ಲಭಿಸುವುದಿಲ್ಲ.

ಹೀಗಾಗಿ ಸಕಾರಾತ್ಮಕ ಓದೇ ಮುನ್ನುಡಿಗಳು, ಬೆನ್ನುಡಿಗಳು ಎಂದು ಗುರುತಿಸಬಹುದು. ಏಕೆಂದರೆ ಮುನ್ನುಡಿ ಬೆನ್ನುಡಿಗಳು ಹೊಗಳಿಕೆ ಮತ್ತು ಪ್ರಶಂಸಾತ್ಮಕ ಧೋರಣೆಗಳನ್ನು ಉಳ್ಳವುಗಳಾಗಿವೆ, ಆದರೆ ನವ್ಯ ಸಂದರ್ಭದಲ್ಲಿ ಗಿರಿಯವರ 'ಗತಿ-ಸ್ಥಿತಿ' ಕುರಿತು ಯು. ಆರ್. ಅನಂತಮೂರ್ತಿ ಮೊದಲೇ

ಬರೆದಿದ್ದು ಇದಕ್ಕೆ ಸಮರ್ಥವಾದ ಉದಾಹರಣೆ ಎನ್ನಬಹುದು. ಅಲ್ಲಿನ ಅತಿ ಪ್ರಶಂಸಾತ್ಮಕ ವಿಮರ್ಶೆ ಓದುಗರನ್ನು ದಾರಿ ತಪ್ಪಿಸಿತ್ತು. ಆದರೆ ಅನಂತರ ಆದ ಚರ್ಚೆಗಳು ನಿಜವಾದ ಮೌಲ್ಯವನ್ನು ಎತ್ತಿಹಿಡಿದವು. ಮೊದಲ ಓದು ಸಕರಾತ್ಮಕ ಓದಾಗುವುದು ಆತ್ಮೀಯರ ಕೃತಿಗಳಷ್ಟೇ ಎಂಬುದನ್ನು ಇತ್ತೀಚಿನ ಹೊಗಳಿಕೆಯುಳ್ಳ ಪ್ರಶಂಸಾತ್ಮಕ ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೆ ತಿಳಿಯುತ್ತದೆ.

ಕೊನೆ ಟಿಪ್ಪಣಿಗಳು:

೧. ಶತಮಾನ ಸಾಹಿತ್ಯ ವಿಮರ್ಶೆ - ಪು. xxxii
೨. ಮಯೂರ - ಡಿಸೆಂಬರ್ ೨೦೦೧.
೩. ಯುಗಧರ್ಮ ಮತ್ತು ಸಾಹಿತ್ಯದರ್ಶನ - ಪು. ೩೬೨.
೪. ಸಾಹಿತ್ಯ ವಿಮರ್ಶೆ - ಆರು ಉಪನ್ಯಾಸಗಳು - ಪು. ೪.
೫. ಶಕ್ತಿ ಶಾರದೆಯ ಮೇಳ - ಪು. ೧೦.
೬. ಅಂಕಣ ಸಂಚಿಕೆ ೪ - ೧೯೮೦.
೭. ವಿಮರ್ಶೆಯ ಸವಾಲುಗಳು - ಪು. ೩೯.
೮. ಪರಂಪರೆ - ಪ್ರತಿರೋಧ - ಪು. ೧೮.
೯. ಲೇಖನ : ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ - ಸಂಕ್ರಮಣ ೯೦ - ೧೯೭೪.
೧೦. ಶತಮಾನದ ಸಾಹಿತ್ಯ ವಿಮರ್ಶೆ - ಪು. xxvi
೧೧. ವಿಮರ್ಶೆಯ ಸವಾಲುಗಳು - ಪು. ೧೩.
೧೨. ಸಂಕ್ರಮಣ - ೨೦೫-೨೦೬, ೧೯೮೯.
೧೩. ಸಂಕ್ರಮಣ ೨೦೯ - ೧೯೯೦.
೧೪. ಸಂಕ್ರಮಣ ೨೦೯ - ೧೯೯೦.
೧೫. ಸಂಕ್ರಮಣ ೨೧೦-೨೧೧-೨೧೨ - ೧೯೯೦
೧೬. ಸಾಹಿತ್ಯ ವಾರ್ಷಿಕ - ೧೯೮೦.
೧೭. ಅನ್ವೇಷಣೆ, ೯-೧೦ - ೧೯೮೫.
೧೮. ಜನಪರ ಕರ್ನಾಟಕ ಸಂಚಿಕೆ ೧೦, ೨೩-೦೫-೨೦೦೨.
೧೯. ಪುಸ್ತಕ ಮಾಹಿತಿ ಸಂಚಿಕೆ - ೪, ಜುಲೈ ೧೯೯೯.
೨೦. ಪುಸ್ತಕ ಮಾಹಿತಿ ಸಂಚಿಕೆ - ೬, ಸೆಪ್ಟಂಬರ್ ೧೯೯೯.
೨೧. ಸಂವಾದ ಸಂಚಿಕೆ - ೨೮, ೧೯೯೨.
೨೨. ಸಂವಾದ ಸಂಚಿಕೆ - ೭, ೧೯೮೮.

ಅಧ್ಯಾಯ - ೭

ಪುಸ್ತಕ ವಿಮರ್ಶೆಯ ಸಮಕಾಲೀನ ಸ್ವರೂಪ ಮತ್ತು ಬೆಳವಣಿಗೆಗಳು

ಪುಸ್ತಕ ವಿಮರ್ಶೆಯ ಸಮಕಾಲೀನ ಸ್ವರೂಪ ಮತ್ತು ಬೆಳವಣಿಗೆಗಳು

ಪುಸ್ತಕ ವಿಮರ್ಶೆ ಹಲವು ವಿನ್ಯಾಸ ವೈವಿಧ್ಯಗಳನ್ನು ಪಡೆದು, ಪ್ರಸ್ತುತ ಸಂದರ್ಭದಲ್ಲಿ ಒಟ್ಟು ಕನ್ನಡ ವಿಮರ್ಶೆಯನ್ನು ಕಟ್ಟುತ್ತಿದೆ. ಪುಸ್ತಕ ವಿಮರ್ಶೆ ಸಾಹಿತ್ಯ ವಿಮರ್ಶೆಗೆ ಹೆದ್ದಾರಿಯನ್ನು ನಿರ್ಮಿಸದಿದ್ದರೂ ಕೊನೆಯ ಪಕ್ಷ ಕಿರುದಾರಿಗಳನ್ನಂತೂ ಸೃಷ್ಟಿಸುತ್ತದೆ. ಮೂರ್ತವಾದ ವಿಚಾರದಿಂದ ಪುಸ್ತಕ ವಿಮರ್ಶೆ ಆರಂಭವಾಗಿ ಅಮೂರ್ತವಾದ ವಿಚಾರಗಳತ್ತ ಹರಿಯುತ್ತದೆ. ಪುಸ್ತಕ ವಿಮರ್ಶೆಗೆ ಮುಂದಿನ ಹೊಸದಾರಿಯನ್ನು ಕಂಡುಕೊಳ್ಳಬೇಕಾದರೆ ಪ್ರಸ್ತುತದಲ್ಲಿ ಪುಸ್ತಕ ವಿಮರ್ಶೆ ಇರುವ ಸ್ವರೂಪವನ್ನು ಗುರುತಿಸಿಕೊಳ್ಳಬೇಕಾಗಿದೆ. ಹಲವು ವಿಭಿನ್ನ ನಿಲುವುಗಳ ಮೂಲಕ ಪುಸ್ತಕ ವಿಮರ್ಶೆ ಹುಟ್ಟಿದೆ. ಒಬ್ಬೊಬ್ಬ ಪುಸ್ತಕ ವಿಮರ್ಶಕರ ಮನೋಭಾವವೂ ಒಂದೊಂದು ರೀತಿ ಇದೆ. ಒಬ್ಬರು ಒಂದೇ ಕೃತಿಯನ್ನು ವಿಮರ್ಶಿಸುವುದಕ್ಕೂ ಮತ್ತೊಬ್ಬರು ಅದನ್ನು ವಿಮರ್ಶಿಸುವುದಕ್ಕೂ ಭಿನ್ನ ನಿಲುವುಗಳನ್ನು ಕಾಣಬಹುದು. ಕೃತಿ ಒಂದೇ ಆದರೂ ಪುಸ್ತಕ ವಿಮರ್ಶೆಯಲ್ಲಿ ಅಭಿವ್ಯಕ್ತವಾಗುವುದು ಹಲವು ನಿಲುವುಗಳು; ಹಲವು ಆಲೋಚನೆಗಳು. ಈ ಹಲವು ಬಗೆಯ ಆಲೋಚನೆಗಳು ಪುಸ್ತಕ ವಿಮರ್ಶೆಯಲ್ಲಿ ಪ್ರತಿ ಬಿಂಬಿತವಾಗುತ್ತವೆ. ಹಾಗಾಗಿ ಕೃತಿಗೆ ಒಂದೇ ಬಗೆಯ ವಿಮರ್ಶೆವೆಂಬುದೇ ಇರುವುದಿಲ್ಲ. ಒಂದೇ ಕೃತಿಯನ್ನು ಹಲವು ಪತ್ರಿಕೆಗಳು ವಿಶ್ಲೇಷಿಸಿದಾಗ ನಿಲುವುಗಳಲ್ಲಿ ವ್ಯತ್ಯಾಸವಾಗುವುದು ಸಹಜ.

ಪುಸ್ತಕ ವಿಮರ್ಶೆ ಪತ್ರಿಕೆಯ ನಿಲುವುಗಳಿಗೆ, ಪುಸ್ತಕ ವಿಮರ್ಶಕರ ನಿಲುವುಗಳಿಗೆ ಬದ್ಧವಾಗಿರುತ್ತದೆ. ಒಬ್ಬ ಪುಸ್ತಕ ವಿಮರ್ಶಕರು ಒಂದು ಕೃತಿಯ ಬಗ್ಗೆ ತಳೆದ ನಿಲುವು ಅದು ಮುಂದಿನ ವಿಮರ್ಶೆಗೆ ಹಾದಿಯಾಗುತ್ತದೆ. ಇಲ್ಲವೆ ಹಲವು ಪ್ರತಿಕ್ರಿಯೆಗೆ ಗುರಿಯಾಗುತ್ತದೆ. ಹೀಗಾಗಿ ಪುಸ್ತಕ ವಿಮರ್ಶೆಯೆಂಬುದಕ್ಕೆ 'ಇದಮಿತ್ಥಂ' ಎಂದು ಹೇಳುವ ಹಾಗಿಲ್ಲ. ಹಾಗೇನಾದರೂ 'ಇದಮಿತ್ಥಂ' ಎಂದು ಸ್ವರೂಪ ಕಟ್ಟಿದರೆ ಎಲ್ಲ ಪುಸ್ತಕ ವಿಮರ್ಶೆಗಳು ಒಂದೇ ರೀತಿಯವುಗಳಾಗುತ್ತವೆ. ಆಗ ಅದನ್ನು ವಿಶ್ಲೇಷಿಸುವ ಸಂದರ್ಭವೇ ಬರುವುದಿಲ್ಲ, ಅಧ್ಯಯನ ಮಾಡುವ ಅಗತ್ಯವೇ ಇರುವುದಿಲ್ಲ. ಆದರೆ ಪ್ರಸ್ತುತ ಸಂದರ್ಭದಲ್ಲಿ ಪುಸ್ತಕ ವಿಮರ್ಶೆ ಒಂದು ನಿರ್ದಿಷ್ಟ ಆಕಾರ, ಸ್ಥಿರವಾದ ಮಾದರಿಯೆಂಬುದಕ್ಕೆ ಒಗ್ಗಿಕೊಂಡಿಲ್ಲ.

೭.೧. ಸಮಕಾಲೀನ ಸ್ವರೂಪ

ಹಲವು ಹೊಸದಾರಿಗಳನ್ನು ಕಂಡುಕೊಳ್ಳುವ ಯತ್ನದಲ್ಲಿ ತೊಡಗಿರುವ 'ಪುಸ್ತಕ ವಿಮರ್ಶೆ'ಯು ತನ್ನ ಹಿಂದಿನ ಸ್ಥಿತಿಯನ್ನು ಅವಲೋಕನ ಮಾಡುವುದರೊಂದಿಗೆ ಹೊಸದಾರಿಯನ್ನು ಹುಡುಕಿಕೊಳ್ಳುತ್ತಿರುವುದನ್ನು ಕಾಣಬಹುದು. ಹೀಗಾಗಿ ಇಂದು ಪುಸ್ತಕ ವಿಮರ್ಶೆಯ ಸದ್ಯದ ಸ್ಥಿತಿಯನ್ನು ಪರಾಮರ್ಶಿಸಬೇಕಾಗಿದೆ. ಸೃಜನಶೀಲ ಲೇಖಕರ ಪ್ರೀತಿ ಹಾಗೂ ಕೋಪಕ್ಕೆ ಗುರಿಯಾಗಿರುವ 'ಪುಸ್ತಕ ವಿಮರ್ಶೆ' ತನ್ನ ಕೊರತೆಗಳನ್ನು ತುಂಬಿಕೊಳ್ಳುತ್ತಲೇ ಹೊಸ ನಮೂನೆಯ ವಿನ್ಯಾಸವನ್ನು ಸದ್ಯದ ಸಂದರ್ಭದಲ್ಲಿ ನಿರ್ಮಿಸಿಕೊಳ್ಳುತ್ತಿದೆ.

ಇಂಥ ಸಂದರ್ಭದಲ್ಲಿ ಈಗ ಬರುತ್ತಿರುವ ಪುಸ್ತಕ ವಿಮರ್ಶೆಗಳನ್ನು ಪಟ್ಟಿಮಾಡಿಕೊಂಡು ಅವುಗಳ ಲಕ್ಷಣಗಳನ್ನಾಧರಿಸಿ ಸ್ಥೂಲ ಸ್ವರೂಪವನ್ನು ನಿರ್ಮಿಸಬಹುದು. ಆಗ ಈ ಕೆಳಗಿನ ಮುಖ್ಯ ಅಂಶಗಳು 'ಕನ್ನಡ ಪುಸ್ತಕ ವಿಮರ್ಶೆ'ಯನ್ನು ಬೆಳೆಸುತ್ತಿರುವ ಅದರೊಂದಿಗೆ ನಿಯಂತ್ರಿಸುವ ಅಂಶಗಳಾಗಿಯೂ ತೋರುತ್ತವೆ.

(೧) ಯಾಕೆ ಪುಸ್ತಕ ವಿಮರ್ಶೆ ವಿಭಿನ್ನವಾಗಿವೆ?

(೨) ಒಂದು ಶಾಸ್ತ್ರವಾಗಿ ಶಿಸ್ತಾಗಿ ಬೆಳೆಯದಿರುವುದು ಕಾರಣವೇ?

(೩) ವಿಭಿನ್ನ ಸಾಮಾಜಿಕ ಸ್ತರದ ವ್ಯಕ್ತಿಗಳು ಬರೆಯವುದು ಮತ್ತು ವಿಭಿನ್ನ ಕ್ಷೇತ್ರದವರು ಬರೆಯುವುದು ಕಾರಣವೇ?

(೪) ವಿಭಿನ್ನ ದೃಷ್ಟಿಕೋನದ ಲೇಖಕರು ಬರೆಯುವುದು ಮತ್ತು ವಿಭಿನ್ನ ಪತ್ರಿಕೆಗಳು ತಮ್ಮದೇ ನಿಲುವನ್ನು ತಳೆದಿರುವುದು ಕಾರಣವೇ?

ಈ ಪ್ರಸ್ತುತ ಅಧ್ಯಯನವು ಈ ಪ್ರಶ್ನೆಗಳ ಮೂಲಕವೇ ಬಹುತೇಕ ನಡೆದಿದೆ. ಆದರೂ ಅಲ್ಲಲ್ಲಿ ಹಂಚಿ ಹೋಗಿರುವ ಅಂಶಗಳನ್ನು ಒಟ್ಟಾಗಿ ಕ್ರೋಢೀಕರಿಸಿ ಪುಸ್ತಕ ವಿಮರ್ಶೆಯ ಸಮಕಾಲೀನ ಸ್ವರೂಪವನ್ನು ಇಲ್ಲಿ ಅರಿಯಲು ಯತ್ನಿಸಿದೆ.

ಒಂದೊಂದು ಪತ್ರಿಕೆಯಲ್ಲೂ ಅಥವಾ ಒಬ್ಬೊಬ್ಬ ಪುಸ್ತಕ ವಿಮರ್ಶಕರಿಂದಲೂ ಬರುವ ಪುಸ್ತಕ ವಿಮರ್ಶೆಗಳು ವ್ಯಕ್ತಿಗತವಾಗಿ ಭಿನ್ನವಾಗಿರಲು ಕಾರಣಗಳನ್ನು ಶೋಧಿಸಿದಾಗ ಮುಖ್ಯವಾಗಿ ಕಾಣವುದು 'ಲೋಕೋಭಿನ್ನರುಚಿಯ ಹಳೆ ಚಿಂತನೆ'. ಆದರೆ ಪ್ರಸ್ತುತ ವಿಮರ್ಶೆಗೆ ಒಂದು ಶಿಸ್ತು, ಆಯಕಟ್ಟು, ಒಂದು ಗಂಭೀರ ಸ್ವರೂಪವಿಲ್ಲವೆಂದು ಭಾವಿಸಿಲ್ಲದಿರುವುದು. ಇದರಿಂದ ಪುಸ್ತಕ ವಿಮರ್ಶೆಯನ್ನು ತಮ್ಮ ಸೈದ್ಧಾಂತಿಕತೆ, ನಿಲುವು, ಚಿಂತನೆ, ಮುಂತಾದವುಗಳ ಮೂಲಕ ನಡೆಯುತ್ತ ಹೋಗುತ್ತದೆ. ಬಹುಶಃ ಬೇರೆ ಪ್ರಕಾರಗಳಲ್ಲಿ ಆ ಪ್ರಕಾರಗಳಿಗೆ ಅವುಗಳದೇ ಆದ ಲಕ್ಷಣಗಳಿರುತ್ತವೆ. ಆ ಲಕ್ಷಣಗಳ ಹಿಡಿತದಲ್ಲಿ ಆ ಪ್ರಕಾರಗಳು ಬೆಳೆಯುತ್ತವೆ. ಆದರೆ ಪುಸ್ತಕ ವಿಮರ್ಶೆಗೆ ಲಕ್ಷಣಗಳು ಹೊರನೋಟಕ್ಕೆ

ಇಲ್ಲವೆನಿಸಿದರೂ ಆಂತರ್ಯದಲ್ಲಿ ಒಂದು ಸೈದ್ಧಾಂತಿಕ ಚೌಕಟ್ಟು ನಿರ್ಮಿತವಾಗಿದೆ. ಅಲ್ಲದೆ ಪುಸ್ತಕ ವಿಮರ್ಶೆ ಲಕ್ಷಣಗಳ ನಿಬಂಧನೆಯಲ್ಲಿ ತೊಡಗಿಕೊಳ್ಳದೇ ಸ್ವತಂತ್ರವಾದ ಆಲೋಚನೆಗೆ ತೆರೆದುಕೊಳ್ಳುವ ವಿಶಿಷ್ಟ ಆಯಾಮವನ್ನು ಇದು ಪಡೆದುಕೊಂಡಿದೆ. ಪುಸ್ತಕ ವಿಮರ್ಶೆ ಪ್ರಕಾರ ಬಂದಂಥ ಹೊಸ ಚಿಂತನೆ (ಕೃತಿಗೆ) ತಮ್ಮ ಆಲೋಚನೆಯನ್ನು ಸೇರಿಸುವ ಮುಕ್ತ ಅವಕಾಶವನ್ನು ಇದು ಒದಗಿಸಿಕೊಡುತ್ತದೆ.

ಇಂಥ ಮುಕ್ತ ವಾತಾವರಣವನ್ನು ಪುಸ್ತಕ ವಿಮರ್ಶೆ ನಿರ್ಮಿಸಿಕೊಂಡಿರುವುದರಿಂದ ಒಂದು ಶಿಸ್ತಾಗಿ ಬೆಳೆಯಲು ತಡೆಯಾಗುತ್ತಿದೆ. ಒಂದು ಸೈದ್ಧಾಂತಿಕ ಚೌಕಟ್ಟಿನ ಕೊರತೆಯಿಂದ ಪುಸ್ತಕ ವಿಮರ್ಶೆ ಇಂಥ ನಿಲುವುಗಳಿಗೆ ಕಾರಣವಾಗಿದೆ. ಒಂದು ಶಾಸ್ತ್ರವಾಗಿ ಶಿಸ್ತಾಗಿ ಬೆಳೆಯಲು ಈಗ ಪುಸ್ತಕ ವಿಮರ್ಶೆಗೆ ಚಾರಿತ್ರಿಕ ಹಿನ್ನೆಲೆ ಚಾರಿತ್ರಿಕ ಸಂಭವ ಎರಡೂ ಲಭಿಸಿವೆ. ಒಂದು ಶತಮಾನದ ದೀರ್ಘ ಇತಿಹಾಸವನ್ನು ಹೊಂದಿರುವ ಪುಸ್ತಕ ವಿಮರ್ಶೆಯು ಶಾಸ್ತ್ರವಾಗಿ, ಶಿಸ್ತಾಗಿ ಬೆಳೆಯಲು ಹೊಸ ಆಯಾಮವನ್ನು ತನ್ನಲ್ಲಿ ರೂಢಿಸಿಕೊಳ್ಳುತ್ತದೆ.

ವಿಭಿನ್ನ ಸಾಮಾಜಿಕ ಸ್ತರ, ವಿಭಿನ್ನ ದೃಷ್ಟಿಕೋನದ ಲೇಖಕರು ಬರೆಯುತ್ತಿರುವುದರಿಂದ ಪುಸ್ತಕ ವಿಮರ್ಶೆಗೆ ಸೈದ್ಧಾಂತಿಕ ರೂಪ ದೊರೆಯುತ್ತಿದೆ. ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವವರು ಇದರಲ್ಲಿ ತೊಡಗಿಕೊಂಡಿರುವುದರಿಂದ ಅಲ್ಲಿಯ ಪ್ರಮುಖ ವಿವರಗಳನ್ನು ಪುಸ್ತಕ ವಿಮರ್ಶೆ ಒಳಗೊಳ್ಳುತ್ತದೆ. ಎಲ್ಲ ಕ್ಷೇತ್ರವನ್ನು, ಕ್ಷೇತ್ರದವರನ್ನು ತನ್ನೊಳಗು ಮಾಡಿಕೊಳ್ಳುವ ವಿಶಿಷ್ಟವಾದ ಪ್ರಕಾರ ಇದಾಗಿದೆ. ಇತ್ತೀಚಿನ ದಶಕಗಳಲ್ಲಿ ಏಕಕಾಲಕ್ಕೆ ವಿಭಿನ್ನ ಸಾಹಿತ್ಯಕ ಪಂಥಗಳ ಲೇಖಕರಿಂದ ಚರ್ಚೆಯ ಆಯಾಮವನ್ನು ಪಡೆದುಕೊಂಡು ಪುಸ್ತಕ ವಿಮರ್ಶೆ ಬೆಳೆಯುತ್ತಿರುವುದನ್ನು ಕಾಣಬಹುದು. ಈ ಚರ್ಚೆಯ ಹಿನ್ನೆಲೆಯಲ್ಲಿ ಈ ಕೆಳಗಿನ ಮುಖ್ಯ ಅಂಶಗಳ ಜೊತೆ ಪುಸ್ತಕ ವಿಮರ್ಶೆಯ ಸಮಕಾಲೀನ ಸ್ವರೂಪವನ್ನು ಹೀಗೆ ಗುರುತಿಸಬಹುದು.

೭.೧.೧ ಪುಸ್ತಕ ವಿಮರ್ಶೆ ಸರಳವಾಗಿ ಪುಸ್ತಕ ಪರಿಚಯ ಮಾಡುತ್ತದೆ. ಜೊತೆಗೆ ತನ್ನ ವ್ಯಾಪ್ತಿ ಮೀರಿ ಗಂಭೀರ ಚರ್ಚೆಯನ್ನು ಮಾಡುತ್ತದೆ

ಪುಸ್ತಕ ವಿಮರ್ಶೆ ಸರಳ ಪುಸ್ತಕ ಪರಿಚಯದಿಂದ ಆರಂಭವಾಗಿ ಒಳವಿವರಗಳನ್ನು ಹೇಳುವ ಸ್ವರೂಪವನ್ನು ಪಡೆದುಕೊಂಡಿದೆ. ಪುಸ್ತಕ ವಿಮರ್ಶೆಯ ಮೂಲಭೂತ ಉದ್ದೇಶವೇ ಪ್ರಕಟಿತಗೊಂಡ ಕೃತಿಯ ಬಗ್ಗೆ ಓದುಗರಿಗೆ ತಿಳಿಸುವುದು ಅದು ಸರಳ ಮಾದರಿಯಲ್ಲಿದ್ದರೆ, ಎಲ್ಲರಿಗೂ ಅದರ ವಿವರಗಳೊಂದಿಗೆ ಸನಿಹವಾಗುತ್ತದೆ. ಆಗ ಓದುಗರು / ಕೊಳ್ಳುಗರು ಅದನ್ನು ಕೊಂಡುಕೊಂಡು ಓದಲು ಪುಸ್ತಕ ವಿಮರ್ಶೆ ಪ್ರೇರಣೆ ನೀಡುತ್ತದೆ. ಪುಸ್ತಕ ವಿಮರ್ಶೆ ಓದುಗರಿಗೆ ಓದುವ ಹಂಬಲ ಹೆಚ್ಚಿಸುವ ಕೆಲಸವನ್ನು ಮಾಡುತ್ತದೆ. ಹೀಗೆ ಮಾಡುವಾಗ ಅದಕ್ಕೆ ಹಲವು ಆಯಾಮಗಳು ಬಂದು ತಲುಪುವುದರಿಂದ ಅದಕ್ಕೆ ತನ್ನದೇ ಆದ ಮಿತಿ ಮತ್ತು ವ್ಯಾಪ್ತಿ ಎರಡು ಲಭಿಸುತ್ತವೆ.

ಪುಸ್ತಕ ವಿಮರ್ಶೆಗಳ ಬಹುಪಾಲು ಲೇಖನಗಳ ಗಾತ್ರವು ನಿಯತಕಾಲಿಕೆಗಳ ಮಿತಿಯಿಂದಲೇ

ತೀರ್ಮಾನವಾಗುತ್ತದೆ. ಆದರೂ ಇಲ್ಲಿ ಅದುವರೆಗಿನ ವಿಮರ್ಶೆಯನ್ನು ಬಳಸಿಕೊಳ್ಳುವುದಕ್ಕೆ, ಖಂಡಿಸುವುದಕ್ಕೆ ಅವಕಾಶವಿರುತ್ತದೆ. ಒಂದೇ ಪತ್ರಿಕೆಯ ಬೇರೆ ಬೇರೆ ಸಂಚಿಕೆಗಳಲ್ಲಿ ಒಂದು ವಿಷಯವನ್ನು, ಕೃತಿಯನ್ನು ಕುರಿತ ವಾಗ್ವಾದವೂ, ಚರ್ಚೆಗಳು ನಡೆದಿರುವುದಕ್ಕೆ ಹೇರಳ ಉದಾಹರಣೆಗಳು ದೊರೆಯುತ್ತವೆ. *"ಸಾಹಿತ್ಯ ಬೋಧನೆ ಹಾಗೂ ಭಾಷಾ ಬೋಧನೆಯ ತರಗತಿಗಳಲ್ಲಿ ಬೇರೆ ಬೇರೆ ಹಂತಗಳಲ್ಲಿ ಮಾಡುವ ಅಗತ್ಯಗಳ ಫಲವಾದ ಒತ್ತಾಯಗಳು, ಪರಿಚಯಾತ್ಮಕವಾದ ವಿಶ್ಲೇಷಣೆಯೇ ಕೇಂದ್ರವಾದ ನೀರು ಮಜ್ಜಿಗೆ ವಿಮರ್ಶೆಯನ್ನು ಬೆಳಸುತ್ತದೆ."*[7] ಎಂಬುದನ್ನು ಕೆಲವು ಉದಾಹರಣೆಗಳ ಮೂಲಕ ಚರ್ಚಿಸಬಹುದು.

***i* 'ಹೊತ್ತು ಮೂಡುವ ಸಮಯ' ಕವನ ಸಂಕಲನದ ಲೇ: ಶ್ರೀರಾಮ ಇಟ್ಟಣನವರ**

'ಗಾಲಿ ಉಳ್ಳತೈತಿ' ಕವನ ಸಂಕಲನ ಮೂಲಕ ಭರವಸೆಯ ಕವಿಯಾಗಿದ್ದ ಶ್ರೀರಾಮ ಇಟ್ಟಣನವರ ಈಚಿನ ಸಂಕಲನವಿದು. ಕವಿತೆಯ ಜೊತೆಗೆ ಜಾನಪದ ಕ್ಷೇತ್ರದಲ್ಲೂ ತಮ್ಮನ್ನು ತೊಡಗಿಸಿಕೊಂಡಿರುವ ಈ ಕವಿಯ ಕಾವ್ಯಕ್ಕೆ ಜಾನಪದ ಪ್ರಭಾವವಿದೆ. ಇದಕ್ಕೆ ಥಟ್ಟನೆ ಉದಾಹರಿಸಬಹುದಾದ ಕವಿತೆಯೆಂದರೆ 'ಯುಗಾದಿ'. ಹಾಗೇಯೇ ಬೇಂದ್ರೆ ಹಾಗೂ ಚನ್ನವೀರಕಣವಿ ಅವರ ಕುರಿತ ಎರಡು ಕವಿತೆಗಳು ಕಡೆದಿಟ್ಟ ಪ್ರತಿಮೆಗಳು, ಹಾಗೆಯೇ 'ಕುರಿಕಾಯುವ ಕರಿಯಪ್ಪ' ಕವಿತೆ ವರ್ಗ ಸಂಘರ್ಷವನ್ನು ಬಿಂಬಿಸಿದ್ದರೆ. 'ಒಂದೆ ಕೊಡೆಯ ಕೆಳಗೆ' ಕವಿತೆ ಬದುಕಿಗೆ ಸುಖ ಹೆಚ್ಚಾದಂತೆ ಒಂಟಿತನ ಹೆಚ್ಚುವ ಆತಂಕವನ್ನು ಸೂಚಿಸುತ್ತದೆ. ಹೀಗೆ ಓದಬಹುದಾದ ಸಂಕಲನವಿದು[೨]

***ii* 'ಇನ್ನೂ ಒಂದು' ಕಾದಂಬರಿ ಲೇ: ವಿವೇಕ ಶಾನುಭಾಗ**

ಇದು ವಿವೇಕ ಶಾನುಭಾಗ ಅವರ ಮೊದಲ ಕಾದಂಬರಿ. ಸಣ್ಣಕತೆ ಪ್ರಕಾರದಲ್ಲಿ ಸಂಯಮ ಮತ್ತು ನಿಯಂತ್ರಣಗಳನ್ನು ತೋರುವ ಮೂಲಕ ತಾವೊಬ್ಬ ಸಮರ್ಥ ಕತೆಗಾರರೆಂಬುದನ್ನು ಸಾಬೀತುಪಡಿಸಿರುವ ವಿವೇಕ ಅವರು ಕಾದಂಬರಿ ಪ್ರಕಾರವನ್ನು ತಮ್ಮ ಕೈಗೆತ್ತಿಕೊಳ್ಳಲು ನೋಡಿದ್ದಾರೆ. ಆದರೆ ಈ ಮಾಧ್ಯಮ ಹಿಡಿತಕ್ಕೆ ಸಿಕ್ಕದಿರುವುದನ್ನು ಪುಸ್ತಕ ಕಾದಂಬರಿ ತೋರಿಸುತ್ತದೆ. ಈ ಕಾದಂಬರಿಯ ಒಳಗೆ ಪುಟ್ಟ ಕತೆ ಇರುವುದು ನಿಜ, ಈ ಕತೆ ಗಟ್ಟಿಮುಟ್ಟಾಗಿರುವುದು ನಿಜ. ಇದನ್ನು ವಿವೇಕ ಹಿಗ್ಗಿಸಿ ಕಾದಂಬರಿಯ ಚೌಕಟ್ಟನ್ನು ತೊಡಗಿಸಲು ಹೆಣಗಿದ್ದಾರೆ. ಜೊತೆಗೆ ಕಾದಂಬರಿಗೆ ಸಂಕೀರ್ಣ ಸ್ವರೂಪವನ್ನು ತಂದು ಕೊಡುವ ಉದ್ದೇಶದಿಂದ ಅನಗತ್ಯವಾಗಿ ಈ ಸರಳ ಕತೆಯನ್ನು ಸಿಕ್ಕಾಗಿಸಿದ್ದಾರೆ.[೩]

***iii.* ಬೆಳದಿಂಗಳ ಸಿರಿ 'ಕಥಾಸಂಕಲನ' ಲೇ: ರಾಜಶೇಖರ ಹತಗುಂದಿ.**

ಈ ಕಥಾ ಸಂಕಲನದಲ್ಲಿ ಒಟ್ಟು ಎಂಟು ಕಥೆಗಳಿವೆ. ಇಲ್ಲಿನ ಕಥೆಗಳಲ್ಲಿ ಬದುಕು ಚಲಿಸುವ ಬಗೆಯನ್ನು ಚಿತ್ರಿಸುವ ಸೂಕ್ಷ್ಮತೆ ಮತ್ತು ತಾಳ್ಮೆಗಳು ಬರೀ ಕಥನ ಕುಶಲತೆಯ ಕುರುಹುಗಳಾಗಿಲ್ಲ. ಕತೆಗಾರನ ಮಾಗುವಿಕೆಯನ್ನು ಸೂಚಿಸುವ ಸಂಗತಿ ಕೂಡ ಆಗಿವೆ ಎನ್ನುತ್ತಾರೆ ರಹಮತ್ ತರೀಕೆರೆ ಮುನ್ನಡಿಯಲ್ಲಿ[೪]

***iv.* ಅನನ್ಯ ಸಮಾಜವಾದಿ ಲೋಹಿಯಾ ಲೇ: ಬಿ.ಎಂ. ಹನೀಫ್.**

ಡಾ ರಾಮಮನೋಹರ ಲೋಹಿಯಾ ಇಂಡಿಯಾ ಕಂಡ ಪ್ರಖರ ವಿಚಾರವಾದಿಗಳಲ್ಲೊಬ್ಬರು ಸಾಮಾಜಿಕ, ರಾಜಕೀಯ, ಆರ್ಥಿಕ, ಚಿಂತನೆಗಳು ಹಲವು ವಿಧದಲ್ಲಿ ಪರಿಣಾಮ ಬೀರಿ ಲೋಹಿಯಾ ವಿಚಾರಧಾರೆ' ವಾದವಾಗಿ ಮಾನ್ಯತೆ ಪಡೆದಿದೆ.

ಲೋಹಿಯಾ ಬದುಕು, ಚಿಂತನೆಗಳು ಕುರಿತಂತೆ ಈ ಪುಟ್ಟ ಪುಸ್ತಕದಲ್ಲಿ ಯುವ ಪತ್ರಕರ್ತ, ವಿಚಾರವಾದಿ ಬಿ.ಎಂ, ಹನೀಫ್ ಅವರು ಮಾಹಿತಿಗಳನ್ನು ಸಂಗ್ರಹವಾಗಿ ನೀಡಿದ್ದಾರೆ.

ಲೋಹಿಯಾರ ಸಂಕ್ಷಿತವಾದ ಜೀವನ, ಲೋಹಿಯಾರ ಕೆಲವು ಘಟನೆಗಳು, ಮತ್ತು ಲೋಹಿಯಾ ಹೇಳಿದ್ದು, ಹೀಗೆ ಮೂರು ಭಾಗಗಳಲ್ಲಿ ಹಲವು ಉಪಯುಕ್ತ ಮಾಹಿತಿಗಳನ್ನು ಹನೀಫ್ ನೀಡಿದ್ದಾರೆ. ಇದೊಂದು ಪುಟ್ಟ ಪುಸ್ತಕ, ಲೋಹಿಯಾ ಬಗ್ಗೆ ಏನೂ ಗೊತ್ತಿಲ್ಲದವರಿಗೆ ಪ್ರಾಥಮಿಕ ಪರಿಚಯ ನೀಡುತ್ತದೆ.

ಪೂರ್ಣಚಂದ್ರತೇಜಸ್ವಿ, ಕೆ. ವಿ. ಸುಬ್ಬಣ್ಣ , ಹಸನ ನಯೀಮ ಸುರಕೋಡ ಕೆಲವು ಲೇಖಕರು ವ್ಯಾಪಕವಾದ ದೊಡ್ಡ ಯತ್ನ ಮಾಡಿದ್ದಾರೆ.ಲೋಹಿಯಾ ವಿಚಾರ ಸರಣಿ ಬೆಳೆಯುವಲ್ಲಿ ಲೋಹಿಯಾರ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿ ಕೊಟ್ಟಿದ್ದಾರೆ. ಅಂಥ ಯತ್ನಗಳಿಗೆ ಹೋಲಿಸಿದಾಗ ಇದೊಂದು ಸಣ್ಣ ಪ್ರಯತ್ನ ಮಾತ್ರ.

ಲೋಹಿಯ ಚರ್ಚೆಗಳನ್ನು ದಾಖಲಿಸಿ ಅವುಗಳ ಬಗ್ಗೆ ಚರ್ಚಿಸುವ ಫಲವಾಗಿ ಸಿಗುವ ಲಾಭ ದೊಡ್ಡದು. ಅಂಥ ಲಾಭ ಈ ಕೃತಿಯಿಂದ ಸಿಕ್ಕಿಲ್ಲ. ಇದು ಲೇಖಕರ ಗುರಿಯೂ ಅಲ್ಲ. ಲೋಹಿಯಾ ಚಿಂತನೆಗಳನ್ನು ಅರ್ಥೈಸುವ ಗಂಭೀರ ಪ್ರಯತ್ನ ಹನೀಫ್‌ರು ಮುಂದಿನ ಕೃತಿಗಳಲ್ಲಿ ಮಾಡಲಿ"

V. ಎಸ್. ಶಿವಾನಂದರ 'ವಿಮರ್ಶೆಯ ಸವಾಲುಗಳು' ವಿಮರ್ಶಕರು ಶಿವರಾಮ ಪಡಿಕ್ಕಲ್, (ಸಂಕ್ರಮಣ ೨೫೯, ೧೯೯೪, ಏಪ್ರಿಲ್ ೧೨)

ಪಾಶ್ಚಾತ್ಯ ವಿದ್ಯಾಕ್ರಮದ ಮಹತ್ವದ ಪರಿಣಾಮಗಳ ಪೈಕಿ ಅದು ನಮ್ಮ ಅರಿವಿನ ವಿಧಾನದಲ್ಲಿಯೇ ತಂದ ಪರಿವರ್ತನೆ ಬಹಳ ಮುಖ್ಯವಾದುದು. ಜಗತ್ತನ್ನು ನೋಡುವ, ಅದರ ವಿದ್ಯಮಾನಗಳನ್ನು ವ್ಯವಸ್ಥೆಗೆ ತಂದುಕೊಳ್ಳುವ, ವರ್ಗೀಕರಿಸುವ ಹೊಸ ವಿಧಾನ ಹಾಗೂ ಪರಿಭಾಷೆಗಳು ವಸಾಹತು ಆಡಳಿತದ, ಇಂಗ್ಲೀಷ್ ವಿದ್ಯಾಕ್ರಮ ಕಾರಣದಿಂದಾಗಿ ಬಂದು ಹೇರಿಕೊಂಡವು. ಹಾಗೆ ನೋಡಿದರೆ, ಭಾರತೀಯವೆಂದು ಕರೆಯಬಹುದಾದ ಅಕ್ಷರಿಕ ಸಂಸ್ಕೃತಿ ಮತ್ತು ಜ್ಞಾನಶಿಸ್ತುಗಳು ವಸಾಹತು ಪೂರ್ವದಲ್ಲಿ ಇದ್ದಿರುವುದು ನಿಜವಾದರೂ ಸಂಸ್ಕೃತ ಕೇಂದ್ರಿತವಾದ ಈ ಚಿಂತನಾ ಕ್ರಮ ಜನಸಾಮಾನ್ಯರ ಮಟ್ಟದಲ್ಲಿ ಉಪಪ್ರಜ್ಞೆಯ ಮಟ್ಟದಲ್ಲಿ ಸುಪ್ತಚೇತನದ ಮಟ್ಟದಲ್ಲಿ, ಒಂದು ಅಪ್ರಜ್ಞಾಪೂರ್ವಕ ಚೌಕಟ್ಟಾಗಿ ಮಾತ್ರ ಅಸ್ತಿತ್ವದಲ್ಲಿತ್ತು. ಉನ್ನತ ತತ್ವ ವಿಚಾರ, ಜ್ಞಾನ ಸಂಪಾದನೆ ಹಾಗೂ ಕಾವ್ಯ ನಾಟಕಾದಿಗಳ ಚಿಂತನೆ ಮೊದಲಾದ ಜ್ಞಾನಿಕ ಕ್ರಿಯಾಚರಣೆ ಸಮಾಜದ ಉನ್ನತ ವರ್ಗಗಳಿಗೆ ಸೀಮಿತವಾಗಿದ್ದಿತ್ತು. ವಸಾಹತು ಆಡಳಿತದ ಫಲವಾಗಿ ಈ ಚಿಂತನೆಗಳ ಜೊತೆಗಿನ ಕರುಳ ಸಂಬಂಧ ಕಡಿದು ಹೋಗಿ ಪಾಶ್ಚಾತ್ಯ ಸಂಸ್ಕೃತಿಯಲ್ಲಿನ ಬೌದ್ಧಿಕ ಚರಿತ್ರೆಯಲ್ಲಿ ನೇಯ್ದು ಹೋಗಿರುವ ವಿಚಾರಗಳು, ವಿಧಾನಗಳು, ಮಾದರಿಗಳು ಆಧುನಿಕ ವಿದ್ಯಾವಂತ ವರ್ಗದ ಸಾಮಾಜಿಕ ಅಗತ್ಯಗಳಿಗನುಸಾರವಾಗಿ ಭಾರತದಂತಹ ತೃತೀಯ ಜಗತ್ತಿನ ದೇಶದಲ್ಲಿ, ಕನ್ನಡದಂತಹ ಸಣ್ಣ ಸಾಂಸ್ಕೃತಿಕ ಸಮುದಾಯದ ನಡುವೆ ಹಲವು ಬಗೆಗಳಲ್ಲಿ ನಿರೂಪಿತವಾದವು. ಬೇರು ತಳೆದವು. ಪಶ್ಚಿಮದ ಸಂಸ್ಕೃತಿಯ ಒಟ್ಟಂದದ ಇತಿಹಾಸದಲ್ಲಿ, ಬೌದ್ಧಿಕ ಚರಿತ್ರೆಯಲ್ಲಿ ಈ ವಿಚಾರ ಮಾದರಿಗಳು ಹೇಗೆ ಹಾದು ಬಂದವು ಎನ್ನುವ ಅರಿವು ಅಷ್ಟಾಗಿ ಬೆಳೆಯದೇ ಮಾದರಿಗಳು ಮಾತ್ರ ಬಳಸಲ್ಪಟ್ಟದ್ದರಿಂದ ಅವುಗಳ ನಿರ್ಧಾರಕ ಪೂರ್ವ ಗೃಹೀತಗಳನ್ನು ಕುರಿತ ಚರ್ಚೆ ಕನ್ನಡದಲ್ಲಿ ಪುಷ್ಟಿಗೊಂಡು ಬೆಳೆದಿಲ್ಲ. ಇದರಿಂದಾಗಿ ಪಶ್ಚಿಮದ ಬೌದ್ಧಿಕ ಚಟುವಟಿಕೆಯ ಅಂಚಿನಲ್ಲಿ ಅನ್ವಯಾತ್ಮಕವೂ, ಅಲ್ಲಿ ಬೆಳಸಿದ ತತ್ವಗಳಿಗೆ ಇಲ್ಲಿ ಉದಾಹರಣೆ ಹುಡುಕಿ ತೋರಿಸುವಂತಹದೂ ಆಗಿರುವ ಸಾದೃಶ್ಯ ರೂಪ ಬೌದ್ಧಿಕ ಚಟುವಟಿಕೆಯೊಂದನ್ನು ನಾವು ಅನಿವಾರ್ಯವಾಗಿ ನಡೆಸುತ್ತಿದ್ದೇವೆ. ಅನುಕರಣೆಯ ಇರುಸು ಮುರುಸಿನ ಅರಿವು ಕೂಡಾ ಈ ಬೌದ್ಧಿಕ ಚಟುವಟಿಕೆಯೊಂದಿಗೆ ಬೆಳೆದು ಬಂದಿವೆ. "ತಿಳುವಳಿಕೆಗೆ ನಾಡಿನ ಗಡಿಗಳಿಲ್ಲ" ,"ನಾವು ನಮಗೆ ಬೇಕಾದುದನ್ನು ತಡೆದುಕೊಂಡಿದ್ದೇವೆ" ,"ಕನ್ನಡ ಸಂಸ್ಕೃತಿಯಲ್ಲಿ ಇನ್ನೊಂದನ್ನು ಪಡೆದು ಸಾಮರಸ್ಯ ಸಾಧಿಸುವ ಶಕ್ತಿ, ಸತ್ವಗಳಿವೆ", "ಕನ್ನಡದ ಸಾಂಸ್ಕೃತಿಕ ವಲಯದೊಳಗಿನಿಂದಲೇ ಜ್ಞಾನಿಕ ರಚನೆಗಳನ್ನು ಬೆಳಸಬೇಕಾಗಿದೆ" ಇವೇ ಮೊದಲಾದ ಅನಿಸಿಕೆಗಳಿಗೆ ಈ ಅರಿವು ಕಾರಣವಾಗಿದೆ. ಆದರೆ ವಸಾಹತು ಚರಿತ್ರೆಯ ನಿರ್ಧಾರಕ ಬೆಳವಣಿಗೆಗಳನ್ನು ಅಷ್ಟಾಗಿ ಲಕ್ಷಿಸದೇ ಸಂಸ್ಕೃತಿಯ ಚಾರಿತ್ರಿಕ ಬೆಳವಣಿಗೆಗಿಂತ ಅದರ ಅಂತಃಸತ್ವವೇನು ಎನ್ನುವುದನ್ನು ಹೆಚ್ಚಾಗಿ ಲಕ್ಷಿಸುವ ಕಡೆಗೆ ಇಂತಹ ಚರ್ಚೆಗಳು ಬಂದಿವೆ. ನಾವು ಗೃಹೀತರೂಪದಲ್ಲಿ ಸ್ವೀಕರಿಸಿದ ಪರಿಕಲ್ಪನೆಗಳ ಸಾಂಸ್ಕೃತಿಕ ಇತಿಹಾಸ, ಅವುಗಳ ಪಶ್ಚಿಮದ ಬೌದ್ಧಿಕ ಚರಿತ್ರೆಯಲ್ಲಿ ಹೇಗೆ

ಬೆಳೆದಿವೆ, ನೇಯ್ದು ಹೋಗಿವೆ ಎನ್ನುವ ತಿಳುವಳಿಕೆಯಿಂದ ಹುಟ್ಟುವ ಟೀಕೆ ವಿಮರ್ಶೆಗಳಿಂದ ಮಾತ್ರ ಈ ವಸಾಹತು ಪರಿಣಾಮದಿಂದ ನಾವು ಬಿಡುಗಡೆಯಾಗಬಹುದಾಗಿದೆ.

ಎಸ್. ಶಿವಾನಂದ ಅವರ 'ವಿಮರ್ಶೆಯ ಸವಾಲುಗಳು' ಕೃತಿಯ ಸಮೀಕ್ಷೆ ಹೊತ್ತಿನಲ್ಲಿ ಈ ಮಾತುಗಳು ನನಗೆ ಪ್ರಸ್ತುತವೆನ್ನಿಸಿವೆ. ನಿರ್ವಸಾಹತೀಕರಣವನ್ನು ಸಾಧ್ಯ ಮಾಡುವಂತಹ ಚಾರಿತ್ರಿಕ ಲೇಖನಗಳು ಹಿಡಿದಿವೆ. ಒಂದು ರೀತಿಯಲ್ಲಿ ಸಾಹಿತ್ಯದ ಸಾಮಾಜಿಕ ಅರ್ಥವನ್ನು ವಿಶ್ಲೇಷಿಸಬೇಕೆಂಬುದೇ ಅವರ ವಿಮರ್ಶಾ ಲೇಖನಗಳ ಗಂಭೀರ ಕಾಳಜಿಯಾಗಿದೆ. ಇಷ್ಟಾಗಿಯೂ ಸಾಹಿತ್ಯದ ವಿಶೇಷ ಸ್ಥಾನ, ಅನುಭವದ ವಿಶೇಷಿಕರಣ ಮೊದಲಾದವುಗಳನ್ನು ಕುರಿತು ಪಾಶ್ಚಾತ್ಯ ರೋಮ್ಯಾಂಟಿಕ್ ಗೃಹೀತಗಳಿಂದ ಕನ್ನಡದಲ್ಲಿ ಬೇರು ತಳೆದಿರುವ ಕಲ್ಪನೆಯನ್ನು ಕುರಿತು ಪೂರ್ಣ ಪ್ರಮಾಣದ ವಿಮರ್ಶೆಯನ್ನು ಮಾಡುವುದು ಅವರಿಂದ ಸಾಧ್ಯವಾಗಲಿಲ್ಲ, ಎರಡನೆಯದಾಗಿ ಪಶ್ಚಿಮದ ಬೌದ್ಧಿಕ ಚರಿತ್ರೆಯಲ್ಲಿ ನೇಯ್ದು ಹೋಗಿರುವ ಮಾದರಿಗಳನ್ನು ಅವರು ಆಯ್ದು ಪಡೆಯುತ್ತಾರೆ.

ಕಳದ ಹತ್ತು ಹದಿನೈದು ವರ್ಷಗಳಿಂದ ನವ್ಯ ಸಾಹಿತ್ಯ, ನವ್ಯ ವಿಮರ್ಶೆಗಳಿಗೆ ಎದುರು ಬರಹವನ್ನು ನಡೆಸುತ್ತಾ ಬಂಡಾಯ ಸಾಹಿತ್ಯ ಚಳುವಳಿಯ ಕಾಳಜಿಗಳನ್ನು ಮುನ್ನೆಲೆಗೆ ತರಲು ಯತ್ನಿಸಿದವರಲ್ಲಿ ಎಸ್. ಶಿವಾನಂದ ಅವರೂ ಒಬ್ಬರು. ೧೯೭೫ ರಿಂದ ೧೯೮೫ ರ ಹತ್ತು ವರ್ಷಗಳ ಅವಧಿಯಲ್ಲಿ ಅವರು ಬರೆದ ಲೇಖನಗಳ ಆಯ್ದ ಸಂಗ್ರಹ "ವಿಮರ್ಶೆಯ ಸವಾಲುಗಳು".

ತಮ್ಮ ವಿಮರ್ಶಾ ಕ್ರಮವನ್ನು ಅವರು "ಸಮಾಜವಾದಿ ವಿಮರ್ಶೆ" ಎಂದು ಕರೆದುಕೊಂಡಿದ್ದಾರೆ. ನವ್ಯ ವಿಮರ್ಶೆಯು ಬಹುವಾಗಿ ಪ್ರಚಾರ ಪಡಿಸಿದ ಕೃತಿ ವಿಮರ್ಶೆ, ಪ್ರಾಯೋಗಿಕವಾಗಿ ವಿಮರ್ಶೆಯ ಟೀಕೆ ಅವರ ಕೃತಿಯಲ್ಲಿ ಎದ್ದು ಕಾಣುವ ಅಂಶವಾಗಿದೆ. ಕನ್ನಡ ನವ್ಯಕ್ಕೆ ಪ್ರತಿಭಟನೆ, ಅದಕ್ಕೆ ಬೆಳೆಸುವ ವಿಮರ್ಶೆ, ನವ್ಯ ಸಾಹಿತ್ಯದ ವರ್ಗ ಮಿತಿಯನ್ನು ಗುರುತಿಸುವ ಯತ್ನದಲ್ಲಿ ಶಿವಾನಂದರು ನಡೆಸಿದ ಸಾಹಿತ್ಯಕ ವಾಗ್ವಾದಗಳು ಇಲ್ಲಿನ ಲೇಖನಗಳನ್ನು ರೂಪಿಸಿವೆ. ಸಾಹಿತ್ಯವನ್ನು ಓದುವುದೆಂದರೆ ಕೇವಲ ಅಕಾಡೆಮಿಕ್ ಆಸಕ್ತಿಯಾದ ಸಾಹಿತ್ಯವನ್ನು ಬಗೆಯುವುದಾಗಲೀ, ಶಬ್ದ ಶರೀರದ ಮಿತಿಯಲ್ಲಿ ಅದನ್ನು ಚರ್ಚಿಸುವುದಾಗಲೀ ಅಲ್ಲ, ಸಾಹಿತ್ಯ ಕೃತಿಯ ಸಾಮಾಜಿಕ ಅರ್ಥ ಮೌಲ್ಯಗಳನ್ನು - ನಿರ್ದಿಷ್ಟವಾಗಿ ಹೇಳುವುದಾದರೆ, ಸಾಹಿತ್ಯದ ರೂಪ ತಂತ್ರಗಳಿಗಿಂತ ಮೊದಲು ಅದರ ತಿರುಳನ್ನು ವಿಶ್ಲೇಷಿಸುವುದು ವಿಮರ್ಶೆಯ ಲಕ್ಷ್ಯವಾಗಬೇಕು ಎನ್ನುವುದನ್ನು ಸಾಬೀತು ಪಡಿಸಲು ಶಿವಾನಂದರು ಯತ್ನಿಸಿದ್ದಾರೆ.

ನವ್ಯ ಚಳುವಳಿಯ ಪ್ರಭಾವೀ ಲೇಖಕರ ಬರವಣಿಗೆಗಳು ಸಾಹಿತ್ಯದ ವಿದ್ಯಾರ್ಥಿಗಳನ್ನು ಪ್ರಭಾವಿಸುತ್ತಿದ್ದ ದಿನಗಳಲ್ಲಿ ಬಂಡಾಯದ ಪರವಾಗಿ, ಅದರಲ್ಲೂ, ಜನಪರ ಸಂಸ್ಕೃತಿಯ ಪರವಾಗಿ ಶಿವಾನಂದರು ನಡೆಸಲೆತ್ನಿಸಿದ ಸಾಂಸ್ಕೃತಿಕ ವಾಗ್ವಾದ ಮುಖ್ಯವಾದುದಾಗಿದೆ. ಕನ್ನಡ ನವ್ಯರು ಪ್ರಜ್ಞಾ ಪೂರ್ವಕವಾಗಿಯೋ ಅಪ್ರಜ್ಞಾ ಪೂರ್ವಕವಾಗಿಯೋ ಎತ್ತಿ ಹಿಡಿಯುತ್ತಿದ್ದ ನೌಕರ ಶಾಹೀ ಮಧ್ಯಮ ವರ್ಗದ ಮೌಲ್ಯಗಳನ್ನು, ಸಮಸ್ಯೆಗಳನ್ನು ಆಸೆ ಆಕಾಂಕ್ಷೆಗಳನ್ನು ಮತ್ತು ಇವೆಲ್ಲದರ ಪರಿಣಾಮವಾಗಿ ಪೃಥಕರಿಸಲ್ಪಟ್ಟ ಮೇಲ್ವರ್ಗದವರ ಸಂಸ್ಕೃತಿಯ ಏಕರೂಪ ಪರಂಪರೆಯನ್ನು ಬಯಲುಗೊಳಿಸಲು ಶಿವಾನಂದರು ಪ್ರಯತ್ನಿಸಿದ್ದಾರೆ.

ಇಷ್ಟಾಗಿಯೂ ಸಾಹಿತ್ಯವೆಂದರೆ 'ಸೃಜನಾತ್ಮಕ' ಬರಹವೆನ್ನುವ ಗೃಹೀತವನ್ನು ಶಿವಾನಂದರು ಎಲ್ಲಿಯೂ ವಿಮರ್ಶೆಗೊಳಪಡಿಸಿಲ್ಲ. ವೈಚಾರಿಕ ಬರವಣಿಗೆಗಳಿಗಿಂತ ಸಾಹಿತ್ಯ ಬೇರೆಯದೇ ಆದ ಒಂದು ಬರವಣಿಗೆ ಅದರಲ್ಲಿ ಮನುಷ್ಯನ ನೇರ ಅನುಭವಗಳು ಅಭಿವ್ಯಕ್ತಗೊಳ್ಳುತ್ತವೆ. ಅನೇಕ ವೈರುಧ್ಯಗಳಿಂದ ಕೂಡಿದ ಪ್ರಾಪಂಚಿಕ ಅನುಭವಗಳು ಸಾಹಿತ್ಯ ಮಟ್ಟಕ್ಕೆ ಸ್ಥಾನಾಂತರಗೊಂಡಾಗ ಅವು ಆ ವೈರುಧ್ಯಗಳನ್ನು ದಾಟುವ ಒಂದು ಬಗೆಯ ಅತಿರೋಹಕಗುಣವನ್ನು ಪಡೆದುಕೊಂಡು ಬಿಡುತ್ತವೆ. ಸಾಹಿತ್ಯದಲ್ಲಿ ಅಭಿವ್ಯಕ್ತಗೊಳ್ಳುವ ಮೂಲಕ ಈ ಅನುಭವಗಳು ಕಾಲಾತೀತವೂ, ಸಾರ್ವಕಾಲಿಕವೂ ಆಗಿ ಪರಿಣಮಿಸುತ್ತವೆ. ಎನ್ನುವ ರೊಮ್ಯಾಂಟಿಕ್ ಸಾಹಿತ್ಯ ಪರಿಕಲ್ಪನೆಯನ್ನು ಕುರಿತ ಆಮೂಲಾಗ್ರ ಟೀಕೆಯನ್ನು ಶಿವಾನಂದರ

ಲೇಖನಗಳು ಕಟ್ಟಿ ಕೊಡುವುದಿಲ್ಲ. ಸಾಹಿತ್ಯವೆನ್ನುವುದೊಂದು ಇದೆ. ಅದು ಮನುಷ್ಯನ ನೇರ ಅನುಭವಗಳ ಅಭಿವ್ಯಕ್ತಿ. ಆದರೆ ದೇಶ-ಕಾಲ-ಜನಗಳ ಪ್ರಭಾವಕ್ಕೆ ಅದೂ ಒಳಪಡುವುದರಿಂದ ಸಾಹಿತ್ಯದ 'ಯುಗ ಧರ್ಮ' ಬದಲಾಗುತ್ತಲೇ ಇರುತ್ತದೆ. ಎನ್ನುವ ನಿಲುವಿನಿಂದ ಶಿವಾನಂದರ ಲೇಖನಗಳು ಹೊರಡುತ್ತವೆ. ಒಟ್ಟಾಗಿ, ನವೋದಯ ಸಾಹಿತ್ಯ ಮತ್ತು ನವ್ಯ ಸಾಹಿತಿಗಳು ಆಗುಮಾಡಿದ ಸಾಹಿತ್ಯದ ಪರಿಕಲ್ಪನೆಯನ್ನು ಒಪ್ಪಿಕೊಂಡು ಅದರೊಳಗೆ ಸಾಮಾಜಿಕ ಆಯಾಮವೊಂದನ್ನು ಸೃಷ್ಟಿಸಿಕೊಳ್ಳಲು ಶಿವಾನಂದರು ಯತ್ನಿಸಿದ್ದಾರೆ. ಇದರಿಂದಾಗಿ ವ್ಯಾಪಕಾರ್ಥದಲ್ಲಿ ಅವರು ಸಾಂಪ್ರದಾಯಿಕ ಸಾಹಿತ್ಯದ ವಿಮರ್ಶೆಗಳ (ನವೋದಯ/ನವ್ಯ) ಪರಿಭಾಷೆಯನ್ನೆ ಬಳಸುತ್ತಿದ್ದಾರೆ, ಈ ಅಂಶ ಅವರು ಮಾಡಿದ 'ಪುಸ್ತಕ ವಿಮರ್ಶೆ' ಗಳಲ್ಲಿ ನಿಚ್ಚಳವಾಗಿದೆ. ಈ ಸಂಕಲನದ ಮೊದಲ ನಾಲ್ಕು ಲೇಖನಗಳಲ್ಲಿ ಸಾಮಾಜಿಕ ಜವಾಬ್ದಾರಿ, ಕಲಾತ್ಮಕತೆ, ನವ್ಯ ಸಾಹಿತ್ಯದ ವರ್ಗಮಿತಿ, ಸಾವಯವತೆಯ ಕಲ್ಪನೆಗಳನ್ನು ಸ್ಥೂಲವಾಗಿ ಚರ್ಚಿಸಿದ ಶಿವಾನಂದರು 'ಪುಸ್ತಕ ವಿಮರ್ಶೆ'ಗಳಲ್ಲಿ ಸಾಮಾಜಿಕ ಅರ್ಥ ಮತ್ತು ಕಲಾತ್ಮಕ ಯಶಸ್ಸುಗಳ ತಮ್ಮ ಕಲ್ಪನೆ ಬೆರೆಸಿದ್ದಾರೆ. "ಅನುಭವದಲ್ಲಿ ಒಳನೋಟ ಇಲ್ಲದಿದ್ದಾಗ ಶೋಧನಾ ಕ್ರಿಯೆ ನಡೆಯದಿದ್ದಾಗ -ಅನುಭವಕ್ಕೆ ತಾಜಾತನವಾಗಲೀ ಆಳವಾಗಲೀ ಪ್ರಾಪ್ತವಾಗುವುದಿಲ್ಲ (ಪ್ರ೧೧೧)" ಇಂತಹ ಅನೇಕ ಹೇಳಿಕೆಗಳು ಶಿವಾನಂದರಲ್ಲಿ ಸಿಗುತ್ತವೆ. "ಬಂಡಾಯ ಕತೆಗಳ ದಿಕ್ಕು ದೆಸೆ" ಯಂತೂ ಸಾಹಿತ್ಯದ ವಿಶೇಷೀಕರಣವನ್ನು ಒಪ್ಪಿಕೊಂಡು "ಸೃಜನಶೀಲತೆ" "ಸಾಹಿತ್ಯ ದೊಳಗೆ ಸಾಮಾಜಿಕ ಜವಾಬ್ದಾರಿ" ಇತ್ಯಾದಿ ಮಾತುಗಳನ್ನು ಬಳಸುತ್ತದೆ. ಸೃಜನ ಶೀಲ X ಯಾಂತ್ರಿಕ, ಕಲಾತ್ಮಕ Xಯಾಂತ್ರಿಕ ಇತ್ಯಾದಿ ಪದ ಪುಂಜಗಳು ನವೋದಯ / ನವ್ಯವನ್ನು ಹಾದು ಬಂದಿರುವ ಪದಗಳು ಮತ್ತು ಅವು ಹೀಗೆ ಬಂಡವಾಳಶಾಹೀ ಬೆಳವಣಿಗೆಗಳಿಗೆ ನಿರ್ದಿಷ್ಟ ರೀತಿ, ಪ್ರತಿಭಟನೆಗಳಾಗಿ "ಬಂಡವಾಳ ಪೂರ್ವಸಮಾಜ ಸಾವಯವದ ಸಮಾಜವಾಗಿತ್ತು ಎನ್ನುವ ಪರಿಕಲ್ಪನೆಯಿಂದ ಪ್ರಭಾವಿತವಾಗಿವೆ, ಎನ್ನುವುದನ್ನು ಶಿವಾನಂದರು ಚರ್ಚಿಸುವುದಿಲ್ಲ. "ಸಾವಯವ ಶಿಲ್ಪದ ಸಮಗ್ರೀಕರಣ" ಎನ್ನುವ ನವ್ಯರ ನಿಲುವು ಕಾವ್ಯದ ಸಂಕೀರ್ಣತೆಗೆ ಕಾರಣವಾಯಿತು ಎಂದು ಅಸಮಾಧಾನ ವ್ಯಕ್ತಪಡಿಸುವ ಶಿವಾನಂದರು ಅದರ ಸಾಂಸ್ಕೃತಿಕ ಇತಿಹಾಸವನ್ನು ಅಂದರೆ ಯುರೋಪಿನ ಸಾಂಸ್ಕೃತಿಕ ಚರಿತ್ರೆಯಲ್ಲಿ ಮೂಲತಃ ಒಂದು ಪ್ರತಿಗಾಮಿ ನಿಲುವಾಗಿ, ಹೊಸದನ್ನು ಸಂದೇಹಿಸಿ ನೋಡುವ ನಿಲುವಾಗಿ, ಆಧುನಿಕತೆ ಔದ್ಯೋಗೀಕರಣಗಳು ಆಗು ಮಾಡಿದ ಕೆಳವರ್ಗಗಳ ಸ್ವಾತಂತ್ರ್ಯದ ಸಾಧ್ಯತೆಗಳನ್ನು ಸಂಪೂರ್ಣ ಅಲ್ಲಗಳೆಯುವ ಸಲುವಾಗಿ , ಔದ್ಯೋಗೀಕೃತ ಸಮಾಜ ಉಂಟು ಮಾಡಿದ ಸಾಂಸ್ಕೃತಿಕ ನಿರ್ವಾತದಲ್ಲಿ ಹಳೆಯ ಸಾಂಸ್ಕೃತಿಕ ಮೌಲ್ಯಗಳನ್ನು ಕಾಯ್ದುಕೊಂಡು ಬರುವುದು ಅಗತ್ಯ ಎನ್ನುವ ಸಾಹಿತ್ಯಕ ಸಾಂಪ್ರದಾಯಿಕವಾಗಿ ಈ ಸಾವಯವತೆಯ ಕಲ್ಪನೆ ಹೇಗೆ ಬಳಕೆಯಾಯಿತು ಎನ್ನುವುದನ್ನು ವಾಗ್ವಾದಗೊಳಿಸುವುದಿಲ್ಲ.

ಮಾರ್ಕ್ಸ್‌ವಾದವೆಂದರೆ ಸಿದ್ಧಗೊಂಡಿರುವ ಒಂದು ತತ್ವ ಅಥವಾ ಸಿದ್ಧಾಂತ ಮತ್ತು ಸಾಹಿತ್ಯವೆಂದರೆ : ಸಿದ್ಧವಾಗಿರುವ ಕೃತಿ ಶ್ರೇಣಿ ಅಥವಾ ಕೆಲವು ಸಾಮಾನ್ಯ ಗುಣ ಲಕ್ಷಣಗಳಿರುವ ಕೃತಿ ಸಮುದಾಯ ಎಂದು ಅಂದುಕೊಂಡು ಅವುಗಳ ನಡುವಿನ ಸಂಬಂಧವನ್ನು ಶಿವಾನಂದರು ಚರ್ಚಿಸಿದ್ದಾರೆ. ಆದರೆ ಮಾರ್ಕ್ಸ್‌ವಾದ ಇಂದಿಗೂ ಬೆಳೆಯುತ್ತಿರುವ, ತಾತ್ವಿಕ ಬೆಳವಣಿಗೆಗೆ ಮುಕ್ತವಾಗಿರುವ ಒಂದು ತತ್ವವಾಗಿದೆ. ಸಾಹಿತ್ಯವನ್ನು ಕುರಿತ ಅನೇಕ ಪರಿಕಲ್ಪನೆಗಳೂ ಹಾಗೆಯೇ ವಾಗ್ವಾದಕ್ಕೊಳಗಾಗಿವೆ.

ಈ ಮೇಲೆ ವಿವರಿಸಿದ ಪೂರ್ವ ಗೃಹೀತದಿಂದಾಗಿ ಶಿವಾನಂದರು ಸ್ವಲ್ಪ ಮಟ್ಟಿಗೆ ಸಾಂಪ್ರಾದಾಯಿಕ ಎಂದು ಹೇಳಬಹುದಾದ ಮಾರ್ಕ್ಸ್‌ವಾದೀ ವಿಮರ್ಶಕರ ಗೃಹೀತಗಳನ್ನು ಆಧಾರ ಮಾಡಿಕೊಂಡಿದ್ದಾರೆ. ವಿಶೇಷವಾಗಿ ಕಾಡ್‌ವೆಲ್, ಪ್ಲಖನೋವ್‌ರ ವಿಚಾರಗಳನ್ನು ಅವರು ಆಧರಿಸಿದ್ದಾರೆ.

"ನಮ್ಮ ಸಾಮಾಜಿಕ ಅಸ್ತಿತ್ವವು ನಮ್ಮ ತಿಳುವಳಿಕೆಯನ್ನು ನಿರ್ಧರಿಸುತ್ತದೆ." ಎನ್ನುವ ಮಾರ್ಕ್ಸ್‌ನ ಅಭಿಪ್ರಾಯವನ್ನು ಒಪ್ಪಿಕೊಂಡು ಆಧಾರ ಮತ್ತು ಊರ್ಧ್ವಬಂದ [Base our super structure] ಗಳ ನಡುವಣ ಸಂಬಂಧವನ್ನು ಯಾಂತ್ರಿಕ ಮತ್ತು ಕಾರ್ಯಕಾರಣಬದ್ಧ ಎನ್ನುವ ನಿಲುವಿನಿಂದ ಇಲ್ಲಿ ಸಾಹಿತ್ಯದ ವಿಶ್ಲೇಷಣೆಯೂ ನಡೆಯುತ್ತದೆ. ಸಾಹಿತ್ಯ ಇಲ್ಲಿ ಊರ್ಧ್ವ

ಬಂಧಕ್ಕೆ ಸೇರಿದ ಹಾಗೂ ಆಧಾರವನ್ನು ಪ್ರತಿಫಲಿಸುವಂತಹ ಚುವಟಿಕೆಯಾಗಿದೆ. ಉದಾಹರಣೆಗೆ, 'ಸಾಹಿತ್ಯದೊಳಗೆ ಸಾಮಾಜಿಕ ಜವಾಬ್ದಾರಿ ಮತ್ತು ಕಲಾತ್ಮ ಕತೆ" ಲೇಖನದಲ್ಲಿ ಚರಿತ್ರೆಯನ್ನು ವಿವಿಧ ಘಟ್ಟಗಳಾಗಿ ವಿಂಗಡಿಸಿ ಈ ವಿಭಜನೆಗೆ ಅನುಸಾರಿಯಾದ ಸಾಹಿತ್ಯ ಘಟ್ಟಗಳನ್ನು ಗುರುತಿಸಲಾಗಿದೆ. ಈ ಹಿನ್ನಲೆಯಿಂದ ಪುರೋಹಿತಶಾಹೀ ಸಾಹಿತ್ಯ, ವ್ಯಕ್ತಿನಿಷ್ಠ ಸಾಹಿತ್ಯ, ಸಮಾಜವಾದೀ ಸಾಹಿತ್ಯ ಎನ್ನುವ ವರ್ಗೀಕರಣಗಳನ್ನು ಮಾಡಲಾಗಿದೆ. ಆರ್ಥಿಕ ಸಂರಚನೆಗಳ ವಿಶ್ಲೇಷಣಾತ್ಮ ಕ ವಿಂಗಡನೆಗೆ ನೇರ ಪ್ರತಿಫಲನವಾಗಿ ವ್ಯವಸ್ಥೆಯಲ್ಲಿನ ಉತ್ಪಾದನಾ ಸಂಬಂಧಗಳೂ ಅವುಗಳನ್ನು ಪ್ರತಿಫಲಿಸುವ ಊರ್ಧ್ವಬಂಧ ರಚನೆಗಳೂ ಇರುತ್ತವೆ. ಎನ್ನುವುದು ಇಲ್ಲಿನ ಅಂತಸ್ಥ ಕಲ್ಪನೆಯಾಗಿದೆ. ಈ ನಿಲುವಿನಿಂದ ಶಿವಾನಂದರು ನವೋದಯ, ನವ್ಯ ಕಾವ್ಯ ಮಾರ್ಗಗಳನ್ನು ವ್ಯಕ್ತಿನಿಷ್ಠ ಬೂರ್ಶ್ವಾ ಸಾಹಿತ್ಯ ಎಂದು ಬದಿಗೊತ್ತರಿಸಿ ಬಿಡುತ್ತಾರೆ. ನವೋದಯ, ನವ್ಯ ಸಾಹಿತ್ಯಗಳಲ್ಲಿ ನಿಹಿತವಾಗಿರುವ ಆದರ್ಶವಾದೀ ತಿಳುವಳಿಕೆಯನ್ನು ಇಂದು ನಾವು ಒಪ್ಪಿಕೊಳುವುದು ಸಾಧ್ಯವಿಲ್ಲ ಎನ್ನುವ ವ್ಯಾಪಕಾರ್ಥದಲ್ಲಿ ಶಿವಾನಂದರ ನಿಲುವು ಸರಿಯಾದರೂ ಅದು ಅನೇಕ ಚಾರಿತ್ರಿಕ ಸೂಕ್ಷ್ಮಗಳನ್ನು ಗಮನಿಸದಿರುವುದು ಅವರ ಈ ಬದಿಗೊತ್ತರಿಸುವಿಕೆಗೆ ಕಾರಣವಾಗಿದೆ. ಈ ಅರ್ಥದಲ್ಲಿ ಅವರ ನಿಲುವು ತೊಡಕಿನದು . ನವೋದಯ ಸಾಹಿತ್ಯ ನವ್ಯ ಸಾಹಿತ್ಯಗಳನ್ನು ಅವು 'ವ್ಯಕ್ತಿ ನಿಷ್ಠ' ,'ಆದರ್ಶವಾದೀ' ಎನ್ನುವ ಕಾರಣಕ್ಕೆ ಒಂದು ಮಾತಿನಿಂದ ತಿರಸ್ಕರಿಸುವುದು ಸಾಧ್ಯವಲ್ಲ, ಸಾಧುವಲ್ಲ. ಅವುಗಳೂ ವಸಾಹತು ವಿರೋಧ, ಬಂಡವಾಳಶಾಹೀ ವಿರೋಧಗಳಲ್ಲಿ ರೂಪುತಳೆದ ನಿಲುವುಗಳು. ನವೋದಯ, ನವ್ಯಗಳಲ್ಲಿ ಒಂದು ಬಗೆಯ ಸಾಂಸ್ಕೃತಿಕ ಅರಿವಾಗಿ, ಮನುಷ್ಯ ಕ್ರಿಯಾಚರಣೆಯಾಗಿ ಹೇಗೆ ರೂಪುಗೊಂಡವು ಎನ್ನುವ ಚರ್ಚೆ ನಮಗೆ ಮುಖ್ಯವಾಗಬೇಕು. ಉದಾಹರಣೆಗೆ ಕೆ. ಎಸ್. ನ ಅವರ ಕಾವ್ಯ ಮಧ್ಯಮ ವರ್ಗದ ಕಾವ್ಯವಾಗಿವುದು, ಸಾಂಪ್ರದಾಯಿಕವಾಗಿರುವುದು ಮತ್ತು ಕೆ. ಎಸ್. ನ ಅವರೇ ಬೆಳೆದು ಬಂದ ಕೆಳ ಮಧ್ಯಮ ವರ್ಗದ ನೋವು ಬದಲಾವಣೆಗಳಿಗೆ ದನಿ ಕೊಡದಿರುವುದು ಶಿವಾನಂದರ ಅಸಮಾಧಾನಕ್ಕೆ ಕಾರಣವಾಗಿದೆ. ಕೆ. ಎಸ್. ನ ಅವರ ಕಾವ್ಯವನ್ನು 'ದಿಟ್ಟದ ದಿಕ್ತಟ' ಗಳನ್ನು ತೆಕ್ಕೆಗೆ ತಂದುಕೊಳ್ಳುವ ಕಾವ್ಯವೆಂದು ಹೊಗಳುವ ಸಾಹಿತ್ಯ ವಿಮರ್ಶೆಯ ನಿಲುವುಗಳಿಗೆ ಎದುರಾಗಿ, ಟೀಕೆಯಾಗಿ ಶಿವಾನಂದರ ನಿಲುವು ಇದೆ. ಇಂತಹ ಟೀಕೆ- ವಸಾಹತುಶಾಹೀ ವಾಸ್ತವ್ಯದಲ್ಲಿ ತನಗೊಂದು ಸಾಮಾಜಿಕ ಅಸ್ತಿತ್ವವನ್ನು ಕಟ್ಟಿಕೊಳ್ಳುವ ಭಾರತೀಯ ವಿದ್ಯಾವಂತ ವರ್ಗವು ನಡೆಸದ ಯತ್ನ, ರಾಷ್ಟ್ರೀಯತೆ ಮತ್ತು ಈ ಆಧುನಿಕ ರಾಷ್ಟ್ರದ ರೂಪುಗೊಳ್ಳುವಿಕೆಯ ಸನ್ನಿವೇಶ, ಆಧುನಿಕತೆಯ ಅಡಿಯಿಡುವಿಕೆ, ವಸಾಹತು ಪ್ರಶ್ನೆಯನ್ನು ಹಾಗೂ ಗುಲಾಮಿತನದ ಪ್ರಶ್ನೆಗಳನ್ನು ವಿದ್ಯಾವಂತ ವರ್ಗವು ಎದುರಿಸಿದ ರೀತಿ, ಸ್ವಯಂ ತಂತ್ರವಾದೀ / ಬ್ರಾಹ್ಮಣ್ಯದ ನಿಲುವುಗಳೇ ಆಗಿರಲಿ ನವೋದಯದ ನಿಲುವುಗಳು ವಸಾಹತು ವಿರೋಧೀ ನಿಲುವುಗಳಾಗಿ ತಲೆಯೆತ್ತಿದ ಬಗೆ, ಆಧುನಿಕತೆಯ ಬೆಳವಣಿಗೆಯೊಡನೆ ಪರಂಪರೆ, ಜಾನಪದ ಲೋಕಗಳನ್ನು ಗ್ರಹಿಸಿ ಸಾಹಿತ್ಯದಲ್ಲಿ ಮರು ಬರೆದ ಕ್ರಮ, ಲೋಕ ವೈರುಧ್ಯಗಳನ್ನು ದಾಟುವ ಉಪಾಯವಾಗಿ ಪ್ರೇಮ ಈ ಸಾಹಿತ್ಯದಲ್ಲಿ ಮುನ್ನೆಲೆಗೆ ಬರುವ ರೀತಿ ಈ ಒಟ್ಟು ಸಾಂಸ್ಕೃತಿಕ ರಾಜಕಾರಣದ ಎಳೆಯಾಗಿ ನವೋದಯ ಕಾವ್ಯ ಮಾರ್ಗ, ಕೆ. ಎಸ್. ನ ಅವರ ಕಾವ್ಯಗಳನ್ನು ಗುರುತಿಸಿಕೊಂಡಾಗ ಮಾತ್ರ ಅರ್ಥಪೂರ್ಣವಾಗುತ್ತದೆ. ನವ್ಯ ಸಾಹಿತ್ಯ ಕೂಡಾ ಅಧಿಕಾರ ಕೇಂದ್ರೀಕರಣ, ಬಳಕೆದಾರ ಸಂಸ್ಕೃತಿ, ಬಂಡವಾಳಶಾಹೀ ವಿರೋಧದಲ್ಲಿಯೇ ರೂಪುಗೊಳ್ಳುತ್ತದೆ. ಅದು ಆಧುನಿಕತೆಯ ಸಹಜಾತ ಮತ್ತು ಪರಮಶತ್ರು. ಈ ವಿರೋಧದ ರೂಪೀಕರಣದ ಚಾರಿತ್ರಿಕತೆಯನ್ನು ಇಂತಹ ಟೀಕೆ ಗಮನಿಸುವುದಿಲ್ಲ. ಸಾಹಿತ್ಯವನ್ನು ಒಂದು ಸಂಹವನ, ಸಾಂಸ್ಕೃತಿಕ ಕ್ರಿಯಾಚರಣೆ ಎಂದು ಗುರುತಿಸಿಕೊಂಡರೆ ನವೋದಯ/ನವ್ಯ ಮಾರ್ಗಗಳನ್ನು ಪ್ರತಿಗಾಮಿ ನಿಲುವಿನವು ಎಂದು ಗುರುತಿಸಿಯೂ ತಳ್ಳಿಹಾಕದಿರಲು ಸಾಧ್ಯವಾಗುತ್ತದೆ. ಅವುಗಳ ಮೂಲಕ ಪ್ರತೀತವಾಗುವ ಸಾಮಾಜಿಕ ನಿಜಗಳ ವಿಶ್ಲೇಷಣೆ ಸಾಧ್ಯವಾಗುತ್ತದೆ. ಅರ್ಥಪೂರ್ಣವೆನಿಸುತ್ತದೆ. ಅಂದರೆ, ಸಾಹಿತ್ಯ ಒಂದು ಸಾಂಸ್ಕೃತಿಕ ರೂಪವಾಗಿ ರೂಪೀಕರಣಗೊಂಡು ಉತ್ಪಾದಿತವಾಗುವ ಪ್ರಕ್ರಿಯೆಯನ್ನು ಕುರಿತ ಚರ್ಚೆ ಮುಖ್ಯವಾಗಬೇಕು. ಎರಡನೆಯದಾಗಿ, ಸಾಹಿತ್ಯ ರೂಪುಗೊಳ್ಳುವುದು, ಒಂದು ಬಗೆಯ ಸಾಂಸ್ಕೃತಿಕ ಅರಿವಾಗಲೀ ಸಂಪೂರ್ಣ ತರ್ಕಬದ್ಧವಾಗಿರುವುದು ಸಾಧ್ಯವಿಲ್ಲ. ಅದು ಒಂದು ಥಿಯರಿ ಅಲ್ಲ, ಅಷ್ಟೇನೂ ತರ್ಕಬದ್ಧವಲ್ಲದ ಸಾಂಸ್ಕೃತಿಕ ತಿಳುವಳಿಕೆ ಕೇಂದ್ರವಾಗಿ ಉಳ್ಳ ಸಾಹಿತ್ಯ ವಿರುದ್ಧಾರ್ಥಗಳು, ಶೈಲಿಗಳು, ತಾಕಲಾಟ, ಸಂಘರ್ಷಗಳೆಲ್ಲವನ್ನೂ ಒಳಗೊಂಡಿರುವ ಜಾಳುಜಾಳಾದ ಬರವಣಿಗೆಯನ್ನು ಸಾಧ್ಯ ಮಾಡುತ್ತದೆ. ಕೃತಿಯಲ್ಲಿ ಹೇಳಿರುವ

ಮಾತಿನಷ್ಟೇ ಹೇಳಿದೆ ಬಿಟ್ಟ ಮೌನವು ಮುಖ್ಯ. ಐಡಿಯಾಲಜಿಯು ಹೇಳಬಾರದೆಂದು ನಿರ್ಬಂಧಪಡಿಸುವ ವಿಷಯಗಳು ಕೃತಿಯು ತಾಳುವ ಮೌನಕ್ಕೆ, ಬಿಡುವ ತೆರಪುಗಳಿಗೆ ಹಾಗೂ ವಿರುದ್ಧಾರ್ಥಗಳಿಗೆ ಕಾರಣವಾಗುತ್ತದೆ. ಹೀಗೆ ಸಾಂಸ್ಕೃತಿಕ ರೂಪವಾದ ಸಾಹಿತ್ಯ ನೂರಕ್ಕೆ ನೂರು ತರ್ಕಬದ್ಧವಲ್ಲ. ಅದು ಜಾಳು ಜಾಳು ಹಾಗೂ ವಿಕೇಂದ್ರಿಕೃತ. ಮೂರನೆಯದಾಗಿ, ಸಾಹಿತ್ಯದಲ್ಲಿ ಲೇಖಕನೊಬ್ಬನದೇ ದನಿ ಓತಪ್ರೋತವಾಗಿ ಹರಿದಿರುವುದಿಲ್ಲ. ಅದು ಅನೇಕ ದನಿಗಳಿಂದ ಕೂಡಿರುತ್ತದೆ. ಆದುದರಿಂದ ನೂರಕ್ಕೆ ನೂರು ಪ್ರಗತಿಪರ ಕಲೆ, ಪ್ರತಿಗಾಮಿ ಕಲೆ ಎನ್ನುವ ವಿಂಗಡನೆ ಮಾಡುವುದು ಸಾಧ್ಯವಿಲ್ಲ. ಒಂದು ಬರವಣಿಗೆಯ ಕ್ರಿಯಾಚರಣೆಯ ಮೂಲಕ ಲಭ್ಯಗೊಳ್ಳುವ ಚಾರಿತ್ರಿಕ, ಸಾಂಸ್ಕೃತಿಕ ಸನ್ನಿವೇಶದ ವಿಶ್ಲೇಷಣೆ ಮಾತ್ರ ಮಹತ್ವದ ಒಳನೋಟಗಳನ್ನು ನೀಡಬಲ್ಲದು. ಸಾಹಿತ್ಯದಲ್ಲಿ ಸಾಮಾಜಿಕ ವಾಸ್ತವವು ನೇರವಾಗಿ ಪ್ರತಿಫಲಿತವಾಗುತ್ತದೆ. ಎನ್ನುವ ನಿಲುವನ್ನು ಎಡಪಂಥೀಯ ವಿಮರ್ಶಕರೇ ದಾಟಿ ಮಂದೇ ಹೋಗಿದ್ದಾರೆ.

ಒಟ್ಟಿನಲ್ಲಿ ಶಿವಾನಂದರ ಕೃತಿ ಮತ್ತು ಅದರ ಹಿನ್ನಲೆಯಲ್ಲಿ ಬಂಡಾಯ ಚಳುವಳಿಗಳು ಆರಂಭಿಸಿದ ಸಾಹಿತ್ಯಕ ವಾಗ್ವಾದಗಳು ಕನ್ನಡದಲ್ಲಿ ಮುಖ್ಯವಾದುದಾಗಿವೆ. ಕನ್ನಡ ಸಾಂಸ್ಕೃತಿಕ ಚರಿತ್ರೆಯಲ್ಲಿ ಅವು ಎತ್ತಿರುವ ಪ್ರಶ್ನೆಗಳನ್ನು ನಿರಾಕರಿಸಿ ಮುಂದುವರಿಯುವುದು ಸಾಧ್ಯವಿಲ್ಲ. ಸಾಹಿತ್ಯಕ್ಕೆ ಸಂಬಂಧಿತವಾಗಿ ಶಿವಾನಂದರು ಎತ್ತಿರುವ ವರ್ಗ ವಿಶ್ಲೇಷಣೆಯ ಮಾತುಗಳು ಮುಖ್ಯವಾದವುಗಳು. ಸಾಹಿತ್ಯವನ್ನು ಸುತ್ತುವರಿದಿದ್ದ ನಿಗೂಢತೆಯ ಮತ್ತು ಪ್ರತಿಭೆಯ ಪ್ರಭಾವಲಯವನ್ನು ಶಿವಾನಂದರು ಬಯಲು ಮಾಡಿದ್ದಾರೆ. ಸಾಹಿತ್ಯ ಕೇವಲ ಸೌಂದರ್ಯ ಶಾಸ್ತ್ರೀಯ ಕಾಳಜಿಯ ವಸ್ತುವಾಗುವುದನ್ನು ತಪ್ಪಿಸಿ, ಸಾಹಿತ್ಯದ ವಿಮೋಚನೆ ಒಟ್ಟೂ ಸಮಾಜದ, ಸಂಸ್ಕೃತಿಯ ವಿಮೋಚನೆಯಾಗುವ ಕಡೆಗೆ ಅವರು ಪ್ರಯತ್ನಿಸಿದ್ದಾರೆ. ಕನ್ನಡದಲ್ಲಿ ಇಂತಹ ಯತ್ನಗಳು ಆಧುನಿಕ ಸಾಹಿತ್ಯ ವಿಮರ್ಶೆಯಲ್ಲಿ ಬದಿಗೊತ್ತರಿಸಲಾಗಿದ್ದ ಅನೇಕ ಪ್ರಶ್ನೆಗಳನ್ನು ಮುನ್ನೆಲೆಗೆ ತಂದಿವೆ. ಅನ್ಯಾನ್ಯ ಸಾಮಾಜಿಕ ವರ್ಗಗಳ ಆತ್ಮವಿಶ್ವಾಸಕ್ಕೆ ಕೂಡಾ ಬಂಡಾಯದ ಯತ್ನಗಳು ಕಾರಣವಾಗಿವೆ. ಒಟ್ಟಾಗಿ ಎಡ ಪಂಥೀಯವೆಂದು ಕರೆಯಬಹುದಾದ ಈ ನಿಲುವುಗಳು ಹೆಚ್ಚು ಗಹನವೂ, ಸೂಕ್ಷ್ಮವೂ ಚಿಂತನಪರವೂ ಆದ ಬರವಣಿಗೆಗಳಿಗೆ, ಎಡ ಮತ್ತು ಎಡವಲ್ಲದ ಸಾಂಸ್ಕೃತಿಕ / ಸಾಮಾಜಿಕ ವಿಚಾರಗಳ ಸಮಗ್ರ ಇತಿಹಾಸವನ್ನು ಗಮನಿಸುವಂತಹ ಬರವಣಿಗೆಗಳಿಗೆ ಕಾರಣವಾಗಬೇಕು, ಈ ಕಾರಣದಿಂದ ಬಂಡಾಯ ಆರಂಭವಾದಾಗಿನ ಅದರ ನಿಲುವುಗಳಿಗೆ ಇಂದೂ ಅಂಟಿಕೊಂಡಿರುವುದು ಕಷ್ಟ ಮತ್ತು ಸರಿಯಲ್ಲ. ಅನ್ಯಾನ್ಯ ಎಡಪಂಥೀಯ ಬರಹಗಾರರ ಸಾಂಸ್ಕೃತಿಕ ಚಿಂತನೆಗಳನ್ನು ಎಡಪಂಥೀಯ ಚಿಂತನೆಯ ಬೌದ್ಧಿಕ ಚರಿತ್ರೆಯನ್ನು ಪರಿಗಣಿಸುವುದು ಈ ನಿಟ್ಟಿನಲ್ಲಿ ಮೊದಲ ಹೆಜ್ಜೆ.[೬]

ಈ ಮೇಲಿನ ಮಾದರಿಗಳನ್ನು ಗಮನಿಸಿದಾಗ ತಿಳಿಯುವುದು ಇಷ್ಟು: ಕೆಲವು ತುಂಬಾ ಸರಳವಾಗಿದ್ದು ಓದುಗರಿಗೆ ನೇರವಾಗಿ ಕೃತಿಯ ವಿವರಗಳನ್ನು ಹೇಳುವ ಸ್ವರೂಪದಲ್ಲಿ ಇವೆ. ಈ ಸ್ವರೂಪದಲ್ಲಿ ಹಲವು ಅನುಕೂಲ ಮತ್ತು ಅನಾನುಕೂಲಗಳು ಕಾಣುತ್ತವೆ. ಈ ಸರಳ ಪುಸ್ತಕ ವಿಮರ್ಶೆಯಿಂದ ಅತಿ ಬೌದ್ಧಿಕತೆ ಹೇರದ, ಜನ ಸಾಮಾನ್ಯರನ್ನು ಗಮನದಲ್ಲಿಟ್ಟು ಕೃತಿಯ ವಿವರಗಳನ್ನು ನೇರವಾಗಿ ಹೇಳುವ ಬಗೆಯ ಇಂಥ ಸ್ವರೂಪಕ್ಕಿದೆ. ಆದರೆ ಕೇವಲ ಕೃತಿಯನ್ನಷ್ಟೇ ವಿಮರ್ಶಿಸಿದಾಗ ಕೃತಿಯ ಹೊರಗಿನ ಹಿನ್ನೆಲೆ,ಇತರ ವಿವರಗಳ ಕಡೆ ಪುಸ್ತಕ ವಿಮರ್ಶೆ ಹರಿಯುವುದಿಲ್ಲ. ಆಗ ಪುಸ್ತಕ ವಿಮರ್ಶೆ ಸಹಜವಾಗಿ ಕೇವಲ ಕೃತಿ ಕೇಂದ್ರಿತವಾಗುತ್ತದೆ. ಆಗ ಅದು ಪುಸ್ತಕ ವಿಮರ್ಶೆಯಾಗಿರುವುದಿಲ್ಲ, ಕೇವಲ ಪರಿಚಯವಾಗಿಯೇ ಉಳಿಯುತ್ತದೆ. ಪುಸ್ತಕ ವಿಮರ್ಶೆ ಕೇವಲ ಪುಸ್ತಕ ಪರಿಚಯವಾಗುಳಿಯುವುದಿಲ್ಲ. ಅದು ಕೃತಿಯ ಮೊದಲ ಅಭಿಪ್ರಾಯವಾಗಿ ನಿರ್ಮಾಣಗೊಳ್ಳುತ್ತದೆ. ಈ ಪ್ರಾರಂಭಿಕ ಅಭಿಪ್ರಾಯದ ಮೂಲಕ ಕೃತಿಯ ಬಗೆಗಿನ ಚರ್ಚೆ ಪ್ರಾರಂಭವಾಗುತ್ತದೆ. ಹಾಗೆ ಮುಂದುವರಿಯುತ್ತದೆ. ಈ ಕಾರಣದಿಂದ

ಪುಸ್ತಕ ವಿಮರ್ಶೆಯೆಂಬುದು ಗಂಭೀರ ಚರ್ಚೆಗೆ ನಾಂದಿಯಾಗುವ ಹಾಗೆ ರೂಪುಗೊಳ್ಳುವ ಅವಶ್ಯಕತೆಯಿರುತ್ತದೆ.

ಇನ್ನೊಂದು ಮಾದರಿಯಲ್ಲಿ ದೀರ್ಘವಾದ ಚರ್ಚೆಯಿದೆ. ಇದರಲ್ಲಿ ಕೃತಿಯ ಬಗೆಗೆ ತೀಕ್ಷ್ಣವಾದ ಪುಸ್ತಕ ವಿಮರ್ಶೆಯೇ ಸಿದ್ಧಗೊಂಡಿದೆ. ಇಂಥ ಪುಸ್ತಕ ವಿಮರ್ಶೆಗಳು ಕೃತಿಯ ಬಗೆಗೆ ಒಂದು ಸ್ಪಷ್ಟ ನಿಲುವನ್ನು ತಿಳಿಸುತ್ತವೆ.

ಇದರಲ್ಲಿ ಹಲವಾರು ವಿಚಾರಗಳ ಚರ್ಚೆ ಬರುತ್ತದೆ.

(೧) ಪಾಶ್ಚಾತ್ಯ ವಿದ್ಯಾಭ್ಯಾಸ ಕುರಿತು,

(೨) ಶಿಕ್ಷಣ ಮೀಸಲಾಗಿದ್ದ ವರ್ಗತಾರತಮ್ಯ ಕುರಿತು,

(೩) ಸಾಂಸ್ಕೃತಿಕವಾದ ಅಂತರವನ್ನು ಬೇಧಿಸಿದ ಬಗೆಗೆ,

(೪) ಪಾಶ್ಚಾತ್ಯ ಆಧುನಿಕ ವಿಚಾರಗಳು ಭಾರತೀಯ ಸಂದರ್ಭದಲ್ಲಿ ಎಡವಿರುವ ಕಾರಣ.

(೫) ಪಾಶ್ಚಾತ್ಯ ಆಧುನಿಕ ವಿಚಾರಗಳು 'ಕುರುಡು ಅನುಕರಣೆ' ಮಾಡುವ ಸಂದರ್ಭ ಕುರಿತ 'ಬೌದ್ಧಿಕ ಚಟುವಟಿಕೆ ಅನಿವಾರ್ಯ ಸ್ಥಿತಿ

(೬) ವಸಾಹತು ಸಂದರ್ಭದಲ್ಲಿ ಉಂಟಾಗುವ ಸಂಸ್ಕೃತಿಯ ಚಾರಿತ್ರಿಕ ಬೆಳವಣಿಗೆ ಮತ್ತು ಅದರಿಂದ ಅನುಸರಿಸಬೇಕಾದ ಮಾರ್ಗೋಪಾಯಗಳು -

ಇಂತಹ ಪ್ರಮುಖ ಅಂಶಗಳ ಹಿನ್ನೆಲೆಯಲ್ಲಿ ಈ ಪುಸ್ತಕದ ವಿಮರ್ಶೆಗೆ ತೊಡಗಿದ್ದಾರೆ. ಇದು ಕೃತಿ ಕುರಿತ ಗಟ್ಟಿಯಾದ ಹಿನ್ನೆಲೆ. ಹಾಗಾಗಿ ಈ ಹಿನ್ನೆಲೆಯ ನೆಲೆಯಲ್ಲಿ ಸಾಹಿತ್ಯದ ಸಾಮಾಜಿಕ ಅರ್ಥವನ್ನು ವಿಶ್ಲೇಷಿಸಬೇಕೆಂಬುದೆ ಅವರ ವಿಮರ್ಶ ಲೇಖನಗಳ ಗಂಭೀರ ಕಾಳಜಿಯಾಗಿ ಗುರುತಿಸಲು ಯತ್ನಿಸಲಾಗಿದೆ. ಆದರೂ ಅದರ ಹಿಂದೆ ಪ್ರಸ್ತುತವಾದ ಕೃತಿ ಪಡೆದಿರುವ ಪ್ರೇರಣೆ ಮತ್ತು ಬಿಡಿಸಿಕೊಳ್ಳಲಾಗದ ದ್ವಂದ್ವವನ್ನು ಪುಸ್ತಕ ವಿಮರ್ಶಕರು ಎತ್ತಿ ತೋರಿಸುತ್ತಾರೆ. ಇದಲ್ಲದೆ ಇದರೊಳಗೆ ಪುಸ್ತಕ ವಿಮರ್ಶೆ ಬಗೆಗಿನ ಪ್ರತಿಕ್ರಿಯೆಯು ಇದೆ. ಇಲ್ಲಿ ವಿಮರ್ಶೆಯ ಪರಿಭಾಷಾತ್ಮಕ ನಿಲುವನ್ನು ಈ ಪುಸ್ತಕ ವಿಮರ್ಶಕರು ಪ್ರಶ್ನಿಸುತ್ತಿದ್ದಾರೆ. ಅವರು ಸಾಂಪ್ರದಾಯಿಕ ವಿಮರ್ಶೆಗಳ (ನವೋದಯ/ನವ್ಯ) ಪರಿಭಾಷೆಯನ್ನು ಬಳಸುತ್ತಿದ್ದಾರೆ. ಈ ಅಂಶ ಅವರು ಮಾಡಿದ ಪುಸ್ತಕ ವಿಮರ್ಶೆಗಳಲ್ಲಿ ನಿಚ್ಚಳವಾಗಿದೆ ಎಂಬ ದಿಟ್ಟ ಹೇಳಿಕೆಯಡಿ ಪುಸ್ತಕ ವಿಮರ್ಶೆ ಮಾಡುತ್ತಿದ್ದಾರೆ. ಈ ಎಲ್ಲಾ ಒಟ್ಟು ಸ್ವರೂಪವನ್ನು ಪುಸ್ತಕ ವಿಮರ್ಶೆ ಹಿಡಿದಿಟ್ಟಿದೆ.

ಪುಸ್ತಕ ವಿಮರ್ಶೆಯನ್ನು ಇಷ್ಟೆಲ್ಲಾ ಹಿನ್ನೆಲೆಗಳಲ್ಲಿ, ವಿಶ್ಲೇಷಣೆ ಮಾಡಬೇಕೆಂದು ಯಾವುದೇ ನಿಬಂಧನೆಯಿಲ್ಲ. ಅದರೂ ಇಷ್ಟೊಂದು ವಿಶ್ಲೇಷಣಾತ್ಮಕ ಹಿನ್ನೆಲೆಗೆ ಯಾಕೆ ತೊಡಗಿದೆ ಎಂದು

ಪ್ರಶ್ನಿಸಿಕೊಂಡರೆ, ಇಲ್ಲಿ ಪುಸ್ತಕ ವಿಮರ್ಶೆಯನ್ನು ಒಂದು ಜವಾಬ್ದಾರಿಯುತ ಕೆಲಸವೆಂದು ಪರಿಗಣಿಸಿರುವುದರಿಂದ ಒಂದು, ಪುಸ್ತಕವನ್ನು ಅನಾವರಣ ಮಾಡುತ್ತಿದ್ದೇನೆಂಬ ಹೊಣೆಯಿರುವುದರಿಂದ, ಸಾಂಸ್ಕೃತಿಕ ಸಂದರ್ಭದಲ್ಲಿ ಪುಸ್ತಕದ ವಿಚಾರಗಳು ಬೀರಬಹುದಾದ ಪ್ರಭಾವದ ಆಲೋಚನೆಯಿಂದ. ಹೀಗೆ ಹಲವು ಭಿನ್ನ ಆಯಾಮಗಳು ಈ ಪುಸ್ತಕ ವಿಮರ್ಶೆಯನ್ನು ಒಂದು ದೀರ್ಘ ಸೈದ್ಧಾಂತಿಕ ರೂಪದಲ್ಲಿ ನಿರ್ಮಾಣವಾಗುವಂತೆ ಮಾಡಿವೆ. ಇವರು ತಾಳುವ ನಿಲುವು ಒಪ್ಪಿತವೋ? ತಿರಸ್ಕೃತವೋ? ಒಂದು ನಿರ್ಧಾರವನ್ನಂತೂ ಕೃತಿಯ ಬಗೆಗೆ ತಳೆಯುತ್ತವೆ. ಆದರೆ ಪುಸ್ತಕ ವಿಮರ್ಶೆಯೇ ಅಂತಿಮವಲ್ಲವಾದ್ದರಿಂದ ಅದು ಪ್ರಾಥಮಿಕವಾದ ಅಭಿಪ್ರಾಯವಾಗಿರುವುದರಿಂದ ಅದರ ಬಗ್ಗೆ ಇನ್ನೂ ಅನೇಕ ಚಿಂತನೆಗಳು, ವಿಚಾರಗಳು ಸ್ಫುರಣಗೊಳ್ಳುತ್ತ ಹೋಗುತ್ತವೆ. ಇಂಥ ಪುಸ್ತಕ ವಿಮರ್ಶೆಗಳು ಗಂಭೀರ ಓದುಗ ಚಿಂತಕರನ್ನು ಸೃಷ್ಟಿಮಾಡುತ್ತವೆ. ಪಾರಂಪರಿಕವಾದ ಶಿಸ್ತುಗಳ ಜೊತೆ ತಳುಕು ಹಾಕುತ್ತವೆ. ಕೇವಲ ಕೃತಿಯಷ್ಟೆ ಇಲ್ಲಿನ ಕೇಂದ್ರವಾಗಿರುವುದಿಲ್ಲ. ಕೃತಿಯ ಮೂಲಕ ಇತರ ಜ್ಞಾನ ಶಾಖೆಗಳನ್ನು ವಿಸ್ತರಿಸುತ್ತ ಹೋಗುತ್ತದೆ. ಹೀಗಾಗಿ ಪುಸ್ತಕ ವಿಮರ್ಶೆ ತನ್ನ ವ್ಯಾಪ್ತಿ ಮೀರಿ ಗಂಭೀರ ಚರ್ಚೆ ನಡೆಸುವ ಸಂದರ್ಭದಲ್ಲಿ ಕೆಲವೊಮ್ಮೆ ಕೃತಿಯ ಲೇಖಕರು ವಿಮರ್ಶಕರು ಇವರಿಬ್ಬರೂ ಕಾರಣರಾಗಿರುತ್ತಾರೆ. ಇವರು ತಮ್ಮ ಪೂರ್ವಗ್ರಹ ಮಿತಿಯನ್ನು ಮೀರಿ ವಿಮರ್ಶಿಸಿದರೆ ಎಲ್ಲ ರೀತಿಯಿಂದಲೂ ಪುಸ್ತಕ ವಿಮರ್ಶೆಗೆ ಮೌಲ್ಯಯುತ ಕೊಡುಗೆ ದೊರೆಯುತ್ತದೆ. ಆದರೆ ಈ ದಾರಿಯಲ್ಲಿಯೇ ತುಂಬಾ ತೊಡಕಿದೆ. ಪುಸ್ತಕ ವಿಮರ್ಶೆಮಾಡುವ ಸಂದರ್ಭದಲ್ಲಿ ಕೃತಿಯ ಲೇಖಕರು ಅವರ ಪರವಾದ ನಿಲುವುಗಳು ಕೃತಿಗಿಂತ ಮೇಲಾಗಿ ನಿಲ್ಲುತ್ತವೆ. ಇಂಥ ಸಂದಿಗ್ಧ ತೊಡಕನ್ನು ಇಂದು ಪುಸ್ತಕ ವಿಮರ್ಶೆ ಎದುರಿಸುತ್ತಿದೆ.

೭.೧.೨ ಪುರುಷ ಪುಸ್ತಕ ವಿಮರ್ಶಕರ ಸಂಖ್ಯೆ ಹೆಚ್ಚಿದೆ. ಮಹಿಳಾ ಪುಸ್ತಕ ವಿಮರ್ಶಕರ ಸಂಖ್ಯೆ ಕಡಿಮೆಯಿದೆ.

ನಮ್ಮ ಸಾಹಿತ್ಯ ಹಿಂದಿನಿಂದಲೂ ಪುರುಷ ಪ್ರಧಾನವಾದದ್ದೇ. ಆಗೊಮ್ಮೆ ಈಗೊಮ್ಮೆಯಷ್ಟೆ ಸ್ತ್ರೀಯರು ಸಾಹಿತ್ಯ ಕೃಷಿಯಲ್ಲಿ ತೊಡಗಿದ್ದಾರೆ. 'ಮಹಿಳೆ' ಅಥವಾ 'ಸ್ತ್ರೀ' ಎಂದ ತಕ್ಷಣ 'ಬಂಧನ' ಎಂಬ ನಿಲುವು ತಟ್ಟನೆ ನೆನಪಿಗೆ ಬರುತ್ತದೆ. ಹಾಗೆಯೇ 'ಬಿಡುಗಡೆ'ಯ ಪ್ರಶ್ನೆ ಹುಟ್ಟುತ್ತದೆ. ನಮ್ಮ ಸಮಾಜ ಮತ್ತು ಸಂಸ್ಕೃತಿಯು ಮುಖ್ಯವಾಗಿ ಹಿಂದಿನಿಂದಲೂ ಪುರುಷ ಪ್ರಧಾನ ನಿಲುವುಗಳಿಂದಲೇ ಉಳಿದುಬಂದಿವೆ. ಈ ನಿಲುವುಗಳಿಂದ ಬಿಡುಗಡೆ ಪಡೆಯುವ ಪ್ರಯತ್ನವು 'ಮಹಿಳಾ' ಸಾಹಿತ್ಯ ಅಧ್ಯಯನಗಳ ಮೂಲ ಸೆಲೆಯಾಗಿ ಮೂಡುತ್ತಿದೆ. ಪಾಶ್ಚಿಮಾತ್ಯ ಫೆಮಿನಿಸ್ಟ್ ಸಿದ್ಧಾಂತ ನಮ್ಮ ಸಾಹಿತ್ಯ ವಲಯದಲ್ಲೂ ಬೀಸಿ ಇಲ್ಲಿಯೂ ಫೆಮಿನಿಸ್ಟ್ ಛಾಪು ಹರಡಿದೆ. ಈಗಾಗಿ ಸಾಹಿತ್ಯದ ಎಲ್ಲ ಮುಖಗಳಿಗೂ ಸ್ತ್ರೀಯರು ಕಾಲಿರಿಸಿದ್ದಾರೆ. ಆದರೆ ಹೆಚ್ಚಿನದಾಗಿ ಕೃತಿ, ಕಾವ್ಯರಚಿಸುವ ಕಡೆಗಷ್ಟೇ ಇವರ ಗಮನವಿದೆ. ವಿಮರ್ಶೆಯೆಂಬ ಬೌದ್ಧಿಕ ಕಸರತ್ತು, ವಾಗ್ವಾದಕ್ಕೆ ಮಹಿಳೆಯರು ಕೈ ಹಾಕಿರುವುದು ಕಡಿಮೆಯಷ್ಟೇ. ವಿಮರ್ಶೆ ತುಂಬಾ ಕಸರತ್ತಿನ ಕೆಲಸ ಎಂಬ ಭಾವ ಬೆಳೆದಿರುವುದರಿಂದ ಮಹಿಳಾ ವಿಮರ್ಶಕರ ಕೊರತೆ ಎದ್ದು ಕಾಣುತ್ತಿದೆ. ಪತ್ರಿಕೆಗಳಲ್ಲಿ ಬರುವ ಪುಸ್ತಕ ವಿಮರ್ಶೆಗಳನ್ನು ನೋಡಿದರೆ ಅದಕ್ಕೆ ಬರೆಯುವ

ಮಹಿಳೆಯರ ಸಂಖ್ಯೆ ಹತ್ತನ್ನೆರಡಷ್ಟೇ. 'ಮಹಿಳಾ ಜಾಗೃತಿ' ಯಂಥ ಪತ್ರಿಕೆಗಳಲ್ಲಿ ಮಹಿಳೆಯರ ಕೃತಿಗಳನ್ನು ಮಹಿಳಾ ವಿಮರ್ಶಕರೇ ವಿಮರ್ಶಿಸುವ ನೈಜ ಉದಾಹರಣೆಗಳಿವೆ. ಆದರೆ ಅಂಥ ಉದಾಹರಣೆಗಳು ತುಂಬಾ ವಿರಳ. ಕೆಲವೊಮ್ಮೆ ಇಲ್ಲವೇ ಇಲ್ಲ ಎಂದು ಹೇಳಬಹುದು. ಆದರೆ ಸಾಹಿತ್ಯ ಸಂದರ್ಭದಲ್ಲಿ ಪುರುಷ ವಿಮರ್ಶಕರ ಪ್ರಾಬಲ್ಯ ತುಂಬಾ ಇದೆ. ಮಹಿಳೆಯಲ್ಲಿ ಸಾಹಿತ್ಯ ವಿಮರ್ಶೆಯ ಕಡೆ ಗಮನ ಇಲ್ಲದೇ ಇರುವುದು. ಸ್ತ್ರೀ ದೃಷ್ಟಿಯು ವಿಮರ್ಶೆಯ ಕೆಲಸ ಶುರುವಾಗುವುದು ಸಾಹಿತ್ಯ ರಚನೆ ಆದ ಮೇಲೆಯೇ ಹೊರತು ಮುಂಚೆ ಅಲ್ಲ, ಎಂಬ ಭಾವವಿರುವುದರಿಂದ ವಿಮರ್ಶೆಯ ನಿಲುವಿನ ಬಗೆಗೆ ಮಹಿಳೆಯರು ತಲೆಕೆಡಿಸಿಕೊಂಡಿಲ್ಲ. ಈ ಕಾರಣದಿಂದ ಬಂದಂಥ ಮಹಿಳಾ ಕೃತಿಗಳನ್ನು ಪುರುಷ ವಿಮರ್ಶಕರೇ ವಿಮರ್ಶಿಸಬೇಕಾದ ಅನಿವಾರ್ಯತೆ ಒದಗಿಬಿಟ್ಟಿದೆ. ಆದರೆ ವಿಮರ್ಶಿಸುವ ಮಟ್ಟದಲ್ಲೂ ಸ್ತ್ರೀ ವಿಮರ್ಶಕಿಯರ ಅಗತ್ಯತೆಯಿದೆ ಏಕೆಂದರೆ ಬರೆಯುವ ಮಟ್ಟದಲ್ಲಿ ತೀರಾ ವೈಯಕ್ತಿಕವಾಗಿರುವ ಸಾಹಿತ್ಯವು, ಬರೆದಾಗ ಮೇಲೆ ಸಾಮಾಜಿಕ ವ್ಯಾಪ್ತಿಯನ್ನು ಪಡೆದುಕೊಳ್ಳುತ್ತದೆ. ಆಗ ಲೇಖಕಿಯ ತೀರ್ಮಾನವೆಂದರೆ ಸ್ತ್ರೀ ಸಂವೇದನೆಯ ಸತ್ವವನ್ನು ಗ್ರಹಿಸದೆ, ಪ್ರಧಾನವಾಹಿನಿ ಸ್ತ್ರೀಯರ ಯಾವ ಪುಸ್ತಕಗಳನ್ನು ಉಪೇಕ್ಷೆ ಮಾಡುತ್ತದೋ ಅಂಥ ಪುಸ್ತಕಗಳನ್ನು ಕಡೇ ಪಕ್ಷ ಗುರುತಿಸುವಿಕೆ, ಓದುವಿಕೆಗಾದರೂ ಈ ಬೇಧ ಮಾಡುವುದನ್ನು ತಪ್ಪಿಸಬಹುದು. ಗುಣಗ್ರಾಹಿ ವಿಮರ್ಶೆಯಲ್ಲಿ ಕಡೇ ಪಕ್ಷ ಇಂಥ ಪುಸ್ತಕ ಹೊರಬಂದಿದೆ ಎಂದು ಗುರುತಿಸಬೇಕಾಗುತ್ತದೆ. ಅಲ್ಲದೆ ಸ್ತ್ರೀಯ ಎಷ್ಟೋ ನೋವು, ಸಂವೇದನೆ ಪುರುಷ ದೃಷ್ಟಿಗೆ ಅರ್ಥವಾಗುವುದಿಲ್ಲ. ಅದನ್ನು ಅರ್ಥಮಾಡಿಕೊಳ್ಳಲು ಸ್ತ್ರೀ ವಿಮರ್ಶಕರ ಸ್ತ್ರೀ ದೃಷ್ಟಿಯ ವಿಮರ್ಶೆ ಅಗತ್ಯತೆಯಿದೆ. ಸ್ತ್ರೀ ಬಗೆಯ ಕೃತಿಗಳಿಗೆ ಸ್ತ್ರೀ ಸಂವೇದನೆಯ ವಿಮರ್ಶೆ ಆರೋಗ್ಯಕರ ಚರ್ಚೆಯ ರೂಪದಲ್ಲಿ ನಡೆದರೆ ತುಂಬಾ ಒಳ್ಳೆಯದು ಆದರೆ ವಾಸ್ತವವಾಗಿ ಸ್ತ್ರೀ ವಿಮರ್ಶಕಿಯರ ಕೊರತೆಯಿರುವುದರಿಂದ ಪುರುಷ ವಿಮರ್ಶಕರೆ ತಮ್ಮಗನಿಸಿದಂತೆ ಹೇಳುವ ಪ್ರವೃತ್ತಿ ಬಳಕೆಯಲ್ಲಿದೆ. ಇಂಥ ಧೋರಣೆಗೆ ಪತ್ರಿಕೆಗಳು ಕಾರಣವಾಗಿವೆ. ಕೆಲವು ಪತ್ರಿಕೆಗಳು ಕೇವಲ ಪುರುಷ ಪುಸ್ತಕ ವಿಮರ್ಶಕರನ್ನು ನೇಮಿಸಿಕೊಂಡಿವೆ. ಇಂತಹ ಸಂದರ್ಭದಲ್ಲಿ ಮಹಿಳಾ ಕೃತಿಗಳನ್ನು ಪುರುಷರೇ ವಿಮರ್ಶಿಸಬೇಕಾಗುತ್ತದೆ.

'ಸಂವಾದ' ಪತ್ರಿಕೆಯು ೧೯೯, ಸೆಪ್ಟಂಬರ್ -ಡಿಸೆಂಬರ್ ತಿಂಗಳಲ್ಲಿ (೨೯-೩೦)ಸಂಚಿಕೆಯನ್ನು ಮಹಿಳಾ ಸಂಚಿಕೆಯೆಂದು ಕರೆದು ಅಲ್ಲಿನ ಲೇಖನಗಳೆಲ್ಲವು ಮಹಿಳಾಪರ ಚಿಂತನೆಗಳು, ಮತ್ತು ಮಹಿಳಾ ಕೃತಿಗಳ ವಿಮರ್ಶೆಗಳನ್ನು ಪ್ರಕಟಿಸಿದೆ. ಈ ವಿಶೇಷ ಮಹಿಳಾ ಸಂಚಿಕೆಯಲ್ಲಿ 'ಶೈಲಜ ಉಡಚಣ' ರ 'ತುಂತುರು ಹನಿಗಳು' ಮಿನಿ ಕವನಗಳ ಸಂಕಲನವನ್ನು, ಎಂ. ಆರ್. ಕಮಲರ 'ಜಾಣೆ' ಕವನ ಸಂಕಲನವನ್ನು ಎಚ್.ಎಲ್. ಪುಷ್ಪರ 'ಅಮೃತಮತಿ ಸ್ವಗತ' ಕವನ ಸಂಕಲನವನ್ನು, ನೇಮಿಚಂದ್ರರ 'ಮತ್ತೆ ಬರೆದ ಕತೆಗಳು' ಕಥಾ ಸಂಕಲನವನ್ನು ಕ್ರಮವಾಗಿ ಪುಸ್ತಕ ವಿಮರ್ಶಕರಾದ ಸತ್ಯನಾರಾಯಣರಾವ್ ಅಣತಿ, ಹೆಚ್. ಪಟ್ಟಾಭಿರಾಮ ಸೋಮಯಾಜಿ, ಸ. ಉಷಾ, ರಾಘವೇಂದ್ರ ಪಾಟೀಲರು ಮಾಡಿದ್ದಾರೆ. ಮೇಲಿನ ಕೃತಿಗಳೆಲ್ಲ ಸ್ತ್ರೀಕೃತಿಗಳು ಅವುಗಳನ್ನು ವಿಮರ್ಶಿಸಿರುವವರು ಹೆಚ್ಚು ಪುರುಷ ವಿಮರ್ಶಕರು, ಒಬ್ಬರೇ ಸ್ತ್ರೀ ವಿಮರ್ಶಕರಾಗಿದ್ದಾರೆ. ಇದು ಸರಳ ಉದಾಹರಣೆಯಷ್ಟೆ. ಈ

ಉದಾಹರಣೆ ಒಟ್ಟಾರೆ ಪುರುಷ ಮತ್ತು ಮಹಿಳಾ ಪುಸ್ತಕ ವಿಮರ್ಶಕರ ಸಂಖ್ಯೆ ಗಣನೀಯವಾಗಿ ಇಳಿದಿರುವುದನ್ನು ಕಾಣಬಹುದು. ಇದಕ್ಕೆ ಹಲವು ಕಾರಣಗಳು ಕಾಣಬರುತ್ತವೆ. ನಮ್ಮಲ್ಲಿ ಇನ್ನೂ ಸ್ತ್ರೀ ಮಾಡುವ ಚಿಂತನೆಗಳ ಬಗೆಗೆ ಗುಮಾನಿಯಿರುವುದು, ಅವರನ್ನು ಅನುಮಾನದಿಂದ ನೋಡುತ್ತಿರುವುದು, ಅವರ ಕೃತಿಗಳು ಭ್ರಮಾತ್ಮಕ ಜಗತ್ತನ್ನು ಕುರಿತವುಗಳು, ಅತ್ಯುನ್ನತ ಚಿಂತೆಗಳ ಕೊರತೆ ಎಂಬ ಮಡಿವಂತಿಕಾ ದೃಷ್ಟಿಕೋನ ಸ್ತ್ರೀ ಎಲ್ಲ ಕ್ಷೇತ್ರಗಳಿಗೂ ಬರಲು ತಡೆಯೊಡ್ಡುತ್ತಿದೆ.

೭.೧.೩ ಕರ್ನಾಟಕದ ಯಾವ ಭಾಗಕ್ಕೆ ಸಂಬಂಧಿಸಿದೆ ಎಂಬುದರ ಮೇಲೆ ಪುಸ್ತಕ ವಿಮರ್ಶೆಯ ಚರ್ಚೆ ನಡೆಯುತ್ತದೆ.

ನಮ್ಮ ಕನ್ನಡ ಭಾಷೆಯಲ್ಲಿ ಹಲವಾರು ಪ್ರಭೇಧಗಳಿವೆ. ಧಾರವಾಡ ಕನ್ನಡ, ಮೈಸೂರು ಕನ್ನಡ, ಮಂಗಳೂರು ಕನ್ನಡ, ಬೆಂಗಳೂರು ಕನ್ನಡ ಇನ್ನು ಮುಂತಾದವು ಅಲ್ಲದೆ ಉಪಪ್ರಬೇಧಗಳು ಇದರಲ್ಲಿ ಮೊಳಕೆಯೊಡೆದಿವೆ, ಆದರೆ ಗ್ರಾಂಥಿಕ ಭಾಷೆಯಾಗಿ, ಶಿಷ್ಟವಾಗಿ ಬಳಕೆಯಲ್ಲಿರುವುದು ಬೆಂಗಳೂರು ಮತ್ತು ಸುತ್ತಮುತ್ತಲಿನ ಭಾಷೆಯೊಂದೇ. ಪ್ರತಿಯೊಂದು ಸಮೂಹ ಸಂವಹನಗಳಲ್ಲೂ ಸಹ ಬೆಂಗಳೂರು ಕನ್ನಡವನ್ನು ಪ್ರಮುಖವಾಗಿ ಉಪಯೋಗಿಸುತ್ತಾರೆ. ಹಾಗಾಗಿ ಎಲ್ಲವು ಬೆಂಗಳೂರು ಕೇಂದ್ರಿತವಾಗಿದೆ. ಕೇವಲ ಭಾಷೆಯಲ್ಲಷ್ಟೆ ಅಲ್ಲದೆ ಸಾಹಿತ್ಯ ಕ್ಷೇತ್ರದಲ್ಲೂ ಈ ಧೋರಣೆಯಿದೆ. ಬೆಂಗಳೂರು ಎಲ್ಲ ಕ್ಷೇತ್ರಗಳ, ಚಿಂತನೆಗಳ ಆಕರ್ಷಕ ಕೇಂದ್ರವಾಗಿದೆ. 'ಎಲ್ಲ ದಾರಿಗಳು ರೋಮ್ ಕಡೆಗೆ' ಎಂಬಂತೆ ಎಲ್ಲರ ಮನಸ್ಸುಗಳು ಬೆಂಗಳೂರನ್ನು ಬಯಸುತ್ತಿವೆ. ಈ ಪ್ರೇರಿತ ಮನಸ್ಥಿತಿ ಬೆಂಗಳೂರನ್ನು ಮುಖ್ಯ ಪ್ರಧಾನ ವಾಹಿನಿ ಕೇಂದ್ರವನ್ನಾಗಿ ನಿರ್ಮಿಸಿಕೊಂಡಿದೆ. ಈ ಕಾರಣದಿಂದ ಎಲ್ಲ ಸಾಹಿತಿಗಳಲ್ಲೂ ಬೆಂಗಳೂರನ್ನು 'ಸಾಹಿತ್ಯಕ ಕೇಂದ್ರ' ಎಂದು ಭಾವಿಸಿರುವುದರಿಂದ ಬೆಂಗಳೂರಲ್ಲಿ ತನ್ನ ಕೃತಿಯ ಚರ್ಚೆ ಆರಂಭವಾಗಬೇಕು ಎಂದು ಬಯಸುತ್ತಾರೆ. ಈ ಕಾರಣದಿಂದ ಬೆಂಗಳೂರು ಪ್ರಕಾಶನ ಪತ್ರಿಕೆಗಳಲ್ಲಿ ತಮ್ಮ ಕೃತಿಗಳು ವಿಮರ್ಶೆಗೊಳಗಾದರೆ ತಮ್ಮ ಕೃತಿಗಳು ಚರ್ಚೆಗೆ ಕಾರಣವಾಗುತ್ತವೆ, ಮತ್ತು ಹೆಚ್ಚು ಪ್ರಚುರಕ್ಕೆ ಬರುತ್ತವೆ ಎಂದು ತಿಳಿದಿದ್ದಾರೆ.

ಪುಸ್ತಕ ವಿಮರ್ಶೆಗೆ ಆರಿಸುವಾಗ ಒಂದು ಬಗೆಯ ಪ್ರಾದೇಶಿಕತೆ ಹಾಗೂ ಲೇಖಕ ಪರವಾದ ನೆಲೆಗಳು ಕೆಲಸ ಮಾಡಿರುವಂತೆ ಕಾಣುತ್ತಿದೆ. ಹಿಂದಿನ ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೆ ದಿನಕರ ದೇಸಾಯಿಯವರ ಬಗ್ಗೆ ಉತ್ತರ ಕನ್ನಡ ಜಿಲ್ಲೆಯವರು ಬರೆಯಬೇಕು. ಬೀಚಿಯವರ ಬಗ್ಗೆ ಬಳ್ಳಾರಿಯವರು, ಅನುಪಮಾ ಬಗ್ಗೆ ಮಹಿಳೆಯರು ಬರೆಯಬೇಕು ಎಂಬಂಥ ನೆಲೆಗಳು ವಸ್ತುನಿಷ್ಠ ಆಲೋಚನೆಗೆ ಅವಕಾಶ ಮಾಡಿಕೊಡುವ ಬದಲು ಸಮರ್ಥನೆ ಹಾಗೂ ಆರಾಧನೆಗಳು ವಿಮರ್ಶೆ ತಾವು ಪುಸ್ತಕ ವಿಮರ್ಶೆಗೆ ಆರಿಸಿಕೊಳ್ಳವಾಗ ಕೃತಿಗಳು ಕರ್ನಾಟಕದ ಯಾವ ಭಾಗಕ್ಕೆ ಸಂಬಂಧಿಸಿದೆ ಎಂಬುದರ ಮೇಲೆ ವಿಮರ್ಶೆ ನಡೆಯುತ್ತಿದೆ. ಬರುತ್ತಿರುವ ಎಲ್ಲ ಪುಸ್ತಕ ವಿಮರ್ಶೆಗಳನ್ನು ಸಮೀಕ್ಷಿಸಿದಾಗ ಅವುಗಳಲ್ಲಿ ಎರಡು ರೀತಿಯ ಪುಸ್ತಕ ವಿಮರ್ಶೆಗಳು ಕಂಡುಬರುತ್ತವೆ.

ಅ. ಬೆಂಗಳೂರು ಮತ್ತು ಮೈಸೂರು ಸುತ್ತಮುತ್ತಲಿನ ಪ್ರದೇಶದ ಲೇಖಕರ ಕೃತಿಗಳ ಪುಸ್ತಕ ವಿಮರ್ಶೆಗಳು ಪ್ರಕಟವಾಗುತ್ತಿವೆ.

ಆ. ಇಲ್ಲವೇ ಪ್ರತಿಷ್ಠಿತ ಸಾಹಿತಿಗಳೆಂದು ಈಗಾಗಲೇ ಹೆಸರು ಮಾಡಿದ್ದರೆ ಅವರು ಕರ್ನಾಟಕದ ಯಾವ ಭಾಗದಲ್ಲಿದ್ದರೂ ಅವರ ಕೃತಿಗಳ ವಿಮರ್ಶೆ ನಡೆಯುತ್ತದೆ.

ಇವೆರೆಡು ಸಾಧ್ಯತೆಗಳನ್ನು ಹೊರತುಪಡಿಸಿದರೆ ಇನ್ನುಳಿದ ಯಾವುದೇ ರೀತಿಯ ಕೃತಿಗಳ ವಿಮರ್ಶೆ ತುಂಬಾ ಅಪರೂಪವೆಂದೇ ಹೇಳಬೇಕು. ವಿಮರ್ಶಕರ, ಪತ್ರಿಕೆಗಳ ಇಂಥ ಪ್ರಾದೇಶಿಕ ಪಕ್ಷಪಾತ ಧೋರಣೆ ಒಳ್ಳೆಯ ಪುಸ್ತಕ ವಿಮರ್ಶೆಯನ್ನು, ಪುಸ್ತಕ ವಿಮರ್ಶೆ ಪಂಕ್ತಿಯನ್ನು ಬೆಳೆಸಲು ತಡೆಯೊಡ್ಡುತ್ತವೆ.

೭.೧.೪ ಸಾಮಾಜಿಕ ತುರ್ತಿಗೆ ಸಂಬಂಧಿಸಿದ ಕೃತಿಗಳು ಹೆಚ್ಚು ವಿಮರ್ಶೆಗೊಳಪಡುತ್ತವೆ.

ಸಾಮಾಜಿಕ ಜೀವನದಲ್ಲಿ ಹೆಚ್ಚು ಪ್ರಭಾವಕಾರೀ ಪರಿಣಾಮ ಬೀರುವುದು ವಾಸ್ತವದ ಸಂದರ್ಭ. ಸಮಕಾಲೀನ ಸಂದರ್ಭದಲ್ಲಿ ನಡೆದಿರುವ, ನಡೆಯಬಹುದಾದ ವಸ್ತು, ಘಟನೆಗಳು ಓದುಗರಿಗೆ ಹೆಚ್ಚು ಸನಿಹವಾಗುತ್ತವೆ. ಹಾಗೇ ಆ ವಾಸ್ತವ ವಿಷಯಗಳ ಬಗ್ಗೆ ಎಲ್ಲರೂ ಕುತೂಹಲಿಗಳಾಗಿರುತ್ತಾರೆ. ಇಂಥ ಸಂದರ್ಭದಲ್ಲಿ ಸಾಮಾಜಿಕ ಸಂದರ್ಭದಲ್ಲಿ ಮಹತ್ವದ್ದು ಎಂದು ಕಾಣಬರುವುದೆಲ್ಲ ಮುಖ್ಯವಾಗುತ್ತಾ ಹೋಗುತ್ತದೆ. ಇಂಥ ಪ್ರೇರಣೆ ಸಾಹಿತ್ಯ ಸಂದರ್ಭದಲ್ಲೂ ಆಗುತ್ತಿದೆ. ನಮ್ಮ ಸಾಹಿತ್ಯದ ಹುಟ್ಟು ಬೆಳವಣಿಗೆಗಳೆಲ್ಲವನ್ನು ನಾವು ಅವಲೋಕಿಸಿದಾಗ ಈ ರೀತಿಯ ಸಾಮಾಜಿಕ ತುರ್ತಿನಿಂದಲೇ ನಿರ್ಮಾಣವಾಗಿರುವುದನ್ನು ಕಾಣಬಹುದು. ಆಧುನಿಕ ಸಾಹಿತ್ಯದ ಸಂದರ್ಭದಲ್ಲಂತೂ ಸಾಮಾಜಿಕ ತುರ್ತು ಮಹತ್ತರ ಪ್ರಭಾವವನ್ನು ಬೀರಿದೆ. ಇಂಥ ಪರಿಣಾಮಕಾರೀ ಪ್ರಭಾವವೇ ಪುಸ್ತಕ ವಿಮರ್ಶೆಯಲ್ಲಿ ಬಳಕೆಯಾಗಿ ಜನರ ಅಭಿರುಚಿಗೆ ಗ್ರಾಹ್ಯವಾಗಿದೆ.

ಸಾಹಿತ್ಯ ಜನಜೀವನದಿಂದಲೇ ಹುಟ್ಟುವಂಥದ್ದು ಅದು ಜನಜೀವನದಿಂದ, ಸಮಾಜದಿಂದ ಹೊರತಾಗಿಲ್ಲ. ಈ ಕಾರಣದಿಂದ ಸಮಾಜದಲ್ಲಿ ನಡೆಯುವ, ಚಳುವಳಿಗಳು, ಬೆಳವಣಿಗೆಗಳು, ಸಿದ್ಧಾಂತಗಳು ಸಾಹಿತ್ಯದಲ್ಲೂ ನಡೆಯುತ್ತಿವೆ, ಆರ್ಥಿಕ, ಧಾರ್ಮಿಕ ಕ್ಷೇತ್ರಗಳಲ್ಲಿ ಆಗುತ್ತಿರುವ ಕ್ರಾಂತಿಕಾರಿ ಬದಲಾವಣೆ ಇವುಗಳೆಲ್ಲ ಪುಸ್ತಕ ವಿಮರ್ಶೆಯನ್ನು ಪ್ರಭಾವಿಸಿವೆ. ಇಂಥ ಕಾರಣಗಳಿಂದ ಪುಸ್ತಕ ವಿಮರ್ಶೆಯು ವಾಸ್ತವದ ತುರ್ತಿಗೆ ಸ್ಪಂದಿಸುವ ಮಹತ್ವದ ಹೊಣೆಗಾರಿಕೆಯನ್ನು ಬೆಳಸಿಕೊಂಡಿದೆ. ಒಂದು ಮಾದರಿಯನ್ನು ಹೀಗೆ ನೋಡಬಹುದು.[೭]

ಪ್ರತಿಭಟನೆಯ ಕಾವ್ಯ - ವಿಮರ್ಶಕರು - ಜೊ

೧. ಹದ್ದುಗಳ ಹಾಡು - ಬುದ್ದಣ ಹಿಂಗಮಿರೆ

೨. ಇದು ನನ್ನ ಭಾರತ - ಅಲ್ಲಮಪ್ರಭು ಬೆಟ್ಟದೂರು.

೩. ಪರಿಸ್ಥಿತಿ ೨೦, ೫ ಕವಿತೆ - ಶಿವಶರಣ ಜಾವಳಿ

೪. ಹೊಲೆ ಮಾದಿಗರ ಹಾಡು - ಸಿದ್ದಲಿಂಗಯ್ಯ

೫. ಓ ಎನ್ನ ದೇಶ ಬಾಂಧವರೇ - ಚಂಪಾ

ಈ ಮೇಲಿನ ಪುಸ್ತಕಗಳ ಮಾದರಿಯನ್ನು ಗಮನಿಸಿದರೆ ಮೇಲಿನ ಪುಸ್ತಕಗಳು ಪೂರ್ಣಪ್ರಮಾಣದಲ್ಲಿ ಬಂಡಾಯದ ಜೊತೆಗೆ ಗುರುತಿಸಿಕೊಂಡಂಥವು. ಜೊತೆಗೆ ಸಾಂಸ್ಕೃತಿಕವಾಗಿ ಮಹತ್ವವಾದಂತಹ ಕೃತಿಗಳು. ಈ ಸಂಕಲನದ ಎಲ್ಲಾ ಕವನಗಳಲ್ಲಿ ಪ್ರತಿಭಟನೆಯೇ ಕವನದ ವಸ್ತು ಹಾಗೂ ರಚನ ವಿಧಾನಗಳೆರಡರಲ್ಲೂ ಒಂದೇ ಸ್ವರೂಪದವಾಗಿವೆ. ನವ್ಯ ಕಾವ್ಯದಲ್ಲಿನ ಅಮೂರ್ತ ವಿಚಾರಗಳಿಗೆ ಬದಲಾಗಿ ಇಲ್ಲಿ ಮೂರ್ತ ವಿಚಾರಗಳೇ ಹೆಚ್ಚು ಮುಖ್ಯ ಸ್ಥಾನವನ್ನು ಪಡೆದರೆ, ಇವಗಳ ರಚನೆ ವಿಧಾನದಲ್ಲೂ ನವ್ಯದ ಜಟಿಲ ಶಿಲ್ಪಕ್ಕೆ ಬದಲಾಗಿ ಇಲ್ಲಿ ಸಡಿಲುತನ ಕಾಣಿಸಿಕೊಂಡಿದೆ. ನವ್ಯದ ಒಟ್ಟು ನಿಲುವು ತಾತ್ವಿಕವಾದದ್ದಾದರೆ ಈ ಕೃತಿಗಳಲ್ಲಿ ಕಂಡುಬರುವ ನಿಲುವು ಸಾಮಾಜಿಕವಾಗಿದ್ದು ಆಕ್ರೋಶಭರಿತವಾಗಿದ್ದು, ವ್ಯಂಗ್ಯ, ವಿಢಂಬನೆ, ಕಟಕಿ, ಬೈಗುಳ ಮೊದಲಾದ ವಿವಿಧ ರೂಪಗಳಲ್ಲಿ ಕವಿಗಳ ಅನಿಸಿಕೆಗಳು ಆಕಾರ ತಳೆವುದನ್ನು ನಾವಿಲ್ಲಿ ಕಾಣಬಹುದು.

ಇಂಥ ನಿಲುವುಳ್ಳ ಉದ್ದೇಶ ಪ್ರಮುಖವಾಗಿ ಈ ಪುಸ್ತಕ ವಿಮರ್ಶೆ ಬಂದಿರುವ ಕಾಲಘಟ್ಟ ಮತ್ತು ಅದರ ಹಿಂದಿನ ಸಾಂಸ್ಕೃತಿಕ ಸಂದರ್ಭವೇ ಆಗಿದೆ.

ಎಪ್ಪತ್ತರ ದಶಕ ಎಲ್ಲ ರೀತಿಯಿಂದಲೂ ಅನೇಕ ಬಗೆಯ ಪಲ್ಲಟಗಳನ್ನು ಕಂಡ ಕಾಲ. ಸಾಹಿತ್ಯ ಮತ್ತು ಸಾಂಸ್ಕೃತಿಕ ಎರಡರ ಒಂದೇ ಪರಿಭಾವಿಸಿ ಶೋಷಣೆ ಪರಂಪರಾಗತ ಸಮಾಜದ ವಿರುದ್ಧ ಸಿಡಿದೆದ್ದ ಕಾಲ. ಆದುದರಿಂದ ಆಗ ಅನಿರ್ವಾಯವಾಗಿ ಪರಂಪರಾಗತ ಸಮಾಜದ ವಿರುದ್ಧ ಪ್ರತಿಭಟನೆ ಮಾಡಿದ ಕಾವ್ಯಗಳು ಆಗಿನ ಕಾಲದ ಸಾಮಾಜಿಕ ತುರ್ತಾಗಿತ್ತು. ಅಂತಹ ಸಂದರ್ಭದಲ್ಲಿ ಈ ಮೇಲಿನ ಪ್ರತಿಭಟನೆ ಕಾವ್ಯಗಳಿಗೆ ಮಹತ್ತರ ಸ್ಥಾನ ದೊರಕಿತು. ಒಂದೇ ಆಶಯ, ಧೋರಣೆಗಳನ್ನು ಒಳಗೊಂಡ ವಿಭಿನ್ನ ಕಾವ್ಯಗಳನ್ನು ಒಂದೇ ಶೀರ್ಷಿಕೆಯಡಿಯಲ್ಲಿ ಚರ್ಚಿಸಿರುವ ಪುಸ್ತಕ ವಿಮರ್ಶಕರು ಇವುಗಳನ್ನು ಆರಿಸಿಕೊಳ್ಳಲು ಎಪ್ಪತ್ತರ ದಶಕದ ಪ್ರತಿಭಟನೆಯು ಕಾರಣವಾಗಿದೆ. ಈ ದಶಕದ ಯಾವ ಕೃತಿಗಳನ್ನು ತೆಗೆದುಕೊಂಡರು ಒಂದಲ್ಲೊಂದು ರೀತಿಯಲ್ಲೂ ಸಮಾಜಕ್ಕೆ ಪ್ರತಿಭಟನೆಯನ್ನು ನೀಡುವುದನ್ನು ಕಾಣಬಹುದು.

ಹಾಗೆಯೇ ೧೯೯೪-೯೫ರಲ್ಲಿ ಭಾರತದ ಸಂದರ್ಭದಲ್ಲಿ ಉಂಟಾದ ಡೆಂಕಲ್, ಗ್ಯಾಟ್, ಮುಂತಾದ ಒಪ್ಪಂದಗಳು ಎಬ್ಬಿಸಿದ ತಲ್ಲಣಗಳು, ಆತಂಕಗಳನ್ನು ಕುರಿತು ಆಗ ಆ ರೀತಿಯ ಕೃತಿಗಳೇ ರಚಿತವಾಗುತ್ತಿದ್ದವು. ಹಾಗಾಗಿ ಅಂತಹ ಕೃತಿಗಳ ಬಗೆಗೆ ಪುಸ್ತಕ ವಿಮರ್ಶೆಗಳು ಬರುತ್ತಿದ್ದುದನ್ನು ಕಾಣಬಹುದು.

೧) ಡಂಕಲ್ ಪ್ರಸ್ತಾವನೆ ಪತ್ರಿಕಾರಂಗಕ್ಕೆ ಲಗ್ಗೆ (ಜಿ.ಎಸ್. ಮೋಹನ್)
ವಿಮರ್ಶಕರು - ಮಂಜುಳಾ. ಬಿ.ಎನ್. ಪುಸ್ತಕ ಮಾಹಿತಿ ಡಿಸೆಂಬರ್ ೯೫ ಪು.೯

೨) ಕೊಜೆಂಟ್ರಿಕ್ಸ್ ವಿದ್ಯುತ್ತಿನ ವಿಪತ್ತು. ವಿಮರ್ಶಕರು - ಕೆ. ಪ್ರೇಮಕುಮಾರ, ಪುಸ್ತಕ ಮಾಹಿತಿ ಅಕ್ಟೋಬರ್ ೯೫ ಪು. ೭

೩) ಗ್ಯಾಟ್ ಒಪ್ಪಂದ, ಡಂಕಲ್ ಪ್ರಸ್ತಾಪ ಮತ್ತು ಭಾರತ (ಅ. ಗೋ. ಪೂಜಾರಿ) ವಿಮರ್ಶಕರು - ಎಚ್.ನರಸಿಂಹಮೂರ್ತಿ -ಪುಸ್ತಕ ಮಾಹಿತಿ ಆಗಸ್ಟ್ ೧೯೯೬ ಪು. ೫

ಈ ಮೇಲಿನ ಉಲ್ಲೇಖಗಳು, ಸಾಮಾಜಿಕ ತುರ್ತಿಗೂ, ಪುಸ್ತಕ ವಿಮರ್ಶೆಗೂ ಇದ್ದಂಥ ಸಂಬಂಧವನ್ನು ತಿಳಿಸುತ್ತವೆ.

ಹಾಗೆಯೇ ಇತ್ತೀಚೆಗೆ ಭಾರತದ ಸಾಮಾಜಿಕ ಪರಿಸರದಲ್ಲಿ ಜರುಗಿದ, ಗುಜರಾತ್ ಘಟನೆ, ತಾಲಿಬಾನ್ ಘಟನೆ, ಪೆಂಟಗಾನ್ ದುರಂತ, ಓಸಾಮ ಬಿನ್ ಲಾಡೆನ್ ಭಯೋತ್ಪಾದನೆ' ಕೋಮುದಳ್ಳುರಿ, ಮುಂತಾದವುಗಳು ಸಾಹಿತ್ಯದಲ್ಲೂ, ಪುಸ್ತಕ ವಿಮರ್ಶೆಯಲ್ಲೂ ವೈಚಾರಿಕವಾದ, ಕೋಮು ಸೌಹಾರ್ದತೆಯನ್ನು ಒಳಗೊಂಡ ಕೃತಿಗಳನ್ನು ವಿಮರ್ಶಿಸಿರುವುದನ್ನು ಕಾಣಬಹುದು. ಇಂಥ ಸಾಮಾಜಿಕ ಸಂದರ್ಭ ಬದಲಾದಂತೆ ಪುಸ್ತಕ ವಿಮರ್ಶೆಯು ಜಡವಾಗದೆ ಅದರೊಂದಿಗೆ ತನ್ನ ನಿಲುವುಗಳನ್ನು ಬದಲಾಯಿಸಿಕೊಂಡೇ ಬರುತ್ತಿದೆ.

೭.೧.೫ ಪ್ರಕಟವಾದ ಎಲ್ಲಾ ಕೃತಿಗಳನ್ನು ಕುರಿತ ವಿಮರ್ಶೆ ಪ್ರಕಟವಾಗುವುದಿಲ್ಲ

ಪುಸ್ತಕ ವಿಮರ್ಶೆ ಸಂವಹನದ ಸಮಸ್ಯೆಯನ್ನು ಅವಲಂಬಿಸಿದೆ. ಎಷ್ಟು ಜನ ಓದುಗರಿದ್ದಾರೆ. ಎಂತಹ ಕೃತಿಯನ್ನು ನಿರೀಕ್ಷಿಸುತ್ತಾರೆ ಎಂಬ ಅಭಿರುಚಿಯ ಮೇಲೂ ಇದು ನಿಂತಿದೆ. ಕೆಲವೊಮ್ಮೆ ಸಂಪಾದಕರ ಧೋರಣೆಗಳು ಕಾರಣವಾಗಿರಬಹುದು. ಇಲ್ಲವೆ ಪುಸ್ತಕ ವಿಮರ್ಶಕರ ಆಯ್ಕೆಯು ಮುಖ್ಯವಾಗಬಹುದು. ನಮ್ಮ ಸಾಹಿತ್ಯ ಕ್ಷೇತ್ರಕ್ಕೆ ಧಾರ್ಮಿಕ, ಪರಿಸರ, ಆಧ್ಯಾತ್ಮಿಕ, ರಾಜಕೀಯ ಸಾಹಿತ್ಯಕ, ದಾಂಪತ್ಯ ಕುರಿತು, ವೈದ್ಯಕೀಯ, ಪ್ರವಾಸ, ವಿಜ್ಞಾನ, ವೈಚಾರಿಕ ಮುಂತಾದ ನೂರಾರು ಕ್ಷೇತ್ರಗಳಿಂದ ಕೃತಿಗಳು ಬಂದು ಬೀಳುತ್ತಿರುವುದರಿಂದ ಈ ಎಲ್ಲ ಕೃತಿಗಳನ್ನು ಓದುವ ಓದುಗರ ಸಂಖ್ಯೆ ತುಂಬಾ ಪರಿಮಿತವಾಗಿಯೇ ಇದೆ. ಅವರ ಕಾಲವು ಅಷ್ಟೇ ಪರಿಮಿತಿಯನ್ನು ಪಡೆದುಕೊಂಡಿದೆ. ಹಲವು ವಿಭಿನ್ನ ಕ್ಷೇತ್ರಗಳಿಂದ ಬಂದಂಥ ಕೃತಿಗಳೆಲ್ಲವನ್ನು ವಿಮರ್ಶಿಸಲು ಕಾಲಾವಕಾಶ, ಸ್ಥಳಾವಕಾಶ ಎರಡೂ ಕಡಿಮೆಯಿರುವುದರಿಂದ ಒಂದೊಂದು ಪತ್ರಿಕೆ ತಮ್ಮ ಧೋರಣೆಯು ಸ್ಪಷ್ಟವಾಗಿ ಓದುಗರಿಗೆ ತಿಳಿಸಿಕೊಟ್ಟಿರುತ್ತವೆ. ಆ ಕಾರಣದಿಂದ ಇಂದು ಧಾರ್ಮಿಕ ಪತ್ರಿಕೆ, ಆಧ್ಯಾತ್ಮಿಕ ಪತ್ರಿಕೆ, ಸಾಹಿತ್ಯ ಪತ್ರಿಕೆ, ವಿಜ್ಞಾನ ಪತ್ರಿಕೆ, ರಾಜಕೀಯ ಪತ್ರಿಕೆಗಳಾಗಿ ವಿಭಾಗಗೊಂಡಿವೆ. ಇದರಿಂದ ಓದುಗ ತನ್ನ ಅಭಿರುಚಿಗೆ ತಕ್ಕಂಥ ಪತ್ರಿಕೆಗಳು ತನ್ನ ಬದ್ಧ ಧೋರಣೆಗಳಿಗೆ ಅನುಗುಣವಾಗಿಯೇ ಸುದ್ದಿಗಳನ್ನು ನೀಡುವುದಾಗಲಿ, ಪುಸ್ತಕ ವಿಮರ್ಶೆಯನ್ನು ಮಾಡಿಸುವುದಾಗಲಿ, ಮಾಡುತ್ತವೆ. ಇದರಾಚೆಗಿನ ಕೃತಿಗಳಿಗೆ ಇಲ್ಲಿ ಪ್ರವೇಶವಿಲ್ಲ. ಆದರೆ ಸಾಹಿತ್ಯ ಪತ್ರಿಕೆಗಳಲ್ಲಿ ಎಲ್ಲ ರೀತಿಯ ಕೃತಿಗಳು ವಿಮರ್ಶೆಗೆ ಒಳಪಡುತ್ತವೆ. ಕೆಲವೊಮ್ಮೆ ದಿನಪತ್ರಿಕೆಗಳಲ್ಲಿ ಇಂಥ ಮಿತಿ ಅಡ್ಡಬರುವುದಿಲ್ಲ ಸಾಹಿತ್ಯ ಪತ್ರಿಕೆಗಳು ಬಂದಂಥ ಕೃತಿಗಳೆಲ್ಲವನ್ನು ಸಾಹಿತ್ಯದ ಪರಿಧಿಯೊಳಗೆ ಸೇರಿಸಿಕೊಳ್ಳುವುದರಿಂದ ಅದರಲ್ಲಿ ಪಕ್ಷಪಾತ ಧೋರಣೆಯ ಅಂಶವೇ ಸುಳಿಯದು. ಆದರೆ ಪ್ರತಿದಿನಕ್ಕೆ ನೂರಿನ್ನೂರು ಕೃತಿಗಳು ಪ್ರಕಟಗೊಳ್ಳುತ್ತಿರುವಾಗ ಅವುಗಳನ್ನು

ತಕ್ಷಣವೇ ಕೃತಿ ವಿಮರ್ಶಿಸಬೇಕಾದ ಅಗತ್ಯದ ಒತ್ತಡ ಇರುವುದರಿಂದ ಪ್ರಕಾಶಕರು, ಪುಸ್ತಕ ವಿಮರ್ಶಕರಾದವರು ಬಂದಂಥ ನೂರಾರು ಪುಸ್ತಕಗಳಲ್ಲಿ ಕೆಲವಷ್ಟೇ ಆಯ್ದುಕೊಂಡು ಪುಸ್ತಕ ವಿಮರ್ಶೆಯನ್ನು ಮಾಡಬೇಕಾದ ಮಿತಿ ಬಂದೊದಗುತ್ತದೆ. ಇಂಥ ಸಂದರ್ಭದಲ್ಲಿ ಎಷ್ಟೋ ಒಳ್ಳೆಯ ಕೃತಿಗಳು ಕೈತಪ್ಪಿ ಹೋಗಬಹುದು. ಪುಸ್ತಕ ವಿಮರ್ಶೆಯೆಂಬುದು 'ಪ್ರತಿ ತಿಂಗಳ ಆಯ್ಕೆಯನ್ನು ಸಂಚಿಕೆಯ ಆಯ್ಕೆಯನ್ನು ಕುರಿತು. ಟಿ.ಪಿ. ಅಶೋಕ ಅವರು 'ಪುಸ್ತಕ ಪ್ರೀತಿ'ಯಲ್ಲಿ ಹೀಗೆ ಹೇಳುತ್ತಾರೆ

ಓದುಗರೇ ಗಮನಿಸಬಹುದಾದಂತೆ ಇಲ್ಲಿ ವಿಮರ್ಶೆ, ವಿಶ್ಲೇಷಣೆ, ವ್ಯಾಖ್ಯಾನ ಕೇವಲ ಪರಿಚಯ, ಸಾರಾಂಶ ಎಲ್ಲ ಇವೆ. ನಾನು ಗಮನಿಸಿದಂತೆ ಕನ್ನಡದಲ್ಲಿ ಆ ಅವಧಿಯಲ್ಲಿ ಪ್ರಕಟವಾಗುತ್ತಿದ್ದ ಎಲ್ಲ ಬಗೆಯ ಮುಖ್ಯ ಪುಸ್ತಕಗಳನ್ನು ಓದುಗರ ಗಮನಕ್ಕೆ ತರುವುದು ಅಂಕಣದ ಪ್ರಧಾನ ಉದ್ದೇಶವಾಗಿತ್ತು. ನನ್ನ ಸುತ್ತಲ ಹಿರಿಯರ, ಮಿತ್ರರ, ವಿದ್ಯಾರ್ಥಿಗಳ ಮತ್ತು ಅಪರಿಚಿತ ಓದುಗರ ಉತ್ಸಾಹದಾಯಕ ಪ್ರೋತ್ಸಾಹಕರ ಪ್ರತಿಕ್ರಿಯೆಗಳು ಅಂಕಣವನ್ನು ಬೆಳಸಿದವು, ಪ್ರತಿ ತಿಂಗಳೂ ನಿಗದಿತ ದಿನಾಂಕದಂದೇ ಲೇಖನವನ್ನು ಬರೆದು ಅಂಚೆಯಲ್ಲಿ ರವಾನಿಸುವ ಅನಿವಾರ್ಯತೆ ಹಲವು ಬಗೆಯ ಒತ್ತಡಗಳನ್ನು ಸೃಷ್ಟಿಸುತ್ತಿತ್ತಾದರೂ ಒಟ್ಟಿನಲ್ಲಿ ಈ ಬರವಣಿಗೆ ನನಗೆ ಪ್ರಿಯವಾಗಿತ್ತು. 'ಈ ನನ್ನ ಪುಸ್ತಕ ಪ್ರೀತಿ' ನಾಡಿನ ತುಂಬಾ ನನಗೆ ಹೊಸ ಸ್ನೇಹಿತರನ್ನು ದೊರಕಿಸಿಕೊಟ್ಟಿತು. 'ಅವಲೋಕನ' ಅಂಕಣದಿಂದ ನಾನು ಮುಖ್ಯವಾಗಿ ಪಡೆದದ್ದು ಇದು ಅನೇಕ ಪುಸ್ತಕಗಳನ್ನು ಗಮನಿಸಿಯೂ ತಿಂಗಳಿಗೆ ಒಂದು ಪುಸ್ತಕದ ಬಗ್ಗೆ ಮಾತ್ರ ಬರೆಯುವುದು ಸಾಧ್ಯವಿತ್ತು. ಹಾಗಾಗಿ ಕೆಲವು ಮಹತ್ವದ ಪ್ರಕಟಣೆಗಳು ಅವಲೋಕನಗೊಳ್ಳದೇ ಹೋದವು.ಈ ಬಗ್ಗೆ ನನಗೆ ಈಗಲೂ ವಿಷಾದವಿದೆ. ನನ್ನ ವೈಯಕ್ತಿಕ ಆದ್ಯತೆ, ಅಭಿರುಚಿಗಳ ಮಿತಿಗಳೊಂದಿಗೆ ಈ ಮಿತಿಯೂ ಸೇರಿಕೊಂಡಿರುವುದರಿಂದ ಏಳೂವರೆ ವರುಷಗಳ ಕನ್ನಡ ಪ್ರಕಟಣ ಪ್ರಪಂಚದ ಸಮಗ್ರ ಚಿತ್ರವೊಂದನ್ನು ಈ ಬರಹಗಳು ನೀಡುತ್ತದೆ ಎಂದು ಖಚಿತವಾಗಿ ಹೇಳಲಾರೆ. ಆ ಅವಧಿಯ ನನ್ನ ಓದಿನ ಚಿತ್ರವನ್ನಷ್ಟೇ ಅವು ಕೊಡಬಹುದು. ಆದರೆ ಈ ಅಂಕಣ ಅನೇಕರಿಗೆ ಪ್ರಿಯವಾಗಿತ್ತು, ಉಪಯುಕ್ತವಾಗಿತ್ತು ಎಂಬುದು ಲೇಖಕನಿಗೆ ಒಂದು ಬಗೆಯ ಧನ್ಯತೆಯ ಭಾವವನ್ನು ತಂದು ಕೊಟ್ಟಿದೆ. ೮

ಇಲ್ಲಿ ಟಿ.ಪಿ. ಅಶೋಕ ಅವರ ಪುಸ್ತಕ ವಿಮರ್ಶಾ ಮಾದರಿಯ ಸ್ವರೂಪವನ್ನು ಗುರುತಿಸಬಹುದು ಹಾಗೆಯೇ ಪುಸ್ತಕ ವಿಮರ್ಶೆಯ 'ಆಯ್ಕೆ' ಅದರಿಂದ ಬರುವ ಹೊಸ ಆಯಾಮಗಳ ಪರಿಚಯ ಎಲ್ಲವನ್ನು ಇಲ್ಲಿ ಹೇಳಲಾಗಿದೆ. ಹಾಗಾಗಿ ಕೃತಿಗಳ ಆಯ್ಕೆ ಪುಸ್ತಕ ವಿಮರ್ಶಕರ ಓದನ್ನು ಅವಲಂಬಿಸಿರುತ್ತದೆ. ಎನ್ನುವುದನ್ನು ಮರೆಯುವಂತಿಲ್ಲ. ಬರೆಯಬೇಕಾದ ಒಂದು ಪುಸ್ತಕವನ್ನು ಓದಲು ಪುಸ್ತಕ ವಿಮರ್ಶಕರಿಗೆ ಆಗಿರುವುದಿಲ್ಲ, ಅದ್ದರಿಂದ ಅದನ್ನು ಕುರಿತು ಬರೆಯುವುದಿಲ್ಲ. ಅದನ್ನು ಓದಿ ಮುಗಿಸಿದಾಗ 'ಪುಸ್ತಕ ವಿಮರ್ಶಾ' ಅಂಕಣಕ್ಕೆ ಅದು ಹಳೆಯದಾಗಿ ಹೋಗಿರುತ್ತದೆ. ಇನ್ನು ಕೆಲವು ಪುಸ್ತಕಗಳು ಮುಖ್ಯವಾಗಿ ಸೃಜನಶೀಲ ಪುಸ್ತಕಗಳು ಒಂದೇ ಓದಿನಿಂದ ಬರೆಸಿಕೊಳ್ಳುವುದಿಲ್ಲ ಎರಡನೆಯ ಓದಿಗೆ ಪುಸ್ತಕ ವಿಮರ್ಶಕರಿಗೆ ಸಮಯವಿರುವುದಿಲ್ಲ. ಅಂಥ ಪುಸ್ತಕಗಳು 'ಪುಸ್ತಕ ವಿಮರ್ಶೆ' ಗಳಾಗದೆ ಹೋಗುವ ಸಾಧ್ಯತೆಯಿರುತ್ತದೆ. ಇಂಥ 'ಸಾಮಾಜಿಕ ಸಂದಿಗ್ಧತೆ'ಗೆ ಪುಸ್ತಕ ವಿಮರ್ಶೆ ಸಿಲುಕಿದೆ ಇದಕ್ಕೆ ಒಂದು ರೀತಿಯ ಅನುಕೂಲ ಮತ್ತು ತೊಂದರೆ ಎರಡು ಏಕಕಾಲದಲ್ಲಿ ಬಂದೊದಗಿವೆ. ಅನುಕೂಲವೆಂದರೆ ಬಂದಂಥ ಕೃತಿಗಳಲ್ಲಿ ಅತ್ಯುತ್ತಮವಾದುದನ್ನು 'ಆಯ್ಕೆ' ಮಾಡುವ ಹೊಣೆಗಾರಿಕೆ. ಹಾಗೆಯೇ ತೊಂದರೆ 'ಆಯ್ಕೆ' ಕೆಲವೊಮ್ಮೆ ಪಕ್ಷಪಾತ ಇಲ್ಲವೆ ಅನುತ್ತಮವಾದುದರ ಆಯ್ಕೆ. ಇಂತಹ ತೊಂದರೆಗಳು ಪುಸ್ತಕ ವಿಮರ್ಶೆಯಿಂದ ಘಟಿಸುತ್ತವೆ.

೭.೧.೬ 'ಪುಸ್ತಕ ವಿಮರ್ಶೆಯು ಕೆಲವೊಮ್ಮೆ ಕೃತಿಕಾರ ಯಾರು ಎಂಬುದರ ಮೇಲೂ ನಿಂತಿರುತ್ತದೆ.

ಇಲ್ಲಿಯವರೆಗೆ ಬಂದಿರುವ ಪುಸ್ತಕ ವಿಮರ್ಶೆಗಳಲ್ಲಿ 'ಮೌಲ್ಯಯುತ ಪುಸ್ತಕ ವಿಮರ್ಶೆಗಳು' ಎಂದು ಸಂಗ್ರಹಿಸಿದರೆ ಅವುಗಳಲ್ಲಿ ನೂರು ಇನ್ನೂರು ಸಿಗಬಹುದು. ಅವುಗಳಲ್ಲಿ ಈಗಾಗಲೇ ಪ್ರಸಿದ್ಧಿಯಾದ ಲೇಖಕರ ಕೃತಿಗಳನ್ನು ಕುರಿತ ಪುಸ್ತಕ ವಿಮರ್ಶೆಗಳೇ ಹೆಚ್ಚಿವೆ. ಹಾಗೆಯೇ ಒಬ್ಬರೇ ಲೇಖಕರ ಹಲವು ಕೃತಿಗಳು ವಿಮರ್ಶೆಗೊಂಡಿರುವುದನ್ನು ಕಾಣಬಹುದು. ಇದನ್ನು ನೋಡಿದಾಗ ಪುಸ್ತಕ ವಿಮರ್ಶೆಗಳನ್ನು ಮಾಡುವಾಗ, ಮಾಡುವ 'ಆಯ್ಕೆ' ಮಾಡಿಕೊಳ್ಳುವಾಗ ಸಹಜವಾಗಿ ಅದು 'ಪಕ್ಷಪಾತ'ವಾಗಿ ಕೆಲವೊಮ್ಮೆ ಈಗಾಗಲೇ ಹೆಸರಾಗಿರುವ ಲೇಖಕರ ಕೃತಿಗಳು ಮಹತ್ವದೆಂದು ಪರಿಗಣಿಸಿ ಒಬ್ಬರೆ ಲೇಖಕರ ಹಲವು, ಕೆಲವೊಮ್ಮೆ ಎಲ್ಲ ಕೃತಿಗೊಳಪಟ್ಟಿವೆ; ಪಡುತ್ತಿವೆ. ಕೃತಿ ಬರುವ ಹೊತ್ತಿಗೆ 'ಪುಸ್ತಕ ವಿಮರ್ಶಿಸಲು ಕಾಯುವ, ಕಾತರಿಸುವ ಸಾಧ್ಯತೆಗಳು ಇವೆ. ಅಂಥದೊಂದು ಮಾದರಿಯನ್ನು ಗಮನಿಸಬಹುದು.

ಡಾ॥ ಡಿ.ಆರ್. ನಾಗರಾಜ್ ಅವರ 'ಶಕ್ತಿ ಶಾರದೆಯ ಮೇಳ' - ಪುರುಷೋತ್ತಮ ಬಿಳಿಮಲೆ

ಕನ್ನಡ ವಿಮರ್ಶೆ ಎಲ್ಲೋ ಒಂದೆಡೆ ಸ್ಥಗಿತವಾಗಿದೆ ಎಂದು ಅನ್ನಿಸತೊಡಗುವ ಕಾಲದಲ್ಲಿ ಡಿ. ಆರ್. ನಾಗರಾಜ್ ಅವರ 'ಶಕ್ತಿ ಶಾರದೆಯ ಮೇಳ' ಪ್ರಕಟವಾಗಿದೆ. ಆಧುನಿಕ ಕನ್ನಡ ಕಾವ್ಯದಲ್ಲಿ ಭೂಮಿ-ಕಾಲ-ಕಾಮ ಮತ್ತು ಸಮಾಜಗಳು ಮೈ ಪಡೆದ ಬಗೆಯನ್ನು ಇದರಲ್ಲಿ ಅತ್ಯಂತ ಸಂಯಮದಿಂದ ಸೂಕ್ಷ್ಮವಾಗಿ ವಿವೇಚಿಸಲಾಗಿದೆ. ಪ್ರಬುದ್ಧವಾದ ವಿವೇಚನೆಗೆ, ತಾತ್ವಿಕ ಖಚಿತತೆಗೆ, ಭಾಷೆಯ ಲವಲವಿಕೆಗೆ ಈ ಕೃತಿ ಒಂದು ಮಾದರಿ ಉದಾಹರಣೆ. ಭೂಮಿ-ಕಾಲ-ಕಾಮ-ಸಮಾಜಗಳು ಪರಿಶೀಲನೆಯನ್ನು ಕವನದ ಆಕೃತಿಯೊಳಗೆ ಇಟ್ಟು ಚರ್ಚಿಸುವಾಗಲೂ ಅದು ಒಂದು ಕಾಲದ ಸಾಂಸ್ಕೃತಿಕ ಅರ್ಥವಂತಿಕೆಯ ಶೋಧ ಆಗುವುದರಲ್ಲಿ ಕೃತಿಯ ಮಹತ್ವ ಅಡಗಿದೆ. ನಾಗರಾಜ್ ಹೇಳುವುದು ಹೀಗೆ

'ನನ್ನ ಪ್ರಕಾರ ಕಾವ್ಯ ಯಾವಾಗಲೂ ಶಕ್ತಿ -ಶಾರದೆಯ ಮೇಳದ ಹಾಗೆ. ಶಾರದೆ ಎಂದರೆ ಇಲ್ಲಿ ವಿದ್ಯೆ, ವೈಚಾರಿಕ ಜ್ಞಾನ, ಶಕ್ತಿ ಎಂದರೆ ವೈಚಾರಿಕ ಜ್ಞಾನದ ಆಚೆಗೆ ಇರುವ ಅನುಭವ ಅಥವಾ ಎನರ್ಜಿ. ಬಹಳ ಬಾರಿ ಸಾಹಿತ್ಯವನ್ನು ಶಾರದೆಯನ್ನಾಗಿ ಮಾತ್ರ ತೆಗೆದುಕೊಳ್ಳುವಂತೆ ಆಗಿ ಬಿಡುತ್ತದೆ. ಆದರೆ ಕಾವ್ಯ ಮುಖ್ಯವಾಗಿ ಶಕ್ತಿ. ಈ ಶಕ್ತಿ ರೂಪಕ್ಕೆ ವಿಮರ್ಶೆ ಪ್ರತಿಸ್ಪಂದಿಸಿ ತನ್ನ ಒಡಲಿನೊಳಕ್ಕೆ ಅದನ್ನು ಕರೆದುಕೊಳ್ಳಬೇಕಾಗಿದೆ. (ಪು. ೮)

ಕನ್ನಡದ ಸಂದರ್ಭದಲ್ಲಿ ಇಂಥ ಯೋಚನೆಗೆ 'ಅನನ್ಯತೆ' ಪ್ರಾಪ್ತವಾಗುತ್ತದೆ. ಲೌಕಿಕ ಜಗತ್ತಿನ ಮಹಾನ್ ವಾಸ್ತವ ಮತ್ತು ಅಲೌಕಿಕ ಜಗತ್ತಿನ ಆದರ್ಶಗಳನ್ನು ಮುಖಾಮುಖಿಯಾಗಿಸುವಲ್ಲಿ ಮನುಷ್ಯ ತೋರುವ ವಿಕ್ರಮವನ್ನೆ ವಿಮರ್ಶಕನೂ ತೋರುತ್ತಾನೆ. ಇಲ್ಲಿ ವಿಮರ್ಶೆಯ ಹೊಣೆಗಾರಿಕೆ ಗುರುತರವಾದುದು. ನಾಗರಾಜ್ ಬರಹದ ಶ್ರೇಷ್ಠತೆಯನ್ನು ಅನಂತ ಮೂರ್ತಿಯವರು ನಾಲ್ಕು ರೀತಿಯಲ್ಲಿ ಗ್ರಹಿಸಿದ್ದಾರೆ.

ಒಂದು : ಪ್ರಬಂಧದ ವ್ಯಾಪ್ತಿ ದೊಡ್ಡದು - ಕನ್ನಡದ ಎಲ್ಲ ಆಧುನಿಕ ಕವಿಗಳ ಮೇಜರ್ ಅನ್ನಬಹುದು ಕೃತಿಗಳೆಲ್ಲವೂ ಆಳವಾಗಿ, ಸೂಕ್ಷ್ಮವಾಗಿ ಒಂದು ಕೇಂದ್ರ ದೃಷ್ಟಿಕೋನದ ಪ್ರವೇಶಕ್ಕೆ ಸಿಕ್ಕುವಂತೆ ಚರ್ಚಿಸಲು ಪ್ರಬಂಧದಲ್ಲಿ ಅವಕಾಶ ಮಾಡಿಕೊಳ್ಳಲಾಗಿದೆ.

ಎರಡು : ಸಾಹಿತ್ಯ ವಿಮರ್ಶೆಯ ಎಚ್ಚರವನ್ನೂ ತಾತ್ವಿಕ ವ್ಯಾಖ್ಯಾನಕ್ಕೆ ಅಗತ್ಯವಾದ ಉದಾರ ಗ್ರಹಿಕೆಯನ್ನು ಒಂದಕ್ಕೊಂದು ವಿರೋಧವಾಗದಂತೆ ಒಳಗೊಂಡಿರುವುದು.

ಮೂರು : ಕನ್ನಡದ ಪದ್ಯಗಳ ಉತ್ತಮ ವಿಮರ್ಶೆ ಕೃತಿಯಲ್ಲಿದೆ.

ನಾಲ್ಕು : ಹಲವು ಆಕಾರಗಳಿಂದ ಜ್ಞಾನ ಸಂಪಾದನೆ ಮಾಡಿ ಅವೆಲ್ಲವನ್ನೂ ಸಾಹಿತ್ಯ ವಿಮರ್ಶೆಗೆ ದುಡಿಸಿಕೊಂಡಿದ್ದಾರೆ (ಪು.iii - viii)

ಕಲಾಕೃತಿ - ಚರಿತ್ರೆ - ಸಿದ್ಧಾಂತ ಈ ಮೂರರ ನಡುವಿನ ನಿಕಟ ಸಂಬಂಧದ ತಾತ್ವಿಕ ಗ್ರಹಿಕೆಯಲ್ಲಿ, ನಾಗರಾಜ ವಿಮರ್ಶೆ ಅಂತಿಮವಾಗಿ ಕನ್ನಡದ ಸಾಂಸ್ಕೃತಿಕ ವಿಮರ್ಶೆಯೂ ಆಗಿರುವುದನ್ನು ಚನ್ನವೀರ ಕಣವಿಯವರೂ ಗುರುತಿಸಿದ್ದಾರೆ. (ಪು. viii)

ಕನ್ನಡ ನವೋದಯವು ವಸಾಹತೀಕರಣದ ಗರ್ಭದಿಂದಲೇ ಉದಿಸಿ ಬಂದಿದೆ. ಹಾಗಾಗಿ ನವೋದಯದ ಸೃಜನಶೀಲತೆಯ ನೆಲೆಗಳು ದೇಶಿ ಮತ್ತು ಪಾಶ್ಚಾತ್ಯ ಮಾದರಿಗಳ ಮಿಶ್ರಣದಲ್ಲಿಯೇ ಇರುವುದು ಅನಿವಾರ್ಯವಾಯಿತು. ಡಿ. ಆರ್. ನಾಗರಾಜ್ ಈ ಮಿಶ್ರಣದ ಪುಟಿದೇಳುವಿಕೆಯಲ್ಲಿ ಅರ್ಥಮಾಡಿಕೊಳ್ಳುವ ಪ್ರಯತ್ನ ನಡೆಸಿದ್ದಾರೆ. ಈ ಪ್ರಯತ್ನದಲ್ಲಿ ಬೇಂದ್ರೆ, ಪು.ತಿ.ನ ಕುವೆಂಪು, ನರಸಿಂಹಸ್ವಾಮಿ, ವಿ. ಕೃ. ಗೋಕಾಕ್, ಗಂಗಾಧರ ಚಿತ್ತಾಲ, ಶಿವರುದ್ರಪ್ಪ, ಚನ್ನವೀರ ಕಣವಿ, ರಾಮಚಂದ್ರ ಶರ್ಮ, ಚಂದ್ರಶೇಖರ ಕಂಬಾರ, ಚನ್ನಯ್ಯ, ಮತ್ತು ಗೋಪಾಲಕೃಷ್ಣ ಅಡಿಗರು ವಿಶೇಷವಾದ ಚರ್ಚೆಗೆ - ವಿಶೇಷಣೆಗೆ ಒಳಗಾಗಿದ್ದಾರೆ. ಜಿ. ರಾಜಶೇಖರ ಮತ್ತು ಆರ್ಕೆಯವರು ಈಗಾಗಲೇ ಗುರುತಿಸಿರುವಂತೆ 'ಎ. ಕೆ. ರಾಮಾನುಜನ್ನರ ಗೈರುಹಾಜರಿ ಮಾತ್ರ ಕಣ್ಣಿಗೆ ಹೊಡೆದು ಕಾಣುವಂತಹದ್ದು (ರಾಜಶೇಖರ : ತರಂಗ, ೩-೧-೮೮ ಪು-೫೬) ಇದನ್ನು ಗಮನಿಸಿದರೆ ಕೃತಿಯಲ್ಲಿ ನವ್ಯಕ್ಕಿಂತ ನವೋದಯ ಸಂಪ್ರದಾಯವೇ ಲೇಖಕರನ್ನು ಹೆಚ್ಚು ಆರ್ಕಷಿಸಿರುವುದು ಸ್ಪಷ್ಟವಾಗುತ್ತದೆ.

ಕೃತಿಯ ತಾತ್ವಿಕ ಹಿನ್ನೆಲೆಯನ್ನು ಖಚಿತಪಡಿಸಿಕೊಂಡರೆ, ನಾಗರಾಜ ತಲುಪುವ ನೆಲೆಯ ಬಗ್ಗೆ ಸಮಸ್ಯೆ ಏಳುವುದೇ ಇಲ್ಲ. ಅಲ್ಲಿಂದ ಹೊರಟರೆ- ಅಲ್ಲಿಗೆ ತಲುಪಬೇಕು. ಆದರೆ ಎಲ್ಲೋ ಒಂದೆಡೆ ಭೂಮಿ-ಕಾಲ-ಕಾಮ-ಸಮಾಜಗಳೆಂಬ ವರ್ಗೀಕರಣವೇ ಪ್ರಶ್ನಾರ್ಹವಾದುದು ಎನಿಸುತ್ತದೆ. ಏಕೆಂದರೆ ಮಾನವನ ಭಾವ ನಿರ್ಮಿತಿಯಲ್ಲಿ ಅವು ಒಂದಾಗಿಯೇ ಕ್ರಿಯಾಶೀಲವಾಗುತ್ತವೆ. ಭೂಮಿಯನ್ನೇ ಗಮನಿಸಿದರೂ ಸಾಕು. ಈ ಮಾತು ಸ್ಪಷ್ಟವಾಗುತ್ತದೆ. 'ಚರಿತ್ರೆಯ ಹಿಂಸೆ ಮತ್ತು ದುಷ್ಟ ಶಕ್ತಿಯನ್ನು, ಅದರ ಸಮಸ್ಯೆಯನ್ನು ಮಂಡಿಸಿ, ಅದನ್ನು ದಾಟಿಸುವ ಶಕ್ತಿ ಇದೆ ಎಂದು ಹೇಳುವುದೇ ಭೂಮಿತತ್ವ ಪ್ರತೀಕದ ಆಶಯ (ಪು. ೧೯) ವೇದ - ಪುರಾಣ ಪಾಶ್ಚಾತ್ಯರ ಬರಹಗಳನ್ನು ಆಧರಿಸಿದರೆ ಇಡೀ ತೀರ್ಮಾನಕ್ಕೆ ಬರಲೇಬೇಕು. ಆದರೆ ನನಗನ್ನಿಸಿದ ಹಾಗೆ ಇವು ಯಾವುವೂ ಭೂಮಿ ತತ್ವವನ್ನು ಪ್ರತಿಪಾದಿಸಲಾರವು. ಭೂಮಿ ಜೊತೆ ನೇರ ಸಂಬಂಧ ಇರುವ ಜನಪದರು, ಶ್ರಮಜೀವಿಗಳು - ಅವರು ನಿರ್ಮಾಣ ಮಾಡಿಕೊಂಡ ಜಾನಪದದ ಅನೇಕ ಪ್ರಕಾರಗಳಲ್ಲಿ ಭೂಮಿತತ್ವದ ಪ್ರತೀಕ ಹೇಗಿದೆ? ಅದು ವೈದಿಕ ರೀತಿಗಿಂತ ಭಿನ್ನವೇ ಹೌದು ಇಂದ್ರನಿಗೆ ಬಂದ ಬ್ರಾಹ್ಮಣ ಹತ್ಯೆಯ ಪಾಪದ ಫಲವಾಗಿ ಭೂಮಿ ಮುಟ್ಟಾಗುವಳೆಂಬ ಪೌರಾಣಿಕ ನಂಬಿಕೆಗೂ, ಹೆಣ್ಣು ಮೈ ನೆರೆದು ಫಲವತಿಯಾಗುವಳೆಂಬ ಖೆಡ್ಡಾಸದ ಆಚರಣೆಗೂ ಅಜಗಜಾಂತರ ವ್ಯತ್ಯಾಸವಿದೆ. ಪ್ರತೀಕಗಳು ಭಿನ ಭಿನ್ನ ಜಾನಪದದಲ್ಲಿ ಭೂಮಿ ಪ್ರಕೃತಿಯಾಗಿ - ಹೆಣ್ಣಾಗಿ - ಕಾಮಿಸುವ ಅಪ್ರತಿಮ ಸುಂದರಿಯೂ ಹೌದು. ಕಾಲ-ಭೂಮಿ-ಮಾನವ ಸಮಾಜ ಇದು ಅಭಿನ್ನವಾಗುತ್ತದೆ. ಆಟ ತಿಂಗಳ ಇದಕ್ಕೆ ಮಾದರಿ ಉದಾಹರಣೆ ಡಿ. ಆರ್. ನಾಗರಾಜ ವೈದಿಕ ರೀತಿಯ ಚಿಂತನಾ ಕ್ರಮವನ್ನು ಅವಲಂಬಿಸಿದ್ದೇ ಆದ್ದರಿಂದ ಅಂಥ ತೀರ್ಮಾನಗಳಿಗೆ ಬರುತ್ತಾರೆ. ವೇದ ಪುರಾಣವನ್ನು ಬಳಸಿಕೊಳ್ಳುವವರು ಮೌಖಿಕ ಪರಂಪರೆಯ ಸತ್ಯವನ್ನು ಯಾಕೆ ಮರೆತು ಬಿಡುತ್ತಾರೆಯೆಂಬುದೇ ಅರ್ಥವಾಗದ ವಿಷಯ. ಬಹುಶಃ ಲಿಖಿತ ದಾಖಲೆಗಳ ಮೂಲಕ ಇತಿಹಾಸದ ತಾತ್ವಿಕತೆಯನ್ನು ರೂಪಿಸುವ ವಸಾಹತು ಆಡಳಿತದ ಹೊಸ ಪರಿಣಾಮವೇ ಇದಾಗಿರಬೇಕು. ನವೋದಯದ ಮಧ್ಯಮ ವರ್ಗದ ಬ್ರಾಹ್ಮಣರ ಬರಹಗಳೂ ಇಂಥ ವೈದಿಕ ಚಿಂತನೆಗಳಿಗೂ ಗಾಢ ಸಂಬಂಧವಿದೆ. ಶ್ರೇಣೀಕೃತ ಜಾತಿ ಸಮಾಜದ ಮಡಿ-ಮೈಲಿಗೆಯನ್ನು ನಾಗರಾಜರು ಪರಿಗಣಿಸದೇ ಇರುವುದರಿಂದ ನವೋದಯದ ಮಹತ್ವದ ಬರಹಗಾರರ ಮಿತಿಗಳನ್ನು ಗುರುತಿಸಲು ಅವರು ವಿಫಲರಾಗುತ್ತಾರೆ. ಬದಲಾಗಿ 'ಬಿಲ್ಲು - ಬಾಣ' ಮತ್ತು ಕಾಲಜ್ಞಾನಿಗಳಿಂದ ನಾವು ಬಂದೂಕುಗಳನ್ನು ಎದುರಿಸಬಹುದೆಂಬ

ಪ್ರತಿಗಾಮಿ ನಿಲುವಿಗೆ ಬಂದು ನಿಲ್ಲುತ್ತಾರೆ. (ರಾಜಶೇಖರ: ತರಂಗ, ೩-೧-೮೮ ಪು-೫೬) ಲೋಕ ವಿಮರ್ಶೆ ಎಂದರೆ ವೈದಿಕ ಲೋಕ ವಿಮರ್ಶೆ ಮಾತ್ರ ಅಲ್ಲ. ಏನಿದ್ದರೂ ನಾಗರಾಜರ ಪ್ರತಿಭೆ ಇಡಿಯಾಗಿ 'ಶಕ್ತಿ ಶಾರದೆಯ ಮೇಳ' ಅಭಿವ್ಯಕ್ತಿ ಹೊಂದಿದೆ. ಅದು ಜಡ ಹಿಡಿದ ತಲೆಗಳಿಗೆ ಜೀವ ಕೊಡಬಲ್ಲದು ಆ ಮೂಲಕ ಕನ್ನಡ ವಿಮರ್ಶೆ ಹೊಸದಾರಿ ಹಿಡಿಯಲು ಪ್ರಚೋದನೆ ನೀಡಲಾಗಿದೆ. ಕೃತಿ ಪ್ರಕಟಿಸಿದ ಅಕ್ಷರ ಪ್ರಕಾಶನ ಸಾಗರದವರಿಗೆ ಕನ್ನಡಿಗರು ಸದಾ ಕೃತಜ್ಞರಾಗಿರಬೇಕು.[೬]

ಈ ಮೇಲಿನ ಮಾದರಿಯನ್ನು ಗಮನಿಸಿದರೆ 'ಶಕ್ತಿ ಶಾರದೆಯ ಮೇಳ' ಕೃತಿಯನ್ನು ವಿಮರ್ಶಿಸಿರುವುದಕ್ಕೆ ಹಲವು ಕಾರಣಗಳು ಕಂಡುಬರುತ್ತವೆ. ಡಿ.ಆರ್ ನಾಗರಾಜ್ ಕೃತಿಗಳು ಅತ್ಯುನ್ನತ ಚಿಂತನೆಗಳನ್ನು ಒಳಗೊಂಡಿರುತ್ತವೆ ಎಂಬ ಪೂರ್ವಯೋಜಿತ ಭಾವನೆಯಿಂದ, ಜೊತೆಗೆ ಅವರ ಮೊದಲ ಕೃತಿ ಚರ್ಚಿತವಾದಂತೆ ಇದು ಚರ್ಚಿತವಾಗುತ್ತದೆ, ಎಂಬ ಮನೋಧರ್ಮದಿಂದ ಈ ಕೃತಿ ವಿಮರ್ಶೆಗೆ ಒಳಗಾಗಿದೆ. ಇದಕ್ಕೆ ಪರವಾದ ಸತ್ಯವು ಈ ಕೃತಿಯಲ್ಲಿ ಅಡಗಿದೆ. ಈ ಕೃತಿಯನ್ನು ಆದಷ್ಟು ಚರ್ಚಿತ ವಿಷಯಗಳ ಮೂಲಕವೇ ವಿಶ್ಲೇಷಣೆ ನಡೆಸಿರುವುದು ಕೃತಿಯ ಮಹೋನ್ನತಿಯನ್ನು ತಿಳಿಸುತ್ತದೆ. ಜೊತೆಗೆ ಲೇಖಕರು ಉನ್ನತ ಚಿಂತನೆಗಳನ್ನು ತಿಳಿದಿರುವನು ಎಂಬ ಭಾವನೆಯು ಅಡಗಿದೆ.

ಪತ್ರಿಕೆಯು ಸಹ ಇಂಥ ಪಕ್ಷಪಾತ ನಿಲುವನ್ನು ಒಳಗೊಂಡಿದೆ. ಏಕೆ ಪ್ರತಿಷ್ಠಿತರ ಕೃತಿಗಳನ್ನು ಪುಸ್ತಕ ವಿಮರ್ಶೆಗೆ ಆರಿಸಿಕೊಳ್ಳುತ್ತವೆ? ಎಂಬುದನ್ನು ಪರಾಮರ್ಶಿಸಿದಾಗ ಪತ್ರಿಕೆಗಳು ಸಹ ಪ್ರತಿಷ್ಠಿತರ ಜೊತೆ ಗುರ್ತಿಸಿಕೊಳ್ಳುವ ಯತ್ನಗಳನ್ನು ಮಾಡುತ್ತಿವೆ ಎಂದು ಅರ್ಥೈಸಬಹುದೇನೋ! ಪ್ರತಿಷ್ಠಿತ ಸಾಹಿತಿಗಳ ಕೃತಿಗಳನ್ನು ವಿಮರ್ಶಿಸಿದಾಗ ಪತ್ರಿಕೆಯ ಉನ್ನತ ಚಿಂತನೆಗಳನ್ನು ಒಳಗೊಂಡಿದೆ ಎಂದು ಭಾವಿಸಿ ಓದುಗರನ್ನು ಸೆಳೆದುಕೊಳ್ಳುವ ಉದ್ದೇಶದಿಂದ ಈ ರೀತಿಯ ಮಾದರಿಗಳಿಗೆ ಪತ್ರಿಕೆಗಳು ತೊಡಗುತ್ತವೆ. ಹಲವು ಲೇಖಕರ ಬಗ್ಗೆ ಬರೆಯುವಾಗ ಕಟು ವಿಮರ್ಶನ ಪ್ರಜ್ಞೆಯು ಹಿನ್ನೆಲೆಗೆ ಸರಿದು ಗುಣವಾಚಕಗಳು ನಡೆಯತೊಡಗುತ್ತವೆ. ಯಾವುದರ ವಿಮರ್ಶೆ ಮಾಡಬೇಕೆಂಬ ಆಯ್ಕೆಯ ಸ್ವಾತಂತ್ರ್ಯವನ್ನು ಕೆಲವೊಮ್ಮೆ ಪುಸ್ತಕ ವಿಮರ್ಶೆಯ ಪರಿಧಿಯಾಗಿ ಪುಸ್ತಕ ವಿಮರ್ಶಕರ ಅಭಿರುಚಿಯನ್ನು ತಿದ್ದಬೇಕು. ಹಾಗಾಗಿ ಅವರಿಗೆ ಸಾಮಾಜಿಕ ಸಾಂಸ್ಕೃತಿಕ ಜವಾಬ್ದಾರಿಯಿರುತ್ತದೆ. ಆದುದರಿಂದ ಪುಸ್ತಕ ವಿಮರ್ಶೆ ವಿವೇಚನಾಪೂರ್ಣವಾದ ಕೆಲಸ. 'ರಿವ್ಯೂ' ಪ್ರಕಾರವು ಒಂದು ಪ್ರಕಟಿತ ಕೃತಿಯ ಒಳ್ಳೆಯ ಮತ್ತು ಕೆಟ್ಟ ಅಂಶಗಳನ್ನು ಸೂಚಿಸುವಾಗಿನ ಹಿನ್ನೆಲೆಯಾಗಿದೆ. ಸಾಮಾಜಿಕವಾಗಿ ಒಂದು ಕೃತಿಯ ಸ್ಥಾನಮಾನವೇನು ಎಂದು ನಿರ್ಧರಿಸುವುದು ವಿಮರ್ಶಕರ 'ಆಯ್ಕೆ'ಗೆ ಸಂಬಂಧಿಸಿದ ವಿಚಾರವಾಗಿದೆ.

ಪುಸ್ತಕ ವಿಮರ್ಶೆಯ ಸಮಕಾಲೀನ ಸ್ಥಿತಿಯನ್ನು ಕುರಿತು ಹಲವು ವಿದ್ವಾಂಸರು ಹೇಳಿದ ಮಾತುಗಳನ್ನಿಟ್ಟುಕೊಂಡು ಚರ್ಚಿಸಬಹುದು.

ಈ ವಿವರಗಳನ್ನು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಬಂದ ಪ್ರಶ್ನೋತ್ತರಗಳಿಂದ ಸ್ಪಷ್ಟಪಡಿಸಿಕೊಳ್ಳಬಹುದು.

ಪ್ರಶ್ನೆ : ಸಾಹಿತ್ಯ ವಿಮರ್ಶೆ ಪ್ರತಿಭಾವಂತರನ್ನು ಆಕರ್ಷಿಸುತ್ತಿಲ್ಲ. ಪತ್ರಿಕೆಯ ರಿವ್ಯೂಗಳನ್ನು ಎಲ್ಲರೂ ಮಾಡ್ತಾರೆ. ವಿಸ್ತೃತ ಓದಿನ ಫಲವಾಗಿ ಹುಟ್ಟುವ ವಿಮರ್ಶಾ ಲೇಖನಗಳು, ಸಂಕಲನಗಳಿಗೆ ಬರಬಂದಿದೆ. ಹೀಗೇಕೆ?[೧೦]

ಈ ಪ್ರಶ್ನೆಗೆ ಹಲವು ವಿದ್ವಾಂಸರು ಹೇಳಿದ ಮಾತುಗಳು ಪ್ರಾಸಂಗಿಕವಾಗಿ ಸಮಕಾಲೀನ ಪುಸ್ತಕ ವಿಮರ್ಶೆಯ ಸ್ಥಿತಿಯನ್ನೂ ತಿಳಿಸುತ್ತವೆ.

೧. **ಸಿ. ಎನ್. ರಾಮಚಂದ್ರನ್** : ಸಾಹಿತ್ಯ ವಿಮರ್ಶೆ ಇಂದು ಪ್ರತಿಭಾವಂತರನ್ನು ಆಕರ್ಷಿಸುತ್ತಿಲ್ಲ ಎಂಬ ಗ್ರಹಿಕೆ ಅರ್ಧ ಸತ್ಯ, ಇಂದೂ ಕೂಡಾ ಅನೇಕ ಪ್ರತಿಭಾವಂತರು ವಿಮರ್ಶಾ ಕ್ಷೇತ್ರದಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ / ಪ್ರವೇಶಿಸುತ್ತಿದ್ದಾರೆ. ಪಟ್ಟಿ ದೀರ್ಘವಾಗುವ ಕಾರಣದಿಂದ ಹೆಸರುಗಳನ್ನು ಹೇಳುತ್ತಿಲ್ಲ. ಅಲ್ಲದೆ ಪತ್ರಿಕೆಗಳಲ್ಲಿ ಬರುವ 'ರಿವ್ಯೂ'ಗಳೂ ವಿಮರ್ಶೆಯ ಒಂದೇ ರೂಪ ತಾನೇ? ಪ್ರಸಿದ್ಧ 'ಟೈಮ್ಸ್ ಲಿಟರರಿ ಸಪ್ಲಿಮೆಂಟ್' ಕೂಡಾ ರಿವ್ಯೂಗಳ ಸಂಕಲನ ಅಲ್ಲವೆ? ಆದರೆ ಕಥಾ-ಕವನ ಸಂಕಲನಗಳ ಹೋಲಿಕೆಯಲ್ಲಿ ವಿಮರ್ಶಾ ಲೇಖನಗಳ / ಸಂಕಲನಗಳ ಸಂಖ್ಯೆ ಕಮ್ಮಿಯಾಗಿದೆ ಎಂಬುದು ನಿಜ.

'ಇಂದು ವಿಮರ್ಶೆ ಸೊರಗಿದೆ' ಎಂದು ಕಾಣಲು ಒಂದು ಮುಖ್ಯ ಕಾರಣ ಅವಕಾಶಗಳ ಅಭಾವ. ಕನ್ನಡದಲ್ಲಿ ಸಾಹಿತ್ಯ ವಿಮರ್ಶೆಗೆ ಅಗ್ರಸ್ಥಾನ ನೀಡುತ್ತಿದ್ದ ಸಾಕ್ಷಿ, ರುಜುವಾತು ಮುಂತಾದ ಸಾಹಿತ್ಯಕ ಪತ್ರಿಕೆಗಳ ಸ್ಥಾನವನ್ನು ತುಂಬುವಂತಹ ಯಾವ ಪತ್ರಿಕೆಯೂ ಇಂದಿಲ್ಲ. ಇನ್ನು ಉಳಿದಿರುವ ಅವಕಾಶಗಳೆಂದರೆ ದಿನ ಪತ್ರಿಕೆಗಳ ಸಾಪ್ತಾಹಿಕ ಪುರವಣಿಗಳು ಮತ್ತು ವಿಚಾರ ಸಂಕಿರಣಗಳ ವೇದಿಕೆಗಳು. ಅನೇಕ (ಎಲ್ಲಾ ಅಲ್ಲ) ದಿನ -ವಾರ- ಮಾಸ ಪತ್ರಿಕೆಗಳು 'ವಿಮರ್ಶೆಯನ್ನು ಯಾರು ಓದುತ್ತಾರೆ? ಎಂಬ ನಿರಾಧಾರ ಗೃಹೀತದೊಡನೆ, ಎರಡು ಪ್ಯಾರಗಳ ನೂರಿನ್ನೂರು ಪದಗಳ ಪುಸ್ತಕ- ಪರಿಚಯಗಳನ್ನು ಬೇಡುತ್ತವೆ. ನಮಗೆ ಗಂಭೀರ ಸಾಹಿತ್ಯ ವಿಮರ್ಶೆಯಲ್ಲಿ ಆಸಕ್ತಿಯಿಲ್ಲ ಎಂಬ ಗರ್ವದಿಂದ ಘೋಷಿಸುತ್ತವೆ. ಇನು ಹೆಚ್ಚಿನ ವಿಚಾರ ಸಂಕಿರಣಗಳು ಯಾಂತ್ರಿಕವಾಗುತ್ತವೆ. ಅಥವಾ ಬಹುಸಂಖ್ಯೆಯ ಶ್ರೋತೃಗಳನ್ನು ಆಕರ್ಷಿಸಲು ಪ್ರಬಂಧಕಾರರು ಜನರಂಜನೆಗೆ ಗಮನ ಕೊಡುತ್ತಾರೆ. ಹಾಗೆಯೇ, ಸಾವಿರಾರು ರೂ. ಗಳ ಬಹುಮಾನಗಳಿರುವ ಕಥಾ ಕವನ-ಕಾದಂಬರಿ ಸ್ಪರ್ಧೆಗಳಿವೆ; ವಿಮರ್ಶಾ ಸ್ಪರ್ಧೆಗಳು ಎಲ್ಲಿವೆ?

ಇಂತಹ ಪರಸ್ಥಿತಿಯಲ್ಲಿ ಸೂಕ್ಷ್ಮ ಸಾಹಿತ್ಯಕ ಸಂವೇದನೆ, ವ್ಯಾಪಕ ವ್ಯುತ್ಪತ್ತಿ, ಗಾಢ ವೈಚಾರಿಕತೆ ಇವುಗಳನ್ನು ಬೇಡುವ ಸ್ವೋಪಜ್ಞ ವಿಮರ್ಶೆ ಬೆಳೆಯುವುದು, ಉಳಿಯುವುದು ಹೇಗೆ? [೧೧]

೨. **ನರಹಳ್ಳಿ ಬಾಲಸುಬ್ರಹ್ಮಣ್ಯ** : ಸಾಹಿತ್ಯ ವಿಮರ್ಶೆ ಪ್ರತಿಭಾವಂತರನ್ನು ಆಕರ್ಷಿಸುತ್ತಿಲ್ಲ, ಎಂಬ ಮಾತುಗಳನ್ನು ಒಪ್ಪುವುದು ಕಷ್ಟ. ಹಾಗೆ ನೋಡಿದರೆ ಕಳೆದೆರೆಡು ದಶಕಗಳಲ್ಲಿ ಕನ್ನಡ ಸಾಹಿತ್ಯ ವಿಮರ್ಶೆ ಬೆಳೆದಿರುವ ಕ್ರಮ, ಪಡೆದುಕೊಂಡಿರುವ ಸ್ವರೂಪ -ಉಳಿದ ಪ್ರಕಾರಗಳಿಗೆ ಹೋಲಿಸಿದರೆ ಹೆಚ್ಚು ಮಹತ್ವದಾಗಿದೆ, ಆಶಾದಾಯಕವಾಗಿದೆ. ಅನೇಕ ಪ್ರತಿಭಾವಂತ ಮನಸ್ಸುಗಳು ಸಾಹಿತ್ಯ ಸಂಸ್ಕೃತಿ ಚಿಂತನೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಕಾಣಬಹುದಾಗಿದೆ.

ಆದರೆ ನೀವು ಹೇಳುವ 'ವಿಸ್ತೃತ ಓದಿನ ಫಲವಾಗಿ ಹುಟ್ಟುವ ವಿಮರ್ಶಾ ಲೇಖನಗಳು ಸಂಕಲನಗಳಿಗೆ ಬರ ಬಂದಿದೆ' ಎಂಬ ಮಾತು ಚರ್ಚಿಸಬಹುದಾದಂಥದು. ಧ್ಯಾನಶೀಲ ಮನಸ್ಥಿತಿಯ ಕೊರತೆ ಇದಕ್ಕೆ ಕಾರಣ. ನಮ್ಮ ಸಾಮಾಜಿಕ -ಸಾಂಸ್ಕೃತಿಕ ರಚನೆಯ ವಿನ್ಯಾಸದಲ್ಲೇ ಉಂಟಾಗುತ್ತಿರುವ ಪಲ್ಲಟದ ಪರಿಣಾಮವಿದು. ಇದು ಕೇವಲ ಸಾಹಿತ್ಯ ವಿಮರ್ಶೆಯ ಸಮಸ್ಯೆ ಮಾತ್ರವಲ್ಲ, ನಾವು ಎದುರಿಸುತ್ತಿರುವ ಬಿಕ್ಕಟ್ಟೂ ಹೌದು

೩. **ಡಾ. ಎಚ್. ಎಸ್. ರಾಘವೇಂದ್ರರಾವ್** : ಕಳೆದ ಹದಿನೈದು ಇಪ್ಪತ್ತು ವರ್ಷಗಳನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ನಿಮ್ಮ ಅಭಿಪ್ರಾಯ ಸರಿ. ಅದಕ್ಕೆ ಕಾರಣಗಳನ್ನು ಈ ರೀತಿ ಗುರುತಿಸಬಹುದು. ಸಾಹಿತ್ಯ ವಿಮರ್ಶೆಯು

ಲೋಕಾನುಭವ ಮತ್ತು ಬುದ್ಧಿಶಕ್ತಿಗಳಂತೆಯೇ ಸಾಹಿತ್ಯತತ್ವ, ವಿಧಾನ ಮತ್ತು ಪರಿಕರಗಳ ನಿಕಟವಾದ ತಿಳುವಳಿಕೆಯನ್ನು ಬಯಸುತ್ತದೆ. ಇದನ್ನು ನೀಡಬೇಕಾದ ಪದವಿ ಹಾಗೂ ಸ್ನಾತಕೋತ್ತರ ಶಿಕ್ಷಣದ ಮಟ್ಟವು ನಿಜವಾಗಿಯೂ ಕುಸಿದಿದೆ. ಇಂದಿನ ಸನ್ನಿವೇಶದಲ್ಲಿ, ಸಾಹಿತ್ಯದ ಮೂಲಕ ಮೂಡಿಬರುವ ಸಾಂಸ್ಕೃತಿಕ ಅಧ್ಯಯನವು ಹುಟ್ಟಿಸುವ ಆಸಕ್ತಿಯನ್ನು ನಿರ್ದಿಷ್ಟ ಕೃತಿಗಳ ಪ್ರಾಯೋಗಿಕ ವಿಶಿಷ್ಟ ಅನುಭವಗಳನ್ನು ಸೃಜನಶೀಲ ಕೃತಿಗಳಾಗಿ ಮಾರ್ಪಡಿಸುವುದರಲ್ಲಿ ಹೆಚ್ಚು ಆಸಕ್ತರಾಗಿರುತ್ತಾರೆ. ಬಂಡಾಯ ಮತ್ತು ದಲಿತ ಚಳುವಳಿಗಳು ಸಾಹಿತ್ಯದ ಸಾಮಾಜಿಕ ಆಯಾಮಗಳಲ್ಲಿ ಮೂಡಿಸಿದ ಆಸಕ್ತಿಯನ್ನು ಅದರ ಸಾಹಿತ್ಯಕ ನೆಲೆಗಳಲ್ಲಿ ಮೂಡಿಸಲಿಲ್ಲ. ಇಂಗ್ಲೀಷ್ ಮತ್ತು ಅನ್ಯ ಭಾರತೀಯ ಭಾಷೆಗಳಲ್ಲಿ ಮೂಡಿಬಂದಿರುವ ಸಾಹಿತ್ಯ ತತ್ವ ಮತ್ತು ವಿಮರ್ಶೆಗಳನ್ನು ಗ್ರಹಿಸುವ ಅವಕಾಶವೂ ಕಡಿಮೆಯಾಗಿದೆ. ಪತ್ರಿಕೆಗಳ ರಿವ್ಯೂಗಳು ಕೆಲವು ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ. ಅವುಗಳಿಗೆ ತಮ್ಮದೇ ಆದ ಉದ್ದೇಶ, ವಿಧಾನ ಹಾಗೂ ಪರಿಕರಗಳಿವೆ. ಸಮರ್ಥರು ಬಳಸಿಕೊಂಡಾಗ ಅವು ಕೂಡ ಉಪಯುಕ್ತ ಸಾಧನೆಯನ್ನು ಮಾಡಿವೆ. ನೀವು ಹೇಳಿರುವಂತೆ 'ಎಲ್ಲರೂ' ರಿವ್ಯೂ ಮಾಡತೊಡಗಿದರೆ ಆಗುವ ಪರಿಣಾಮವು ಸೂರ್ಯಸ್ಪಷ್ಟ. ಮತ್ತೆ ಮತ್ತೆ ನಡೆಯುವ ವಿಚಾರ ಸಂಕಿರಣಗಳಲ್ಲಿ ಕೂಡ ಬರೆದುಕೊಂಡು ಬಂದ ಪ್ರಬಂಧಗಳನ್ನು ಓದುವುದು ಕಡಿಮೆಯಾಗಿ, ಜನಪ್ರಿಯವಾಗಬಲ್ಲ ಭಾಷಣಗಳು ಜಾಸ್ತಿಯಾಗಿವೆ. ಈ ಎಲ್ಲ ಕಾರಣಗಳಿಂದ ಹೊಸ ಪೀಳಿಗೆಯಲ್ಲಿ ಗಂಭೀರವಾದ ಸಾಹಿತ್ಯ ವಿಮರ್ಶೆಯ ರಚನೆ ಮತ್ತು ಓದುಗಳು ಕಡಿಮೆಯಾಗಿವೆಯೇನೋ ಎಂಬ ತಿಳುವಳಿಕೆ ಮೂಡಿದೆ.[೧೩]

೪. **ಡಾ. ಜಿ. ಎಸ್. ಆಮೂರ** : ಸಾಹಿತ್ಯ ವಿಮರ್ಶೆಯ ಅವಶ್ಯಕತೆಯಿದೆಯೆ? ಇದ್ದರೆ ಯಾರಿಗೆ? ಎನ್ನುವ ಪ್ರಶ್ನೆಗಳನ್ನೇ ನಾವು ಮೊದಲು ಕೇಳಿಕೊಳ್ಳಬೇಕಾಗಿದೆ. ನಮ್ಮ ಪುಸ್ತಕ ಪ್ರಕಾಶಕರಿಗೆ ವಿಮರ್ಶೆಯಿಂದ ಪ್ರಯೋಜನವಿಲ್ಲ. ಲೇಖಕರಿಗೆ ಪ್ರಶಂಸೆ, ಪ್ರಶಸ್ತಿಗಳು ಬೇಕು, ವಿಮರ್ಶೆಯಲ್ಲ. ಪತ್ರಿಕೆಗಳಿಗೆ ವಾರಕ್ಕೊಮ್ಮೆ ತಮ್ಮ ಅರ್ಧ ಪುಟ ತುಂಬಿದರಾಯಿತು ಮೌಲಿಕವಾದದ್ದೇ ಬೇಕು ಎನ್ನುವ ಹಠವಿಲ್ಲ, ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸುವವರು ಯಾರು ? ಯಾರಿಗಾಗಿ ವಿಮರ್ಶೆಯನ್ನು ಬರೆಯಬೇಕು? ಇದೂ ಅಲ್ಲದೇ ಕತೆ, ಕವಿತೆಗಳನ್ನು ಕಷ್ಟವಿಲ್ಲದೆ ಬರೆಯಬಹುದು ಎನ್ನುವ ಭ್ರಮೆ ಹೊಂದಿದ ಲೇಖಕರು ವಿಮರ್ಶೆಯಂಥ ಶ್ರಮದ ಕೆಲಸಕ್ಕೆ ಕೈ ಹಾಕುವುದಾದರೂ ಹೇಗೆ! ಸಾಹಿತ್ಯದ ಯಾವ ಕ್ಷೇತ್ರದಲ್ಲಿಯೂ ಪ್ರತಿಭಾವಂತರ ಸಂಖ್ಯೆ ಯಾವಾಗಲೂ ಕಡಿಮೆ. ವಿಮರ್ಶೆಯ ಕ್ಷೇತ್ರದಲ್ಲಿ ಅದು ಇನ್ನೂ ಕಡಿಮೆ.

೫. **ದೇಶ ಕುಲಕರ್ಣಿ** : ಸಾಹಿತ್ಯ ವಿಮರ್ಶೆ ತಂತಿಯ ಮೇಲೆ ನಡೆಯುವ ಹಾಗೆ ಅಪಾಯಕಾರಿಯಾದರೂ, ವಿಮರ್ಶೆಯಿಂದ ಕೆಲವರು ಮಿತ್ರರಾಗಬಹುದು, ಆದರೆ ಅನೇಕರು ಶತ್ರುಗಳಾಗುತ್ತಾರೆ. ಇವೊತ್ತಿನ ಪ್ರತಿಭಾವಂತರು ಕತೆ, ಕವನ ಮತ್ತು ನಾಟಕಗಳಲ್ಲಿ ತಮ್ಮ ದಾರಿಯನ್ನು ಸುಗಮವಾಗಿಯೂ ಕ್ಷೇಮಕರವನ್ನಾಗಿಯೂ ಮಾಡಿಕೊಂಡಿದ್ದಾರೆ. ಕೆಲವು ವರ್ಷಗಳ ಹಿಂದೆ ಯಾವುದೋ ವಿಷಯದ ಕುರಿತು ಲೇಖನವನ್ನು ಬಯಸಿದಾಗ, ವಿಮರ್ಶಕರೊಬ್ಬರು 'ನಾನೀಗ ವಿಮರ್ಶೆಯನ್ನೇ ಮಾಡುತ್ತಿಲ್ಲ' ಎಂದು ಜಾರಿಕೊಂಡರು. ಅವರ ಕತೆಯೊಂದಕ್ಕೆ ಬಹುಮಾನ ಬಂದುದೇ ಇದಕ್ಕೆ ಕಾರಣ.

ಪತ್ರಿಕೆಯ ರಿವ್ಯೂ ವಿಮರ್ಶೆಯ ಸಂಕ್ಷಿಪ್ತ ರೂಪ, ಅಷ್ಟೆ. ಅನೇಕ ವರ್ಷಗಳ ಹಿಂದೆ ನಾನು ಪತ್ರಿಕೆಯೊಂದಕ್ಕೆ ವಿಮರ್ಶೆ ಬರೆಯುವಾಗ ಅದರ ಸಂಪಾದಕರು 'ಇದೇನು? ಸೆಮಿನಾರಿಗೆ ಬರೆಯುವ ಹಾಗೆ ಬರೆದಿದ್ದೀರಲ್ಲ' ಎಂದು ಛೇಡಿಸುತ್ತಿದ್ದರು. ರಿವ್ಯೂ ಸಹ ವಿಸ್ತೃತ ಓದಿನ ಫಲವೇ? ಕೀರ್ತಿನಾಥ ಕುರ್ತ ಕೋಟಿಯವರು ವಿಮರ್ಶೆಂತೆಯೇ ರಿವ್ಯೂ ಕೂಡ ಬರೆದಿದ್ದಾರೆ. ಅವರ ಅಂಥ ಸಂಕಲವವೊಂದನ್ನು ನಾನೇ ವಿಮರ್ಶಿಸಿದ್ದೇನೆ. ದೀರ್ಘ ಲೇಖನಗಳು ಸೆಮಿನಾರುಗಳಲ್ಲಿ ಮಂಡನೆಯಾಗುತ್ತಲೇ ಇದೆಯಲ್ಲ! ಅಂಥ ಲೇಖನಗಳಿಗೆ ರಿವ್ಯೂಗಳ ತರಹದ ಇತಿ ಮಿತಿಗಳಿರುವುದಿಲ್ಲ. ವಿಮರ್ಶೆಯ ಸಂಕಲನಗಳು ಬರುತ್ತಲೇ ಇವೆ. ಕತೆ -ಕವನ -ಕಾದಂಬರಿಗಳಿಗೆ ಹೋಲಿಸಿದರೆ ಪ್ರಮಾಣ ಕಡಿಮೆ ಅಷ್ಟೆ ಹೆಸರು ಮಾಡಲು ಇಷ್ಟವಿರುವ ಲೇಖಕರು ವಿಮರ್ಶಾ ಲೇಖನವನ್ನು ಬದಿಗೊತ್ತಿ ಬೇರೆ ಪ್ರಕಾರದ ಕೃತಿ ಪ್ರಕಟಿಸುವುದು ವ್ಯವಹಾರಿಕ ಸತ್ಯ.

ಕುತೂಹಲದ ಮಾತೆಂದರೆ ವಿಮರ್ಶಾಲೇಖಕ ಮತ್ತು ರಿವ್ಯೂ ಎಂದು ನೀವು ಅಂತರ ಮಾಡಿದಿರಲ್ಲ, ವಿಮರ್ಶಾ ಲೇಖನ ಪರಿಭಾಷೆಯಿಂದ ಕೂಡಿರುತ್ತದೆ. ಆದರೆ ರಿವ್ಯೂ ಸರಳವಾಗಿರುತ್ತದೆ.[೧೪]

೬. **ಡಾ. ಬಸವರಾಜ ಕಲ್ಗುಡಿ** : 'ಸಾಹಿತ್ಯ ವಿಮರ್ಶೆ' ಈ ಪದದ ಬಳಕೆಯನ್ನು ನಾವು ಕೊಂಚ ಎಚ್ಚರದಿಂದ ಬಳಸಬೇಕಾಗಿದೆ. ಇಲ್ಲವೇ ಕಡಿಮೆ ಮಾಡಬೇಕಾಗಿದೆ. ಏಕೆಂದರೆ ಈ ಪದವು ಸಾಹಿತ್ಯ ಗ್ರಹಿಕೆಯ ವ್ಯಾಪ್ತಿಯನ್ನು ಸಂಕುಚಿತಗೊಳಿಸಿದೆ. ಅಥವಾ ಸೃಜನಕ್ರಿಯೆಯ ಮೇಲೆ ಸವಾರಿ ಮಾಡುವ ಬಿಂಕವನ್ನು ತನ್ನ ಕ್ರಿಯೆಯೆಂದು ಭಾವಿಸಿದೆ. ಸಾಹಿತ್ಯ ವಿಮರ್ಶೆಯ ಕಾರ್ಯ ವ್ಯಾಪ್ತಿಯ ಪ್ರಶ್ನೆ ಬಂದಾಗಲೆಲ್ಲ ಮೌಲ್ಯಮಾಪನದ ಮಾತನ್ನು ಆಧುನಿಕ ಸಂದರ್ಭದಲ್ಲಿ ಮತ್ತೆ ಮತ್ತೆ ಬಳಸಲಾಗುತ್ತಿದೆ. ಇಂಥ ಕಡೆಯಲ್ಲಿ ಅನೇಕ ವೇಳೆ, ಆಯಾ ಕಾಲದ ಪ್ರಬಲವಾದ ಚಿಂತನಾಶಕ್ತಿಗಳ ಪ್ರಭಾವವೇ (ದಬ್ಬಾಳಿಕೆಯೇ) ಕಾರಣವಾಗಿ ಸಾಹಿತ್ಯಗ್ರಹಿಕೆಯ ಸೃಜನಶೀಲ ಸಂವೇದನೆಗೆ ಸೂಕ್ಷ್ಮವಾದ ಅಡ್ಡಿ ಆತಂಕಗಳು ಒದಗುತ್ತವೆ. ಹಾಗೆ ನೋಡಿದರೆ ಸೃಜನಶೀಲ ಕೃತಿಯನ್ನು ಸಮಕಾಲೀನ ಸಂವೇದನೆಗಳ ಮೂಲಕವೇ ಗ್ರಹಿಸುವ ಕಾರ್ಯ ನಡೆಯುತ್ತದೆ ಎನ್ನುವುದು ನಿಜವೇ ಆದರೂ ಅದು ಒಂದು ಹೊಸ ಹೊಳಹಿನ ಸಂವಾದಕ್ಕೆ ಕಾರಣವಾಗಬೇಕಾಗುತ್ತದೆ. ಆಗ ಕೃತಿಯ ಸೃಜನಶೀಲತೆಗೂ ಗ್ರಹಿಕೆಯ ಸೃಜನಶೀಲತೆಗೂ ತಾರತಮ್ಯವೇ ಇರುವುದಿಲ್ಲ. ಇಂಥ ಸಂವಾದಗಳು ಎಲ್ಲಾ ಕಾಲಕ್ಕೂ ಅಪರೂಪವೇನೋ! ಸಾಹಿತ್ಯ ವಿಮರ್ಶೆಯ ಚಟುವಟಿಕೆಯನ್ನು ನಿರ್ಣಯವೆಂದು ಭಾವಿಸಿದರೆ ವಿಮರ್ಶೆಯು ರಿವ್ಯೂ ಮಟ್ಟಕೆ ನಿಲ್ಲುತ್ತದೆ. ಒಂದು ಕೃತಿಯನ್ನು ವೈಭವೀಕರಿಸುವುದು, ಇಲ್ಲವೇ ಸಂಪೂರ್ಣ ಕತ್ತರಿಸುವುದು ಈ ತುದಿಗೆ ನಿಲ್ಲುವ ಲಕ್ಷಣವನ್ನೂ ನಾವು ಗಮನಿಸಿದ್ದೇವೆ. ವಿಮರ್ಶಾ ಚಟುವಟಿಕೆ ಹಾಗೂ ಸೃಜನಶೀಲ ಚಟುವಟಿಕೆ ಇವರೆಡೂ ಒಂದಕ್ಕೊಂದು ಮುಖಾಮುಖಿ ಎಂಬ ಭಾವ ಬೆಳೆದದ್ದೇ, ನಮ್ಮಲ್ಲಿ ಪಶ್ಚಿಮದ ಕ್ರಿಟಿಸಿಸಂನ ಪರಿಕಲ್ಪನೆಯನ್ನು ನಾವು ನಮ್ಮ ಸಂದರ್ಭದಲ್ಲಿ ಗ್ರಹಿಸಿಕೊಂಡು ಬಂದ ಪರಿಣಾಮದ ಪ್ರಾರಂಭಿಕ ಅವಸ್ಥೆಯ ಒಂದು ವ್ಯಾಧಿಯೆಂದು ಹೇಳಬೇಕು. ಆಧುನಿಕ ಕನ್ನಡ ಸಾಹಿತ್ಯ ಚಟುವಟಿಕೆಯ ಸಂದರ್ಭದಲ್ಲಿ ಎಷ್ಟು ಜನ ಪ್ರತಿಭಾವಂತ ಸೃಜನಶೀಲ ಲೇಖಕರು ವಿಮರ್ಶಕನನ್ನು ಆಹ್ವಾನಕ್ಕೆ ಎಳೆದಿಲ್ಲ! ಎಷ್ಟು ಜನ ಲೇಖಕರು ವಿಮರ್ಶಕರನ್ನು ಕಾಯ್ದು ಕುಳಿತಿಲ್ಲ ! ಎಷ್ಟು ಜನ, ತಮ್ಮನ್ನು ಗುರುತಿಸಿಲ್ಲವೆಂದು ಮಾನಸಿಕ ವೇದನೆ, ಉದರ ಶೂಲೆಯಿಂದ ನರಳಿಲ್ಲ! ಅಬ್ಬಾ!.[೧೬]

ಈ ಮೇಲಿನ ಚಿಂತಕರ ಚಿಂತನೆಗಳನ್ನು ಹೀಗೆ ವಿಶ್ಲೇಷಿಸಬಹುದು. ಇವರ ಚಿಂತನೆಗಳಲ್ಲಿ ಸಾಹಿತ್ಯ ವಿಮರ್ಶೆ ಮತ್ತು ಪುಸ್ತಕ ವಿಮರ್ಶೆ ಬಗೆಗೆ ಸಣ್ಣ ವ್ಯತ್ಯಾಸಗಳು ಕಂಡುಬರುತ್ತವೆ. ಅದು ಸಮಕಾಲೀನ ಸಂದರ್ಭದಲ್ಲಿ ಪುಸ್ತಕ ವಿಮರ್ಶೆಯ ಅಸ್ತಿತ್ವವನ್ನು ಮುಡುಕುವಾಗ ಕಾಣಬರುವ ಸಾಮಾನ್ಯ ವ್ಯತ್ಯಾಸಗಳಾಗಿವೆ. ಅವರು ಹೀಗೆ ಹೇಳುತ್ತಾರೆ. 'ಸಾಹಿತ್ಯ ವಿಮರ್ಶೆಯ ಲೇಖನಗಳಿಗೆ ರಿವ್ಯೂಗಳ' ತರಹದ ಇತಿ ಮಿತಿಗಳಿರುವುದಿಲ್ಲ 'ವಿಮರ್ಶಾ ಲೇಖನ ಪರಿಭಾಷೆಯಿಂದ ಕೂಡಿರುತ್ತದೆ. ಆದರೆ ರಿವ್ಯೂ ಸರಳವಾಗಿರುತ್ತದೆ'. 'ಸಾಹಿತ್ಯ ವಿಮರ್ಶೆಯ ಚಟುವಟಿಕೆಯನ್ನು ನಿರ್ಣಯವೆಂದು ಭಾವಿಸಿದರೆ ವಿಮರ್ಶೆಯು ರಿವ್ಯೂ ಮಟ್ಟಕ್ಕೆ ನಿಲ್ಲುತ್ತದೆ'. 'ಒಂದು ಕೃತಿಯನ್ನು ವೈಭವೀಕರಿಸುವುದು, ಇಲ್ಲವೆ ಸಂಪೂರ್ಣ ಕತ್ತರಿಸುವುದು ಈ ತುದಿಗೆ ನಿಲ್ಲುವ ಲಕ್ಷಣ'. ಇವುಗಳೆಲ್ಲವನ್ನು ಗಮನಿಸಿದರೆ ಸಾಹಿತ್ಯ ವಿಮರ್ಶೆಗೆ ಇತಿಮಿತಿ ಇರುವುದಿಲ್ಲ. ಅದಕ್ಕೆ ತನ್ನದೇ ಆದಂತಹ ಚೌಕ್ಕಟನ್ನು ನಿರ್ಮಿಸಿಕೊಳ್ಳುವ ಸ್ವಾತಂತ್ರ್ಯವಿರುತ್ತದೆ. ಆದರೆ ಪುಸ್ತಕ ವಿಮರ್ಶೆಯ ಹುಟ್ಟಿನ ಸಂದರ್ಭವೇ ಇತಿಮಿತಿಗಳ ನಡುವೆಯದಾಗಿರುತ್ತದೆ. ವಿಮರ್ಶಾ ಲೇಖನಗಳಿಗೆ ಪರಿಭಾಷೆಗಳನ್ನು ಹೇರಳವಾಗಿ ಬಳಸಿಕೊಳ್ಳುವ ಸ್ವಾತಂತ್ರವಿರುತ್ತದೆ. ಇಂತಹ ಸ್ವಾತಂತ್ರ್ಯ ಪುಸ್ತಕ ವಿಮರ್ಶೆಗೆ ಇರುವುದಿಲ್ಲ. ಇದಕ್ಕೆ ಕಾರಣ ಇದು ಸೀಮಿತ ಓದುಗರನ್ನು ಒಳಗೊಂಡಿರುವುದು. ಈ ದೃಷ್ಟಿಯಿಂದ ಪುಸ್ತಕ ವಿಮರ್ಶೆಗಳು ಸರಳವಾಗಿರುವುದು ಅನಿವಾರ್ಯವಾಗಿರುತ್ತದೆ. ಆದರೆ ಕೃತಿಯ ಬಗೆಗೆ ನಿರ್ಣಯ ತೆಗೆದುಕೊಳ್ಳುವ ತಾತ್ಕಾಲಿಕ ಅಧಿಕಾರ ಪುಸ್ತಕ ವಿಮರ್ಶೆಗೆ ಇರುತ್ತದೆ. ಇಂತಹ ಅವಕಾಶ ಸಾಹಿತ್ಯ ವಿಮರ್ಶೆಗೆ ಇರುವುದಿಲ್ಲ. ಸಾಹಿತ್ಯ ವಿಮರ್ಶೆ ತೀರ್ಪುಕೊಡುವ ಸ್ವರೂಪದಲ್ಲಿ ಇರುವುದಿಲ್ಲ.

ಈ ಮೇಲಿನ ಅಂಶಗಳ ಜೊತೆ ಈ ಚಿಂತಕರು ಪುಸ್ತಕ ವಿಮರ್ಶೆ ಸಮಕಾಲೀನ ಸಂದರ್ಭದಲ್ಲಿ ಪಡೆದಿರುವ ಆಯಾಮದ ಬಗೆಗೆ ಚಿಂತಿಸಿದ್ದಾರೆ. ಅದು ಇಲ್ಲಿ ಮುಖ್ಯವಾದ ಚಿಂತನೆಗಳಾಗಿವೆ. ಇವರು ಪುಸ್ತಕ ವಿಮರ್ಶೆಯನ್ನು ವಿಮರ್ಶೆಯಿಂದ ಹೊರತಾಗಿ ನೋಡುವುದಿಲ್ಲ ಬದಲಾಗಿ ಇವೆರಡನ್ನು ಒಂದೇ ಎಂದು ಭಾವಿಸಿದ್ದಾರೆ. ಹಾಗಾಗಿ 'ಪತ್ರಿಕೆಗಳಲ್ಲಿ ಬರುವ ರಿವ್ಯೂಗಳು ಒಂದು ರೂಪ ತಾನೇ?' 'ಪತ್ರಿಕೆಯ ರಿವ್ಯೂ ವಿಮರ್ಶೆಯ ಸಂಕ್ಷಿಪ್ತ ರೂಪ ಅಷ್ಟೇ', 'ರಿವ್ಯೂ ವಿಸ್ತೃತ ಓದಿನ ಫಲವೇ', 'ಸಾಹಿತ್ಯ ವಿಮರ್ಶೆಯ ಚಟುವಟಿಕೆಯನ್ನು ನಿರ್ಣಯವೆಂದು ಭಾವಿಸಿದರೆ ವಿಮರ್ಶೆಯು ರಿವ್ಯೂ ಮಟ್ಟಕ್ಕೆ ನಿಲ್ಲುತ್ತದೆ.' ಎಂಬ ನಿಲುವುಗಳು ಪುಸ್ತಕ ವಿಮರ್ಶೆ ಬಗೆಗೆ ವ್ಯಕ್ತವಾಗಿವೆ. ಈ ನಿಲುವುಗಳನ್ನು ಗಮನಿಸಿದರೆ ಪುಸ್ತಕ ವಿಮರ್ಶೆಯನ್ನು ತೀರ ಗಂಭೀರವಾಗಿ ಪರಿಗಣಿಸಬೇಕಾದ ಅನಿವಾರ್ಯತೆಯನ್ನು ಹೇಳುತ್ತಿವೆಯೆನಿಸುತ್ತದೆ. ಆದರೆ ಪ್ರಸ್ತುತ ಸಂದರ್ಭದಲ್ಲಿ ಕೆಲವೊಮ್ಮೆ ಪುಸ್ತಕ ವಿಮರ್ಶೆಗಳಿಗೆ ಬಂದೊಂದಗಿರುವ ಸ್ಥಿತಿಯನ್ನು ಗುರತಿಸಿದ್ದಾರೆ. ಅದು 'ದಿನ-ವಾರ-ಮಾಸ ಪತ್ರಿಕೆಗಳು ವಿಮರ್ಶೆಯನ್ನು ಯಾರು ಓದುತ್ತಾರೆ? ಎಂಬ ನಿರಾಧಾರ ಗೃಹೀತದೊಡನೆ, ಎರಡು ಪ್ಯಾರಗಳ, ನೂರಿನ್ನೂರು ಪದಗಳ ಪುಸ್ತಕ ಪರಿಚಯಗಳನ್ನು ಬೇಡುತ್ತವೆ'. 'ನಮಗೆ ಗಂಭೀರ ಸಾಹಿತ್ಯ ವಿಮರ್ಶೆಯಲ್ಲಿ ಆಸಕ್ತಿಯಿಲ್ಲ ಎಂದು ಗರ್ವದಿಂದ ಘೋಷಿಸುತ್ತವೆ'. 'ಪತ್ರಿಕೆಗಳ ರಿವ್ಯೂಗಳು ಕೆಲವು ಹೊಂದಾಣಿಕೆಗಳನ್ನು ಮಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ'. 'ಅವುಗಳಿಗೆ ತಮ್ಮದೇ ಆದ ಉದ್ದೇಶ, ವಿಧಾನ ಹಾಗೂ ಪರಿಕರಗಳಿವೆ. ಸಮರ್ಥರು ಬಳಸಿಕೊಂಡಾಗ ಅವು ಕೂಡ ಉಪಯುಕ್ತ ಸಾಧನೆಯನ್ನು ಮಾಡಿವೆ'. 'ಎಲ್ಲರೂ ರಿವ್ಯೂ ಮಾಡತೊಡಗಿದರೆ ಆಗುವ ಪರಿಣಾಮವು ಸೂರ್ಯಸ್ಪಷ್ಟ ನಮ್ಮ ಪುಸ್ತಕ ಪ್ರಕಾಶಕರಿಗೆ ವಿಮರ್ಶೆಯಿಂದ ಪ್ರಯೋಜನವಿಲ್ಲ'. 'ಲೇಖಕರಿಗೆ ಪ್ರಶಂಸೆ, ಪ್ರಶಸ್ತಿಗಳು ಬೇಕು, ವಿಮರ್ಶೆಯಲ್ಲ,' 'ಪತ್ರಿಕೆಗಳಿಗೆ ವಾರಕ್ಕೊಮ್ಮೆ ತಮ್ಮ ಅರ್ಧಪುಟ ತುಂಬಿದರಾಯಿತು, ಮೌಲಿಕವಾದದ್ದೇ ಬೇಕು ಎನ್ನುವ ಹಟವಿಲ್ಲ!'

ಇವುಗಳೆಲ್ಲವನ್ನು ಗಮನಿಸಿದರೆ ಪುಸ್ತಕ ವಿಮರ್ಶೆಗೆ ಬಂದೊದಗಿರುವ ಸ್ಥಿತಿ ಮತ್ತು ಪಡೆದುಕೊಳ್ಳಬೇಕಾದ ಆಯಾಮವನ್ನು ತಿಳಿಸುತ್ತವೆ. ಪತ್ರಿಕೆಗಳು, ಓದುಗರು, ವಿಮರ್ಶಕರು, ಲೇಖಕರು ಪುಸ್ತಕ ವಿಮರ್ಶೆಯನ್ನು ಗಂಭೀರವೆಂದು ಭಾವಿಸಿಲ್ಲದ ಕಾರಣ ಹಲವು ಮಿತಿಗಳು ಪುಸ್ತಕ ವಿಮರ್ಶೆಗೆ ಬಂದೊದಗಿವೆ ಎಂಬುದು ಇವರೆಲ್ಲರ ಸ್ಪಷ್ಟವಾದ ತರ್ಕ. ಹಾಗಾಗಿ ಪುಸ್ತಕ ವಿಮರ್ಶೆ ವಿಸ್ತೃತ ಓದಿನ ಫಲವೇ ಆಗಿರುವುದರಿಂದ ಅದನ್ನು ಸಮರ್ಥರು ಬಳಸಿಕೊಂಡಾಗ ಒಳ್ಳೆಯ ಸಾಧನೆಯನ್ನು ಮಾಡಿರುವುದನ್ನು ಇವರು ಜ್ಞಾಪಿಸಿಕೊಳ್ಳುತ್ತಾರೆ. ಅದರ ಜೊತೆಯಲ್ಲಿಯೇ ಪ್ರಸ್ತುತದಲ್ಲಿ ಯಾರೂ ಬೇಕಾದರೂ ಪುಸ್ತಕ ವಿಮರ್ಶೆಯನ್ನು ಮಾಡುವುದರಿಂದ ಅದರ ಗಂಭೀರತೆಗೆ ತೊಡಕುಂಟಾಗಿದೆ. ಎಂದು ಹೇಳುತ್ತಾರೆ. ಹಾಗಾಗಿ ಇವೆಲ್ಲವುಗಳ ಮಿತಿಗಳಿಂದ ಪುಸ್ತಕ ವಿಮರ್ಶೆ ಬಿಡುಗಡೆ ಪಡೆಯ ಬೇಕೆಂದು ಇವರ ಚಿಂತನೆಗಳಲ್ಲಿ ಕಂಡುಬರುವ ಬಹಳ ಮುಖ್ಯವಾದ ಅಂಶ.

೭.೨ ಪುಸ್ತಕ ವಿಮರ್ಶೆಯ ಹೊಸ ಬೆಳವಣಿಗೆಗಳು

ಈ ಜಾಗತೀಕರಣದ ಪ್ರಭಾವದಿಂದ ಸಾಹಿತ್ಯ ಸಂದರ್ಭದಲ್ಲೂ ಹೊಸ ನಮೂನೆಗಳು ಹುಟ್ಟುತ್ತವೆ. ಆಗ ಸಾಹಿತ್ಯ ಸೃಷ್ಟಿ ಕ್ಷಿಪ್ರಗತಿಯನ್ನು ಪಡೆದುಕೊಳ್ಳುತ್ತದೆ. ಯಾಂತ್ರಿಕ ಜಾಲದಲ್ಲಿ ಲೇಖಕರು ಕೃತಿ ಬರೆದು ಆ ಹಸ್ತಪ್ರತಿಯನ್ನು ಪ್ರಕಾಶಕರಲ್ಲಿ ಕಳುಹಿಸಿ ಅಲ್ಲಿಂದ ಅದನ್ನು ಮುದ್ರಿಸಿ ಪ್ರಕಟಿಸುವ ಹೊತ್ತಿಗೆ 'ಸಾಮಾಜಿಕ ತುರ್ತು' ಒತ್ತಡಗಳು ಹಳೆಯವುಗಳಾಗಿರುತ್ತವೆ. ಆ ಕಾರಣದಿಂದ ಲೇಖಕರು ಕಂಪ್ಯೂಟರ್‌ನ ವಿಶ್ವಜಾಲದಡಿಯಲ್ಲಿ ನೇರವಾಗಿಯೇ ತಮ್ಮ ಚಿಂತನೆಗಳನ್ನು ದಾಖಲಿಸಿರುತ್ತಾರೆ. ದಾಖಲಿಸಿದ ಕ್ಷಣದಲ್ಲಿಯೇ ಎಲ್ಲ (ಕಂಪ್ಯೂಟರ್) ಓದುಗರಿಗೂ ಸಂವಹನಗೊಳ್ಳುವುದರಿಂದ ಕೃತಿ ಪ್ರಕಟಣೆ ತನ್ನ ಶಕ್ತಿಯನ್ನು ಕಳೆದುಕೊಳ್ಳಬಹುದು. ಈಗಾಗಲೇ ಎಲ್ಲ ಕ್ಷೇತ್ರಗಳಿಗೂ ಕಂಪ್ಯೂಟರ್ ಪ್ರವೇಶಿಸಿರುವುದರಿಂದ ಮತ್ತು ಕಂಪ್ಯೂಟರ್‌ನಲ್ಲಿ ಎಲ್ಲವನ್ನು ಸಂರಕ್ಷಿಸಬಹುದೆಂಬ ಕಾರಣದಿಂದ ಸಾಹಿತ್ಯವು 'ಕಂಪ್ಯೂಟರೈಸ್ಡ್' ಆಗುತ್ತಿದೆ. ಮುಂದೆ ಸಾಹಿತ್ಯ ಸೃಷ್ಟಿಯಲ್ಲ ಕಂಪ್ಯೂಟರ್ ಒಳಗಿನ ಮೆದುಳಾಗುತ್ತದೆ. ಹೀಗಾಗಿ ಎಲ್ಲವು ಕಂಪ್ಯೂಟರ್‌ಮಯವಾದಾಗ ಅದಕ್ಕೆ ತಕ್ಕಂತೆ ಸಾಹಿತ್ಯವು ಒಗ್ಗಿ ಕೊಂಡಾಗ ಪುಸ್ತಕ ವಿಮರ್ಶೆಯ ಅವಶ್ಯಕತೆ ಕಡಿಮೆಯಾಗಬಹುದು. ಬೇಕೆಂದಾಗ ಆ ಲೇಖಕರ ಚಿಂತನೆಯನ್ನು ನೆರವಾಗಿ ಸ್ಕ್ರೀನ್ ಮೂಲಕ ಗ್ರಹಿಸುವ ಅವಕಾಶವಿರುವುದರಿಂದ 'ಪುಸ್ತಕ ವಿಮರ್ಶೆ' ತನ್ನ ಸ್ಥಾನವನ್ನು ಕಳೆದುಕೊಳ್ಳಬಹುದು. ಇಲ್ಲವೆ ಪುಸ್ತಕ ವಿಮರ್ಶೆಗೆ ಅಗತ್ಯವಾದ ಸಂವಹನ ಮಾಧ್ಯಮ ಪತ್ರಿಕೆಯ ಅವಶ್ಯಕತೆಯಿಲ್ಲದೆ ಕಂಪ್ಯೂಟರ್‌ನ ಅಂತರ್ಜಾಲದಲ್ಲೇ ಕೃತಿಯ ವಿವರಗಳು ಸಂವಹನಗೊಳ್ಳಬಹುದು. ಅಲ್ಲಿನ ವಿವರಗಳು ಯಾವಾಗಲೂ ಹಸಿಹಸಿಯಾಗಿಯೇ ಇರುವಂತೆ ಕಾಣುವುದು ಸಹ 'ಪುಸ್ತಕ ವಿಮರ್ಶೆ'ಯ ಅವಶ್ಯಕತೆಯನ್ನು ನಿರಾಕರಿಸಬಹುದು.

ವಿಜ್ಞಾನದಲ್ಲಿ ಹೊಸ ಹೊಸ ಆವಿಷ್ಕಾರಗಳು, ಬೆಳವಣಿಗೆಗಳು ಶೀಘ್ರಗತಿಯಲ್ಲಿ ಆಗುತ್ತಿರುವುದ ರಿಂದ ಅದು ಸಮಾಜದಲ್ಲಿ ತೀವ್ರ ತರವಾದ ಬದಲಾವಣೆಯನ್ನು ತರುತ್ತಿದೆ. ಈ ಹಿಂದೆ ತಿದ್ದಿ ತಿದ್ದಿ ಓಲೆಗರಿಯಲ್ಲಿ ಬರೆಯಬೇಕಾಗಿದ್ದುದು ವಿಜ್ಞಾನದ ಹೊಸ ಸಂಶೋಧನೆಯಿಂದ ಬರಹಕ್ಕೆ ಹೊಸ ಆಯಾಮ ದೊರೆಯಿತು. ಅದು ಮುದ್ರಣ ತಂತ್ರಜ್ಞಾನದಿಂದ ಇನ್ನು ಹೆಚ್ಚಿನ ಪ್ರಗತಿ ಸಾಧಿಸಿತು. ಈ ತಂತ್ರಜ್ಞಾನ ಪ್ರಗತಿಯಿಂದ ಕೈ ಬರಹ ಕುಂಠಿತಗೊಂಡ ಪುಸ್ತಕ ವಿಮರ್ಶೆ ಯೆಂಬುದು ಆಕಾಶವಾಣಿ ದೂರದರ್ಶನಗಳಲ್ಲಿ 'ವಾಕ್ ಅಭಿವ್ಯಕ್ತಿ'ಯಾಗಿ ಪರಿವರ್ತನೆಯಾಗಬಹುದು. ಈಗಾಗಲೇ ಕೆಲವು ಸಂದರ್ಭಗಳಲ್ಲಿ 'ಪುಸ್ತಕ ಪರಿಚಯ' ಕಾರ್ಯಕ್ರಮ ಅಲ್ಲಲ್ಲಿ ಪ್ರಸಾರವಾಗುತ್ತಿದೆ. ಹೀಗಾಗಿ ಮುಂದೆ ದೂರದರ್ಶನ ಮತ್ತು ಆಕಾಶವಾಣಿಗಳಲ್ಲಿ ಪುಸ್ತಕ ವಿಮರ್ಶೆ ಒಂದು ನಿಯೋಜಿತ ಕಾರ್ಯಕ್ರಮವಾಗಬಹುದು. ಈ ಸಂವಹನಗಳೇ ಪುಸ್ತಕ ವಿಮರ್ಶೆಯ ಪ್ರಬಲ ಮಾಧ್ಯಮಗಳಾಗಬಹುದು. ಹೊಸ ಬಗೆಯ ಪುಸ್ತಕ ವಿಮರ್ಶಾ ವಿಧಾನ ಬರಬಹುದು. ಅಲ್ಲದೆ ಸಾಹಿತ್ಯಕ್ಕೆ ಬೇರೆ ಬೇರೆ ಸ್ತರಗಳಿಗೆ ಸೇರಿದ ಜನರ ಪ್ರವೇಶ ಆದಂತೆ ಪುಸ್ತಕ ವಿಮರ್ಶೆಗಳನ್ನು ಮಾಡುವವರು ವಿವಿಧ ಸ್ತರದ ಜನರು ಬಂದು ಸೇರಿಕೊಂಡಾಗ ತುಂಬಾ ಗಂಭೀರವಾದ ಸ್ವರೂಪವನ್ನು ಪುಸ್ತಕ ವಿಮರ್ಶೆ ಪಡೆದುಕೊಳ್ಳಬಹುದು. ಆಗ ಪುಸ್ತಕ ವಿಮರ್ಶೆ ವಿಮರ್ಶೆಯ ಭಾಗವಾಗಿಯೇ ನಿರ್ಮಾಣವಾಗಬಹುದು ಇಲ್ಲವೇ ಸ್ವಹಿತಾಸಕ್ತಿಯ ವೇದಿಕೆಯೂ ಆಗಬಹುದು.

ಪುಸ್ತಕ ವಿಮರ್ಶೆ ಸಾಮಾಜಿಕ ಸಂದರ್ಭದಲ್ಲಾಗುತ್ತಿರುವ ಆಧುನಿಕ ಬದಲಾವಣೆಗೆ ಹೊಂದಿಕೊಂಡು ಅದು ಅನೇಕ ರೂಪಗಳನ್ನು ಪಡೆಯಬಹುದು. ಆಧುನಿಕತೆ ಶೀರ್ಘ್ರಗತಿಯಲ್ಲಿ ಬೇಗ ಬೇಗನೆ ಮುನ್ನಡೆಯುವುದರಿಂದ ಜನರ ಜೀವನ ತುಂಬಾ ವೇಗವಾಗುವುದರಿಂದ ಇದಕ್ಕೆ ಹೊಂದಿಕೊಳ್ಳಲಾಗದೆ, ಅವರು ಸಾಹಿತ್ಯವನ್ನು ಓದುವ ಹವ್ಯಾಸವನ್ನು ಬಿಡಬಹುದು, ಬಿಡದಿದ್ದರೂ ಅವರಿಗೆ ನೂರಾರು ಸಾವಿರಾರು ಪುಟಗಳನ್ನು ಓದುವ ತಾಳ್ಮೆ ಇಲ್ಲದಾಗುತ್ತದೆ. ಅಲ್ಲದೆ ಪುಸ್ತಕ ತುಂಬಾ ಹೇರಳವಾಗಿ ಬಂದು ಬೀಳುತ್ತಿರುವುದರಿಂದ ಬಂದಂಥ ಪುಸ್ತಕಗಳಲ್ಲಿ ತಾವು ಓದಬಹುದಾದ ಪುಸ್ತಕ ಯಾವುದೆಂದು ನಿರ್ಧರಿಸಿಕೊಳ್ಳಬೇಕು. ಆಗ ಅವರು ಬಂದಂಥ ಎಲ್ಲ ಪುಸ್ತಕಗಳನ್ನು ಓದುವ ಗೋಜಿಗೆ ಹೋಗುವುದಿಲ್ಲ. ಆಗ ಸಹಜವಾಗಿ ಐದತ್ತು ಸಾಲಿನ ಪುಸ್ತಕ ವಿಮರ್ಶೆಯನ್ನು ಆಶಿಸುತ್ತಾರೆ. ಆ ಮೂಲಕ ಓದಿನ ಆಯ್ಕೆ ಮಾಡಿಕೊಳ್ಳುವ ಕೆಳಹಂತಕ್ಕೆ ಇಳಿಯಬಹುದು. ಆಗ ಪುಸ್ತಕ ವಿಮರ್ಶೆಗೆ ಇನ್ನೂ ಹೆಚ್ಚಿನ ಮನ್ನಣೆಯು ದೊರೆಯಬಹುದು.

ಕೊನೆ ಟಿಪ್ಪಣಿಗಳು:

೧. ಶತಮಾನದ ಸಾಹಿತ್ಯ ವಿಮರ್ಶೆ - ಪು XXX
೨. ಮಯೂರ - ಡಿಸೆಂಬರ್ ೨೦೦೧.
೩. ಮಯೂರ - ಡಿಸೆಂಬರ್ ೨೦೦೧.
೪. ಇಬ್ಬನಿ - ಎಪ್ರಿಲ್ ೧೯೯೯.
೫. ಸಂಕ್ರಮಣ ೨೫೯ - ೧೯೯೪, ವಿಮರ್ಶಕರು : ಸತೀಶ್ ಕುಲಕರ್ಣಿ.
೬. ಸಂಕ್ರಮಣ - ೨೫೯.
೭. ಸಂಕ್ರಮಣ - ೧೯೭೮.
೮. ಪುಸ್ತಕ ಪ್ರೀತಿ, ಮೊದಲ ಮಾತು.
೯. ಸಂವಾದ ಸಂಚಿಕೆ-೭, ೧೯೮೮.
೧೦. ವಿಜಯ ಕರ್ನಾಟಕದ, ಸಾಪ್ತಾಹಿಕ ವಿಜಯ.
೧೧. ಅದೇ...... ೦೧.೧೦.೨೦೦೨.
೧೨. ಅದೇ...... ೨೫.೦೯.೨೦೦೨.
೧೩. ಅದೇ...... ೨೨.೦೯.೨೦೦೨.
೧೪. ಅದೇ...... ೨೯.೦೯.೨೦೦೨.
೧೫. ಅದೇ...... ೨೦.೧೦.೨೦೦೨.

ಅಧ್ಯಾಯ - ೮

ಸಮಾರೋಪ

ಸಮಾರೋಪ

ಒಂದು ಶತಮಾನದ ಇತಿಹಾಸವನ್ನು ಹೊಂದಿರುವ ಪುಸ್ತಕ ವಿಮರ್ಶೆ, ಅಧ್ಯಯನ ದೃಷ್ಟಿಯಿಂದ ಇಲ್ಲಿಯವರೆಗೂ ತೀರ ಗಂಭೀರವಲ್ಲ. ಎಂಬ ಅಸಡ್ಡೆಗೆ ಪಾತ್ರವಾಗಿತ್ತು. ಹಾಗಾಗಿ ಪುಸ್ತಕ ವಿಮರ್ಶೆ ಕುರಿತ ಚರ್ಚೆಗಳು ಕನ್ನಡದಲ್ಲಿ ನಡೆರುವುದು ತುಂಬಾ ಕಡಿಮೆ. ಅಲ್ಲೊಂದು ಇಲ್ಲೊಂದು ಕೆಲವು ಲೇಖನಗಳನ್ನು ಬಿಟ್ಟರೆ, ತುಂಬಾ ಗಂಭೀರ ಒಳನೋಟಗಳನ್ನು ಕೊಡುವ ಅಧ್ಯಯನ ನಡೆದಿಲ್ಲ. ಪುಸ್ತಕ ವಿಮರ್ಶೆಯ ಒಂದು ಶತಮಾನದ ಚಾರಿತ್ರಿಕ ಹಿನ್ನೆಲೆಯನ್ನು ಹೀಗೆ ಕಡೆಗಣಿಸಲಾಗಿದೆ. ಕನ್ನಡ ಸಾಹಿತ್ಯದಲ್ಲಿ ಅವಗಣನೆಗೆ ಗುರಿಯಾಗಿದ್ದ ಪುಸ್ತಕ ವಿಮರ್ಶೆಯ ಸ್ಥೂಲ ವಿಶ್ಲೇಷಣೆಗೆ ತೊಡಗಿದಾಗ, ಪುಸ್ತಕ ವಿಮರ್ಶೆಯೂ ಒಂದು ಮಹತ್ವದ ಸಾಹಿತ್ಯಕ, ಸಾಂಸ್ಕೃತಿಕ ಚಟುವಟಿಕೆ ಇಂದು ಅರಿವಾಗುತ್ತಿದೆ. ಪುಸ್ತಕ ವಿಮರ್ಶೆ ಪುಸ್ತಕ ಪರಿಚಯ ಸ್ವರೂಪದಿಂದ, ಚಿಂತನೆ ಕೆರಳಿಸುವ ವಿಚಾರವಾಗಿ ಇಂದು ಬೆಳೆದಿದೆ. ಕನ್ನಡ ಸಾಹಿತ್ಯ ಬೇರೆ ಬೇರೆ ಪ್ರಕಾರಗಳ ವ್ಯಾಪ್ತಿಯನ್ನು ಈ ಪ್ರಕಾರ ವಿಸ್ತರಿಸಿದೆ. ಕೇವಲ ಪ್ರಧಾನ ಪ್ರಕಾರದ ಉಪ ಅಂಗವಾಗಿ ಕಾಣುತ್ತಿದ್ದ ಪುಸ್ತಕ ವಿಮರ್ಶೆ ಇಂದು ಇತರ ಪ್ರಕಾರದೊಂದಿಗೆ ಕೊಡು-ಕೊಳ್ಳು ಸಂಬಂಧವನ್ನಿರಿಸಿಕೊಂಡಿದೆ. ಅದರೂ ಇದನ್ನು ನಿರ್ಲಕ್ಷಿತ ಪ್ರಕಾರವಾಗಿಯೇ ಗಮನಿಸಲಾಗುತ್ತಿದೆ. ಇಂತದ ನಿರ್ಲಕ್ಷಿತ ವಸ್ತು ವಿಷಯವನ್ನು ಅಧ್ಯಯನಕ್ಕೆ ಆರಿಸಿಕೊಂಡು ಇಲ್ಲಿ ಅಧ್ಯಯನ ಮಾಡಲಾಗಿದೆ.

ಅಧ್ಯಯನ ಫಲಿತಗಳು

ಪತ್ರಿಕೆಗಳಲ್ಲಿ ಬರುತ್ತಿರುವ ಪುಸ್ತಕ ವಿಮರ್ಶೆಗಳನ್ನು ಗಮನಿಸಿದರೆ ಪ್ರತಿಯೊಬ್ಬ ಪುಸ್ತಕ ವಿಮರ್ಶಕರು ತಮ್ಮ ಸೀಮಿತ ಪರಿಧಿಯಲೇ ಪುಸ್ತಕವನ್ನು ಪರಿಚಯ ಮಾಡಿಕೊಡುತ್ತಿದ್ದಾರೆ. ಹೆಚ್ಚಿನವರಲ್ಲಿ ಕೇವಲ ಪರಿಚಯದ ಸ್ವರೂಪದಲ್ಲೇ ಪುಸ್ತಕ ವಿಮರ್ಶೆ ಇರಲು ಕಾರಣವೇನು? ಕೆಲವೊಮ್ಮೆ ಪುಸ್ತಕ ವಿಮರ್ಶಕರು ಒಂದು ಕೃತಿಯನ್ನು ಒಪ್ಪಿ ಅದರಲ್ಲಿನ ಕೊರತೆಗಳನ್ನು ಕಡೆಗಣಿಸಿ, ಮಹತ್ವದ ವಿಷಯದ ಕಡೆ ಗಮನ ಹರಿಸುವುದೇಕೆ? ಕೃತಿ ಅತ್ಯುತ್ತಮ ಚಿಂತನೆ ವಿಚಾರಗಳನ್ನು ಒಳಗೊಂಡಿದ್ದರೂ ಅದನ್ನು ಸರಳೀಕರಿಸಿದ ರೀತಿದಲ್ಲಿ ಪರಿಚಯ ಮಾಡಿ, ಇದು ಇಲ್ಲಿ ನೆಲೆ ನಿಲ್ಲಲ್ಲು ಸಾಧ್ಯವಿಲ್ಲವೆಂದು ವಿಮರ್ಶಕರು ದೂರೀಕರಿಸುವುದೇಕೆ? ಹಾಗೆ ಪತ್ರಿಕೆ ಬಂದಂಥ ಎಲ್ಲ ಕೃತಿಗಳಿಗೂ ಪುಸ್ತಕ ವಿಮರ್ಶೆ ಪ್ರಕಟಿಸುವುದಿಲ್ಲವೇಕೆ? ಪತ್ರಿಕೆಯ ಆಯ್ಕೆ ಯಾವ ಮಾನದಂಡದಿಂದ ನಿರ್ಧರಿತವಾಗುತ್ತದೆ? ಪುಸ್ತಕ ವಿಮರ್ಶೆಯಿಂದ ಓದುಗರಿಗೆ, ಲೇಖಕರಿಗೆ ಆಗುವ ಪರಿಣಾಮ ಎಂತಹದ್ದು? ಪುಸ್ತಕ ವಿಮರ್ಶಕರಿಗೆ ಪುಸ್ತಕ ವಿಮರ್ಶೆ ಮಾಡುವಾಗ ಯಾವ ಒತ್ತಡಗಳು ಕೆಲಸ ಮಾಡುತ್ತವೆ? ಇತ್ಯಾದಿ ಪ್ರಶ್ನೆಗಳು ಅಧ್ಯಯನಕ್ಕೆ ತೊಡಗಿಕೊಂಡಾಗ ಎದುರಾಗಿವೆ.

ಈ ಪ್ರಶ್ನೆಗಳಿಗೆ, ಉತ್ತರ ಕಂಡು ಕೊಳ್ಳುವ ಯತ್ನವೇ ಪುಸ್ತಕ ವಿಮರ್ಶೆಯ ಸ್ವರೂಪ ಬೆಳೆಯುತ್ತ ಬಂದ ಕಥನವಾಗುತ್ತದೆ. ಈ ಅಧ್ಯಯನದ ಮುಖ್ಯ ನೋಟಗಳನ್ನು ಹೀಗೆ ಗುರುತಿಸಬಹುದು.

೧. ಪ್ರಸ್ತುತ ಅಧ್ಯಯನ ಮೂಲತಃ ನಿರ್ಲಕ್ಷಿತ ವಸ್ತು ವಿಷಯದ ಅಧ್ಯಯನದ ಭಾಗವಾಗಿ ಬೆಳೆದಿದೆ.

೨. ಕನ್ನಡ ಪ್ರಸ್ತಕ ವಿಮರ್ಶೆಯ ಚಾರಿತ್ರಿಕ ವಿಶ್ಲೇಷಣೆಯನ್ನು ಈ ಅಧ್ಯಯನ ಮಾಡಲೆತ್ನಿಸಿದೆ.

೩. ಪುಸ್ತಕ ವಿಮರ್ಶೆಯು ಪತ್ರಿಕೋದ್ಯಮ ಮತ್ತು ಪುಸ್ತಕೋದ್ಯಮಗಳ ಸಂಬಂಧ ಪಡೆದಿರುವುದರಿಂದ, ಆರ್ಥಿಕ ಆಯಾಮದಿಂದಲೂ ಈ ಅಧ್ಯಯನ ನೋಡಲೆತ್ನಿಸಿದೆ.

೪. ಪುಸ್ತಕ ವಿಮರ್ಶೆಯು ಬೇರೆಬೇರೆ ಚಿಂತನೆಗಳ, ಸಮಾದಾಯಗಳ ಆಶಯ, ಲೋಕ ದೃಷ್ಟಿ ಇಟ್ಟುಕೊಂಡು ಹುಟ್ಟುವುದರಿಂದ ಈ ಅಧ್ಯಯನದಲ್ಲಿ ಬಹು ಅಂಗಗಳ ಚರ್ಚೆ ಇರುವುದರಿಂದ ಇದಕ್ಕೆ ಸಾಮಾಜಿಕ ಆಯಾಮದ ಸ್ವರೂಪ ಲಭಿಸಿದೆ.

೫. ಕಾಲಕಾಲಕ್ಕೆ ಬರುತ್ತಿದ್ದ ಪುಸ್ತಕ ವಿಮರ್ಶೆಗಳ ತೌಲನಿಕ ವಿಶ್ಲೇಷಣೆ ಇದೆ.

೬. ಸಾರ್ವಜನಿಕಾಭಿಪ್ರಾಯ ರೂಪಿಸುವ ಪತ್ರಿಕೆಗಳ ಧೋರಣೆಗಳ ಚರ್ಚೆ ಇದೆ.

೭. ಕೆಲವು ಮುಖ್ಯ ಪುಸ್ತಕ ವಿಮರ್ಶೆಗಳನ್ನಿಟ್ಟುಕೊಂಡು ಪುಸ್ತಕ ವಿಮರ್ಶೆ ಬೆಳೆದು ಬಂದಿರುವ ರೂಪಾಂತರವನ್ನು ಗುರುತಿಸಲಾಗಿದೆ.

೮. ವಿವಿಧ ಪುಸ್ತಕ ವಿಮರ್ಶಕರ ಮನೋಭಾವವನ್ನು ವಿಶ್ಲೇಷಿಸಲಾಗಿದೆ.

೯. ಪುಸ್ತಕ ವಿಮರ್ಶೆಯ ಮೂಲಕ ಸಾಹಿತ್ಯಕ ಚರ್ಚೆ ಈ ಅಧ್ಯಯನದಲ್ಲಿದೆ.

೧೦. ಕನ್ನಡ ಪುಸ್ತಕ ವಿಮರ್ಶೆಯ ಚರಿತ್ರೆಯನ್ನು ಕಟ್ಟುವ ಸಂದರ್ಭದಲ್ಲಿ ಈ ಅಧ್ಯಯನಕ್ಕೆ ಚಾರಿತ್ರಿಕ ನೋಟ ದೊರಕಿದೆ.

೧೧. ಸಾಹಿತ್ಯೇತರ ವಿಚಾರಗಳಿಂದ ಪ್ರಕಾಶಕರು, ಮುದ್ರಕರು, ಹೂಡಿಕೆ ಬಂಡವಾಳ, ವ್ಯಾಪಾರೀಕರಣದ ಸ್ವರೂಪವನ್ನು ಕುರಿತು ಚರ್ಚಿಸಲಾಗಿದೆ.

೧೨. ಪುಸ್ತಕ ವಿಮರ್ಶೆ ಮತ್ತು ಸಾಹಿತ್ಯ ವಿಮರ್ಶೆಗಳ ನಡುವಿನ ಸಂಬಂಧಾಂತರಗಳನ್ನು ಈ ಅಧ್ಯಯನದಲ್ಲಿ ಶೋಧಿಸಲಾಗಿದೆ.

೧೩. ಲೇಖಕರು, ವಿಮರ್ಶಕರು, ಓದುಗರು ಇವರ ಮೂಲಕ ಪುಸ್ತಕ ವಿಮರ್ಶೆಯ ಸ್ವರೂಪವನ್ನು ವಿಶ್ಲೇಷಿಸಲಾಗಿದೆ.

ಒಟ್ಟಾರೆ ಪ್ರಸ್ತುತ ಅಧ್ಯಯನವು ಪುಸ್ತಕ ವಿಮರ್ಶೆಯ ಹಲವು ಮುಖಗಳಿಗೂ ಬೆಳಕು ಬೀರಲು ಯತ್ನಿಸಿರುವುದರಿಂದ, ಈ ಅಧ್ಯಯನದಲ್ಲಿ ಅಂತರ ಶಿಸ್ತೀಯ ಮತ್ತು ಬಹುಶಿಸ್ತೀಯ ಅಧ್ಯಯನದ ನೆಲೆಗಳಿಂದ ಪುಸ್ತಕ ವಿಮರ್ಶೆಯನ್ನು ನೋಡಲು ಯತ್ನಿಸಿದೆ.

ಅಧ್ಯಯನದ ಸವಾಲುಗಳು ಮತ್ತು ಮುಂದಿನ ಶೋಧನೆಗಳು

ಪ್ರಸ್ತುತ ಪುಸ್ತಕ ವಿಮರ್ಶೆಯ ಅಧ್ಯಯನದ ವ್ಯಾಪ್ತಿ ವಿಶಾಲವಾದುದು. ಸಾಹಿತ್ಯದ ಬೇರೆ ಪ್ರಕಾರದಂತೆ ಇದಕ್ಕೆ ನಿರ್ದಿಷ್ಟವಾದ ಆಕಾರ ಆಯಾಮವಿಲ್ಲ. ವಿವಿಧ ಆಕಾರ ಅಯಾಮಗಳಿಂದಲೇ ಪುಸ್ತಕ ವಿಮರ್ಶೆಯ ಅಸ್ತಿತ್ವ. ಇದಕ್ಕೆ ವ್ಯಾಪಾರದ ಆಯಾಮವಿದೆ, ಸಾಹಿತ್ಯದ ಅಯಾಮವಿದೆ, ಸಾಮಾಜಿಕ ಆಯಾಮವಿದೆ. ಹೀಗೆ ಹಲವು ಅಂಗಗಳು ಪುಸ್ತಕ ವಿಮರ್ಶೆಯನ್ನು ಬೆಳಸುತ್ತಿವೆ. ಹಾಗಾಗಿ ಪುಸ್ತಕ ವಿಮರ್ಶೆಯ ಅಧ್ಯಯನ ಈ ಎಲ್ಲ ಆಯಾಮಗಳ ಕಡೆಯಿಂದ ಆಗಬೇಕು. ಇದು ಈ ಅಧ್ಯಯನವನ್ನು ಅತಿವ್ಯಾಪ್ತಿಯತ್ತ ಸೆಳೆಯುತ್ತದೆ. ಆದುದರಿಂದ ಪ್ರಸ್ತುತ ಅಧ್ಯಯನದಲ್ಲಿ ಎದುರಿಸಿದ ಸವಾಲು ಮತ್ತು ಮಾಡಬೇಕಾದ ಶೋಧನೆಗಳನ್ನು ಹೀಗೆ ಗುರುತಿಸಬಹುದು;

೧. ಪುಸ್ತಕ ವಿಮರ್ಶೆಗೆ ಒಂದು ಶತಮಾನದ ಇತಿಹಾಸವಿದೆ; ಹಾಗಾಗಿ ಇಲ್ಲಿ ಪೂರ್ಣ ಪ್ರಮಾಣದ ಅಧ್ಯಯನ ಸಾಧ್ಯವಾಗಿಲ್ಲ.

೨. ಸಂಖ್ಯಾ ದೃಷ್ಟಿಯಿಂದ ಪುಸ್ತಕ ವಿಮರ್ಶೆಗಳು ಅಪಾರವಾಗಿವೆ. ಆದುದರಿಂದ ಪ್ರಾತಿನಿಧಿಕತೆಯೇ ಪುಸ್ತಕ ವಿಮರ್ಶೆಯ ಸ್ವರೂಪದ ಅಳತೆಗೋಲಾಗಿದೆ. ಈ ಪ್ರಾತಿನಿಧಿಕತೆಯಿಂದಲೇ ಪುಸ್ತಕ ವಿಮರ್ಶೆಯ ಇತಿಹಾಸ ಮತ್ತು ಸ್ಥಿತ್ಯಂತರಗಳನ್ನು ಗುರುತಿಸಲಾಗಿದೆ.

೩. ಈ ಅಧ್ಯಯನದಲ್ಲಿ ಸಾಹಿತ್ಯ ಕೃತಿಗಳಿಗೇ ಹೆಚ್ಚಿನ ಮಹತ್ವ ನೀಡಲಾಗಿದೆ.

೪. ಸಾಹಿತ್ಯದ ಒಂದೊಂದು ಪ್ರಕಾರಕ್ಕೂ ಪ್ರತ್ಯೇಕ ಅಧ್ಯಯನದ ಅಗತ್ಯವಿದೆ.

೫. ಸಾಹಿತ್ಯೇತರ ಕೃತಿಗಳಿಗೂ ಪ್ರತ್ಯೇಕವಾದ ಅಧ್ಯಯನ ಮಾಡಿದರೆ, ಆ ವಿಷಯದ ವ್ಯಾಪ್ತಿಯನ್ನು ಗುರುತಿಸಬಹುದು.

೬. ಪ್ರತ್ಯೇಕ ಪುಸ್ತಕ ವಿಮರ್ಶಕರೊಬ್ಬರನ್ನು ಬಳಿಸಿಕೊಂಡು ಒಂದು ಅಧ್ಯಯನ ಮಾಡಬಹುದು.

೭. ಪುಸ್ತಕೋದ್ಯಮದ ಆಯಾಮದಲ್ಲಿಯೇ ಪುಸ್ತಕ ವಿಮರ್ಶೆಯ ಸ್ವರೂಪವನ್ನು ಗುರುತಿಸಬಹುದು. ಈ ಅಧ್ಯಯನದಲ್ಲಿ ಈ ಆಯಾಮಕ್ಕೆ ಪೂರ್ಣನೋಟ ನೀಡಲಾಗಿಲ್ಲ.

೮. ಪ್ರತ್ಯೇಕವಾಗಿ ಒಂದೊಂದು ಕಾಲಘಟ್ಟದ ಪುಸ್ತಕ ವಿಮರ್ಶಾ ನಿಲುವುಗಳನ್ನಿಟ್ಟುಕೊಂಡು ವಿಶ್ಲೇಷಿಸಿದರೆ ಅಧ್ಯಯನವು ವಿಶಿಷ್ಟವಾಗಿರುತ್ತದೆ.

೯. ಒಂದೇ ಕೃತಿಯ ಬಗ್ಗೆ ವಿವಿಧ ಪತ್ರಿಕೆಗಳಲ್ಲಿ ಬಂದಿರುವ ಪುಸ್ತಕ ವಿಮರ್ಶೆಗಳನ್ನು ವಿಶ್ಲೇಷಿಸಿದರೆ ವಿಮರ್ಶಕರ ಮನೋಧರ್ಮಗಳು ತಿಳಿಯುತ್ತವೆ.

೧೦. ಒಂದೇ ಪತ್ರಿಕೆಯಲ್ಲಿ ವಿವಿಧ ಪುಸ್ತಕ ವಿಮರ್ಶಕರು ಬರೆದಿರುವ ಪುಸ್ತಕ ವಿಮರ್ಶೆಗಳು ಹೇಗೆ ಭಿನ್ನವಾಗುತ್ತವೆ ಎಂಬುದನ್ನು ಪ್ರತ್ಯೇಕ ಅಧ್ಯಯನ ಮಾಡಬಹುದು.

೧೧. ಒಬ್ಬ ಪುಸ್ತಕ ವಿಮರ್ಶಕರನ್ನು ಇಟ್ಟುಕೊಂಡು ಅಧ್ಯಯನ ಮಾಡಿದರೆ ಪುಸ್ತಕ ವಿಮರ್ಶೆಯ ಚರ್ಚೆಗೆ ಇನ್ನೊಂದು ಆಯಾಮ ದೊರೆಯುತ್ತದೆ.

೧೨. ಪುಸ್ತಕ ವಿಮರ್ಶೆಯನ್ನು ಓದುವ ಓದುಗರು ಪುಸ್ತಕ ವಿಮರ್ಶೆಯನ್ನು ಹೇಗೆ ಗ್ರಹಿಸುತ್ತಾರೆ. ಅವರ ಪರಿಣಾಮ ಏನು? ಎಂಬುದೇ ಒಂದು ಪ್ರತ್ಯೇಕ ಅಧ್ಯಯನವಾಗುತ್ತದೆ.

೧೩. ಲೇಖಕರು ಪುಸ್ತಕ ವಿಮರ್ಶೆ ಬಗೆಗೆ ತಳೆವ ಧೋರಣೆಯನ್ನು ಕೃತಿಕಾರರನ್ನೆ ಪ್ರತ್ಯೇಕ ಅಧ್ಯಯನ ಮಾಡಬಹುದು.

೧೪. ಸಾಹಿತ್ಯ ವಿಮರ್ಶೆ ಮತ್ತು ಪುಸ್ತಕ ವಿಮರ್ಶೆಯ ಕೊಡು-ಕೊಳ್ಳು ಸಂಬಂಧವನ್ನು ಪ್ರತ್ಯೇಕ ಅಧ್ಯಯನ ನಡೆಸುವಷ್ಟು ವಿಶಾಲತೆಯಿದೆ.

೧೫. ಮಹಿಳಾ ಪುಸ್ತಕ ವಿಮರ್ಶಕರನ್ನೇ ಪ್ರತ್ಯೇಕ ಅಧ್ಯಯನ ಮಾಡಿದರೆ ಒಂದು ಸಂವೇದನೆಯ ಪುಸ್ತಕ ವಿಮರ್ಶಾ ನಿಲುವುಗಳನ್ನು ಕಂಡಿರಿಸಬಹುದು. ಹಾಗೆಯೇ ಇತರ ಸಂವೇದನೆಗಳನ್ನು ಅಧ್ಯಯನ ಶಿಸ್ತಿಗೆ ಒಳಪಡಿಸಬಹುದು.

೧೬. ನಿರ್ದಿಷ್ಟ ಈ ಕೃತಿಗೇ ಬಂದಿರುವ ಪುಸ್ತಕ ವಿಮರ್ಶೆಯನ್ನು ಇಟ್ಟುಕೊಂಡು ಅಧ್ಯಯನ ಮಾಡಿದರೆ, ಅಧ್ಯಯನಕ್ಕೆ ಬೇರೆ ರೀತಿಯ ಆಯಾಮ ದೊರೆಯುತ್ತದೆ.

ಈ ಅಂಶಗಳ ಹಿನ್ನೆಲೆಯಲ್ಲಿ ಉದಾಹರಣೆ ನೋಡುವುದಾದರೆ ಪುಸ್ತಕ ವಿಮರ್ಶೆ ಮತ್ತು ಸಾಹಿತ್ಯ ವಿಮರ್ಶೆಗಳ ನಡುವಿನ ಸಂಬಂಧವನ್ನು ಹೀಗೆ ಗುರುತಿಸಬಹುದು. ಸಾಹಿತ್ಯ ವಿಮರ್ಶೆಯಲ್ಲಿ ಪುಸ್ತಕ ವಿಮರ್ಶೆಯ ಚಾರಿತ್ರಿಕ ಬೆಳವಣಿಗೆಯನ್ನು ಗುರುತಿಸುವುದೆಂದರೆ ಅದು ವಿಮರ್ಶಾ ಬೆಳವಣಿಗೆಯ ಅಧ್ಯಯನವೂ ಆಗಿದೆ. ವಿಮರ್ಶೆಯ ಸರ್ವತೋಮುಖ ಬೆಳವಣಿಗೆಗೆ ಪುರಕವಾಗಿರುವ, ಪ್ರತಿಕಾರದ ದೃಷ್ಟಿಗೆ ಕಾರಣವಾಗಿರುವ ಪುಸ್ತಕ ವಿಮರ್ಶೆಯ ಬಗ್ಗೆ ಗಂಭೀರವಾದ ಅಧ್ಯಯನ ಈ ಸಂದರ್ಭದಲ್ಲಿ ಅಗತ್ಯವಿದೆ. ಅಂಥ ಅಧ್ಯಯನದ ಸ್ವರೂಪ ಈ ಅಧ್ಯಯನಕ್ಕೆ ದೊರಕಿದೆ. ವಿಮರ್ಶೆಗೆ ಒಂದು ಆಯಕಟ್ಟಿನ ಸ್ವರೂಪ ಸಿಕ್ಕಿರುವುದೇ 'ಪುಸ್ತಕ ವಿಮರ್ಶೆ'ಗಳಿಂದ ವಿವಿಧ ಕಾಲಘಟ್ಟದಲ್ಲಿ ವಿವಿಧ ರೀತಿಯ ವಿಮರ್ಶೆಗಳು ಬಂದಿದ್ದರೂ, ಅವು ಹೊರ ನೋಟಕ್ಕೆ ಬೇರೆಬೇರೆಯಾದಂತೆ ಕಂಡರೂ ಒಳಸೂಕ್ಷ್ಮಗಳು ವಿಮರ್ಶೆಯನ್ನು ಹಂತ ಹಂತವಾಗಿ ತಾತ್ವಿಕವಾಗಿ ಕಟ್ಟುತ್ತಲೇ ತಮ್ಮ ಸ್ವರೂಪವನ್ನು ವಿಸ್ತರಿಸಿಕೊಂಡಿವೆ. ಹಾಗೆಯೇ ಬೇರೆ ಪ್ರಕಾರದ ಹಿನ್ನೆಲೆಯಲ್ಲಿ ಗುರುತಿಸಿದರೆ ಅಧ್ಯಯನಕ್ಕೆ ಇನ್ನೊಂದು ಆಯಾಮ ದೊರೆಯುತ್ತದೆ.

ಹೀಗೆ ಪುಸ್ತಕ ವಿಮರ್ಶೆ ವಿಶಾಲ ವ್ಯಾಪ್ತಿಯನ್ನು ಪಡೆದಿದೆ. ಆದುದರಿಂದ ಈ ವಿಷಯದ ಬಗ್ಗೆ ಪೂರ್ಣನೋಟ ಬೀರಲಾಗಿಲ್ಲ. ಬದಲಿಗೆ ಪುಸ್ತಕ ವಿಮರ್ಶೆ ಪ್ರಕಾರದ ಪ್ರಾತಿನಿಧಿಕ ವಿವರಗಳನ್ನು ಒಳಗೊಂಡ ಸ್ಥೂಲ ಅಧ್ಯಯನವಾಗಿದೆ. ಪುಸ್ತಕ ವಿಮರ್ಶೆಯ ಒಂದು ಶತಮಾನದ ಇತಿಹಾಸವನ್ನು ಗ್ರಹಿಸುವ ಚಾರಿತ್ರಿಕ ಅಧ್ಯಯನವಾಗಿ ಇದು ಮಾರ್ಪಟ್ಟಿದೆ. ಪ್ರಮಾಣದಲ್ಲಿ ಪುಸ್ತಕ ವಿಮರ್ಶೆ ಅಪಾರವಾಗಿರುವುದರಿಂದ, ಕೆಲವು ಪ್ರಮುಖ ಆಯಾಮಗಳ ಚರ್ಚೆಯನ್ನಷ್ಟೆ ಇಲ್ಲಿ ಮಾಡಲು ಸಾಧ್ಯವಾಗಿದೆ.

ಪುಸ್ತಕ ವಿಮರ್ಶೆ ಹಿಂದಿಗಿಂತ ಇಂದು ಹೆಚ್ಚು ವ್ಯಾಪಕ ಅಯಾಮವನ್ನು ಪಡೆದುಕೊಳ್ಳುತ್ತಿದೆ. ಅದು ಹಿಂದೆ ಕೇವಲ ಕೆಲವೇ ಪತ್ರಿಕೆಗಳಲ್ಲಿ ಪುಟ ತುಂಬುವ, ಜನಪ್ರಿಯವಲ್ಲದ ಭಾಗವಾಗಿದ್ದುದು, ಈಗ ತೀರ ಗಂಭೀರವಾದ, ಆಸಕ್ತರ ಅಂಕಣವಾಗಿ ಬೆಳೆದಿದೆ. ಅಲ್ಲದೆ ಈಗ ಯಾವುದೇ ಕಿರು ಪತ್ರಿಕೆಯನ್ನು ಗಮನಿಸಿದರೂ ಪುಸ್ತಕ ವಿಮರ್ಶೆಯ ಮಹತ್ವ ತಿಳಿಯುತ್ತದೆ. ಇಂದಿನ ಬಹುಪಾಲು ಎಲ್ಲ ಪತ್ರಿಕೆಗಳಲ್ಲೂ ಪುಸ್ತಕ ವಿಮರ್ಶೆ ಪ್ರಕಟವಾಗುತ್ತಿದೆ. ಅವುಗಳಲ್ಲಿನ ಪುಸ್ತಕ ವಿಮರ್ಶೆಗಳು ಮೊದಲ ನೋಟದ ರೂಪದಲ್ಲಿ ಚಿಕ್ಕವಾಗಿರಬಹುದು ಅಥವಾ ಕೆಲವು ಸಾಲುಗಳಾಗಿರಬಹುದು. ಆದರೆ ಪುಸ್ತಕದ ಬಗ್ಗೆ ಮಾಹಿತಿಯನ್ನು ಒದಗಿಸುವ ಕೆಲಸವನ್ನಂತೂ ಎಲ್ಲ ಪತ್ರಿಕೆಗಳು ಮಾಡುತ್ತಿವೆ. ಪುಸ್ತಕ ವಿಮರ್ಶೆ ಮೂಲತಃ ಮಾಹಿತಿಯಿಂದಲೇ ಅರಂಭವಾಗುವಂಥದ್ದು ಮುಂದೆ ಅದು ಬೇರೆಬೇರೆ ರೂಪಗಳಲ್ಲಿ ವಿಕಸನಗೊಳ್ಳುತ್ತದೆ. ಆ ರೂಪಗಳು ಜಿ. ರಾಜಶೇಖರ ಅವರ ಕೈಯಲ್ಲಿ ಸಂಸ್ಕೃತಿ ಚಿಂತನೆ ಆಗುತ್ತವೆ. ಈ ಅಧ್ಯಯನದಲ್ಲಿ ಪುಸ್ತಕ ಮಾಹಿತಿಯ ವಿವರಗಳೊಂದಿಗೆ ವಿಮರ್ಶೆ ಅಥವಾ ಸಂಸ್ಕೃತಿ ಚಿಂತನಯಾಗಿ ರೂಪುಗೊಂಡಿರುವುದನ್ನು ಶೋಧಿಸಲು ಯತ್ನಿಸಲಾಗಿದೆ. ಮುಖ್ಯವಾಗಿ ಕನ್ನಡದ ಪ್ರಮುಖ ಘಟ್ಟಗಳಲ್ಲಿ ವಿಮರ್ಶೆ ಬೆಳೆದು ಬಂದು ಸ್ಥಿತಿಯೊಂದಿಗೆ ಪುಸ್ತಕ ವಿಮರ್ಶೆಯನ್ನು ಅಧ್ಯಯನ ಮಾಡಲಾಗಿದೆ.

●

ಅನುಬಂಧಗಳು

ಅನುಬಂಧ - ೧

ಅ) ಪ್ರಾಥಮಿಕ ಆಕರಗಳು

೧. ಅನಂತರಾಮನ್ ಎನ್, ವೈದ್ಯಕೀಯ ಮೂಡನಂಬಿಕೆಗಳಿಗೆ ವೈಜ್ಞಾನಿಕ ಉತ್ತರ (ಕಾಯಿಲೆಗಳು ಕಾರಣಗಳು ನಿಮ್ಮ ನಂಬಿಕೆ ಎಷ್ಟು ಸರಿ - ಡಾ. ಸಿ. ಆರ್. ಚಂದ್ರಶೇಖರ್), ೨ನೇ ಜನವರಿ ೨೦೦೦, ಪ್ರಜಾವಾಣಿ.

೨. ಅನಂತರಾಮನ್ ಎನ್, ಸರಳ ಭಾಷೆ, ಮನ ಮುಟ್ಟುವ ವಿಜ್ಞಾನಿಯ ಬದುಕು (ಜೀವರಕ್ಷಕ ವ್ಯಾಕ್ಸಿನುಗಳ ಹರಿಕಾರ ಡಾ. ವ್ಲಾಡಿಮಿರ್ ಹಾಪಕಿನ್ -ಡಾ.ಎಚ್.ಡಿ. ಚಂದ್ರಪ್ಪಗೌಡ), ೧೫ನೇ ಅಕ್ಟೋಬರ್ ೨೦೦೦, ಪ್ರಜಾವಾಣಿ.

೩. ಅನಂತರಂಗಾಚಾರ್ ಎನ್, ಜೀವನ (ಕಥಾಸಂಗ್ರಹ - ಕೃಷ್ಣಕುಮಾರ), ಸಂಪುಟ ೧೭. ಸಂಚಿಕೆ ೧. ವಿನಾಯಕನ ಸಂಚಿಕೆ ಯುವ ಸಂವತ್ಸರ ೬೩, ಪು.೧೧೬, ೧೯೩೫, ಪ್ರಬುದ್ಧ ಕರ್ನಾಟಕ.

೪. ಅಮರೇಶ ನುಗುಡೋಣಿ, ಅಪೂರ್ವ ಚಿಂತಾಮಣಿ ಕಥೆ (ಕಥಾ ಸಂಕಲನ ಕುಂ. ವೀರಭದ್ರಪ್ಪ) ೩೦ ಸೆಪ್ಟೆಂಬರ್ ೧೯೯೫, ಪುಸ್ತಕ ಮಾಹಿತಿ.

೫. ಅಮರೇಶ್ ಎನ್, ನೀರ ಮೇಲೆ ನಡೆಯುವವನು (ಕಥಾ ಸಂಕಲನ - ಶಾಂತರಾಮ ಸೋಮಯಾಜಿ) ೪೨-೪೩, ಸೆಪ್ಟೆಂಬರ್ - ಅಕ್ಟೋಬರ್ ೧೯೯೬, ಪುಸ್ತಕ ಮಾಹಿತಿ.

೬. ಅಮರೇಶ ನುಗುಡೋಣಿ, ಸಾಮಾನ್ಯರ ಕಥನ (ಅಬ್ಬಾಸರ ಐವತ್ತು ಕಥೆಗಳು - ಅಬ್ಬಾಸ ಮೇಲಿನಮನಿ) ಪುಸ್ತಕ ಮಾಹಿತಿ.

೭. ಅಮರೇಶ್ ಎನ್, ಗ್ರಾಮೀಣ ಬದುಕಿನ ದುರಂತಗಳ ಕಥಾನಕ (ಗೋಡೆ ಕಥಾ ಸಂಕಲನ ಶ್ರೀ ಕೃಷ್ಣ ಆಲನಹಳ್ಳಿ) ಸೆಪ್ಟೆಂಬರ್ ೨೦೦೦, ಪುಸ್ತಕ ಮಾಹಿತಿ.

೮. ಅಮರೇಶ್ ಎನ್, ಹಟವಾದಿ ಮತ್ತು ಹುಡುಗಿ (ಕವನ ಸಂಕಲನ - ಬೂದುಗುಪ್ಪ ಪ್ರಹ್ಲಾದ ರೆಡ್ಡಿ) ಆಗಸ್ಟ್ ೨೦೦೦, ಪುಸ್ತಕ ಮಾಹಿತಿ.

೯. ಅಶೋಕ ಟಿ. ಪಿ, ಬರಹಗಾರ ಪ್ರಸನ್ನ (ದಂಗೆಯ ಮುಂಚಿನ ದಿನಗಳು - ಪ್ರಸನ್ನರ ನಾಟಕ) ನವಂಬರ್ ೧೯೮೧, ಪ್ರಜಾವಾಣಿ

೧೦. ಅಶೋಕ ಟಿ. ಪಿ, ನಿರಂಜನ ಅವರ ಚಿರಸ್ಮರಣೆ (ಕಾದಂಬರಿ), ಏಪ್ರಿಲ್ ೧೯೮೨, ಪ್ರಜಾವಾಣಿ

೧೧ . ಅಶೋಕ ಟಿ. ಪಿ, ಚಂದ್ರಶೇಖರ ಕಂಬಾರ ಅವರ ಸಿಂಗಾರೆವ್ವ ಮತ್ತು ಅರಮನೆ (ಕಾದಂಬರಿ), ಜುಲೈ ೧೯೮೨, ಪ್ರಜಾವಾಣಿ.

೧೨. ಅಶೋಕ ಟಿ. ಪಿ, ಕೆ. ವಿ. ಅಯ್ಯರ್ ಅವರ ಶಾಂತಲಾ (ಕಾದಂಬರಿ), ಜನವರಿ ೧೯೮೩, ಪ್ರಜಾವಾಣಿ

೧೩. ಅಶೋಕ ಟಿ. ಪಿ, ತ. ರಾ. ಸು. ಅವರ ದುರ್ಗಾಸ್ತಮಾನ (ಕಾದಂಬರಿ), ಜೂನ್ ೧೯೮೩, ಪ್ರಜಾವಾಣಿ

೧೪. ಅಶೋಕ ಟಿ. ಪಿ, ಶಾಂತಿನಾಥ ದೇಸಾಯಿ ಅವರ ಬೀಜ (ಕಾದಂಬರಿ), ಜುಲೈ ೧೯೮೪, ಮಯೂರ.

೧೫. ಅಶೋಕ ಟಿ. ಪಿ, ಕೆ.ಪಿ. ಪೂರ್ಣಚಂದ್ರ ತೇಜಸ್ವಿಯವರ 'ಚಿದಂಬರ ರಹಸ್ಯ' (ಕಾದಂಬರಿ), ಅಕ್ಟೋಬರ್, ೧೯೮೫, ಮಯೂರ.

೧೬. ಅಶೋಕ ಟಿ. ಪಿ, ಖಾಸನೀಸರ ಕಥೆಗಳು (ರಾಘವೇಂದ್ರ ಖಾಸನೀಸ - ಕಥೆಗಳು), ಡಿಸೆಂಬರ್, ಮಯೂರ.

೧೭. ಅಶೋಕ ಟಿ. ಪಿ, ಯಶವಂತ ಚಿತ್ತಾಲರ ಛೇದ (ಕಾದಂಬರಿ), ಜನವರಿ ೧೯೮೬, ಮಯೂರ.

೧೮. ಅಶೋಕ ಕುಮಾರ ರಂಜೇರ, ಇಂದು ರಾತ್ರಿಯ ಹಾಗೆ (ಕವನ ಸಂಕಲನ - ಸಿದ್ದಲಿಂಗ ಪಟ್ಟಣ ಶೆಟ್ಟಿ), ಸಂಪುಟ ೩, ಸಂಚಿಕೆ ೭, ಅಕ್ಟೋಬರ್ ೧೯೯೪, ಪುಸ್ತಕ ಮಾಹಿತಿ.

೧೯. ಅಶೋಕ ಕುಮಾರ್ ರಂಜೇರ, ಶೇಷಾಲಿಕಾ - ಲತಾ ರಾಜಶೇಖರ್ (ಕವನ ಸಂಕಲನ) ಸಂಪುಟ ೧, ಜನವರಿ ೧೯೯೪, ಪುಸ್ತಕ ಮಾಹಿತಿ.

೨೦. ಆನಂದಮೂರ್ತಿ ಜಿ. ವಿ, ಬಾರೋ ಗೀಜಗನೆ ಹೋದೆಯಲ್ಲಿ ಕತ್ತಲದಾರಿ ದೂರ (ಕಾದಂಬರಿ - ಕೃಷ್ಣಮೂರ್ತಿ ಹನೂರು) ಸೆಪ್ಟೆಂಬರ್-ಅಕ್ಟೋಬರ್ ೧೯೮೭, ಅನ್ವೇಷಣೆ

೨೧. ಆಮೂರ ಜಿ. ಎಸ್, ಶತಮಾನದ ಸಣ್ಣಕತೆಗಳು (ಸಂ : ದಿವಾಕರ), ಏಪ್ರಿಲ್ ೧೯೯೮, ಪ್ರಜಾವಾಣಿ.

೨೨. ಆರ್ಕೆ ಮಣಿಪಾಲ್, ಮೊದಲು ಗೊತ್ತಿರಲಿಲ್ಲ - ವೈವಿಧ್ಯಮಯ ಸಂಕಲನ (ಕವನ ಸಂಕಲನ - ಕೆ. ಎಂ. ಮುನಿಕೃಷ್ಣಪ್ಪ), ಮೇ - ಜೂನ್ ೧೯೮೯, ಅನ್ವೇಷಣೆ

೨೩. ಆರ್ಕೆ ಮಣಿಪಾಲ, ವಸ್ತು ವಿನ್ಯಾಸದ ಗಂಭೀರ ಪ್ರಶ್ನೆಯೆತ್ತುವ ಕ್ರಿಯೆ - ಪ್ರತಿಕ್ರಿಯೆ (ವಿಮರ್ಶಾ ಸಂಕಲನ - ಕೇಶವ ಶರ್ಮ), ಸಂಪುಟ ೪, ಕರ್ನಾಟಕ ಮಲ್ಲ

೨೪. ಆರ್ಕೆ ಮಣಿಪಾಲ, ಸಿಂಗಾರೆವ್ವ ತಾತ್ವಿಕತೆಯ ಸ್ವರೂಪ (ಚಂದ್ರಶೇಖರ ಕಂಬಾರರ ಕಾದಂಬರಿ ಸಿಂಗಾರೆವ್ವ ಮತ್ತು ಅರಮನೆ), ಸಂ ೮, ಸಂ ೨, ೧೯೮೭, ಮುಂಗಾರು.

೨೫. ಆರ್ಕೆ ಮಣಿಪಾಲ, ಪ್ರೀತಿ ತುಂಬಿದ ವಿಮರ್ಶಕನ ಶಕ್ತಿ (ಶಕ್ತಿ ಶಾರದೆಯ ಮೇಳ - ಡಿ.ಆರ್. ನಾಗರಾಜ, ಸಂಶೋಧನಾ ಪ್ರಬಂಧ), ಸಂ ೧೦. ಸಂ ೧, ೧೯೮೮, ಮುಂಗಾರು.

೨೬. ಆರ್ಕೆ ಮಣಿಪಾಲ, ಏಕಲವ್ಯನ ಸಮಸ್ಯೆ ದಾರ್ಶನಿಕ ವಿವರಣೆ (ಕಾದಂಬರಿ ಅದಮ್ಯ ಜ. ಹೊ. ನಾರಾಯಣಸ್ವಾಮಿ) ೫-೬-೮೬, ಕರ್ನಾಟಕ ಮಲ್ಲ.

೨೭. ಉಷಾ ಸ, ಇಲ್ಲದೆ ಇದ್ದಾಗ (ಕವನ ಸಂಕಲನ -ಕೃಷ್ಣ ಚನ್ನಂಗೋಡು),ಸಂಚಿಕೆ ೬, ಮಾರ್ಚ್ - ಜೂನ್ ೧೯೮೭, ಪು. ೭೫, ಸಂವಾದ.

೨೮. ಉಷಾ ಸ, ಅಭಿನಯದ ಬಯಲು (ಕವನ ಸಂಕಲನ - ವೀಚಿ), ಸಂಚಿಕೆ ೨೬-೨೭, ಮಾರ್ಚ್-ಜೂನ್ ೧೯೯೨, ಪು. ೯೧, ಸಂವಾದ.

೨೯. ಉಷಾ ಸ, ಅಮೃತಮತಿ ಸ್ವಗತ (ಕವನ ಸಂಕಲನ - ಹೆಚ್. ಎಲ್.ಪುಷ್ಪ), ಸಂಚಿಕೆ ೨೯-೩೦, ಸೆಪ್ಟೆಂಬರ್-ಡಿಸೆಂಬರ್ ೧೯೯೨, ಪು. ೧೬೬, ಸಂವಾದ.

೩೦. ಕರಿಗೌಡ ಬೀಚನಹಳ್ಳಿ, ಪ್ರೀತಿ ಮತ್ತು ಸಾವು (ಕಥಾ ಸಂಕಲನ - ಎಂ. ಎಸ್. ವೇದಾ) ಸಂಪುಟ ೧, ಆಗಸ್ಟ್ ೧೯೯೩, ಪುಸ್ತಕ ಮಾಹಿತಿ

೩೧. ಕರಿಗೌಡ ಬೀಚನಹಳ್ಳಿ, ಹೇಮಕೂಟ ಮತ್ತು .... (ಕವನ ಸಂಕಲನ ಪ್ರೊ. ಜಿ. ಎಸ್. ಸಿದ್ದಲಿಂಗಯ್ಯ) ಸಂಪುಟ ೩, ಜುಲೈ ೧೯೯೪, ಪುಸ್ತಕ ಮಾಹಿತಿ.

೩೨. ಕರಿಗೌಡ ಬೀಚನಹಳ್ಳಿ, ಆಕೃತಿ ನಿರೂಪಣೆಗಳ ಹೊಸತನ (ಕಥಾಸಂಕಲನ ದೊಡ್ಡಮರ - ರಾಜೇಂದ್ರ ಚೆನ್ನಿ) ಸಂಪುಟ ೩, ೧೯೯೪, ಪುಸ್ತಕ ಮಾಹಿತಿ.

೩೩. ಕಾಳೇಗೌಡ ನಾಗವಾರ, ಆತ್ಮೀಯ ಕವನಗಳು - ಅಸಲೀ ಕವನಗಳು (ಮೂಕನಿಗೆ ಬಾಯಿ ಬಂದಾಗ - ಅರವಿಂದ ಮಾಲಗತ್ತಿ), ೧೮ನೇ ಪೆಬ್ರವರಿ ೧೯೮೨, ಪ್ರಜಾವಾಣಿ.

೩೪. ಕೃಷ್ಣ ಚನ್ನಂಗೋಡ, ಹುಡುಕಾಡಿ ಬಂದ ಹೊನ್ನಿನ ಬದುಕು, (ಕಾದಂಬರಿ-ಹೊರೆಯಾಲ ದೊರೆಸ್ವಾಮಿ) ಸಂಚಿಕೆ ೮, ಮಾರ್ಚ್-ಏಪ್ರಿಲ್ ೧೯೮೮, ಸಂವಾದ.

೩೫. ಕೃಷ್ಣಮೂರ್ತಿ ಹನೂರು, ಸಂಗ್ರಹ ಮತ್ತು ವ್ಯಾಖ್ಯಾನ, ವಿಶ್ಲೇಷಣೆಯ ಕೊರತೆ
೧) ಹೊನ್ನಮ್ಮನ ಮನೆಯ ಕಥೆಗಳು
೨) ಗಾದೆ ಕಥೆಗಳು
೩) ಮಾತಿನರಗಿಣಿಯೇ ನುಡಿದಾವೋ
ಭಾನುವಾರ ೧೯ನೇ ಡಿಸೆಂಬರ್ ೧೯೯೯, ಪ್ರಜಾವಾಣಿ.

೩೬. ಗಂಗಾಧರ ಮೊದಲಿಯಾರ್, ಆತ್ಮಚರಿತ್ರೆಯೇ ಕಾದಂಬರಿಯಾಗ ಹೊರಟಾಗ ......
೧) ಯಶೋಮಾನಾ - ಗುಡಿ ಬಂಡೆ ಪೂರ್ಣಿಮಾ
೨) ಚಿರ ಬಾಂದವ್ಯ - ಪದ್ಮ ಗುರುರಾಜ
೩) ಸ್ವೀಕಾರ - ಪದ್ಮ ಗುರುರಾಜ
೪) ಆಡಾಡು ಬಾನವಿಲೆ - ಪದ್ಮ ಗುರುರಾಜ
೫) ಮಾಣಿಕ್ಯ ವೀಣೆ - ಪದ್ಮ ಗುರುರಾಜ
೧೮ನೇ ಏಪ್ರಿಲ್ ೧೯೯೯, ಪ್ರಜಾವಾಣಿ.

೩೭. ಗಣೇಶ್ ಮೊಗಳ್ಳಿ, ಬೇವು ಮತ್ತು ಇತರ ಕತೆಗಳು (ಕಥಾ ಸಂಕಲನ - ಬಿ. ಎಸ್. ತಲ್ವಾಡಿ) ಮೇ ೧೯೯೮, ಪುಸ್ತಕ ಮಾಹಿತಿ.

೩೮. ಗುಂಡಪ್ಪ ಎಲ್, ಮೂರ್ತಿ ಮತ್ತು ಕಾಮ ಕಸ್ತೂರಿ (ಕವನ ಸಂಕಲನ - ಬೇಂದ್ರೆ), ಸಂಚಿಕೆ ಸಂಪುಟ - ೧೭, ಸಂಚಿಕೆ ೧, ಪು ೯೭, ಪ್ರಬುದ್ಧ ಕರ್ನಾಟಕ

೩೯. ಗುಂಡಪ್ಪ ಎಲ್, ನಮ್ಮ ಊರಿನ ರಸಿಕರು (ಗೊರೂರು ರಾಮಸ್ವಾಮಿ ಅಯ್ಯಂಗಾರ್), ಸಂಪುಟ ೧೪, ಸಂಚಿಕೆ ೩, ೧೯೩೩ ಸಂಕ್ರಾಂತಿ ಸಂಚಿಕೆ ಪು ೧, ಪ್ರಬುದ್ಧ ಕರ್ನಾಟಕ.

೪೦. ಗುಂಡಪ್ಪ ಎಲ್, ಪಂಚಾಮೃತಂ (ಕೆ.ವಿ. ಕೃಷ್ಣಭಟ್ಟ), ಸಂಪುಟ ೧೮, ಸಂಚಿಕೆ ೪, ಕಾಮನ ಸಂಚಿಕೆ ೧೯೩೭ ಪು. ೧೨೦, ಪ್ರಬುದ್ಧ ಕರ್ನಾಟಕ.

೪೧. ಗೋಪಾಲರಾವ್ ಎಚ್. ಎಸ್, ಅರ್ಥವಂತಿಕೆಯ ಐತಿಹಾಸಿಕ ವಿಶ್ಲೇಷಣೆ (ಭಾರತೀಯ ಸಮಾಜದ ಐತಿಹಾಸಿಕ ವಿಶ್ಲೇಷಣೆ ಅನು: - ಪ್ರಧಾನ ಗುರುದತ್ತ), ನವೆಂಬರ್ - ಡಿಸೆಂಬರ್ ೧೯೮೯, ಅನ್ವೇಷಣೆ

೪೨. ಗೋಪಾಲರಾವ್ ಎಚ್. ಎಸ್, ಸಮಾಜ - ಚಿಕಿತ್ಸೆ ಅಂಬೇಡ್ಕರ್ (ವೈಚಾರಿಕ : ಲೇ. ಚಂದ್ರಶೇಖರ ಭಂಡಾರಿ), ಸೆಪ್ಟೆಂಬರ್ - ಅಕ್ಟೋಬರ್ ೧೯೯೦, ಅನ್ವೇಷಣೆ

೪೩. ಗೋವಿಂದರಾಜು ಸಿ. ಆರ್, ಕಡೆಗೋಲು - ಆರ್. ಜಿ. ನಾಗರಾಜ್
ನಾವು ಕಟ್ಟಿದ ಸ್ವರ್ಗ - ಶಿವರಾಮಯ್ಯ
ಡಿಸೆಂಬರ್ ೧೯೯೫, ಪುಸ್ತಕ ಮಾಹಿತಿ.

೪೪. ಚಂದ್ರಶೇಖರ ತಾಳ್ಯ, ಖಾಸನೀಸ ಮೂಲಕ ಮೂಗೇಲ ಮತ್ತು ಇತರ ಕತೆಗಳು, (ಕಥಾ ಸಂಕಲನ - ರಾಮ ಚಂದ್ರ ದೇವ), ಸಂಚಿಕೆ ೫, ಜುಲೈ ಆಗಸ್ಟ್- ೧೯೮೭, ಪು. ೭೭, ಸಂವಾದ.

೪೫. ಚಂಪಾಬಾಯಿ, ದೇವರ ಬಾಗಿಲು (ಟೇಂಗ್ಸೆ ಗೋವಿಂದರಾಯ), ಸಂಪುಟ ೧೪, ಸಂಚಿಕೆ ೩ ಸಂಕ್ರಾಂತಿಯ ಸಂಚಿಕೆ ೧೯೩೩, ಪು ೫, ಪ್ರಬುದ್ಧ ಕರ್ನಾಟಕ.

೪೬. ಜಾ. ಗೋ, ವಾಸನಾಮಯ ಬದುಕಿನ ಆಚೆ ಈಚೆ (ಕಥಾ ಸಂಕಲನ - ಕಾ.ತ.ಚಿಕ್ಕಣ್ಣ) ಮೇ - ಜೂನ್ ೧೯೮೯, ಅನ್ವೇಷಣೆ

೪೭. ಜೋಳಗಾಯಕರು ಎಚ್. ಟಿ, ನೆಲಕೊದ್ದು ಮುಗಿಲಜಿಗಿದರೆ (ಕವನ ಸಂಕಲನ - ವೇದರಸ), ಸೆಪ್ಟೆಂಬರ್ - ಅಕ್ಟೋಬರ್ ೧೯೮೮ ಏಪ್ರಿಲ್ ೭೯, ಸಂವಾದ.

೪೮. ದೇಶ ಕುಲಕರ್ಣಿ, ಹೊಸ ಪ್ರಕಾರದ ಅಂಗೀಕಾರ (ಎಸ್. ಎಸ್. ಲಕ್ಷ್ಮೀನಾರಾಯಣ ಭಟ್ಟರ ಎಲ್ಲ ಗೀತೆಗಳ ಸಂಕಲನೆ ಸಂಗ್ರಹ: ಕ್ಷಮಾ), ಭಾನುವಾರ ೨೪ ನೇ ಅಕ್ಟೋಬರ್ ೧೯೯೯, ಪ್ರಜಾವಾಣಿ.

೪೯. ದೇಶ ಕುಲಕರ್ಣಿ, ಕಾವ್ಯ ಸಂಪುಟವಲ್ಲ ಜೀವನ ಸಂಪುಟ (ಶೈಲಜ ಸಮಗ್ರಕಾವ್ಯ - ಶೈಲಜ ಉಡಚಣ) ೨ನೇ ಏಪ್ರಿಲ್ ೨೦೦೦, ಪ್ರಜಾವಾಣಿ.

೫೦. ದೇಶಕುಲಕರ್ಣಿ, ಕಾವ್ಯ ಮಾರ್ಗದಲ್ಲಿ ವಿಭಿನ್ನತೆಯ ಜಾಡು (ಮಹಾಯಾನ-ಕವನಸಂಕಲನ-ವೀಸಿ) ೬ನೇ ಆಗಸ್ಟ್ ೨೦೦೦, ಪ್ರಜಾವಾಣಿ.

೫೧. ನಟೇಶ್ ದೊಡ್ಡಟ್ಟಿ, ಕ್ರಾಂತಿಯ ಚಿಲುಮೆ ಉಕ್ಕಿಸುವ 'ತಾಯಿ' (ಕಾದಂಬರಿ ಅನು : ನಿರಂಜನ) ಅಕ್ಟೋಬರ್ ೧೯೮೫, ಅನ್ವೇಷಣೆ

೫೨. ನರಸಿಂಹ ಮೂರ್ತಿ ಕೆ, ಸಾರ್ಥ ಒಂದು ಸಾರ್ಥಕ ಕೃತಿ (ಕಾದಂಬರಿ ಎಸ್.ಎಲ್. ಭೈರಪ್ಪ), ೧೯೯೮, ಕನ್ನಡ ಪ್ರಭ.

೫೩. ನರಸಿಂಹಮೂರ್ತಿ ಕೆ, ವೈಶಾಖ (ಕಾದಂಬರಿ - ಚದುರಂಗ), ಸಂಚಿಕೆ ೪೩, ಸೆಪ್ಟಂಬರ್, ೧೯೮೧, ಪು. ೬೯, ಸಾಕ್ಷಿ.

೫೪. ನರಸಿಂಹಮೂರ್ತಿ ಕೆ, ವೀಚಿ ಅವರ ಸಂಕರ ತಳಿ (ಕವನ ಸಂಕಲನ), ಸಂಚಿಕೆ ೪೪, ಡಿಸೆಂಬರ್ ೧೯೮೧, ಪು. ೬೮, ಸಾಕ್ಷಿ.

೫೫. ನರಸಿಂಹಮೂರ್ತಿ ಡಿ. ಎಲ್, ವೀಣಾನಾದ (ಕಥಾಸಂಗ್ರಹ - ಕೃ.ಹ. ಕುಲಕರ್ಣಿ), ಯುವಸಂವತ್ಸರ, ೬೩, ಪು ೧೧೮, ಪ್ರಬುದ್ಧ ಕರ್ನಾಟಕ, ಪ್ರಬುದ್ಧ ಕರ್ನಾಟಕ.

೫೬. ನರಸಿಂಹಮೂರ್ತಿ ಡಿ. ಎಲ್, ಜೀವನ ಯಾತ್ರ (ಕಾದಂಬರಿ - ಅ.ನ.ಕೃ), ಯುವಸಂವತ್ಸರ, ೬೩, ೧೯೩೫, ಪು. ೧೧೬, ಪ್ರಬುದ್ಧ ಕರ್ನಾಟಕ.

೫೭. ನರಸಿಂಹಮೂರ್ತಿ ಡಿ. ಎಲ್, ಪ್ರೇಮಾಹುತಿ (ಕಾದಂಬರಿ - ಟಿ.ವಿ. ರಾವು), ಯುವಸಂವತ್ಸರ ೬೩, ೧೯೩೫, ಪು.೧೨೦, ಪ್ರಬುದ್ಧ ಕರ್ನಾಟಕ.

೫೮. ನರಹಳ್ಳಿ ಬಾಲಸುಬ್ರಹ್ಮಣ್ಯ, ಸ್ತ್ರೀವಾದಿ ಸಾಹಿತ್ಯ ವಿಮರ್ಶೆ (ವಿಮರ್ಶೆ), ಫೆಬ್ರವರಿ ೧೯೯೫, ಮಯೂರ.

೫೯. ನರಹಳ್ಳಿ ಬಾಲಸುಬ್ರಹ್ಮಣ್ಯ, ಅಗ್ನಿ ಮತ್ತು ಮಳೆ (ನಾಟಕ - ಗಿರೀಶ್ ಕಾರ್ನಾಡ), ಜುಲೈ ೧೯೯೫, ಮಯೂರ.

೬೦. ನರಹಳ್ಳಿ ಬಾಲಸುಬ್ರಹ್ಮಣ್ಯ, ಉಚಲ್ಯಾ (ಆತ್ಮಕತೆ - ಲಕ್ಷ್ಮಣರಾವ್ ಗಾಯಕವಾಡ), ಜುಲೈ, ೧೯೯೫, ಮಯೂರ.

೬೧. ನರಹಳ್ಳಿ ಬಾಲಸುಬ್ರಹ್ಮಣ್ಯ, ದೇಸಗತಿ (ಕಥಾ ಸಂಕಲನ - ರಾಘವೇಂದ್ರ ಪಾಟೀಲ), ಫೆಬ್ರವರಿ, ೧೯೯೬, ಮಯೂರ.

೬೨. ನರಹಳ್ಳಿ ಬಾಲಸುಬ್ರಹ್ಮಣ್ಯ, ಹೋರಾಟದ ಹಾದಿ (ಆತ್ಮಕತೆ - ಎಚ್ ನರಸಿಂಹಯ್ಯ), ಮೇ, ೧೯೯೬, ಮಯೂರ.

೬೩. ನರಹಳ್ಳಿ ಬಾಲಸುಬ್ರಹ್ಮಣ್ಯ, ಊರುಕೇರಿ (ಆತ್ಮಕತೆ - ಡಾ.ಸಿದ್ದಲಿಂಗಯ್ಯ), ಅಗಸ್ಟ್ ೧೯೯೬.

೬೪. ನರಹಳ್ಳಿ ಬಾಲಸುಬ್ರಹ್ಮಣ್ಯ, ಕೃತಿ ಸಂಸ್ಕೃತಿ (ವಿಮರ್ಶೆ: ಎಂ. ಜಿ. ಕೃಷ್ಣಮೂರ್ತಿ), ನವಂಬರ್ ೧೯೯೪, ಮಯೂರ.

೬೫. ನರಹಳ್ಳಿ ಬಾಲಸುಬ್ರಹ್ಮಣ್ಯ, ಜುಗಾರಿಕ್ರಾಸ್ (ಕಾದಂಬರಿ - ತೇಜಸ್ವಿ), ಏಪ್ರಿಲ್ ೧೯೯೫, ಮಯೂರ.

೬೬. ನರಹಳ್ಳಿ ಬಾಲಸುಬ್ರಹ್ಮಣ್ಯ, ಆತ್ಮಕತೆ ಅಥವಾ ನನ್ನ ಸತ್ಯಾನ್ವೇಷಣೆ (ಆತ್ಮಕತೆ - ಮ.ಗಾಂಧೀಜಿ), ಅಕ್ಟೋಬರ್ ೧೯೯೫, ಮಯೂರ.

೬೭. ನರಹಳ್ಳಿ ಬಾಲಸುಬ್ರಹ್ಮಣ್ಯ, ಬಿಸಿಲ ಹನಿಗಳು (ಕಥಾ ಸಂಕಲನ ಸಂ: ಅಮರೇಶ ನುಗುಡೋಣಿ), ಸೆಪ್ಟೆಂಬರ್, ೧೯೯೫, ಮಯೂರ.

೬೮. ನರಹಳ್ಳಿ ಬಾಲಸುಬ್ರಹ್ಮಣ್ಯ, ಕನ್ನಡ ಸಾಹಿತ್ಯ ಸಂಗಾತಿ (ವಿಮರ್ಶೆ: ಕೀರ್ತಿನಾಥ ಕುರ್ತಕೋಟಿ), ಜನವರಿ, ೧೯೯೬, ಮಯೂರ.

೬೯. ನರಹಳ್ಳಿ ಬಾಲಸುಬ್ರಹ್ಮಣ್ಯ, ಮೂರು ದಾರಿಗಳು (ಕಾದಂಬರಿ : ಯಶವಂತ ಚಿತ್ತಾಲ), ಸೆಪ್ಟೆಂಬರ್, ೧೯೮೧, ಸಂಚಿಕೆ ೪೩, ಪು. ೬೨, ಸಾಕ್ಷಿ.

೭೦. ನಾಗಭೂಷಣ ಸ್ವಾಮಿ ಓ. ಎಲ್, ಶಾಂತಿನಾಥ ದೇಸಾಯಿ ಅವರ ಓಂಣಮೋ - (ಕಾದಂಬರಿ) ೧೯೯೮, ಪುಸ್ತಕ ಲೋಕ.

೭೧. ನಾಗಭೂಷಣ ಸ್ವಾಮಿ ಓ. ಎಲ್, ತಂತು - ಎಸ್. ಎಲ್. ಭೈರಪ್ಪ (ಕಾದಂಬರಿ) ಸಂಪುಟ ೧, ಅಕ್ಟೋಬರ್ ೧೯೯೩, ಪುಸ್ತಕ ಮಾಹಿತಿ

೭೨. ನಾಗಭೂಷಣ ಸ್ವಾಮಿ ಓ. ಎಲ್, ಅಕ್ಷರ ಹೊಸ ಕಾವ್ಯ - ಸಂ: ಪಿ. ಲಂಕೇಶ್ (ಕವನ ಸಂಕಲನ) ಸಂಪುಟ ೧, ನವಂಬರ್ ೧೯೯೩, ಪುಸ್ತಕ ಮಾಹಿತಿ.

೭೩. ನಾಗಭೂಷಣ ಸ್ವಾಮಿ ಓ. ಎಲ್, ಅಂತರಂಗದ ಸುಳಿದಾಟ (ಕಣ್ಣುಗಳಲ್ಲಿ ಕನಸು ತುಂಬಿ - ಕವನ ಸಂಕಲನ ಹೇಮಾ ಪಟ್ಟಣ ಶೆಟ್ಟಿ) ಸಂಪುಟ ೩, ಏಪ್ರಿಲ್ ೧೯೯೪, ಪುಸ್ತಕ ಮಾಹಿತಿ

೭೪. ನಾಗಭೂಷಣ ಸ್ವಾಮಿ ಓ. ಎಲ್, ಹಾಡೆ ಹಾದಿಯ ತೋರಿತು (ಪಿಎಚ್. ಡಿ. ಪ್ರಬಂಧ - ಹೆಚ್. ಎಸ್. ರಾಘವೇಂದ್ರ ರಾವ್) ೨೪ ಮಾರ್ಚ್ ೧೯೯೫, ಪುಸ್ತಕ ಮಾಹಿತಿ.

೭೫. ನಾಗಭೂಷಣಸ್ವಾಮಿ ಓ. ಎಲ್, ದೇಸಗತಿ (ಕಥಾ ಸಂಕಲನ - ರಾಘವೇಂದ್ರ ಪಾಟೀಲ) ೩೧ ಅಕ್ಟೋಬರ್ ೧೯೯೫, ಪುಸ್ತಕ ಮಾಹಿತಿ.

೭೬. ನಾಗಭೂಷಣಸ್ವಾಮಿ ಓ. ಎಲ್, ಸಂವೇದನಾ ಶೀಲ ವ್ಯಾಖ್ಯಾನ (ನೂರು ಮರ ನೂರು ಸ್ವರ (ವಿಮರ್ಶೆ) ಕೀರ್ತಿನಾಥ ಕುರ್ತಕೋಟಿ) ಸೆಪ್ಟೆಂಬರ್ ೧೯೯೮ ಪುಸ್ತಕ ಮಾಹಿತಿ.

೭೭. ನಾಗಭೂಷಣಸ್ವಾಮಿ ಓ. ಎಲ್, ಹೊಸ ಓದು ಚಿದಂಬರ ರಹಸ್ಯ (ಕಾದಂಬರಿ ತೇಜಸ್ವಿ), ಸಂಚಿಕೆ ೧, ನವಂಬರ್ - ಡಿಸೆಂಬರ್ ೧೯೮೬, ಪು. ೭೦, ಸಂವಾದ.

೭೮. ನಾಗಭೂಷಣ ಪಾಟೀಲ್, ಪರಿಹಾರ (ಅನುವಾದಿತ ಕಾದಂಬರಿ : ಅಶ್ವಿನಿ ಗಂಗಾ - ಮೂಲಹಿಂದಿ : ಬೀಷ್ಮ ಸಾಹನಿ) ಸೆಪ್ಟೆಂಬರ್ - ಅಕ್ಟೋಬರ್ ೧೯೯೭, ಪುಸ್ತಕ ಮಾಹಿತಿ.

೭೯. ನಾಗರಾಜ ಕಿ. ರಂ, ಅಡಿಗರ ಹೊಸ ಕವನ ಸಂಕಲನ (ಮೂಲಕ ಮಹಾಶಯರು), ಸೆಪ್ಟೆಂಬರ್ ೧೯೮೦, ಅಂಕಣ ಪತ್ರಿಕೆ.

೮೦. ನಾರಾಯಣ ಕಿಕ್ಕೇರಿ, ಕಲ್ಕಿ ಅವತಾರವೂ ಜಾತಿ ವ್ಯವಸ್ಥೆಯೂ (Subalen studies VI Ed Ranmjitguha) ಸೆಪ್ಟೆಂಬರ್ ೧೯೯೯, ಇಬ್ಬನಿ

೮೧. ನಾರಾಯಣ ಕೆ. ವಿ, ಹೊಸತು - ಹೊಸತು - ಡಾ. ಎಂ. ಚಿದಾನಂದಮೂರ್ತಿ (ಸಂಶೋಧನೆ) ಸಂಪುಟ ೧, ನವಂಬರ್ ೧೯೯೩, ಪುಸ್ತಕ ಮಾಹಿತಿ.

೮೨. ನಾವಡ ಎ. ವಿ, ಸಂವೇದನೆ (ಪ್ರಬಂಧ ಮತ್ತು ಕವನ ಸಂಕಲನ - ಸಂ ಶಶಿಕಲಾ ವೀರಯ್ಯಸ್ವಾಮಿ) ಜನವರಿ ೧೯೯೬, ಪುಸ್ತಕ ಮಾಹಿತಿ.

೮೩. ನಿಂಗಪ್ಪ ಮುದೇನೂರು, ಋತುಮಾನ (ಕವನ ಸಂಕಲನ - ಡಿ. ರಾಮನ ಮಲಿ) ಮಾರ್ಚ್ ೧೯೯೯. ಪುಸ್ತಕ ಮಾಹಿತಿ.

೮೪. ಪಟ್ಟಾಭಿರಾಮ ಸೋಮಯಾಜಿ ಎಚ್, ಸಾಹಿತ್ಯ ಸಂದರ್ಭ (ವಿಮರ್ಶೆ - ಟಿ.ಪಿ. ಅಶೋಕ) ಸಂಚಿಕೆ ೨೬-೨೭, ಮಾರ್ಚ್-ಜೂನ್ ೧೯೯೨, ಪು. ೪೦೪, ಸಂವಾದ.

೮೫. ಪಟ್ಟಾಭಿರಾಮ ಸೋಮಯಾಜಿ ಹೆಚ್, ಜಾಣೆ (ಕವನಸಂಕಲನ-ಎಂ.ಆರ್. ಕಮಲ), ಸಂಚಿಕೆ ೨೯-೩೦, ಸೆಪ್ಟೆಂಬರ್-ಡಿಸೆಂಬರ್ ೧೯೯೨, ಪು. ೧೯೩, ಸಂವಾದ.

೮೬. ಪುಟ್ಟಯ್ಯ ಬಿ. ಎಂ, ಕುರುಮಯ್ಯ ಮತ್ತು ಅಂಕುಶದೊಡ್ಡಿ (ಕಾದಂಬರಿ - ಜಂಬಣ್ಣ ಅಮರ ಚಿಂತ) ೨೯, ಆಗಸ್ಟ್ ೧೯೯೫, ಪುಸ್ತಕ ಮಾಹಿತಿ.

೮೭. ಪುಟ್ಟಯ್ಯ ಬಿ. ಎಂ, ಊರುಕೇರಿ (ಆತ್ಮಕತೆ ಸಿದ್ದಲಿಂಗಯ್ಯ) ೩೯ ಜೂನ್ ೧೯೯೬, ಪುಸ್ತಕ ಮಾಹಿತಿ.

೮೮. ಪುಟ್ಟಯ್ಯ ಬಿ. ಎಂ, ಕನ್ನಡ - ಮಡಾರಿ ದಲಿತ ಸಾಹಿತ್ಯ (ಲೇಖನ ಸಂಕಲನ - ಸರಜೂ ಕಾಟ್ಕರ್), ಜುಲೈ - ಅಗಸ್ಟ್ ೧೯೯೭, ಪುಸ್ತಕ ಮಾಹಿತಿ.

೮೯. ಪುರುಷೋತ್ತಮ ಬಿಳಿಮಲೆ, ಸಣ್ಣ ಕತೆಗಳು (ಡಾ. ಸಿಂಪಿ ಲಿಂಗಣ್ಣ) ೨೨ ಜನವರಿ ೧೯೯೫, ಪುಸ್ತಕ ಮಾಹಿತಿ.

೯೦. ಪುರುಷೋತ್ತಮ ಬಿಳಿಮಲೆ, ಸಾಹಿತ್ಯ ಕಥನ (ವಿಮರ್ಶೆ- ಡಿ ಆರ್. ನಾಗರಾಜ), ಜುಲೈ ೧೯೯೬, ಪುಸ್ತಕ ಮಾಹಿತಿ.

೯೧. ಪುರುಷೋತ್ತಮ ಬಿಳಿಮಲೆ, ಸಮುದಾಯದ ಶಿಸ್ತುಬದ್ಧ ಅಧ್ಯಯನ (ದೊಕ್ಕಲು ಮಕ್ಕಳು : ಒಂದು ಅಧ್ಯಯನ ಎಲ್ಲಪ್ಪ ಕೆಕೆಪುರ), ೨ನೇ ಮೇ ೧೯೯೯, ಪ್ರಜಾವಾಣಿ.

೯೨. ಪುಷ್ಪ ಹೆಚ್. ಎಲ್, ಹಲವು ವಿಭಿನ್ನ ಆಲೋಚನೆಯ ಸಂಕಲನಗಳು (ಕವನ ಸಂಕಲನಗಳು)

ನಾನು ನನ್ನವರು - ಸುಕನ್ಯಾ ಮಾರುತಿ.
ಕಳೆದು ಹೋಗುತ್ತಿವೆ ದಿನಗಳು - ಸುವರ್ಣ ಕಾಡನಕುಪ್ಪೆ
ಶುಭಾಂಗಿ - ಜರಗನಹಳ್ಳಿ ಶಿವಶಂಕರ
ಮಂಜು - ವಿಜಯ ರಾಘವನ್.
ಕಪ್ಪು ಕಾವ್ಯ - ಅರವಿಂದ ಮಾಲಗತ್ತಿ.

ಸೆಪ್ಟೆಂಬರ್- ಅಕ್ಟೋಬರ್ - ೧೯೮೭, ಅನ್ವೇಷಣೆ

೯೩. ಪುಷ್ಪ ನಾಗರಾಜ್, ಅಗ್ನಿ ಸಾರ್ಥಕ ಕವನಗಳು (ಸಂ- ಜಿ.ಆರ್. ತಿಪ್ಪೇಸ್ವಾಮಿ), ಡಿಸೆಂಬರ್ ೮೭ ಜನವರಿ ೮೮, ಅನ್ವೇಷಣೆ

೯೪. ಪುಷ್ಪ ಹೆಚ್. ಎಲ್, ಪ್ರತಿಭಾ ನಂದಕುಮಾರ ಅವರ ಮೂರು ಕವನ ಸಂಕಲನಗಳು. ಗಂಡು ಹೆಣ್ಣಿನ ಸಂಬಂಧದ ಶೋಧನೆಯ ಹಾದಿಯಲ್ಲಿ ....

೧) ನಾವು ಹುಡುಗಿಯರು ಹೀಗೆ - ಕವನ ಸಂಕಲನ.
೨) ಈತನಕ - ಕವನ ಸಂಕಲನ.
೩) ರಸ್ತೆಯಂಚಿನ ಗಾಡಿ - ಕವನ ಸಂಕಲನ.

ನವೆಂಬರ್-ಡಿಸೆಂಬರ್ ೧೯೯೧, ಅನ್ವೇಷಣೆ

೯೫. ಪುಷ್ಪ ಹೆಚ್. ಎಲ್, ಸಹಜ ಅಭಿವ್ಯಕ್ತಿಯ ನಾಲ್ಕು ಸಂಕಲನಗಳು.

ನನ್ನೂರ ಹಾಡು - ರಂಗಾರೆಡ್ಡಿ ಕೋಡಿರಾಂಪುರ.
ಮುಸ್ಸಂಜೆ - ಶಂಕರ ಕಟಗಿ
ದನಿ ಎತ್ತಿ ಹಾಡೇನ - ಬಸವರಾಜ ಸಬರದ.
ಗುಲಾಮ ಗೀತೆ - ಬರಗೂರು ರಾಮಚಂದ್ರಪ್ಪ

ಜನವರಿ-ಪೆಬ್ರವರಿ ೧೯೯೧, ಅನ್ವೇಷಣೆ

೯೬. ಪ್ರೇಮಕುಮಾರ್ ಹರಿಯಬ್ಬೆ, ಕುತೂಹಲ ಹುಟ್ಟಿಸುವ ಕಥೆಗಳು

ಮುಖಾಂತರ - ಶ್ರೀಧರ ಬಳಗಾರ
ಅಬ್ಬಾಸರ ಐವತ್ತು ಕಥೆಗಳು - ಅಬ್ಬಾಸ್ ಮೇಲಿನಮನಿ
ಭಾನುವಾರ ೫ನೇ ಡಿಸೆಂಬರ್ ೧೯೯೯, ಪ್ರಜಾವಾಣಿ.

೯೭. ಪ್ರಕಾಶ ಗರುಡ, ಅಗ್ನಿ ಮತ್ತು ಮಳೆ (ನಾಟಕ ಗಿರೀಶ್ ಕಾರ್ನಾಡ್), ೨೫ ಎಪ್ರಿಲ್, ೧೯೯೫, ಪುಸ್ತಕ ಮಾಹಿತಿ.

೯೮. ಬಸವರಾಜು ಜಿ. ಕೆ, ಲಂಗರು (ಕಥಾಸಂಕಲನ-ವಿವೇಕ ಶಾನುಭಾಗ), ಸಂಚಿಕೆ ೧೮. ಜುಲೈ-ಆಗಸ್ಟ್ ೧೯೯೨, ಪು. ೨೯, ಸಂವಾದ.

೯೯. ಬಸವರಾಜು ಜಿ. ಪಿ, ನಂಬಿಕೆಗಳು (ಕೃಷ್ಣ ಮಾಸಡಿ), ಸಂಚಿಕೆ ೨, ಜನವರಿ ಫೆಬ್ರವರಿ, ೧೯೮೭, ಸಂವಾದ.

೧೦೦. ಬಸವರಾಜ ಸಬರದ, ತಮಂಧದ ಕೇಡು (ಕಥಾಸಂಕಲನ - ಅಮರೇಶ ನುಗುಡೋಣಿ) ಸೆಪ್ಟೆಂಬರ್ - ಅಕ್ಟೋಬರ್ ೧೯೯೭, ಪುಸ್ತಕ ಮಾಹಿತಿ.

೧೦೧. ಬಸವರಾಜ ಕಲ್ಗುಡಿ, ಎಸ್. ದಿವಾಕರ ಅವರ 'ಇತಿಹಾಸ' (ಕಥಾ ಸಂಕಲನ), ಸಂಚಿಕೆ ೪೪ ಡಿಸೆಂಬರ್ ೧೯೮೧, ಪು. ೬೬, ಸಾಕ್ಷಿ.

೧೦೨. ಬೋರಲಿಂಗಯ್ಯ ಹಿ. ಚಿ, ಬಹುರೂಪಿ ನಿರೂಪಣೆಯ ಹೊಸ ತಂತ್ರ (ಶಾಮಣ್ಣ - ಕಾದಂಬರಿ ಕುಂ. ವೀರಭದ್ರಪ್ಪ) ಮೇ ೧೯೯೯, ಪುಸ್ತಕ ಮಾಹಿತಿ.

೧೦೩. ಭಂಡಾರಿ ಆರ್. ವಿ, ದಲಿತ ಲೋಕದ ಒಳಗೆ (ವಿಮರ್ಶಾ ಸಂಕಲನ - ಎಲ್. ಹನುಮಂತಯ್ಯ) ಮಾರ್ಚ್ - ಏಪ್ರಿಲ್ ೧೯೯೧, ಅನ್ವೇಷಣೆ

೧೦೪. ಭಟ್ಟ ಟಿ. ಜಿ, ಚಿಂತಾಮಣಿ ಅವರ 'ಈ ಜಗತ್ತು' (ಕವನ ಸಂಕಲನ - ಚಿಂತಾಮಣಿ ಕೂಡ್ಲೆಕೆರೆ) ಸೆಪ್ಟೆಂಬರ್ - ಅಕ್ಟೋಬರ್ ೧೯೯೦, ಅನ್ವೇಷಣೆ

೧೦೫. ಮನುಚಕ್ರವರ್ತಿ ಎನ್, ಗಾಯತ್ರಿ ನಾವಡ ಅವರ ವಿರಚನೆ (ವಿಮರ್ಶೆ), ಏಪ್ರಿಲ್ - ಮೇ, ೧೯೯೮, ಶೂದ್ರ.

೧೦೬. ಮಲ್ಲೇಪುರಂ. ಜಿ. ವೆಂಕಟೇಶ, ವಿದಿಶಿಯ ವಿದೂಶಕ (ನಾಟಕ: ಕೆ. ವಿ. ಸುಬ್ಬಣ) ೧ ಮೇ ೧೯೯೩, (ಪರಿವಿಡಿ ಹೆಸರಿನಲ್ಲಿ), ಪುಸ್ತಕ ಮಾಹಿತಿ

೧೦೭. ಮಲ್ಲೇಪುರಂ ಜಿ. ವೆಂಕಟೇಶ್, ಮಹಿಳಾ ಅಧ್ಯಯನ ಸಂ: ವೀಣಾ ಶಾಂತೇಶ್ವರ (ಲೇಖನಗಳ ಸಂಗ್ರಹ) ಸಂಪುಟ ೧, ಡಿಸೆಂಬರ್ ೧೯೯೩, ಪುಸ್ತಕ ಮಾಹಿತಿ.

೧೦೮. ಮಲ್ಲೇಪುರಂ. ಜಿ. ವೆಂಕಟೇಶ, ಕೇಂದ್ರ ವೃತ್ತಾಂತ (ಕಾದಂಬರಿ - ಯಶವಂತಚಿತ್ತಾಲ) ನವಂಬರ್ - ಡಿಸೆಂಬರ್ ೧೯೯೬, ಪುಸ್ತಕ ಮಾಹಿತಿ.

೧೦೯. ಮಲ್ಲೇಪುರಂ, ಜಿ. ವೆಂಕಟೇಶ, ಹಲವು ಬಗೆಯ ದೃಷ್ಟಿಕೋನಗಳಿಂದ ಕೂಡಿದ ಕೃತಿ (ಅಲ್ಲಮ ಪ್ರಭು ಮತ್ತು ಶೈವ ಪ್ರತಿಭೆ (ವಿಮರ್ಶೆ- ಡಿ. ಆರ್. ನಾಗರಾಜ್) ಸೆಪ್ಟೆಂಬರ್ ೧೯೯೯, ಪುಸ್ತಕ ಮಾಹಿತಿ.

೧೧೦. ಮಲ್ಲೇಪುರಂ. ಜಿ. ವೆಂಕಟೇಶ್, ಮೊತ್ತ ಮೊದಲ ದಲಿತ ಬದುಕಿನ ಆತ್ಮಕತೆ (ಅರವಿಂದ ಮಾಲಗತ್ತಿ), ಕನ್ನಡಪ್ರಭ ಡಿಸೆಂಬರ್ ೧೮,೧೯೯೪, ಪ್ರಜಾವಾಣಿ.

೧೧೧. ಮಹಾಬಲೇಶ್ವರ ಕಾಟ್ರಹಳ್ಳಿ, ಸಮಸ್ಯೆಗಳ ವಿಭಿನ್ನ ದೃಷ್ಟಿಕೋನ
ದಲಿತ ಶಿವ - ಸಿ.ಬಿ. ಚಂದ್ರಶೇಖರ್
ಸಾಮಯಿಕ - ಗೋಪಾಲರಾವ್ ಹೆಜೀಜ್
೨ನೇ ಜನವರಿ ೨೦೦೦, ಪ್ರಜಾವಾಣಿ.

೧೧೨. ಮಾಲತಿ ಎಸ್, ಕನ್ನಡ ರಂಗಭೂಮಿ ವಿಸ್ತಾರವಾದ ಜ್ಞಾನ ಹಾಗೂ ಕಾಳಜಿ (ಬಿ. ವಿ. ವೈಕುಂಠರಾಜು) ೧೮ನ ನೇ ಏಪ್ರಿಲ್ ೧೯೯೯, ಪ್ರಜಾವಾಣಿ.

೧೧೩. ಮಾಲತಿ ಎಸ್, ಕನಸಿನ ಲೋಕ, ಕಲ್ಪನಾ ವಿಲಾಸ ಚಿಣ್ಣರಿಗೆ ನೀತಿಬೋಧನೆ
೫ ಮಕ್ಕಳ ನಾಟಕಗಳು - ಎ. ಎಸ್. ಮೂರ್ತಿ
೧) ಮಂತ್ರವಾದಿ
೨) ಓ ನನ್ನ ಮರವೆ
೩) ಚಿನ್ನದ ಚೆಂಡು
೪) ಹಾಡು ಹಕ್ಕಿ
೫) ಕಾಶಿಕಿಟ್ಟಿ
೧೧ನೇ ಏಪ್ರಿಲ್ ೧೯೯೯, ಪ್ರಜಾವಾಣಿ.

೧೧೪. ಮಾಲತಿ ಎಸ್, ಗ್ರಾಮೀಣ ಸಂಸ್ಕೃತಿಯ ಹಲವು ಮುಖಗಳು (ಜನಪದ ಗೀತೆಗಳು ಸಂ: ಎನ್. ಪ್ರಭಾ) ೧೬ನೇ ಜನವರಿ ೨೦೦೦, ಪ್ರಜಾವಾಣಿ.

೧೧೫. ಮಾಲತಿ ಎಸ್, ಯಕ್ಷಗಾನದ ವೈಭವ ಒಸರುವ ಭಾವತೀವ್ರತೆ (ವೈಶಂಪಾಯನ ತೀರ- ಎಲ್.ಎನ್. ಮುಕುಂದರಾಜ), ೬ನೇ ಆಗಸ್ಟ್ ೨೦೦೦, ಪ್ರಜಾವಾಣಿ.

೧೧೬. ಮಾಲತಿ ಎಸ್, ಭಂಜನ - ಸೃಜನದ ಮುಖಾಮುಖಿ, ನೀರಸ ನಡೆ (ಅಶ್ವಪರ್ವ ನಾಟಕ-ರಾಮನಾಥ) ೧೫ನೇ ಅಕ್ಟೋಬರ್ ೨೦೦೦, ಪ್ರಜಾವಾಣಿ.

೧೧೭. ಮುಕುಂದರಾಜ್ ಎಲ್. ಎನ್, ಬೆಳೆಗೆದ್ದು ನಿಂತರೆ - ಚುರುಕು ಭಾಷೆ ಸಂಕಲನ (ಕವನ ಸಂಕಲನ -ಶ್ರೀಧರ ಪಿಸ್ಸೆ) ನವೆಂಬರ್ - ಡಿಸೆಂಬರ್ ೧೯೮೮, ಅನ್ವೇಷಣೆ

೧೧೮. ಮುಕುಂದರಾಜ್ ಎಲ್. ಎನ್, ಕಾವ್ಯಜೀವಿ ಅವರ ಆರೋಹಣ (ಕವನ ಸಂಕಲನ - ಕಾವ್ಯಜೀವಿ), ಜನವರಿ - ಪೆಬ್ರವರಿ ೧೯೯೦, ಅನ್ವೇಷಣೆ

೧೧೯. ಮುನಿಕೃಷ್ಣಪ್ಪ ಕೆ. ಎಂ, ಎರಡು ಕವನ ಸಂಕಲನಗಳು.
ಮ್ಯಾನಿಫೆಸ್ಟೋ - ಸರಜೂ ಕಾಟಕರ್
ಪ್ರಮೇಯ - ವೇಣು ಗೋಪಾಲ ಸೊರಬ
ಜುಲೈ - ಆಗಸ್ಟ್ ೮೮, ಅನ್ವೇಷಣೆ

೧೨೦. ಮೂರ್ತಿ ಎಸ್, ಎನ್, ಸಂಸ್ಕಾರ: ಕೆಲವು ಟಿಪ್ಪಣಿಗಳು (ಕಾದಂಬರಿ - ಅನಂತಮೂರ್ತಿ), ಸಂಚಿಕೆ ೪೪ ಡಿಸೆಂಬರ್ ೧೯೮೧, ಪು. ೬೪, ಸಾಕ್ಷಿ.

೧೨೧. ಮೂರ್ತಿರಾವ್ ಎ. ಎನ್, ಆರ್ಯಕ (ಅನುವಾದ ನಾಟಕ - ಎಸ್.ಜಿ. ಶಾಸ್ತ್ರೀ), ಸಂಪುಟ ೧೪ ಸಂಚಿಕೆ ೧, ೧೯೩೨, ಅಂಗಿರಸ ಸಂವತ್ಸರ ಪು ೧೭, ಪ್ರಬುದ್ಧ ಕರ್ನಾಟಕ.

೧೨೨. ಮ್ಯಾಗೇರಿ ಪಿ. ಜೆ, ಕರಿಯ ಕಟ್ಟಿದ ಕವನ (ಕವನ ಸಂಕಲನ - ಸತ್ಯಾನಂದ ಪಾತ್ರೋಟ) ಜೂನ್, ಜುಲೈ, ೧೯೯೮, ಪುಸ್ತಕ ಮಾಹಿತಿ.

೧೨೩. ಮ್ಯಾಗೇರಿ ಐ. ಜೆ, ಗಾಂಧೀ ಮಗಳು (ಕಥಾಸಂಕಲನ -ಶಾಂತಾ ದೇವಿ ಕಣವಿ) ಆಗಸ್ಟ್ ೧೯೯೯, ಪುಸ್ತಕ ಮಾಹಿತಿ.

೧೨೪. ರಂಗಾಚಾರ್ ಸಿ, ಹಿಂದಿ ಹುಡುಗರ ಬುದ್ಧಿ ಮಾಂದ್ಯತೆ (ವೆಂಕಟರಾವ್ ವಿಠಲ ಕಾಮತ), ಸಂಪುಟ ೧೮, ಸಂಚಿಕೆ ೪, ೧೯೩೭ ಪು ೧೨೨, ಪ್ರಬುದ್ಧ ಕರ್ನಾಟಕ.

೧೨೫ ರಘುನಾಥ ಸ, 'ಹಕ್ಕಿನಡಿಗೆ' ಹೊಸ ಧ್ವನಿಗಳ ಆಲಾಪನ (ಕವನ ಸಂಕಲನ ಸಂ: ರಾಜೀವಸಖ) ಮೇ-ಜೂನ್ ೧೯೯೦, ಅನ್ವೇಷಣೆ

೧೨೬. ರಘುನಾಥ್‌ರಾವ್ ಡಿ, ಬೇಂದ್ರೆ ಮತ್ತು ಕನ್ನಡದ ಭಾವಗೀತೆ ಸ್ವರೂಪ (ಪಿಎಚ್. ಡಿ. ಪ್ರಬಂಧ - ಡಾ. ಕೃಷ್ಣಕಟ್ಟಿ) ಪೆಬ್ರವರಿ ೧೯೯೭, ಪುಸ್ತಕ ಮಾಹಿತಿ.

೧೨೭. ರಮೇಶ್ ಸ. ಚಿ, ಬೆಣಚುಕಲ್ಲು (ಕಾದಂಬರಿ - ಡಾ. ಆರ್. ಆರ್. ಪಾಂಗಾಳ) ೩೨, ನವಂಬರ್ ೧೯೯೫, ಪುಸ್ತಕ ಮಾಹಿತಿ.

೧೨೮. ರವೀಂದ್ರ ಹೆಚ್. ಬಿ, ಬೇಲಿಮ್ಯಾಗಳ ಹೂವು (ಕವನ ಸಂಕಲನ - ಕುರುವ ಬಸವರಾಜ) ಜೂನ್ ೧೯೯೭, ಪುಸ್ತಕ ಮಾಹಿತಿ.

೧೨೯. ರಹಮತ್ ತರೀಕೆರೆ, ಶಿವರುದ್ರಪ್ಪ ಸಮಗ್ರ ಗದ್ಯ ಸಂಪುಟ -೧, ಸಂಪುಟ ೧, ಎಪ್ರಿಲ್ ೧೯೯೩, (ಪರಿವಿಡಿ ಹೆಸರಿನಲ್ಲಿ) - ಪುಸ್ತಕ ಮಾಹಿತಿ

೧೩೦. ರಹಮತ್ ತರೀಕೆರೆ, ಏಕಾಂತದ ಮನುಷ್ಯ (ಕವನ ಸಂಕಲನ - ಸರಜೂ ಕಾಟ್ಕರ್) ಸಂಪುಟ ೧ ಜುಲೈ ೧೯೯೩, ಪುಸ್ತಕ ಮಾಹಿತಿ

೧೩೧. ರಹಮತ್ ತರೀಕೆರೆ, ದಲಿತ ಕತೆಗಳು (ಸಂ: ಎಲ್. ಹನುಮಂತಯ್ಯ. ಬಿ. ಚಿನ್ನಸ್ವಾಮಿ) ಜನವರಿ ೧೯೯೭, ಪುಸ್ತಕ ಮಾಹಿತಿ.

೧೩೨. ರಹಮತ್ ತರೀಕೆರೆ, ಸೂರ್ಯನ ಕುದುರೆ (ಕಥಾ ಸಂಕಲನ - ಯು. ಆರ್. ಅನಂತಮೂರ್ತಿ) ೩೦ ಸೆಪ್ಟೆಂಬರ್ ೧೯೯೫, ಪುಸ್ತಕ ಮಾಹಿತಿ.

೧೩೩. ರಹಮತ್ ತರೀಕೆರೆ, ದಾರುಣತೆಗಳನ್ನು ಹುಡುಕುವ ಕತೆಗಾರಿಕೆ (ಮಾಯಿಯ ಮುಖಗಳು ಕಥಾ ಸಂಕಲನ ರಾಘವೇಂದ್ರ ಪಾಟೀಲ), ಏಪ್ರಿಲ್ ೧೯೯೯, ಪುಸ್ತಕ ಮಾಹಿತಿ.

೧೩೪. ರಹಮತ್ ತರೀಕೆರೆ, ಮುಟ್ಟಿದರೆ ಮಿಡಿವ ಗೌರ್ಮೆಂಟ್ ಬ್ರಾಹ್ಮಣ (ಆತ್ಮಕತೆ - ಅರವಿಂದ ಮಾಲಗತ್ತಿ), ಪೆಬ್ರವರಿ ೨೬,೧೯೯೫, ಪ್ರಜಾವಾಣಿ.

೧೩೫. ರಹಮತ್ ತರೀಕೆರೆ, ಸಾರ್ವತ್ರಿಕದೆಡೆಗೆ - ಹೊಸ ಕಾವ್ಯಕ್ಕೊಂದು ಹೊಸ ವಿಮರ್ಶನ ದನಿ (ವಿಮರ್ಶೆ : ಸುಮಿತ್ರ ಬಾಯಿ), ಸಂಚಿಕೆ ೮, ಮಾರ್ಚ್-ಏಪ್ರಿಲ್ ೧೯೮೮, ಸಂವಾದ.

೧೩೬. ರಾಘವೇಂದ್ರರಾವ್ ಹೆಚ. ಎಸ್, ಲೋಕ ಜೀವನಕ್ಕೆ ಹಿಡಿದ ಕನ್ನಡಿ (ನಿರಿಂದ್ರಿಯ ಕಾದಂಬರಿ - ಕುಸುಮಾಕರ ದೇವರ ಗೆಣ್ಣೂರ) ಸಂಪುಟ ೧, ಪೆಬ್ರವರಿ ೧೯೯೪, ಪುಸ್ತಕ ಮಾಹಿತಿ.

೧೩೭. ರಾಘವೇಂದ್ರರಾವ್ ಹೆಚ್. ಎಸ್, ಕಡ್ಡಾಯವಾಗಿ ಓದಬೇಕಾದ ಕೃತಿ' (ಉಚಲ್ಯಾ ಆತ್ಮಕತೆ - ಲಕ್ಷ್ಮಣ ಗಾಯಕವಾಡ) ಸಂಪುಟ ೩ ಮೇ ೧೯೯೪, ಪುಸ್ತಕ ಮಾಹಿತಿ.

೧೩೮. ರಾಘವೇಂದ್ರರಾವ್ ಎಚ್. ಎಸ್, ಆಶಯ - ಆಕೃತಿ (ವಿಮರ್ಶಾ ಸಂಕಲನ - ಸಿ. ಎನ್. ರಾಮಚಂದ್ರನ್), ೨೭ ಜೂನ್ ೧೯೯೫, ಪುಸ್ತಕ ಮಾಹಿತಿ.

೧೩೯. ರಾಘವೇಂದ್ರರಾವ್ ಎಚ್. ಎಸ್, ಇಂದುಲೇಖಾ (ಕಾದಂಬರಿ - ಓ ಚಂದು ಮೇನೋನ್) ೨೮ ಜುಲೈ ೧೯೯೫, ಪುಸ್ತಕ ಮಾಹಿತಿ.

೧೪೦. ರಾಘವೇಂದ್ರ ಪಾಟೀಲ, ಶಾಂಗ್ರೀಲಾ (ಕವನ ಸಂಕಲನ- ಬಿ.ಆರ್. ಲಕ್ಷ್ಮಣರಾವ್), ಸಂಚಿಕೆ ೬, ಸೆಪ್ಟೆಂಬರ್-ಅಕ್ಟೋಬರ್ ೧೯೮೭, ಪು. ೬೭, ಸಂವಾದ.

೧೪೧. ರಾಘವೇಂದ್ರ ಪಾಟೀಲ, ರಸ್ತೆಯಂಚಿನ ಗಾಡಿ (ಕವನ ಸಂಕಲನ - ಪ್ರತಿಭಾನಂದ ಕುಮಾರ), ಸಂಚಿಕೆ ೨೬.೨೭, ಮಾರ್ಚ್-ಜೂನ್ ೧೯೯೨, ಪು. ೯೧, ಸಂವಾದ.

೧೪೨. ರಾಘವೇಂದ್ರ ಪಾಟೀಲ, ಮತ್ತೆ ಬರೆದ ಕತೆಗಳು (ಕಥಾ ಸಂಕಲನ-ನೇಮಿಚಂದ್ರ), ಸಂಚಿಕೆ ೨೯-೩೦, ಸೆಪ್ಟೆಂಬರ್-ಡಿಸೆಂಬರ್ ೧೯೯೨, ಪು. ೧೬೯, ಸಂವಾದ.

೧೪೩. ರಾಜೇಂದ್ರ ಚೆನ್ನಿ, ಅನಾದರಣೆಗೊಳಗಾದ ಪುಸ್ತಕ ನಿರಂಜನರ ಮೃತ್ಯುಂಜಯ (ಕಾದಂಬರಿ) ಸಂಚಿಕೆ ೧, ನವಂಬರ್ - ಡಿಸೆಂಬರ್ ೧೯೮೬, ಪು. ೩೮, ಸಂವಾದ.

೧೪೪. ರಾಜಶೇಖರ ಜಿ, ಮಳೆ ಬಿದ್ದ ನೆಲದಲ್ಲಿ (ಕವನ ಸಂಕಲನ - ಎಚ್. ಎಸ್. ಶಿವಪ್ರಕಾಶ), ಸಂಚಿಕೆ ೧೨, ಸಂಪುಟ ೮. ಅಕ್ಟೋಬರ್ ೧೯೮೩, ಶೂದ್ರ.

೧೪೫. ರಾಧಕೃಷ್ಣ ಬಂದಗದ್ದೆ, ಇಕಿರುವಿನಲ್ಲಿ ಕಾಣುವ ಬದುಕಿನ ಅರ್ಥಗಳು (ಇಕಿರು ಚಿತ್ರಕಥೆ ಅನು: ಕೃಷ್ಣಹಾಸನ) ಜನವರಿ - ಪೆಬ್ರವರಿ ೧೯೯೦, ಅನ್ವೇಷಣೆ

೧೪೬. ರಾಮಚಂದ್ರನ್ ಸಿ. ಎನ್, ಮರದೊಳಗಣ ಕಿಚ್ಚು (ವಿಮರ್ಶೆ - ರಹಮತ್ ತರೀಕೆರೆ), ಏಪ್ರಿಲ್ ಮೇ ೧೯೯೭, ಪುಸ್ತಕ ಮಾಹಿತಿ.

೧೪೭. ರಾಮಚಂದ್ರನ್ ಸಿ. ಎನ್, ಬೇಂದ್ರೆ ಕಾವ್ಯಭ್ಯಾಸಕ್ಕೆ ಕೈಪಿಡಿ (ಬೇಂದ್ರೆ ಮತ್ತು ಕನ್ನಡ ಭಾವಗೀತೆದ ಸ್ವರೂಪ ಕೃಷ್ಣಕಟ್ಟಿ), ಭಾನುವಾರ ೧೦ನೇ ಜನವರಿ ೧೯೯೯, ಪ್ರಜಾವಾಣಿ.

೧೪೮. ರಾಮ ಪ್ರಸಾದ್ ಜಿ. ಪಿ, ಪ್ರೇಮ ಮತ್ತು ಸರ್ವಾಧಿಕಾರಿಯ 'ಅಂಧೇರಿನಗರ' (ಕಾದಂಬರಿ - ಅಬ್ದುಲ್ ಮಜೀದ್ ಖಾನ್) ನವೆಂಬರ್-ಡಿಸೆಂಬರ್ ೧೯೮೫, ಅನ್ವೇಷಣೆ

೧೪೯. ರೇಣುಕಾರಾಧ್ಯ ಎಸ್. ಎಸ್, ಸಾಹಿತ್ಯ ಸಂಪರ್ಕ ಕೆಲವು ಅನಿಸಿಕೆಗಳು (ವಿಮರ್ಶಾ ಸಂಕಲನ - ಟಿ.ಪಿ. ಅಶೋಕ್) ಡಿಸೆಂಬರ್ ೧೯೮೭, ಜನವರಿ, ೮೮, ಅನ್ವೇಷಣೆ

೧೫೦. ರೇಣುಕಾರಾಧ್ಯ ಎನ್. ಎಸ್, ಒಂದು ಕಥಾನಕದ ಮೂಲಕ (ಕಾದಂಬರಿ - ಸತ್ಯನಾರಾಯಣ) ಮೇ-ಜೂನ್ ೮೯, ಅನ್ವೇಷಣೆ

೧೫೧. ಲಕ್ಷ್ಮೀಶ ತೋಳ್ಪಾಡಿ, ಗಮನ (ವಿಮರ್ಶೆ -ಡಿ.ಎಸ್. ನಾಗಭೂಷಣ) ಸಂಚಿಕೆ ಮಾರ್ಚ್-ಜೂನ್ ೧೯೯೨, ಪು. ೮೬, ಸಂವಾದ.

೧೫೨. ಲಕ್ಷ್ಮಿದೇವಿ. ಎಲ್, ಎರಡು ರೂಪಾಯಿ (ಕಥಾ ಸಂಕಲನ ವಿಜಯಶ್ರೀ) ೨೬ ಮೇ ೧೯೯೫, ಪುಸ್ತಕ ಮಾಹಿತಿ.

೧೫೩. ವಸಂತ .ಅ. ಕುಲಕರ್ಣಿ, ವೈಜ್ಞಾನಿಕ ಪ್ರಗತಿಯ ಖಡಾಖಂಡಿತ ಅವಲೋಕನ, (ವಿಜ್ಞಾನ ಮತ್ತು ತಂತ್ರಜ್ಞಾನ ಲೇ: ಜೆ.ಆರ್. ಲಕ್ಷ್ಮಣರಾವ್, ಎಂ.ಎ. ಸೇತುರಾವ್) ೧೫ನೇ ಅಕ್ಟೋಬರ್ ೨೦೦೦, ಪ್ರಜಾವಾಣಿ.

೧೫೪. ವಿಜಯ ಸುಬ್ಬರಾಜ, ಪ್ರಾದೇಶಿಕತೆಯ ದಟ್ಟ ಅನುಭವಗಳ ನಿರೂಪಣೆ (ಕಾತ್ರಾಳ ರತ್ನಿಯ ಚಾದಂಗಡಿ - ಕಾದಂಬರಿ- ದು. ನಿಂ. ಬೆಳಗಲಿ), ೧೬ನೇ ಜನವರಿ ೨೦೦೦, ಪ್ರಜಾವಾಣಿ.

೧೫೫. ವಿಜಯಶಂಕರ ಎಸ್. ಆರ್, ಪರಂಪರಾಗತ ಉಪಮೆ, ವರದಿ ರೂಪದ ಕವನಗಳು (ಅವ್ವ ಕವನ ಸಂಕಲನ - ಸರಜೂ ಕಾಟ್ಕರ್), ೫ನೇ ಮೇ ೨೦೦೨, ಪ್ರಜಾವಾಣಿ.

೧೫೬. ವಿಜಯಶಂಕರ ಎಸ್. ಆರ್, ಐದು ಸಮಾಜವಾದಿ ನಾಟಕಗಳು (ಚನ್ನಣ್ಣ ವಾಲಿಕಾರ), ಜುಲೈ-ಆಗಸ್ಟ್ ೧೯೯೨, ಸಂಚಿಕೆ ೨೮. ಪು. ೬೯, ಸಂವಾದ.

೧೫೭. ವಿಠಲರಾವ್ ಗಾಯಕ್ವಾಡ್, ಪ್ರತಿಜ್ಞೆ (ಕಾದಂಬರಿ-ನಳಿನ ಮೂರ್ತಿ) ಸಂಪುಟ ೩ ಡಿಸೆಂಬರ್ ೧೯೯೪, ಪುಸ್ತಕ ಮಾಹಿತಿ.

೧೫೮. ವೀರೇಶ ಬಡಿಗೇರ, ಬಿಸಿಲುಪುರ (ಕಾದಂಬರಿ - ಬಾಳಾಸಾಹೇಬ ಲೋಕಾಪುರ), ಆಗಸ್ಟ್ ೧೯೯೬, ಪುಸ್ತಕ ಮಾಹಿತಿ.

೧೫೯. ವಿಶ್ವೇಶ್ವರ ಸಿ, ಎರಡು ಕವನ ಸಂಗ್ರಹಗಳು

೧. ನಾವು ಹುಡುಗಿಯರೇ ಹೀಗೆ - ವಿ.ಆರ್. ಪ್ರತಿಭಾ,

೨. ವೀರಹೋತ್ಸವ - ಹೇಮ

ಸಂಚಿಕೆ ೪೫, ಅಕ್ಟೋಬರ್ ೮೩, ಪು. ೬೮, ಸಾಕ್ಷಿ.

೧೬೦. ವೆಂಕಟೇಶ ಸಿ, ದಲಿತ ಸಾಹಿತ್ಯ ಪ್ರವೇಶಿಕೆ (ಲೇಖನ ಸಂಕಲನ - ಅರವಿಂದ ಮಾಲಗತ್ತಿ) ಜನವರಿ ಪೆಬ್ರವರಿ ೧೯೯೮, ಪುಸ್ತಕ ಮಾಹಿತಿ.

೧೬೧. ವೆಂಕಟೇಶ ಸಿ, ಯಡೆಕುಂಟೆ ಗೆಣೆಸಾಲು (ಲೇಖನ ಸಂಕಲನ - ಎಸ್. ಜಿ. ಸಿದ್ದರಾಮಯ್ಯ) ಮಾರ್ಚ ೧೯೯೮, ಪುಸ್ತಕ ಮಾಹಿತಿ.

೧೬೨. ವೆಂಕಟೇಶ ಮೂರ್ತಿ ಹೆಚ್. ಟಿ, ಸುಮಶೈಲ (ಕವನ ಸಂಕಲನ - ಉ. ಶಾ. ಬಸವಣ್ಣೆಪ್ಪ) ಜೂನ್ ೧೯೯೯, ಪುಸ್ತಕ ಮಾಹಿತಿ.

೧೬೩. ವೆಂಕಟೇಶಮೂರ್ತಿ ಎಚ್. ಎಸ್, ಬೇತಾಳರಾಯ (ಕಥಾ ಸಂಕಲನ ಟಿ.ಎನ್. ಕೃಷ್ಣರಾಜು), ಸೆಪ್ಟಂಬರ್ ೧೯೮೧, ಸಂಚಿಕೆ ೪೩, ಪು. ೬೩, ಸಾಕ್ಷಿ.

೧೬೪. ವೆಂಕಟಸುಬ್ಬಯ್ಯ ಜಿ, ಹುಯಿಲಗೋಳರ ಸಮಗ್ರ ಮಾಹಿತಿ (ಲೇ ಡಾ. ಜಿ. ವಿ. ಜೋಶಿ) ಭಾನುವಾರ ೩೧ನೇ ಅಕ್ಟೋಬರ್ ೧೯೯೯, ಪ್ರಜಾವಾಣಿ.

೧೬೫. ವೆಂಕಟಸುಬ್ಬಯ್ಯ ಜಿ, ಪರಿಸರಾಸಕ್ತರಿಗೆ ಉಪಯುಕ್ತ ನಿಘಂಟು (ಪರಿಸರ ನಿಘಂಟು ಸಂ: ಟಿ. ಎನ್. ವಿವೇಕಾನಂದ) ಭಾನುವಾರ ೫ನೇ ಡಿಸೆಂಬರ್ ೧೯೯೯, ಪ್ರಜಾವಾಣಿ.

೧೬೬. ವೆಂಕಟಸುಬ್ಬಯ್ಯ ಜಿ, ಅಗತ್ಯವಾಗಿದ್ದ ಶಬ್ದಾರ್ಥ ವಿವರಣೆಯ ರಚನೆ (ವೀರಶೈವ ಪಾರಿಭಾಷಿಕ ಪದಕೋಶ - ಸಂ - ಎಸ್. ವಿದ್ಯಾಶಂಕರ), ೭ನೇ ಅಕ್ಟೋಬರ್ ೨೦೦೦, ಪ್ರಜಾವಾಣಿ.

೧೬೭. ವೇಣುಗೋಪಾಲ ರಾವ್ ಎ. ಎಸ್, ದಲಿತ ಪ್ರಜ್ಞೆ ಚಿಂತನೆಯ ಭಿನ್ನ ಆಯಾಮಗಳು (ವಿಮರ್ಶೆ - ಅರವಿಂದ ಮಾಲಗತ್ತಿ) ೧೯ನೇ ಆಗಸ್ಟ್ ೧೯೯೮, ಪ್ರಜಾವಾಣಿ.

೧೬೮. ಶಿವಕುಮಾರ ಕೆ, ಬಿಳಿಯ ಹೂಗಳ ಭವಿಷ್ಯ ..... (ಕವನ ಸಂಕಲನ - ಕಂನಾಡಿಗ ನಾರಾಯಣ) ಮೇ ೧೯೯೬, ಪುಸ್ತಕ ಮಾಹಿತಿ.

೧೬೯. ಶಿವರಾಮ ಕಾಡನಕುಪ್ಪೆ, ಸಂವೇದನಾಶೀಲ ವ್ಯಕ್ತಿತ್ವದ ಸಾಕಾರ (ಮುಟ್ಟಿಸಿಕೊಂಡವರು (ಬಿ. ಎಂ. ತಿಪ್ಪೇಸ್ವಾಮಿ ನೆನಪಿನ ಪುಸ್ತಕ) ಸಂ: ಪ್ರೊ ಬಿ. ವಿ. ವೀರಭದ್ರಪ್ಪ ಮತ್ತು ಬಿ. ಟಿ. ಜಾಹ್ನವಿ) ಭಾನುವಾರ ೧೯ನೇ ಡಿಸೆಂಬರ್ ೧೯೯೯, ಪ್ರಜಾವಾಣಿ.

೧೭೦. ಶಿವಾರೆಡ್ಡಿ ಕೆ. ಸಿ, ನದಿಯ ನೀರಿನ ತೇವ (ಕವನ ಸಂಕಲನ -ಮಮತಾ ಜಿ. ಸಾಗರ) ಜನವರಿ ೧೯೯೯, ಪುಸ್ತಕ ಮಾಹಿತಿ.

೧೭೧. ಶೇಷ ಶಾಸ್ತ್ರಿ ಆರ್, ಸಂಶೋದನಾ ರಂಗಕ್ಕೆ ಹೊಸ ಚೈತನ್ಯ; ಜೈನ ಧರ್ಮದ ಬಹುಮುಖ ಪರಿಚಯ (ಚಂದ್ರ ಕೊಡೆ ಸಂಶೋಧನಾ ಲೇಖನಗಳ ಸಂಗ್ರಹ ಲೇ : ಹಂಪನಾಗರಾಜಯ್ಯ), ೨೩ ನೇ ಮೇ ೧೯೯೯, ಪ್ರಜಾವಾಣಿ.

೧೭೨. ಶೈಲೇಂದ್ರ ಬಂದಗದ್ದೆ, ಹರೆಯದ ಉತ್ಸಾಹ ಓಕುಳಿ (ಓಕುಳಿ ಕವನ ಸಂಕಲನ ಹೆಚ್. ಎನ್. ಆರತಿ) ೩೬ ಜನವರಿ - ಪೆಬ್ರವರಿ ೧೯೯೦, ಅನ್ವೇಷಣೆ

೧೭೩. ಶೈಲಜ ಇಂ. ಹಿರೇಮಠ, ಪಾಪನಾಶಿನಿ (ಕವನ ಸಂಕಲನ - ಹಾ. ಮ. ಕನಕ) ಏಪ್ರಿಲ್ ೧೯೯೮, ಪುಸ್ತಕ ಮಾಹಿತಿ.

೧೭೪. ಶ್ರೀನಿವಾಸ ಪ್ರಸಾದ್, ವಾಸನಾಮಯ ಬದುಕಿನ ಆಚೆ ಈಚೆ (ಕಥಾ ಸಂಕಲನ ಕಾ.ತ. ಚಿಕ್ಕಣ್ಣ), ಸೆಪ್ಟೆಂಬರ್ - ಅಕ್ಟೋಬರ್ ೧೯೮೮, ಪು. ೭೫, ಸಂವಾದ.

೧೭೫. ಶ್ರೀಧರರಾವ್ ಪಿಸ್ಸೆ, ಅಗ್ರಹಾರದ ಒಂದು ಸಂಜೆ (ಕವನ ಸಂಕಲನ - ಆರ್. ಮೋಹನ ನಾಗಮ್ಮ) ಮಾರ್ಚ ೧೯೯೭, ಪುಸ್ತಕ ಮಾಹಿತಿ.

೧೭೬. ಶ್ಯಾಮಸುಂದರ ಬಿದರಕುಂದಿ, ಲಿಂಕನ್ ಭಾವಕೋಶದ ಕವಿತೆಗಳು (ಅನು : ಬಿ. ಎ. ಸನದಿ), ಭಾನುವಾರ ೧೫ನೇ ಆಗಸ್ಟ್ ೧೯೯೯, ಪ್ರಜಾವಾಣಿ

೧೭೭. ಶ್ಯಾಮಸುಂದರ ಬಿದಿರಕುಂದಿ, ಸಹೃದಯತೆಯ ವ್ಯಕ್ತಿ ಚಿತ್ರ : ಕವಿ ಬಿಡಿಸಿದ ಜೀವನ

೧) ನೆನೆದವರು ಮನದಲ್ಲಿ (ವ್ಯಕ್ತಿ ಚಿತ್ರಗಳು) - ಎಚ್. ಕೆ. ರಂಗನಾಥ

೨) ಇವರು ನನ್ನವರು (ವ್ಯಕ್ತಿ ಚಿತ್ರಗಳು) - ವೀಚಿ.

ಭಾನುವಾರ ೧೯ ನೇ ಸೆಪ್ಟೆಂಬರ್ ೧೯೯೯, ಪ್ರಜಾವಾಣಿ.

೧೭೮. ಸತ್ಯನಾರಾಯಣ ಕೆ, ಎರಡು ದಶಕದ ಕತೆಗಳು (ಕಥಾ ಸಂಕಲನ - ಯು.ಆರ್. ಅನಂತಮೂರ್ತಿ) ಸಂಚಿಕೆ ೪೩, ಸೆಪ್ಟಂಬರ್ ೧೯೮೧, ಪು. ೭೬, ಸಾಕ್ಷಿ.

೧೭೯. ಸತ್ಯನಾರಾಯಣರಾವ್ ಅಣತಿ, ತುಂತರ ಹನಿಗಳು (ಮಿನಿ ಕವನಗಳು-ಶೈಲಜಾ ಉಡಚಣ), ಸಂಚಿಕೆ ೨೯-೩೦ ಸೆಪ್ಟೆಂಬರ್-ಡಿಸೆಂಬರ್ ೧೯೯೨, ಪು. ೧೯೧, ಸಂವಾದ.

೧೮೦. ಸೀತಾರಾಮಯ್ಯ ವೀ, ಹರಿಜನ್ವಾರ (ನಾಟಕ - ಶ್ರೀರಂಗ), ಸಂಪುಟ-೧೭, ಸಂಚಿಕೆ ೧, ವಿನಾಯಕ ಸಂಚಿಕೆ ೬೩, ೧೯೩೫, ಪು. ೯೩, ಪ್ರಬುದ್ಧ ಕರ್ನಾಟಕ

೧೮೧. ಸೀತಾರಾಮಯ್ಯ ವೀ, ವಿರಹಿಣಿ (ಕವನ ಸಂಕಲನ - ಆನಂದಕಂದ), ಪು ೧-೨, ಪ್ರಬುದ್ಧ ಕರ್ನಾಟಕ.

೧೮೨. ಸೀತಾರಾಮಯ್ಯ ವೀ, ಕಂಕಣ (ಕವನ ಸಂಕಲನ - ಹೊಯ್ಸಳ), ಸಂಪುಟ - ೧೭, ಸಂಚಿಕೆ ೧, ಪು ೧೦೪, ಪ್ರಬುದ್ಧ ಕರ್ನಾಟಕ.

೧೮೩. ಸೀತಾರಾಮಯ್ಯ ವೀ, ನಲ್ಮೆ (ಕವನ ಸಂಕಲನ - ಕಡ್ಲೆಂಗೋಡ್ಲು ಶಂಕರಭಟ್ಟ) ೧೯೩೨, ಸಂಪುಟ ೧೪, ಸಂಚಿಕೆ ೧, ಆಂಗಿರಸ ಸಂವತ್ಸರ ೫೧, ಪು ೧೫, ಪ್ರಬುದ್ಧ ಕರ್ನಾಟಕ.

೧೮೪. ಸೀತಾರಾಮಯ್ಯ ವೀ, ನಮ್ಮ ಹಳ್ಳಿಗಳು (ಎ. ಶೇಷಯ್ಯಂಗಾರ್),ಸಂಪುಟ ೧೮, ಸಂಚಿಕೆ ೪, ಕಾಮನ ಸಂಚಿಕೆ, ೧೯೩೭, ಪು ೧೧೯, ಪ್ರಬುದ್ಧ ಕರ್ನಾಟಕ.

೧೮೫. ಸುಧೀಂದ್ರ ನಾ, ಬರ ಸಂಕಲನ (ಕವನ ಸಂಕಲನ - ಸಂ : ಸಿ.ಶಿವಲಿಂಗಪ್ಪ), ಸೆಪ್ಟಂಬರ್ - ಅಕ್ಟೋಬರ್ - ೧೯೮೮, ಪು. ೭೮, ಸಂವಾದ.

೧೮೬. ಸುಧಾಕರ, ಬನಿ ತನಿಯಲ್ಲಿ ಬಿಚ್ಚಿಕೊಳ್ಳುವ 'ಮುಂಜಾವು' (ಕಾದಂಬರಿ - ಕಾ. ತ. ಚಿಕ್ಕಣ್ಣ) ನವೆಂಬರ್ - ಡಿಸೆಂಬರ್ ೧೯೮೯, ಅನ್ವೇಷಣೆ

೧೮೭. ಸುಬ್ಬಣ್ಣ ರೈ, ಹಾಜಿರಜ್ಜಿಯ ಅಲಿಕತ್ತು (ಕವನ ಸಂಕಲನ - ಹಮೀದ್ ಮಂಜೇಶ್ವರ) ಡಿಸೆಂಬರ್ ೧೯೯೮, ಪುಸ್ತಕ ಮಾಹಿತಿ.

೧೮೮. ಸುಮತೀಂದ್ರ ನಾಡಿಗ, ಬೇಂದ್ರೆಯವರ ನೃತ್ಯಯಜ್ಞ (ಕವನ ಸಂಕಲನ - ಬೇಂದ್ರೆ), ಸಂಚಿಕೆ ೪೪, ಡಿಸೆಂಬರ್, ೧೯೮೧, ಪು. ೫೭, ಸಾಕ್ಷಿ.

೧೮೯. ಸುಮಿತ್ರಾಬಾಯಿ ಬಿ. ಎನ್, ಬಂಡಾಯದ ಆಶಯ : ದಲಿತ ಮಹಿಳೆಯ ಒಳತೋಟಿ (ದಂಗೆ ಕಾದಂಬರಿ - ಗೀತಾ ನಾಗಭೂಷಣ), ಭಾನುವಾರ ೧೯ನೇ ಸೆಪ್ಟೆಂಬರ್ ೧೯೯೯, ಪ್ರಜಾವಾಣಿ.

೧೯೦. ಸೈಯದ್ ಜಮೀರುಲ್ಲಾ ಷರೀಫ, ಇನ್ನೊಬ್ಬಳು ಶಕುಂತಲೆ : ಪಕ್ವ ಭಾವನೆಗಳ ಪುಷ್ಪಗಳು (ಕವನ ಸಂಕಲನ - ಕೆ. ಎಂ. ಮುನಿ ಕೃಷ್ಣಪ್ಪ), ಮೇ - ಜೂನ್ ೧೯೯೦, ಅನ್ವೇಷಣೆ

೧೯೧. ಸೈಯದ್ ಜಮೀರುಲ್ಲಾ ಷರೀಫ್, ಪುಟ್ಟ ಗುಲಾಬಿ : ಸವೆದವಸ್ತುವಿಗೆ ಕಲಾತ್ಮಕತೆಯ ಕವಚ (ಕಥಾಸಂಕಲನ ಆರ್.ಡಿ. ಹೆಗಡೆ), ಮಾರ್ಚ್ - ಏಪ್ರಿಲ್ ೧೯೯೧, ಅನ್ವೇಷಣೆ

೧೯೨. ಸೈಯದ್ ಜಮೀರುಲ್ಲಾ ಷರೀಫ್, 'ಕವಿ ಮತ್ತು ಕರವಸ್ತ್ರ', ಪರಿಣಾಮಕಾರಿ ಪ್ರಯತ್ನ (ಕವನ ಸಂಕಲನ : ಕುಮಾರ ಜೋಶಿ) ಮೇ-ಜೂನ್ ೧೯೯೧, ಅನ್ವೇಷಣೆ

೧೯೩. ಹೆಗಡೆ ಆರ್. ಡಿ, 'ಅಕಡೆಮಿಕ್ ಓದಿನ ಜಾಡಿನಲ್ಲಿ ಆಧುನೀಕರಣ (ಶಿವರಾಮ ಕಾರಂತರ ಕಾದಂಬರಿಗಳಲ್ಲಿ ಆಧುನೀಕರಣ ಪ್ರಕ್ರಿಯೆ : ಲೇ ಟಿ.ಪಿ. ಅಶೋಕ), ಜನವರಿ - ಪೆಬ್ರವರಿ ೧೯೯೧, ಅನ್ವೇಷಣೆ

೧೯೪. ಹೆಗಡೆ ಆರ್. ಡಿ, 'ತುಂಗೆಯಲ್ಲಿ ಹೆಣ' ಭಿನ್ನ ಶೈಲಿಯ ಕಾವ್ಯ ಆದರೆ ... (ಕವನ ಸಂಕಲನ ಜಿ.ಪಿ. ಬಸವರಾಜು) ನವೆಂಬರ್ - ಡಿಸೆಂಬರ್ ೧೯೯೧, ಅನ್ವೇಷಣೆ

<u>ಆ.</u> <u>ಪೂರಕ ಸಾಹಿತ್ಯ</u>

ಪರಾಮರ್ಶನ ಕೃತಿಗಳು

೧. ಅನಂತಮೂರ್ತಿ.ಯು. ಆರ್, ಪ್ರಜ್ಞೆ ಮತ್ತು ಪರಿಸರ, ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೨

೨. ಅನಂತಮೂರ್ತಿ.ಯು. ಆರ್, ಬೆತ್ತಲೆ ಪೂಜೆ ಯಾಕೆ ಕೂಡದು?, ಅಕ್ಷರ ಪ್ರಕಾಶನ ಹೆಗ್ಗೋಡು ೧೯೯೬.

೩. ಅನಂತಮೂರ್ತಿ.ಯು.ಆರ್, ಆಯ್ದ ಲೇಖನಗಳು-ಅಕ್ಷರ ಪ್ರಕಾಶನ ಹೆಗ್ಗೋಡು, ೧೯೯೫.

೪. ಅನಂತಮೂರ್ತಿ.ಯು.ಆರ್, ನವ್ಯಲೋಕ (ಮುನ್ನುಡಿ-ಲೇಖನಗಳು), ಅಕ್ಷರ ಪ್ರಕಾಶನ ಹೆಗ್ಗೋಡು ೧೯೯೭.

೫. ಅವದಾನಿ.ಜಿ.ಎಸ್, ಸಂ: ಸಾಹಿತ್ಯ ವಿಮರ್ಶೆ ೧೯೯೧, ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು ೧೯೯೨.

೬. ಅಶೋಕ.ಟಿ.ಪಿ, ಸಂ: ಸಾಹಿತ್ಯ ವಿಮರ್ಶೆ ೧೯೮೩, ಸಾಹಿತ್ಯ ಅಕಾಡೆಮಿ ಬೆಂಗಳೂರು ೧೯೮೪.

೭. ಅಶೋಕ.ಟಿ.ಪಿ, ಪುಸ್ತಕ ಪ್ರೀತಿ, ಅಕ್ಷರ ಪ್ರಕಾಶನ ಹೆಗ್ಗೋಡು ೧೯೯೩.

೮. ಅಶೋಕ.ಟಿ.ಪಿ, ಸಾಹಿತ್ಯ ಸಂಪರ್ಕ, ಅಕ್ಷರ ಪ್ರಕಾಶನ ಹೆಗ್ಗೋಡು ೧೯೮೬.

೯. ಆಮೂರ.ಜಿ.ಎಸ್, ವ್ಯವಸಾಯ, ಸ್ನೇಹ ಪ್ರಕಾಶನ ಬೆಂಗಳೂರು ೧೯೯೨.

೧೦. ಆಮೂರ. ಜಿ.ಎಸ್, ಕನ್ನಡ ಕಥನ ಸಾಹಿತ್ಯ, ಕಾದಂಬರಿ, ಶ್ರೀ ಹರಿ ಪ್ರಕಾಶನ ಧಾರವಾಡ ೧೯೯೪.

೧೧. ಆಮೂರ. ಜಿ.ಎಸ್, ದತ್ತಾತ್ರೇಯ ರಾಮಚಂದ್ರ ಬೇಂದ್ರೆ, ಸಾಹಿತ್ಯ ಅಕಾಡೆಮಿ ನವದೆಹಲಿ ೧೯೯೪.

೧೨. ಆಮೂರ.ಜಿ.ಎಸ್, ಸ್ವಾತಿಕ ಪಥ, ಪ್ರಿಯದರ್ಶಿನಿ ಪ್ರಕಾಶನ ಬೆಂಗಳೂರು ೧೯೯೬.

೧೩. ಆಮೂರ ಜಿ.ಎಸ್, ಕೃತಿ ಪರೀಕ್ಷೆ, ಸಮಾಜ ಪುಸ್ತಕಾಲಯ ಧಾರವಾಡ ೧೯೯೭.

೧೪. ಆರ್ಕೆ ಮಣಿಪಾಲ, ಸಾಹಿತ್ಯ : ಆಶಯ ಮತ್ತು ವಿನ್ಯಾಸ, ಸಂಕ್ರಮಣ ಪ್ರಕಾಶನ, ಧಾರವಾಡ ೧೯೮೮.

೧೫. ಆರ್ಕೆ ಮಣಿಪಾಲ, ಲೋಕಗ್ರಹಿಕೆ ಮತ್ತು ಅಭಿವ್ಯಕ್ತಿ, ಸಂಕ್ರಮಣ ಪ್ರಕಾಶನ ಧಾರವಾಡ ೧೯೯೫.

೧೬. ಆರ್ಕೆ ಮಣಿಪಾಲ, ವಾಸ್ತವ, ಯುವಕರ ಸಂಘ ರಾಮನಗರ, ಬಳ್ಳಾರಿ, ೧೯೮೪.

೧೭. ಆರ್ಕೆ ಮಣಿಪಾಲ, ಸಾಹಿತ್ಯ ಪ್ರಕ್ರಿಯೆ, ನವ ಕರ್ನಾಟಕ ಪ್ರಕಾಶನ ಬೆಂಗಳೂರು ೧೯೯೫.

೧೮. ಕೀರ್ತಿನಾಥ ಕುರ್ತಕೋಟಿ, ನವ್ಯಕಾವ್ಯ ಪ್ರಯೋಗ, ಮನೋಹರ ಗ್ರಂಥಮಾಲ, ಧಾರವಾಡ ೧೯೭೫.

೧೯. ಕೀರ್ತಿನಾಥ ಕುರ್ತಕೋಟಿ, ಯುಗಧರ್ಮ ಮತ್ತು ಸಾಹಿತ್ಯದರ್ಶನ, ಮನೋಹರ ಗ್ರಂಥಮಾಲ, ಧಾರವಾಡ, ೧೯೯೧.

೨೦. ಕೀರ್ತಿನಾಥ ಕುರ್ತಕೋಟಿ, ಸಾಹಿತ್ಯ ಮತ್ತು ಸಾಹಿತ್ಯಪ್ರಜ್ಞೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ. ೧೯೯೦.

೨೧. ಕೀರ್ತಿನಾಥ ಕುರ್ತಕೋಟಿ, ಕನ್ನಡ ಸಾಹಿತ್ಯ ಸಂಗಾತಿ, ಪ್ರಸಾರಾಂಗ ಕನ್ನಡ ವಿ.ವಿ. ೧೯೯೫.

೨೨. ಕುವೆಂಪು, ತಪೋನಂದನ, ಉದಯ ರವಿ ಪ್ರಕಾಶನ ಮೈಸೂರ, ೧೯೮೮.

೨೩. ಕುವೆಂಪು, ಕಾವ್ಯ ವಿಹಾರ, ಉದಯ ರವಿ, ಪ್ರಕಾಶನ ಮೈಸೂರ, ೧೯೯೨.

೨೪. ಕೃಷ್ಣಮೂರ್ತಿ ಕಿತ್ತೂರ, ವಿಮರ್ಶೆಯ ವ್ಯಾಪ್ತಿ, ಸಾಹಿತ್ಯ ಭಂಡಾರ ಹುಬ್ಬಳಿ, ೧೯೭೨.

೨೫. ಕೃಷ್ಣ ಕುಮಾರ.ಸಿ.ಪಿ, ಸಾಹಿತ್ಯ ವಿಮರ್ಶೆ ೧೯೮೦, ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೩.

೨೬. ಕೇಶವಶರ್ಮ. ಕೆ, ವಿಮರ್ಶೆಯ ಗತಿ, ಜನವಾದಿ ಪ್ರಕಾಶನ ಗುಂಡ್ಮಿ, ೧೯೯೦.

೨೭. ಕೇಶವಶರ್ಮ. ಕೆ, ಕ್ರಿಯೆ - ಪ್ರತಿಕ್ರಿಯೆ, ಅನ್ವೇಷಣೆ ಪ್ರಕಾಶನ ಬೆಂಗಳೂರು, ೧೯೯೨.

೨೮. ಕೇಶವಶರ್ಮ. ಕೆ, ಶಬ್ದರೇಖೆ, ಅಭಿನವ ಪ್ರಕಾಶ ಬೆಂಗಳೂರು, ೧೯೯೮.

೨೯. ಗಿರಡ್ಡಿ ಗೋವಿಂದರಾಜ, ಸಾತತ್ಯ, ಸ್ನೇಹ ಪ್ರಾಶನ ಬೆಂಗಳೂರು, ೧೯೯೨.

೩೦. ಗಿರಡ್ಡಿ ಗೋವಿಂದರಾಜ, ಕಾದಂಬರಿ: ವಸ್ತು ಮತ್ತು ತಂತ್ರ, ಸ್ನೇಹ ಪ್ರಕಾಶನ, ೧೯೮೭

೩೧. ಗೋಕಾಕ. ವಿ. ಕೃ, ಸಂ:- ವಿಮರ್ಶಾ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ, ಐ.ಬಿ.ಎಚ್. ಪ್ರಕಾಶನ, ೧೯೮೦.

೩೨. ಗೋಪಾಲಕೃಷ್ಣ ಅಡಿಗ, ಸಮಗ್ರ ಗದ್ಯ ಸಂಪುಟ ೧, ಸಾಕ್ಷಿ ಪ್ರಕಾಶನ ಬೆಂಗಳೂರು, ೧೯೭೭.

೩೩. ಗೋಪಾಲಕೃಷ್ಣಯ್ಯ. ಕೆ.ಎಲ್, ಸಾಹಿತ್ಯ ಸಂವಾದ, ವಿಶ್ರಾಂತ ಪ್ರಕಾಶನ ಬೆಂಗಳೂರು, ೧೯೯೩.

೩೪. ಗೌರೀಶ ಕಾಯ್ಕಿಣಿ, ವಿಮರ್ಶೆಗೆ ಯಾವದಾರಿ?, ವಿ. ಸೀ. ಸಂಪದ, ಬೆಂಗಳೂರು, ೧೯೯೪.
೩೫. ಗೌರೀಶ ಕಾಯ್ಕಿಣಿ, ಕಟಾಕ್ಷ, ಶ್ರೀ ರಾಘವೇಂದ್ರ ಪ್ರಕಾಶನ ಅಂಕೋಲ, ೧೯೮೧.
೩೬. ಚಂದ್ರಶೇಖರ ನಂಗಲಿ, ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯದಲ್ಲಿ ಮಾರ್ಕ್ಸವಾದಿ ವಿಮರ್ಶೆ, ವೈಶಾಖ ಪ್ರಕಾಶನ, ಬೆಂಗಳೂರು, ೧೯೯೫.
೩೭. ಚಂದ್ರಶೇಖರ ಪಾಟೀಲ, ಸಾಹಿತ್ಯ ಸೃಷ್ಟಿ, ಸಾಹಿತ್ಯ ವಿಮರ್ಶೆ, ಸಂಕ್ರಮಣ ಪ್ರಕಾಶನ, ೧೯೯೨.
೩೮. ಚಂದ್ರಶೇಖರ ಪಾಟೀಲ, ಸಮಕಾಲೀನ ಸಾಂಸ್ಕೃತಿಕ ಚರ್ಚೆಗಳು, ಸಂಕ್ರಮಣ ಪ್ರಕಾಶನ, ೧೯೯೪.
೩೯. ಚಂದ್ರಶೇಖರ ಪಾಟೀಲ, ಸಂ: ಸಂಕ್ರಮಣ ಸಾಹಿತ್ಯ ಸಂ. ೧, ಸಂಕ್ರಮಣ ಪ್ರಕಾಶನ ಧಾರವಾಡ, ೧೯೯೩.
೪೦. ಚಂದ್ರಿಕಾ. ಪಿ, ಸಂ: ಯಾರ ಜಪ್ತಿಗೂ ಸಿಗದ ನವಿಲುಗಳು, ಅಭಿನವ ಪ್ರಕಾಶನ, ಬೆಂಗಳೂರು, ೨೦೦೦.
೪೧. ತಿರುಮಲೇಶ. ಕೆ.ವಿ. ಸಮ್ಮುಖ -
೪೨. ತೇಜಸ್ವಿನಿ ನಿರಂಜನ, ಸೀಮಂತಿನಿ ನಿರಂಜನ, ಸಂ: ಸ್ತ್ರೀವಾದಿ ಸಾಹಿತ್ಯ ವಿಮರ್ಶೆ, ಕನ್ನಡ ಸಂಘ ಕ್ರೈಸ್ಟ ಕಾಲೇಜು. ಬೆಂಗಳೂರು.
೪೩. ದುರ್ಗದಾಸ್ ಕೆ.ಆರ್, ಅನುಸಂಧಾನದ ಹೊಸಹಾದಿ, ಸಮತಾ ಪ್ರಕಾಶನ ಧಾರವಾಡ, ೨೦೦೦.
೪೩. ನರಹಳ್ಳಿ ಬಾಲಸುಬ್ರಹ್ಮಣ್ಯ, ಇಹದ ಪರಿಮಳದ ಹಾದಿ, ಬಿ.ಪಿ. ಪ್ರಕಾಶನ ಬೆಂಗಳೂರು, ೧೯೯೫.
೪೪. ನರಹಳ್ಳಿ ಬಾಲಸುಬ್ರಹ್ಮಣ್ಯ, ಸಾಹಿತ್ಯ ಸಂಸ್ಕೃತಿ, ಅಂಕಿತ ಪುಸ್ತಕ ಬೆಂಗಳೂರು, ೧೯೯೮.
೪೫. ನಾಗಭೂಷಣ. ಡಿ.ಎಸ್, ಗಮನ, ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ೧೯೯೦.
೪೬. ನಾಗರಾಜ. ಡಿ. ಆರ್, ಅಮೃತ ಮತ್ತು ಗರುಡ, ಅಕ್ಷರ ಪ್ರಕಾಶನ, ಹೆಗ್ಗೋಡು ೧೯೯೮.
೪೭. ನಾಗರಾಜ. ಡಿ. ಆರ್, ಸಾಹಿತ್ಯ ಕಥನ, ಅಕ್ಷರ ಪ್ರಕಾಶನ, ಹೆಗ್ಗೋಡು, ೧೯೯೬.
ನಾಗರಾಜ. ಡಿ. ಆರ್, ಶಕ್ತಿ ಶಾರದೆಯ ಮೇಳ, ಅಕ್ಷರ ಪ್ರಕಾಶನ ಹೆಗ್ಗೋಡು
೪೮. ನಾಗರಾಜಪ್ಪ. ಕೆ.ಜಿ, ಇಕ್ಕಟ್ಟು - ಬಿಕಟ್ಟು, ಅನಿಕೇತನ ಸಾಹಿತ್ಯ ಸಾಂಸ್ಕೃತಿಕ ಸಂಶೋಧನಾ ಕೇಂದ್ರ, ತುಮಕೂರು, ೧೯೯೮.
೪೯. ನಾಗರಾಜ. ಆರ್, ಅನು: ಟಿ.ಎಸ್. ಎಲಿಯಟ್ ವಿಮರ್ಶೆ, ಗೀತಾ ಬುಕ್ ಹೌಸ್, ಮೈಸೂರ ೧೯೬೯.
೫೦. ನಾಗಭೂಷಣ ಸ್ವಾಮಿ ಓ.ಎಲ್, ವಿಮರ್ಶೆಯ ಪರಿಭಾಷೆ, ಅಂಕಿತ ಪುಸ್ತಕ, ಬೆಂಗಳೂರು, ೧೯೯೮
೫೧. ನಾಯಕ. ಜಿ.ಎಚ್, ನಿರಪೇಕ್ಷ, ಅಕ್ಷರ ಪ್ರಕಾಶನ ಹೆಗ್ಗೋಡು, ೧೯೮೪.
೫೨. ನಾಯಕ. ಜಿ.ಎಚ್, ಅನಿವಾರ್ಯ, ಅಕ್ಷರ ಪ್ರಕಾಶನ ಹೆಗ್ಗೋಡು, ೧೯೮೦.
೫೩. ನಾಯಕ. ಜಿ.ಎಚ್, ಸಂ: ಶತಮಾನ ಕನ್ನಡ ಸಾಹಿತ್ಯ, ರಾಘವೇಂದ್ರ ಪ್ರಕಾಶನ ಅಂಕೋಲ, ೨೦೦೦.

೫೪. ನಾಯಕ. ಹಾ. ಮಾ, ಸಂ: ವಿಮರ್ಶೆಯ ಮಾರ್ಗ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ. ೧೯೮೪.

೫೫. ನಾರಾಯಣ. ಕೆ.ವಿ, ಬೇರು ಕಾಂಡ ಚಿಗುರು, ವಿವೇಕ ಪ್ರಕಾಶನ ವಿಚಾರ ವೇದಿಕೆ ಬೆಂಗಳೂರು ೧೯೯೭.

೫೬. ನಿಸಾರ ಅಹಮದ್, ಪ್ರ.ಸಂ, ದಶವಾರ್ಷಿಕ ವಿಮರ್ಶೆಗಳು ೧೯೭೪-೮೩, ಕರ್ನಾಟಕ ಸಾಹಿತ್ಯ ಅಕಾಡೆಮಿ, ಬೆಂಗಳೂರು.

೫೭. ಪ್ರಹ್ಲಾದ. ಡಿ.ವಿ, ಸಂ: ಮುಕ್ತಚಂದ (ಶಾಂತಿನಾಥ ದೇಸಾಯಿ ನೆನಪಿನ ಸಂಪುಟ), ಸಂಚಯ ಪ್ರಕಾಶನ ಬೆಂಗಳೂರು, ೨೦೦೧.

೫೮ ಪುಟ್ಟಯ್ಯ ಬಿ.ಎಂ, ಕಾಲ್ನಡಿಗೆ, ಕನ್ನಡ ಸಂಘ ಕ್ರೈಸ್ಟ್ ಕಾಲೇಜ್ ಬೆಂಗಳೂರು, ೧೯೯೯.

೫೯. ಬಸವರಾಜ ಸಬರದ, ಬಂಡಾಯ ಸಾಹಿತ್ಯದ ತಾತ್ವಿಕ ನೆಲೆಗಳು, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು, ೧೯೯೨.

೬೦. ಬಸವರಾಜ ಸಬರದ, ಹೊಸದಿಕ್ಕು, ಪಲ್ಲವಿ ಪ್ರಕಾಶನ ಬೀದರ, ೧೯೯೦.

೬೧. ಬಸವರಾಜ ಸಬರದ, ಸಾಹಿತ್ಯ ಸಂಗತಿ, ಪಲ್ಲವಿ ಪ್ರಕಾಶನ ಬೀದರ, ೧೯೯೪.

೬೨. ಬಸವರಾಜ ಸಬರದ, ಸಂ. ಸಾಹಿತ್ಯ ಮತ್ತು ಸಮೂಹ ಮಾಧ್ಯಮಗಳು, ಪ್ರಸಾರಾಂಗ ಗುಲಬರ್ಗಾ ವಿಶ್ವವಿದ್ಯಾಲಯ, ೧೯೯೭.

೬೩. ಬಸವರಾಜ ಕಲ್ಗುಡಿ, ನಕ್ಷೆ-ನಕ್ಷತ್ರ, ಕನ್ನಡ ಸಂಘ, ಕ್ರೈಸ್ಟ ಕಾಲೇಜ್, ಬೆಂಗಳೂರು, ೧೯೯೯.

೬೪. ಬುದಣ್ಣ ಹಿಂಗಮಿರೆ, ಸಂ: ಸಾಹಿತ್ಯ ವಿಮರ್ಶೆ, ೧೯೮೭, ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೮೮.

೬೫. ಬೇಂದ್ರೆ, ಸಾಹಿತ್ಯದ ವಿರಾಟ ಸ್ವರೂಪ, ಧಾರವಾಡ, ೧೯೭೪.

೬೬. ಭಗವಾನ್. ಕೆ.ಎಸ್, ಸಂ: ಸಾಹಿತ್ಯ ವಿಮರ್ಶೆ, ೧೯೮೫, ಸಾಹಿತ್ಯ ಅಕಾಡೆಮಿ, ಬೆಂಗಳೂರು ೧೯೮೬.

೬೭. ಭಗವಾನ್ ಕೆ.ಎಸ್, ಬದಲಾವಣೆ, ಮಹಿಮ ಪ್ರಕಾಶನ ಮೈಸೂರು, ೧೯೯೩.

೬೮. ಭಂಡಾರಿ ಆರ್.ವಿ, ಸಮಾಜವಾದಿ ವಾಸ್ತವ, ರಾಘವೇಂದ್ರ ಪ್ರಕಾಶನ, ಅಂಕೋಲ, ೧೯೮೯

೬೯. ಮನು ಬಳಿಗಾರ ಸಂ: ತಲಸ್ಪರ್ಶಿ (ಗಿರಡ್ಡಿ ಗೋವಿಂರಾಜ ಅಭಿನಂದನ ಗ್ರಂಥ) ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ, ೨೦೦೧.

೭೦. ಮಲ್ಲೇಪುರಂ. ಜಿ. ವೆಂಕಟೇಶ, ಸಂ: ಕನ್ನಡ ವಾರ್ಷಿಕ,೧೯೯೨, ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭೧. ಮಲ್ಲೇಪುರಂ. ಜಿ. ವೆಂಕಟೇಶ, ಸಂ: ಸಾಹಿತ್ಯ ವಿಮರ್ಶೆ, ೧೯೯೭, ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೮.

೭೨. ಮಹದೇವಪ್ಪ, ಅನು: ನಮ್ಮ ವೃತ್ತ ಪತ್ರಿಕೆಗಳ ಕಥೆ, ನ್ಯಾಷನಲ್ ಬುಕ್ ಟ್ರಸ್ಟ್ ಇಂಡಿಯಾ ದೆಹಲಿ, ೧೯೯೪.

೭೩. ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿಮರ್ಶೆ, ಜೀವನ ಕಾರ್ಯಾಲಯ, ಬೆಂಗಳೂರು, ೧೯೮೫.

೭೪. ಮುಗಳಿ ರಂ. ಶ್ರೀ, ವಿಮರ್ಶೆಯ ವ್ರತ, ಉಷಾ ಸಾಹಿತ್ಯ ಮಾಲೆ ಮೈಸೂರು, ೧೯೭೦.
೭೫ ಮುರುಳೀಧರ ಉಪಾಧ್ಯ ಹಿರಿಯಡ್ಕ, ಯು.ಆರ್. ಅನಂತಮೂರ್ತಿ, ಕರ್ನಾಟಕ ಸಂಘ ಪುತ್ತೂರು, ೨೦೦೦.
೭೬. ಮೂರ್ತಿರಾವ್ ಎ.ಎನ್, ಸಾಹಿತ್ಯ ಮತ್ತು ಸತ್ಯ, ಡಿ.ವಿ.ಕೆ. ಮೂರ್ತಿ ಮೈಸೂರು, ೧೯೮೨.
೭೭. ಮೂರ್ತಿರಾವ್. ಎ.ಎನ್, ಜೀವನ ಮೌಲ್ಯಗಳು ಮತ್ತು ಸಾಹಿತ್ಯ, ಡಿ.ವಿ.ಕೆ. ಮೂರ್ತಿ ಮೈಸೂರು, ೧೯೮೬.
೭೮. ರಹಮತ್ ತರೀಕೆರೆ, ಪ್ರತಿ ಸಂಸ್ಕೃತಿ, ಕನ್ನಡ ಸಂಘ, ಕ್ರೈಸ್ಟ್ ಕಾಲೇಜು, ಬೆಂಗಳೂರು, ೧೯೯೩.
೭೯. ರಹಮತ್ ತರೀಕೆರೆ, ಮರದೊಳಗಣ ಕಿಚ್ಚು, ಪ್ರಸಾರಾಂಗ ಕ್ನನಡ ವಿಶ್ವವಿದ್ಯಾಲಯ, ೧೯೯೬.
೮೦. ರಹಮತ್ ತರೀಕೆರೆ, ಸಾಹಿತ್ಯ ವಿಮರ್ಶೆ ೧೯೯೨, ಸಾಹಿತ್ಯ ಅಕಾಡೆಮಿ ಬೆಂ., ೧೯೯೩.
೮೧. ರಹಮತ್ ತರೀಕೆರೆ, ಕನ್ನಡ ಸಾಹಿತ್ಯ ಮೀಮಾಂಸೆ, ಪ್ರಸಾರಾಂಗ ಕನ್ನಡ ವಿ.ವಿ.೨೦೦೦.
೮೨. ರಾಘವೇಂದ್ರರಾವ್. ಎಚ್.ಎಸ್, ಪ್ರಗತಿಶೀಲತೆ, ಕರ್ನಾಟಕ ಸಾಹಿತ್ಯ ಅಕಾಡೆಮಿ, ೧೯೯೦.
೮೩. ರಾಘವೇಂದ್ರರಾವ್ ಎಚ್.ಎಸ್, ನಿಲುವು, ಕನ್ನಡಸಂಘ, ಕ್ರೈಸ್ಟ್ ಕಾಲೇಜ್ ಬೆಂಗಳೂರು, ೧೯೮೯.
೮೪. ರಾಘವೇಂದ್ರರಾವ್ ಎಚ್.ಎಸ್, ಸಾಹಿತ್ಯ ವಿಮರ್ಶೆ ೧೯೮೪, ಸಾಹಿತ್ಯ ಅಕಾಡೆಮಿ, ಬೆಂಗಳೂರು, ೧೯೮೫.
ರಾಘವೇಂದ್ರರಾವ್ ಎಚ್.ಎಸ್, ಶತಮಾನದ ಸಾಹಿತ್ಯವಿಮರ್ಶೆ, ಸಾಹಿತ್ಯ ಅಕಾಡೆಮಿ,...
೮೫. ರಾಘವೇಂದ್ರ ಪಾಟೀಲ, ವಾಗ್ವಾದ, ಸಂವಾದ ಪ್ರಕಾಶ ಮಲ್ಲಾಡಿಹಳ್ಳಿ, ೧೯೯೩.
೮೬. ರಾಜಪ್ಪ ದಳವಾಯಿ, ಸಂ: ಕನ್ನಡ ಸಾಹಿತ್ಯ ಕೋಶ, ಆ.ವಿ.ಸಂ. ಅನುವನಹಳ್ಳಿ, ೧೯೯೮.
೮೭. ರಾಜಪ್ಪ ದಳವಾಯಿ, ತಿಳಿವಳಿಕೆ, ದಾಮಿನಿ ಸಾಹಿತ್ಯ, ಬೆಂಗಳೂರು, ೨೦೦೨
೮೮. ರಾಜಪ್ಪ ದಳವಾಯಿ, ಉಳುಮೆ, ದಾಮಿನಿ ಸಾಹಿತ್ಯ, ಬೆಂಗಳೂರು, ೨೦೦೨
೮೯. ರಾಜಪ್ಪ ದಳವಾಯಿ, ಕೃತಿ - ಆಕೃತಿ, ದಾಮಿನಿ ಸಾಹಿತ್ಯ, ಬೆಂಗಳೂರು, ೨೦೦೨
೯೦. ರಾಜೇಂದ್ರ ಚೆನ್ನಿ, ಸಂ: ಸಾಹಿತ್ಯ ವಿಮರ್ಶೆ ೧೯೯೮, ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೮೯.
೯೧. ರಾಮಚಂದ್ರನ್. ಸಿ.ಎನ್, ಆಶಯ-ಆಕೃತಿ, ಅಭಿನವ ಪ್ರಕಾಶನ ಬೆಂಗಳೂರು, ೧೯೯೫.
೯೨. ರಾಮಚಂದ್ರನ್. ಸಿ.ಎನ್, ಸಾಹಿತ್ಯ ವಿಮರ್ಶೆ, ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೮೯.
೯೩. ರಾಮಚಂದ್ರನ್. ಸಿ.ಎನ್, ಸ್ವರೂಪ, ಕನ್ನಡ ಅಧ್ಯಯನ ವಿಭಾಗ ಮುಂಬಯಿ ವಿಶ್ವವಿದ್ಯಾಲಯ, ೧೯೮೮.
೯೪. ರಾಮಚಂದ್ರನ್. ಸಿ.ಎನ್, ಪರಂಪರೆ ಪ್ರತಿರೋಧ, ಸಂವಾದ ಪ್ರಕಾಶನ ಮಲ್ಲಾಡಿಹಳ್ಳಿ, ೨೦೦೨.
೯೫. ರಾಮಚಂದ್ರನ್ ಸಿ.ಎನ್, ಓದುಗರು ಮತ್ತು ಓದುವಿಕೆ, ಆನಂದಕಂದ ಗ್ರಂಥಮಾಲೆ, ಚಿತ್ರದುರ್ಗ, ೧೯೯೮.

೯೬. ರಾಮಚಂದ್ರನ್. ಸಿ.ಎನ್, ವಸಾಹತ್ತೋತ್ತರ ಚಿಂತನೆ, ಸಾಹಿತ್ಯ ಅಕಾಡೆಮಿ, ೨೦೦೦.
೯೭. ರಾಜರತ್ನಂ. ಜಿ.ಪಿ, ಸಂ: ಮಂಜೇಶ್ವರದ ಶ್ರೀ ಎಂ. ಗೋವಿಂದ ಪೈ ಅವರ ಕೆಲವು ಪತ್ರಗಳು ಕಾವ್ಯಾಲಯ ಪ್ರಕಾಶನ, ಮೈಸೂರು, ೧೯೭೧.
೯೮. ರೋಹಿಣಿ ಬಿ. ಎಂ., ಸ್ತ್ರೀ ಸಂವೇದನೆ, ಹೇಮಾಂಶು ಪ್ರಕಾಶನ ಮಂಗಳೂರು, ೧೯೯೫.
೯೯. ಲಕ್ಷ್ಮಿನಾರಾಯಣ ವಿ.ಎನ್, ನಿರಂತರ, ಪರಿಸರ ಸಾಹಿತ್ಯ ಪ್ರಕಾಶನ ಶಿವಮೊಗ್ಗ, ೧೯೯೯.
೧೦೦. ವಿಜಯಶ್ರೀ. ಕೆ, ಕನ್ನಡ ಪತ್ರಿಕೆಗಳು ಮತ್ತು ಸಾಹಿತ್ಯ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ೨೦೦೦
೧೦೧. ವೆಂಕಟಾಚಲ ಶಾಸ್ತ್ರೀ, ವಿಮರ್ಶೆಯ ಮಾರ್ಗ, ಕನ್ನಡ ಅಧ್ಯಯನ ಸಂಸ್ಥೆ ಮೈಸೂರು, ೧೯೯೨.
೧೦೨. ಶಂಕರ ಮೊಕಾಶಿ ಪುಣೇಕರ, ಬೇಂದ್ರೆಯವರ ಕಾವ್ಯ ಮೀಮಾಂಸೆ, ೧೯೬೨.
೧೦೩. ಶಂಕರ ಮೊಕಾಶಿ ಪುಣೇಕರ, ಸಾಹಿತ್ಯ ಮತ್ತು ಅಭಿರುಚಿ, ಮಿತ್ರ ಪ್ರಕಾಶನ ಬೆಂ, ೧೯೮೧.
೧೦೪. ಶಿವರುದ್ರಪ್ಪ ಜಿ.ಎಸ್, ವಿಮರ್ಶೆಯ ಪೂರ್ವ ಪಶ್ಚಿಮ, ಸಾಹಿತ್ಯ ಭಂಡಾರ ಬೆಂಗಳೂರು, ೧೯೯೬.
೧೦೫. ಶಿವರುದ್ರಪ್ಪ. ಜಿ.ಎಸ್, ಪ್ರಗತಿಶೀಲತೆ, ಕರ್ನಾಟಕ ಸಾಹಿತ್ಯ ಅಕಾಡಮಿ, ೨೦೦೦.
೧೦೬. ಶಿವರುದ್ರಪ್ಪ ಜಿ.ಎಸ್, ಸಂ: ಕನ್ನಡ ಸಾಹಿತ್ಯ ಸಂದರ್ಭ, ಸಾಹಿತ್ಯ ಅಕಾಡೆಮಿ, ಬೆಂ, ೧೯೯೦.
೧೦೭. ಶಿವರಾಮಯ್ಯ, ಸಾಹಿತ್ಯ ಪರಿಸರ, ವೈಚಾರಿಕ ಪುಸ್ತಕ ಮಾಲೆ, ಅನುವನಹಳ್ಳಿ, ೧೯೯೩
೧೦೮. ಶಿವರಾಮ ಕಾಡನಕುಪ್ಪೆ, ಸಂ: ಸಾಹಿತ್ಯ ವಿಮರ್ಶೆ ೧೯೮೬, ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೮೭.
೧೦೯. ಶಿವಾನಂದ ಎಸ್, ವಿಮರ್ಶೆಯ ಸವಾಲುಗಳು, ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ, ೧೯೯೧.
೧೧೦. ಶೇಷಗಿರಿರಾವ್. ಎಲ್. ಎಸ್, ಹೊಸಗನ್ನಡ ಸಾಹಿತ್ಯ, ಬೆಂಗಳೂರು ವಿ.ವಿ., ೧೯೯೫.
೧೧೧. ಶೇಷಗಿರಿರಾವ್. ಎಲ್.ಎಸ್, ಸ್ವಾತಂತ್ರ್ಯೋತ್ತರ ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿ, ಉದಯಭಾನು ಕಲಾಸಂಘ, ೧೯೯೩
೧೧೨. ಶೇಷಗಿರಿರಾವ್. ಎಲ್. ಎಸ್, ಮಾಸ್ತಿ ವೆಂಕಟೇಶ ಅಯ್ಯಂಗಾರ್ (ಜೀವನ ಮತ್ತು ಸಾಹಿತ್ಯ ಸಮೀಕ್ಷೆ) ರಾಷ್ಟ್ರಕವಿ ಗೋವಿಂದ ಪೈ ಸಂಶೋದನಾ ಕೇಂದ್ರ, ಉಡುಪಿ, ೧೯೯೩.
೧೧೩. ಶ್ರೀರಂಗ, ಸಾಹಿತ್ಯ, ಸಂಸ್ಕೃತಿ ಮತ್ತು ಸಮಾಜ, ವಿ. ಸೀ. ಸಂಪದ, ಬೆಂ, ೧೯೯೪.
೧೧೪. ಸವಿತಾ ನಾಗಭೂಷಣ, ಸಂ: ಮುಡಿಮಲ್ಲಿಗೆ (ಸ್ತ್ರೀವಾದಿ ಚಿಂತನೆಗಳು), ಸಂವಾದ ಪ್ರಕಾಶನ, ೧೯೯೩.
೧೧೫. ಸಿದ್ಧರಾಮಯ್ಯ. ಎಸ್.ಜಿ, ಸಾಲಾವಳಿ, ಅನಿಕೇತನ ಸಾಹಿತ್ಯ ಸಾಂಸ್ಕೃತಿಕ ಕೇಂದ್ರ, ತುಮಕೂರು, ೧೯೯೮.
೧೧೬. ಸೀತರಾಮಯ್ಯ. ವಿ, ಸಾಹಿತ್ಯ ವಿಮರ್ಶೆಗಳಲ್ಲಿ ಅರ್ಥ ಮತ್ತು ಮೌಲ್ಯ, ಪ್ರಸಾರಾಂಗ, ಮೈಸೂರು. ವಿ.ವಿ, ೧೯೭೧.

೧೧೭. ಸೀತಾರಾಮಯ್ಯ. ವಿ, ಕವಿಕಾವ್ಯ ದೃಷ್ಟಿ, ಗೀತಾ ಬುಕ್ ಹೌಸ್ ಮೈಸೂರು, ೧೯೭೦.
೧೧೮. ಸುಬ್ರಹ್ಮಣ್ಯ. ಟಿ, ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅಸ್ತಿತ್ವವಾದ (ಅಪ್ರಕಟಿತ ಪಿಎಚ್.ಡಿ ಪ್ರಬಂಧ)
೧೧೯. ಸುಮನಾ, ಸೀತಾರಾಮಯ್ಯ ಬದುಕು-ಬರಹ, ವ್ಯಕ್ತಿತ್ವ-ವೀಸಿ, ಸಂಪದ, ಬೆಂಗಳೂರು, ೨೦೦೦.
೧೨೦. ಸುಮತೀಂದ್ರ ನಾಡಿಗ, ವಿಮರ್ಶೆಯ ದಾರಿಯಲ್ಲಿ , ಕರ್ನಾಟಕ ಬುಕ್ ಏಜೆನ್ಸಿ, ಬೆಂಗಳೂರು, ೧೯೯೪.
೧೨೧. ಸ್ವಾಮಿ ಬಿ. ಎನ್, ಸಾಹಿತ್ಯ ಸಂಚಯ, ನವೀನ ಪ್ರಕಾಶನ, ಬೆಂಗಳೂರು, ೧೯೯೫.
೧೨೨. ಹೆಗಡೆ ಜಿ. ಎಂ, ಸಂ: ಸಾಹಿತ್ಯ ವಿಮರ್ಶೆ ೧೯೯೮, ಸಾಹಿತ್ಯ ಅಕಾಡೆಮಿ ಬೆಂಗಳೂರು, ೧೯೯೯.
೧೨೩. ಹೆಗಡೆ ಜೆ. ಎಂ, ಪುಸ್ತಕ ಲೋಕ, ರಂಜನಾ ಪ್ರಕಾಶನ ಧಾರವಾಡ, ೧೯೯೭.
೧೨೪. ಶ್ರೀ ಕಂಠಯ್ಯ ಬಿ. ಎಂ, ಕನ್ನಡಿಗರಿಗೆ ಒಳ್ಳೆಯ ಸಾಹಿತ್ಯ, ಕಾವ್ಯಾಲಯ ಮೈಸೂರು, ೧೯೭೦.

೩) **ಲೇಖನಗಳು**

೧. ಅನಂತಮೂರ್ತಿ ಯು. ಆರ್, ಈಚಿನ ಕನ್ನಡ ಕಾವ್ಯ, ಸಾಕ್ಷಿ ಶರತ್ ಸಂಚಿಕೆ ೧೯೭೧ ಪು ೧೧೨.
೨. ಆಮೂರ ಜಿ.ಎಸ್, ವಿಮರ್ಶೆಗೆ ಬಂದ ವಿಪತ್ತು, ಶತಮಾನದ ಸಾಹಿತ್ಯ ವಿಮರ್ಶೆ, ಕರ್ನಾಟಕ ಸಾಹಿತ್ಯ ಅಕಾಡೆಮಿ.
೩. ಆರ್ಕೆ ಮಣಿಪಾಲ, ವಿಮರ್ಶೆಯ ಸವಾಲು, ಅನ್ವೇಷಣೆ. ೨೨-೨೩, ಡಿಸೆಂಬರ್ ೮೭.
೪. ಉಷಾ ಎಂ, ಮೊದಲ ವಸ್ತು ನಿಷ್ಠ ವಿಮರ್ಶೆ, ಸಂಕ್ರಮಣ ೩೩೩ / ಸೆಪ್ಟೆಂಬರ್ - ಅಕ್ಟೋಬರ್ ೨೦೦೦, ಪು ೮೪.
೫. ಕೃಷ್ಣಕುಮಾರ್ ಸಿ.ಪಿ, ನೂರಾರು ವಿಮರ್ಶೆಗಳು, ಸಾರ್ಥಕ ಅಭಿನಂದನ ಗ್ರಂಥ
೬. ಗೋವಿಂದರಾಜ ಗಿರಡ್ಡಿ, ಬಿಕ್ಕಟ್ಟಿನಲ್ಲಿ ಕನ್ನಡ ವಿಮರ್ಶೆ, ನೀಲಾಂಜನ ಗೌರೀಶ ಕಾಯ್ಕಿಣಿಯವರ ಸನ್ಮಾನ ಗ್ರಂಥ, ೧೯೭೯
೭. ನಾಗಭೂಷಣ ಸ್ವಾಮಿ ಓ.ಎಲ್, ವಿಮರ್ಶೆ ಶಿಕ್ಷೆಯ ತೀರ್ಪಿನಂತೆ, ಸಾಹಿತ್ಯ ಸಂವಾದ (೫೪-೫೫) ೨೦೦೦ ಏಪ್ರಿಲ್.
೮. ನಾಗರಾಜ್ ಗುಡಿಹಳ್ಳಿ, ವಿಮರ್ಶೆ ಓದಿ ಯಾರಾದರೂ ನಾಟಕಕ್ಕೆ ಬರುತ್ತಾರೆಯೇ?, ೧೮ ಮೇ, ೨೦೦೨, ಪ್ರಜಾವಾಣಿ.
೯. ನಾರಾಯಣ ಕೆ.ವಿ, ಅನ್ಯ ಪ್ರಭಾವಗಳು, ಸಾಧನೆಗಳು, ಅಂಕಣ ಸಂಚಿಕೆ ೪, ಸಂಪುಟ ೪, ೧೯೮೦.
೧೦. ಪೂರ್ಣಚಂದ್ರ ತೇಜಸ್ವಿ, ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ, ಸಂಕ್ರಮಣ ೬೦ ೧೯೭೪ ಪು ೧೦೭.

೧೧. ಬೋರಲಿಂಗಯ್ಯ ಎನ್, ನಾಳಿನ ಕ್ನನಡ ಸಾಹಿತ್ಯ ವಿಮರ್ಶೆಯ ಸ್ವರೂಪ, ಸಂಕ್ರಮಣ, ೬೫.೨.

೧೨. ರಹಮತ್ ತರೀಕೆರೆ, ಪುಸ್ತಕ ಬರೆವುದು ಅಪರಾಧ?, ಇಬ್ಬನಿ ಜೂನ್-ಜುಲೈ, ೧೯೯೯ ಪು ೨೮.

೧೩. ರಾಜಪ್ಪ ದಳವಾಯಿ. ಆರ್, ಸಂಪಾದಕೀಯ, ಪ್ರಜ್ಞೆ, ೫, ೧೯೯೩.

೧೪. ತಿರುಮಲೇಶ ಕೆ.ವಿ, ಸಾಹಿತ್ಯದ ರೀತಿನೀತಿಗಳು ಒಂದು ಬಹಿರಂಗ ಪತ್ರ, ಅನ್ವೇಷಣೆ, ೩ ೪, ಸಂಪುಟ:೩, ೧೯೩೬, ಪು. ೯.

೧೫. ಶೇಷಗಿರಿರಾವ್ ಎಲ್.ಎಸ್, ಸಾಹಿತ್ಯ ವಿಮರ್ಶೆ ೧೯೦೦-೧೯೨೫, ಶತಮಾನ ಕನ್ನಡ ಸಾಹಿತ್ಯ ಸಂ: ಜಿ.ಹೆಚ್.ನಾಯಕ್

೧೬. ಶೇಷಗಿರಿರಾವ್ ಎಲ್.ಎಸ್, ಸಾಹಿತ್ಯ ಹಾಗೂ ವಿಮರ್ಶೆ, ವಿಮರ್ಶಾ ತತ್ವಗಳು ಮತ್ತು ಪ್ರಾಯೋಗಿಕ ವಿಮರ್ಶೆ, ಪು ೨೦೦.

ಈ) ಪತ್ರಿಕೆಗಳು

ಪತ್ರಿಕೆಯ ಹೆಸರು	ನಿಯತತೆ	ಕಾಲ	ಸಂಪಾದಕರು/ಪ್ರಕಾಶಕರು
೧ ಅಂಕಣ		೧೯೭೯-೮೯	ಚಿ. ಶ್ರೀನಿವಾಸರಾಜು/ ಎ.ಆರ್. ನಿರುಪಮಾ
೨. ಅನ್ವೇಷಣೆ	ದ್ವೈ	೧೯೮೪	ಆರ್. ಜಿ. ಹಳ್ಳಿ ನಾಗರಾಜು
೩. ಅನಿಕೇತನ	ತ್ರೈ	೧೯೮೪	ಚಂದನ ಕರ್ನಾಟಕ ಸಾಹಿತ್ಯ ಅಕಾಡೆಮಿ
		೧೯೮೮	ಅನಿಕೇತನ
೪. ಒಡನಾಡಿ	ದ್ವೈ	೧೯೩೫	ಚಿ. ದಾಮೋದರರಾವ್ ವಿಕಾಸ ಪ್ರಕಾಶನ
೫. ಒಡಲಾಳ	ಮಾಸ	೧೯೯೦	ಕೃಷ್ಣಮೂರ್ತಿ ಬಿಳಿಗೆರೆ (ತಿಪಟೂರು)
೬. ಕರ್ನಾಟಕ ಕೇಸರಿ	ಮಾಸ	೧೯೨೯	ಶ್ರೀ ಮಂಜೇಶ್ವರ ಅನಂತರಾವ್
೭. ಕನ್ನಡ ಕೋಗಿಲೆ	ಮಾಸ	೧೯೨೮	ಶ್ರೀ ಗುರುಪಾದ ಮಠ
೮. ಕನ್ನಡ ನುಡಿ	ಮಾಸ	೧೯೭೮	ಕನ್ನಡ ಸಾಹಿತ್ಯ ಪರಿಷತ್ತು ಮೊದಲ ಸಂಪಾದಕರು : ಮೊ.ಕ ಸುಬ್ರಹ್ಮಣ್ಯ ಶಾಸ್ತ್ರಿ
೯. ಕನ್ನಡ ನುಡಿ	ಮಾಸ	೧೯೨೪	ಬಿ. ಸುಬ್ರಹ್ಮಣ್ಯಂ. ಆರ್. ಬೆಳ್ಳಾವೆ (ಮುಂಬಯಿ)

ಅನುಬಂಧ - ೨

ಸಮಕಾಲೀನ ಸಮಸ್ಯೆಗಳ ಜೊತೆಯಲ್ಲಿ ಪುಸ್ತಕ ವಿಮರ್ಶೆ ಚರ್ಚೆಯ ಒಂದು ಮಾದರಿ

ಅ) "ಹಿಂದುತ್ವದ ಕ್ರೌರ್ಯಕ್ಕೆ ಒಂದು ಪಿಳ್ಳೆನೆವ"

ಕೃತಿ ಒಂಟಿಧ್ವನಿ - ಡಾ. ನಿ. ಮುರಾರಿ ಬಲ್ಲಾಳ

ಪುಸ್ತಕ ವಿಮರ್ಶಕರು - ಡಾ. ಜಿ. ರಾಜಶೇಖರ

ಮುರಾರಿ ಬಲ್ಲಾಳರು ತಮ್ಮ ಪ್ರಬಂಧ ಸಂಕಲನಕ್ಕೆ ಒಂಟಿ ಧ್ವನಿ ಎಂದು ಹೆಸರಿಟ್ಟಿದ್ದಾರೆ. ಜನಾಭಿಪ್ರಾಯದ ಸಂತೆ ಗದ್ದಲದ ಎದುರು, ತಮ್ಮದು ಒಂಟಿ ದನಿ ಎಂಬ ಭಾವನೆ, ಲೇಖಕರಿಗೆ ವಿಚಿತ್ರವಾದ ನೈತಿಕ ಸ್ಥೈರ್ಯವನ್ನು ತಂದು ಕೊಡುತ್ತದೆ. ಆದರೆ ತಾವು ಒಂಟಿ ಎಂದು ಭಾವಿಸುವ ಲೇಖಕರಲ್ಲಿ ಹೆಚ್ಚಿನವರು ತಮ್ಮ ವರ್ಗದ ಆಲೋಚನೆ ಮತ್ತು ಪೂರ್ವಗ್ರಹಗಳಿಂದ ಕಳಚಿಕೊಳ್ಳುವುದಿಲ್ಲ. ಮುರಾರಿ ಕೂಡ, ತಮ್ಮ ಈ ಪ್ರಬಂಧಗಳಲ್ಲಿ ಅನೇಕ ಕಡೆ, ಮಧ್ಯಮ ವರ್ಗದ ಬ್ರಾಹ್ಮಣ ಗಂಡಸರ ಮಾಮೂಲಿ ಅಭಿಪ್ರಾಯಗಳನ್ನೇ ಸ್ವಲ್ಪ ನಾಜೂಕಾದ ನುಡಿಗಟ್ಟುಗಳಲ್ಲಿ ಹೇಳುತ್ತಾರೆ. ಅವರು ಉತ್ಸಾಹದಿಂದ ಬರೆಯುವ ಪರಿಸರ ರಕ್ಷಣೆ, ವಿಕೇಂದ್ರೀಕರಣ ಮುಂತಾದ ವಿಷಯಗಳಲ್ಲಿ ಈ ನಾಡಿನ ದಲಿತರಿಗಾಗಲೀ, ನಿರುದ್ಯೋಗಿಗಳಿಗಾಗಲೀ ಯಾವ ಆಸಕ್ತಿಯೂ ಇರಲಾರದು. ನಮ್ಮ ಹಳ್ಳಿಗಳ ಆರ್ಥಿಕತೆ, ಮನೆ, ಕುಟುಂಬ ಮುಂತಾದವುಗಳ ಬಗ್ಗೆ ಮುರಾರಿಗಿರುವ ವ್ಯಾಮೋಹದಲ್ಲಿ, ತನ್ನ ಸ್ವಂತಿಕೆಯ ಅರಿವು ಇರುವ ಯಾವ ಹೆಣ್ಣೂ ಪಾಲುಗೊಳ್ಳಲಾರಳು. ಆ ವ್ಯವಸ್ಥೆಯಲ್ಲಿ ಹೆಂಗಸರಿಗೆ ಯಾವ ಸ್ಥಾನವೂ ಇರಲಿಲ್ಲ, ಕೋಮುವಾದದ ಬಗ್ಗೆ ಬರೆಯುವಾಗ ಮುರಾರಿ, ಅದನ್ನು ನಿಜವಾದ ಧಾರ್ಮಿಕತೆ ಮತ್ತು ಹಿಂದುತ್ವದ ರಾಜಕೀಯಗಳ ನಡುವಿನ ವಿವಾದವೆಂಬಂತೆ ಕಾಣುತ್ತಾರೆ. ಇತರ ಧರ್ಮಗಳವರಿಗಾಗಿರಲೀ, ಯಾವ ಧರ್ಮದಲ್ಲಿಯು ಆಸಕ್ತಿ ಇಲ್ಲದವರಿಗಾಗಲೀ ಅವರ ಪ್ರಕಾರ ಈ ವಿವಾದದ ಕುರಿತು ಹೇಳುವುದು ಏನೂ ಇಲ್ಲ. ಸಂಸ್ಕೃತಿಯ ಸಮ್ಮತಿ ಮತ್ತು ರಾಜಕೀಯ ಅಧಿಕಾರ ಎರಡೂ ಇಲ್ಲದ ಒಂಟಿದನಿಗಳು-ಅಂದರೆ ದಲಿತರು, ನಿರುದ್ಯೋಗಿಗಳು, ಹೆಂಗಸರು ಮತ್ತು ಅಲ್ಪಸಂಖ್ಯಾತರು, ಮುರಾರಿಯವರ ಯೋಚನೆಗಳಲ್ಲಿ ಪಾಲುಗೊಳ್ಳುವುದು ಕಷ್ಟ. ಉದಾಹರಣೆಗೆ 'ಸಂಸ್ಕತಿ-ವಿಜ್ಞಾನ-ಸೌಂದರ್ಯೋಪಾಸನೆ ಎಂಬ ತನ್ನ ಪ್ರಬಂಧದಲ್ಲಿ ಅವರು ಹೀಗೆ ಬರೆಯುತ್ತಾರೆ. 'ಕೈಗಾರಿಕೀರಣದ ಪೂರ್ವದ ಭಾರತೀಯ ನಾಗರೀಕತೆಯಲ್ಲಿ ಹಿತ-ಉಪಯುಕ್ತತೆ. ಸೌಂದರ್ಯಗಳ ಮಧ್ಯೆ ಒಂದು ವಿಶಿಷ್ಟ ಸಾಮರಸ್ಯವಿರಬೇಕು ಎಂಬ ಕಲ್ಪನೆ ಇತ್ತು' (ಪು ೪೪) ಮುರಾರಿ ೧೯ನೆಯ ಶತಮಾನದ, ಅಂದರೆ ಕೈಗಾರಿಕಾ ಕ್ರಾಂತಿಗಿಂತ ಮೊದಲಿನ ಭಾರತದ ಬಗ್ಗೆ ಹೀಗೆ ಹೇಳುತ್ತಿದ್ದಾರೆ ಎಂದು ಭಾವಿಸಿದರೆ, ಅವರ ತೀರ್ಮಾನದ ಬಗ್ಗೆ ನಾವು ಎತ್ತಬಹುದಾದ ಆಕ್ಷೇಪಣೆಗಳಿಗೆ ಕೊನೆಯೇ ಇರುವುದಿಲ್ಲ. ಒಂದೇ ಮಾತಿನಲ್ಲಿ ಅವರು ನಮ್ಮ ಜಾತಿಪದ್ಧತಿ ಮತ್ತು ಅದು ಒಳಗೊಂಡಿರುವ ಬಗ್ಗೆ ಅವರಿಗಿರುವ ಈ ರಮ್ಯವಾದ ಆದರೆ ವಾಸ್ತವವಲ್ಲದ ಕಲ್ಪನೆಗಳಿಗೆ ಈ ಪುಸ್ತಕದಲ್ಲಿ ಇಂತಹ ಹಲವು ಉದಾಹರಣೆಗಳು ದೊರೆಯುತ್ತವೆ.

ಎಲ್ಲವೂ ವಿಕಾರವಾಗಿರುವ ಈ ನಮ್ಮ ಕಾಲಕ್ಕೆ ಪ್ರತಿಯಾಗಿ ಹಿತ ಉಪಯುಕ್ತತೆ ಮತ್ತು ಸೌಂದರ್ಯಗಳು ಜೊತೆಯಾಗಿದ್ದ ಕಾಲ ಯಾವುದು? ಮುರಾರಿಯವರ ಪ್ರಕಾರ ಒಮ್ಮೆ ಅದು ಉಪನಿಷತ್ತುಗಳ ಕಾಲವಾದರೆ (ಪು. ೭೩-೭೫) ಇನ್ನೊಮ್ಮೆ ಅದು ಮಂಗಳೂರು ಹಂಚುಗಳ ಅಂದರೆ ಈ ಶತಮಾನದ ಮೊದಲ ದಿನಗಳಾಗಿರುತ್ತದೆ. ಅವರು ಬರೆಯುತ್ತಾರೆ

"ಮಂಗಳೂರು ಹಂಚಿನ ಕಟ್ಟಡಗಳ ಲಯವಿನ್ಯಾಸಗಳು ಇಡೀ ಪಟ್ಟಣಕ್ಕೆ ಒಂದು ಅಪೂರ್ವ ಮೆರುಗನ್ನು ತಂದು ಕೊಟ್ಟಿದೆ. ಆದರೆ ಇಂದು ಮಂಗಳೂರು ಹಿಂದಿನ ತನ್ನೆಲ್ಲ ಸಾಂಸ್ಕೃತಿಕ ಸೊಗಡನ್ನೂ ಕಳೆದುಕೊಂಡಿದೆ" (ಪು ೮೬) ಮಂಗಳೂರು ಹಂಚು, ಈ ಪ್ರದೇಶದ ಪ್ರಪ್ರಥಮ ಫ್ಯಾಕ್ಟರಿ ಉತ್ಪಾದನೆಯಾಗಿತ್ತು. ಎಂಬುದನ್ನೇ ಮುರಾರಿ ಮರೆತುಬಿಡುತ್ತಾರೆ. ಅದು ಹೇಗೂ ಇರಲಿ, ಹಂಚಿನ ಉದ್ಯಮ, ಕರಾವಳಿಯಲ್ಲಿ ಇಂದು ಇಳಿಮುಖವಾಗಿರುವುದಕ್ಕೆ ಕಾರಣ, ಅವರು ತಿಳಿದಂತೆ ಜನರ ಕೀಳು ಅಭಿರುಚಿಯಲ್ಲ. ಹಂಚು ತಯಾರಿಕೆಗೆ ದೊಡ್ಡ ಪ್ರಮಾಣದ ಮರಬೇಕು. ಹಂಚಿನ ಮಾಡಿನ ರೀಪು ಪಕ್ಕಾಸುಗಳಿಗೂ ಮರವೇ ಆಗಬೇಕು. ಅದನ್ನು ಹೊಂದಿಸಿಕೊಳ್ಳುವುದೇ ಕಷ್ಟವಾಗಿರುವುದರಿಂದ ಈಗ ಆ ಉದ್ಯಮ ಸೊರಗಿದೆ. ಹಂಚಿನ ಮಾಡಿನ ಬಗ್ಗೆ ಮುರಾರಿ ಅಷ್ಟೆಲ್ಲ ರೊಮ್ಯಾಂಟಿಕ್ ಆಗಬೇಕಾದ ಅಗತ್ಯವೂ ಇಲ್ಲ. ಮೊನ್ನೆ ಮೊನ್ನೆಯವರೆಗೆ ಹಂಚಿನ ಮಾಡು, ಈ ನಾಡಿನಲ್ಲಿ ಪ್ರತಿಷ್ಠೆ ಮತ್ತು ಆಧುನಿಕತೆಗಳ ಸಂಕೇತವಾಗಿತ್ತು. ದುಡ್ಡಿದ್ದವರು ಮಾತ್ರ ತಮ್ಮ ಮನೆಗಳಿಗೆ ಹಂಚು ಹೊದಿಸುತ್ತಿದ್ದರು. ಬಡವರ ಗುಡಿಸಲುಗಳಿಗೆ ಬತ್ತದ ಹುಲ್ಲಿನ ಮಾಡು, ಅದೂ ಸಾಧ್ಯವಿಲ್ಲದವರು, ಗುಡ್ಡೆಬೇಣಗಳಲ್ಲಿ ಸಿಗುವ ಮುಳಿ ಹುಲ್ಲನ್ನೇ ತಮ್ಮ ಮಾಡುಗಳಿಗೆ ಹೊಚ್ಚುತ್ತಿದ್ದರು. ಹಂಚು, ತಾಂತ್ರಿಕತೆಯ ಒಂದು ಮಜಲು ಮಾತ್ರ ಎಂಬುದನ್ನು ಗಮನಿಸದ ಮುರಾರಿಯವರ ಭಾವನೆ, ಒಂದು ಭಾವುಕ ಹಳಹಳಿಕೆ ಅಷ್ಟೆ. ಕೇಬಲ್ ಟಿವಿಯ ಈ ದಿನಗಳೆಲ್ಲ ಕೆಲವರು ಹಳೆಯ ಸಿನಿಮಾಗಳನ್ನು ಮೊದಲು ಕರೆಯುತ್ತಿದ್ದುದ್ದು ಹಾಗೆ -ನೆನಪಿಗೆ ತಂದು ಕೊಂಡು ಭಾವುಕರಾಗುವುದುಂಟು. ಮುರಾರಿಯವರ ಗತಕಾಲದ ಹಂಬಲವೂ ಇದೇ ಬಗೆಯದ್ದು.

ನಮ್ಮ ಹಳ್ಳಿಗರ ಬಗ್ಗೆ ಬರೆಯುತ್ತ ಮುರಾರಿ ಹೇಳುತ್ತಾರೆ. "ಹಳ್ಳಿಯ ಬೆಳವಣಿಗೆಯಲ್ಲೇ ಒಂದು ನಿರಂತರತೆಯಿದ್ದು ಹಳ್ಳಿಯ ಕಲ್ಪನೆಗಳು ದೇಶೀ ತಿಳುವಳಿಕೆಯ ವಿಕಾಸದ ಚರಿತ್ರೆಯೇ ಆಗಿರುತ್ತಿತ್ತು. ಯೋಚನಾ ಕ್ರಮ, ಹಸ್ತಶಿಲ್ಪ ವಿನ್ಯಾಸಗಳು, ಕರಕುಶಲ ಕಸುಬುಗಳು - ಇವೆಲ್ಲವೂ ಆ ಕೂಡು ಬದುಕಿನ ಸಾಂಸ್ಕೃತಿಕ ಅಂಶಗಳನ್ನು ಪ್ರತಿಬಿಂಬಿಸುತ್ತಿದ್ದವು. ಹಾಗಾಗಿ ಕಟ್ಟಡ ಕೂಡ ಹಳ್ಳಿಯ ಸಮ್ಮಷ್ಟಿ ಪ್ರಜ್ಞೆಯ ಒಳಲಯದ ಪ್ರಕಟ ರೂಪದಂತಿರುತ್ತಿತ್ತು" (ಪು ೮೯). ಹಳ್ಳಿಯ ಸಮಷ್ಟಿ ಪ್ರಜ್ಞೆಯ ಒಳಲಯ!! ಜಾತಿ ಭೇದವಿಲ್ಲ, ಜಮೀನ್ದಾರಿಕೆ ಇಲ್ಲ, ಜೀತವಿಲ್ಲ, ಅಥವಾ ಅವೆಲ್ಲವೂ ಈ ಒಳಲಯದಲ್ಲಿ ಕರಗಿಹೋಗಿರಬೇಕು. ಇಷ್ಟಕ್ಕೂ, ನಮ್ಮ ಹಳ್ಳಿಗಳ ಕೆಲವು ಭೂಮಾಲೀಕರ ಹಳೆಯ ಮನೆಗಳ ತಲೆಚಿಟ್ಟು ಹಿಡಿಸುವ ಕುಸುರಿ ಕೆಲಸವನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಮುರಾರಿ ಈ ಮಾತು ಹೇಳುತ್ತಿರುವುದಲ್ಲವೆ? ಕಟ್ಟಡಗಳು ಮಾತ್ರವಲ್ಲ, ಮನುಷ್ಯ ಸ್ವಭಾವದ ಬಗೆಗೂ ಮುರಾರಿಯರದ್ದು ಇಂತಹದ್ದೇ ರಮ್ಯ ಕಲ್ಪನೆ. ಗ್ರಾಮೀಣ ಜನರ ಬಗೆ ಬರೆಯುತ್ತ, ಅವರು "ಹಣ ಮಾಡುವ ಕಲೆ ಹಳ್ಳಿಗನಿಗೆ ಗೊತ್ತಿಲ್ಲ" (ಪು. ೫೮) ಎನ್ನುತ್ತಾರೆ. ಪಟ್ಟಣಿಗರು ಮಾತ್ರ ಹಳ್ಳಿಯವರ ಬಗ್ಗೆ ಹೀಗೆಲ್ಲ ಭಾವಿಸಬಲ್ಲರು. ನಮ್ಮ ಕರಾವಳಿ ಮತ್ತು ಮಲೆನಾಡಿನ ಹಳ್ಳಿಗಳಲ್ಲಿ ಕಾಸು ಬಡ್ಡಿಯ ಸಾಲ, ಅಡವಿನ ಸಾಲ, ಹೊಲಿಸಾಲ (ಮಳೆಗಾಲದಲ್ಲಿ ಸಾಲವಾಗಿ ತೆಗೆದುಕೊಂಡ ದಾನ್ಯಕ್ಕೆ ಪ್ರತಿಯಾಗಿ, ಕೊಯಿಲಾದ ನಂತರ ಆದರ ೨ ಮತ್ತು ೩ ಪಟ್ಟು ಹಿಂದಿರುಗಿಸುವ ಸಾಲ) ಮುಂತಾದವು ತೀರ ಇತ್ತೀಚೆಗಿನವರೆಗೆ ಚಾಲ್ತಿಯಲ್ಲಿದ್ದವು. ಈಗಲೂ ಈ ಸಾಲಗಳು ಸ್ವಲ್ಪ ಬೇರೆ ರೂಪದಲ್ಲಿ ಮುಂದುವರಿದಿವೆ. ಮುರಾರಿಯವರ ಹಣದ ಲೆಕ್ಕ ಗೊತ್ತಿಲ್ಲದ ಮುಗ್ಧ ಸುಂದರ ಹಳ್ಳಿಗಳು ಕ್ಯಾಲೆಂಡರುಗಳಲ್ಲಿ ಮಾತ್ರ ಇರುವಂತಹವು.

ವಿಜ್ಞಾನ ಕೈಗಾರಿಕೆ ಮತ್ತು ಆಧುನಿಕ ಜೀವನಶೈಲಿಗಳು ಸೃಷ್ಟಿಸಿರುವ ಅಸಹ್ಯ ಅಭಿರುಚಿ, ಪರಿಸರನಾಶ, ಅಸಮಾನತೆ. ಮುಂತಾದವುಗಳನ್ನು ಮುರಾರಿ ಮತ್ತೆ ಮತ್ತೆ ಪ್ರಸ್ತಾಪಿಸುತ್ತಾರೆ. ಆದರೆ ಹಾಗೆ ಮಾಡುವಾಗ ಅವರು ಉತ್ಪ್ರೇಕ್ಷೆ. ಭಾವುಕತೆ, ಕಾವ್ಯಮಯವಾದ ಮಾತುಗಳನ್ನೆಲ್ಲ ಬಳಸಿ ಸರ್ವನಾಶದ ಒಂದು ಭವಿಷ್ಯ ಪುರಾಣವನ್ನೇ ಸೃಷ್ಟಿಸಿಬಿಡುತ್ತಾರೆ. ತಮ್ಮ ಮಾತುಗಳಿಗೆ ಆಧಾರ ಅಂಕಿ ಅಂಶ ದೃಷ್ಟಾಂತ ಯಾವುದನ್ನೂ ಅವರು ಒದಗಿಸುವುದಿಲ್ಲ. ಅಂತಹ ಬರವಣಿಗೆ ಅವರಿಗೆ ಸಾಧ್ಯವಿಲ್ಲವೆಂದಲ್ಲ. ಈ ಸಂಕಲನದ 'ಮಣ್ಣಿಗೆ ಮಗ ಮತ್ತು ಆಳುವ ಭೂಮಿ' (ಪು ೫೫-೬೧), 'ಗ್ಯಾಟ್ ಪುರಾಣ' (ಪು ೧೪೨-೧೫೪), 'ಮೀಸಲಾತಿ ಒಂದು ತಾತ್ವಿಕ ಚಿಂತನೆ' (ಪು ೧೫೫-೧೬೬) ಈ ಲೇಖನಗಳಲ್ಲಿ ಮುರಾರಿ ಅರ್ಥಶಾಸ್ತ್ರದ ಶಿಸ್ತನ್ನೂ, ಸಾಮಾನ್ಯ ಗದ್ಯದ ಸರಳತೆಯನ್ನೂ ಜೊತೆಗೂಡಿಸಿಕೊಂಡು ಬರೆಯುತ್ತಾರೆ. ಇಂತಹ ಲೇಖನಗಳಲ್ಲಿ ಕಾಣುವ ವಸ್ತುನಿಷ್ಠೆ ಮತ್ತು ನೈತಿಕ ಕಾಳಜಿ-ಅವು ಬೇರೆ ಬೇರೆಯಾಗಿ ಇರುವಂತಹವೇ ಅಲ್ಲ-ಅವರ ಗದ್ಯಕ್ಕೆ ನಿಖರತೆಯನ್ನೂ ಮೊನಚನ್ನೂ ಕೊಡುತ್ತವೆ.

ಆದರೆ ಮಾನವ ಶಾಸ್ತ್ರಗಳ ಬರವಣಿಗೆಯ ಈ ಶಿಸ್ತು ಆಧ್ಯಾತ್ಮಕ ಧರ್ಮ, ಪರಂಪರೆ ಮುಂತಾದ ವಿಷಯಗಳ ಬಗ್ಗೆ

ಅವರು ಬರೆದದ್ದರಲ್ಲಿ ಕಾಣುವುದಿಲ್ಲ. ಉದಾಹರಣೆಗೆ ಹಿಂದು ಕೋಮುವಾದದ ಬಗ್ಗೆ ಅವರು, "ದೇಶದ ಚಿಂತನೆ - ಸಂಸ್ಕೃತಿಗಳ ಸಮಗ್ರ ಪರಂಪರೆಯನ್ನೇ ಪ್ರತಿಗಾಮಿ ಎಂದು ಸಾರಾಸಗಟಾಗಿ ಅವಹೇಳನ ಮಾಡುತ್ತ, ಈ ನೆಲಕ್ಕೆ ಪರಕೀಯರಾಗಿ ಬದುಕುವ ಆಧುನಿಕ ಶುಷ್ಕ ವೈಚಾರಿಕರು ಕೂಡ ಈ ಮೂಲಭೂತವಾದಿಗಳ ಆಕ್ರಮಣಕಾರೀ ಪ್ರವೃತ್ತಿಯನ್ನು ಬಲಗೊಳಿಸಲು ಬಹುಮಟ್ಟಿಗೆ ಕಾರಣವೆನ್ನಬಹುದು" ಎನ್ನುತ್ತಾರೆ. (ಪು. ೨೦೦) ಹೀಗೆ ಹೇಳುವಾಗ ಮುರಾರಿಯವರ ಮನಸ್ಸಿನಲ್ಲಿರುವ ಶುಷ್ಕ ವೈಚಾರಿಕರು ಯಾರು? ನೆಹರೂ, ಕಮ್ಯುನಿಸ್ಟರು, ಅಥವಾ ನಮ್ಮ ಅಕಾಡೆಮಿಕ್ ವಲಯದ ಎಡಪಂಥೀಯರು? ಮುರಾರಿ ಒಬ್ಬರನ್ನಾದರೂ ಹೆಸರಿಸಿದ್ದರೆ, ಅವರ ಮಾತಿನ ಸತ್ಯಾಸತ್ಯತೆಯನ್ನು ಪರಿಶೀಲಿಸಬಹುದಾಗಿತ್ತು. ಹೋಗಲಿ ಅವರು ಹೇಳುವ ಈ ಶುಷ್ಕ ವೈಚಾರಿಕರ ಒಂದು ದೊಡ್ಡ ಹಿಂಡೇ ಈ ದೇಶದಲ್ಲಿದೆ ಎಂದಿಟ್ಟುಕೊಂಡರೂ, ಹಿಂದೂ ಕೋಮುವಾದಕ್ಕೆ ಇವರು ಕಾರಣರು ಎಂದು ಯಾರೂ ಹೇಳಲಾರರು. ಫ್ಯಾಸಿಸಂನ ಹುಟ್ಟು ಬೆಳವಣಿಗೆಗಳಿಗೆ ತನ್ನದೇ ಆದ ಚರಿತ್ರೆ ಇದೆ. ಹಿಂದೂ ಕೋಮುವಾದ, ಬರೇ ವಾದವಲ್ಲ ಪ್ರಭುತ್ವ, ಸಂಸ್ಕೃತಿ ಮತ್ತು ಒಟ್ಟು ಜನಜೀವನವನ್ನೇ ನಿಯಂತ್ರಿಸುವ ಉದ್ದೇಶ ಹೊಂದಿರುವ ಒಂದು ಸಂಘಟನೆ ಅದು. ಈ ದೇಶದ 'ಶುಷ್ಕ ವೈಚಾರಿಕರು' ಆರ್.ಎಸ್. ಎಸ್. ಭಜರಂಗದಳಗಳಂತಹ ಸಂಘಟನೆ ಕಟ್ಟಿಕೊಂಡಿದ್ದಾರಾ? ಸಂಘ ಪರಿವಾರ ನಡೆಸಿದ ಹಿಂಸೆಯ ಹಿನ್ನೆಲೆ ಇವರಿಗೆ ಇದೆಯಾ? ಹೆಚ್ಚೆಂದರೆ ಈ ಶುಷ್ಕ ವೈಚಾರಿಕರ ವಿಚಾರಗಳು ತಪ್ಪು ಎಂದು ವಾದಿಸಬಹುದು. ಆದರೆ ಅವರು ಯಾರೂ ಕ್ರಿಮಿನಲ್‌ಗಳಲ್ಲ, ಜನಾಂಗ ದ್ವೇಷಿಗಳಲ್ಲ. ಆದರೆ ಮುರಾರಿ ಈ ವೈಚಾರಿಕರನ್ನೂ ಕೋಮುವಾದಿಗಳನ್ನೂ ಒಂದೇ ತಕ್ಕಡಿಯಲ್ಲಿ ತೂಗುತ್ತಾರೆ.

ಕೋಮುವಾದಿಗಳ ಸಂಘರ್ಷವಿರುವುದು ನೈಜ ಧಾರ್ಮಿಕ ವ್ಯಕ್ತಿಗಳ ಜೊತೆ ಮಾತ್ರ ಎಂದು ಮುರಾರಿ ಭಾವಿಸುತ್ತಾರೆ. ಕೋಮುವಾದ, ನಿಜವಾದ ಧರ್ಮದ ಮೇಲೆ ನಡೆಯುವ ಆಕ್ರಮಣ ಮಾತ್ರವಲ್ಲ ; ಅದು ಪ್ರಜಾಪ್ರಭುತ್ವದ ಎಲ್ಲ ಹಕ್ಕು ಮತ್ತು ಸ್ವಾತಂತ್ರ್ಯಗಳನ್ನೂ ತುಳಿಯುವಂಹದ್ದು. ತನ್ನ ನಾಡಿನ ಪರಂಪರೆಯನ್ನೇ ನಿರಾಕರಿಸುವ ವೈಚಾರಿಕನಾಗಿರುವುದು ಕೂಡ, ಪ್ರಜಾಪ್ರಭುತ್ವದ ಸ್ವಾತಂತ್ರ್ಯಗಳಲ್ಲಿ ಒಂದು. ಮುರಾರಿ ಈ ವೈಚಾರಿಕತೆಯನ್ನು ಶುಷ್ಕ ಎಂದು ಕರೆಯುತ್ತಾರೆ. ಆದರೆ ಈ ಶತಮಾನದ ಅತ್ಯುತ್ತಮ ಕಲೆ, ಸಾಹಿತ್ಯ ಮತ್ತು ಚಿಂತನೆಗಳು ಬಂದಿರುವುದು, ತನ್ನ ಪರಂಪರೆ ಒಂದು ಹೊರೆ ಮತ್ತು ಸೆರಮನೆ ಎಂದು ತಿಳಿದವರಿಂದಲೇ ಹೊರತು ಪರಂಪರೆಯ ಮಡಿಲಲ್ಲಿ ಬೆಚ್ಚಗಿದ್ದವರಿಂದಲ್ಲ. ಈ ವೈಚಾರಿಕತೆಯನ್ನು ಕೊಮುವಾದಕ್ಕೆ ಎದುರಾಳಿಯಾದ ಒಂದು ಮೌಲ್ಯ ಎಂದು ಭಾವಿಸುವ ಬದಲು ಮುರಾರಿ ಅದನ್ನು ಅಪರಾಧಿ ಸ್ಥಾನದಲ್ಲಿ ನಿಲ್ಲಿಸಿದ್ದಾರೆ. ಈ ಸಂಕಲನಕ್ಕೆ ವಿದ್ವತ್ ಪೂರ್ಣವಾದ ಒಂದು ಮುನ್ನುಡಿ ಬರೆದ ಮನು ಚಕ್ರವರ್ತಿ ಕೂಡ, ಮುರಾರಿಯವರ ಜೊತೆ ದನಿಗೂಡಿಸಿರುವುದು ಆಶ್ಚರ್ಯ ಹುಟ್ಟಿಸುತ್ತದೆ. ವಿಜ್ಞಾನ ಮತ್ತು ಮಾನವಶಾಸ್ತ್ರಗಳ ವಿಭಿನ್ನ ವಾದಗಳು ಬೆಳೆದು ಬಂದ ಚರಿತ್ರೆಯ ಬಗ್ಗೆ ಮನು ಚಕ್ರವರ್ತಿ ಜವಾಬ್ದಾರಿಯಿಂದ ಬರೆಯಬಲ್ಲರು. ಪ್ರಜಾಪ್ರಭುತ್ವದ ಸ್ವಾತಂತ್ರ್ಯಗಳ ಬಗ್ಗೆ ಅವರಿಗೆ ಇರುವ ಕಾಳಜಿಯೂ ಪ್ರಶ್ನಾತೀತವಾದದ್ದು. ಆದರೆ ಅವರು "ಸಂಸ್ಕೃತಿಯ ಪುನರ್ ವ್ಯಾಖ್ಯಾನ ಮಾಡಲು ಹೋರಾಡುವವರನ್ನು ಧರ್ಮನಿರಪೇಕ್ಷವಾದಿಗಳು ತಿರಸ್ಕರಿಸಿದಾಗ ಅದು ಮತೀಯವಾದಿಗಳ ಪರೋಕ್ಷ ಜಯರಾಗಿರುತ್ತದೆ. (ಪು ೧೧೯) ಎನ್ನುತ್ತ ಮುರಾರಿಯವರ ನಿಲುವನ್ನು ಸಮರ್ಥಿಸುತ್ತಾರೆ. ಅವರ ಮಾತಿನ ಅರ್ಥವೇನು? ಸೆಕ್ಯುಲರ್ ವಾದಿಗಳು ತಮ್ಮ ವಿಚಾರಗಳನ್ನು ತಮಗೆ ದೊರೆಯುವ ಸಾಕ್ಷ್ಯಾಧಾರಗಳ ಮೇಲೆ ಮಂಡಿಸಬೇಕೋ? ಅಥವಾ ಚದುರಂಗದ ದಾಳಗಳಂತೆ ಚಾಣಾಕ್ಷತನದಲ್ಲಿ ಮುಂದಿಡಬೇಕೋ? ಚಿಂತನೆಯಲ್ಲಿಯೂ ಈ ರೀತಿಯ ತಂತ್ರ , ಪ್ರತಿ ತಂತ್ರ, ಹೊಂದಾಣಿಕೆಗಳೆಲ್ಲ ಬೇಕು ಎಂದಾದರೆ, ಅದು ಮುಕ್ತ ಚಿಂತನೆಯಾಗಿ ಉಳಿಯುವುದಿಲ್ಲ. ಪರಂಪರೆಯ ಒಳಗೆ ಇರುವವರೇ ಕೋಮುವಾದವನ್ನು ಸಮರ್ಥವಾಗಿ ಎದುರಿಸಬಲ್ಲರು ಎಂದು ಮುರಾರಿ ವಾದಿಸುತ್ತಾರೆ. ಆದರೆ ಪರಂಪರೆಗೆ ಯಾರು ಒಳಗಿನವರು? ಯಾರು ಪರಕೀಯರು? ಈ ಬಗ್ಗೆ ಒಂದು ವಸ್ತುನಿಷ್ಠ ತೀರ್ಮಾನ ಸಾಧ್ಯವೇ ಇಲ್ಲ. ಈ ದೇಶದ ಪ್ರಜೆಗಳೆಲ್ಲರೂ ಈ ದೇಶದ ಪರಂಪರೆಗೆ ಸ್ವಕೀಯರೇ; ಇಲ್ಲಿ ಯಾರೂ ಪರಕೀಯರಲ್ಲ ಎನ್ನುವುದೇ ಸರಿಯಾದ ನಿಲುವು. ಯಾಕೆಂದರೆ ಕೋಮುವಾದದ ರಾಜಕೀಯ ಶುರುವಾಗುವುದೇ ಈ ಒಳಗಿನವರು ಮತ್ತು ಪರಕೀಯರು ಎಂಬ ವಿಭಜನೆಯೊಂದಿಗೆ "ಕೋಮುವಾದಿಗಳು ಕೆಟ್ಟವರು ಹೌದು ಆದರೆ ನಿಮ್ಮದೂ ಸ್ವಲ್ಪ ಅತಿಯಾಯಿತು" ಎಂದು ಸೆಕ್ಯುಲರಿಸ್ಟರಿಗೆ ಹೇಳುವ ಮುಖಾಂತರ ಅವರ ವಿಚಾರ ಸ್ವಾತಂತ್ರ್ಯವನ್ನೇ ಮುರಾರಿ ಅಲ್ಲಗಳೆಯುತ್ತಿದ್ದಾರೆ.

●